ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಕರ್ನಾಟಕ ಸರ್ಕಾರ

೫೦ ಕರ್ನಾಟಕ KARNATAKA

## ಪದ್ಯ ಸಾಹಿತ್ಯ

೨೯



# ಬಯಲು ಸೀಮೆಯ ಜನಪದ ಹಾಡ್ಗುಣಿತಗಳು

ಭಾಗ ೧

ಸಂ. ಡಾ. ಟಿ. ಗೋವಿಂದರಾಜು

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೪೯

ಪದ್ಯ ಸಾಹಿತ್ಯ ಪ್ರಕಾರ – ೨೯

# ಬಯಲು ಸೀಮೆಯ
# ಜನಪದ ಹಾಡ್ಗುಣಿತಗಳು – ಭಾಗ ೧

ಸಂಪಾದಕರು

**ಡಾ. ಟಿ. ಗೋವಿಂದರಾಜು**

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು – ೫೬೦ ೦೦೨

'**Bayalu Seemeya Janapadha Haadgunitagalu'**, Edited by **Dr. T. Govindaraju**, Published by K.A.Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

**ಆವೃತ್ತಿಯ ಹಕ್ಕು** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
**ಪ್ರಥಮ ಮುದ್ರಣ** : ೨೦೧೪
**ಪುಟಗಳು** : lvi + ೩೯೨ = ೪೪೮
**ಪ್ರತಿಗಳು** : ೧೦೦೦
**ಬಿಡಿ ಪ್ರತಿ ಬೆಲೆ** : ರೂ. ೫೦/-

| | |
|---|---|
| Print | 2014 |
| Pages | lvi + 392 = 448 |
| Copies | 1000 |
| Price | Rs. 50/- |

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
**ಶ್ರೀ ಕೆ.ಎ. ದಯಾನಂದ**, ಕ.ಆ.ಸೇ. ಅವರಿಂದ ಪ್ರಕಟಿತ
**ಸಹಕಾರ : ಶ್ರೀ ಬಿ.ಎನ್. ಪರಡ್ಡಿ**, ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

**ಮುದ್ರಕರು :**
**ಗೀತಾಂಜಲಿ ಗ್ರಾಫಿಕ್ಸ್**
ನಂ. ಬಿ-71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್,
6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

**ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ**
**ಪ್ರಕಟಣ ಯೋಜನೆ**

**ಸಂಪಾದಕ ಸಮಿತಿ**

ಅಧ್ಯಕ್ಷರು
**ಪ್ರೊ. ಹಿ.ಶಿ. ರಾಮಚಂದ್ರೇಗೌಡ**

ಸದಸ್ಯರು
**ಡಾ. ಸೋಮಶೇಖರ ಇಮ್ರಾಪುರ**
**ಡಾ. ಎಚ್.ಜೆ. ಲಕ್ಕಪ್ಪಗೌಡ**
**ಡಾ. ಎಂ.. ಪ್ರಭಾಕರ ಜೋಶಿ**
**ಡಾ. ತೀ.ನಂ. ಶಂಕರನಾರಾಯಣ**
**ಶ್ರೀಮತಿ ಶಾಂತಿನಾಯಕ**
**ಡಾ. ಅರವಿಂದ ಮಾಲಗತ್ತಿ**
**ಡಾ. ಮ.ಗು. ಬಿರಾದಾರ**
**ಪ್ರೊ. ಎ.ವಿ. ನಾವಡ**
**ಡಾ. ವೆಂಕಟೇಶ ಇಂದ್ವಾಡಿ**

ಸದಸ್ಯ ಕಾರ್ಯದರ್ಶಿ
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು
**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

**ಟಿ. ತಿಮ್ಮೇಗೌಡ**
ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

## ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
**ಶ್ರೀ ಪಿ.ಎನ್. ಶ್ರೀನಿವಾಸಚಾರಿ**, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
**ಶ್ರೀ ಕೆ.ಎ. ದಯಾನಂದ**, ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
**ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ಜಂಟಿ ನಿರ್ದೇಶಕರು (ಆಡಳಿತ)

**ಶ್ರೀ ಬಲವಂತರಾವ್ ಪಾಟೀಲ್**
ಜಂಟಿ ನಿರ್ದೇಶಕರು (ಸು.ಕ.)

**ಶ್ರೀ ಬಿ.ಎನ್. ಪರಡ್ಡಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

**ಶ್ರೀ ಎನ್. ಹರಿಕುಮಾರ್**
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪ ದಿನಾಂಕ: ೦೪-೦೨-೨೦೧೪

# ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.


ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

**ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್** ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ವಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.



ಸಿದ್ಧರಾಮಯ್ಯ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೬೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

# ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ, ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ, ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.

ಉಮಾಶ್ರೀ

# ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ, ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಪಡೆದಿದ್ದೇವೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎಸ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**ಕೆ.ಎ. ದಯಾನಂದ**, ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ-ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಥೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲವೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನು ಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಕ್ಷರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

**ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅಧ್ಯಕ್ಷರ ಮಾತು

## ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ. ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೦ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

## ಮಾತಿನ ಸರಣಿ : ಮುತ್ತಿನ ಬೆಲೆ

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೭)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೭೩)**

**ದೇ. ಜವರೇಗೌಡ**

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೭೭).**

**ಎಚ್. ಎಲ್. ನಾಗೇಗೌಡ**

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೭೩)**

**ಜೀ.ಶಂ. ಪರಮಶಿವಯ್ಯ**

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೭೭)**

– ೩ –

**ಕಟ್ಟುವ ಕನಸು : ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ:

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮುನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಪಿ.ಕೆ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

[illegible] ಅಖಿಲ [illegible] ಜನಪದ
[illegible]

[illegible] ಜನಪದ ಸಾಹಿತ್ಯ [illegible] ಸಂಪ್ರದಾಯ [illegible] ಮತ್ತು [illegible] ಜನಪದ ಸಾಹಿತ್ಯ [illegible]

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ಬೋಧನೆ, ವಿಶ್ಲೇಷಣೆ, ಸಮಾಲೋಚನೆ ಮತ್ತು ತನ್ನನ್ನು [illegible] ಜನಪದ ಸಾಹಿತ್ಯ ಸಮೀಕ್ಷೆಯಲ್ಲಿನ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸಂವಾದಿಯಾಗಿರುವ ಪರ್ಯಾಯ ಚಿಂತನ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ [illegible] ಪ್ರತಿಭಟನೆಯಾಗಿಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸ್ಥಾನವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ [illegible] ಪ್ರವೃತ್ತಿಯ ಶತಮಾನದ ಎರಡನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ [illegible]. ಇದಕ್ಕೆ ಸಮರ್ಥನೆ [illegible] [illegible] [illegible]. [illegible] [illegible] [illegible] [illegible] ನಡೆದ ಅಖಿಲ [illegible] ಜನಪದ ಸಾಹಿತ್ಯ ಸಮ್ಮೇಳನದ [illegible] ಸಮ್ಮೇಳನದ [illegible] ಜನಪದ ಸಾಹಿತ್ಯ [illegible] [illegible] ಎಂದು [illegible] [illegible] [illegible]

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಮುರದಮುಣ್ಯಾಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

– **ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಮರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವ್ಯತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕೆಯನು. ಅನಿವಾರ್ಯ ಅಂತ ಮಾಡಿಕೊಂಡರೂ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

### ಕರ್ನಾಟಕ ಸರ್ಕಾರ: ಚಿಗುರಿದ ಸಂಸ್ಕೃತಿಯ ಸಾರ
### ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲ್ಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಈ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ. ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಅಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯಳಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ. ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ-ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಫರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಪ್ರಸ್ತಾವನೆ

'ಜಾನಪದ' ಎಂಬುದು ವ್ಯಾಪಕವಾದ ಜ್ಞಾನಕ್ಷೇತ್ರ. ಅದರಲ್ಲಿ ವೈವಿಧ್ಯಮಯವಾದ ಅಭಿವ್ಯಕ್ತಿರೂಪಗಳಿವೆ. ಅಧ್ಯಯನ ಸೌಲಭ್ಯಕ್ಕಾಗಿ ಅವನ್ನೆಲ್ಲಾ ವಿವಿಧ ಪ್ರಕಾರಗಳಲ್ಲಿ ಅಳವಡಿಸಿ ವರ್ಗೀಕರಿಸಲಾಗಿದೆ. ಜನಪದ ಗೀತೆಯು ಜಾನಪದದ ಸಾಹಿತ್ಯಕ ಬಗೆಯಲ್ಲಿ ಸೇರಿದ್ದರೆ, ಕುಣಿತವು ಜಾನಪದದ ಕ್ರಿಯಾತ್ಮಕ ಬಗೆಯಲ್ಲಿ ಸೇರ್ಪಡೆಯಾಗಿದೆ. ಭಾಷಿಕ ಹಾಗೂ ಕ್ರಿಯಾತ್ಮಕ. ಈ ಎರಡೂ ಬಗೆಯಲ್ಲಿನ ಅಭಿವ್ಯಕ್ತಿ ರೂಪಗಳು ಸಮ್ಮಿಲನಗೊಂಡಾಗ ಹುಟ್ಟಿಕೊಂಡಂತದ್ದೇ ಹಾಡ್ಗುಣಿತ ಎಂಬ ವಿಶೇಷ.

ಜೀವ ಜಗತ್ತಿನಲ್ಲಿ ಹಾಡು ಮತ್ತು ಕುಣಿತಗಳು ಬಹು ಆಕರ್ಷಕವಾದ ಅಭಿವ್ಯಕ್ತಿ ರೂಪಗಳು. ಸೂಕ್ಷ್ಮವಾಗಿ ಗಮನಿಸಿದರೆ, ಹಾಡಲು ಬಾರದ ಜೀವಿಯೂ ಅತೀವ ಆನಂದ ಇಲ್ಲವೇ ಆಕ್ರೋಶದ ಸಂದರ್ಭದಲ್ಲಿ ಮೈ-ಕೈ ಕುಣಿಸಿ 'ಕುಣಿತ'ದ ರೂಪದಲ್ಲಿ ತನ್ನ ಭಾವನೆ ವ್ಯಕ್ತ ಮಾಡುವುದುಂಟು.

'ಕುಣಿತ' – ಎಂದರೆ ಏನು ? – ಅದೊಂದು ತೀವ್ರರೂಪದ ಅಭಿವ್ಯಕ್ತಿ ವಿಶೇಷ. ಅಭಿನಯಕ್ಕೂ, ಕುಣಿತಕ್ಕೂ ಸ್ಪಷ್ಟವಾದ ವ್ಯತ್ಯಾಸವಿದೆ. ಅಭಿನಯಕ್ಕೆ ಕೈ, ಬಾಯಿ ಚಲನೆ ಅಷ್ಟೇ ಸಾಕಾದೀತು. ಅಂದರೆ, ಕುಳಿತಲ್ಲೇ ಭಾವಾಭಿವ್ಯಕ್ತಿ ಮಾಡಬಹುದು. ಆದರೆ, ಕುಣಿತ ಕಾಲುಗಳಿಗೆ ಸಂಬಂಧಿಸಿದ್ದು. (ಕಾಲುಗಳೇ ಇಲ್ಲದವರೂ 'ಕುಣಿತ' ಮಾಡಿ ಸೈ ಅನ್ನಿಸಿಕೊಂಡ ನಿದರ್ಶನಗಳಿವೆ.) ಅದು ಒಂದೆಡೆ ಸ್ಥಿರವಾಗಿ ನಿಂತು ಅಥವಾ ಕುಳಿತು ಮಾಡುವಂತಹದ್ದಲ್ಲ. ತಾಳ-ಲಯ-ಸಂಗೀತಗಳ ಸಾಂಗತ್ಯಕ್ಕನುಗುಣವಾಗಿ ಕುಣಿತ ರೂಪು ತಾಳುತ್ತದೆ.

ಕುಣಿತಕ್ಕೆ ಸಂಗೀತವು ಅನಿವಾರ್ಯ ಎಂಬಷ್ಟು ಸಹಯೋಗ ಇರುವುದುಂಟು. ಆದರೆ, ಸಾಹಿತ್ಯವೂ ಅನಿವಾರ್ಯವೇ ? ಕರ್ನಾಟಕದಲ್ಲಿ ಜನಪದ ಕುಣಿತ ರೂಪಗಳನ್ನು ಸಮೀಕ್ಷಿಸಿದಾಗ ಅವು ಮೂರು ರೀತಿಯಲ್ಲಿರುವುದು ಕಂಡುಬಂದಿದೆ. ಅವನು, ಹೀಗೆ ವರ್ಗೀಕರಿಸಬಹುದು :

೧. ಶುದ್ಧ ಕುಣಿತ ಕಲೆಗಳು ೨. ಹಾಡ್ಗುಣಿತಗಳು ಹಾಗು ೩. ಕುಣಿತ ಅಪ್ರಧಾನ ಕಲೆಗಳು.

ಗೀತೆಗಳ ಸಾಹಚರ್ಯವಿಲ್ಲದೆ ಕೇವಲ ವಾದ್ಯಮೇಳದ ಸಹಭಾಗಿತ್ವದೊಂದಿಗೆ ಅಭಿವ್ಯಕ್ತಗೊಳ್ಳುವ ಕುಣಿತಗಳನ್ನು ಶುದ್ಧ ಕುಣಿತ ಕಲೆಗಳೆಂದು ಗುರುತಿಸೋಣ. ಉದಾ. ಪೂಜಾ ಕುಣಿತ, ನಂದಿಧ್ವಜ ಕುಣಿತ.

ಹಾಡು ಮತ್ತು ಕುಣಿತ ಎರಡೂ ಸಮಸಮವೆಂಬಂತೆ ಸಮ್ಮಿಶ್ರಗೊಂಡು ರೂಪು ತಾಳಿರುವ ಕುಣಿತಗಳನ್ನು ಹಾಡ್ಗುಣಿತಗಳೆಂದು ಕರೆಯೋಣ. ಉದಾ: ಪಂಢರಿ ಭಜನೆ, ಸೋಮನ ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ ಇತ್ಯಾದಿ.

ಸಾಹಿತ್ಯ (ಹಾಡು, ಕತೆ ಇತ್ಯಾದಿ) ಪ್ರಧಾನವಾಗಿ ಅಭಿವ್ಯಕ್ತಗೊಳ್ಳುವಾಗ ಭಾವ ಸ್ಫೂರ್ತಿಯಿಂದಾಗಿ, ರಂಜನೆಗಾಗಿ ಅಲ್ಲಲ್ಲಿ ಲಘುವಾಗಿ ಕುಣಿತಾಭಿವ್ಯಕ್ತಿಯೂ ಇರುವ ಕಲೆಗಳನ್ನು ಕುಣಿತ ಅಪ್ರಧಾನ ಕಲೆಗಳೆಂದು ವರ್ಗೀಕರಿಸುವುದು ಸೂಕ್ತ. ಉದಾಗೆ ಕರಪಾಲ, ಗೊಂದಲಿಗ ಮೇಳ ಇತ್ಯಾದಿ.

ಪ್ರಸ್ತುತದ, 'ಹಾಡ್ಗುಣಿತಗಳು' ಎಂಬ ಈ ಸಂಪುಟದ ಸಿದ್ಧತೆಯ ಸಂದರ್ಭದಲ್ಲಿ, ಲೇಖನಗಳ ಆಯ್ಕೆಗಾಗಿ ನಾನು ಈ ಮಾನದಂಡವನ್ನು ರೂಪಿಸಿಕೊಂಡಿದ್ದೇನೆ. ಅದರಂತೆ, ಹಾಡುಗಳೇ ಇರದ ಕೇವಲ ಕುಣಿತ ರೂಪಗಳನ್ನು ಇಲ್ಲಿ ಪರಿಚಯಿಸುವ ಅವಶ್ಯಕತೆಯೇ ಇಲ್ಲ ಎಂದು ಭಾವಿಸಿ, ಅವನ್ನು ಇಲ್ಲಿಂದ ಕೈಬಿಡಲಾಗಿದೆ. ಹಾಗೆಯೇ, ಗೀತ-ಸಾಹಿತ್ಯವೇ ಪ್ರಧಾನವಾಗಿದ್ದು, ಕುಣಿತ ಅಪ್ರಧಾನವಾಗಿ ತೋರುವ ಕಲಾ ರೂಪಗಳನ್ನು ಈ ಸಂಪುಟದಿಂದ ಹೊರಗಿರಿಸಿದ್ದೇನೆ. ಏಕೆಂದರೆ, ಅಲ್ಲಿ ಇಡೀ ಕಾವ್ಯವನ್ನೇ ಆಯ್ದುಕೊಳ್ಳಬೇಕಾಗುತ್ತದೆ ಮತ್ತು ಆ ಎಷ್ಟೋ ಕಾವ್ಯಗಳು ಸುದೀರ್ಘ ಕಥನ ಕಾವ್ಯಗಳೂ, ಮಹಾಕಾವ್ಯಗಳು ಆಗಿರುತ್ತವೆ. ಅವು ಒಂದೊಂದು ಸ್ವತಂತ್ರ ಗ್ರಂಥವಾಗಿಯೇ ಪ್ರಕಟವಾಗಲು ಯೋಗ್ಯವಾಗಿರುತ್ತವೆ. ಉದಾ.ಗೆ ಮಲೆ ಮಾದೇಶ್ವರನ ಮಹಾಕಾವ್ಯ ಹಾಡುವ ಕಂಸಾಳೆಯವರು ಸಾಂದರ್ಭಿಕವಾಗಿ ಬೀಸು ಕಂಸಾಳೆ ನೃತ್ಯವನ್ನು ಪ್ರದರ್ಶಿಸುತ್ತಾರೆ. ಮಾರಿಪುರಾಣವನ್ನು ಕಥನವಾಗಿ ನಿರೂಪಿಸುವಾಗ ಆಸಾದಿಗಳು ಅಲ್ಲಲ್ಲಿ-ನಿಂತಲ್ಲೇ ಲಘುವಾಗಿ ನೃತ್ಯದ 'ಅನುಕರಣೆ'ಯನ್ನು ಮಾಡುತ್ತಾರೆ. ಕರಪಾಲ ಮೇಳದಲ್ಲಿಯೂ ಪ್ರತೀ ಹಾಡಿಗೆ 'ನೃತ್ಯ'ದ ಲಘು ಅಭಿವ್ಯಕ್ತಿ ತೋರಿದರೂ ಅಲ್ಲಿ 'ಮಟ್ಟು'ಗಳು ಒಂದೆರಡು

ಚರಣದಲ್ಲೇ ಮುಕ್ತಾಯಗೊಳ್ಳುತ್ತಿರುತ್ತವೆ. ಅಷ್ಟಲ್ಲದೆ, ಈ ಕುಣಿತವೂ ಬಹುಮಟ್ಟಿಗೆ ಏಕತಾನತೆಯಾಗಿಯೇ ತೋರುತ್ತದೆ. ಗೊಂದಲಿಗರ ಮೇಳವೂ ಹೀಗೆಯೇ.

ಹಾಡು-ಕುಣಿತಗಳ ಸಾಹಚರ್ಯದ ಕಲೆಗಳ ಬಗೆಗೆ ಇನ್ನಿಷ್ಟು ವಿಸ್ತೃತಗೊಳಿಸಿ ನೋಡಿದರೆ-ನಮ್ಮೆಲ್ಲಾ ಬಯಲಾಟಗಳೂ ಗೀತ-ನೃತ್ಯ ರೂಪಕಗಳೇ ಆಗಿವೆ. ಮಕ್ಕಳ ಎಷ್ಟೋ ಶಿಶುಪ್ರಾಸ-ವಿನೋದಗಳಲ್ಲೂ ಗೀತ-ಕುಣಿತ ಸಾಮಾನ್ಯ ರೂಪದಲ್ಲಿ ಕಂಡುಬರಬಹುದು.... ಹೀಗೇ. ಇಂಥ ರೂಪ ವಿಶೇಷಗಳನ್ನೆಲ್ಲಾ ಪ್ರತ್ಯೇಕ ಅಂಕಣದಲ್ಲಿಯೇ ಪರಿಗಣಿಸಿ, ಅಧ್ಯಯನಿಸುವುದು ಸೂಕ್ತವಾದುದರಿಂದ; ಹಾಗೂ ಪ್ರಸ್ತುತದ ಸಂಪುಟಕ್ಕೊಂದು ಚೌಕಟ್ಟು ಹಾಕಿಕೊಳ್ಳುವುದು ಅನಿವಾರ್ಯವಾದುದರಿಂದ ಹಾಡು-ಕುಣಿತ ಎರಡೂ ಪ್ರಧಾನವಾಗಿರುವ ರೂಪಗಳನ್ನಷ್ಟೇ ಇಲ್ಲಿ ಆಯ್ದುಕೊಳ್ಳಲಾಗಿದೆ. ಇಷ್ಟಾಗಿಯೂ, ಭಾಗವಂತಿಕೆ ಮೇಳದಲ್ಲಿನ ಪದಗಳನ್ನು-ಕಾವ್ಯವನ್ನು ಇಲ್ಲಿ ಸೇರಿಸಲು ಕಾರಣ, ಇಂಥಾ ಸಾಧಕ-ಬಾಧಕದ ಮಾದರಿಗಾಗಿ ಹಾಗೂ, ಆ ಪದ್ಯಗಳು ಪ್ರತ್ಯೇಕ ಸಂಪುಟವಾಗುವಷ್ಟು ತೀರಾ ಹೆಚ್ಚಾಗಿಲ್ಲ ಎಂಬ ಕಾರಣಕ್ಕಾಗಿ.

ಹಾಗೆಯೇ, ಕೋಲಾಟ ಕಲೆಯು ಗೀತ-ನೃತ್ಯಗಳಿಂದ ಮುಪ್ಪುರಿಗೊಂಡದ್ದಾಗಿದ್ದರೂ, ಆ ಗೀತಗಳನ್ನೇ ಪ್ರತ್ಯೇಕ ಸಂಪುಟವಾಗಿ ಪ್ರಕಟಿಸಬಹುದಾದಷ್ಟು ಅಧಿಕ ಸಂಖ್ಯೆಯಲ್ಲಿರುವುದರಿಂದ, ಇಲ್ಲಿ ಅವಕ್ಕೆ ಆದ್ಯತೆ ಕೊಟ್ಟು ಆಯ್ಕೆ ಮಾಡಿಲ್ಲ. ಆದರೂ, ಅವು ಸೇರಬಹುದಾದ ಪ್ರಕಾರವಾದ್ದರಿಂದ ಪ್ರಾತಿನಿಧ್ಯಕ್ಕಾಗಿ ಮತ್ತು ಇತರರ ಗಮನಕ್ಕೆ ಅಷ್ಟಾಗಿ ಬಾರದಿರಬಹುದು ಎಂಬ ಕಾರಣಕ್ಕಾಗಿ ಅಂಥ ತೀರಾ ಕೆಲವು ಮಾದರಿಗಳನ್ನು ಆಯ್ದು ಇಲ್ಲಿ ನೀಡಿದೆ.

ಈ ಸಂಪುಟವನ್ನು ಸಿದ್ಧಪಡಿಸುವಾಗ ನಾನು ಎದುರಿಸಿದ ಒಂದು ಸಮಸ್ಯೆಯನ್ನು ನಮ್ಮ ಸಂಗ್ರಾಹಕ-ವಿದ್ವಾಂಸರ ಗಮನಕ್ಕೆ ತರಲೇಬೇಕಾಗಿದೆ.

೧. ಜನಪದ ಕಲೆಗಳನ್ನು ಕುರಿತು ಈಗಾಗಲೇ ಮೂರ್‍ನಾಲ್ಕು ಗ್ರಂಥಗಳು ಪ್ರಕಟವಾಗಿದ್ದರೂ, 'ಕಲೆ'ಯ ಸ್ವರೂಪ, ನಿಜವಾಗಿ ಸೇರಬೇಕಾದ ಕಲೆಗಳ ಬಗೆಗೆ ಸರಿಯಾದ ವಿವೇಚನೆಯೇ ಆಗಿಲ್ಲ. ಆದ್ದರಿಂದಲೇ, ತೀರಾ ಸಾಮಾನ್ಯ ರೂಪಗಳೂ ಕಲೆಯ ಹೆಸರಿನಲ್ಲಿ ಸೇರಿಬಿಟ್ಟಿವೆ.

೨. ಹಾಡು ಮತ್ತು ನೃತ್ಯ-ಎರಡೂ ಇರುವ 'ಕಲೆ'ಗಳ ಸಂಗ್ರಹ ದಾಖಲಾತೀಕರಣ ನಡೆದಾಗಲೂ ಅರ್ಥಾತ್, ಅವುಗಳ ಪರಿಚಯವನ್ನು ಬರಹ ರೂಪಕ್ಕೆ ತರುವಾಗಲೂ ನಮ್ಮ ಅಧ್ಯಯನಕಾರರು ಸಾಕಷ್ಟು ಅಗತ್ಯ

ಮಾಹಿತಿಗಳನ್ನೇ ದಾಖಲಿಸಿಲ್ಲ. ಉದಾ: ಎಷ್ಟೋ ಕಲೆಗಳ ಪರಿಚಯದಲ್ಲಿ– ಹಾಡು ಮತ್ತು ನೃತ್ಯ ಎರಡೂ ಏಕಕಾಲಕ್ಕೆ ಅಭಿವ್ಯಕ್ತಗೊಳ್ಳುತ್ತವೆಯೋ ? ಹಾಡಿನ ಭಾಗ ನಿಂತಾಗ ನೃತ್ಯ ಪ್ರದರ್ಶನಗೊಳ್ಳುತ್ತದೆಯೋ ? ಹಾಡಿನ ಯಾವಾವ ಚರಣಕ್ಕೆ ಅಥವಾ 'ಮಟ್ಟಿಗೆ' ಕುಣಿತ ಹೇಗೆ ಸಹಭಾಗಿಯಾಗುತ್ತದೆ ? ಅರ್ಥಾತ್, ಅಲ್ಲಿಯ ತಾಳ, ಹೆಜ್ಜೆ ಇತ್ಯಾದಿಗಳ ನಿಖರವಾದ ವಿವರಣೆಯನ್ನು ನೀಡಿಲ್ಲ. ಹೀಗಿಲ್ಲದ ಸಂಗ್ರಹವಾಗಲೀ, ಅಧ್ಯಯನವಾಗಲೀ ಫಲಪ್ರದವಾಗುವುದಾದರೂ ಹೇಗೆ ? ಈ ಹಿನ್ನೆಲೆಯಲ್ಲಿಯೇ ನಾನು ವೀರಮಕ್ಕಳ ಕುಣಿತ–ಹಾಡುಗಳನ್ನು ಸಂಗ್ರಹಿಸುವಾಗ, ಹಾಡು–ಕುಣಿತ ಅಲ್ಲಿ ಹೇಗೆ ಪರಸ್ಪರ ಅಭಿವ್ಯಕ್ತಗೊಳ್ಳುತ್ತವೆ ಎಂಬ ಸಾಮಾನ್ಯ ಅಂಶಗಳನ್ನು ಹೊಸಬರಿಗೆ ಮಾದರಿಯಾಗಲಿ ಎಂದು ಸಂಕ್ಷಿಪ್ತವಾಗಿಯಾದರೂ ದಾಖಲಿಸಿಕೊಡುವ ಮೊದಲ ಪ್ರಯತ್ನ ಮಾಡಿದ್ದೇನೆ.

ಜನಪದ ವೈದ್ಯ, ಚಿತ್ರಕಲೆಯಂತಹ ಪ್ರಕರಣಗಳಲ್ಲಿ ಆದಂತೆಯೇ, ಸಂಗೀತ–ನೃತ್ಯಗಳ ಸಂದರ್ಭಗಳಲ್ಲಿಯೂ ಆಗಿದೆ. ಅಂದರೆ, ಸಂಗೀತ, ನೃತ್ಯಗಳ ಪ್ರಾಥಮಿಕ–ತಾಂತ್ರಿಕ ತಿಳುವಳಿಕೆಯೂ ಇಲ್ಲದವರೂ ಆ ಕಲೆಗಳನ್ನು ಕೇವಲ ಬಾಹ್ಯ ವಿವರದೊಂದಿಗೆ ಸಂಗ್ರಹಿಸಿ, ಕೈತೊಳೆದುಕೊಂಡಿದ್ದೇವೆ. ಇಂತಹ ದಾಖಲೆಗಳು ಯಾವನೇ ಒಬ್ಬ ಸಂಗೀತ–ಶಾಸ್ತ್ರಜ್ಞ ಅಥವಾ ನೃತ್ಯ ವಿಶ್ಲೇಷಕನ ಬಳಕೆಗೂ ಸ್ವಲ್ಪವೂ ಉಪಯೋಗವಾಗುವುದಿಲ್ಲ. ಇಂಥಾ ಸಾಮಾನ್ಯ ವಿವರಗಳೂ ಇಲ್ಲದ್ದರಿಂದಲೇ ಕೆಲವು 'ಕುಣಿತ'ಗಳನ್ನು ಅಥವಾ ಹಾಡುಗಳನ್ನು ಇಲ್ಲಿ ಧೈರ್ಯವಾಗಿ ಸೇರಿಸಲಾಗದೆ, ಕೈ ಬಿಡುವುದು ಅನಿವಾರ್ಯವಾಗಿದೆ.

ಈ ಪರಿವೀಕ್ಷಣೆಯ ಸಂದರ್ಭದಲ್ಲಿ ಗೋಚರವಾದ ಇನ್ನೊಂದು ಮುಖ್ಯಾಂಶವೆಂದರೆ – ನಮ್ಮಲ್ಲಿ ಇನ್ನೂ ಅಧ್ಯಯನಕಾರರ ಕಣ್ಣಿಗೆ ಬೀಳದ 'ಕಲೆ'ಗಳು ಕೆಲವಾದರೂ ಇವೆ. ಕೆಲವರು ಅಲ್ಲಿ–ಇಲ್ಲಿ ಸಾಂದರ್ಭಿಕವಾಗಿ ಅವುಗಳ ಹೆಸರನ್ನು ಪ್ರಸ್ತಾಪ ಮಾಡಿದ್ದರೂ ಅವುಗಳ ಸ್ವರೂಪ ತಿಳಿಸುವ ವಿವರಗಳೇ ದಾಖಲಾಗಿಲ್ಲ. ಇನ್ನೂ ಕೆಲವು ಎಂದೋ ಇದ್ದು, ಇಂದು ಕಣ್ಮರೆಯಾದಂತೆ ಭಾಸವಾಗುತ್ತಿದೆ.

ಇಷ್ಟೆಲ್ಲಾ ಅಡೆ–ತಡೆಗಳ ನಡುವೆಯೂ, ಬಹು ದೀರ್ಘಾವಧಿಯ ಪ್ರಯತ್ನದ ಫಲವಾಗಿ ಈ ಸಂಪುಟ ಸಿದ್ಧಪಡಿಸಿದಾಗ ಆದ ಸಂತೋಷವೆಂದರೆ ಬಹುಶಃ ಮೊದಲ ಬಾರಿಗೆ ಈ ಹಾಡ್ಗುಣಿತಗಳ ವೈವಿಧ್ಯವನ್ನು ಒಂದೆಡೆ ಸೇರಿಸಿದ ಹಾಗೂ ಆ ಮೂಲಕ ನಮ್ಮ ಅಧ್ಯಯನಕಾರರಿಗೆ ಈ ಪ್ರಕಾರದ

ತಳ-ಅಗಲದ. ಈಗ ಆದದ್ದು-ಆಗಬೇಕಾದ್ದರ ಬಗ್ಗೆ ಒಂದು ಸ್ಥೂಲ ಪರಿಚಯ ಮಾಡಿಕೊಡಲು ಸಾಧ್ಯವಾಗಿದೆ ಎಂಬುದು; ವೀರ ಮಕ್ಕಳ ಕುಣಿತ, ಗುಡ್ಡರ ಮೇಳದಂತಹ 'ಕಲೆ'ಯ ಗೀತ ಸಾಹಿತ್ಯವನ್ನು (ಈ ಸಂಪುಟಕ್ಕಾಗಿಯೇ) ಮೊದಲ ಬಾರಿಗೆ ಸಂಗ್ರಹಿಸಿ ಪ್ರಕಾಶಕ್ಕೆ ತರಲಾಗಿದೆ ಎಂಬುದು; ಗೀತಸಾಹಿತ್ಯ-ಕುಣಿತ ಕಲೆಗಳ ಸೃಷ್ಟಿಯ ಹಿಂದಿನ ಪ್ರಚೋದನೆ, ಆ ಸೃಷ್ಟಿ-'ಕರ್ತೃ'ಗಳ ಬಗೆಗೆ ಒಂದಿಷ್ಟು ಹೊಸ ಅರಿವನ್ನು ವಿದ್ವಜ್ಜನರ ಮುಂದೆ ಮಂಡಿಸಲು ಸಾಧ್ಯವಾಗಿದೆ ಎಂಬುದು. ಕೆಲವು ಕಲೆಗಳು ಸಾರ್ವತ್ರಿಕವೆಂಬಂತಿದ್ದರೂ, ಹೆಚ್ಚಿನವು ಆಯಾ ಸಮುದಾಯ-ಪ್ರದೇಶ ನಿಷ್ಠವಾಗಿವೆ-ಅರ್ಥಾತ್ ಕೆಲವು ಸಮುದಾಯಗಳ ಅನನ್ಯತೆಯ ಕುರುಹಾಗಿ ಕೆಲವು ಕಲೆಗಳು ಹುಟ್ಟಿಕೊಂಡಿವೆ ಎಂಬುದೂ ಗಮನಿಸುವಂತಹ ಅಂಶವೆ. ಉದಾ.ಗೆ ಭಾಗವಂತಿಕೆ ಮೇಳ ಮಂಡ್ಯ, ಬೆಂಗಳೂರು ಭಾಗದ ಒಕ್ಕಲಿಗರಲ್ಲಿ ವಿಶೇಷವಾಗಿದ್ದರೆ, ವೀರಭದ್ರನ ಕುಣಿತ ವಿಶೇಷವಾಗಿ ಶೈವ ಸಂಪ್ರದಾಯದವರಲ್ಲಿ ಕಂಡುಬರುತ್ತದೆ. ಕೋಲಾಟವು ರಾಜ್ಯದ ಎಲ್ಲಾ ಭಾಗ, ಸಮುದಾಯಗಳಿಗೆ ಸಾಮಾನ್ಯವೆನಿಸಿದ್ದರೂ ಗೊಲ್ಲರು, ಬೇಡರು, ಲಂಬಾಣಿಗಳಂತಹ ಬುಡಕಟ್ಟುಗಳಲ್ಲಿ ಇತರರಿಗಿಂತ ವಿಭಿನ್ನವಾಗಿ, ಬದುಕಿನ ಭಾಗ ಮಾಡಿಕೊಂಡಿರುವುದುಂಟು. ಸುಗ್ಗಿಕೋಲು ಉತ್ತರ ಕನ್ನಡದ ಹಾಲಕ್ಕಿಗಳ ವಿಶಿಷ್ಟ ಸೃಷ್ಟಿಯಾಗಿದ್ದರೆ, ಸಿಂದ್ ಕುಣಿತ ಕೋಲಾರ ಭಾಗದ ಸಿಂಧ್ ಮಾದಿಗರಿಗೆ ಮೀಸಲಾದದ್ದಾಗಿದೆ. ಅಲಾವಿ ಕುಣಿತ ಹಿಂದೂ-ಮುಸ್ಲಿಂ ಸಂಸ್ಕೃತಿಗಳ ಸೌಹಾರ್ದದ ಬೆಸುಗೆಯ ರೂಪಗಳಾಗಿ ಉಳಿದಿವೆ.

ರಾಮರದಂಡು, ಸೀತೆದಂಡಿನಂತಹ ಪ್ರದರ್ಶನ ಸಂಪ್ರದಾಯಗಳು ವೈಷ್ಣವ ಧರ್ಮದ ಹಿನ್ನೆಲೆಯುವಾಗಿದ್ದರೆ, ಕರಪಾಲ, ಕಂಸಾಳೆ, ವೀರಗಾಸೆಯಂತಹ ಸಂಪ್ರದಾಯಗಳು ಶೈವ ಮೂಲದ್ದಾಗಿವೆ. ಆಸಾದಿಗಳು, ಗೊಂದಲಿಗರು ಮೊದಲಾದವರು ಶಕ್ತಿದೇವತೆಯ ಆರಾಧಕರು. ಸೋಮನ ಕುಣಿತ ವೈಷ್ಣವ-ಶೈವ ಎರಡೂ ಪ್ರಭಾವಗಳನ್ನೊಳಗೊಂಡು ಶಕ್ತಿದೇವತೆಯ ನೆಲೆಯಲ್ಲಿಯೇ ಕಂಡುಬರುತ್ತದೆ. ಕೋಲಾಟ ಸಾಮಾಜಿಕ ಬದುಕನ್ನು ಪ್ರತಿನಿಧಿಸಿದರೆ, ಕುಡುಬಿಯರು, ಜೇನುಕುರುಬರು ಮೊದಲಾದವರ ಕೆಲವು ಹಾಡು-ಕುಣಿತಗಳು ನಿಸರ್ಗಾರಾಧನೆಯ ಹಿನ್ನೆಲೆ ಪಡೆದುಕೊಂಡಿರುತ್ತವೆ. ನಲ್ಕೆಯರು, ಪಾಣಾರರು ಮೊದಲಾದವರ ಹೆಚ್ಚಿನ ಪ್ರದರ್ಶನಗಳು ಋತುಮಾನದ ಹಿನ್ನೆಲೆಯಲ್ಲಿ ಸಮಾಜವನ್ನು ಕಾಡುವ ವಿಪತ್ತುಗಳನ್ನು ದೂರ ಮಾಡುವ ಆಶಯದಿಂದ ಹುಟ್ಟಿಕೊಂಡಿರುವುದು ವೇದ್ಯವಾಗುತ್ತದೆ.

ಒಟ್ಟಾರೆ, ಈ ಹೆಚ್ಚಿನ ಅಭಿವ್ಯಕ್ತಿಗಳು ಭಕ್ತಿಪಂಥದ ಪ್ರಭಾವಕ್ಕೆ ಒಳಗಾಗಿ ಅಥವಾ ಆಯಾ ಪಂಥಗಳ ಪ್ರಚಾರದ ಅಂಗವಾಗಿ ಜನ್ಮತಾಳಿರುವುದಂತೂ ಸ್ಪಷ್ಟವಾಗುತ್ತದೆ.

ಕರ್ನಾಟಕವು, ಅದರಲ್ಲಿಯೂ, ಮೇಲುಕೋಟೆಯು ಭಕ್ತಿಪಂಥದ ಮೂಲ. ಇಲ್ಲಿ ಹುಟ್ಟಿದ ಭಕ್ತಿಪಂಥದ ಪ್ರಭಾವ ಉತ್ತರ ಭಾರತಕ್ಕೂ ವ್ಯಾಪಿಸಿತು ಎಂದು ಅಧ್ಯಯನಕಾರರು ಹೇಳುತ್ತಾರೆ. ಬಸವಣ್ಣನ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಶೈವ ಪಂಥ ಬಲವಾಯಿತು. ಕರಾವಳಿಯಲ್ಲಿ ಭೂತದೈವದ ಪ್ರಭಾವ ಕಡಿಮೆ ಏನಲ್ಲ. ಉಳಿದಂತೆ ಶಕ್ತಿದೇವತೆಯ ಅನುಯಾಯಿಗಳ ಸಂಖ್ಯೆಯೂ ಸಾಮಾನ್ಯವಾಗಿ ಏನೂ ಉಳಿಯಲಿಲ್ಲ.

ಈ ಎಲ್ಲದರ ಪ್ರಭಾವದಿಂದ ಅನೇಕ ಕಲಾ ರೂಪಗಳು ಹುಟ್ಟಿಕೊಂಡಿವೆ. ಅರ್ಥಾತ್, ಆಯಾ ಪಂಥದ ಭಕ್ತರು ಜನಸಾಮಾನ್ಯರಿಗೆ ತಮ್ಮ ಪಂಥದ ಪರಿಚಯ ಮಾಡಿಕೊಡಲು, ಅವರನ್ನು ತಮ್ಮ ಪಂಥದ ವ್ಯಾಪ್ತಿಗೆ ಬಗ್ಗಿಸಿಕೊಳ್ಳಲು, ಈಗಾಗಲೇ ಪಂಥಾಂತರವಾದ ಭಕ್ತರ ಆಚಾರ-ಸಂಪ್ರದಾಯ-ನಂಬಿಕೆಗಳ ಅನುಸರಣೆಗೆ ಅಗತ್ಯವಾದ ಮಾರ್ಗದರ್ಶನ ನೀಡಲು, ಆ ಮೂಲಕ ಅವರನ್ನು ಪಂಥನಿಷ್ಠರನ್ನಾಗಿ ಮಾಡಿ ಉಳಿಸಿಕೊಳ್ಳಲು.... ಇಷ್ಟೆಲ್ಲಾ ಸೇವೆಯ ಮೂಲಕ ತಾನು ಆ ದೈವದ ಕೃಪೆಗೆ ಪಾತ್ರನಾದೆ ಎಂಬ ಧನ್ಯತೆ ಪಡೆಯಲು ಆ ಪಂಥದಲ್ಲಿನ ಕೆಲ ಪ್ರತಿಭಾವಂತರು ಕವಿ-ಕಲಾವಿದರಾಗಿ ಹುಟ್ಟಿಕೊಂಡರು. ಗೀತೆ, ಕಾವ್ಯಾದಿಗಳು ಕತೆ-ಪುರಾಣಾದಿಗಳು, ಕುಣಿತ-ಪ್ರದರ್ಶನಗಳನ್ನು ಸೃಷ್ಟಿಸಿ, ಪ್ರಚಾರಕ್ಕೆ ತಂದರು. ಪ್ರೌಢಸಾಹಿತ್ಯ, ಕಲಾ ಸಂಪ್ರದಾಯಗಳಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳಿರುವುದಂತೂ ಅಧ್ಯಯನಕಾರರ ಗಮನಕ್ಕೆ ಸುಲಭವಾಗಿ ಬರುತ್ತದೆ.

ಆದರೆ, ಇಂಥಾ ಪ್ರಭಾವಗಳಿಂದ ನಮ್ಮಲ್ಲಿ ಹುಟ್ಟಿಕೊಂಡ ಜನಪದ ಕಲೆಗಳು ಯಾವುವು ? ಅವುಗಳ ಕಾಲ, ದೇಶ, ರೂಪ-ಸ್ವರೂಪಾದಿಗಳ ವಿಚಾರ ಏನು ? ಅಥವಾ, ಇನ್ನೂ ಮುಖ್ಯವಾಗಿ, ಆ ಕಲೆಗಳನ್ನು ಸೃಷ್ಟಿಸಿ ಪ್ರಚಾರಕ್ಕೆ ತಂದ ಕರ್ತೃಗಳಾರು ? ಎಂಬಿತ್ಯಾದಿ ಅಂಶಗಳ ಬಗೆಗೆ ನಮ್ಮಲ್ಲಿ ಅಷ್ಟಾಗಿ ಹೆಚ್ಚಿನ ಶೋಧಗಳೇ ಆಗಿಲ್ಲ. ಅದು ಇನ್ನಾದರೂ ಆಗಬೇಕು. ಕೆಲವೊಂದು ಕಲಾರೂಪಗಳಂತೂ ಒಂದರ ಪ್ರಭಾವದಿಂದ ಇನ್ನೊಂದು ಅಥವಾ ಒಂದಕ್ಕೆ ಪ್ರತಿಸ್ಪರ್ಧಿಯಾಗಿ ಮತ್ತೊಂದು ಹುಟ್ಟಿಕೊಂಡಿರುವುದೂ

ಸೂಕ್ಷ್ಮ ಪರಿವೀಕ್ಷಣೆಯಲ್ಲಿ ಮಾತ್ರ ಗೋಚರವಾಗುತ್ತದೆ. ಉದಾ.ಗೆ ವೀರಭದ್ರನ ಕುಣಿತದ ಸಂಪ್ರದಾಯದ ಪ್ರಭಾವದಿಂದ ವೀರಮಕ್ಕಳ ಕುಣಿತ, ಗುಡ್ಡರ ಮೇಳ, ದಟ್ಟಿ ಕುಣಿತದಂತಹ ಕಲೆಗಳು ಹುಟ್ಟಿಕೊಂಡಂತಿವೆ. ಚಿಕ್ಕಬಳ್ಳಾಪುರ ಭಾಗದಲ್ಲಿ ಈಚೆಗೆ ಅಭ್ಯಾಸಕ್ಕೆ ಬಂದಿರುವ "ಮಜ್ಜೀನು ಕುಣಿತ" ಮೂಲತಃ ಪಿರಿಯಾಪಟ್ಟಣದ ಪೈಗೂರ್ ಫಕೀರರ ಉರುಸ್‌ನಲ್ಲಿ ನಡೆಸುವ 'ಮಜ್ಜುಣ ಕುಣಿತ'ದ ಪ್ರಭಾವದಿಂದ ಹುಟ್ಟಿಕೊಂಡಿರುವಂತೆ ಕಾಣಬರುತ್ತಿದೆ.

ಜನಪದ ಗೀತ-ಕಾವ್ಯಾದಿಗಳು ಗ್ರಾಮೀಣ ಅನಕ್ಷರಸ್ಥರಲ್ಲಿ ಸಹಜ ಸ್ಫೂರ್ತಿಯಿಂದ ಅವತರಿಸಿದ ರಚನೆಗಳೆಂದು ಸಾಮಾನ್ಯವಾಗಿ ಹೇಳುತ್ತಾ ಬರಲಾಗಿದೆ. ವಿದ್ವಾಂಸರ ಈ ಅಭಿಪ್ರಾಯ ಮೇಲ್ನೋಟಕ್ಕೆ ನಿಜವಿದ್ದಂತೆ ಭಾಸವಾದರೂ, ರಚನೆಗಳ ಆಂತರಿಕ ಮಾಹಿತಿಗಳನ್ನು ಸೂಕ್ಷ್ಮವಾಗಿ ಓದಿಕೊಂಡಾಗ ಕೆಲವು ಅನುಮಾನಗಳನ್ನಂತೂ ಹುಟ್ಟುಹಾಕುತ್ತವೆ. ಕೆಲವು ದಶಕಗಳ ಹಿಂದೆಯೇ ನಾನು ಬರೆದ "ಜನಪದ ಗೀತೆಗಳನ್ನು ಬರೆಯುತ್ತಿದ್ದರೇ?" ('ಅಂಕಣ'-ದ್ವೈಮಾಸಿಕ, ಮಾರ್ಚ್-೧೯೮೧; ಅಥವಾ 'ಕಣ'-ಟಿ. ಗೋವಿಂದರಾಜು-೨೦೦೦ ಅನ್ನು ನೋಡಬಹುದು) ಎಂಬ ಲೇಖನದಲ್ಲಿ ಈ ಅಂಶವನ್ನು ಸೋದಾಹರಣವಾಗಿ ಚರ್ಚಿಸಿದ್ದೇನೆ. ಆಗ ಅನುಮಾನವಾಗಿಯೇ ಇದ್ದ ಕೆಲವು ಅಂಶಗಳು ಈಗ ಸ್ಪಷ್ಟವಾಗುತ್ತಿವೆ. ಅಕ್ಷರಸ್ಥರಿಂದ ಅನಕ್ಷರಸ್ಥರಿಗೆ ಹರಿದುಬಂದು, ಅನಕ್ಷರಸ್ಥರದೆಂಬ ರೀತಿಯಲ್ಲಿಯೇ ಉಳಿದು ಹೋದ ಇನ್ನಷ್ಟು ರಚನೆಗಳು ಈ ಸಂಪುಟ ಸಿದ್ಧಪಡಿಸುವ ಹೊತ್ತಿನಲ್ಲಿ ನನ್ನ ಗಮನಕ್ಕೆ ಬಂದಿವೆ. ಇಂತಹ ರಚನೆಗಳನ್ನು ನಾನು "ಲಿಖಿತ ಮೂಲ ಮೌಖಿಕ ಸಾಹಿತ್ಯ" ಎಂದು ಕರೆದಿದ್ದೇನೆ. (ನೋಡಿ: ಗೊಂಬೆರಾಮರ ಸಂಸ್ಕೃತಿ : ಟಿ. ಗೋವಿಂದರಾಜು; ೧೯೯೩; ೧೨೪). ಅದೇ ಪರಿಭಾಷೆಯನ್ನು ಈ ಸಂಪುಟದಲ್ಲಿ ಸೇರಿಸಿರುವ ಕೆಲವು ರಚನೆಗಳಿಗೂ ಅನ್ವಯಿಸಬಹುದೆಂದು ನಂಬಿದ್ದೇನೆ ಮತ್ತು ಈ ಬಗೆಗಿನ ಸೋದಾಹರಣ ಚರ್ಚೆಯನ್ನು "ಭಾಗವಂತಿಕೆ ಪದಗಳು" ಪದಗಳ ಭಾಗದ ಪೀಠಿಕೆಯಲ್ಲಿ ಮುಂದುವರೆಸಿದ್ದೇನೆ. ಈ ರೀತಿಯ ಪಲ್ಲಟಕ್ರಿಯೆ ಇತರ ಕೆಲವು ಹಾಡುಗಳ ಸಂದರ್ಭದಲ್ಲಿಯೂ ಆಗಿರುವುದರ ಬಗೆಗೆ ನಾನು ಪ್ರಸ್ತಾಪಿಸಿದ್ದೇನೆ (ನೋಡಿ: ಚನ್ನಾದೇವಿ ಅಗ್ರಹಾರ : ಜಾನಪದೀಯ ಅಧ್ಯಯನ : ಟಿ. ಗೋವಿಂದರಾಜು; ೧೯೯೩; ೨೯೩).

ಇಷ್ಟೆಲ್ಲಾ ಪುರಾವೆಗಳಿಂದ ಒಂದು ಅಂಶ ಸ್ಪಷ್ಟವಾದದ್ದೆಂದರೆ ಕೆಲವು ಅಕ್ಷರಸ್ಥರೂ-ಕೆಲವೊಮ್ಮೆ ಮೇಲು ವರ್ಗದವರು – ತಮ್ಮ ಪಂಥ, ತತ್ವದ

ಪ್ರಚಾರಕ್ಕಾಗಿ, ತಮ್ಮ ಧಾರ್ಮಿಕ ಸೇವೆಯ ಅಂಗವಾಗಿ ಕೆಲವೊಂದು ಗೀತೆಗಳನ್ನು/ ಕಾವ್ಯಗಳನ್ನು ರಚಿಸಿ ಅನಕ್ಷರಸ್ಥ ಗ್ರಾಮೀಣ ಸಮುದಾಯದಲ್ಲಿ ಪ್ರಚುರಪಡಿಸಿದ್ದಾರೆ. ಆ ಮೂಲಕ ಲಿಖಿತ ಮೂಲದ ಆ ಪಠ್ಯಗಳು ಅನಕ್ಷರಸ್ಥರ ಮೌಖಿಕ ಪಠ್ಯವಾಗಿ ಉಳಿದಿವೆ. ಹೀಗೆ ಉಳಿದಾಗ, ವಾರ್ಷಿಕ ಹಬ್ಬ-ಹರಿದಿನಗಳಲ್ಲಿ ಮತ್ತೆ ಬಳಕೆಗೊಂಡಾಗ ಸಹಜವಾಗಿಯೇ ಹಲವು ಸ್ಖಾಲಿತ್ಯಗಳಿಗೆ, ರೂಪಾಂತರಗಳಿಗೆ ಪಕ್ಕಾಗಿ, ಎಷ್ಟೋ ಬಾರಿ ಮೂಲವನ್ನು ಮರೆಸಿವೆ. ಅಲ್ಲಲ್ಲಿ ಉಳಿದಿರುವ ಗ್ರಾಂಥಿಕ ಶಬ್ದ ವಿಶೇಷಗಳಿಂದ, ಬಂಧ ವಿಶೇಷದಿಂದ ಅಥವಾ ಅಪರೂಪಕ್ಕೆ ಸಿಗುವ ಮೂಲ ಲಿಖಿತ ಪಠ್ಯದ ಹೋಲಿಕೆಯಿಂದ ಇಂಥಾ ರಚನೆಗಳ ಮೂಲವೂ, ಕೃತಿ ಕರ್ತೃವಿನ ಪರಿಚಯವೂ ತಕ್ಕಮಟ್ಟಿಗೆ ಓದುಗರಿಗೆ ಆಗುತ್ತದೆ. ಆದ್ದರಿಂದ, ಜನಪದ ಸಾಹಿತ್ಯದಲ್ಲಿ ಗುಪ್ತವಾಗಿ, ಪಳೆಯುಳಿಕೆಯಾಗಿರುವ ಗ್ರಾಂಥಿಕ ಪಠ್ಯದ ಪ್ರಭಾವ, ಅಕ್ಷರಸ್ಥ ಕವಿಗಳ ಕೈವಾಡವನ್ನು ನಾವು ಇನ್ನಾದರೂ ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗಿದೆ.

ಹೀಗೆಂದಾಕ್ಷಣ ಅದು ಅಪ್ಪಟ ಜನಪದ ಪ್ರತಿಭೆಯನ್ನು, ಅದರ ಸೃಷ್ಟಿ ಚೈತನ್ಯವನ್ನು ಮಂಕು ಮಾಡಿ, ಕಡೆಗಣಿಸಿ ನೋಡಿದಂತೆ ಎಂಬ ಭಾವನೆ ಬರುವುದು ಬೇಡ. ಅಕ್ಷರಸ್ಥರು ತಮ್ಮ ಕೃತಿಯನ್ನು ವರ್ಗಾಯಿಸುವ ಅಥವಾ ಗ್ರಾಮೀಣರು ಅವರಿಂದ ಹೊಸತನ್ನು ಆಕಸ್ಮಿಕವಾಗಿಯೋ, ಅನಿವಾರ್ಯ ವಾಗಿಯೋ ಸ್ವೀಕರಿಸುವ ಮುನ್ನವೂ ಅನಕ್ಷರಸ್ಥರಲ್ಲಿ ತಮ್ಮದೇ ಆದ ಹಾಡು, ಕತೆಗಳು ತಮ್ಮ ಮೂಲದಿಂದಲೇ ಸೃಷ್ಟಿಯಾಗಿ, ಪ್ರಚುರದಲ್ಲಿದ್ದವು. ಅವರಿಗೆ ಸ್ವತಃ ಅಂಥಾ ಸೃಷ್ಟಿಯ ಸಾಮರ್ಥ್ಯವಿದ್ದಿತು. ಲಿಖಿತ ಮೂಲದಿಂದ ಬಂದದ್ದಕ್ಕಿಂತ ಅವರ ಸ್ವಂತ ಸಾಹಿತ್ಯ ಹೆಚ್ಚಿನ ಪ್ರಮಾಣದಲ್ಲಿಯೇ ಇದ್ದಿತು. ಅದು ವೈವಿಧ್ಯವೂ, ಪ್ರೌಢವೂ, ಅನನ್ಯವೂ – ಹೊರಗಿನವರು ಸೃಷ್ಟಿಸಿ ಕೊಡ ಲಾರದ್ದೂ ಆಗಿದ್ದಿತು. ಸೋಲಿಗರು, ಕಿನ್ನರಿ ಜೋಗಿಗಳು, ಆಸಾದಿಗಳಂತಹ ಬುಡಕಟ್ಟಿನವರು, ಅಲೆಮಾರಿಗಳು, ನೆಲ ಮೂಲದವರು, ಶೋಷಿತರಿಗೆ, ಎಲ್ಲ ಸಮುದಾಯದ ಗರತಿಯರಿಗೆ, ಅವರಲ್ಲಿನ ಹಚ್ಚೆ ಹಾಡು, ಕಳೆಕೀಳುವ, ರಾಗಿ ಬೀಸುವ ಹಾಡು, ಸೋಬಾನೆ ಹಾಡುಗಳನ್ನು ಬೇರಾರು ಬಂದು ಹೇಳಿಕೊಡಲು, ಬರೆದು ಕೊಡಲು ಸಾಧ್ಯ.

ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಮೂಲದ್ದೂ ಇದೆ ; ಇಂಗ್ಲಿಷ್ ಮೂಲದ್ದೂ ಇದೆ. ಆದರೆ, ಅದೆಲ್ಲಾ ಕನ್ನಡದ್ದೇ ಆಗಿದೆ. ಹಾಗೆಯೇ, ನಮ್ಮ ಜನಪದರಲ್ಲಿ ಅಕ್ಷರಸ್ಥರದ್ದೂ, ಅನಕ್ಷರಸ್ಥರದ್ದೂ ಕೂಡಿಯೇ ಸಮೃದ್ಧ ಜನಪದ ಸಾಹಿತ್ಯವಾಗಿದೆ.

ನಮ್ಮಲ್ಲಿ ಒಂದೊಂದು ಸಮುದಾಯ, ಪಂಥ ಹಾಗೂ ಪ್ರದೇಶಕ್ಕನು ಗುಣವಾಗಿ ತಮ್ಮದೇ ವಿಶಿಷ್ಟವೆನ್ನಬಹುದಾದ ಕಲೆ, ಸಾಹಿತ್ಯಾದಿಗಳು ಹುಟ್ಟಿಕೊಂಡಿರುವುದರ ಬಗೆಗೆ ಈ ಬರಹದ ಆದಿಯಲ್ಲೇ ಪ್ರಸ್ತಾಪಿಸಲಾಗಿದೆಯಷ್ಟೆ ಅವನ್ನು ಪರಸ್ಪರ ಜೊತೆ ಇರಿಸಿ ನೋಡ ಹೋದಾಗ, ಕೆಲವು ಸಂಗತಿಗಳು ಎರಡು ವಿಭಿನ್ನ ನೆಲೆಯಲ್ಲಿಯೂ ಏಕವಾಗಿ ಕಾಣಬರುವುದು ಸೋಜಿಗವೆನಿಸುತ್ತದೆ. ಉದಾ.ಗೆ – ಭಾಗವಂತಿಕೆ ಮೇಳದಲ್ಲಿನ ಕುಣಿತ ಶೈಲಿ ಹಾಗೂ ಕೋಡಂಗಿಯ ವೇಷದವನಿಗೂ ದೂರದ ಉತ್ತರ ಕನ್ನಡದ ಗೊಂಡರ ಮೇಳದಲ್ಲಿನ ಕೋಡಂಗಿ ವೇಷ–ಕುಣಿತಕ್ಕೆ ಬಹಳ ಹತ್ತಿರದ ಹೋಲಿಕೆಗಳಿವೆ. ಇದು ಹೇಗಾಗಿರಬಹುದು ಮತ್ತು ಏಕೆ ಆಗಿರಬಹುದು ?

ಇಂಥಾ ಸಂಗತಿಗಳ ಮೂಲ–ಚೂಲಗಳ ಬಗೆಗೆ ಚರ್ಚಿಸಲು ಸಾಕಷ್ಟು ವಿಸ್ತೃತವಾದ ಕ್ಷೇತ್ರಕಾರ್ಯ, ದಾಖಲೀಕರಣ ಆಗಬೇಕು. ವಿಷಾದದ ಸಂಗತಿ ಎಂದರೆ, ತೀರಾ ಮೊದಲಿಗೆ ಪ್ರಕಟವಾದ ಕೆಲವು ಸಂಗ್ರಹಗಳಲ್ಲಿ ಪ್ರಮುಖ ಮಾಹಿತಿಗಳ ಕೊರತೆಯೇ ಇದ್ದರೆ ಆನಂತರ ಸಂಗ್ರಹ ಕಾರ್ಯಗಳೇ ಆಗುತ್ತಿಲ್ಲ. ಇಂದು ಜಾನಪದ ಓದಿದ ಪದವೀಧರರ ಸಂಖ್ಯೆ ಅಸಂಖ್ಯವಾಗಿದ್ದರೂ ಕ್ಷೇತ್ರಕಾರ್ಯಕ್ಕೆ ಹೋಗಿ ಶ್ರಮಿಸುವವರ ಸಂಖ್ಯೆ ತೀರಾ ನಗಣ್ಯವಾಗಿದೆ. ಶ್ರಮಸಾಧ್ಯವಾದ ಅಂಥಾ ಕಾರ್ಯದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳುವವರಿಲ್ಲದಿದ್ದರೆ, ಶೋಧನೆ, ಅಧ್ಯಯನಗಳೇ ಬೆಳೆಯುವುದಿಲ್ಲ; ಅರಿವಿನ ವಿಸ್ತರಣೆ ಆಗುವುದೂ ಕಷ್ಟ.

ಅಧ್ಯಯನ, ವಿಶ್ಲೇಷಣೆಗಾಗಿ ಒಂದಿಷ್ಟು ಕುತೂಹಲ ಇಟ್ಟುಕೊಂಡು ತೊಡಗಿಸಿಕೊಂಡರೂ ನಮಗೆ ಬೆರಗು ಮೂಡಿಸುವ ಅದೆಷ್ಟೋ ಸಂಗತಿಗಳು ಎದಿರು ನಿಲ್ಲುತ್ತವೆ. ಉದಾ.ಗೆ–ಅನಕ್ಷರಸ್ಥರಲ್ಲಿ ವ್ಯಾಪಕವಾಗಿರುವ ಜನಪದ ಕಾವ್ಯ ಪುರಾಣಾದಿಗಳಲ್ಲಿನ ಕಾವ್ಯ ನಿರ್ಮಿತಿ ಶಕ್ತಿಗೆ ಸಂಬಂಧಿಸಿದ ಪ್ರೌಢಿಮೆ ನಮ್ಮಲ್ಲಿ ಬೆರಗು ಮೂಡಿಸುವ ಹಾಗೆಯೇ, ಒಂದೊಂದು ಕಾವ್ಯ ಸಂಪ್ರದಾಯದವರೂ ತಮ್ಮದೇ ಆದ ಕಾವ್ಯದ ಹಾಗೆ ವಾದ್ಯ ವಿಶೇಷಗಳನ್ನೂ ಸೃಷ್ಟಿಕೊಂಡಿರುವ ಪ್ರಯೋಗಶೀಲತೆ ಮತ್ತೊಂದು ಬೆರಗಾಗಿ ಎದಿರುನಿಲ್ಲುತ್ತದೆ. ಎಲ್ಲಮ್ಮನ ಗಾಯಕರಿಗೆ ಚೌಡಿಕೆ, ಜೋಗಿಗಳಿಗೆ ಕಿನ್ನರಿ, ಕುರುಬರಿಗೆ ಡೊಳ್ಳು, ಮಲೆಕುಡಿಯರಿಗೆ ದುಡಿ..... ಹೀಗೆ, ಎಷ್ಟೊಂದು ವಿಭಿನ್ನ, ವಿಶಿಷ್ಟ ವಾದ್ಯಗಳು ! ಯಾವುದಾವುದೋ ಮೂಲ ವಸ್ತುವನ್ನು ಬಗ್ಗಿಸಿ, ಹದ ಮಾಡಿ, ಬಳಸಿ, ಬೇಕಾದ ಆಕಾರ ಕೊಟ್ಟು ಹೊಸತೊಂದನ್ನು ಸೃಷ್ಟಿಸಿಕೊಳ್ಳಬಹುದೆಂಬ ಕಲ್ಪನೆ

ಆ ಗ್ರಾಮ್ಯ ಮನಸ್ಸುಗಳಿಗೆ ಹೇಗೆ ಹೊಳೆದಿರಬಹುದು. ಅಷ್ಟಲ್ಲದೆ, ಅವುಗಳಿಂದ ವಿಶಿಷ್ಟವಾದ ನಾದ, ತಾಳ, ಗತ್ತುಗಳನ್ನು ಹೊರಡಿಸಬಹುದು, ಪಕ್ಕ ವಾದ್ಯಗಳಿಂದ ಸೊಗಸು ಹೆಚ್ಚಿಸಬಹುದೆಂಬ ಸಂಗೀತ ಜ್ಞಾನ ಅವರಲ್ಲಿ ಹೇಗೆ ಕರಗತವಾಗಿರಬಹುದು ! ಈ ವಾದ್ಯವಿಜ್ಞಾನ, ಸಂಗೀತ 'ಶಾಸ್ತ್ರ' ಇದ್ದಕ್ಕಿದ್ದಂತೆ ಒಂದು ಕವಿತೆಯ ರಚನೆಯ ಹಾಗೆ ಸೃಷ್ಟಿಯಾಗಿರಲು ಸಾಧ್ಯವೇ ? ಅದೊಂದು ಹದಕ್ಕೆ ಬಂದು, ಸಂಪ್ರದಾಯವೆನ್ನಿಸಿಕೊಳ್ಳಲು ಅದೆಷ್ಟು ಕಾಲ ತೆಗೆದುಕೊಂಡಿರಬಹುದು ! ಅದೆಷ್ಟು ಮನಸ್ಸುಗಳು, ಕೈಗಳು ಅವಕ್ಕೆ ರೂಪಕೊಟ್ಟಿರಬಹುದು....!! ಹಾಡ್ಗುಣಿತಗಳ ಈ ಸಂಪುಟ ಸಿದ್ಧಪಡಿಸುವ ಹೊತ್ತಿನಲ್ಲಿ ಈ ಎಲ್ಲಾ ಬೆರಗುಗಳನ್ನು ನಾನು ಅನುಭವಿಸಿದ್ದೇನೆ; ಕೆಲವೊಂದು ಚಿಂತನೆಗಳನ್ನು ನಡೆಸಲು, ಅವನ್ನು ಅಲ್ಲಲ್ಲಿ ಅಧ್ಯಯನಕಾರರ ಗಮನಕ್ಕೆ ತರಲು ಪ್ರಯತ್ನಿಸಿದ್ದೇನೆ.

ಈ ಸಂಪುಟದಲ್ಲಿನ ಮಾಹಿತಿಗೆ ಸಂಬಂಧಿಸಿದಂತೆ ಇನ್ನೂ ಒಂದೆರಡು ಸಂಗತಿಗಳನ್ನು ಅವಶ್ಯ ಓದುಗರ ಗಮನಕ್ಕೆ ತರಬೇಕಿದೆ. ಪ್ರಧಾನ ಸಂಪಾದಕರು ಮೊದಲು ನನಗೆ ವಹಿಸಿದ್ದು – "ದಕ್ಷಿಣ ಕರ್ನಾಟಕದ ಕುಣಿತದ ಹಾಡು"ಗಳನ್ನು ಸಂಗ್ರಹಿಸಿಕೊಡಲು. ಆ ಹಿನ್ನೆಲೆಯಲ್ಲಿ ಸಂಗ್ರಹ ಕಾರ್ಯಕ್ಕೆ ತೊಡಗಿದ ಮೇಲೆ ನನಗೆ ಆ ಕ್ರಮ ಸರಿಯಾದುದೆನ್ನಿಸಲಿಲ್ಲ. 'ಕರಪಾಲ'ದಂತಹ ಪ್ರಕಾರಗಳಲ್ಲಿನ 'ಹಾಡು'ಗಳು ಮೂಲತಃ ದೀರ್ಘ ಕಥಾನಕದ–ಕಾವ್ಯದ ಭಾಗಗಳು. ಅವನ್ನು ತುಣುಕಾಗಿ ಪರಿಗಣಿಸದೆ, (ಅದರಲ್ಲಿ ವಚನ–ಸಂಭಾಷಣಾ ಭಾಗವನ್ನು ಸೇರಿಸಿ) ಇಡೀ ಕಾವ್ಯವನ್ನೇ ಪ್ರತ್ಯೇಕವಾಗಿ ಸಂಪುಟವಾಗಿಸಬೇಕು. ಆದ್ದರಿಂದ, ಅಂಥಾ ಪ್ರಕಾರವನ್ನು ಈ ಸಂಗ್ರಹದಿಂದ ತೆಗೆದು ಹಾಕಿದ್ದಲ್ಲದೆ, ಅಖಿಲ ಕರ್ನಾಟಕ ವ್ಯಾಪ್ತಿಗೆ ವಿಸ್ತರಿಸಿಕೊಂಡು, ಹಾಡು–ಕುಣಿತ ಎರಡೂ ಇರುವ ಕಲಾ ಪ್ರಕಾರಗಳನ್ನು ಇಲ್ಲಿ (ಕೆಲವನ್ನು ಹೊಸದಾಗಿ) ಶೋಧಿಸಿ ಸಂಗ್ರಹಿಸಿಕೊಟ್ಟಿದ್ದೇನೆ. ಈ ಹೆಚ್ಚಿನ ಶ್ರಮ ನಾನೇ ಎಳೆದುಕೊಂಡದ್ದಾದರೂ ಒಂದು ಒಳ್ಳೆಯ ಸಂಪುಟ ಮಾಡಲು ಸಾಧ್ಯವಾಗಿದ್ದಕ್ಕೆ ಸಂತೋಷವಾಗಿದೆ. ಇನ್ನೂ ಇಲ್ಲಿ ಸೇರಿಸಬಹುದಾದ ಕೆಲವು ಕಲೆಗಳು ಇದ್ದರೂ ಮಾಹಿತಿ ಕೊರತೆಯಿಂದ ಅನಿವಾರ್ಯವಾಗಿ ಅವನ್ನು ಕೈಬಿಡಬೇಕಾಗಿದೆ. ಈಗ ಇರುವಂತೆ, ಹಾಡು–ಕುಣಿತಗಳಿಗೆ ಸಂಬಂಧಿಸಿ ಮುಂದೆ ಯಾರಾದರೂ ಸಂಶೋಧನೆ, ಪಿಎಚ್.ಡಿ. ಮಹಾಪ್ರಬಂಧ ರಚನೆ ಮಾಡಬಯಸುವವರಿಗೆ ಅಷ್ಟರ ಮಟ್ಟಿಗೆ ಶ್ರಮ ಕಡಿಮೆ ಮಾಡಿದ್ದೇನೆ. ಈ ಹಿಂದೆ ಜಾನಪದ ಅಕಾಡೆಮಿಗೆ ಸಂಪಾದಿಸಿಕೊಟ್ಟ 'ಜನಪದ ವೈದ್ಯ'

ಸಂಪುಟದಂತೆಯೇ. ಈ ಕೃತಿಯೂ ಆದಷ್ಟು ಸಮಗ್ರತೆಯನ್ನು ಒಳಗೊಂಡು ಪ್ರಾತಿನಿಧಿಕವೆನಿಸಿದೆ ಎಂದು ಭಾವಿಸಿದ್ದೇನೆ.

ಈಗಾಗಲೇ ವಿವಿಧ ಮೂಲಗಳಲ್ಲಿ ಪ್ರಕಟವಾಗಿರುವುದನ್ನೇ ಆಯ್ದು, ಸಂಕಲಿಸಿ ಕೊಡುವುದಷ್ಟೇ ಈ ಸಂಪುಟದ ಸಿದ್ಧತೆಯ ಸೂಚನೆಯಾಗಿದ್ದಿತು. ಆದರೆ, ನನಗೆ ಅದಷ್ಟೇ ಇಷ್ಟವೂ ಆಗದ, ತೃಪ್ತಿಯೂ ಆಗದ ಕಾರ್ಯ. ಆದ್ದರಿಂದ, ಈ ಕಾರ್ಯವನ್ನು ತಬ್ಬಲಿ ಮಗು ನೋಡಿಕೊಂಡಂತೆ ಅಲ್ಲದೆ, ಸ್ವಂತ ಮಗು ಬೆಳೆಸಿದಂತೆಯೇ ಆರೈಕೆ ಮಾಡಿ ರೂಪಿಸಿದ್ದೇನೆ. ಈ ಹೊತ್ತಿನಲ್ಲಿ ಕೆಲವೊಂದು ಹಾಡು-ಕುಣಿತಗಳ ಮಾಹಿತಿಯನ್ನು ಪ್ರದರ್ಶನ ನೋಡಿ, ಕಲಾವಿದರಿಂದ ನೇರವಾಗಿ ದಾಖಲಿಸಿಕೊಂಡಿದ್ದೇನೆ. ಅವರವರ ಭಾಗದ ಹೆಚ್ಚಿನ ಕಲೆಗಳು-ಮಾಹಿತಿಗಳು ಇದ್ದಲ್ಲಿ ಸಂಗ್ರಹಿಸಿಕೊಡಲು ಕೆಲವರಿಗೆ ಕೇಳಿದ್ದೆನಾದರೂ ಹೆಚ್ಚಿನ ವಿದ್ವಾಂಸರಿಗೆ ಅದೇಕೋ ಅದು ಸಾಧ್ಯವಾಗಿಲ್ಲ. ಆದರೆ, ಗೋಕಾಕದ ಮಹಾಲಿಂಗ ಮಂಗಿ, ಕುಂದಾಪುರದ ವಿದ್ಯಾರಂಗ ಮಿತ್ರ ಮಂಡಲಿಯವರು, ಚನ್ನರಾಯಪಟ್ಟಣದ ತರುಣ ನಟರಾಜ್, ಕಲಾವಿದ ಜಿ.ಕೆ. ರಾಮಣ್ಣ ಅಂತಹ ಕೆಲವು ಮಿತ್ರರು ತಮ್ಮಲ್ಲಿದ್ದ ಮಾಹಿತಿಯನ್ನು ವಿಶ್ವಾಸವಿಟ್ಟು ಕಳುಹಿಸಿಕೊಟ್ಟಿದ್ದಾರೆ. ಮೈಸೂರಿನ ಮಿತ್ರರಾದ ಹಾ.ತಿ. ಕೃಷ್ಣೇಗೌಡ, ಅಂಬಳಿಕೆ ಹಿರಿಯಣ್ಣ, ಮೈಲಹಳ್ಳಿ ರೇವಣ್ಣ ಅವರು ತಮ್ಮಲ್ಲಿದ್ದ ಕೆಲವು ಕೃತಿಗಳನ್ನು ಎರವಲಾಗಿ ನೀಡಿ ಸಹಕರಿಸಿದ್ದಾರೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಿತ್ರರಾದ ಜಗನ್ನಾಥ ಪ್ರಕಾಶ್, ಚಕ್ಕೆರೆ ಶಿವಶಂಕರ್, ಕುರುವ ಬಸವರಾಜು, ವಾಮನ ನಂದಾವರ ಹಾಗೂ ಕುಂದಾಪುರ ಭಾಗದ ಸ್ನೇಹಿತರು ಅವಕಾಶ ಒದಗಿಸಿದ್ದಾರೆ.

ಇವರೆಲ್ಲರ ಜೊತೆಗೆ, ಇಲ್ಲಿನ ಹೆಚ್ಚಿನ ಹಾಡು-ಕುಣಿತ ಮಾಹಿತಿಗಳನ್ನು ವಿವಿಧ ಆಕರ ಗ್ರಂಥಗಳಿಂದ ಸ್ವೀಕರಿಸಿದ್ದೇನೆ. ಹೀಗೆ ತೆಗೆದುಕೊಳ್ಳುವಾಗ, ಆಯಾ ವಿದ್ವಾಂಸರು ದಾಖಲಿಸಿರುವ ವಿವರಗಳನ್ನು ತೀರಾ ಅನಿವಾರ್ಯವಾದಲ್ಲಿ ಸಂಗ್ರಹ ಮಾಡಿದ್ದರ ಹೊರತು ಉಳಿದಂತೆ ಯಥಾವತ್ತಾಗಿಯೇ ಇಲ್ಲಿ ಉಲ್ಲೇಖಿಸಿದ್ದೇನೆ. ಈ. ಮೂಲಕ ಅವರ ಬರಹಕ್ಕೆ, ಅವರಿಗೆ ನ್ಯಾಯ ಒದಗಿಸಿದ್ದೇನೆ.

ಇದು ಕರ್ನಾಟಕ ವ್ಯಾಪ್ತಿಯನ್ನು ಒಳಗೊಂಡದ್ದಾದ್ದರಿಂದ ಬಹುಪಾಲು ಎಲ್ಲಾ ಪ್ರಕಾರಗಳ-ವೈವಿಧ್ಯಗಳ ಮಾದರಿಗಳೂ ಇಲ್ಲಿ ಅಡಕಗೊಂಡಿವೆ.

ಅಧ್ಯಯನದ ದೃಷ್ಟಿಯಿಂದ ಈ ಎಲ್ಲಾ ಹಾಡು-ಕುಣಿತ ಪ್ರಕಾರಗಳನ್ನು ವಸ್ತು ಅಥವಾ ಸಮುದಾಯ ಆಧರಿಸಿ ವರ್ಗೀಕರಿಸಿಕೊಡಬಹುದಾಗಿದ್ದರೂ, ಸೌಲಭ್ಯದ ದೃಷ್ಟಿಯಿಂದ, ಅನವಶ್ಯಕವಾಗಿ ಏರ್ಪಡಬಹುದಾದ ಗೊಂದಲವನ್ನು ನಿವಾರಿಸುವ ದೃಷ್ಟಿಯಿಂದ ಪ್ರದೇಶವಾರು ಹಿನ್ನೆಲೆಯಲ್ಲಿಯೇ ಜೋಡಿಸಿಕೊಟ್ಟಿದ್ದೇನೆ. ಬೇಕಾದ ಅಥವಾ ಬಿಟ್ಟು ಹೋದ ಕಲೆಯೊಂದನ್ನು ಗುರುತಿಸಿಕೊಳ್ಳಲು ಅಧ್ಯಯನಕಾರರಿಗೆ ಇಲ್ಲಿ ಸುಲಭವಾಗುತ್ತದೆ. (ಹಾಗೆಯೇ, 'ಕಲೆ'ಯ ನಿರ್ವಚನ ಆಗಿ, ಈ ಅಡಿಯಲ್ಲಿ ಸೇರಬೇಕಾದ ರೂಪಗಳ ನಿಷ್ಕರ್ಷೆ ಇನ್ನೂ ಆಗಬೇಕಿದ್ದರೂ, ಸದ್ಯಕ್ಕೆ ಈ ಸಂಪುಟದಲ್ಲಿ 'ದುರಗ ಮುರಗಿ'ಯಂತಹ ರೂಪವನ್ನೂ ಸೇರಿಸಿದೆ.

ಕಾಲುಶತಮಾನದ ಹಿಂದೆಯೇ ನಾನು ನೋಡಿದ್ದ ಕೆಲವು ಕುಣಿತ-ಹಾಡುಗಳ ಬಗೆಗೆ ಆಗಾಗ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡಿದ್ದೆ. ಅವನ್ನು ಲೇಖನ ರೂಪದಲ್ಲಿ ಪ್ರಕಟಿಸುವ ಪುರುಸೊತ್ತಾಗಲೀ, ಒತ್ತಡವಾಗಲೀ ಬಂದಿರಲಿಲ್ಲ. ಈ ಸಂಪುಟ ಸಿದ್ಧತೆಯ ನೆವದಲ್ಲಿ ಆ ಟಿಪ್ಪಣಿಗಳಲ್ಲಿನ ಆಲೋಚನೆಗಳನ್ನು ಇನ್ನಷ್ಟು ಬೆಳೆಸಿ, ಪರಿಷ್ಕರಿಸಿ ಇಲ್ಲಿ ಬರೆದು, ವಿದ್ವಾಂಸರ ಮುಂದಿಡಲು ಸಾಧ್ಯವಾಗಿದೆ.

ಹಾಗೆಯೇ, ದಶಕಗಳ ಹಿಂದೆ ಪ್ರಕಟವಾದ ಕೆಲವೊಂದು ಗ್ರಂಥಗಳು ತದನಂತರದಲ್ಲಿ ಮತ್ತೆ ಬೆಳಕು ಕಾಣುವ ಭಾಗ್ಯ ಇಲ್ಲದೆ ಕಣ್ಮರೆ-ಕಿವಿ ಮರೆಯಾಗುವ ಸ್ಥಿತಿಗೆ ಬಂದುಬಿಟ್ಟಿವೆ. ಕೆಲವರ ಕೃತಿಗಳು ಪರಾಮರ್ಶೆಗೆ ಸಿಗುವುದೂ ದುಸ್ತರವಾಗಿದೆ. ನಮ್ಮಲ್ಲಿ ಎಲ್ಲ ಗ್ರಂಥಗಳೂ ಒಂದೆಡೆ ಸಿಗುವ ಸೌಲಭ್ಯ ಇಲ್ಲದ್ದು ಸಂಶೋಧಕರಿಗೆ ದೊಡ್ಡ ಹೊಡೆತವಾಗಿದೆ. ಮರುಮುದ್ರಣಗಳು ಎಲ್ಲರಿಗೂ ಸುಲಭವಲ್ಲದ್ದೂ ಇನ್ನೊಂದು ಸಮಸ್ಯೆಯಾಗಿದೆ. ಹೀಗಾಗಿ, ಅಂಥಾ ಕೃತಿಗಳು, ಕೃತಿ ಭಾಗಗಳು ಈ ಸಂಪುಟದ ಮೂಲಕವಾಗಿಯಾದರೂ ಮರುಪ್ರಕಟವಾಗುತ್ತಿರುವುದು ಅಧ್ಯಯನಕಾರರ ದೃಷ್ಟಿಯಿಂದ ಸ್ವಾಗತಾರ್ಹವಾಗುತ್ತದೆ ಎಂದು ಭಾವಿಸಿದ್ದೇನೆ. ಈ ಕಾರ್ಯವನ್ನು ಮೂಲ ಗ್ರಂಥ ಕರ್ತೃಗಳೂ ಒಪ್ಪುವರೆಂದು ನಂಬಿದ್ದೇನೆ.

ಆ ವಿಶ್ವಾಸಕ್ಕಾಗಿ ಆ ಎಲ್ಲಾ ಮೂಲಗ್ರಂಥ ಕರ್ತೃಗಳಿಗೂ, ಹಾಡು-ಕುಣಿತಗಳ ತೋರಿಸಿ, ವಿವರಿಸಿಕೊಟ್ಟ ಕಲಾವಿದ ಸಮೂಹಕ್ಕೂ ನಾನು ಋಣಿಯಾಗಿದ್ದೇನೆ. ಈ ಮೊದಲೇ ಉಲ್ಲೇಖಿಸಿದಂತೆ, ನನಗೆ ಸಂಗ್ರಹಕಾರ್ಯದಲ್ಲಿ

ನೆರವಾದ ಮಿತ್ರರಿಗೂ, ತಮ್ಮಲ್ಲಿನ ಮಾಹಿತಿಗಳನ್ನು ಕಳುಹಿಸಿಕೊಟ್ಟ ವಿಶ್ವಾಸಿಗಳಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಅನಿರೀಕ್ಷಿತವಾಗಿ ಈ ಕಾರ್ಯಭಾರವನ್ನು ನನಗೆ ವಹಿಸಿಕೊಟ್ಟವರು ಈ ಯೋಜನೆಯ ಪ್ರಧಾನ ಸಂಪಾದಕ ಹಿ.ಶಿ. ರಾಮಚಂದ್ರೇಗೌಡ ಅವರು. ಬಹುಪಾಲು ಕೆಲಸ ಮುಗಿಯುತ್ತಿದ್ದ ಹೊತ್ತಿನಲ್ಲೇ ನನ್ನ ವರ್ಗಾವಣೆ, ದೊಡ್ಡ ವಿದ್ಯಾಸಂಸ್ಥೆಯೊಂದರ ನನ್ನಂಥವರಿಗೆ ಒಗ್ಗದ ಯಜಮಾನಿಕೆ ಪಟ್ಟದ ಹೊಣೆಗಳು ಇಡೀ ಮೈಮೇಲೆ ಬಿದ್ದು, ಆ ಕರ್ತವ್ಯಕ್ಕೆ ನ್ಯಾಯ ಒದಗಿಸುವ ಪ್ರಜ್ಞೆಯಿಂದಾಗಿ, ಈ ಕೆಲಸ ಅಲ್ಲೇ ಸ್ಥಗಿತವಾಗಿ ವಿಳಂಬವಾಗುತ್ತಿತ್ತು. ಇಂಥಾ ಹೊತ್ತಲ್ಲಿ ಈಚೆಗೆ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಹಿರಿಯರಾದ ಗೊ.ರು. ಚನ್ನಬಸಪ್ಪ ಅವರು ಈ ಸಂಪುಟವನ್ನು ಮುಗಿಸಿಕೊಡಲೇಬೇಕೆಂದು ಪ್ರೀತಿಯ ಧಮಕಿ ಹಾಕುತ್ತಲೇ ಬಂದರು. ಇದೆಲ್ಲದರ ಫಲವಾಗಿ, ಈ ದೀಪಾವಳಿ ರಜೆಯ ನೆವದಲ್ಲಿ ಬಲವಂತವಾಗಿ, ನನಗೆ ನಾನೇ ನಿರ್ಬಂಧ ಹಾಕಿಕೊಂಡು, ಮನೆಯಲ್ಲೇ ಕುಂತು ಒಂದು ರಾತ್ರಿ–ಒಂದು ಹಗಲಲ್ಲಿ ಈ ಪ್ರಸ್ತಾವನೆ ಮುಗಿಸಿ "ಇಲ್ಲಿಗೆ ಹರಹರ.... ಇಲ್ಲಿಗೆ ಶಿವಶಿವ..." ಹಾಡುತ್ತಿದ್ದೇನೆ.

ಇದಕ್ಕೆ ಕಾರಣರಾದ ಎಲ್ಲರಿಗೂ, ಮನೆಮಂದಿಗೂ ಸೇರಿಸಿ ನನ್ನ ಧನ್ಯವಾದಗಳು ಸಂದಾಯವಾಗಲಿ.

೧೬–೧೦–೨೦೦೯
ಬೆಂಗಳೂರು

**ಟಿ. ಗೋವಿಂದರಾಜು**
೭೬೫, ೪ನೇ ಮೇನ್
ಕಿರ್ಲೋಸ್ಕರ್ ಬಡಾವಣೆ
ಹೆಸರುಘಟ್ಟ ರಸ್ತೆ
ಬೆಂಗಳೂರು–೫೬೦೦೭೩

# ಪರಿವಿಡಿ


| | | ಪುಟ ಸಂಖ್ಯೆ |
|---|---|---|
| ೧. | ದಕ್ಷಿಣ ಕರ್ನಾಟಕದ ಹಾಡ್ಗುಣಿತಗಳು | ೧ |
| ಅ. | ಭಾಗವಂತಿಕೆ ಪದಗಳು | ೨ |
| ಆ. | ರಂಗದ ಪದಗಳು | ೧೫೦ |
| ಇ. | ಸೋಮನ ಕುಣಿತದ ಪದಗಳು | ೧೬೮ |
| ಈ. | ಕಂಸಾಳೆ ಕಾವ್ಯ–ಕುಣಿತ | ೧೭೬ |
| ಉ. | ಗುಡ್ಡರ ಮೇಳ | ೧೮೧ |
| ಊ. | ವೀರಮಕ್ಕಳ ಹಾಡ್ಗುಣಿತ | ೧೮೪ |
| ಎ. | ವೀರಮಕ್ಕಳ ಕುಣಿತ : ಕಲೆ ಮತ್ತು ಕಲಾವಿದರ ಹಿನ್ನೆಲೆ | ೧೮೭ |
| ಏ. | ವೀರಭದ್ರನ ಒಡಮು ಕುಣಿತ | ೨೧೧ |
| ಐ. | ಸಿಂದ್ ಮಾದಿಗರ ಹಾಡ್ಗುಣಿತಗಳು | ೨೧೪ |
| ಒ. | ಸಂಜೀತ ಪದ | ೨೬೨ |
| ಓ. | ಮಾಸ್ತೀಕರ ತಂಗಡಿದ್ಯಾವರ ಹಾಡ್ಗುಣಿತ | ೨೭೦ |
| ಔ. | ಪಂಢರಿ ಭಜನೆ ಹಾಡುಗಳು | ೨೭೪ |
| ಅಂ. | ಸೋಲಿಗರ ಹಾಡ್ಗುಣಿತಗಳು | ೨೭೯ |
| ಅಃ. | ಕಾಡುಕುರುಬರ ಹಾಡ್ಗುಣಿತಗಳು | ೨೯೧ |
| ಕ. | ಮಜ್ಜುಣ ಕುಣಿತ ಮತ್ತು ಹಾಡು | ೨೯೩ |

೨. ಉತ್ತರ ಕರ್ನಾಟಕದ ಕುಣಿತದ ಹಾಡುಗಳು ೩೧೭
ಅ. ದಟ್ಟಿ ಕುಣಿತ ೩೧೮
ಆ. ದುರಗಮುರಗಿಯರ ಹಾಡ್ಗುಣಿತಗಳು ೩೨೫
ಇ. ದುರಗ ಮುರಗಿ ಹಾಡುಗಳು ೩೩೧
ಈ. ಕರ್ಬಲ ಹಾಡ್ಗುಣಿತ ೩೩೪
ಉ. ಲಂಬಾಣಿಗಳ ಹಾಡ್ಗುಣಿತಗಳು ೩೫೫
ಊ. ಚಾಮರಾಜನಗರ ಜಿಲ್ಲಾ ಪರಿಸರದ
ಲಂಬಾಣಿ ನೃತ್ಯ-ಗೀತೆಗಳು ೩೭೨
ಋ. ಇನ್ನಷ್ಟು ಗೀತೆಗಳು ೩೭೫
ಎ. ಕೋಲಾಟದ ಹಾಡ್ಗುಣಿತಗಳು ೩೭೮

* * *

# ದಕ್ಷಿಣ ಕರ್ನಾಟಕದ ಹಾಡ್ಗುಣಿತಗಳು

ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು, ಕೋಲಾರ, ಹಾಸನ – ಈ ಪ್ರದೇಶದಲ್ಲಿನ ಕುಣಿತ ಕಲೆಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಈ ಭಾಗದ ಎಲ್ಲಾ ಜಿಲ್ಲೆಗಳಲ್ಲಿನ ಕಲೆಗಳನ್ನು ಪಟ್ಟಿ ಮಾಡಿದಾಗ ಮೇಲ್ನೋಟಕ್ಕೆ ಗಮನಕ್ಕೆ ಬಂದ ಅಂಶವೆಂದರೆ ಬೆಂಗಳೂರು ಭಾಗದಲ್ಲಿ ಅತಿ ಹೆಚ್ಚು ಕಲೆಗಳಿವೆ, ತದನಂತರ ಮೈಸೂರು, ಮಂಡ್ಯ ಜಿಲ್ಲೆಗಳು ಬರುತ್ತವೆ. ಬೆಂಗಳೂರು ಜಿಲ್ಲೆಗಳಲ್ಲಿ ಸ್ಥಳೀಯ ಮೂಲದ ಕಲೆಗಳಲ್ಲದೆ, ಹೊರಗಿನಿಂದ ಬಂದು ನೆಲೆನಿಂತ ಕಲಾವಿದರ ಸಂಖ್ಯೆ ಹೆಚ್ಚಾಗಿರುವುದು ಇದಕ್ಕೆ ಕಾರಣವೆನ್ನಬಹುದು. ರಾಜಕೀಯ, ಆರ್ಥಿಕ ಕೇಂದ್ರಗಳು ಹೀಗೆ ಕಲಾವಿದರನ್ನು ಆಕರ್ಷಿಸುತ್ತವೆಂದು ಭಾವಿಸಬಹುದು. ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನಲ್ಲಿ ಹೆಚ್ಚು ಕಲೆಗಳು ಕಾಣಬರುವುದೂ ಇದೇ ಕಾರಣಕ್ಕೆನ್ನಬಹುದು. ಮೇಲುಕೋಟೆಯಿಂದಾಗಿ ಧಾರ್ಮಿಕ ಮಹತ್ವ ಪಡೆದ ಮಂಡ್ಯ ಸಹ ಸಂಖ್ಯಾ ದೃಷ್ಟಿಯಿಂದ ಗಮನಾರ್ಹವಾಗಿದೆ. ಆದರೆ, ಹಾಸನ–ಬೇಲೂರಿನಂತಹ ವಿಶ್ವಪ್ರಸಿದ್ಧ ಶಿಲ್ಪಕಲಾ ಕೇಂದ್ರಗಳನ್ನು ಹೊಂದಿದ ಹಾಸನ ಜಿಲ್ಲೆಯಲ್ಲಿ ಸಂಖ್ಯೆ ತೀರಾ ಕಡಿಮೆ ಇರುವುದು ಅಚ್ಚರಿ ಎನಿಸುತ್ತದೆ. ಸುಪ್ರಸಿದ್ಧ ಕೋಟೆ–ಕೊತ್ತಲ, ಪಾಳೆಯಪಟ್ಟಿನ ಚಿತ್ರದುರ್ಗ ಸಹ ಇದರಿಂದ ಹೊರತಲ್ಲ !

ಈ ಜಿಲ್ಲೆಗಳಿಂದ ಬಹುಮಟ್ಟಿಗೆ ತಲಾ ಒಂದೊಂದು ಹಾಡ್ಗುಣಿತ ಕಲೆಯ ಮಾದರಿಯನ್ನು ಈ ಮುಂದೆ ಸೇರಿಸಲು ಪ್ರಯತ್ನಿಸಲಾಗಿದೆ. ಈ ಸಂಪುಟವು ಮೂಲತಃ ಈಗಾಗಲೇ ಪ್ರಕಟವಾಗಿರುವ ಸಂಗ್ರಹಗಳಿಂದ ಆಯ್ದ ಗೀತೆಗಳನ್ನು ಸಂಕಲಿಸುವ ಉದ್ದೇಶದ್ದಾದ್ದರಿಂದ ಆ ರೀತಿ ಲಭ್ಯವಾದುವನ್ನು ಇಲ್ಲಿ ಸೇರಿಸಲಾಗಿದೆ. ಆದರೆ, ಕೆಲವು ಹಾಡ್ಗುಣಿತ ಕಲೆಗಳ ಬಗೆಗೆ ಹೆಚ್ಚು ಗೀತೆಗಳೇ ಪ್ರಕಟವಾಗಿಲ್ಲ. ಹೀಗಾಗಿ, ಇಲ್ಲಿ ಕೆಲವನ್ನೂ ಸೇರಿಸಲಾಗಿಲ್ಲ. ಸೋಮನ ಕುಣಿತ, ವೀರಭದ್ರನ ಕುಣಿತದಂತಹ ಬಹು ಜನಪ್ರಿಯ, ವ್ಯಾಪಕ ಬಳಕೆಯ ಕಲೆಗಳ ಕುಣಿತ ಶೈಲಿ–ಕ್ರಮದ ವಿವರ ಹಾಗೂ ಗೀತೆಗಳು ಆಗಬೇಕಾದಷ್ಟು ಪ್ರಕಟವೇ ಆಗಿಲ್ಲ. ಹಾಗಾಗಿ, ದೊರೆತಷ್ಟನ್ನೇ ಇಲ್ಲಿ ಸೇರಿಸಲಾಗಿದೆ.

## ೧. ಭಾಗವಂತಿಕೆ ಪದಗಳು

ಭಾಗವಂತಿಕೆ ಮೇಳ ಹಾಸನ, ಮಂಡ್ಯ, ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವೆಡೆ ವಿಶೇಷವಾಗಿರುವ ಒಂದು ಆಚರಣಾತ್ಮಕ ಸಂಪ್ರದಾಯ. ಈ ಸಂಪ್ರದಾಯ ಇರುವ ಊರಿನವರು ತಮ್ಮ ದೇವರ ಒಕ್ಕಲು ಇರುವ ಹಾಗೂ ತಮ್ಮ ಊರ ಹೆಣ್ಣು ಮಕ್ಕಳನ್ನು ಕೊಟ್ಟಿರುವ ಊರುಗಳಿಗೆ ಊರಾಡಲು ಹೋಗುತ್ತಾರೆ. ಹೀಗೆ ಹೋಗುವ ಮೇಳವನ್ನು ದೀವಳಿಗೆ ದಂಡು ಹೋಗುವುದು ಅಥವಾ ಹರಿಸೇವೆಗೆ ಹೊರಡುವುದು ಎಂದು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ ದೀಪಾವಳಿಯಲ್ಲಿ ಅಥವಾ ಕಾರ್ತಿಕದಲ್ಲಿ ಕೆಲವು ದಿನ ಸಾಂಪ್ರದಾಯಿಕವಾಗಿ ದಂಡು ಹೋಗುತ್ತದೆ.

ದಂಡು ಹೊರಡುವುದು ಬಹು ಶ್ರದ್ಧಾ-ಭಕ್ತಿಯಿಂದ ನಡೆಯುವ ಒಂದು ಆಚರಣಾ ವಿಧಿಯೇ ಆಗಿರುತ್ತದೆ. ಊರಲ್ಲಿ ಮರಣ ಸೂತಕ ಬಂದರೆ ಅದು ಕಳೆದ ಮೇಲೆ ಹೋಗುತ್ತಾರೆ. ಮನೆಯಿಂದ ಒಬ್ಬರಾದರೂ ಹೋಗಲೇಬೇಕೆಂಬ ನಿರ್ಬಂಧವಿದೆ. ಅಂದು ಮನೆಯಲ್ಲಿ ಸ್ನಾನ-ಮಡಿ ಆಗುತ್ತದೆ. ಊರ ಬಾಗಿಲಿಗೆ ತೋರಣ ಕಟ್ಟುತ್ತಾರೆ. ಗುಡಿಯಲ್ಲಿ ದೇವತಾ ಸಾಮಾನುಗಳನ್ನೆಲ್ಲಾ ಮಡಿ ಮಾಡುತ್ತಾರೆ. ದಾಸಯ್ಯ ಎಲ್ಲರಿಗೂ ನಾಮ ಇಕ್ಕುತ್ತಾನೆ. ಬಿಳಿ ಬಟ್ಟೆ ಮೇಲೆ ತನ್ನ ಭವನಾಸಿ, ಭಾಂಕಿ ಇತ್ಯಾದಿ ಇಟ್ಟು, ಧೂಪದ ಸೇವೆ ಮಾಡುತ್ತಾನೆ; ಪರಾಕು ಹೇಳುತ್ತಾನೆ. ಮಡಿವಾಳಿ ಪತ್ತಿನ ಸೇವೆ ಮಾಡುತ್ತಾನೆ. ತಿರುಪತಿಗೆ ಹೋಗಲಾಗದ ಭಕ್ತರು ಅಲ್ಲೇ ಮುಡಿಕೊಡುತ್ತಾರೆ. ಪೂಜೆ ಆಗುವವರೆಗೂ ಕೆಲವರು ವಾರ ಇದ್ದವರು ಉಪವಾಸ ಮಾಡುತ್ತಾರೆ.

ಇದೆಲ್ಲಾ ಆದ ಮೇಲೆ ಊರಾಡಲು ಹೊರಡುತ್ತಾರೆ. ಆ ಗುಂಪಿನಲ್ಲಿ ಭಾಗವತರೊಂದಿಗೆ ಕೋಡಂಗಿ ಇರುತ್ತಾನೆ. (ಇವನು ಸೆಣಬಿನ ನಾರಿನಿಂದ ಮಾಡಿದ ಮೋಷಾಕೊಂದನ್ನು ಮೈತುಂಬ ಧರಿಸಿ, ತಲೆಗೆ ಚೂಪಾದ ಅಡಕೆ ಪಟ್ಟೆಯ ಕುಲಾವಿ ಧರಿಸಿ, ಗಡ್ಡಮೀಸೆ ಕಟ್ಟಿಕೊಂಡಿರುತ್ತಾನೆ). ದೇವರ ಲಾಂಛನಗಳನ್ನು ಹಿಡಿದವರಿರುತ್ತಾರೆ. ಬಸವನ ನಗಾರಿ, ತಮಟೆ, ಓಲಗದ ವಾದ್ಯದವರಿರುತ್ತಾರೆ. ದಾಳಗಳೂ (ಪಟಗಳೂ) ಇರುತ್ತವೆ. ನಂದಿಧ್ವಜ ಶೈವ ಸಂಪ್ರದಾಯದ್ದಾದರೆ ಈ ದಾಳಗಳು ವೈಷ್ಣವ ಪ್ರತೀಕವಾಗಿರುತ್ತವೆ. ಆರೇಳು ಮಾರು ಉದ್ದವಾದ ಗಳುಗಳಿಗೆ ಬಣ್ಣದ ಬಟ್ಟೆ ಸುತ್ತಿ, ನೆತ್ತಿಯಲ್ಲಿ ಛತ್ರಿ ಸಿಕ್ಕಿಸಿರುತ್ತಾರೆ. ಮಧ್ಯೆ ಆಂಜನೇಯ, ಗರುಡ, ರಾಮ, ಲಕ್ಷ್ಮಣ ಮೊದಲಾದ ದೇವತಾ ಚಿತ್ರಗಳು ಇರುತ್ತವೆ. ಮೆರೆದೇವರು ಇಲ್ಲದೆಡೆ ಭವನಾಸಿಯನ್ನೇ (ಅದರ ಮೇಲೆ ದೇವರ ಚಿತ್ರ ಇರುತ್ತದೆ) ಒಬ್ಬ ಹೊತ್ತುಕೊಳ್ಳುತ್ತಾನೆ. (ಅವನು ಬಾಯಿಗೆ ಮಡಿಬಟ್ಟೆ ಕಟ್ಟಿಕೊಂಡಿರುತ್ತಾನೆ). ತಮ್ಮ ಊರ ಗುಡಿಗಳ ಮುಂದೆ ಭಾಗವಂತಿಕೆ ಹಾಡಿದ್ದು ಆದ ಮೇಲೆ ಮುಂದಿನ ಊರಿಗೆ ಹೋಗುತ್ತಾರೆ (ಒಬ್ಬನು

ಪಟವನ್ನು ಹೊತ್ತು ತಾವು ಹೋಗಬೇಕಾದ ಊರಿಗೆ ಹೋಗಿ ಅಲ್ಲಿನ ದೇವಾಲಯದ ಬಳಿ ನಿಲ್ಲಿಸಿದರೆ ತೌರಿನ ಪಟ ಬಂತೆಂದು ಅಲ್ಲಿನ ಹೆಣ್ಣು ಮಕ್ಕಳು ಉತ್ಸಾಹಗೊಳ್ಳುತ್ತಾರೆ. ಬರುವ ಮಂದಿಗೆ ಊಟೋಪಚಾರದ ವ್ಯವಸ್ಥೆ ಮಾಡಲೂ ಇದು ಸೂಚನೆಯಾಗುತ್ತದೆ. ಇದಕ್ಕೆ ಹಿಟ್ಟಿನ ಪಟ ಎಂಬ ಹೆಸರೂ ಇದೆ). ಅಲ್ಲಿಯೂ ಹೀಗೇ ಹಾಡು ಕುಣಿತಗಳಾಗುತ್ತವೆ. ಮಹಿಳೆಯರು ಅಕ್ಕಿ, ಖಾರದಪುಡಿ ಇತ್ಯಾದಿ 'ಅಮೃತ ಪಡಿ' ಕೊಡುತ್ತಾರೆ. ಕೋಡಂಗಿ, ಭಾಗವತರು ಆ ಊರ ದೇವರುಗಳಿಗೆ 'ಸೆಣ' (ಶರಣು) ಮಾಡಿಕೊಳ್ಳುತ್ತಾರೆ.

ದಂಡು ಊರಿಗೆ ಹಿಂದಿರುಗಿದ ದಿನ ಬಾಣಬಿರುಸಿನ ಸಂಭ್ರಮವಿರುತ್ತದೆ. ಇದರ ಅಂಗವಾಗಿ ಜಾತ್ರೆ-ಓಕುಳಿ ಉತ್ಸವಗಳೂ ಆಗುತ್ತವೆ. ಸಂಗ್ರಹಿಸಿದ ಪಡಿಯಿಂದ 'ಪರಾ'ವೂ ನಡೆಯುತ್ತದೆ; ದಾಸಯ್ಯಗಳು ಮಣೇವೂ ಹಾಕುತ್ತಾರೆ.... ಹೀಗೆ, ದಂಡು ಹೋಗುವ ಕ್ರಿಯೆ 'ಹರಿಸೇವೆ' ಎಂಬ ಹೆಸರಿಗೆ ತಕ್ಕನಾಗಿಯೇ ಇರುತ್ತದೆ.

ಈ ಸೇವೆಯ ಅಂಗವಾಗಿಯೇ ಭಾಗವಂತಿಕೆ ಪದಗಳನ್ನು ಹಾಡುತ್ತಾರೆ. "ಭಾಗವಂತಿಕೆ ಪದಗಳು ಈ ಸಂಪ್ರದಾಯದ ಸಾಹಿತ್ಯಿಕ ಭಾಗವನ್ನು ಪ್ರತಿನಿಧಿಸಿದರೆ, ಪಟಾ ಕುಣಿತ, ಕೋಡಂಗಿಯ ನೃತ್ಯಗಳು ಈ ಮೇಳದ ಕಲಾ ಪ್ರಕಾರಗಳೆನಿಸುತ್ತವೆ" (ಭಾಗವಂತಿಕೆ ಮೇಳ : ಜೀಶಂಪ. ಪು.೮). 'ದೇವರ ಜಾತ್ರೆ ಉತ್ಸವಗಳಲ್ಲಿ ಪಟಗಳನ್ನು ಹಿಡಿದು ಹತ್ತಾರು ಮಂದಿ ಕುಣಿಯುತ್ತಾರೆ. ಅನಂತರ ಪಟಗಳನ್ನಿಟ್ಟು ಎರಡು ಸಾಲಾಗಿ ನಿಂತು ಕೈಯಲ್ಲಿ ತಾಳಗಳನ್ನು ಹಿಡಿದು ಪದಗಳನ್ನು ಹಾಡುತ್ತಾರೆ. ಇದು ಸಾಮೂಹಿಕ ಗೀತ ಮೇಳ. ಇವರು ಹಾಡುವ ಪದಗಳೇ ಭಾಗವಂತಿಕೆ ಪದಗಳು". (ಅದೇ ಪುಟ). ಹಾಗೆ ಹಾಡುವವರನ್ನು ಭಾಗವತರು ಎಂದು ಕರೆಯಲಾಗುತ್ತದೆ. ಮುಮ್ಮೇಳ-ಹಿಮ್ಮೇಳದವರು ಹಾಡುವಾಗ ಕೋಡಂಗಿ ವೇಷದವ ಅವರ ನಡುವೆ ಲಯಬದ್ಧವಾಗಿ, ಲಘುವಾಗಿ ಕುಣಿಯುವುದು ಪ್ರಧಾನ ಆಕರ್ಷಣೆಯಾಗಿರುತ್ತದೆ. ಅವರೊಂದಿಗೆ ಕೆಲವೊಮ್ಮೆ ನಿಶಾನೆ ಹಿಡಿದವನೂ, ಕರವಸ್ತ್ರ ಹಿಡಿದ ಹುಡುಗರೂ ಕುಣಿಯುವುದುಂಟು. ಈ ಕೋಡಂಗಿ ವೇಷಿಯನ್ನು ವಿಷ್ಣುವಿನ ಪ್ರತಿನಿಧಿ, ರಾಮಾನುಜರ ಪ್ರತಿರೂಪ ಎಂದೆಲ್ಲಾ ನಂಬಲಾಗುತ್ತದೆ.

ಸಾಮಾನ್ಯವಾಗಿ ಒಕ್ಕಲಿಗರು ಹೆಚ್ಚಿರುವ ಊರುಗಳಲ್ಲಿಯೇ ಈ ಸಂಪ್ರದಾಯ ಇರುವುದರಿಂದ ಇದೊಂದು ಒಕ್ಕಲಿಗರ ಸಂಪ್ರದಾಯವೆಂದೇ ಅಧ್ಯಯನಕಾರರು ಅಭಿಪ್ರಾಯಪಟ್ಟಿರುವುದುಂಟು. ಬಹುಮಟ್ಟಿಗೆ ಇದು ವೈಷ್ಣವ ಭಕ್ತರ ಸಂಪ್ರದಾಯವೇ ಆದರೂ ಕೆಲವೆಡೆ ಶೈವ ಸಂಪ್ರದಾಯದವರೂ ನಡೆಸುವುದುಂಟೆನ್ನಲಾಗಿದೆ ಅಥವಾ ಶಿವ ಪರವಾದ ಕೆಲವು ಗೀತೆಗಳನ್ನು ಹಾಡುವುದೂ ಇದೆ.

ಭಾಗವಂತಿಕೆ ಪದಗಳನ್ನು ಎರಡು ಮುಖ್ಯ ಭಾಗವಾಗಿ ವಿಂಗಡಿಸಬಹುದು: ೧. ಕಥನ ಕಾವ್ಯಗಳು ೨. ಬಿಡಿ ಗೀತೆಗಳು. ಕಥನ ಕಾವ್ಯಗಳು ರಾಮಾಯಣ, ಭಾಗವತದಂತಹ ಪುರಾಣ ಕಥನಗಳಿಗೆ ಸಂಬಂಧಿಸಿದ್ದರೆ, ಬಿಡಿಗೀತೆಗಳು ದೇವತಾ ಸಂಕೀರ್ತನೆ ಮತ್ತಿತರ ಸಂದರ್ಭ ವಿಷಯವನ್ನೊಳಗೊಂಡಿವೆ. ಜೀಶಂಪ ಅವರು ಸಂಗ್ರಹಿಸಿರುವ "ಪಯಣಗತಿ" ಶ್ರೀರಂಗಪಟ್ಟಣದಿಂದ ತಿರುಪತಿಗೆ ಯಾತ್ರೆ ಹೊರಟಿದ್ದನ್ನು ನಿರೂಪಿಸುವ ಅಪರೂಪದ ರಚನೆಯಾಗಿದೆ.

ಸಾಕಷ್ಟು ಪ್ರಮಾಣದ ಭಾಗವಂತಿಕೆ ಪದಗಳು ಇನ್ನೂ ಪ್ರಕಟವಾಗಿಲ್ಲ. ಹೀಗಾಗಿ, ಈ ಎಲ್ಲಾ ಪ್ರಕಾರದ ವಸ್ತು ವೈವಿಧ್ಯವನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಾಗಿಲ್ಲ. 'ಊರಾಡುವಾಗ ಒಂದು ಮೇಳದವರಿಗೆ ಇನ್ನೊಂದು ಮೇಳದವರು ಎದಿರಾದರೆ, ಅವರಲ್ಲಿ ಹಾಡುಗಾರಿಕೆಯ ಸ್ಪರ್ಧೆಯೇ ಏರ್ಪಡುತ್ತಿತ್ತೆನ್ನುತ್ತಾರೆ. ಇಬ್ಬರೂ ಪ್ರತ್ಯೇಕವಾಗಿ 'ಭಾಗವಂತಿಕೆ' ಕಟ್ಟಿ ಹಾಡ ತೊಡಗುತ್ತಾರೆ. ಯಾರು ಹೆಚ್ಚು ಕಾಲ ಹಾಡುಗಳನ್ನು ಮಾಲೆ ಮಾಲೆಯಾಗಿ ಹಾಡಬಲ್ಲರೋ ಅವರು ಗೆಲ್ಲುತ್ತಾರೆ. ಪುನರುಕ್ತಿಯಾಗದಂತೆ ಹೊಸ ಹಾಡುಗಳನ್ನೇ ಹಾಡಬೇಕು. ಸೋತ ಮೇಳ ಕಂಬಳಿ ಗದ್ದುಗೆ ಹಾಸಿ, ಸೋತಗಾಣಿಕೆ ಅರ್ಪಿಸಿ, ಹೊರಟುಹೋದ ಸಂದರ್ಭಗಳುಂಟು. ಎದುರು ಪಕ್ಷದ ಬಿರುದು ಬಾವಲಿಗಳನ್ನೆಲ್ಲ ಕಿತ್ತುಕೊಂಡು, ಕಿತ್ತಾಡಿದ ವಿರಸ ಪ್ರಸಂಗಗಳೂ ಉಂಟು' (ಭಾಗವಂತಿಕೆ ಮೇಳ – ಜೀಶಂಪ. ಪು.೯). ಅಂದರೆ, ಸಮೃದ್ಧವಾದ ಹಾಡುಗಾಳಿದ್ದಿರಬೇಕು. ಪ್ರಸ್ತುತ, ರಾಮಾಯಣಕ್ಕೆ ಸಂಬಂಧಿಸಿದ ಕಾವ್ಯ ಪ್ರಧಾನವಾಗಿ ಕಾಣಬರುತ್ತದೆ. ಭಾರತ, ಭಾಗವತಕ್ಕೆ ಸಂಬಂಧಿಸಿದ ಒಂದೆರಡು ಕಾವ್ಯಗಳು ಮಾತ್ರ ಇವೆ.

'ಭಾಗವಂತಿಕೆ ಹಾಡುವವರು ಸಮಾನ ರೇಖೆಗಳಲ್ಲಿ ಅಕ್ಕಪಕ್ಕದಲ್ಲಿ ಅಷ್ಟಿಷ್ಟು ಜಾಗವನ್ನು ಉಳಿಸಿ ನಿಲ್ಲುತ್ತಾರೆ. ತಾಳ ಹಿಡಿದು ಅವರು ಹಾಡತೊಡಗಿದಾಗ ವಿವಿಧ ತಾಳದ ಗತ್ತಿಗೆ, ಹಾಡಿನ ವಿನ್ಯಾಸಕ್ಕೆ ತಕ್ಕಂತೆ ಕೋಡಂಗಿ ನಾನಾ ಭಂಗಿಗಳಲ್ಲಿ ಆ ಎರಡೂ ಸಾಲುಗಳ ನಡುವೆ ಕುಣಿಯುತ್ತಾ ಅತ್ತಿತ್ತ ಓಡಾಡುತ್ತಾನೆ. ಹಾಡುಗಳು ಮುಗಿಯುವವರೆಗೆ ಕುಣಿಯುವುದಲ್ಲದೆ, ಪಟಗಳನ್ನು ಹಿಡಿದು ಅವರು ಕುಣಿಯುವಾಗ ಅವರ ಸಾಲಿನಲ್ಲಿ ಸೇರಿ ತಾನೂ ಕುಣಿಯುತ್ತಾನೆ. (ಭಾಗವಂತಿಕೆ ಮೇಳ, ಜೀಶಂಪ, ಪು.೧೬).

ಭಾಗವಂತಿಕೆ ಪದಗಳನ್ನು ಬಹುಮಟ್ಟಿಗೆ ಒಂದೇ ಧಾಟಿಯಲ್ಲಿ ಓತ ಪ್ರೇತವಾಗಿ ಹಾಡಲಾಗುತ್ತದೆ. ಹಾಡಿಗೆ ತಾಳಗಳಷ್ಟೇ ಸಹವಾದ್ಯ. ಪ್ರತೀ ಚರಣ (ಪದ್ಯ)ದಲ್ಲಿ ನಾಲ್ಕು ಸಾಲುಗಳಿರುತ್ತವೆ. ಮುಮ್ಮೇಳದವರು ಪ್ರತೀ ಪದ್ಯದ ಮೊದಲಲ್ಲಿ 'ಹೇ' ಎಂದು ದನಿ ಎತ್ತಿ ಮೊದಲ ಸಾಲನ್ನು ಮುಮ್ಮೇಳದವರು ಹಾಡಿದ ಬಳಿಕ ಹಿಮ್ಮೇಳದವರೂ ಅದೇ ಸಾಲು ಹಾಡಿ, ಳನೇ ಸಾಲನ್ನು ಇಬ್ಬರೂ ಕೂಡಿಯೇ

ಹಾಡುತ್ತಾರೆ. ಪ್ರತೀ ಪದ್ಯಕ್ಕೂ ಪಲ್ಲವಿ ಹಾಡುವುದೂ ಈ ಹಾಡುಗಾರಿಕೆಯ ಕ್ರಮವೇ ಆಗಿದೆ.

ಕೆಲವೊಮ್ಮೆ ೬ ಮತ್ತು ೮ ಸಾಲಿನ ಚರಣಗಳೂ ಬರುತ್ತವೆ. ಅಲ್ಲಿ ಮುಮ್ಮೇಳದವರು ಹಾಡಿದ ನಂತರ ಹಿಮ್ಮೇಳದವರು ಮುಂದಿನ ಸಾಲುಗಳನ್ನು ಅದೇ ಧಾಟಿಯಲ್ಲಿ ಹಾಡಿ, ಕೊನೆಯಿಂದ ೨ನೇ ಸಾಲನ್ನು ಮುಮ್ಮೇಳದವರನ್ನು ಅನುಸರಿಸಿ ಹಿಮ್ಮೇಳದವರು ಹಾಡುತ್ತಾರೆ. ಕೊನೆಯ ಸಾಲನ್ನು ಇಬ್ಬರೂ ಹಾಡಿ, ಅಂತ್ಯದಲ್ಲಿ ಮುಮ್ಮೇಳದವರು ಪಲ್ಲವಿಯನ್ನು, ಹಿಮ್ಮೇಳದವರು ಅನುಪಲ್ಲವಿಯನ್ನು ಹಾಡಿ, ಮುಕ್ತಾಯ ಮಾಡುತ್ತಾರೆ.

ಇಲ್ಲಿ ಬರುವ ರಾಮಾಯಣ ಕಾವ್ಯ ಶಿಷ್ಟ ಮೂಲದ ಜನಪ್ರಿಯ ಕತೆಯೇ ಆಗಿದೆ. ಆದರೆ, ಬಿಡಿ ಗೀತೆಗಳಲ್ಲಿ ಕೆಲವೆಡೆ ಸ್ಥಳೀಯ ಜನಪದ ಮೂಲದ ಕಲ್ಪನೆಗಳು ಸೇರಿದಂತಿವೆ.

*"ಹೊಟ್ಟೆಗಿಲ್ಲದ ರಾಮ ಕಟ್ಟೆಗೆ ಮಾರೆಂಬುತ*
*ಹತ್ತಿ ಮೆಟ್ಟದ ಕೊನೆಯ ಮುರಿಯೆಂಬುತ*
*ತುಟ್ಟ ತುದಿಯ ಮೇಲೆ ಕೊನೆ ಸಿಡಿದು ಬೀಳುವಾಗ*
*ಧರೆಯೇಳು ಲೋಕವನು ಮುರಿಯೆಂಬುತ"*

– ಇಂಥಾ ವಿನೂತನ ಕಲ್ಪನೆಗಳು ಗಮನ ಸೆಳೆಯುತ್ತವೆ. ಅಲ್ಲಲ್ಲಿ ಪಾಠದೋಷಗಳಿರುವುದರಿಂದ ಕೆಲವು ಪದ/ಸಾಲುಗಳು ಸುಲಭವಾಗಿ ಅರ್ಥವಾಗುವುದೂ ಕಷ್ಟವೆನಿಸಬಹುದು.

ಭಾಗವಂತಿಕೆ ಪದಗಳ ಹಾಡಿನ ಕ್ರಮ ಸಾಮಾನ್ಯವಾಗಿ ಹೀಗಿರುತ್ತದೆ : 'ರಾಮಾಯಣ, ಪ್ರಹ್ಲಾದ ಚರಿತೆ, ಪಯಣಗತಿ, ದೊಡ್ಡ ಸೇರ್ವೆ ಪದ, ನೀತಿಪದ, ಕೃಷ್ಣನ ಪದ, ಗೊಲ್ಲರ ಹಟ್ಟಿಯಲ್ಲಿ ಹೇಳುವ ಪದ, ಈಶ್ವರನ ಪದಗಳು ಇತ್ಯಾದಿ ಮುಗಿದ ಮೇಲೆ ಗುಡಿದುಂಬಿಸುವ ಪದಗಳು. ಇದು ಪರಿಸಮಾಪ್ತಿಯ ಸಂದರ್ಭ. ದೇವಾಲಯದ ಪ್ರದಕ್ಷಿಣೆ ಮಾಡುವಾಗ ಹೇಳುವುದು "ಗುಡಿಸುತ್ತ ಹೇಳುವ ಪದ". ಪಟ, ನಗಾರಿ ಇತರ ಬಿರುದು ಬಾವಲಿಗಳನ್ನು ಹೊರಗೆ ಒಂದೆಡೆ ಇಟ್ಟು ಪೂಜಿಸುವಾಗ "ಸರಳು" ಹೇಳುವರು. ಅನಂತರ "ದೊಡ್ಡ ಮಂಗಳಾರತಿ'. ಆದಾದ ಮೇಲೆ "ಮುದ್ರಿಕೆ" ಬರುತ್ತದೆ. ಕೊನೆಯಲ್ಲಿ ತೀರ್ಥಪ್ರಸಾದ ಕೊಡುವಾಗ "ತೀರ್ಥವನ್ನೊಪ್ಪಿಸುವ ಹಾಡು" (ಭಾಗವಂತಿಕೆ ಮೇಳ-ಜೀಶಂಪ. ಪು. ೧೧೮).

ದೇವತಾ ಸಂಕೀರ್ತನೆಯ ಬಿಡಿಗೀತೆಗಳಲ್ಲಿ ಮಂಗಳಾರತಿ ಪದಗಳಲ್ಲದೆ ದಾಸರ ರಚನೆಗಳೂ ಬಂದು ಸೇರಿಕೊಂಡಿವೆ ಎನ್ನಲಾಗಿದೆ. ಆಯಾ ಊರ ದೇವರನ್ನೇ ಸ್ತುತಿಸುವ ಪದಗಳಿರುವಂತೆಯೇ ಎಲ್ಲಾ ದೇವರಿಗೂ ಸಂಬಂಧಪಟ್ಟಂತೆ ಹಾಡು ಹೇಳುತ್ತಾ ನಮಸ್ಕರಿಸುವ ಸಂದರ್ಭಕ್ಕಾಗಿ ರಚಿಸಿದ ಪ್ರದಕ್ಷಿಣೆ ಪದ್ಯಗಳು ಇಲ್ಲಿ

ಸೇರಿರುವುದು ಬಿಡಿಗೀತೆಗಳ ವೈವಿಧ್ಯವನ್ನು ಹೆಚ್ಚಿಸಿದಂತಾಗಿದೆ.' ಈ ಪದ್ಯರೂಪಗಳನ್ನೆಲ್ಲಾ ಪರಿಶೀಲಿಸಿದಾಗ, ಇವನ್ನು ಭಾಗವಂತಿಕೆ ಪದಗಳು ಎಂಬುದಕ್ಕಿಂತ ಭಾಗವಂತಿಕೆ ಕಾವ್ಯ-ಎಂದು ಗುರುತಿಸುವುದೇ ಉಚಿತ ಎನ್ನಿಸುತ್ತದೆ. ಇಲ್ಲಿನ ರಾಮಾಯಣ ಕಥಾನಕವಂತೂ ವಿವಿಧ ಅಧ್ಯಾಯಗಳಿಂದ ಕೂಡಿದ ಕಿರು ಕಾವ್ಯದಂತೆಯೇ ಇದೆ.

ಭಾಗವಂತಿಕೆ ಕಾವ್ಯ ಲಿಖಿತ ರೂಪದಲ್ಲಿಯೂ ದೊರೆಯುತ್ತದೆ. ಈ ಕುರಿತು ಜೀಶಂಪ ಅವರು "ಆದರೆ ಇವೆಲ್ಲ ಕಂಠಸ್ಥ ಸಂಪ್ರದಾಯದ ಹಾಡುಗಳನ್ನು ಬರೆದಿಟ್ಟ ಸಂದರ್ಭಗಳನ್ನು ಸೂಚಿಸುತ್ತವೆಯೇ ಹೊರತು ಯಾವುದೋ ಮೂಲ ಪ್ರತಿಯಿಂದ ಬೆಳೆದುಬಂದ ನಕಲುಗಳಲ್ಲ. ....ಈ ಸಾಹಿತ್ಯವನ್ನು ಶುದ್ಧಾ ರೂಪದಲ್ಲಿ ಕಾಪಾಡಿಕೊಂಡು ಬರಲು ಪ್ರತಿಗಳು ನೆರವಾಗಬಹುದು.... ಆದರೆ ಪ್ರತಿಗಳ ಸ್ಖಾಲಿತ್ಯವನ್ನು ತಿದ್ದಿಕೊಳ್ಳಲು ಎಷ್ಟೋ ಸಾರಿ ಅನುಭವೀ ಹಾಡುಗಾರರನ್ನೇ ಆಶ್ರಯಿಸಬೇಕಾಗುತ್ತದೆ" ಎಂದು (ಭಾಗವಂತಿಕೆ ಪದಗಳು, ಪು.೧) ನೀಡಿರುವ ಹೇಳಿಕೆ ಬಗೆಗೆ ಚರ್ಚೆ ಅಗತ್ಯವಾಗುತ್ತದೆ. ಲಿಖಿತ ರೂಪದ್ದನ್ನು ತಿದ್ದಲು ತೋಂಡಿರೂಪ ಎಷ್ಟರ ಮಟ್ಟಿಗೆ ನೆರವಾಗಬಹುದು? ಎಂಬುದೊಂದು ಪ್ರಶ್ನೆ. ಅದಕ್ಕಿಂತಲೂ ಮಿಗಿಲಾಗಿ ಈ ಭಾಗವಂತಿಕೆ ಕಾವ್ಯದಂತಹ ರಚನೆ ಶುದ್ಧಾಂಗವಾಗಿ ತೋಂಡಿ ಮೂಲದಲ್ಲಿಯೇ ಹುಟ್ಟಿ, ಬಳಿಕ ಲಿಖಿತಗೊಂಡದ್ದು ಎಂಬುದು ಎಷ್ಟು ಸರಿ ? ಇಲ್ಲಿ ಕಾಣುವ ಭಾಷೆ, ಶೈಲಿ, ಶಬ್ದರೂಪ.... ಇವೆಲ್ಲಾ ಅನಕ್ಷರಸ್ಥ ಗ್ರಾಮೀಣ ಜನಪದರಿಗೆ ಸಹಜವಾದುದು ಅಲ್ಲವೇ ಅಲ್ಲ.

*"ಶ್ರೀವತ್ಸಲಾಂಛನಿಗೆ ಕ್ಷೀರಾಬ್ಧಿಶಯನನಿಗೆ*
*ಗೋವರ್ಧನೋದ್ಧಾರ ಗೋವಿಂದಗೆ*
*ಮಾವ ಕಂಸನ ಕೊಂದು ಮಕರ ಕುಂಡಲವಿಟ್ಟ*
*ಜೀವರಾಶಿಗಳ ಚನ್ನಯ ರೂಪಗೆ"*

– ಇಂಥವು ಒಂದೆರಡಲ್ಲ, ಅಡಿಗಡಿಗೆ ಬರುತ್ತವೆ. ಈ ಪದ ವಿಶೇಷಗಳು ಜನಪದರ ಬಳಕೆಗೆ ಇರಲಿ, ಕಲ್ಪನೆಗೂ ಮೀರಿದುವು.

ಜೀಶಂಪ ಅವರೇ ಒಪ್ಪುವಂತೆ ಇದರ "ಶೈಲಿ 'ಮಾರ್ಗ'ಕ್ಕೆ ಹತ್ತಿರವಾದದ್ದಾಗಿರುವುದರಿಂದ ಜನಪದ ಭಾಷೆಯ ಬನಿ ಸೊಗಡು ಇಲ್ಲಿ ಇಲ್ಲ ಎಂದೇ ಹೇಳಬೇಕು" (ಅದೇ, ಪು.೪).

ಜನಪದರಲ್ಲಿನ ಎಲ್ಲಾ ಸಾಹಿತ್ಯ ಪ್ರಭೇದಗಳು ಮೌಖಿಕ ಸಂಪ್ರದಾಯದಲ್ಲಿಯೇ ಮೂಲತಃ ಹುಟ್ಟಿದ್ದು ಎಂಬ ಭಾವನೆ ನಮ್ಮ ಹೆಚ್ಚಿನ ವಿದ್ವಾಂಸರ ಮನಸ್ಸಿನಲ್ಲಿ ಉಳಿದುಬಿಟ್ಟಿದೆ. ಆದರೆ ಶಿಷ್ಟ ವರ್ಗದವರಿಂದ ಲಿಖಿತವಾಗಿ ಹುಟ್ಟಿ ಮೌಖಿಕ ಪರಂಪರೆಗೆ ಹರಿದ ಕೆಲವು ಪಠ್ಯಗಳೂ ಉಂಟು ಎಂಬುದನ್ನು ಇನ್ನಾದರೂ ಮುಕ್ತವಾಗಿ

ಒಪ್ಪಿಕೊಳ್ಳಬೇಕಿದೆ. ಕೆಲ ಬಯಲಾಟದ ಪದ್ಯಗಳು, ಲಾವಣಿ ಪದಗಳಂತೆ ಭಾಗವಂತಿಕೆ ಕಾವ್ಯಗಳೂ ಈ ಮಾತಿಗೆ ನಿದರ್ಶನಗಳಾಗುತ್ತವೆ. ಸೋಜಿಗವೆಂದರೆ ಶಿಷ್ಟ ಮಹಿಳೆಯರು ರಚಿಸಿದ ಕೆಲವು ಉರುಟಣೆ ಹಾಡುಗಳೂ ಹಳ್ಳೀಗರತಿಯರಲ್ಲಿ ಒಸಗೆ-ಸೋಬಾನೆ ಪದಗಳಾಗಿರುವುದು ! (ನೋಡಿ: ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ, ಪು. ೨೯೩).

ಇಲ್ಲಿ ಉದಾಹರಿಸಬಹುದಾದ ಇನ್ನೊಂದು ಉತ್ತಮ ನಿದರ್ಶನ "ಅರ್ಜುನ ಜೋಗಿ ಹಾಡು" ಎಂಬ ಕಾವ್ಯ. ಸು. ೨೦ ವರ್ಷಗಳ ಹಿಂದೆ ನನ್ನ ಊರಿನ ಮುನಿಅಕ್ಕಯ್ಯಮ್ಮನಿಂದ –

*'ಹರಹರಾ ಹರನೆ ಜೈತೋ । ಇವ ಮೂರು*
*ಪುರವ ಗೆಲಿದವನೆ ಜೈತೋ.....'*

– ಎಂಬ ಕಾವ್ಯಭಾಗವನ್ನು ಸಂಗ್ರಹಿಸಿದ್ದೆ. ಪರಿಶಿಷ್ಟ ವರ್ಗದ ಆ ಹಿರಿಯ ಹಾಡುಗಾತಿ ಒಬ್ಬ ಅನಕ್ಷರಸ್ಥೆ. ಆಕೆ ಹಾಡಿದ್ದರಿಂದ ಗುಣಸಾಗರಿ, ಉತ್ತರದೇವಿ ಕಾವ್ಯಗಳಂತೆ ಇದೂ ಒಂದು ಅಪ್ಪಟ ಜನಪದರೇ ಕಟ್ಟಿದ ಜನಪದ ಕಾವ್ಯವೆಂದೇ ಭಾವಿಸಿದ್ದೆ. ಈಚೆಗೆ (೨೦೦೩) ಕುಣಿಗಲು ಭಾಗದ ತಿಮ್ಮಪ್ಪ ಎಂಬ ಒಬ್ಬ ವೀಳ್ಯದೆಲೆ ವ್ಯಾಪಾರಿ, ಕಲಾವಿದರಿಂದ ಇದೇ 'ಅರ್ಜುನ ಜೋಗಿ'ಗೆ ಸಂಬಂಧಿಸಿದ ಹಲವು ಸಾಲುಗಳನ್ನು ಕೇಳಿ, ಸಹಜವಾಗಿಯೇ ಇದೂ ಜನಪದರ ಸ್ವಯಂ ರಚನೆ ಎಂದೇ ನಂಬಿಕೊಂಡಿದ್ದೆ. ಆದರೆ, ಈಚೆಗೆ ಡಾ॥ ಪಿ.ಕೆ. ರಾಜಶೇಖರ ಅವರು ಸಂಪಾದಿಸಿ ಪ್ರಕಟಿಸಿರುವ "ಪಾರ್ಥನ ಜೋಗಿ ಹಾಡು" ಎಂಬ ಗ್ರಂಥವನ್ನು ಗಮನಿಸಿದಾಗ ನನ್ನ ಮೊದಲಿನ ಅನಿಸಿಕೆಗಳನ್ನು ಬದಲಿಸಿಕೊಳ್ಳಬೇಕಾಯಿತು. ಡಾ॥ ಪಿ.ಕೆ.ರಾ. ಅವರ ಪ್ರಕಾರ ಈ ಕೃತಿಯು 'ನಂಜನಗೂಡು ವೀರಭದ್ರ' ಎಂಬ ಕವಿಯಿಂದ ಲಿಖಿತವಾದುದು. ಆ ಕೃತಿ ಜನಪದ ಹಾಡುಗಾರರಲ್ಲಿ ಎಷ್ಟೊಂದು ವ್ಯಾಪಕವಾಗಿ ಜನಪ್ರಿಯವಾಗಿದೆ ಎಂಬುದಕ್ಕೆ ಮೇಲೆ ಹೇಳಿದ ಎರಡು ನಿದರ್ಶನಗಳಲ್ಲದೆ, ಕಿನ್ನರಿ ಜೋಗಿಗಳು ಹಾಡುವ ಜೋಗಿ ಹಾಡನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.

ವೀರಭದ್ರ ಕವಿಯ ಲಿಖಿತ ಪಠ್ಯಕ್ಕೂ, ಅಪ್ಪಟ ಗ್ರಾಮೀಣ ಹಾಡುಗಾರರ ಮೌಖಿಕ ಪಠ್ಯಕ್ಕೂ ಸಾಮ್ಯತೆಗಳಿರುತ್ತವೆಯೇ ? ಎಂಬ ಅನುಮಾನ ಇರುವವರು ಈ ಮುಂದಿನ ಮಾದರಿಗಳನ್ನು ಸ್ವತಃ ಹೋಲಿಸಿ, ವಿಮರ್ಶಿಸಿ, ಬಳಿಕ ನನ್ನ ಅಭಿಪ್ರಾಯದೊಂದಿಗೆ ತಮ್ಮ ಸಹಮತ ವ್ಯಕ್ತ ಮಾಡಬಹುದು.[೧]

---

೧. ಇಲ್ಲಿ ನೀಡಿರುವುದು ಒಂದು ಮಾದರಿ ಮಾತ್ರ. ಖ್ಯಾತ ತತ್ವಪದ ಹಾಡುಗಾರ ಸಾಧು ಹನುಮಯ್ಯ ಹಾಡುತ್ತಿದ್ದ ಬಸವಣ್ಣನನ್ನು ಕುರಿತ ಕಥಾ ಕಲಾಕ್ಷೇಪವನ್ನು ಡಾ॥ ಪಿ.ಕೆ. ರಾಜಶೇಖರ. ಸಂಪಾದಿತ ಬಸವ ಪುರಾಣದೊಂದಿಗೆ ಹೋಲಿಸಬಹುದು.

ಮೊದಲಿಗೆ, ತಿಮ್ಮಪ್ಪ ಎಂಬ ಕಲಾವಿದರು ಹಾಡಿದ ಈ ಕೆಲವು ಸಾಲುಗಳನ್ನು ನೋಡಿ :

*ಶ್ರೀಗುರುವೆ ಜಯತು ಜಯತೋ*
*ಶಿವ ಸುಖದ ಸಾಗರವೆ ಜಯತೋ ಜಯತೋ*
*ಶ್ರೀಗಿರಿಜೆಯ ಮುಖ ಕಮಲದಿನಕರನೆ*
*ಚಂದ್ರಧರ ಭೋಗ ನಂಜುಂಡ ಜಯತೋ*

(ನೋಡಿ: ನಮ್ಮೋರು, ಪು. ೧೫೩)

ಈ ಸಾಲುಗಳನ್ನು ವೀರಭದ್ರ ಕವಿಯ ಈ ಸಾಲುಗಳೊಂದಿಗೆ ಹೋಲಿಸಿ:

**ಶ್ರೀಗುರುವೆ ಜಯತು ಜಯತೊ ಶಿವಸುಖದ**
**ಸಾಗರವೆ ಜಯತು ಜಯತೋ**
**ಶ್ರೀಗಿರಿಜೆ ಮುಖ ಪದ್ಮ ದಿನಕರನ ಚಂದ್ರಧರ**
**ಭೋಗ ನಂಜುಂಡ ಜಯತೊ । ಪ ।**

(ನೋಡಿ: ಪಾರ್ಥನ ಜೋಗಿ ಹಾಡು)

ಹೀಗೇ ಮುಂದಿನ ಭಾಗಗಳನ್ನೂ ಹೋಲಿಸುತ್ತಾ ಹೋಗಬಹುದು. ಇದರಲ್ಲಿ ವ್ಯತ್ಯಾಸಗಳಿಲ್ಲವೇ ? ಇವೆ. ಅವು ನಗಣ್ಯವೆನ್ನುವಂತಹ ಪದಗಳ ಬದಲುಗಳು; ಪಾಠಾಂತರಗಳು, ಅಲ್ಲವೇ ? ಒಟ್ಟಾರೆ, ಈ ಎರಡೂ ಒಂದೇ ಮೂಲದ ಪಠ್ಯದ್ದು ಅರ್ಥಾತ್, ನಂಜನಗೂಡು ವೀರಭದ್ರ ಎಂಬ ಕವಿಯ ಲಿಖಿತ ಕಾವ್ಯವೇ ಜನಪದರ ಮೌಖಿಕ ಪಠ್ಯ ಆಗಿದೆ ಎಂಬುದನ್ನು ಸೂಚಿಸುತ್ತದೆಯಲ್ಲವೇ ? ಹಾಡುಗಾರ ತಿಮ್ಮಪ್ಪ ಅವರು "ಇದು ಪುಸ್ತಕಾನೇ ಅದೆ" ಎಂದು ಹೇಳಿದ್ದರು. ಟಿ.ಎನ್. ಕೃಷ್ಣಯ್ಯ ಶೆಟ್ಟಿ ಅವರು ಅರ್ಜುನ ಜೋಗಿ ಹಾಡಿನ ಒಂದು ಜನಪ್ರಿಯ ಕಿರು ಪುಸ್ತಿಕೆಯನ್ನು ಬಹು ಹಿಂದೆಯೇ ಪ್ರಕಟಿಸಿದ್ದುಂಟು. ಸುದೀರ್ಘವಾದ ಲಿಖಿತ ಪಠ್ಯ ಗುರು ಮುಖೇನ ಅನಕ್ಷರಸ್ಥ ಜನಪದ ಗಾಯಕರಿಗೆ ವರ್ಗಾವಣೆಯಾಗಿ, ಬಾಯಿಂದ ಬಾಯಿಗೆ ಹರಿಯುವಾಗ, ಸಹಜವಾಗಿಯೇ ಕೆಲವೊಂದು ಬದಲಾವಣೆಗಳಾಗಿರಬಹುದು. ಲಿಖಿತ ಪಠ್ಯವನ್ನು ಮರೆತು ನೋಡಿದಾಗ ಆ ಮೌಖಿಕ ಪಠ್ಯವೇ ಸ್ವಯಂ ಮೂಲದ್ದೆನಿಸಬಹುದು. ಆದರೆ, ಅದರ ಶಬ್ದಪ್ರಯೋಗ, ಕಾವ್ಯ ನಿರ್ಮಿತಿಯ–ಸಂರಚನೆಯ–ಅಂಶಗಳು ಕಾವ್ಯದ ಶಿಷ್ಟಮೂಲದ ಬಗೆಗೆ ಕೈತೋರುತ್ತಿರುತ್ತವೆ. ಲಿಖಿತ ಪಠ್ಯವೇ ದೂರೆತಾಗಲಂತೂ ಅದು ಅಧಿಕೃತವಾಗುತ್ತದೆ. ನಮ್ಮ ಎಷ್ಟೋ ಮೌಖಿಕ ಪಠ್ಯಗಳು ಹೀಗೆ ಲಿಖಿತ ಮೂಲದ್ದಾಗಿರುತ್ತವೆ. ಹೀಗೆಂದಾಕ್ಷಣ, ಅನಕ್ಷರಸ್ಥ ಜನಪದ ಕಲಾವಿದರ ಪ್ರತಿಭೆ–ಸಾಮರ್ಥ್ಯಗಳನ್ನು ಕಡೆಗಣಿಸಿದಂತೇನೂ ಆಗುವುದಿಲ್ಲ. ಬದಲಿಗೆ,

ಯಾರೋ ಬರೆದ ಪಠ್ಯವನ್ನು ತಮ್ಮಲ್ಲಿ ಧಾರಣ ಮಾಡಿಕೊಳ್ಳುವ, ಅದಕ್ಕೆ ಮತ್ತೆ ಮತ್ತೆ ಜೀವಕೊಟ್ಟು ಉಳಿಸಿ, ಬೆಳೆಸುವ ಆ ಮೂಲಕ ತಾವೇನೂ ಕಡಿಮೆ ಇಲ್ಲ ಎಂಬ ಅಸಾಮಾನ್ಯ ಸಾಹಸ ತೋರುತ್ತಾರಲ್ಲ; ಅದು ನಿಜಕ್ಕೂ ಹೆಮ್ಮೆಪಡುವಂತಹದ್ದು.

ಹಾಗಾದರೆ, ಭಾಗವಂತಿಕೆ ಕಾವ್ಯದ ಕರ್ತೃ ಯಾರಾಗಿರಬಹುದು ? ಎಂಬ ಪ್ರಶ್ನೆ ಏಳುತ್ತದೆ. 'ಇವು ಶೂದ್ರರಿಗಾಗಿ ತಿರುಮಲಾರ್ಯನಿಂದ ರಚಿತವಾದುವು' ಎಂಬ ಹಯವದನರಾಯರ ಅಭಿಪ್ರಾಯವನ್ನು ಹಿರಿಯಣ್ಣ ಮೇಟಿಕೆರೆಯಾಗಲೀ, ಜೀಶಂಪ ಅವರಾಗಲೀ ವಿರೋಧಿಸಿರುವುದು ಸಹಜವಾಗಿಯೇ ಇದೆ. ಆದರೆ, ಭಾಗವಂತಿಕೆ ರಾಮಾಯಣ ಕಾವ್ಯದಲ್ಲಿಯೇ ಕರ್ತೃವಿನ ಹೆಸರೂ ಇರುವುದನ್ನು ಅದೇಕೋ ಅವರಾರೂ ಗಮನಿಸಿಲ್ಲ. ಕವಿ ತನ್ನ ಹೆಸರು "ವೆಂಕಟೇಶ ದಾಸ" ಎಂಬುದನ್ನು ಕಾವ್ಯದ ಕೊನೆಯಲ್ಲಿ, ಸ್ಪಷ್ಟವಾಗಿ ದಾಖಲಿಸಿದ್ದಾನೆ. ಆದರೆ, ಇತರ ಎಲ್ಲಾ ಬಿಡಿಗೀತೆಗಳೂ ಆತನವೇ, ಬೇರೆಯರವೇ ಎಂಬುದು ಸ್ಪಷ್ಟವಾಗುವುದಿಲ್ಲ. ಏನೇ ಆದರೂ, ಇವು ಶಿಷ್ಟ ಮೂಲದಲ್ಲಿ ರಚಿತವಾಗಿ ಜನಪದರಿಗೆ ಹೋಗಿವೆ ಎಂಬುದಕ್ಕೆ ಈ ರಚನೆಗಳೇ ಸಾಕ್ಷಿಯಾಗುತ್ತವೆ.

ಇವನ್ನು ಬರೆದವನು ಭಕ್ತಕವಿ; ವೈಷ್ಣವ ಪಂಥದವ. ಆತ ದೊಡ್ಡ ಪಂಡಿತನಂತೂ ಅಲ್ಲ. ಆದರೆ, ಛಂದಸ್ಸು, ಪದಬಂಧಗಳನ್ನು ಅಭ್ಯಾಸ ಮಾಡಿದವನು. ಹಳ್ಳಿಗಳಲ್ಲಿ ಇಂಥಾವರು ಅಪರೂಪವೇನಲ್ಲ. ಚನ್ನಾದೇವಿ ಅಗ್ರಹಾರದಲ್ಲಿದ್ದ ಆಟದಯ್ಯನವರು (ನೋಡಿ: ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ, ಪು. ೨೪೮), ಬೆಳ್ಳಿ ಕಿರೀಟದ ವೆಂಕಟದಾಸರು, ಚಿಕ್ಕಹೆಜ್ಜಾಜಿಯ ಹರಿದಾಸ ನಾರಾಯಣಶರ್ಮ, ಕರಪಾಲ ಬಸವ ಪುರಾಣ ಹಾಡಿದ ಕರಪಾಲದ ತಿಮ್ಮಪ್ಪ (ಸಂ. ಪಿ.ಕೆ. ರಾಜಶೇಖರ).... ಇಂಥಾವರನ್ನು ಇಲ್ಲಿ ಉಲ್ಲೇಖಿಸಬಹುದು. ಈ ಪ್ರವೃತ್ತಿ ಕೇವಲ ಬಯಲುಸೀಮೆಗೆ ಸೀಮಿತವಾಗಿದೆ ಎಂಬುದಕ್ಕೆ ಕರಾವಳಿಯ ಮೊಗವೀರರ 'ಹೌದೇರಾಯನ ವಾಲಗದಂತಹ ಕುಣಿತದ ಹಾಡುಗಳ ಲಿಖಿತ ಮೂಲ ಮೌಖಿಕ ಪಠ್ಯ ಎಂಬುದಕ್ಕೆ ಸಾಕ್ಷಿಯಾಗಿದೆ. ಈ ಹಾಡುಗಬ್ಬವನ್ನು ಬರೆದ ಕವಿಸೋಮನ ಹೆಸರು ಹಾಡಿನಲ್ಲೇ ದಾಖಲಾಗಿದೆ (ನೋಡಿ : ಮೊಗವೀರರ ಸಂಸ್ಕೃತಿ ಪು-೧೩೧).

ಒಟ್ಟಾರೆ ಭಾಗವಂತಿಕೆ ಪ್ರಕಾರವು ವೈಷ್ಣವ ಪಂಥದ ಪ್ರಚಾರಕ್ಕಾಗಿ ಅಕ್ಷರಸ್ಥ ಕವಿಯಿಂದ (ಬಹುಶಃ ರಾಮಾನುಜರ ಪ್ರಭಾ ವಲಯದ ಪರಿಣಾಮವಾಗಿ) ಹುಟ್ಟಿಕೊಂಡ ಹಾಡು-ಕುಣಿತಗಳಿಂದ ಕೂಡಿದ ಒಂದು ವಿಶಿಷ್ಟ ಜನಪದ ಕಲಾ ಪ್ರಕಾರವಾಗಿದೆ.

# ಭಾಗವಂತಿಕೆ ಪದಗಳು : ರಾಮಾಯಣ

## ದಶರಥನುದರದಿ ಹುಟ್ಟುವೆ ನಾನು

ಕೇಳಿರಿ ದಶರಥ ರಾಮರ ಚರಿತೆಯ
ಲಾಲಿಸಿ ಕೇಳಿರಿ ಜನರೆಲ್ಲಾ । ಪಲ್ಲವಿ ।

ಕ್ಷೀರಸಾಗರದಲಿರಲು ಶ್ರೀಹರಿಯು
ಮೊರೆಯಿಟ್ಟರು ದೇವತೆಗಳೆಲ್ಲ
ಹರಿ ನಿಮ್ಮ ಮಹಿಮೆಯ ಕರುಣಿಪುದೆನಲು
ನಗುತಾ ವರಗಳನಿತ್ತನು ರಾಮಾ*

ಇಂದ್ರ ನಾರದರು ಸಹಮುನಿಗಳು ಕೂಡಿ
ಚನ್ನಾಗಿ ಭಜಿಸುತ ನರಹರಿಯ
ಬಂದು ಧರೆಯಲೀ ನಮ್ಮನು ರಕ್ಷಿಸು
ಎಂದರು ಸಕಲಾ ಸುರರೆಲ್ಲ

ಎಂದ ಮಾತನು ಕೇಳಿದ ಹರಿಯು
ಇಂದ್ರಾದಿಗಳಿಗೆ ಹೇಳಿದನು
ಬಂದು ನೀವು ಕಪಿ ರೂಪಿನಲಿ
ಚೆನ್ನಾಗಿ ಜನಿಸಿ ಹೋಗೆಂದ

ದಶರಥನುದರದಿ ಹುಟ್ಟುವೆ ನಾನು
ದಶಕಂಠನ ಸಂಹರಿಸುವೆನು
ಶಿಶುಗಳೆ ನಿಮ್ಮನು ಕಾಯ್ವೆನು ನಾನು
ಅಸುರದಲ್ಲಣ ಹರಿನುಡಿದ

---

* ಮುಮ್ಮೇಳದ ಗುಂಪು ಮೊದಲನೆ ಸಾಲನ್ನು ಹಾಡಿದ ಮೇಲೆ ಹಿಮ್ಮೇಳದವರು ಎರಡನೆ ಸಾಲನ್ನು ಹಾಡುತ್ತಾರೆ. ಮೂರನೆ ಸಾಲನ್ನು ಮುಮ್ಮೇಳದವರು ಹಾಡಿದ ನಂತರ ಹಿಮ್ಮೇಳದವರೂ ಕೂಡ ಹೇಳಿ ನಾಲ್ಕನೇ ಸಾಲನ್ನು ಮುಮ್ಮೇಳ ಮತ್ತು ಹಿಮ್ಮೇಳದವರು ಒಟ್ಟಿಗೆ ಹಾಡಿ ಪಲ್ಲವಿಯನ್ನು ಜೊತೆಯಲ್ಲಿ ಹೇಳುತ್ತಾರೆ.

ಹರಿಯ ಕೈಯ್ಯ ಅಪ್ಪಣೆ ತೆಕ್ಕೊಂಡು
ಸುರನಗರಿಗೆ ಬಂದರು ಎಲ್ಲ
ನರಹರಿ ಚಿನ್ಮಯ ರೂಪನು ತಾಳಿ
ಧರೆಗೆ ಬರುವುದು ಬಗೆ ಬ್ಯಾರೆ

ಬ್ರಹ್ಮರೂಪಿನಲಿ ಬಂದರು ತಾವು
ಇಂದ್ರಾನೀಲದ ತೊಡಿಗೆಯನು
ಮಂದಾಲಧರ ಕೊರವಂಜಿಯ ತಾಳಿ
ಬಂದು ಹೇಳಿದನು ಕಂಸಲೆಗೆ

ಬಂದು ಬ್ರಹ್ಮನು ಕಂಸಲೆಯೊಡನೆ
ನಿಂದು ಪೇಳಿದನು ಕಣಿಗಳನು
ಚನ್ನಾಗಿ ನಿಮ್ಮಯ್ಯ ಗರ್ಭದಲಮ್ಮ
ರಾಮಚಂದ್ರ ತಾ ಜನಿಸುವನು

ನಿಮ್ಮಯ ತಪವ ಸಲಿಸುವನವನು
ಕೊಬ್ಬಿದ ಅಸುರರ ಕೊಲ್ಲುವನು
ನಂಬಿದ ಭಕ್ತರ ಪರೆಯುವನಮ್ಮ
ನಿಮ್ಮಯ ಗರ್ಭದಲ್ಲುಟ್ಟುವನು

ಎಂದು ಬ್ರಹ್ಮನು ನುಡಿಯುತ ಪೋದ
ಇಂದುಮುಖಿಯು ಸಂತೋಷದಲಿ
ದಶರಥ ನಲ್ಲೆ ಕಂಸಲೆ ಪೇಳಿ
ಆನಂದದಲಿದ್ದಳು ಹರುಷದಲಿ

ಚಂದ್ರವಾರ ಶುಭ ನಕ್ಷತ್ರದಲಿ
ಕಂಸಲೆಗೆ ಗರ್ಭಾದಾನ
ಬಂದು ರುಸಿಗಳು ಪಿಂಡವ ಕೊಟ್ಟು
ಕುಶಲದಿಂದಿದ್ದಳು ಕಂಸಲೆಯು

ದಿನ ದಿನ ಗರ್ಭದೊಳುದಿಸಲಾಗಿ
ಕೋಟಿ ಸೂರ್ಯನಂತೆಸದಿಹಳು
ನಾಟಕಧರ ನಿಮ್ಮುದರದಲಿರಲು
ಸಹಾಟಿ ಯಾರ್‍ಯೆ ಕಂಸಲೆಗೆ

ಮೂರು ತಿಂಗಳು ತುಂಬಲು ಜಗದಲ್ಲಿರುವ
ವಿಪ್ರರುಗಳನ್ನೇ ಕರೆಸಿದನು
ದಾನಧರ್ಮವ ಮಾಡಿದ ದಶರಥ
ತಣಿಸಿದನಾಗಾ ಭೂಸುರರಾ

ಏಳುತಿಂಗಳು ಶ್ರೀಮಂತ್ರವ ಜಪಿಸಿ
ಭೋರೆಂಬ ವಾದ್ಯಗಳು ಮೊಳಗುತಲಿ
ಮೀರಿದ ವೇದ ಪಾಠಕರು ಪೊಗಳುತ
ಪ್ರೀಯದ ಆಶೀರ್ವಾದಗಳು

ಚೈತ್ರಮಾಸ ಕರ್ಕಾಟಕ ಲಗ್ನದಿ
ಮದ್ಯಾನ ಕಾಲದೊಳು ಆಗಾ
ಸೃಷ್ಟಿಗೊಡೆಯ ಶ್ರೀರಾಮರು ಜನಿಸಿದ
ದಿಟ್ಟಾವ ಕೇಳಿರಿ ಜನರೆಲ್ಲಾ

ರಾಮ ಜನಿಸಲು ಜಗವೆಲ್ಲ ನಲಿಯೆ
ಹೇಮದ ಮಳೆಗಳು ಕರೆದಾವಾಗ
ದೇವದುಂದುಭಿ ಮೊಳಗಿದವಾಕ್ಷಣ
ಸೆರೆಬಿಟ್ಟಿತು ದೇವತೆಗಳಿಗೆಲ್ಲಾ

ಭರತ ಲಕ್ಷ್ಮಣ ಶತ್ರುಘ್ನರು ಜನಿಸಲು
ದಶರಥನೂ ಸಂತೋಷದಲಿ
ದೇಶದ ದೊರೆಗಳಿಗುಡುಗೊರೆ ಕಳುಹಿದ
ತಣಿಸಿದನಾಗಾ ಭೂಸುರರ

ರಾಮ ಲಕ್ಷ್ಮಣ ಭರತ ಶತ್ರುಘ್ನರು
ಠೀವಿಯಿಂದಲೇ ಬೆಳೆಯುತ್ತಿರಲು
ಆಗಲೆ ನಾಲ್ಕೈದೊರುಷವು ತುಂಬಲು
ಸೇರಿಸಿದರು ವಿದ್ಯಾ ಮಠಕೆ

ಓದಿದರಾಗ ನಾನಾ ವಿದ್ಯವ
ಸಾಧನೆಯನ್ನೇ ಕಲಿತವರು
ಮೇದಿನಿಯಲ್ಲೇ ಜೈಸುವರಿನ್ನು
ರಾಮರ ಭುಜಬಲಕೆಣೆಯಿಲ್ಲಾ

ಕೌಶಿಕ ಮುನಿಗಳು ಬಂದರಾಕ್ಷಣದಿ
ಶ್ರೀರಾಮರ ಕೊಡು ದಶರಥನೆಂದು
ಕಾಳರಕ್ಕಸಿಯ ಕೊಲ್ಲಿಸುವೀಕ್ಷಣ
ಮೇದಿನಿಭಾರವನಿಳುಸವೆನು

ಸ್ವಾಮಿ ಕೇಳಿರೈ ಸಣ್ಣವರುಗಳು
ಕಾಳಗವನ್ನು ಬಲ್ಲರೆ ಇವರು
ಯಾತಕೆ ನಿಮಗವರಾ ಮಾತುಗಳು
ಕೋಪದಿಂದಲೇ ಮುನಿ ನುಡಿದ

ರಾಮ ಲಕ್ಷ್ಮಣರ ಶೃಂಗಾರ ಮಾಡಿ
ಪ್ರೇಮದಿಂದರಸಿದಳು ಬಾಲಕರ
ಅಸುರರ ಕುಲವ ಸಂಹರಿಸುವುದೆಂದು
ಶಶಿಮುಖಿ ಕಂಸಲೆ ಹರಸಿದಳು

ಬಂದರು ಕೌಶಿಕ ಮುನಿಯಾಶ್ರಮಕೆ
ನಿಂದು ನೋಡಿದರು ದಿಕ್ಕುಗಳ
ಚೆನ್ನಾಗಿ ಮುನಿಪನ ಪಾದಕೆ ವಂದಿಸಿ
ಬಿಲ್ಲು ಗಂಟೆಯ ಝೇಂಕರಿಸಿ

ರಾಮ ಬರುವುದ ಕಂಡು ರಕ್ಕಸರು
ಘೋರನೆ ಹಲ್ಲಂ ಮೊರೆಯುತಲಿ
ರೊಯ್ಯೆಂದು ರಾಮರು ಬಾಣವ ತೊಡಲು
ಘೋರನೆ ಬಿದ್ದರು ರಕ್ಕಸರು

ರಕ್ಕಸರೆಲ್ಲರ ಕೊಂದನು ರಾಮ
ರಕ್ಷಿಸಿದನು ಕೌಶಿಕ ಮುನಿಯ
ಪರಮ ದಯಾಕರ ಶ್ರೀರಾಮನೆಂದು
ವರಮುನಿಯು ತಾ ಪೊಗಳಿದನು

# ಸೀತೆಯ ಗೆದ್ದನು ಶ್ರೀರಾಮ

ಕೇಳಿರಿ ದಶರಥ ರಾಮರ ಚರಿತೆಯ
ಲಾಲಿಸಿ ಕೇಳಿರಿ ಜನರೆಲ್ಲಾ । ಪಲ್ಲವಿ ।

ಮಿಥಿಲಾಪುರದಲಿ ಜನಕನು ತಾನು
ಧರಯೊಳಗೆಸಗಿದ ಸ್ವಯಂವರವ
ಧರೆಯೊಳಗುಳ್ಳ ದೊರೆಗಳ ಕರೆಸಿ
ಧನುವ ನಿಲ್ಲಿಸಿದ ಧರೆಯೊಳಗೆ

ಕೌಶಿಕಮುನಿ ಕರೆತಂದನು ಸಹವಾಗಿ
ರಾಮ ಲಕ್ಷ್ಮಣರು ಸಹಿತವಾಗಿ
ಬಂದರು ಜನಕನ ಪುರಿಗವರಾಗ
ನಿಂದರು ಸಿಂಹಾಪೀಠದಲಿ

ರಾಮ ಸಂಗ್ರಾಮ ನಿಸ್ಸೀಮ ರಾಮ
ಕೋಮಲ ಕಾಯೋ ಶ್ರೀರಾಮಾ
ಕಾಮಧೇನು ದಶರಥ ರಾಮ
ಕಂಸಲ್ಯಾ ರತ್ನಾಕರ ರಾಮಾ

ಕೋಟಿಕಂದರ್ಪ ತೇಜನೆ ರಾಮ
ಅಸುರದಲ್ಲಣ ಶ್ರೀರಾಮಾ
ಎಸವಾ ಬಿಲ್ಲಂಬೆತ್ತಲೆ ಬೇಕು
ಶಶಿಮುಖಿ ಸೀತೆ ನಿಂದಿಹಳೆ

ಅಂಗ ವಂಗ ಕಳಿಂಗನು ಬಂದ
ಸಿಂಗಾಳ ಬರ್ಬರ ತಾ ಬಂದೆ
ಕೊಂಕಣ ದೇಶದ ಭೂಪರು ಬಂದರು
ಬಿಂಕವ ಮುರಿವರು ಜಗದೊಳಗೆ

ನೇಪಾಳನು ಮಗಧನು ಬಂದ
ಕೋವಿದ ರಾವಣ ತಾ ಬಂದಾ
ಅಸುರರು ಬಂದರೆ ಬಿಲ್ಲನೆತ್ತುವರೆ
ಚಂದ್ರವದನೆ ಸೀತೆ ತಾಹೇವೆಂದು

ಬಿಂಕದ ಅಸುರರ ಕೂಡಿಕೊಂಡು
ಕುಂಭಕರ್ಣ ನಲಿಯುತಾ ಬಂದ
ಧನುವು ಬಲ್ಲೆಯ ಎನ್ನಯ ಬಗೆಯ
ಜನಕಸುತೆಯ ಬಿಡುವವನಲ್ಲಾ

ಬಂದರು ಭೂಮಿಪರು ತಂಡ ತಂಡದಿಂದ
ಬಂದು ನಿಂದರು ಬಿಲ್ಲಿನ ಬಳಿಯಲಿ
ಅಂದು ಜಾನಕಿ ಶೃಂಗಾರವಾಗಿ
ಬಂದಳು ಭದ್ರಾಮಂಟಪಕೆ

ಕಾಮನ ಅಂಗೈ ಆರಗಿಣಿಯಂತೆ
ಕೋಮಲೆಯರ ಸಂಗಡಲಾಗ
ಮೋಹವ ಬೀರುತ ಲಕ್ಷ್ಮಿಜನರಿಗೆಲ್ಲ
ಏರಿದಳಂದಣವಾ ಸೀತೆ

ಬಟ್ಟ ಕುಚದವರಿಟ್ಟಾಡಯ ಬಾಲೆಯರೆಲ್ಲ
ನಿಟ್ಟೇಶಗಂಗಳ ಬಾಲೆಯರೆಲ್ಲಾ
ಮುತ್ತಿನ ಸೀರೆಯನುಟ್ಟುತೊಟ್ಟು
ಅರ್ತಿಯಲ್ಲಿ ಜನ ಸ್ತ್ರೀಯರು ನಲಿಯೆ

ಇಂತೀ ಪರಿಯಲಿ ಕಾಂತೆಯರೆಲ್ಲ
ಹಸ್ತಿಣಿ ಚಿತ್ತಿಣಿ ಮೊದಲಾಗಿ
ಶಂಕಿಣಿ ಪದ್ಮಿನಿ ಸಹವಾಗಿ
ತೆರಳಿದರು ಮದದಾನೆಗಳಂತೆ

ಈ ಪರಿಯಲ್ಲಿ ಸ್ತ್ರೀಯರು ಇರಲು
ಭೂಪರು ತಮ್ಮೊಳು ತಮಮನದೊಳಗೆ
ನಾರಿ ಜಾನಕಿ ಒಲಿಸಲೆ ಬೇಕು
ಎಂದರು ಭೂಪರು ತಮ್ಮೊಳಗೆ

ಧನುವಿಗೆ ಪೂಜೆಯ ಮಾಡಿದ ಜನಕನು
ಕರೆದು ಪೇಳಿದನು ದೊರೆಗಳನು
ನಾರಿ ಜಾನಕಿ ಬಂದು ನಿಂದವಳೆ
ಬೇಗನೆ ಎತ್ತಿರೊ ನೀವೆಲ್ಲಾ

ಚಪ್ಪನ್ನ ದೇಶವನಾಳುವ ದೊರೆಗಳು
ತಪ್ಪದೆ ಬಂದರು ಧನುವನೆತ್ತುವರೆ
ಆರಾರು ಬಂದರು ಅಳವಡ್ಡ ಧನುವು
ಮಾನಭಂಗವಾಗಿ ತಿರುಗಿದರೆಲ್ಲ

ರಾವಣ ಕುಂಬಕರ್ಣ ಕಂಡು ಮುಂಡಾದ
ಮೀರಿದ ಮಗಧವ ಓಡೇ ಹೋದಾ
ಘೋರನೆ ಅಸುರರು ತಲೆಮುಸಿಕಿನಲಿ
ಸೇರ್‍ಯಾರು ತಮ್ಮಯ್ಯ ಪಾಳ್ಯಗಳ

ರಾಮರ ಕರೆದನು ಕೌಶಿಕಮುನಿಯು
ನಾರೀ ತರಬೇಕೆನುತಾ ಪೇಳಲು
ನಾರಿ ಜಾನಕಿ ನೋಡೊ ಲಕ್ಷ್ಮಣನೆಂದು
ರಾಮರೆದ್ದರು ಹರುಷದಲಿ

ದೇವಿಯರ ಪಾದವ ಕಂಡು
ದೇವರಿಗೇಳಿದ ಲಕ್ಷ್ಮಣನು
ದೇವಿಯ ರೂಪವ ವರ್ಣಿಸಲಳವಲ್ಲ
ದೇವ ನೀವೆತ್ತಿರಿ ಧನುವನ್ನು

ರಾಮರೆದ್ದರು ಜಯಜಯವೆನುತ
ದೇವದುಂದುಭಿ ಮೊಳಗಿದವು
ದೇವತೆಗಳು ಪೂಮಳೆಗರ್ದರೆಂದು
ರಾಮರೆತ್ತಿದರು ಧನುವನ್ನು

ನಾರಿ ಜಾನಕಿ ಮಾಲೆಯ ಹಾಕಲು
ಹೇಮದ ಅರುಲೋಲೆ ಪೂಜಿಸಿದ
ರಾಮದ ಪಾದವ ಪೂಜಿಸಿ ಜನಕನು
ಕರೆತಂದನು ಹೊನ್ನಂದಣದಿ

ಜಯಭೇರಿಯ ವರದಿಂದಲೆ ರಾಮರು
ಬಂದರು ಜನಕನ ಪುರಿಗವರಾಗ
ರಾಮ ಜಾನಕಿ ಸಹವಾಗಿ ಬಂದರು
ರಾಯ ಜನಕನ ಅರಮನೆಗೆ

ಬಂದವರಿಗೆ ಬೀಡಾರವನಿತ್ತು
ಮಜ್ಜನವನ್ನೆ ಮಾಡಿಕೊಂಡು
ತಂದುಕೊಟ್ಟರು ಆಬರಣಗಳ
ರಾಮರೆಸದರು ಹರುಷದಲಿ

ದಶರಥಗೋಲೆಯ ಬರೆದನು ಜನಕನು
ಸೀತೆಯ ಗೆದ್ದನು ಶ್ರೀರಾಮ
ಶೀಘ್ರದಿಂದಲೆ ಮದುವೆಗೆ ಬನ್ನಿ
ಭರತ ಶತೃಘ್ನರ ಕರೆತನ್ನಿ

ಎಂದ ಮಾತನು ದಶರಥ ಕೇಳಿ
ಕೊಡಿಸಿದನವರಿಗೆ ಉಡುಗೊರೆಯಾ
ತಾಳಿದ ಹರುಷವ ಪೇಳಿದ ಸತಿಗೆ
ಬೇಗದಿ ಜನಕನ ಪುರಿಗೆ ಬಂದು

ಎದುರುಗೊಂಡನು ದಶರಥರಾಯನ
ಕರೆತಂದನು ಜನಕನು ಬೇಗ
ಧುರಧೀರ ರಾಮರು ಬಂದು
ತಂದೆಯ ಚರಣಕ್ಕೆರಗಿದರು

ಬಂದವರಿಗೆ ಬೀಡಾರವನಿತ್ತು
ಚಂದದಿಂದಲುಪಚರಿಸಿ ಜನಕನು
ನಾನಾ ದೇಶದ ದೊರೆಗಳ ಕರಸಿ
ರೀವಿಸಿ ಮದುವೆಯ ಮಂಟಪವ

ರಾಮ ಜಾನಕಿ ಶೃಂಗಾರವಾಗಿ
ಹೇಮಖಚಿತ ಹಸೆಗೆ ಬರಲು
ಕೋಮಲ ಕಾಯ ಶ್ರೀರಾಮಚಂದ್ರಗೆ
ಧಾರೆಯನೆರದುನು ಜನಕರಾಯಾ

ಬಂದ ಭೂಸುರರಿಗೆ ಕೊಟ್ಟನು ದಕ್ಷಿಣೆ
ದೊರೆಗಳಿಗುಡುಗೊರೆ ಕಳುಹಿದನು
ನಾನಾ ವಿಧದಿಂ ತಣಿಸಿದನೆಲ್ಲರ
ದಶರಥನೂ ಸಂತೋಷದಲಿ

ವೀರಲಕ್ಷ್ಮಣಗೂರ್ಮಿಳೆಯನು ಕೊಟ್ಟು
ಭರತಗೆ ಮಾಳವಿಯ ಕೊಟ್ಟು
ಶತೃಘ್ನಗೆ ಶ್ರುತಕೀರ್ತಿಯ ಕೊಟ್ಟು
ಧಾರೆಯನೆರೆದನು ಜನಕರಾಯಾ

ಮಂಗಳವೆನ್ನಿರಿ ಸೀತಾರಮಣಗೆ
ಮಂಗಳವೆನ್ನಿರಿ ಲಕ್ಷ್ಮಣಗೆ
ಮಂಗಳವೆನ್ನಿರಿ ಭರತಶತೃಘ್ನಗೆ
ಮಂಗಳವೆನ್ನಿರಿ ಮೂಜಗವೆಲ್ಲಾ

# ಬಂದರು ರಾಜಬೀದಿಯಲ್ಲಿ

ಜಯಜಯವೆನ್ನಿರಿ ಜಾನಕಿರಮಣಗೆ
ಜಯವೆಂದು ಪಾಡಿರಿ ಮೂಜಗವೆಲ್ಲಾ । ಪಲ್ಲವಿ ।

ಒಂದು ತಿಂಗಳು ಜನಕ ಪುರಿಯಲಿ
ಮಂದಿ ಕುದುರೆ ಹೊನ್ನಂದಣದಿ
ಬಂದರು ದಶರಥ ಶ್ರೀರಾಮಚಂದ್ರರು
ಜಾನಕಿ ಸಹಿತ ಅಯ್ಯೋಧ್ಯಾಪುರಿಗೆ

ತರತರದಲಿ ರಾಮರಿಗೆ ಕಾಣಿಕೆಯ
ಹರುಷದಿ ತಂದಿತ್ತರೆ ಆಗ
ಬಂದವರನು ಮನ್ನಿಸಿದಾ ದಶರಥ
ಘನ ಹರುಷದಲ್ಲಿದ್ದನು ಆಗ

ರಾಜ್ಯವನಾಳುವ ಶ್ರೀರಾಮಚಂದ್ರಗೆ
ನವರತ್ನದ ಆರತಿಯೆತ್ತಿ
ಬಗೆಬಗೆ ಕುರುಜಿನಾರತಿ ತಂದರು
ಜಾನಕಿಪತಿ ಶ್ರೀರಾಮರಿಗೆ

ಕೇರಿಕೇರಿಯಲಿ ಶೃಂಗಾರ ಮಾಡಿ
ರಾಮದೇವರು ಬರುವಾನೆಂದು
ವಾರಾಂಗನೆಯರು ಉಟ್ಟುತೊಟ್ಟುಕೊಂಡು
ಎರಿದರು ಕರುಮಾಡಗಳ

ನಾನಾದೇಶದ ವಸ್ತುವ ತರಿಸಿ
ನಾಡು ಪ್ರಜೆಗಳಾ ಕರೆಸಿದನು
ತರತರದಲ್ಲಿ ಉಡುಗೊರೆ ಉಚಿತವ
ಕೊಡಿಸಿದನಾಗಾ ಶ್ರೀರಾಮಾ

ಬೀದಿಬೀದಿಯಲಿ ಶೃಂಗಾರಮಾಡಿ
ತೋರಣ ಚಪ್ಪರ ಹಾಕಿಸಿದ
ಸಾಲಾಗಿ ಪರಿವಾರದ ಪ್ರಜೆಗಳಿಗೆಲ್ಲ
ಶ್ರೀಲೋಲರಾಮ ಉಡುಗೊರೆಯಿತ್ತ

ನಾಟಕ ಸ್ತ್ರೀಯರು ಆಡುತ್ತಿರಲು
ನೋಟಕರೆಲ್ಲ ಮೋಹಿಸುತಿರಲು
ಕೂಟದ ಜನರು ಬೆರಗಾಗಿ ನಿಂದರು
ನಾಟಕಧಾರನು ತೆರಳಿದನು

ಈ ವೈಭವದಲಿ ಪಟ್ಟಣದವರೆಲ್ಲ
ಕೋವಿದ ರಾಮರ ಉಪಚರಿಸುವರು
ಧಾರುಣಿಯೊಳಗಿದ್ದ ಭೂಸುರ ಮುನಿಗಳ
ತಣಿಸಿದರು ಸುವರ್ಣದಾನದಲಿ

ರಾಮ ಲಕ್ಷ್ಮಣ ಭರತ ಶತೃಘ್ನರು
ಠೀವಿಯಿಂದಲಿ ಬರುತಿರಲು
ಮೂಲೋಕಕೊಡೆಯ ಮುಕುಂದ
ರಾಮರ ಮೆರವಣಿಗೆ ರಚಿಸಿದರಾಗ

ನಾನಾ ಜಾತಿಯು ಶೃಂಗಾರವಾಗಿ
ಶ್ರೀರಾಮ ಮೆರವಣಿಗೆ ನೋಡುವರೆ
ವಾರಂಗನೆಯರು ಉಟ್ಟುತೊಟ್ಟುಕೊಂಡು
ಬಂದರು ರಾಯಾನೋಲಗಕೆ

ಮುತ್ತಿನಹಾರವ ಹಾಕಿದ ರಾಮ
ಒಪ್ಪುವ ಕರ್ಣಕುಂಡಲವು
ಹೆಚ್ಚಿನ ಪಚ್ಚೆಯ ಪದಕವ ಧರಿಸಿ
ಶಾಲು ನಿರಂಜನ ಹೊದಿಕೆಗಳು

ಮುತ್ತಿನ ಅಂದಣವೇರಿದ ರಾಮ
ಸತ್ತಿಗೆ ಚಾಮರ ಬೀಸುತಲೆ
ಜಗನ್‌ಜ್ಯೋತಿಯು ಬೆಳಕಿನಲಿ
ಚಿತ್ತಜನಯ್ಯಾ ತೆರಳಿದನು

ರಾಮರ ಬಲದಲಿ ಸಾವಿರ ತೇರು
ವಾರಂಗನೆಯರು ಲೆಕ್ಕವೆ ಇಲ್ಲಾ
ಘೋರೆಂಬ ವಾದ್ಯವು ಮೊಳಗುತಲಾಗ
ಬಂದರು ರಾಜಬೀದಿಯಲಿ

ಜಗಜ್ಯೋತಿಯು ಒಂದು ಲಕ್ಷಕೋಟಿಯು
ಆಡುವ ನಾಟಕರು ಗಡಿಯೇ ಇಲ್ಲಾ
ಪಾಡುವ ಪಾಠಕರಳವಲ್ಲ
ಕೈವಾರುದಿ ಬಂದನೆ ಶ್ರೀರಾಮ

ಪಟ್ಟಣದವರೆಲ್ಲ ಶೃಂಗಾರವಾಗಿ
ಎಡಬಲದಲಿ ತಾವ್ಬರುತಿರಲು
ಸತ್ತಿಗೆ ಚಾಮರ ದಾಳಿಸಲಾಗ
ಒಪ್ಪಿದನಾಗಾ ಶ್ರೀರಾಮಾ

ಬೀದಿಬೀದಿಯಲಿ ಆರತಿ ತಂದರು
ರಾಮ ಜಾನಕಿಗೆ ಎತ್ತುವರು
ಎತ್ತಿದ ಹೆಣ್ಣಳಿಗುಡುಗೊರೆ ಕೊಡುತ
ಚಿತ್ತಜನಯ್ಯಾ ತೆರಳಿದನು

ಅಲ್ಲಿಗಲ್ಲಿಗೆ ನಿಲ್ಲುತ ರಾಮರು
ಫಲ್ಲಫಲ್ಲನೆ ಹೊಳೆಯತಲೆ
ಮೆಲ್ಲಮೆಲ್ಲನೆ ಸಾಗಿತು ಅಂದಣ
ದಶರಥ ರಾಮ ಬರುತಿರ್ದ

ರಾಜಾಧಿರಾಜನೆ ರವಿಕೋಟಿತೇಜನೆ
ರಾಜದಲ್ಲಣಾ ಶ್ರೀರಾಮಾ
ಪರಬಲಮರ್ಧನ ಕೇಸರಿ ರಾಮ
ಕಂಸಲೆ ಗರ್ಭೋದಯಾ ರಾಮಾ

ವೀರಪರಾಕು ಧೀರಪರಾಕು
ಕೋವಿದ ರಾಮ ಶೂರಪರಾಕು
ದಶರಥನಂದನ ಧೀರಪರಾಕು
ದಶಶಿಹರಣನೇ ಪರಾಕು

ಈ ವೈಭವದಲಿ ಮೆರವಣಿಗೆಯೊಳು
ಸೋಮಸೂರ್ಯನಂತೆಸದಿಹಳು
ಬಂದವರಿಗೆ ನೇಮವನಿತ್ತ ರಾಮರು
ತಾಯಿ ಕಂಸಲೆಗೆರಗಿದರು

ಬಂದರಸುಗಳಿಗೆ ವೀಳ್ಯವ ಕೊಟ್ಟು
ಮಂದಿ ಮಾರ್ಬಲಕಪ್ಪಣೆಯ
ಸೋದರರೆಲ್ಲರ ಕಳುಹಿದನು
ಬಂದನು ದಶರಥನೋಲಗಕೆ

ತಂದೆ ಕೇಳಿರೈ ಮಂದಿಯ ಕಳುಹಿದೆ
ಬಂದವರಿಗೆ ಉಡುಗೊರೆಯನಿತ್ತೆ
ಸಂದರುಶನದ ಬ್ರಾಹ್ಮಣರ ತಣಿಸಿದೆ
ಅನ್ನದಾನ ಸುವರ್ಣದಾನದಲಿ

ಎಂದ ಮಾತನು ದಶರಥ ಕೇಳಿ
ಆನಂದದಲಿರ್ದನು ಮನದಲ್ಲಿ
ರಾಜ್ಯಭಾರವ ರಾಮರಿಗೀವೆನು
ಎಂದು ಮಂತ್ರಿಯ ಕರೆಸಿದನು

ಈ ಪರಿಯಲಿ ತನ್ನ ರಾಜ್ಯದ ಜನಗಳ
ತಾಮಸವಿಲ್ಲದೆ ಕರೆಸಿದನು
ಭೂಪ ದಶರಥ ಬಂದನೋಲಗಕೆ
ಮಂತ್ರಿ ಮಾನ್ಯರ ಒಡಗೊಂಡು

ಪಟ್ಟಣವನು ಶೃಂಗರಿಸಿದ ಮಂತ್ರಿ
ಕಟ್ಟಿಸಿದನು ಗುಡಿ ತೋರಣವ
ಉಟ್ಟರು ಪಟ್ಟಾವಳಿಗಳ ಮಂದಿ
ದಿಟ್ಟನೆ ಎಲ್ಲಾ ಶೃಂಗಾರವಾಗಿ

ಮಂದಿಯು ಶೃಂಗಾರವಾಗಿಯೆ ಬಂದರು
ನಿಂದರು ಓಲಗದೆಡೆಯಲ್ಲಿ
ಬಂದರು ರಾಮರು ಪಟ್ಟಾಭಿಷೇಕಕ್ಕೆ
ಸಂತೋಷದಿ ಊರವರೆಲ್ಲಾ

# ನಮ್ಮ ಭರತಗೆ ಪಟ್ಟವ ಕಟ್ಟಿ

ಬಂದಳು ಕೈಕೆಯು ದಶರಥನೋಲಗಕೆ
ನಿಂದು ಮಾತಾನಾಡಿದಳು । ಪಲ್ಲವಿ ।

ಹಾರಾಹೀರಾವಳಿಗಳ ತೊಟ್ಟು
ಮುತ್ತಿನ ವಂಟಿ ಸರಗಳನಿಟ್ಟು
ಚಂದ್ರನಂತೆ ತಿಲಕವನಿಟ್ಟು
ಬಂದರು ರಾಮರು ಪಟ್ಟಕ್ಕೆ

ದಶರಥರಾಯ ಕೇಳೈ ನೀವು
ಬಂದರು ರಾಮರು ಶೃಂಗಾರವಾಗಿ
ಅಂದುಯಿತ್ತಾ ವರವನು ಎನಗೆ
ಇಂದು ಪಾಲಿಸಬೇಕೆಂದು

ನಮ್ಮ ಭರತಗೆ ಪಟ್ಟವಕಟ್ಟಿ
ನಿಮ್ಮ ರಾಮರ ಆಡವಿಗೆ ಕಳುಹಿ
ಎನ್ನ ಮಗ ರಾಜ್ಯವನಾಳಲಿ
ನಿಮ್ಮ ರಾಮರು ತಿರುಗಲಿ ಎಂದು

ಎಂದ ಮಾತನು ದಶರಥ ಕೇಳಿ
ನೊಂದುಕೊಂಡನು ಮನದಲ್ಲಿ
ಕಂದ ರಾಮರ ಅಗಲವುದೆಂತು
ಬ್ರಹ್ಮಲಿಖಿತವು ತಪ್ಪುವುದೆಂತು

ಎಂದ ಮಾತನು ರಾಮರು ಕೇಳಿ
ನಿಂದರು ಹೊರಬಾಗಿಲಲವರು
ಬಂದ ಗೊಲ್ಲರು ಈ ವಾರ್ತೆಗಳ
ತಂದು ರಾಮರಿಗೇಳಿದರು

ಸ್ವಾಮಿ ಕೇಳಿರೈ ಶ್ರೀರಾಮಚಂದ್ರರೆ
ಕೈಕೆಯು ನುಡಿದಾ ನುಡಿಗಳನು
ಭರತಗೆ ಪಟ್ಟವ ಕಟ್ಟಬೇಕಂತೆ
ಎಂದಳು ರಾಯನೋಲಗದಿ

ಎಂದ ಮಾತನು ರಾಮನು ಕೇಳಿ
ಚಂದವಾಯಿತು ಎಂದೆನುತಾ
ತಿರುಗಿಬಂದರು ಕಂಸಲೆ ಮನೆಗೆ
ತೆರಳುವೆನು ನಾ ವನಕೆಂದು

ತಾಯಿ ಕಂಸಲೆ ನುಡಿಗಳ ಕೇಳಿ
ಬಂದಳು ದಶರಥನೋಲಗಕೆ
ರಾಮಚಂದ್ರನಿಗೆ ವನವಾಸವಂತೆ
ಭರತಗೆ ರಾಜ್ಯಾಭಾರವಂತೆ

ಕೇಳಲು ದಶರಥ ಮೂರ್ಛೆಯೊಳುರುಳಿ
ರಾಮಾ ರಾಮಾ ಎಂದೆನುತ
ಮಂದಿಗಳು ಮಂತ್ರಿಗಳು ಸಹಿತ
ನೊಂದುಕೊಂಡರು ಮನದಲ್ಲಿ

ಭೂಮಿಯ ಭಾರವನಿಳುಹಲು ರಾಮರು
ಧರೆಯೊಳಗೆ ಅವತರಿಸಿದರು
ಅಸುರರ ಶಿಕ್ಷಿಸಿ ಸುರರನು ಕಾಯ್ವೆನು
ಎಂದರು ರಾಮರು ತಮ್ಮೊಳಗೆ

ಪಟ್ಟಣದ ಮಂದಿಯೆಲ್ಲರು
ಬಿಟ್ಟರು ಅನ್ನಾಹಾರಗಳ
ಸೃಷ್ಟಿಗೊಡೆಯರು ವನಕೆ ತೆರಳುವರೆಂದು
ಮರುಗುತಲಿದ್ದರು ಪುರಜನರು

ಜನರುಗಳೆಲ್ಲಾ ಅಯ್ಯೋಧ್ಯಪುರದಲಿ
ನಾನಾ ಪರಿಯಲಿ ಚಿಂತಿಪರು
ರಾಮ ಜಾನಕಿಯು ಆಭರಣವ ತೆಗೆದರು
ಉಟ್ಟರು ನಾರುಸೀರೆಗಳ

ದಶರಥರಾಯ ಚಿಂತಿಸಲೇಕೆ
ಬ್ರಹ್ಮಬರಹವ ಮಿಾರುವರುಂಟೆ
ರಾಮ ಜಾನಕಿ ಸಹವಾಗಿ
ತೆರಳಿದರು ವನವಾಸಕ್ಕೆ

ಈ ವಿವರವನ್ನು ಲಕ್ಷ್ಮಣ ಕೇಳಿ
ಬೇಗದಿ ಬಂದನು ಶೀಘ್ರದಲಿ
ದೇವದೇವನ ಪಾದಕೆ ವಂದಿಸಿ
ದೇವ ಬರುವೆ ಸಂಗಡದಲೆಂದ

ಎಂದ ಮಾತ ರಾಮರು ಕೇಳಿ
ಬೇಡ ತಮ್ಮ ನೀ ಹೋಗೆಂದ
ಬ್ರಹ್ಮಬರಹ ನಮ್ಮಿಬ್ಬರಿಗಲ್ಲವೆ
ನೀನು ಸುಮ್ಮನೆ ಹೋಗೋ ಲಕ್ಷ್ಮಣನೆ

ಕಂಬನಿದುಂಬಿದ ಲಕ್ಷ್ಮಣದೇವ
ಅಂಭುಜನಾಭರು ಸಹವಾಗಿ
ತಂದೆ ರಾಮರ ಪಾದದ ಬಳಿಯಲಿ
ಅಣ್ಣನ ಸೇವೆಯ ಮಾಡುವೆನೆಂದ

ರಾಮ ಲಕ್ಷ್ಮಣ ಸೀತಾದೇವಿ
ರಾಜ ಬೀದಿಯಲಿ ಬರುತಿರಲು
ನಾರಿಯರೆಲ್ಲರು ಕಂಬನಿ ದುಂಬಿ
ರಾಮರು ಬಿಟ್ಟರು ಅಯೋಧ್ಯಾಪುರವ

ದಶರಥ ಮಂತ್ರಿ ಸಚಿವರು ಕೂಡಿ
ನಾಡ ಪ್ರಜೆಗಳು ಶೋಕದಲಿ
ಭರತಗೆ ಪಾದುಕೆ ಕೊಟ್ಟು
ರಾಮರು ಬಂದರು ಚಿತ್ರಕೂಟಕ್ಕೆ

ತಂದೆ ದಶರಥ ಕಂಸಲೆ ಸಹಿತ
ಮಂದಿಗಳನ್ನು ಕಳುಹಿದನು
ರಾಮಚಂದ್ರರು ಮುನಿಗಳು ಕೂಡಿ
ಸಂತೋಷದಲ್ಲಿದ್ದರು ಶ್ರೀರಾಮಾ

ಹಣ್ಣುಗಳನ್ನು ತರುವನು ಲಕ್ಷ್ಮಣ
ಅಣ್ಣ ರಾಮರ ಊಟಕ್ಕೆ
ಚನ್ನಾಗಿ ಸೇವೆಯ ಮಾಡುತ ಲಕ್ಷ್ಮಣ
ಅಣ್ಣನ ರಾತ್ರಿ ಕಾದಿದ್ದ

ಖರದೂಷಣರು ಬಂದರು ವನಕೆ
ದೂರದಿ ರಾಮರ ಕಾಣುತಲೆ
ಕೆಡಿಸಿದನಿವನು ನಮ್ಮಯ ಮನವ
ಕೊಲ್ಲ ಬೇಕೆಂದಿವರನ್ನು

ಬಲ್ಲಿದ ಅಸುರರು ಬಂದರು ಆಗ
ಎಲ್ಲಾ ರುಸಿಗಳು ಓಡಿದರು
ಮೆಲ್ಲಮೆಲ್ಲನೆ ರಾಮರು ಬಾಣವ
ಸೇರಿಸಿದರು ಖರದೂಷಣರಿಗೆ

ಅಲ್ಲಲ್ಲಿ ಬೆದರುತ ಮೆಲ್ಲನೆ ನೋಡುತ
ಘಲ್ಲಘಲ್ಲನೆ ಮೊರೆಯುತಲಿ
ರಾಮರಕ್ಷ್ಮಣರು ಬಾಣವ ತೊಟ್ಟು
ಸಂಹರಿಸಿದರು ಖರದೂಷಣರ

ಖರದೂಷಣರನ್ನು ಕೊಂದನು ರಾಮ
ಕರುಳಾ ಹರಹಿದ ಧರೆಯಲ್ಲಿ
ಅಣ್ಣಂದಿರು ಸತ್ತ ಸುದ್ದಿಯ ಕೇಳಿ
ಕನ್ನೆ ಧರಿಸಿದಳು ಮಾಯಾರೂಪವನು

## ದೂರು ಹೇಳಿದಳು ರಾವಣಗೆ

ಬಂದಳು ಅಸುರೆಯು ರಾಮರ ಬಳಿಗೆ
ನಿಂದಳು ದಿವ್ಯಾ ರೂಪಿನಲೀ । ಪಲ್ಲವಿ ।

ಚಿಕ್ಕಪ್ರಾಯದವಳು ತಾನಾಗಿ
ಕಕ್ಕಸ ಕುಚಗಳು ಹೊಳೆಯುತಲಿ
ದಿಟ್ಟನೆ ಬಂದಳು ರಾಮರ ಬಳಿಗೆ
ತಕ್ಕವಳೆನ್ನ ಆಳೆಂದು

ನೋಡಿದನಾಗಾ ರಾಮ ತಾಟಕಿಯ
ಆಸುರೆಯ ಮಾಯನೆಲ್ಲವನು
ವರಿಸುವನಲ್ಲ ಸತಿಯೆನಗುಂಟು
ಕೆಟ್ಟ ಹೆಂಗಸೇ ಹೋಗೆಂದ

ವಲ್ಲೆನು ನನಗೆ ಸತಿಯೆನಗುಂಟು
ತಮ್ಮನ ಬಳಿಗೆ ಹೋಗೆಂದ
ಮೆಲ್ಲನೆ ಬರೆದನು ಬೆನ್ನಲಿ ಲಿಪಿಯ
ನಮ್ಮ ತಮ್ಮಗೆ ತೋರೆಂದ

ನೋಡು ಲಕ್ಷ್ಮಣ ಅಸುರೆಯು ಇವಳು
ಕೇಳದೆ ಕಿವಿ ಮೂಗನು ಕೊಯ್ಯುವುದು
ಭೋರನೆ ಅಸುರೆಯು ಕದ್ದೋಡಿದರೆ
ರಾಮಬಾಣದಲಿ ಕೆಡಹುವುದು

ಬಂದಳು ಅಸುರೆಯು ಲಕ್ಷ್ಮಣನ ಬಳಿಗೆ
ನಿಂದಳು ದಿವ್ಯಾ ರೂಪಿನಲಿ
ಅಂದವ ತೋರುತ ಚಂದವ ಬೀರುತ
ನಿಂದಳು ಅಸುರೆಯು ನೋಡುತಲಿ

ಬಗೆ ಬಗೆಯಲಿ ಸುಳಿದಾಡುತ ಅಸುರೆಯು
ನಾನಾ ಕಲೆಗಳ ತೋರುತಲಿ
ಏನು ಮಾಡಿದರು ಸುಮ್ಮನೆ ಇರುವನು
ವೀರ ಲಕ್ಷ್ಮಣಾಗೆ ಎಣೆಯಿಲ್ಲ

ರಾಮರ ಬಳಿಯಿಂದ ಬಂದೆನು ನಾನು
ವರಿಸಲು ಬೇಕು ಎನ್ನನು ನೀನು
ನೋಡು ಎನಗೆ ಗುರುತನು ಕೊಟ್ಟರು
ತೋರಿದಳಾಗಾ ರಕ್ಕಸಿಯು

ರಾಮರು ಕೊಟ್ಟಾ ಗುರುತನು ನೋಡಿ
ಓದಿದನಾಗಾ ಲಕ್ಷ್ಮಣನು
ಬೇಗದಿ ಅಸುರೆಯ ಮೂಗು ಮೊಲೆಗಳ
ಶೀಘ್ರದಿ ಕೊಯ್ದನು ಲಕ್ಷ್ಮಣನು

ಅಸುರೆಯು ತಾನು ಘೋರೆಂದು ಮೊರೆಯುತ
ಅಬ್ಬರಿಸಿದಳೂ ಧರೆಯಲ್ಲಿ
ಕೊಬ್ಬಿದ ಅಸುರೆಯು ನಿನ್ನ ಕೊಲ್ಲುವೆನೆಂದು
ಗದ್ದರಿಸಿದಳೂ ಲಕ್ಷ್ಮಣನ

ಬಂದಳು ಅಸುರೆಯು ಲಂಕಾಪುರಕೆ
ದೂರು ಹೇಳಿದಳು ರಾವಣಗೆ
ಸೀತೆಯೆಂಬುವಳು ಕೋಮಲೆಯಿಹಳು
ಜಾತಿ ನಾಯಕಿ ಕೇಳಣ್ಣಾ

ಕಾಕಾಸುರನೆಂಬ ಅಸುರನ ಶಾಪದಿ
ಜನಿಸಿದನಾಗಾ ಹೃದಯದಲಿ
ಆಗಲೆ ತಾವು ಮೋಕ್ಷವ ಪಡೆದು
ಕೋಪದಲಿದ್ದನು ಶ್ರೀರಾಮ

ರಾವಣ ಈ ವಾರ್ತೆಯ ಕೇಳಿ
ಘೋರೆಂದು ಹಾರಿದ ಸಭೆಯೊಳಗೆ
ರಾಮ ಲಕ್ಷ್ಮಣರು ಬಂದಿಹರಂತೆ
ಪೃಥ್ವಿಗೆ ಬಹು ಪರಾಕ್ರಮರಂತೆ

ಇಂತೀ ಪರಿಯಲಿ ರಾವಣ ಬೇಗ
ಸಂತೈಸಿದನು ತಾಟಕಿಯ
ಸೀತೆಯ ತರುವೆನು ತಾಮಸ ಬೇಡ
ಸುಮ್ಮನೆ ಇರು ನೀ ಪುರದೊಳಗೆ

ಮಾರೀಚನನು ಕರೆದನು ರಾವಣ
ಹೋಗಿ ಬಾರೊ ವನಕೆ ಎಂದು
ಹೊಂಮೃಗವಾಗಿ ಸುಳಿದಾಡೊ ಬೇಗದಿ
ಜಾನಕಿ ಬೇಡುವಳು ಮೃಗವನ್ನು

ರಾವಣ ಕೇಳಯ್ಯ ಶ್ರೀರಾಮಚಂದ್ರರು
ಅವತರಿಸಿದರು ಧರೆಯೊಳಗೆ
ಅಸುರರ ಶಿಕ್ಷಿಸಿ ಸುರರನು ಕಾಯ್ವನು
ದೇವ ದೇವನ ಚಿಂತೆಯು ಬೇಡ

ಎಂದು ರಾವಣಗೆ ಬುದ್ಧಿಯ ಹೇಳಲು
ಚಂದ್ರಾಯುಧವಾ ಜಡಿದನು ಬೇಗ
ಕೊಲ್ಲುವೆ ನಿನ್ನ ಚೆಲ್ಲುವೆ ರಕುತವ
ನಿಲ್ಲದೆ ಹೋಗೊ ವನಕೆಂದ

ಎನ್ನನ್ಯಾತಕೆ ಕೊಲ್ಲುವೆಯಯ್ಯ
ಪೋಗುವೆನು ರಾಮರ ಬಳಿಗೆ
ನಿಲ್ಲದೆ ಸುಳಿವೆನು ಮೋಕ್ಷವ ಪಡೆವೆನು
ಸುಮ್ಮನೆ ಬಾರೈ ರಾವಣನೆ

# ತರಲೇ ಬೇಕಾ ಮೃಗವನ್ನು

ಬಂದಳು ಅಸುರೆಯು ರಾಮರ ಬಳಿಗೆ
ನಿಂದಳು ದಿವ್ಯಾ ರೂಪಿನಲಿ । ಪಲ್ಲವಿ ।

ಮಾರೀಚನು ಹೊಂಮೃಗವಾಗಿ ಸುಳಿಯುತ
ತೆರಳಿದನಾಗಾ ಲಂಕೆಯ ಬಿಟ್ಟು
ಲಂಕೆಯ ಬಿಟ್ಟು ಬಂದನು ವನಕೆ
ಸುಳಿದನು ಸೀತೆಯ ಎದುರಿನಲಿ

ಸಣ್ಣ ಸಣ್ಣ ಕಾಲುಬೆರಳು
ಸಾಲಿಗುರುಳು ಪೂರ್ಬುಗಳ
ಸಾಲಿಗುರುಳು ಪೂರ್ಬುಗಳ
ವಲಿಸಬೇಕಾ ಮೃಗವನ್ನು

ನೋಡಿದ ರಾಮ ಮೃಗದ ಚಲ್ವಿಕೆಯ
ನಾಡಿನೊಳಿಲ್ಲಾ ಈ ಮೃಗವು
ನೋಡಿದರೆ ತೊಲಗುವುದೀ ಮೃಗವು
ಸೋಜಿಗವನು ಕಂಡಿರಿ ದೇವ

ಚಿನ್ನದ ಹಾಗಿರುವ ಮೃಗವು
ಬಣ್ಣದ ಸುತ್ತಲು ಪಂಚವರ್ಣ
ಅಂದದ ಮೃಗವನ್ನು ಕಂಡಳು ದೇವಿ
ತರಲೇ ಬೇಕಾ ಮೃಗವನ್ನು

ಸೀತೆಯೆ ಕೇಳು ಅಸುರರು ಅವರು
ನಾನಾ ಬಗೆಯಲಿ ತಿರುಗುವರವರು
ಬೇಡ ಮೃಗವು ಸುಮ್ಮನೆ ಇರು ನೀ
ರಾಮನು ಜಾನಕಗೇಳಿದನಾಗ

ಎಂದರೆ ಸೀತೆ ಕೇಳದೆ ತಾನು
ನೊಂದು ನುಡಿದಳು ರಾಮರಿಗೆ
ತಂದಲ್ಲದೆ ಬಿಡೆನೆಂದಳು ಜಾನಕಿ
ನೊಂದುಕೊಂಡಳು ಮನದಲ್ಲಿ

ಸೀತೆಯೆ ಮನದಲಿ ನೋಯುವುದೇಕೆ
ತರುವೆನು ಮೃಗವನು ಎಂದನು ರಾಮ
ತಾರೈ ಲಕ್ಷ್ಮಣ ಬಾಣವನೆಂದು
ರಾಮರು ನಡೆದರು ಹಿಂದಟ್ಟಿ

ಸಿಕ್ಕದು ಮೃಗವು ಓಡುವುದಾ ಮೃಗವು
ಠಕ್ಕಿನಲಿ ತೊಲಗುವುದಾ ಮೃಗವು
ಠಕ್ಕನೆ ರಾಮರು ಬಾಣವ ಬಿಡಲು
ಅಡಗಿ ಹೋಗುವುದಾ ಮೃಗವು

ಇಂತೀ ಪರಿಯಲಿ ರಾಮರ ದಣಿಸಿ
ರಾಮ ರಾಮ ಎಂದು ಕೂಗುತಲಿ
ಕೂಗಿದ ಧ್ವನಿಯನು ಕೇಳಿದ ಜಾನಕಿ
ಬೇಗನೆ ಹೋಗೈ ಲಕ್ಷ್ಮಣರೆ

ಎಂದ ಮಾತನು ಲಕ್ಷ್ಮಣ ಕೇಳಿ
ರಾಮರಿಗೆ ಅಪಜಯವುಂಟೆ
ಕೋಮಲೆ ಸೀತೆ ಸುಮ್ಮನೆ ಇರು ನೀ
ಎಂದು ನುಡಿದನು ಲಕ್ಷ್ಮಣನಾಗ

ಯಾಕೊ ಲಕ್ಷ್ಮಣ ಏನು ಯೋಚಿಸುವೆ
ಮುನ್ನಿನ ಲಕ್ಷ್ಮಣನಲ್ಲ ನೀನು
ಆಳುವೆನೆಂಬ ಭ್ರಮೆಗಳು ಉಂಟೆ
ಎಂದಳು ಜಾನಕಿ ಲಕ್ಷ್ಮಣಗೆ

ದಿವ್ಯರೂಪಿನಲಿ ಬರೆದನು ಲಕ್ಷ್ಮಣ
ಏಳು ಮಂತ್ರಗಳ ದಾಂಟಿ ನೀ ಬರಬೇಡ
ಸಾರಿ ಹೇಳುವೆ ಕೇಳು ಜಾನಕಿದೇವಿ
ಪರ್ಣಶಾಲೆಯಲಿ ಇರು ಎಂದ

ಲಕ್ಷ್ಮಣ ದೇವರು ಬಂದರು ಬೇಗ
ಮೃಗವನು ಬೆಂಬತ್ತಿದರಾಗ
ರಾಮಬಾಣದಿ ಮೃಗವು ಬೀಳಲು
ರಾಮಾ ರಾಮಾ ಎಂದಿತು ಆಗ

# ಮಾಯದ ಜೋಗಿ ಕೂಗಿದನು

ರಾವಣ ಸನ್ಯಾಸಿ ವೇಷವತಾಳಿ
ರಾಮರ ರಾಣಿಯ ಕದ್ದೊಯ್ದಾ । ಪಲ್ಲವಿ ।

ಅಸುರನು ಬಂದನು ಸನ್ಯಾಸಿಯಾಗಿ
ಭಿಕ್ಷವ ನೀಡು ಜಾನಕಿ ಎಂದು
ಅಡವಿಯ ಮನೆಯಲ್ಲಿ ಭಿಕ್ಷಗಳುಂಟೆ
ಒಡೆಯರಿಲ್ಲ ಹೋಗೆಂದಳು ಸೀತೆ

ಏನು ಮಾಡಲಿ ಸನ್ಯಾಸಿ ಕೇಳು
ಫಲತರ ಹಣ್ಣುಗಳಿಲ್ಲ ಮನೆಯಲ್ಲಿ
ಅರಣ್ಯದಲ್ಲಿ ಸಂಚರಿಸುವರು
ಹಿರಿಯರಿಲ್ಲಾ ನೀ ಹೋಗಯ್ಯ

ಕಾಶಿಯಿಂದಲಿ ಬಂದೆನು ನಾನು
ರಾಮೇಶ್ವರವ ನೋಡಿದೆನು
ನಾನಾ ದೇಶವ ತಿರುಗುವ ಯತಿಗೆ
ಭಿಕ್ಷವ ನೀಡು ಜಾನಕಿ ಎಂದ

ಎಂದ ಮಾತನು ಜಾನಕಿ ಕೇಳಿ
ನೊಂದುಕೊಂಡಳು ಮನದಲ್ಲಿ
ರಾಮರ ಪಾದವ ಕಾಣುವುದೆಂತು
ಜೀವದೊಳಗೆ ತಲ್ಲಣ ಹುಟ್ಟಿ

ಭಿಕ್ಷವ ನೀಡದೆ ಸುಮ್ಮನೆ ಇರಲು
ಮಾಯದ ಜೋಗಿಯು ಕೂಗಿದನು
ಬಳಲಿ ಬಂದೆನು ಜಾನಕಿ ಕೇಳು
ಭಿಕ್ಷವ ನೀಡೆ ಬೇಗದಲಿ

ಭಿಕ್ಷವ ನೀಡಲು ಕೇಳಲೆ ಯತಿಯೆ
ಬರೆದಿರೂ ಗೆರೆಯನು ದಾಂಟಿದರೆ
ಬರುವುದೇ ಪಾಪ ದಾಟಿದರೆ
ಭಿಕ್ಷವ ದಾಟಿ ನೀಡೆಂದ

ಪುಂಡ ಸನ್ಯಾಸಿ ಕೇಳಲೆ ನೀನು
ಉಂಡು ಸೊಕ್ಕಿದ ಯತಿ ನೀನು
ಮಂಡಲದಲಿ ತಿರುಕೂಳನು ತಿಂದು
ದಿಂಡೆಯನಾಡದೆ ಹೋಗಿನ್ನು

ಬಂದವರು ತಿರುಗಿದರೆ ನಿನ್ನ
ಬಂದು ಬಳಗವೆಲ್ಲಾ ನಾಶ
ಕುಂದದೆ ಭಿಕ್ಷವ ನೀಡಲು ನಿನಗೆ
ಗಂಗಾಸ್ನಾನದ ಫಲವೆಂದು

ಗೆರೆಗಳ ದಾಂಟಿ ಬರುವೆನೆಂದರೆ
ಲಕ್ಷ್ಮಣನ ನಾ ಕಾಣೆನಲ್ಲ
ಏಳು ಮಂತ್ರವ ಬರೆದಿಹನೊ ಅರಿಯೆ
ಕಾಡದೆ ಇನ್ನು ಹೋಗಯ್ಯ

ಹೋಗಲು ಬಂದವನಲ್ಲ ಸೀತೆ
ಸಾಧಿಸ ಬಂದವನು ನಿನ್ನ
ನಾರಿ ಜಾನಕಿ ಕಂಬನಿದುಂಬಿ
ಕೊರಗುತಲಿದ್ದಳು ಮನದಲ್ಲಿ

ಗೆರೆಗಳ ದಾಂಟಿ ಭಿಕ್ಷವ ನೀಡಲು
ರಥವನು ಚಾಚಿದ ರಾವಣನು
ಭೋರೆಂದು ನಾರಿ ಅಳುತ ಕೂಗುತ
ಮೊರೆಯಿಟ್ಟಳು ಜನಕ ಸುತೆಯು

ಅತ್ತರೆ ಇಲ್ಲ ಹೊರಳಿದರಿಲ್ಲ
ವ್ಯರ್ಥವಾಯಿತು ಎನ್ನಯ ಬುದ್ಧಿ
ಕರ್ತುರಾಮರು ಹೇಳಿದ ಮಾತು
ಸತ್ಯವಾಯಿತು ಇಂದೀಗ

ಸತ್ತೆನು ರಾಮರೆ ಹೋದೆನು ರಾಮರೆ
ಕರ್ತು ನಿಮ್ಮೆಯ ಮಾತನು ಮೀರಿ
ವ್ಯರ್ಥವಾಗಿ ಕೆಟ್ಟೆನು ಎಂದು
ದುಃಖದಿ ಹೊರಳಿದಳಾ ಸೀತೆ

ರಾವಣ ಹೇಳಿದ ಜಾನಕಿಯೊಡನೆ
ಕೇಳು ದೇವಿ ಎನ್ನಯ ಮಾತ
ಅಡವಿಯ ಚರಿಸುವ ಪರಗಳಿಗೆ
ಕೊಡುವರೆ ಅವನೀಶವನ್ನು

ರಾಜ್ಯ ನಿನ್ನದು ದೊರೆತನ ನಿನ್ನದು
ಬೊಕ್ಕಸ ಭಂಡಾರ ನಿನ್ನದು
ಸತ್ಯವಾಗಿ ನೀ ಎನ್ನನು ನಂಬು
ಕರ್ತು ರಾಮರ ಹಂಬಲಿಸಬೇಡ

ಅಡವಿ ಅರಣ್ಯವು ಗಿರಿ ಪರ್ವತವು
ಮೊಳಗುವೆಂದದ ಅತ್ತಳು ಸೀತೆ
ಒಡೆಯ ಶ್ರೀರಾಮರ ಅಗಲಿದೆನೆಂದು
ಜಾನಕಿಯು ತಾ ಹೊರಳಿದಳು

ಕಿಡಿಕಿಡಿಯಾದಳು ಹುಡಿಹುಡಿಯಾದಳು
ಬಡಿದುಕೊಂಡಳು ಹಣೆಯನ್ನು
ಮೊದಲೆ ರಾಮರ ಮಾತನು ಕೇಳದೆ
ಉಣ್ಣಿಸಿತೀಗಾ ಫಲಗಳನು

ರಾಕ್ಷಸರು ಮಾಯಗಳು ಎಂದು
ರಾಮರು ಸಾರುತ ಹೇಳಿದರು
ಮಾತಕೇಳದೆ ಮೀರಿದರಿಂದ
ಧೂರ್ತ ರಾವಣನ ಪಟ್ಟಣವು

ಎಂದು ಹಲುಬುತ ಕಣ್ಣೀರ ಕರೆಯುತ
ಬಂದು ಬಳಗವ ನೆನೆಯುತಲಿ
ಮಾವ ದಶರಥ ತಂದೆಯ ನೆನೆಯುತ
ಹೋದಳು ರಾವಣನ ರಥದಲ್ಲಿ

ಬರುವ ಮಾರ್ಗದಲಿ ಜಟಾಯು ಕಂಡು
ತಡೆದನು ಆಗ ರಾವಣನ
ಕಳ್ಳತನದಿ ಕೊಂಡೊಯ್ಯುವೆ ನೀನು
ಭಂಡಲಂಡನೀ ಸೀತೆಯನು

ಹೋರಿತು ಜಟಾಯು ಕಾದಿತು ಆಗ
ಚೋರ ರಾವಣನೊಡನೆ ಆಗ
ಘೋರನೆ ಹೊಯ್ದನು ಎರಡು ರೆಕ್ಕೆಗಳ
ಕಳ್ಳತನದಿ ಹೋದನೆ ಬೇಗ

ಈ ಪರಿಯಲಿ ರಾವಣ ಜಾನಕಿಯ
ತಾಮಸವಿಲ್ಲದೆ ಕೊಂಡೊಯ್ದು
ವನದಲಿ ಇರಿಸಿ ಬಂದನು ಮನೆಗೆ
ಮಂಡೋದರಿ ಕೂಡೆ ಪೇಳಿದನು

ಈ ಪರಿಯಲಿರುತಿರಲಾ ಮೃಗವನು
ಕೊಂದು ರಾಮಲಕ್ಷ್ಮಣರು ಆಗ
ಬಳಲುತ ಆಳಲುತ ಬಂದರು ಬೇಗ
ಪರ್ಣಶಾಲೆಯೊಳಿಲ್ಲವು ಸೀತೆ

ಮೊದಲೆ ಹೇಳಿದೆ ಸೀತೆಗೆ ನಾನು
ಬೇಡ ಸೀತೆ ಕೇಳೆಂದೆನುತ
ಎನ್ನಯ ಮಾತ ಮೀರಿದ ಸೀತೆಗೆ
ಬಂದಿತು ಹೀಗೆ ಸೆರೆಮನೆಯೆಂದು

ತಮ್ಮ ನಿಮ್ಮತ್ತಿಗೆ ಎಲ್ಲಿಗೆ ಹೋದಳು
ಸುಮ್ಮನಿರಬೇಡ ಹೇಳೆಂದ
ಒಮ್ಮೆಗೆ ನಿನ್ನ ಕಾವಲಿರಿಸಲು
ಬಯಲು ಮಾಡುವುದೆ ಇಂತು

ಕಷ್ಟದ ನುಡಿಗಳ ನುಡಿದಳು ಸೀತೆ
ಕೆಟ್ಟ ಮಾತ ಕೇಳದೆ ನಾನು
ರಾಮ ರಾಮ ಎಂದು ಕಿವಿಗಳ ಮುಚ್ಚಿ
ಇಟ್ಟ ಗೆರೆಗಳ ಮೀರಿ ನಡೆದಳು ಸೀತೆ

ಮಾತನ್ನಾಡಿದ ಸೀತೆಯವಳು
ಭೂತ ಬಲಿಯನ್ನಿಕ್ಕಲು ಬೇಕು
ಭೂತಳದೊಳಗಪಕೀರ್ತಿಗಳಾದವು
ಸೀತೆ ಓಡಿಹೋದಾಳೆಂದು

ಇಂತೀ ಪರಿಯಲಿ ರಾಮಲಕ್ಷ್ಮಣರು
ಚಿಂತಿಸಿ ಪರ್ಣಶಾಳೆಯೊಳು
ದಕ್ಷಿಣ ಪಶ್ಚಿಮ ಉತ್ತರ ದಿಕ್ಕುಗಳ
ಕಾಣದೆ ಆರಸುತ ತಿರುಗಿದರು

ಅಡಿಗಳನರಸುತ ಕಾಣದೆ ಬಳಲಿ
ಕಿಡಿಕಿಡಿಯಾದನು ಶ್ರೀರಾಮ
ಗಿಡ ಪರ್ವತಗಳ ಕೇಳುತ ರಾಮರು
ಹುಡುಕಿದರು ಕಾಣದೆ ಬಳಲಿ

ಕಂಡರು ಜಟಾಯು ಪಕ್ಷಿಯ ರಾಮರು
ರೆಕ್ಕೆ ಮುರಿದು ಬಿದ್ದಿರುವುದನ್ನು
ಕಳ್ಳ ರಾವಣ ಕದ್ದೊಯ್ದು ಸೀತೆಯ
ಹೋರಿದನು ಎನ್ನಯ ತರಿದೀಗ

ಎಂದು ಜಟಾಯು ರಾಮರ ಬಳಿಯಲಿ
ನಿಂದು ಹೇಳಿ ಪ್ರಾಣವ ಬಿಡಲು
ದಹನವ ಮಾಡಲು ಅಂಗೈಯೊಳಗೆ
ಕೊಟ್ಟರು ಮೋಕ್ಷವ ಅದಕವರು

ಕೇಳಿ ಅರಿಯನು ರಾಮನ ಬಿರುದನು
ಕೆಂಡವನು ಕಟ್ಟಿ ಕೊಳ್ಳುವರು
ಅವರ ಗಂಡನೆಂಬುದನರಿಯದೆ
ಶಶಿಮುಖಿ ಸೀತೆಯ ಕೊಂಡೊಯ್ದು

ಲಕ್ಷ್ಮಣ ನುಡಿದ ಅತ್ತಿಗೆಯ ಕೊಂಡೊಯ್ದು
ರಕ್ಕಸನ ಕೊಂದೀಗಲೆ ಬೇಗ
ಇಕ್ಕಬೇಕು ರಣಬಲಿಯನ್ನು
ತಕ್ಕದ ಮಾಡಲು ಬೇಕೆಂದ

ಮೊರೆಯುತ ರಾಮರು ಬಾಣವ ತೂಗುತ
ದಶಕಂಠನ ಬಯ್ಯುತಲಾಗ
ಎಸಗಬೇಕು ಕಾಳಗವನ್ನು
ಬಲಿ ಕೊಡಬೇಕು ದಶಶಿರನ

ರಣಭೂತಕೆ ಕುಂಭಕರ್ಣನ ಇಕ್ಕುವೆ
ಇಂದ್ರಜಿತು ಅತಿಕಾಯದವರ
ಮಹಾಬಲರೆಂಬ ರಕ್ಕಸರೆಲ್ಲರ
ಕೊಂದು ಬಿಡುವೆ ಅರೆಘಳಿಗೆಯಲ್ಲಿ

ಕಾಲತುಂಬಿತು ರಕ್ಕಸರಿಗೆಲ್ಲ
ಜೀವಕೆ ಹಾನಿಯ ತಂದುಕೊಂಡರು
ದೇವತೆಗಳ ಸೆರೆ ಬಿಡಿಸುವೆನೆಂದು
ಶ್ರೀರಾಮಚಂದ್ರನು ನುಡಿದನು ಆಗ

ಪಂಥವ ಮಾಡುತ ಶ್ರೀರಾಮಚಂದ್ರರು
ಶಸ್ತ್ರವ ತೂಗುತ ಕರದಲ್ಲಿ
ತಂತ್ರದಿ ಅಸುರರ ಪಡೆಗಳನ್ನೆಲ್ಲ
ಅಂತರ ಮಾರ್ಗದಿ ಭೇದಿಸುವೆ

ಎಂದು ರಾಮರು ಭಾಷೆಯ ಮಾಡಿ
ಬಂದರು ಚಿತ್ರಾಕೂಟಕ್ಕೆ
ಅಂದು ದುಃಖದಿ ಚಿಂತಿಸಲಾಗ
ಕಂಬನಿಯೊಳಿದ್ದನು ಶ್ರೀರಾಮ

ಸೀತೆ ಹಾ ಎಂದು ಜಾನಕಿ ನೆನೆದು
ಜಾತಿ ನಾಯಕಿ ಅಗಲಿದೆ ಎಂದು
ಪಾಪಿ ರಾವಣ ಕೊಂಡೊಯ್ದನೆಂದು
ತಾಪದಿ ಹೊರಳಿದ ಶ್ರೀರಾಮ

ಸ್ವಾಮಿ ದೇವರೆ ಚಿಂತಿಸಲೇಕೆ
ತರಿಸಲುಬಹುದು ಸೀತೆಯನು
ಕಳ್ಳರಕ್ಕಸರು ಪ್ರಾಣಕೆ ಹಾನಿಯ
ಮಾಡಿಕೊಂಡರು ತಾವಾಗಿ

ರಾಮಚಂದ್ರರ ಸಂತೈಸಿ ಲಕ್ಷ್ಮಣ
ಬಂದರು ಮಾರ್ಗವ ನೋಡುತಲಿ
ಮುಂದೆ ವಾಲಿಯ ಪಟ್ಟಣವಂತೆ
ಪೃಥ್ವಿಗೆ ಬಹು ಪರಾಕ್ರಮರಂತೆ

ಸುಗ್ರೀವ ಜಾಂಬವ ನುಮನೆಂಬುವರು
ನವಕೋಟಿ ನಾಯಕರುಂಟು
ನಾವಲ್ಲಿಗೀಗ ಹೋಗಲುಬೇಕು
ಸಾಧಿಸಬೇಕು ರಾಜ್ಯ ಕಾರ್ಯಗಳ

ಬಂದರು ರಾಮರು ವಾಲಿಯ ಪುರಕೆ
ನಿಂದರು ವನ ಮಧ್ಯದೊಳಾಗ
ಚಂದದಿ ಕಪಿವರರುಗಳನು ಕರಸಿ
ನಿಂದರು ಅಂಜನಾದ್ರಿಯಲಿ

## ಕೊಂದವರಿಗೆ ಕೊಲೆ ಎಂದಿಗು ತಪ್ಪದು

ರಾಮರ ಕಂಡನು ಹನುಮಂತ
ಸಂಜೀವನ ತಂದನು ಬಲವಂತಾ । ಪಲ್ಲವಿ ।

ರಾಮರ ಬಳಿಗೆ ಹನುಮನು ಬಂದ
ಸಣ್ಣವನಾಗಿ ತಾ ನಿಂದ
ನೋಡಲು ಬೆಳೆದನು ಪರ್ವತವಾಗಿ
ರೂಢಿಯೊಳಗೆಣೆ ಕಾಣಿಸೊ ದೇವ

ಹನುಮ ಹೇಳಿದ ರಾವಣನ ಪರಿಯ
ವಾಲಿಯ ಪಟ್ಟಣದೊಳಗವನ
ಅಂಗದನ ತೊಟ್ಟಲಿಗೆ ಕಟ್ಟುವರು
ಹತ್ತು ತಲೆಯ ಹುಳುವೆಂದು

ತಾಯಿ ಅಂಜನದೇವಿ ಹೇಳಿದಳೆನಗೆ
ರಾಮರ ಪಾದವ ಕಾಣೆಂದು
ಮರೆಯದೆ ಕಂಡೆನು ನಾ ನಿಮ್ಮ ಪಾದವ
ಧನ್ಯನಾದೆನು ಜಲ್ಮದಲಿ

ಸೀತೆಯನೊಯ್ದನು ಖೂಳ ರಾವಣನು
ಏನು ಮಾಡಲಿ ಹನುಮಂತ
ಸ್ವಾಮಿ ಕೇಳಿರೈ ಶ್ರೀರಾಮಚಂದ್ರರೆ
ಠೀವಿಯಿಂದಲೇ ಕಂಡುಬರುವೆ

ಈ ವನದಲಿ ಏಳು ತಾಳೆಯ ಮರಗಳು
ರಕ್ಕಸರಾಗಿ ಬೆಳದಿಹರು
ರಾಮಬಾಣದಿ ಆಹುತಿಯಾದರೆ
ಸೇರುವುದು ವಾನರ ಪಡೆಯ

ಎದ್ದರು ರಾಮರು ಬಾಣವ ಪಿಡಿದು
ಜಾನಕಿ ಅಗಲಿದ ಕೋಪದಲಿ
ಅಬ್ಬರಿಸುತ ರಾಂಬಾಣವ ಬಿಡಲು
ಮುರಿದು ಬಿದ್ದರು ರಕ್ಕಸರಾಗ

ಈ ಸುದ್ದಿಯ ಸುಗ್ರೀವಗೆ ಪೇಳಿ
ನಿಂತು ಕರಗಳ ಮುಗಿದನು ಹನುಮ
ರಾಮಚಂದ್ರನ ಪಾದವ ಕಂಡೆನೆಂದು
ಪಾಲಿಸಿದೆನ್ನೆಯ ರಘುರಾಮ

ನೀನು ಬಂದರೆ ವಾಲಿಯ ಪರಿಯ
ನಾನಾ ಬಗೆಯಲಿ ಎಲ್ಲವನು
ರಾಮರಿಗೆ ಬಿನ್ನೈಸಲು ಬಹುದು
ಬೇಗನೆ ರಾಮರ ಕೇಳ್ಳೈ ಸುಗ್ರೀವ

ಒಂದು ಬಾಣದಲಿ ತಾಳೆಯ ಮರಗಳ
ನಿಂತಾಕ್ಷಣದಲಿ ಕೆಡಹಿದರು
ರಾಮರು ಬಂದರು ಸೀತೆಯನರಸುತ
ನಮ್ಮಯ ಭಾಗ್ಯಕೆಣೆಯಿಲ್ಲ

ಎಂದನು ಹನುಮನು ಸುಗ್ರೀವನೊಡನೆ
ಚಂದದಿ ಬಿನ್ನೈಸಿದನಾಗ
ಕಪಿಬಲನೆಲ್ಲವ ಕೂಡಿಸಿಕೊಂಡು
ಸುಗ್ರೀವನು ತಾ ತೆರಳಿದನು

ಬಂದನು ಸುಗ್ರೀವ ರಾಮರ ಬಳಿಗೆ
ಕಪಿ ನಾಯಕರನೊಡಗೊಂಡು
ನನ್ನ ಸತಿಯ ಕೊಂಡೊಯ್ದನು ವಾಲಿ
ನಿಮ್ಮ ಸತಿಯ ರಾವಣನೊಯ್ದ

ತಂದೆ ನಮ್ಮಿಬ್ಬರಿಗೊಂದೆ ವಿಧಿಯು
ತಂದು ಕೊಡುವೆ ಜಾನಕಿಯನ್ನು
ಮಂದರಧರನ ಪಾದಕೆ ವಂದಿಸಿ
ಚಿಂತೆಯಲಿದ್ದನು ಸುಗ್ರೀವ

ಸುಗ್ರೀವಗೆ ಅಭಯವನಿತ್ತರು ರಾಮರು
ಲಕ್ಷ್ಮಣ ಸಮ ನೀನು ಎನಗೆ
ಖೂಳ ರಾವಣನ ಕೊಲಿಸಲು ಬೇಕು
ಬೇಗ ಯೋಚನೆಯ ಮಾಡೆಂದ್ರ

ವಾಲಿ ಎಂಬುವನು ಬಲು ಬಲವಂತ
ಸೇರಿಹನೀಗ ಗಿರಿಯೊಳಗೆ
ದೇವ ದೇವನೆ ಅವನನ್ನು ಶಿಕ್ಷಿಸಿ
ಕಾವಬೇಕು ಎನ್ನನು ನೀನು

ವಾಲಿಯಿದ್ದಲ್ಲಿಗೆ ನೀಗೆ ಹೋಗಿ
ಕೆಣಕಿ ತರುವುದು ಕದನವನು
ಆಣಕವಾಡಿದ ಅವನನು ಕೊಲ್ಲುವೆ
ಕೆಣಕಿ ಬಾ ನೀ ಹೋಗೆಂದ

ಬಂದನು ಸುಗ್ರೀವ ವಾಲಿಯ ಪುರಕೆ
ನಿಂದು ಬಾರಿಸಿದ ಭೇರಿಗಳ
ನಮ್ಮ ಸುಗ್ರೀವಗೆ ಬಲಬಂತೆಂದು
ಹೆಮ್ಮೆಯಿಂದಲೇ ವಾಲಿಯು ಬಂದ

ಮರೆಹೊಕ್ಕರು ಬಿಡೆನವನನ್ನ
ಖಂಡವ ಹರಹುವ ಧರೆಯಲ್ಲಿ
ಡಿಂಡುದರಿಯದಿದ್ದರೆ ನಾನವನ
ಗಂಡಸಲ್ಲವೆಂದು ವಾಲಿ ನುಡಿದ

ಭಳಿ ಭಳಿರೆನ್ನುತ ಅಲ್ಲೆ ಬೊಬ್ಬಿಡುತ
ಭುಜಗಳ ಅದಿರಿಸುತ ವಾಲಿಯು
ಮದಗಜದಂತೆ ಕುಣಿಯುತ ವಾಲಿ
ಕದನಕೆ ತಾನು ಬರುತಿರ್ದ

ಪಟ್ಟೆ ಚಲ್ಲಣ ಕಿಟ್ಟಿದ ಬಾಕು
ನೆಟ್ಟನೆ ಶಿರದಲಿ ಪಟ್ಟೆಯನು
ದಿಟ್ಟ ವಾಲಿಯು ಶೃಂಗಾರವಾಗಿ
ಜಟ್ಟಿಯಂತೆ ತಾ ಬರುತಿರ್ದ

ತುರಗಿರಿ ಮಂದರ ಗಿರಿಯಂತೆ
ಮೆರೆಯುತ ಹೋರಿದ ರಣದೊಳಗೆ
ಕಂಡೆಯ ಕಟಿಕಟಿ ಚಿಟಿಚಿಟಿಲೆನ್ನುತ
ಹೋರಿದರಾಗ ಭುಜಬಲರು

ಸುಗ್ರೀವನು ಸೋಲುವುದನು ಕಂಡು
ಸೂರ್ಯತೇಜ ರಾಮ ನೋಡಿದರು
ರಾಮಬಾಣವ ವಂಚಿಸಿ ಬಿಡಲು
ವಾಲಿಯಿದ್ದಲ್ಲಿಗೆ ಬರುತಿತ್ತು

ಬಂದು ವಾಲಿಯ ಮಂಡೆಯನೊಯ್ದು
ಚಂದದಿ ತಿರುಗಿತಿ ಆ ಬಾಣ
ಗಂಡರ ಗಂಡ ಉದ್ದಂಡ ರಾಮರ
ಕಂಡೆನು ಪ್ರತಾಪಕ್ಕೆ ಎಣೆಯಿಲ್ಲ

ವಾಲಿಯು ನುಡಿದನು ರಾಮನೊಡನೆ
ರಾವಣನ ತರುವೆನು ಅರಘಳಿಗೆಯಲಿ
ಕಾಣದೆ ತೂಗಿದೆ ಬಾಣವ ಎನಗೆ
ಭೂಮಿಯಲಿ ಅಪಕೀರ್ತಿಯನೊತ್ತೆ

ಕೊಂದವರಿಗೆ ಕೊಲೆ ಎಂದಿಗು ತಪ್ಪದು
ಚಂದವಾಯಿತು ಎಂದೆನುತ
ಅಂಗದನೆಂಬ ಮಗನೊಬ್ಬನವನೆ
ತಂದೆ ರಾಮರೆ ಕಾಯಬೇಕೆಂದ

ಎಂದು ವಾಲಿಯು ಪ್ರಾಣವ ಬಿಡಲು
ಬಂದರು ಅಂಗದ ನೀಲಾದಿಗಳು
ನಿಂದು ನೋಡಿದರು ರಣಭೂಮಿಯನು
ತಂದೆ ವಾಲಿಯು ಬಿದ್ದಿರುವುದನು

ರಾಮರ ಬಲಕೆ ಸರಿಮಿಗಿಲನು
ಕಾಣೆನು ಜಗದೊಳಗೆ ತಂದೆ
ಸತಿಗಾಗಿ ನೀ ಕೊಲ್ಲಿಸಿಕೊಂಡೆ
ಗತಿಹೊಂದಿದೆ ರಾಂಬಾಣದಲಿ

ಬಂದನು ಅಂಗದ ರಾಮರ ಬಳಿಗೆ
ವಂದಿಸಿ ಚರಣಕ್ಕೆರಗಿದನು
ಬಂದು ಸುಗ್ರೀವನ ಪಾದಕೆ ವಂದಿಸಿ
ಚಂದನವಾಯಿತು ಚಿಕ್ಕಯ್ಯ ಎಂದ.

ಅಣ್ಣನ ಕೊಲಿಸಿದ ತಮ್ಮ ನೀನಲ್ಲವೆ
ನಿಮ್ಮ ರಾಮರ ಕೂಡ್ಹೇಳಿ
ರಾಮಚಂದ್ರರು ಅರಿಯದೆ ಕೊಂದರು
ದಶಶಿರನ ಬೇಗ ತರಿಸಯ್ಯ

ಎಂದ ಮಗನ ಮನ್ನಿಸಿ ಸುಗ್ರೀವ
ಬ್ರಂಹಬರಹವ ಮೀರುವರ್‍ಯಾರು
ರಾಮರ ಸೇವೆಯ ಚೆನ್ನಾಗಿ ಮಾಡುವ
ಕಾರ್‍ಯ್ವನು ನಮ್ಮನು ಶ್ರೀರಾಮ

ಈ ಪರಿಯಿಂದಲಿ ಅಂಗದ ಸುಗ್ರೀವರು
ಶ್ರೀರಾಮ ಸನ್ನಿಧಿಗೋಗೆ
ಶ್ರೀರಾಮರು ಸುಗ್ರೀವನ ಸಹಿತ
ಅಂಗದ ಪಟ್ಟವ ಕಟ್ಟಿದರು

ಸಂತೋಷದಲಿ ಮೊಳಗಿತು ಪಾಳ್ಯವು
ಕರ್ತುರಾಮರ ಪೊಗಳುತ್ತಿರಲು
ಮಂತ್ರವ ಕೂಗುತ ಶುಭಲಗ್ನದಲಿ
ಸುಗ್ರೀವಗೆ ಸೇನಾ ಪಟ್ಟವನು

ಕಪಿನಾಯಕರು ಬಂದರು ಎಲ್ಲ
ರಾಮರ ಪಾದವ ಕಂಡರು ಆಗ
ಬಂದವರ ಮನ್ನಿಸಿ ಶ್ರೀರಾಮರು
ಕೊಡಿಸಿದರಾಗ ವೀಳ್ಯವನು

ವಾಲಿ ಭಂಡಾರದಲಿ ಸೀತೆ ಆಭರಣವು
ಇರತರಲಿರುವುದ ಕಂಡರು ರಾಮರು
ಕೇಳಿದರಾಗ ಬಂದ ಪರಿ ಹೇಳೆನುತ
ಕೇಳಿದರು ರಾಮರು ಬಹುಬೇಗದಲಿ

ಖೂಳ ರಾವಣ ಸೀತೆ ಕೊಂಡೊಯ್ವಾಗ
ಬಾನು ಮಾರ್ಗದಿ ಪೋಗುತ್ತಿರಲು
ಒಡವೆಯ ಬಿಟ್ಟರು ಕಂಚುಕದಲ್ಲಿ
ಎಂದು ಅಂಗದನು ಹೇಳಿದನು

ಹನುಮರ ಕರೆದು ಲಂಕೆಗೆ ಹೋಗಿ
ರಾಮರ ಮುದ್ರೆಯನು ಕೊಟ್ಟು
ಮರೆಯದೆ ಬಂದು ತಾರಪ್ಪಣೆಯ
ಹಾಗೆಂದ ರಾಮರು ಕಳುಹಿದರು

ಜಯ ಜಯವೆನ್ನುತ ಎಲ್ಲಾ ಪೊಗಳೆ
ಕಪಿವರರು ಸಂತೋಷದಲಿ
ವಾಯುಪುತ್ರನ ಲಂಕೆಗೆ ಕಳುಹಿ
ಆನಂದದೊಳಿರ್ದನು ಶ್ರೀರಾಮ

## ಹರಿಭಕ್ತನ ಕಂಡ ಹನುಮಂತನಾಗ

ಲಂಕೆಗೆ ಹೋದನು ಹನುಮಂತ
ಸಂಜೀವನ ತಂದನು ಬಲಂವ । ಪಲ್ಲವಿ ।

ಅಬ್ಧಿಯ ತಡಿಗೆ ಬಂದನು ಹನುಮ
ನಿಂತು ನೋಡಿದನು ಶರಧಿಯನು
ಬಾಲವಬಿಟ್ಟು ಆಳವನೋಡಿ
ಭಲರೆ ಸಮುದ್ರ ಎಂದನು ಹನುಮ

ಕಪಿಲಾ ಮುನಿಗಳ ಕಂಡನು ಹನುಮ
ಸಣ್ಣವನಾಗಿ ನೋಡಿದನಾಗ
ಕೊಡಬೇಕು ಸ್ವಾಮಿ ವರಗಳನೆಂದು
ಚೆನ್ನಾಗಿ ಬೇಡಿಕೊಂಡ ಹನುಮಂತ

ಕೊಟ್ಟನು ವರಗಳ ಮುನಿ ಕರುಣದಿಂದೆ
ಆಂಜನೇಯ ಸುತನಿವನೆಂದು
ನೆಟ್ಟನೆ ಹೋಗಿ ಅಸುರರ ಬಡಿಯೆನಲು
ಸಾಗರವನ್ಹಾರಿದ ಹನುಮಂತ

ಲೆಂಕಿಣಿ ಎಂಬ ಅಸುರೆಯು ಇವಳು
ಬಿಂಕದಿ ಕಾದಿಹಳಾ ಪುರವು
ಪಂಕಜನಾಭನ ಭಂಟರನು ತಾನು
ಲೆಂಕೆ ವಿಸ್ತಾರವ ಹೊಗಳಿದನು

ವಾರೆಗಣ್ಣಿನಲಿ ನೋಡಿ ಲೆಂಕಿಣಿಯ
ಕೊಡಬೇಕಿವಳ ಲೆಂಕೆಗೆ ಬಲಿಯ
ಮುಂದಲೆ ಹಿಡಿದು ತಲೆಕೆಳಗಾಗಿ
ಕೊಂದನು ಅಸುರೆ ಲೆಂಕಿಣಿಯ

ಮುಂದೆ ಬರುವೆನು ಇಂದಿನ ಕಾರ್ಯವ
ಸಂದಿತು ಎಂದನು ಹನುಮಂತ
ಬುದ್ಧಿಯ ಹೇಳಿದ ಬಾಲದ ತುದಿಗೆ
ಬುದ್ಧಿವಂತ ರಾಮರಭಂಟ

ಲೆಂಕಾಪುರವ ನೋಡಿದ ಹನುಮ
ಬಿಂಕದ ಕೋಟೆ ಕೊತ್ತಲಗಳನು
ಶಂಕೆಯಿಲ್ಲದೆ ಅಸುರರ ಪಡೆಯ
ಬಿಂಕದಿ ನೋಡಿದ ಹನುಮಂತ

ಲೆಂಕೆಗೆ ಹೋಗಿ ಏಳುಸುತ್ತಿನಕೋಟೆ
ರತ್ನದ ಕೋಟೆಯು ವಿರಾಜಿಸುತಿರಲು
ಅರ್ತಿಯಿಂದಲಿ ನೋಡಿದ ಹನುಮಂತ
ಬಲು ಬಿಂಕದಿ ನೋಡಿದ ಬಲವಂತ

ಕೊತ್ತಳದ ಅದರಂದವ ನೋಡಿ
ಚಿತ್ತಾರದಿ ಹಿಗ್ಗಿದ ಹನುಮ
ಪೆಟ್ಟನಿಕ್ಕಲಿಬೇಕು ರಾವಣನಿಗೀಗ
ಎಂದು ಯೋಚಿಸಿದ ಹನುಮಂತ

ಬೀದಿ ಬೀದಿಗಳು ಶತಸಾವಿರವು
ವಾರಾಂಗನೆಯರು ಲೆಕ್ಕವಿಲ್ಲ
ರಕ್ಕಸರ ಎಡೆಗೆ ಎದುರೆ ಇಲ್ಲ
ವಕ್ಕಲಿಕ್ಕಬೇಕು ಎಂದ ಹನುಮ

ನೋಡಿದ ರಾವಣನ ಅರಮನೆಯನು
ಸೊಗಸು ಸಾಲಿನುಪ್ಪರಿಗೆಯನು
ಸಣ್ಣವನಾಗಿ ಬಳಿಗೆ ಹೋಗಿ
ಜಾನಕಿದೇವಿಯ ಅರಸಿದನಾಗ

ರಾವಣನರಮನೆಯಲ್ಲಿ ಕಾಣದೆ
ಹೋದನು ಕುಂಭಕರ್ಣನ ಮನೆಗೆ
ಮಾರಿಯಂದದಿ ಬಿದ್ದಿರುವ ಅಸುರನ
ಭೋರೆಂಬೊ ನಿದ್ರೆ ಭಾರದಲಿ

ನಿಂದು ನೋಡಿದನು ಒಂದು ಜಾವಪರಿಯಂತ
ಅಸುರನ ಬಗೆಯ ಎಲ್ಲವನು
ಮುಸುಕದೆ ಹೊಕ್ಕನು ಅವನ ಬಸುರೊಳಗೆ
ಶ್ವಾಸದಿ ತಿರುಗಿದ ಹನುಮಂತ

ಬಂದನು ವಿಭೀಷಣನರಮನೆಗೆ
ಬಾಗಿಲ ವೃಂದಾವನ ಕಂಡ
ರಾಮ ಭಕ್ತ ಇವನೀಗ ಎಂದು
ಸೋಜಿಗಗೊಂಡನು ಹನುಮಂತ

ಶಿರದಲೊಪ್ಪುವ ತುಲಸಿಯ ದಂಡೆಯು
ನೊಸಲೊಳಗಿಟ್ಟ ನಾಮಗಳು
ಹರಿಭಕ್ತನ ಕಂಡ ಹನುಮಂತನಾಗ
ಜಾನಕಿ ವಿವರವ ಕೇಳಿದನು

ರಾಮರ ರಾಣಿಯ ತಂದನು ರಾವಣ
ಕೊಂಡೊಯ್ದನು ಅಶೋಕವನಕೆ
ಸೌಮಿತ್ರಿ ಎಂಬುವಳು ಎನ್ನಯ ಮಗಳು
ನಾನು ವಿಭೀಷಣನು ಹನುಮಂತ

ರಾಮರಿಗೆ ಎನ್ನಯ ಸುದ್ದಿಯನು
ಚನ್ನಾಗಿ ನೀನು ಹೇಳುವುದು
ಸಾಗರವನ್ನು ದಾಟಲು ರಾಮರು
ಬರುವೆನು ರಾಮರ ಕಾಳಗಕೆ

ಎಂದ ಮಾತನು ಕೇಳಿದ ಹನುಮಂತ
ಹರುಷವ ತಾಳಿದ ಮನದೊಳಗೆ
ರಾಮರ ರಾಣಿಯ ಕಾಣುವೆನೆನುತ
ಬೇಗದಿ ಹೊರಟನು ಹನುಮಂತ

# ಸಾಲಾಗಿ ಸುಟ್ಟನು ಲಂಕೆಯನು

ಲಂಕೆಗೆ ಹೋದನು ಹನುಮಂತ
ಸಂಜೀವನ ತಂದನು ಬಲವಂತ । ಪಲ್ಲವಿ ।

ಹಾರಿದನಾಗ ಒಂದೇ ಹಾರಿಗೆ
ನೋಡಿದನಾಗ ವನವನ್ನು
ಬಂದನು ಹನುಮನು ಬೇಗದಿ ಕಂಡನು
ಜಾನಕಿಯನ್ನು ತಕ್ಷಣದಿ

ಕಂಡನು ಹನುಮ ಆಗ ಜಾನಕಿಯ
ದಂಡವನಿಕ್ಕಿ ಕೈಗಳ ಮುಗಿದು
ತಂದೆ ರಾಮರ ಬಳಿಯಿಂದ ಬಂದೆನು
ಎಂದು ಕೊಟ್ಟನು ಮುದ್ರೆಯುಂಗುರನ

ನೋಡಿದಳಾಗ ಜಾನಕಿ ತಾನು
ರಾಮರ ಪಾದವು ದೊರಕಿತು ಎಂದು
ದೇವಿ ಮನದಲಿ ಸಂತೋಷದಲಿ
ನಾನು ಮಾಡಿದ್ದು ತಪ್ಪಲ್ಲವೆ ಹನುಮ

ರಾಮರ ಮುದ್ರೆಯ ಹೃದಯದೊಳಿರಿಸಿ
ಕುರುಡಗೆ ಕಣ್ಣುಗಳು ಬಂದಂತೆ
ಇರಿಸಿದಳು ನಯನಾಂಬುಜಗಳ ಮೇಲೆ
ಆನಂದದಲಿದ್ದಳು ಸೀತೆ

ನೋಡಿದಳು ಶ್ರೀರಾಮರ ಪಾದವ
ಹರುಷದಲ್ಲಿದ್ದಳು ಸೀತೆ
ಕರುಣಾಕರನೆ ಎನ್ನನು ರಕ್ಷಿಸು
ಕಮಲನಾಭನೆ ಕಾಯಯ್ಯ

ಎಂದು ಜಾನಕಿ ಸಂತೋಷದಲಿ
ಅನುದಿನ ರಾಮರ ಭಜಿಸುತಲಿ
ಹನುಮ ರಾಮರ ಎನ್ನನು ನೆನೆದರೆ
ಕರ್ಮವ ಮಾಡಿದ ಹೆಣ್ಣನ್ನು

ವನದಲಿ ಇರುವ ಹಣ್ಣನು ನೋಡಿ
ಮನದಲಿ ಕುದಿದನು ಹನುಮಂತ
ತಾಯಿ ಜಾನಕಿ ಕೊಡಬೇಕೆನಗೆ
ವನದಲಿ ಹಣ್ಣಿಗೆ ಅಪ್ಪಣೆಯ

ಬಿದ್ದ ಹಣ್ಣನು ಮೆಲ್ಲೊ ಹನುಮ
ರಕ್ಕಸರು ಬಲು ಬಲವಂತರಯ್ಯ
ರಕ್ಕಸರು ಬಂದರೆ ಕಾಯುವರ್ಯಾರು
ಎಂದು ನುಡಿದಳು ಜಾನಕಿಯು

ಕೊಂಬೆ ಕೊಂಬೆಗೆ ಹಾರಿದ ಹನುಮ
ಮರವ ಕಿತ್ತು ಮರಕೆ ಜಡಿದ
ದ್ರಾಕ್ಷಿ ಕಿತ್ತಳೆ ಖರ್ಜೂರವನ್ನೆಲ್ಲ
ದಾಳಿಂಬವನೆಲ್ಲ ಈಡಾಡಿದನು

ಅಸುರರು ಕಂಡರು ಕಪಿರೂಪನ್ನು
ಕೆದರಿದ ಕೇಶದಿ ಬೆದರಿಸುತ
ಬೆದರಿಸಿದವನು ಸದೆದನು ಹನುಮ
ಶ್ರೀರಾಮರ ಭಂಟ ತಾನೆಂದು

ರಕ್ಕಸರನೆಲ್ಲ ಕೊಂದನು ಹನುಮ
ಕುಕ್ಷಿಯೊಳಗಿರಿಸಿದ ಹಣ್ಣುಗಳ
ರಾವಣಗೆ ಈ ಸುದ್ದಿಯ ಹೇಳಲು
ಮೊರೆದೆದ್ದರು ರಾಕ್ಷಸರೆಲ್ಲ

ನೋಡಿದ ಅತಿಕಾಯನ ಹನುಮ
ನೀಡಿದ ಬಾಲವ ಬೆಳೆಸುತಲಿ
ಸಾಗರದಂದಿ ಬಾಲವ ಬೆಳಸಿ
ಸೇದಿದನು ಅಸುರರ ಕುಲವನ್ನು

ಕಂಡ ಅಸುರರ ಬಾಲದಿ ಬಡಿಯುತ
ಬೆಟ್ಟವ ಕಿತ್ತಿಟ್ಟನು ಹನುಮ
ಅಟ್ಟಾಡಿ ಹೊಯ್ದನು ಅಸುರರನೆಲ್ಲ
ಸೃಷ್ಟಿಪಾಲ ಶ್ರೀರಾಮರ ಭಂಟ

ಅಲ್ಲಲ್ಲಿ ಬೊಬ್ಬೆಯ ಅಲ್ಲಲ್ಲಿ ಅಬ್ಬರ
ನಿಲ್ಲಬಾರದು ಲಂಕೆಯ ಒಳಗೆ
ಆರುಕೋಟಿ ರಕ್ಕಸರನೆಲ್ಲ
ಬಾಲದಿ ಸವರಿದ ಹನುಮಂತ

ಬೊಬ್ಬೆ ಅಬ್ಬರ ರಾವಣ ಕೇಳಿ
ಬಾಲದ ಕಪಿಯ ಹಿಡಿಯೊ ಮಗನೆ
ನಿಲ್ಲದೆ ಇಂದ್ರಜಿತು ನೀನೇ ಹೋಗಿ
ಚನ್ನಾಗಿ ಬುದ್ಧಿಯನ್ಹೇಳು ಬಾಲದಕಪಿಗೆ

ರಕ್ಕಸರನೆಲ್ಲಾ ಕೂಡಿಸಿಕೊಂಡು
ಇಂದ್ರಜಿತು ಬಂದನು ಬೇಗ
ಅಸುರರು ಕಂಡರು ಕಪಿರೂಪನ್ನು
ಕೆದರಿದ ಕೇಶದಿ ಬೆದರಿಸುತ

ಬೆದರಿಸಿದವರನು ಸದೆದನು ಹನುಮ
ಕೊಬ್ಬಿದವರನೆಲ್ಲ ಕೊಂದನು ಹನುಮ
ರಕ್ಕಸರಿಗೆ ಮುಂದಾಗಿ ನಿಂತು
ದಿಟ್ಟತನದಲಿ ನುಡಿದನು ಬೇಗ

ಶ್ರೀರಾಮರ ಭಂಟ ಹನುಮಂತ
ಮುದ್ರೆಯ ತಂದೆನು ಜಾನಕಿಗೆ
ಅಸುರರೆಲ್ಲರ ಕೊಲ್ಲಲು ಬಂದೆನು
ಎಂದಣಕಿಸುತ ನುಡಿದನು ಆಗ

ಕಾಡುಕಪಿಯೆ ಕೇಳಲೊ ನೀನು
ಓಡಿ ಹೋಗಲೊ ವನಕೆ ನೀನು
ಹಣ್ಣುಗಳಿರುವ ವನಗಳ ನೋಡು
ಸುಮ್ಮನೆ ಪ್ರಾಣವ ಕೊಡಬೇಡ

ಎಂದ ಮಾತನು ಕೇಳಿದ ಹನುಮ
ಕಂಡವನರಹುವೆ ಜಗದಲ್ಲಿ
ಗಂಡುಗಲಿ ರಾಮರ ದೂತನು
ಪ್ರಚಂಡ ಹನುಮ ಕೇಳ್ದರೆಗೆ

ಕೊಡುಗ ನೀನು ರಕ್ಕಸರು ನಾವು
ನಾನಾ ಪರಿಯ ವಿದ್ಯೆಗಳುಂಟು
ವಿದ್ಯೆಕ್ಕೆಲ್ಲ ಬುದ್ಧಿಯ ಹೇಳುವೆ
ಗುದ್ದಿಬಿಡುವೆ ನಿನ್ನನು ಎಂದ

ಹಿಡಿಯಿರಿ ಕಪಿಯನು ಕಟ್ಟಿರಿ ಅವನ
ಕೊಂಡು ಹೋಗಿರಿ ರಾವಣಲ್ಲಿಗೆ
ವನವನು ಸವರಿ ಕೊಬ್ಬಿತೀ ಕಪಿ
ನೋಡಿರೊ ಇದರ ಭುಜಬಲವ

ಇಂದ್ರಜಿತು ನುಡಿದ ಈ ಪರಿಯಲಿ
ಅಸುರರು ಬಂದರು ನಾನಾ ಕಡೆಯಿಂದ
ನಾಲ್ಕು ದಿಕ್ಕುಗಳಿಂದ ಸರಪಳಿ ಬೀಸಿ
ಹನುಮನ ಹಿಡಿದರು ಶರಗಳಲಿ

ಮೂರುಗಳಿಗೆ ನನಗೆಡರುಂಟು
ತೋರುವೆನಾಮೇಲೆಚ್ಚರವನ್ನು
ಮೂಲೋಕಕೊಡೆಯ ಶ್ರೀರಾಮರ ಭಂಟ
ಮಾರುತನ ಮಗ ತಾನೆಂದ

ಕಟ್ಟಿದರು ಹನುಮನ ಸರಪಳಿಯಲ್ಲಿ
ರಕ್ಕಸರೆಳೆಯುತಲಿರಲಾಗ
ಮರುಗಿರಿ ಮಂದರ ಗಿರಿಯಂತೆ ಮುಲುಕುತ
ಹನುಮನು ಸುಮ್ಮನೆ ಇದ್ದನೆ ಆಗ

ಮುಲುಕುತ ತಂದರು ರಾವಣನಲ್ಲಿಗೆ
ಅಣಕಿಸುತ ಹಲ್ಲು ಹೊರಡಿಸುತ
ಬಾಲವ ಸುತ್ತಿದ ಹನುಮ ರಾವಣಗೆ
ಮೇಲಾಗಿ ಕುಳಿತನೆ ಆಗ

ಸಿಂಹಾಸನದೊಳು ರಾವಣನಿರಲು
ಸಿಂಬಿಯ ಸುತ್ತಿದ ಹನುಮಂತ
ಖೂಳ ! ನಾನು ರಾಮರ ಭಂಟ
ಬಂದು ಮಾಡಲು ಲಂಕೆಗೆ ಬಂದೆ

ಕೇಳುತ ರಾವಣ ಕಿಡಿಕಿಡಿಯಾದನು
ಹುಚ್ಚ ಕಪಿಯೆ ಕೇಳಲೊ ನೀನು
ಕೊಚ್ಚಿಸುವೆ ನಿನ್ನಯ ಶಿರವನೀಗ
ಹುಚ್ಚನಾಗದೆ ಹೋಗದೆಂದ

ಹುಚ್ಚು ಹಿಡಿದ ಜಾನಕೀ ತಂದೆ
ಕೊಚ್ಚಿಸುವೆ ನಿನ್ನ ರಾಂಬಾಣದಲಿ
ಹೆಚ್ಚನಾಡಲು ಬೇಡ ಕೇಳು ರಾವಣನೆ
ನಾನಚ್ಚುತ ರಾಮರ ಭಂಟನೆಂದ

ಬಲು ಮಾತ್ಯಾತಕೆ ಸೀಯಿರೊ ಬಾಲವ
ತಂಡ ತಂಡದಿ ಅರಿವೆಯ ತಂದು
ದಿಂಡುಗಳಾಗಿ ಸುತ್ತಲು ಆ ಬಾಲ
ಸುಮ್ಮನೆ ಬೆಳೆಯಿತು ಆ ಬಾಲ

ಸುಮ್ಮಾನದಿ ತಂದರು ವಸ್ತ್ರಗಳ
ರಾವಣನ ಅರಮನೆಯೊಳಗೆ
ಬಣ್ಣಬಣ್ಣದ ವಸ್ತ್ರವ ಸುತ್ತಲು ಬಾಲ
ಸಾಗುತ ಮುಂದೆ ಬರುತಿತ್ತು

ಪಟ್ಟಣದೊಳಿರುವ ನಾನಾ ಜಾತಿಯ
ವಸ್ತ್ರವ ತಂದು ಸುತ್ತಿದರು
ಪೆಟ್ಟಿಗೆ ಬಟ್ಟೆಯ ಎಲ್ಲವ ತರಲು
ದಿಟ್ಟ ಹನುಮಗೆ ಸಾಲದೆ ಬರಲು

ನಾರಿ ಜಾನಕಿ ಸೀರೆಯ ತನ್ನಿರೊ
ಹೋಗಿರೊ ನೀವು ವನಕೆಂದ
ಎಂದ ಮಾತ ಹನುಮನು ಕೇಳಿ
ಬೇಗದಿ ಸೆಳೆದನು ಬಾಲವನು

ತೈಲ ತನ್ನಿರಿ ಶತಕಂಡುಗವ
ಚನ್ನಾಗಿ ಅದ್ದಿರಿ ಬಾಲವನು
ಎಂದು ರಾವಣ ಮಾಡಿದ ಬಗೆಯನು
ನೋಡಿದನಾಗ ಹನುಮಂತ

ಈ ಪರಿಯಲಿ ರಾವಣ ಹನುಮನ
ಬಾಲವ ಅಜ್ಜಿಸಿ ತೈಲದಲಿ
ಅಗ್ನಿಯ ತಂದು ಬಾಲವ ಹತ್ತಿಸಿ
ಬಿಟ್ಟರು ಹನುಮನ ಲಂಕೆಯಲಿ

ಹಾರಿದನು ರಾವಣನ ಬಳಿಗೆ
ತೋರಿದ ಗಡ್ಡಕೆ ಬಾಲವನು
ಭೋರನೆ ಅಸುರರು ಬೆದರಿದರಾಗ
ರಾವಣನ ಗಡ್ಡಕೆ ಹಿಡಿದನು ಬೇಗ

ಬೆಳಗಿದನು ರಾವಣನ ಗಡ್ಡವನು
ಅರಮನೆಯೆಲ್ಲಾ ಸುಡುತಿರಲು
ಅಸುರರು ಕಂಡರು ರಾಮರ ಭಂಟನ
ಬೆದರಿಸಲಾಗದೆ ತಮ್ಮೊಳಗೆ

ಕೇರಿಕೇರಿಯ ಮೇಲೆ ನಡೆದನು ಹನುಮ
ಸಾಲಾಗಿ ಸುಟ್ಟನು ಲಂಕೆಯನು
ರಾಮರ ಭಂಟ ಬಗೆಗಳನರಿಯದೆ
ಖೂಳ ರಾವಣ ಹೋಗೆಂದ

ಮನೆಮನೆ ಹೊಕ್ಕನು ಸುಟ್ಟನು ಲಂಕೆಯ
ಬೆಳಗಿದನಾಗ ಕಲಿ ಹನುಮ
ನಾನಾಬಗೆಯಲಿ ಲಂಕೆಯನೆಲ್ಲವನು
ತಿರುಗಿದನು ಮರುಗಳಿಗೆಯಲಿ

ದೇವ ದೇವನ ಪಾದವ ನೆನೆದು
ಬಂದು ಹನುಮನು ರಾಮರ ಬಳಿಗೆ
ದೇವದೇವನೆ ಕೊಟ್ಟೆನು ಮುದ್ರೆಯ
ದೇವಿಯ ಪಾದವ ನೋಡಿದೆನು

ಹಾಳುಮಾಡಿದ ಲಂಕೆಯೆಲ್ಲವನು
ಬಂದೆನು ನಿಮ್ಮಯ ಚರಣದ ಬಳಿಗೆ
ಎಂದ ಮಾತ ಶ್ರೀರಾಮರು ಕೇಳಿ
ಚಂದದಲಿದ್ದರು ಹರುಷದಲಿ

ಮಂದಮತಿ ರಾವಣಗೆ ಬುದ್ಧಿಯ
ಚೆಂದಾಗಿ ಹೇಳಿದ ಹನುಮಂತ
ಎಂದು ಹನುಮನ ಸಂತೈಸಿ ರಾಮರು
ಹರುಷವ ತಾಳಿದರಮ್ಮನದೊಳಗೆ

ಶರಧಿಗೆ ಸೇತುವೆ ಕಟ್ಟಲೆ ಬೇಕು
ಕಪಿನಾಯಕರು ಬನ್ನಿರಿ ಎಲ್ಲ
ಎಂದ ಮಾತ ಸುಗ್ರೀವನು ಕೇಳಿ
ಹರುಷವ ತಾಳಿದ ಮನದೊಳಗೆ

## ಶೋಭಿಸುತ್ತಿದ್ದಿತು ಲಂಕಾನಗರ

ರಾಮ ರಾಮವೆನ್ನಿರಿ ಮೂಜಗವೆಲ್ಲ
ಸ್ವಾಮಿಯ ನಾಮವ ನೆನೆದರೆ ಪಾವನವು । ಪಲ್ಲವಿ ।

ದಶರಥರಾಮರು ಕರೆಸಿದರಾಗ
ಕಪಿನಾಯಕರು ತಾವೆಲ್ಲರನು
ಅಸುರರ ಕುಲವ ಸಂಹರಿಸಬೇಕೆಂದು
ಶುಭ ಲಗ್ನದಿ ಸೇತುವೆ ಕಟ್ಟಿ

ಬಂದರು ಅಂಗದ ನೀಲಾದಿಗಳು
ಸುಗ್ರೀವ ಜಾಂಬುವ ಹನುಮಂತ
ಬಂದು ನಿಂದರು ಶರಧಿಯ ತಡಿಯಲ್ಲಿ
ರಾಮದೇವರಿತ್ತ ಅಪ್ಪಣೆಯಿಂದ

ದಶರಥರಾಮರು ಹೇಳುವುದೀಗ
ವಸುಧೆಯೊಳಗಿರುವ ಬೆಟ್ಟಗಳ
ದಶ ದಿಕ್ಕಿಗೆ ನೀವೀಗಲೆ ಹೋಗಿ
ತರತರದಲಿ ತರಬೇಕೆಂದ

ಶ್ರೀರಾಮರು ತಾವು ಬಂದರು ಬೇಗ
ಸಂತೋಷದಿ ಶರಧಿಯ ತಡಿಯಲಿ
ತರತರದಿಂದ ಉಡುಗೊರೆ ವೀಳ್ಯವ
ಕೊಡಸಿದನಾಗ ಶ್ರೀರಾಮ

ರಾಮರು ತಾವು ಬಂದರು ಬೇಗ
ಸಂತೋಷದಿ ಶರಧಿಯೊಳಿರಲು
ಕಪಿ ನಾಯಕನ ಮನ್ನಿಸಿ ರಾಮರು
ತರಿಸಿದನಾಗ ಗಿರಿಗಳನು

ಹನುಮ ತಂದನು ಶತಕೋಟಿ ಗಿರಿಗಳ
ಅಂಗದ ತಂದನು ಸಾವಿರವ
ಹಿಂಗಡೆ ಕಪಿಗಳು ತಂದೊಟ್ಟಿದರು
ಭಂಗಾವ ಪಡಿಸದೆ ಶ್ರೀರಾಮರಿಗೆ

ತಂದ ಗಿರಿಗಳು ಕೊಚ್ಚೀ ಹೋದವು
ಅಂದವನು ನೋಡಿ ಶ್ರೀರಾಮರು
ಕದಡಿ ಹೋಗೋದ ರಾಮರು ಕಂಡು
ತಾರೋ ಲಕ್ಷ್ಮಣ ಬಾಣವನೆಂದ

ಶ್ರೀರಾಮರು ತಾವ್ಬಾಣದ ಬಿಡಲು
ಭೂಮಿತಾಯಿ ತಾ ನಡುಗಿದಳು
ಮೃತ್ಯು ಬಂದಿತು ಸಮುದ್ರರಾಜಗೆ
ಕಂಡು ಗರ್ವದಿ ಕೊಬ್ಬಿದರು

ರಾಮರು ಬಾಣವ ಸೇದುವ ಸಮಯಕೆ
ಅಬ್ಬಿಯ ಸತಿಯರು ಬಂದರು ಬೇಗ
ಚರಣಕ್ಕೆರಗಿ ವಾಲೆಯ ಕಾಯೋ
ದೇವ ದೇವ ಚಿನ್ಮಯನೆಂದು

ಎಂದ ಮಾತನು ರಾಮರು ಕೇಳಿ
ಮನ್ನಿಸಿ ಕರೆದರು ಬಾಣಗಳ
ಶರಧಿಯ ಕಟ್ಟಿರೊ ಲಂಕೆಗೆ ಧಾಳಿಯ
ಚನ್ನಾಗಿ ನಡೆಯಿರೊ ಶೀಘ್ರದಲಿ

ಕಪಿ ನಾಯಕರು ತಾವೆಲ್ಲರು ಬಂದರು
ತರತರದಲಿ ತಂದೊಟ್ಟಿದರು
ಮೆಟ್ಟಲು ಸೇತುವೆಗಳಾದವು ಆಗ
ಸುರರು ಪೂಮಳೆಗರೆದರು ಆಗ

ಜಯ ಜಯವೆಂದನು ಶ್ರೀರಾಮಚಂದ್ರ
ಜಯ ಜಯವೆಂದನು ಲಕ್ಷ್ಮಣಾಗ
ಜಯ ಜಯವೆಂದರು ಜಾಂಬುವ ಹನುಮ
ಜಯ ಜಯವೆಂದು ಎಲ್ಲ ಪಾಡಿದರು

ಈ ಪರಿಯಲ್ಲಿ ಸೇತುವೆ ಕಟ್ಟಿ
ತಾಮಸವಿಲ್ಲದೆ ತೆರಳಿದರು
ರಾಮರ ದಂಡು ಸೇತುವೆ ದಾಂಟಿ
ಲಂಕಾದ್ವೀಪಕೆ ತೆರಳಿದರು

ಬಂದರು ರಾಮರು ಸೀತೆಯನರಸುತ
ಚಂದದಿ ಕಪಿ ಕರಡಿಯು ಕೂಡಿ
ತಂದು ಬಿಟ್ಟನೆ ಕೋಡುಗ ಹಿಂಡ
ಕೊಂದು ಬಿಡಿರೋ ರಾಕ್ಷಸರ

ನೂರು ಯೋಜನದ ನಗರವನ್ನು
ಹಾಕಿಸಿದನಾಗ ಶ್ರೀರಾಮ
ನರಹರಿ ಚಿನ್ಮಯ ನೋಡಿದ ಲಂಕೆಯ
ಬಡಗ ದಿಕ್ಕಿಗೆ ಲಕ್ಷ್ಮನಿರಿಸಿ

ತೆಂಕಲ ದಿಕ್ಕಿಗೆ ನಡೆದರು ರಾಮರು
ಪಂಕಜನಾಭನ ನಿಲ್ಲಿಸಿ
ಬಿಂಕದಿಂದಲಿ ಮೂಡಣ ದಿಕ್ಕಿಗೆ
ಸುಗ್ರೀವಂತರ ನಿಲ್ಲಿಸಿದ

ಪಡುವಣ ದಿಕ್ಕಿಗೆ ಬಂದರು ರಾಮರು
ಜಾಂಬವವರನ್ನು ಕರೆಸಿದರು
ನಾಲ್ಕು ಕಡೆಯಿಂದ ಬಂದರು ರಾಮರು
ನೋಡಿದರು ಲಂಕಾಪುರವ

ಏಳು ಸುತ್ತಿನ ಕೋಟೆ ಒಳಗೆ
ಮುತ್ತಿನ ಹವಳ್ಗೇರಿಗಳು
ಮುತ್ತು ರತ್ನದಿಂದ ಕೆತ್ತಿದ ಕೋಟೆಯ
ಅರ್ತಿಯಲಿ ನೋಡಿದ ಶ್ರೀರಾಮ

ಚಿನ್ನದ ಕೋಟೆಗೆ ರನ್ನದ ತೆನೆಗಳು
ಬೆಳ್ಳಿಯ ಕೋಟೆಗೆ ಪಚ್ಚೆಯ ತೆನೆಗಳು
ಕಂಚಿನ ತೆನೆಗೆ ಮಿಂಚುವ ಪ್ರಭೆಗಳು
ಕನಕದ ಕೋಟೆಯ ಕೊತ್ತಳವು

ತಾಮ್ರದ ಕೋಟೆಗೆ ಲೋಹದ ತೆನೆಗಳು
ಲೋಹದ ಕೊಟೆಯ ಹೊಳೆಯುತಲಿ
ನಾನಾ ವರ್ಣದ ಕೋಟೆಕೊತ್ತಳಗಳಿಂದ
ಶೋಭಿಸುತ್ತಿದ್ದಿತು ಲಂಕಾನಗರ

ಕೊತ್ತಳಕಿರುವ ಸವುರಾಣ್ಯದ
ಮುತ್ತುಗಲ್ಲು ಮೆಟ್ಟಲುಗಳಿಂದ
ಕಾದೆ ಮರಳು ಬೀಸುವ ಗುಂಡುಗಳಿಂದ
ಶೋಭಿಸುತಿದ್ದಿತು ಕೊತ್ತಳವು

## ನೂಕಿರೋ ಇವನ ಕರೆದವರ್ಯಾರು

ರಾಮ ರಾಮವೆನ್ನಿರಿ ಮೂಜಗವೆಲ್ಲ
ಸ್ವಾಮಿಯ ನೆನೆದರೆ ಪಾವನವು । ಪಲ್ಲವಿ ।

ಗಂಟೆಯ ಪಿಡಿದು ಪಾಲಿಸುತಿರಲು
ಎಂಟು ಕೋಟಿ ರಕ್ಕಸರು ಇರಲು
ಭಂಟರು ಬಂದೇಳುವರಂತೆ
ರಾಮರಿಗೆ ಅನುಮಾನವು ತೋರಿ

ಈ ಪರಿಯಲಿ ವೃತ್ತಾಂತವನೆಲ್ಲ
ಕಳ್ಳಗಿಂಡಿಯಲಿ ನೋಡುವರು
ಅಂದವನೆಲ್ಲ ದೂತರು ಹೋಗಿ
ಚೆನ್ನಾಗಿ ರಾವಣಗ್ಹೇಳುವರು

ಎನ್ನಯ ಪರಿಯ ಅರಿಯನು ರಾಮನು
ಬಂದು ಬಿಟ್ಟನೆ ಲಂಕೆಯ ಬಳಸಿ
ಬಂದುದನೆಲ್ಲಾ ಉಣ್ಣಲಿ ಈಗ
ಚೆನ್ನಾಗಿ ಪೆಟ್ಟನಿಕ್ಕಿರೋ ಬೇಗ

ಎನ್ನಯ ಕಂಡೆಯ ಕೇಸರಿಯ
ಜಗದೊಳು ಹರನೊಡನೆ ಹೋರಾಡಿ
ಮುನ್ನೂರ್‍ಮೂವತ್ತುಕೋಟಿ ದೇವತೆಗಳ
ಚೆನ್ನಾಗಿ ಸೆರೆಯ ಮಾಡಿಸಿದ್ದೆನು ನಾನು

ಎಂದು ರಾವಣ ನುಡಿದನು ಸಭೆಯಲ್ಲಿ
ತಮ್ಮ ಬಾಗ್ಯ ವಿಭೀಷಣನೆ
ಸುಮ್ಮನೆ ಹೋಗಿ ರಾಮರ ಕೊಂದು
ಸುಮ್ಮಾನದಿ ನೀ ಬಾರೆಂದ

ಎಂದ ಮಾತ ವಿಭೀಷಣ ಕೇಳಿ
ಮಂದಮತಿ ರಾವಣ ನೀನು
ತಂದೆ ಶ್ರೀರಾಮರ ಪಾದವ ಕಾಣುವೆ
ತಂದು ಜಾನಕಿಯ ಕಳುಹೆಂದ

ಘುಡಿ ಘುಡಿಸುತ್ತ ರಾವಣ ಕೋಪದಿ
ಖಡ್ಗ ಜಡಿದನು ಸಭೆಯಲ್ಲಿ
ಕೊಂದುಬಿಡುವೆ ಹೋಗೋ ವಿಭೀಷಣ
ತಂದ ಸೀತೆಯನು ಬಿಡುವವನಲ್ಲ

ತಾಯಿಯ ಬಳಿಗೆ ಬಂದ ವಿಭೀಷಣ
ರಾವಣ ಜರಿದನು ಓಲಗದಿ
ಹೋಗುವೆ ನಾನು ಕಾಣುವೆ ರಾಮರ
ಎಂದು ತಾಯ್ಗಿಗೇಳಿದನಾಗ

ನಾಮವ ಧರಿಸಿದ ಹಣೆಯೊಳಗೆ
ತುಲಸಿಯ ದಂಡೆಯು ಕೊರಳೊಳಗೆ
ಚೆನ್ನಾಗಿ ರಾಮರ ಪಾದವ ಭಜಿಸುತ
ಆಗ ವಿಭೀಷಣ ತೆರಳಿದನು

ಸಾರಿ ಹೇಳುವೆ ಕೇಳೆಲೊ ರಾವಣ
ವಾರಿಜಮುಖಿಯನು ಕಳಿಸಯ್ಯ
ರಾಮರ ಕಾಣುವೆ ಜೀವವನುಳುಹುವೆ
ಖೂಳ ರಾವಣ ಬೇಡೆಲವೊ

ನೂಕಿರೊ ಇವನ ಕರೆದವರ್‍ಯಾರು
ಹೋಗೋ ಎನ್ನಯ ಹಗೆಯ ಬಳಿಗೆ
ಎಲ್ಲವನು ಹೇಳೋ ನಿನ್ನ ರಾಮನಿಗೆ
ತಂದ ಸೀತೆಯನು ಬಿಡುವವನಲ್ಲ

ಲಂಕೆಯಿಂದ್ಹೊರಟನು ವಿಭೀಷಣ
ಪಂಕಜನಾಭನ ಭಜಿಸುತಲಿ
ಬಂದು ಚರಣಕ್ಕೆರಗಿದ ದೇವನ
ನೋಡಿದನಾಗ ಶ್ರೀರಾಮ

ಬಂದ ಭಕ್ತನ ಮನ್ನಿಸಿ ರಾಮರು
ನೀನು ನಮಗೆ ಸಮನೆಂದು
ಮುಂದೆ ದಶಶಿರನನ್ನು ಕೊಂದು
ಲಂಕೆಯೊಳು ಸ್ಥಿರಪಟ್ಟವು ನಿನಗೆಂದು

## ನೋಡೆನ್ನಯ ಕಾಳಗವನ್ನು

ರಾಮ ರಾಮವೆನ್ನಿರಿ ಮೂಜಗವೆಲ್ಲ
ಸ್ವಾಮಿಯ ನಾಮವ ನೆನೆದರೆ ಪಾವನವು । ಪಲ್ಲವಿ

ಅಂಗದನ ಕರೆಸಿದರು ರಾಮರು
ಚಂದದಿ ಲೆಂಕೆಗೆ ನೀ ಹೋಗಿ
ಮಂದಬುದ್ಧಿಗಳ ಬಿಡಿಸಿ ರಾವಣನಿಗೆ
ಮಂದಗಮನೆಯನು ನೀ ಕಳುಹೆಂದ

ಬಂದನು ಅಂಗದನು ರಾವಣನೋಲಗಕೆ
ತುಂಟ ರಾವಣ ಕೇಳಲೊ ನೀನು
ಗಂಡುಗಲಿ ಶ್ರೀರಾಮರ ಸೀತೆಯನುಯ
ಚಂದದಿ ಕಳುಹಿ ನೀ ಬದುಕೆಂದ

ಖಂಡವನೇ ತುಂಡು ಮಾಡುವರು
ದಿಂಡುದರಿಯುವರು ನಿನ್ನಯ ಕುಲವ
ಮಂದ ಬುದ್ಧಿಗಳು ಬೇಡಲೊ ರಾವಣ
ಮಂಗಗಮನೆಯನು ನೀ ಕಳುಹೆಂದ

ಕೇಳೆಲೆವೊ ನಿನ್ನ ತಂದೆಯನು
ಮಾಯದಿಂದಲಿ ಕೊಂದನು ರಾಮ
ನ್ಯಾಯವೆ ನೀನವರೊಳಗಿರುವುದು
ಅನ್ಯಾಯತನವು ನಿನ್ನದು ಎಂದ

ನಮ್ಮ ತಂದೆಯು ನಿನ್ನ ಕಟ್ಟಿದ್ದು
ಹತ್ತು ತಲೆಯ ಹುಳವೆಂದು
ಮನ್ನಿಸಿಬಿಟ್ಟರೆ ಗರ್ವವು ಬಂತೆ
ಶ್ರೀಲೋಲ ರಾಮರಿಗೇಳುವೆನೆಂದ

ಅಂಗದ ರಾವಣನೋಲಗದಿಂದ
ಬಂದು ರಾಮರಿಗೆ ಹೇಳಿದನು
ಮಂದ ಬುದ್ಧಿಗಳ ಬಿಡುವವನಲ್ಲ
ನಿನ್ನ ಬಾಣಕೆ ಬಲಿಕೊಡಬೇಕವನ

ಎಂದು ಅಂಗದ ಹೇಳಲು ರಾಮರು
ಚಂದದಿ ಮನ್ನಿಸಿ ಅಂಗದನ
ಇಂದಿಗೆ ದಿನತುಂಬಿತು ದಶಶಿರನಿಗೆ
ರಾಮಬಾಣವ ಪೂಜಿಸಿರೆಂದ

ಒಂದೇ ಪರಿಯಲಿ ರಣಭೇರಿಯು ಮೊಳಗಿ
ಚಂದದಿ ಕಪಿ ನಾಯಕರೆಲ್ಲ
ಬಂದು ಧನುವನು ಪೂಜಿಸಿ ನಿಂದರು
ತಂದೆ ರಾಮರ ಪಾದವ ಕಂಡು

ಬಂದನು ಇಂದ್ರಜಿತು ತಾನೆ ಕಾಳಗಕೆ
ರಾವಣಗ್ಹೇಳಿದ ಬೇಗದಲಿ
ನಾನಾ ಪರಿಯಲಿ ಸಿಂಗಾರವಾಗಿ
ಲೆಂಕೆಯಿಂದೊರಟನು ರಕ್ಕಸನು

ಎಂಟುಕೋಟಿ ರಕ್ಕಸರು ಸಹಿತ
ಲೆಕ್ಕವಿಲ್ಲದೆ ತುರಗ ಗಜಗಳು
ಬಂದು ರಾಮರ ಬಲವನು ಕಂಡನು
ಕುಡಿವೆನು ನಿಮ್ಮಯ ರಕ್ತವನು

ಮಗ ಬರುವುದ ವಿಭಿಷಣ ಕಂಡು
ದಶಕಂಠನು ಈ ಗಕಳುಹಿದನು
ಇಂದ್ರಜಿತು ಬಲು ಬಲವಂತನು
ಇವನಿಗೆ ಧರೆಯೊಳು ಸ್ಥಿರಕಾಯ

ಇವನ ಕೊಲ್ಲುವರು ಹನ್ನೆರಡು ವರುಷ
ಅನ್ನ ನಿದ್ರೆ ಇಲ್ಲದೆ ಇರಬೇಕು
ತನ್ನ ಸಂಗತಿ ಸಂಗವನು ತೋರರಲ್ಲದೆ
ಇವನ ಕೊಲ್ಲುವುದು ಅರಿದೆಂದ

ಎಂದ ಮಾತನು ರಾಮರು ಕೇಳಿ
ನಾನಾ ಪರಿಯಲಿ ಚಿಂತಿಸುತ
ರಾಮರ ಬಲದಲಿ ಜೈಸುವವರನು ಕಾಣೆನು
ದಶರಥರಾಮನು ಬೆರಗಾದ

ಈ ಪರಿಯಲಿ ಸ್ವಾಮಿಯು ಕೋಪಿಸೆ
ಲಕ್ಷ್ಮಣನೆದ್ದನು ಹರುಷದಲಿ
ಕೊಲ್ಲುವೆ ಅಸುರನ ಚೆಲ್ಲುವೆ ರಕುತವ
ಎನ್ನಯ ಪರಿಯನು ನೋಡಿರಿ ನೀವು

ಅನ್ನವ ಬಿಟ್ಟೆ ನಿದ್ರೆಯ ತೊರದೆ
ಅಣ್ಣನೆ ನಿಮ್ಮಯ ಸನಿಹದಲಿ
ಸತಿಸಂಗವು ಮೊದಲಿಲ್ಲ ಎನಗೆ
ಅಮಿತ ಪರಾಕ್ರಮ ರಘುರಾಮ

ಅನುಜನ ಮಾತನು ಕೇಳುತ ರಾಮ
ಮನದಲಿ ತಿಳಿದನು ನಿಜವೆಂದು
ತಮ್ಮನೆ ನಿನ್ನೊಳು ಸತ್ಯವ ಕಂಡೆನು
ಇಂದ್ರಜಿತುವನು ನೀ ಜಯಿಸೆಂದ

ಎಂದು ಲಕ್ಷ್ಮಣಗೆ ಹೇಳುತ ರಾಮರು
ಚಾಂಬುದ ಅಂಗದರನು ಕೊಟ್ಟು
ಅಸುರರ ಕುಲವನು ಸಂಹರಿಸೆಂದು
ವಸುಧೆಗೊಡೆಯ ಅಪ್ಪಣೆಯಿಲ್ಲದ

ಚದುರಿಸಿದನು ಶ್ರೀರಾಮರ ಬಲವ
ಬೆದರಿಸಿದನು ಕಪಿಕರಿಡಗಳ
ಘುಡಿಘುಡಿಸುತ ಅಸುರನು ಮೊರೆಯುತ
ಲಕ್ಷ್ಮದೇವನ ನೋಡಿದನು

ಲಕ್ಷ್ಮಣ ಸವರಿದ ಒಂದೇ ಬಾಣದಿ
ಅಕ್ಷಯ ಕೋಟಿ ರಾಕ್ಷಸರ
ಗರ್ವರ ಬಿಡಿಸಿದೆ ಇಂಜದ್ರಜಿತುವಿಗೆ ಎಂದು
ಬಂದು ರಾಮರಿಗೆ ಹೇಳಿದನು

ಬಂದನು ಇಂದ್ರಜಿತು ಅಂದಿನ ಇರುಳು
ತಂದೆ ರಾವಣಗೆ ಹೇಳಿದನು
ಲಕ್ಷ್ಮಣನೆಂಬುವ ಬಲು ಬಲವಂತ
ನಮ್ಮಯ ಬಲನೆಲ್ಲವ ಕೊಂದನು ಎಂದೆ

ನಾಳೆ ಲಕ್ಷ್ಮಣನ ಹಿಡಿದು ತರುವೆನು ಎಂದ
ನೋಡೆನ್ನಯಾ ಕಾಳಗವನ್ನು
ಬಂದನು ಅಸುರನು ತನ್ನರಮನೆಗೆ
ತನ್ನ ಸತಿಯರ ಮೇಳದೊಳಿದ್ದೆ

ಸತಿಯರೆ ಕೇಳಿರಿ ನಿಮ್ಮ ಹಂಬಲವು
ಚನ್ನಾಗಿ ತೀರಿತು ನಮಗಿಂದು
ಸಮರಕ್ಕೆ ಹೋಗುವೆ ರಾಮರ ಬಳಿಗೆ
ಸ್ವರ್ಗವ ಸೂರೆಯ ಗೈಯುವೆ ನಾನು

ಎಂದು ತನ್ನಯ ಸತಿಯೊಳು ನುಡಿದು
ಚಂದದಿ ಸಿಂಗರಿಸುತಲಾಗಿ
ಒಂದನು ಅಸುರನು ಬಲುಬಲವಂತನು
ನಿಂದನು ಬೇಗದಿ ಕಾಳಗಕೆ

ಲಂಕೆಯ ಹೊರ ಹೊರಟನು ಇಂದ್ರಜಿತು
ಬಿಂಕದಿ ಬಂದನು ರಾಮರ ಬಳಿಗೆ
ಶಂಕೆಯಿಲ್ಲದೆ ಅಸುರರ ಸಹಿತ
ಮೊರೆಯುತ ಹೊಕ್ಕನು ಬಲಗಳನು

ಚದುರಿಸಿ ಬಲವನು ಬೆದರಿಸಿ ಬಲವನು
ಬಲವನು ತಗ್ಗಿಸಿ ಮುನ್ನುಗ್ಗಿದರಾಗ
ಬಲಗಳನೆಲ್ಲ ನಿಮಿಷದಿ ಕೊಂದು
ಮೂರ್ಚೆಗೆ ತಂದನು ಲಕ್ಷ್ಮಣನ

ಶ್ರೀರಾಮರು ನೋಡಿ ಹನುಮನ ಕರೆದು
ಸಂಜೀವನ ತರಿಸಿದರು ಬೇಗ
ಜೀವರತ್ನವ ತುಂಬಲು ಲಕ್ಷ್ಮಣ
ನಿದ್ರೆಯ ತಿಳಿದು ಎದ್ದನೆ ಆಗ

ನೋಡಿದನಣ್ಣನು ಮಾಡಿದುಪಾಯವ
ಸೇದಿದ ಕೆನ್ನೆಗೆ ಬಾಣವನು
ಭೋರನೆಸೆಯಲು ಅಸುರನ ಶಿರವರಿದು
ಅಂಬರದಲಿ ಹಾರಿತು ಆಗ

ಬಂದ ಅಸುರರ ತುಂಡುತುಂಡನೆ ಮಾಡಿ
ಚಂದದಿ ನಲಿಯುತ ಲಕ್ಷ್ಮಣನು
ಅಂಬರದಿಂದಲಿ ಪೂಮಳೆಗೆರೆದು
ನಿಂದರು ದೇವತೆಗಳು ಹರುಷದಲಿ

ಆ ಸುದ್ದಿಯ ದಶಕಂಠನು ಕೇಳೆ
ಶೀಘ್ರದಿಂದಲೆ ಕಳುಹಿದನನುಚರರ
ಮಕ್ಕಳನೆಲ್ಲ ಕಳುಹಿದ ರಾವಣ
ರಾಮ್ಬಾಣದಲಿ ಬಿದ್ದರು ಎಲ್ಲ

# ದಶಶಿರನನ್ನು ಭೇದಿಸಿದರು

ರಾಮ ರಾಮವೆನ್ನಿರಿ ಮೂಜಗವೆಲ್ಲ
ಸ್ವಾಮಿಯ ನಾಮವ ನೆನೆದರೆ ಪಾವನವು । ಪಲ್ಲವಿ ।

ರಾವಣ ತಾನೆ ಬಂದನು ಬೇಗ
ಓಡಿಸುವೆ ರಾಮರನು ಎಂದು
ಬಲ ರಕ್ಕಸರನೊಡಗೂಡಿ ರಾವಣ
ಬಂದು ನಿಂತನು ದಶಕಂಠ

ರಾವಣನ ನೋಡಿದ ಶ್ರೀರಾಮಚಂದ್ರ
ಹನುಮನ ಮೇಲೆ ಪಾದವನೂರಿ
ಪೂಜಿಸಿದರು ಘಂಟೆಯಲಿ ಧನುವನ್ನು
ಶಿರವ ಭೇದಿಸಿದ ರಾಂಬಾಣದಲಿ

ರಾವಣನ ತಲೆ ಚಿಗುರುತಲಿರಲು
ನೋಡುತ ರಾಮರು ಆಶ್ಚರ್ಯದಲಿ
ಕಾರಣವೇನು ವಿಭೀಷಣ ಎಂದೊಡೆ
ಸ್ವಾಮಿ ಅಮೃತಕಳಸ ಹೃದಯದೊಳೆಂದ

ಅಂಗದ ಒಂದು ಕಡೆ ಜಾಂಬವ ಒಂದು ಕಡೆ
ಸುಗ್ರೀವ ಕಪಿಬಲ ಒಂದು ಕಡೆ
ಬಂದ ಅಸುರರ ತುಂಡುತುಂಡು ಮಾಡಿ
ಕೊಂದರು ಐದನೆ ದಿವಸದಲಿ

ಲಂಕೆಯ ಅಸುರರ ಬಲವನೆಲ್ಲ
ಪಂಕಜನಾಭನ ಭಂಟರು ಎಲ್ಲ
ಶಂಖೆಯಿಲ್ಲದೆ ಸೀಳಿದರಾಗ
ಡೊಂಕು ಹನುಮ ಸಾರುತಲಿರ್ದ

ರಾವಣ ಬಂದನು ಕುಂಭಕರ್ಣನ ಅರಮನೆಗೆ
ನಿದ್ದೆಯೊಳಿದ್ದನು ಅಸುರನು ಆಗ
ತಂದರು ನಾನಾ ಬಗೆ ಚೂರ್ಣಗಳ
ಹಿಡಿದರು ಅಸುರನ ಮೂಗಿನೊಳಗೆ

ಭೇರಿಯ ಬಡಿಸಿದ ಶತಲಕ್ಷಗಳ
ಕೋಣ ಬಂಡಿಗಳು ಕೋಟಿಗಳಿರಲು
ಕೋಟಿ ಸನ್ನೆಯಲಿ ಮರಗಳ ಮುರಿದು
ನಿದ್ರೆಯ ತಿಳಿದು ಎದ್ದನೆ ಅಸುರ

ಅಸುರನು ಎದ್ದನು ನಿದ್ದೆಯ ಭಾರದಿ
ಶತಕಂಡಗವ ಉಂಡನು ಆಗ
ಮಾರಿಯಂದದಿ ಹೊರಟನು ಅಸುರ
ಸವರಿದರೂ ರಾಂಬಾಣದಲಿ

ಐದು ಯೋಜನದಗಲಕೆ ಬಿದ್ದ ಕುಂಭಕರ್ಣ
ಬಿದ್ದ ಅಸುರನು ರಾಂಬಾಣದಲಿ
ಬಿದ್ದ ಭಾರಕೆ ಕೂರ್ಮನು ನಡುಗಿ
ಅಷ್ಟದಿಗ್ಗಜಗಳು ತಲೆಕೊಡವಿದವು

ಬಂದ ರಾವಣ ಮೂಲ ಬಲ ಸಹಿತ
ಅನಂತ ಕೋಟಿ ರಕ್ಕಸರಿರಲು
ಬಿಂಕದಿ ಬಿಟ್ಟನು ಬಾಣ ರಾಮರಿಗೆ
ನೋಡು ನೀನು ವಸುಧೆಯ ಪಾಲ

ತುಂಟ ರಾವಣ ನೋಡೆಲೊ ನೀನು
ನಮ್ಮಯ ಬಾಣದ ಬಗೆಯನ್ನು
ದಶಶಿರವನ್ನು ತರಿದುಕೊಂಡೀಗ
ಕೊಂಡು ಬರುವುದು ಜಾನಕಿಯನ್ನು

ಬಿಡದೆ ರಕ್ಕಸ ಹೊಡೆಯಿರೊ ತಲೆಯ
ಖಂಡವ ಹರವೀ ಧರಣಿಯಲಿ
ಸಾರಿದೆ ರಾವಣ ಬಿಡು ಸೀತೆಯನು
ನಿನ್ನ ದಶಶಿರಗಳ ಸೀಳುವೆನೆಂದ

ರಾಮರು ಆಗ ಹನುಮನ ಕರೆದು
ಪಾದವನೂರಿದರು ಆಗ
ರಾಮ ಬಾಣದಿ ದಶಶಿರವನ್ನು
ಛೇದಿಸಿದರು ಒಂದು ನಿಮಿಷದಲಿ

ಹತ್ತು ಯೋಜನದಗಲಕೆ ಬಿದ್ದನು ರಾವಣ
ಬೆಟ್ಟದಂತೆ ಕೂರ್ಮೀಸೆಗಳು
ಕಂಗಳ ಕೈಕಾಲುಗಳ ಹೊಗಳಲು
ನಾಗಾಧಿಪಗಳವಲ್ಲ.

ದೇವತೆಗಳು ಪೂಮಳಗರೆದರು ಆಗ
ಘನ ಹರುಷದಲಿದ್ದನೆ ಶ್ರೀರಾಮ
ಲಂಕಾಧಿಪತ್ಯವು ವಿಭೀಷಣಾಗಿತ್ತು
ಪಂಕಜನಾಭನು ತೆರಳಿದನು

ಸಕಲ ಬಲದಿ ನಲಿಯುತ ರಾಮರು
ಅಯೋಧ್ಯಾಪುರಕೆ ತೆರಳಬೇಕೆನುತ
ಸುಗ್ರೀವ ಜಾಂಬವ ಹನುಮರ ಕರೆಸಿ
ರಾಮರು ಬರುವರು ಅಯ್ಯೋಧ್ಯಾಪುರಕೆ

ಕಪಿಬಲದಿ ನಲಿಯುತ ರಾಮರು
ಬಂದರು ಸಕಲ ಮುನಿಗಳ ಸಹಿತ
ಬಂದರು ಸಕಲ ಸುರಸಂತತಿಗಳು
ನಿಂದು ಕಾಣಿಕೆಯ ನೀಡಿದರು

ಜಾನಕಿಯನ್ನು ಕರೆಸಿದರಾಗ
ಅಗ್ನಿಯನ್ನು ತೆಗೆಸಿದರು ಬೇಗ
ಕೊಂಡದೊಳಗೆ ಸೀತೆಯನ್ನು ಹಾಯಿಸಿ
ಕರೆತಂದನು ಶ್ರೀರಾಮಚಂದ್ರ

ರಾಮ ಲಕ್ಷ್ಮಣ ಜಾನಕಿ ಸಹಿತ ರಥವೇರಿ
ವೇಗದಿ ಕಪಿಬಲ ಸಹಿತವಾಗಿ
ಭೋರೆಂಭೊ ಭೇರಿಯ ಮೊಳಗುತಲಾಗ
ರಾಮರು ಬರುವರು ಅಯೋಧ್ಯೆಗೆ

## ಪಟ್ಟಾಭಿಷೇಕವ ಮಾಡಿದರೆಲ್ಲ

ರಾಮ ರಾಮವೆನ್ನಿರಿ ಮೂಜಗವೆಲ್ಲಾ
ಸ್ವಾಮಿಯ ನಾಮವ ನೆನೆದರೆ ವನವು । ಪಲ್ಲವಿ ।

ತರತರದಿಂದ ಭರತನ ಬಳಿಗೆ
ಚರರನು ಕಳಿಸಿದ ಶ್ರೀರಾಮ
ದೇವ ದೇವ ಬರುವಾನೆಂದು
ನಿಂದರು ಬೀದಿ ಬೀದಿಯಲಿ

ತಾಯಿ ಕಂಸಲೆಗ್ಹೇಳಿದ ಭರತ
ರಾಮರು ಬರುವ ಸಂಭ್ರಮವ
ಕೇಳಿ ಹರುಷವ ತಾಳಿದಳಾಗ
ರಾಮ ರಾಮ ಎಂದಳು ಮಾತೆ

ಮುತ್ತಿನ ಚಪ್ಪರ ಹಾಕಿಸಿದರಾಗ
ರತ್ನದ ಕಲಶ ಕನ್ನಡಿಗಳ ನಿಲಿಸಿ
ಚಿತ್ತರಿಸಿದನು ಅಯೋಧ್ಯಪುರಪಾವ
ತೋರಣ ಹೊಂಗಲಸಗಳಿಂದ

ಬೀದಿ ಬೀದಿಗಳ ಶೃಂಗಾರ ಮಾಡಿ
ರಾಮರು ಬರುವ ಸಂಭ್ರಮದಿ
ನಾನಾ ದೇಶದ ದೊರೆಗಳು ಬಂದರು
ರಾಯ ದಶರಥನ ಅರಮನೆಗೆ

ಬ್ರಹ್ಮ ಹರಿ ರುದ್ರಾದಿಗಳು
ನಿರ್ಮಲ ಸೀತೆಯನೊಡಗೊಂಡು
ಕರ್ಮ ವಿಮೋಚನ ಅಯೋಧ್ಯೆಗೆ ಬಂದು
ತಾಯಿ ಕಂಸಲೆಗೆ ವಂದಿಸಿ ಬಂದ

ರಾಮರನೆತ್ತಿ ಕಂಸಲೆ ಸಂತೈಸಿ
ಸೀತೆಯ ಕೆಲದಲಿ ಕುಳ್ಳಿರಿಸಿ
ಬಳಲಿದಿರಾ ಮಕ್ಕಳಿರಾ ಸೊಸೆಯರೆ
ಬರಲಿ ನಿಮ್ಮ ಪುಣ್ಯವು ಕೈಕೆಗೆ

ಸಕಲ ಮುನಿಜನ ಸಾರ ಹೃದಯಗೆ
ಪಟ್ಟಾಭಿಷೇಕವ ಮಾಡಿದರೆಲ್ಲ
ರಾಮ ರಾಜ್ಯವಾಗಿ ಜಗವೆಲ್ಲ ನಲಿದು
ದೇವತೆಗಳು ಪೂಮಳೆಗರೆದರು

ಸಾವಿರ ಗೋದಾನದ ಫಲವು
ಭೂಮಿಯನು ಅಮರರಿಗಿತ್ತು
ಸಾರಿದ ಸಕಲ ತೀರ್ಥದ ಫಲವು
ಶ್ರೀಲೋಲ ರಾಮರ ಚರಿತೆಯಿದು

ಪ್ರಜೆಪರಿವಾರವ ಕರೆಸಿದ ರಾಮ
ಕೊಡಿಸಿದನವರಿಗೆ ವೀಳ್ಯವನು
ಕರೆಸಿ ರಾಮರು ಕೈಗಾಣಿಕೆಯ
ಮನದಣಿವಂದದಿ ಇತ್ತರೆ ಆಗ

ಕನ್ನಡದಿ ಹೇಳಿದನೀ ಕಥೆಯ
ಚನ್ನಾಗಿ ಲಾಲಿಸಿ ಸಜ್ಜನರು
ಧರೆಯಲಿ ರಾಮರ ಕೃತಿಯಿಂದ ಕೊಂಡಾಡೆ
ಪನ್ನಂಗಧರ ನಮ್ಮನು ರಕ್ಷಿಸುವ

ಧರೆಯೊಳು ಶೇಶಾದ್ರಿಗಿರಿವಾಸ.
ಅರಸು ವೆಂಕಟ ಭೂರಮಣನು
ವರಗಳ ಕೊಟ್ಟು ರಕ್ಷಿಸು ನಮ್ಮನು
ವೆಂಕಟೇಶ ದಾಸರ ಹೃದಯದಲಿ

## ಭಾಗವಂತಿಕೆ ಪದಗಳು–೨

### ರಾಮಾಯಣದ ಬಿಡಿ ಪದಗಳು

### ಮಂಡೋದರಿ ಕನಸು

ಬೇಡ ಸೀತೆಯ ಕೊಟ್ಟು ಕಳುಬೇಕು ರಾಮರ
ಹೇಳಿದರೆ ಎನ ಮಾತ ಕೇಳದೋದಲಣ್ಣ । ಪಲ್ಲವಿ ।

ಅಡವಿಯ ಒಳಗೊಂದು ಗಿಡ ಹುಟ್ಟಿ ಬೆಳೆದಾರೆ
ಕೊಡಲಿಯ ಕಾವಿಗೆ ಕುರುವಿಟ್ಟರು
ಕೊಡಲಿಯ ಕಾವೋಗಿ ಕುಲಕೆ ಮಿತ್ತಾಯಿತು
ನೀ ಹುಟ್ಟಿ ನಮಗಿನ್ನು ಉಳಿಗಾಲವಣ್ಣ

ಅಂದು ಪಟ್ಟವ ಕಟ್ಟುವಾಗ ಮುಂದೆ ಶಕುನವಾಗಲಿಲ್ಲ
ಹೆಣ್ಣಿನಿಂದಲೇ ಪಟ್ಟ ಕೆಡುವುದಣ್ಣ
ಅಂದು ಹುಟ್ಟಿ ಸೀತಾಪತೆ ಮುಂದೆ ಕೊರಳ ಮುರಿದರೆ
ನಾ ಹುಟ್ಟಿ ಮರುಳ್ಗಾಲ ತಿರುಗೋದಲಣ್ಣ

ಮಂಡೋದರಿ ತಾನು ಕಂಡ ಕನಸ ಕಂಡು
ಗಂಡ ರಾವಣನ ಕೂಡ್ಹೇಳಿದಳು
ಕೆಂಡದ ಮಳೆ ಹುಯ್ದು ಮಂಡೆ ಬೆಯ್ಯೋದ ಕಂಡೆ
ಕುಂಡು ಹೋಗೋದ ಕಂಡೆ ಯಮನ ಪಟ್ಟಣಕೆ

ಹತ್ತು ತಲೆಯನೊಯ್ದು ಶರ ಬುರುಡೆಯ ಮಾಡಿ
ಇಪ್ಪತ್ತು ತೋಳಲಿ ಕರವನೂಡಿ
ಬೆನ್ನ ನರವ ಕಿತ್ತು ತಂತಿಯ ಮಾಡಿ
ಮುಡುನಾಡೊ ಪಯಣವ ಯಾಗ್ಹೊರಟಿರಣ್ಣ

ಹತ್ತು ಕೋಟಿ ಕವಚ ಒಂದೊತ್ತಿನಲ್ಲಿ ಹೋಗುವಾಗ
ಸೂರ್ಯನ ಹಬೆಯಲ್ಲಿ ಹ್ಯಾಗ್ಹೊರಟಿರಣ್ಣ
ಧರೆಯ ಮೇಲ್ನಡದರೆ ಶ್ರೀಪಾದ ನೊಂದವೆಂದು
ಶಿರಹಸ್ತವ ಕಡಿದರೆ ಹ್ಯಾಗೆ ತಾಳಿರಣ್ಣ

ಹಾಲು ಅನ್ನನುಂಡು ಜೇನು ಸಕ್ಕರೆ ಮೆದ್ದು
ವಾಲಾಡಿ ನಾವಿಬ್ಬರು ಬೆಳೆದವಣ್ಣ
ಮೂಗಂಡ್ಗ ಸಣಮಲ್ಗೆ ಮುಗಿಲೆತ್ತುವೆನುತಿದ್ದೆ
ಹಾಳ ಗೋಡೆಗೆ ನಾವು ಹತವಾದವಣ್ಣ

ಸುತಲೆಲ್ಲ ಸುಳಗೇರಿ ಮುತ್ತು ಮಾರೊದಂಗಡಿ
ನಡುವೆ ಕಟ್ಟಿತು ನಮ್ಮಿಬ್ಬರ ಅರಮನೆ
ಹತವಾದ ಮರುಳ್ಕಂಡೆ ಇತ ಮಾಡಿ ಕರ ತಂದೆ
ಸುತಲೆಲ್ಲ ಲಂಕೆಯ ಹಾಳು ಮಾಡಿರಣ್ಣ

## ಬಂದಾನು ಭವದೂರ ತಾವಗಿಳಿದ

ಅಂದಿಗಸುರರ ಕೊಂದ ಗಿಂಡಿ ರಘುರಾಮರ
ಬಂದಾನು ಭವದೂರ ತಾವಗಿಳಿದ । ಪಲ್ಲವಿ ।

ತಂದೆಯ ಶಾಪಕ್ಕೆ ಬಂದಿತಾರಣ್ಯವು
ಒಂದು ಮಾಯದ ಹೊನ್ನ ಮೃಗಸುಳಿಯೆ
ಒಂದು ಮಾಯದ ಹೊನ್ನ ಮೃಗದ ಬೆನ್ನಲಿ ಬಂದು
ಪುಂಡ ರಾವಣ ದೇವಿಯನೊಯ್ದು

ನಿಂದನು ಮಾವಿನ ಮರದಡಿ ಹನುಮಯ್ಯ
ನೊಂದುಕೊಂಡನು ತನ್ನ ಮನದಲ್ಲಿ
ನೊಂದುಕೊಂಡನು ತನ್ನ ಮನದಲ್ಲಿ ಹನುಮಯ್ಯ
ತಂದುಕೊಡುವೆ ದೇವಿಯನೆನುತ

ಲಂಕೆಗೆ ದಾರಿ ತೋರಿಸಿಕೊಂಡು ಹನುಮಯ್ಯ
ಲೆಂಕಿಣಿ ಎಂಬ ದೈತ್ಯಳ ಕೊಂದು
ಅಂಕದ ಕಸಿದೊಳಿಗಾಳೆ ನುಡಿಸಿಕೊಂಡು
ಮಂಚಕ್ಕೆ ಎರಗಿದ ರಾವಣನ

ಪಡೆದ ತಾಯಿಯ ನೋಡಿ ಕೆಡದನು ಹನುಮಯ್ಯ
ಎರಗಿದ ರಭಸಕೆ ಹಣ್ಣೆಂಬುತ
ತರಳ ಮುರಿದು ಹಣ್ಣನು ತಂದೆ
ಇಳಿದು ಬಂದು ರಾಮರ ಕಂಡೆ
ತರುಣಿಗೆರೆಯ ಸಾರಂಗಗೆ ಕೈಮುಗಿದು
ಬರಳಿದ ಕಾರಣವೇನೆಂದ

## ರಾವಣ–ಹನುಮರ ಸಂವಾದ

ಬಾಪುರಿಯ ಹನುಮಂತ ಕೋಪಗಳು ನಿಮಗೇಕೆ
ಬಾಪು ಬಳ್ಳಾಪುರದ ಕರಿಯ ಹನುಮ । ಪಲ್ಲವಿ ।

ಜಂಡಿಕೈಲಿ ಜನಿವಾರ ಕೊಂಡದಲಿ ಕೈಪೂಜೆ
ದಂಡಿವಾಳದ ಕೋಲು ನಿಮ್ಮ ಕೈಲಿ
ಲಂಡನಿವನ್ಯಾರೆಂದು ಕೇಳಿದರೆ ರಾವಣ
ಹಿಂಡ ದೈತ್ಯರ ಗಂಡನೆಂಬೊಧರೆಯ
ದಂಡನೆ ತರುವೆನು ಸುಡುಬಿಡುವೆ ಲಂಕೆಯ
ಬಂಡು ಮಾಡುವೆನರ್ದ ಘಳಿಗೆಯಿಂದ
ಗಂಡನುಳ್ಳವಳ ತಂದು ಮೈಯಪ್ಪಿ ಎಲೆ ತಮ್ಮ
ದಂಡು ಬರುವ ಕಡೆಗೆ ಸೈರಿಸೆಂದ

ಕೋಪದಲಿ ರಾವಣ ಮೀಸೆಯನು ಮುರುಕೊಂಡ
ಹೇಸಿಗುಡಿಕಾ ನಿನ್ನ ಸಾಸವೇನು
ಜಾತಿ ಮಿರ್ಗವ ಮಾಡಿ ಸೀತೆಯನು ತರುವಾಗ
ಸಾಸ ಬಲ್ಲಿದರೆಲ್ಲ ಎಲ್ಲಿದ್ದರೊ
ಕದ್ದು ತರುವಾಗ ನಾನಿದ್ದರುಂಟಾದರೆ
ಒದ್ದೂ ಕೊಲ್ಲುವೆ ನಿನ್ನ ರಥದ ಮೇಲೆ
ಕದ್ದು ಬಂದ್ಯಲೊ ತಮ್ಮ ಬುದ್ಧಿವಂತನಾದೆ
ಸದ್ದು ಮಾಡದೆ ಫಲವ ಸೈರಿಸೆಂದ

ಕಡಿದು ಹಾಕುವೆನೆಂದ ಕೈಯನೆತ್ತಲು ಮುನ್ನ
ಕಡೆಗಣ್ಣ ನೆವದಲ್ಲಿ ಹುಸಿನಕ್ಕನೂ
ಹುಸಿ ನಗೆಯ ನಗಬೇಡ ಹೆಸರ ಹೇಳಲೊ ತಮ್ಮ
ಅಸುರ ದಾನ್ವರು ಬಂದು ಬಲಗೊಂಬರು
ನಾವೇನು ಬಲ್ಲವಯ್ಯ ಎಡಬಲದ ನಾಯಕರು
ಮೂರುಲೋಕದ ಗಂಡನೆಂಬ ದೊರೆಯೊ

ತಾಸಿನಲ್ಲಿ ತೂಗಿದನು ಪಡುವಲ ಲಂಕೆಯಂ
ದೋಷರಕ್ಕೆ ಹಾಕಿದನು ತುದಿ ಬಾಲವ
ದೇಶಪಾಲಿಪ ಎನ್ನೊಡಯ ರಘುರಾಮರ

ನೋಯ್ಲ ಬ್ಯಾಡವೋ ನೋಡಿ ಬಾರೆಂದನು
ದೇಶದ ಗಿರಿಯ ಜನರುಗಳೆಲ್ಲ ನಿಮ್ಮಿಂದ
ಮೀಸಲಾಗಿರುವ ದಂಡು ಬರುವ ತನಕ

ರಾಮರಿಗೆ ಭಂಟನೋ ರಾವಣಗೆ ವೈರಿಗಯೋ
ಮಸ್ತಮಣೆ ರಾಮನಿಗೆ ಮಸ್ತಕಾ ಶೂಲ
ಕುಂಭಕರ್ಣನ ಗಂಡ ಇಂದ್ರಜಿತನ ಮಿಂಡ
ಬಾಲ ಬ್ರಹ್ಮಾಚಾರಿ ಕರಿಯ ಹನುಮ
ಒಡೆಯನ ಸೇವೆಗೆ ಎರಡಿಲ್ಲದೇ ನಮ್ಮ
ಗಿರಿಯ ನೋಡಿಂದಕೇ ಬರುವ ತನಕ

ಪಟ್ಟಣವ ಹೊಕ್ಕಂದಟ್ಟುಳಿಯನಾಡಿದನು
ಕಟ್ಟು ರಾಮರ ಬಳಿಗೆ ನಡೆದು ಬಂದು
ಕಟ್ಟು ಚಂಡೋಡಿಯ ಎಲೆ ತಮ್ಮ ನೀನೆಂದು
ಕೈಮುಟ್ಟಿ ಮೈಮುಟ್ಟಿ ಒಪ್ಪಿಕೊಂಡನು
ವಡತಿಗುಂಗುರವಿತ್ತು ಕೈ ಮುಗಿದು ಬರುವಾಗ
ಹೊಡಿಬ್ಯಾಡ ಬಡಿಬ್ಯಾಡ ಬಾರೆಂದನು

## ಸುಟ್ಟು ಲಂಕೆಯ ಹನುಮ

ರಾಮರಾ ಬೀಡಿಂದ ಬಂದೇನೆಂದೆ
ರಘುರಾಮರ ಬಂಟ ಹನುಮಂತ । ಪಲ್ಲವಿ ।

ರಾಮ ರಾಮ ಎನ್ನಲಾಗಿ ಬಂಟ ಹನುಮ ಸಿಕ್ಕಲಾಗಿ
ನೀಲಿ ಬಂದಂತ ಮೈಯ ಹಿಗ್ಗಲಾಗಿ
ಲಾಳಮುಂಡಿಗೆ ಎಂಬ ಬಾಗಿಲು ಮುರಿಯಲಾಗಿ
ಸದೆ ಬಡಿದನು ದೈತ್ಯರನೆಲ್ಲ

ಎಂದು ಇಲ್ಲದ ಹನುಮ ಇಂದು ಲಂಕೆಗೆ ಬಂದ
ಬಂದ ಕಾರಣವೇನೇಳೆಂದ
ನಿಂದಿಸಿ ರಾವಣ ಹನುಮಂತ ದೇವರ
ಸಂದೇಗವಿಲ್ಲದೆ ಕೇಳಿದನು

ಪಡುವಲಗಿರಿಯ ಹನುಮಂತ
ಮೊಡವಿಗೆ ಶ್ರೀರಾಮರ ಭಂಟ
ಹಸೆಯೊಳ್ ಜಾನಕಿ ಯಾತಕೆ ತಂದೆ
ತಡೆಬಿಡು ಲಂಕೆಯ ತಳಸಹಿತ

ನೀಲ ನಾಮವನಿಟ್ಟು ಹರಿಯ ಭಜಿಸುವಂತ
ಧೀರದ ಮಾತು ನಿನಗ್ಯಾಕೊ
ಕೇರಿಸುಟ್ಟೆನೆಂಬೊ ಗರ್ವದ ಮಾತ್ಯಾಕೊ
ಊರ ಬಿಟ್ಟಾಚೆಗೆ ತೆರಳೆಂದ

ಲಾಳಮಂಡಿಗೆ ಎಂಬ ಸಂಕೋಲೆ ಬಳಿಯಲಿ
ಹೇಳಿ ತಳವಾರನ ಕರೆಸಿ
ಏಳುನೂರು ಮಂದಿ ಪರಿಚಾರದವರ ಕರೆಸಿ
ಧೀರ ಹನುಮನ ಪಾದಕೆ ತೊಡಿಸಿ

ಮುನ್ನೂರು ಅರವತ್ತು ಗಾವುದ ವಿಸ್ತೀರ್ಣ
ಬೀದಿ ಅಂದವ ನೋಡೊ ಹನುಮಂತ
ಮಾಳಿಗೆ ಮದಶಾಲೆ ದ್ವಾರವಂದುಪ್ಪರಿಗೆ
ರಾಮರ ಪುರದಲ್ಲುಂಟೇನೊ ಹನುಮ

ಸುಟ್ಟು ಲಂಕೆಯ ಪುಡಿ ಮಾಡಿ
ಜಗಜಟ್ಟಿ ರಾಮರ ಪಾದಕೆ ಎರಗಿ
ಕಟ್ಟಾಳು ಸೀತೆಯ ರವಿಕುಲ ಮೆರೆಯಲು
ದುಷ್ಟ ಹನುಮ ಮುಂದಕೆ ಬಂದ

## ಲಂಕೆ ಮುತ್ತಿಗೆ

ಎತ್ತಿ ಬಂದವರ ಮುರಿದಿಟ್ಟರು
ಸುರ ಮುತ್ತಿತಾಹರ ಲಂಕೆಯ ಪರುವ । ಪಲ್ಲವಿ ।

ಕಂಚಿನಲಿಗಿನ ಕೋಟೆ ಮಿಂಚುವ ಡೆಂಕಿಣಿ
ಲಂಕೆಗೆ ಬಲ್ಲಿದರು ನಾವಿಬ್ಬರೂ
ಪಂಕೋಜಿ ರಾಮ ಶ್ರೀರಾಮರಾಳಿದ ದಂಡು
ಲಂಕೆಗೆ ಬಡಿತಣ್ಣ ಬರಿಸಿಡಿಲಾಗಿ

ಹಗಲ ಹೊತ್ತಿನಲ್ಲಿ ಕೆಮ್ಮುಗಿಲೆದ್ದಂಗೆ
ತೇರ ಶೃಂಗರಿಸಿ ಬರುವುದು ನೋಡಿ
ಸಣಿ ಎಂಬ ಸಣಿ ಕಾಳೆ ಡಿಣಿ ಎಂಬ ಮದ್ದಾಳೆ
ಗಂಧ ಮಾಧವ ಬಿಟ್ಟ ಮೂಡಬಾಕಲಿಗೆ

ಅಂಜುತ ಅಸುಗುತ ಕೆಂಧೂಳು ಮುಸುಗುತ
ಬಂದು ರಾಮರಿಗೆ ಭಿನ್ನೈಸುತಲಿ
ಮುಂದು ಕಾಳಗನಮಗೆ ಸಲ್ಲುವುದೆಂದು
ಅಂಗುತ ಬಿಟ್ಟನು ತೆಂಕ ಬಾಗಲಿಕೆ

ಕಾರು ಮುಗಿಲು ಕಾರಂಜಿಯ ನೀರು
ಹೇಮಿಗಿರಿಗೆ ದಂಡು ನಡೆದೀತಲ್ಲ
ಈರೇಳು ಲೋಕಕ್ಕೆ ಹಿರಿಯಾತನಿವನೊಬ್ಬ
ಜಾಂಬುವ ಬಿಟ್ಟನು ಪಡುಬಾಗಿಲಿಗೆ

ಅಣ್ಣಾಳು ಅರಸಾಳು ಬಲವೆಲ್ಲ ಕೂಡಿ
ಶಾನುಭೋಗ ರಘುರಾಮರ ದಂಡು
ಸೇತುವೆ ಕಟ್ಟಿದ ದಂಡು ಅಚೆಗೆ ಬಿಡನೆಂದು
ಆತಣ್ಣ ಬಿಟ್ಟನು ಬಡಗ ಬಾಕಲಿಗೆ

ಎಳನೀರ ವರಣಕ್ಕೆ ಹೊಳೆವ ಕಪಿಗಳಂತೆ
ಬಲವಂತರಿಬ್ಬರು ಬಂದರಯ್ಯಾ
ಗುಡಿ ಗುಡಾರವು ಎಡಡಾರಣೆಲ್ಲದೆ
ಲಕ್ಷ್ಮಣ ದೇವರು ಬಿಟ್ಟ ಮಧ್ಯ ಬಾಕಲಿಗೆ

ಶಂಕು ಚಕ್ಕರನೆಂಬ ಬಿಂಕಕ್ಕೆ ಹರಿನಾಮ
ಪಂಕೋಚಿನಾಮ ಪತೆಯನಾಮ
ಶಂಕೆ ಇಲ್ಲದೆ ಹರಿ ಶಾರ್ಧಿಯ ದಾಂಟಿದ
ಲಂಕೆ ಪಾಲಿಪ ಬಿಟ್ಟ ರಘುರಾಮಚಂದ್ರ

# ಹನುಮ-ಗರುಡ ಸಂವಾದ

ಹನುಮ ಗರುಡ ಹಣ್ಣಿಗೋರಿದರು
ನೋಡಿ ಶ್ರೀರಾಮರು ಮಾಡಿದ ಕದನ । ಪಲ್ಲವಿ ।

ಅಡ್ಡ ಗುಡ್ಡವು ಅರಣ್ಯದವಳಗೆ
ಹುಟ್ಟಿತು ಜಂಬು ನೇರಲದೊಂದು ಸಸಿಯು
ಹತ್ತು ವರುಷಕೆ ಮರ ಫಲವಾಯಿತು
ತುಟ್ಟ ತುದಿಯ ಮೇಲೆ ಒಂದೇ ಹಣ್ಣು

ಜಂಬುನೇರಲೆ ವನಕ್ಕೆ ಹನುಮಯ್ಯ
ಹಾರಿ ನೆಂಗಣಿಸಿ ಹಣ್ಣ ನಿಡಿದಾನೆ ಹನುಮ
ಅಂಬಾರದ ಮೇಲಾಡೊ ಗರುಡನ ಕಂಡು
ತುಂಬಾ ನಿಡಿದಣ್ಣ ಬಿಡೆನೆಂದ ಹನುಮ

ಅಂಬಾರದ ಮೇಲಾಡುವ ಗರುಡಯ್ಯ
ಕಂಡನು ಹಣ್ಣಿನ ಚೆಲ್ವಿಕೆಯ
ಎರಗಿದ ರಬಸಕ್ಕೆ ಧರೆ ಮೂರು ಪಾಲಾದೊ
ಸ್ಥಿರಗಿರಿ ಬೆಟ್ಟದೊಳಾಡಿದವಯ್ಯ

ನಾ ಮುಂದೆ ಹಿಡಿದೆ ಗರುಡಯ್ಯ ಬಿಡೊ
ನಾ ಮುಂದೆ ಹಿಡಿದೆ ಹನುಮಯ್ಯ ಬಿಡೊ
ಕೋಪಿಸಿ ಹನುಮಯ್ಯ ಕೊನೆ ಬಾಲವನೆತ್ತಿ
ಕೊಂದೆನೆನೆತಲಿದ್ದ ಗಲಿರಮ್ಮಯ್ಯ

ಹೊಡೆಹೊಡೆದೆನುತಿದ್ದೆ ಯಾರ್‍ಯಾರ ಹೊಡೆದೆಯೋ
ಹೊಡಿಸಿಕೊಂಡವರ್‍ಯಾರು ಭೂಲೋಕದೊಳಗೆ
ಚಂದ್ರ ಸೂಲಿಗರು ಮೂಡಿ ಬರುವಾಗ
ಕಡೆಯ ಸಮುದ್ರಕೆ ಬಿದ್ದ ಭವಗಳ ಮರತೆ

ಸೀತೆ ರಾವಣ ಮುನ್ನ ಸೆರೆಯ ಕೊಂಡೋಗುವಾಗ
ಮಾತನರಿಯದೆ ಮುಂದೆ ಹೋದ್ಯಲ್ಲೊ ಗರುಡ
ಕಡಗೇಯ ರಾವಣ ವದಗಿ ಬಂದೆಚ್ಚಲು
ಗರಿ ಮೇಲಾಗಿ ನೀ ಬಿದ್ಯಲ್ಲೊ ಗರುಡ

ಮುಂದಲ ಕೈಯನಿ ಹಿಂದಕ್ಕೆ ಕಟ್ಟಿಸಿಕೊಂಡೆ
ಇಂದ್ರಜಿತು ನಿನ್ನ ಮೋರೆಯ ಸುಟ್ಟ
ಬಾಯ ಬಡಿಸಿಕೊಂಡೆ ದವಡೇಲಿ ಹಲ್ಲಿಲ್ಲ
ಬೆಂದ ಬಾಲಪ ಕೊಂಡು ಬಂದ್ಯಲ್ಲೊ ಹನುಮಾ

ಉತ್ತದ ಮೇಲಣ ಸತ್ತ ಸರ್ಪವ ತಿಂಬ
ನರಕಾಸಿ ಎಲೆ ಕೇಳೊ ಎಲೆ ಗರುಡ
ಹಕ್ಕಿ ಮುರಿದಂಗೆ ನಿನ್ನ ರೆಕ್ಕೆಯ ನಾ ಮುರಿವೆ
ಪಕ್ಷಿ ಬಲ್ಲದೆ ಒಂದು ಹಣ್ಣೀನ ರುಚಿಯಾ

ಹೋಗಿ ಹೋರಿದ ಹಣ್ಣು ಸೂರೆಯ ಹೋಯಿತು
ಆರು ಮುಟ್ಟದ ಹಣ್ಣು ಸರ್ಪಾಯಿತು
ರಾಮ ಲಕ್ಷ್ಮಣರು ರಾಂಬಾಣ ಬಿಟ್ಟರು
ಎರಡು ಕೈಯಿಗೆ ಎರಡು ತುಂಡಾಯಿತಣ್ಣ

# ರಾಮರ ಪುರ

ನಾವೇನು ಬಲ್ಲವಯ್ಯ ಹರಿಯಪುರವ
ನಾವೇನು ಬಲ್ಲವಯ್ಯ ಗಿರಿಯ ನೆಲೆಯ । ಪಲ್ಲವಿ ।

ರಾಮರಾಪುರದೊಳಗೆ ಏನೇನು ಅಗ್ಗಳತೆ
ಹೇಳಯ್ಯ ತಮ್ಮ ನೀ ಕೇಳೆಬಲ್ಲೆ
ಅಕ್ಕಿ ಆಗಂಡಿಗ ತುಪ್ಪ ಮೂಗಂಡಿಗ
ಹೆಚ್ಚಿಮಾರುವ ಎಸರು ಒಂಬತ್ತು ಕಂಡಿಗ
ಹಣವಿಗೆ ಸಕ್ಕರೆ ಹನ್ನೊಂದು ಕಂಡಿಗ
ಬ್ಯಾಳೆ ಬೆಟ್ಟೂ ಹೇರು ಲೆಕ್ಕವಿಲ್ಲ

ರಾಮರಾ ಬಲದೊಳಗೆ ಯರ‍್ಯಾರು ಬಲ್ಲಿದರು
ಹೇಳಯ್ಯ ತಮ್ಮ ನೀ ಕೇಳಿಬಲ್ಲೆ
ವಾಲೀಯ ಮಗನೊಬ್ಬ ವರುಶುದ್ಧ ಭೀಮನು
ಧರೆಯೇಳು ಲೋಕದ ಹಿರಿಯರವರೆ
ಲಂಕೆಯನು ಕಂಕುಲ್ಲೌಚುವಂತವರೆ
ದಂಡನಾಯಕರವರೆ ಲೆಕ್ಕವಿಲ್ಲ

ಹೊಟ್ಟೆಗಿಲ್ಲದ ರಾಮ ಕಟ್ಟೆಗೆ ಮಾರೆಂಬುತ
ಹತ್ತಿ ಮೆಟ್ಟಿದ ಕೊನೆಯ ಮುರಿಯೆಂಬುತ
ತುಟ್ಟ ತುದಿಯ ಮೇಲೆ ಕೊನೆಸಿಡಿದು ಬೀಳುವಾಗ
ಧರೆಯೊಳು ಲೋಕವನು ಮುರಿಯೆಂಬುತ

## ಹನುಮಂತಗೆ ಸನುಮತವೊ

ನಿಜ ಅನುಶಾಲೆಗೆ ಸನುಮತವೊ
ನಿಜ ಹನುಮಂತಗೆ ಸನುಮತವೊ । ಪಲ್ಲವಿ ।

ಅಗಣಿಕುಮಾರ ಎನ್ನೊಡಯನ ಭಂಟಗೆ
ಪ್ರಿಯಾದ ಭಂಟಗೆ ಸನುಮತವೊ
ವರದಿಂದಲೆ ಹೋಗಿ ಕೀಲಾರ ದಾಂಟಿದ
ವರ ಹನುಮಂತಗೆ ಸನುಮತವೊ

ಲಂಕೆಗೆ ಹೋಗಿ ಮನೆ ಮನೆ ತಪ್ಪದೆ
ಶಂಕಿಲ್ಲದೋಗಿ ಹರಿಸಿದೆಯಾ
ಪಂಗೋಜಿ ರಾಮರ ರಾಣಿಯ ಕಾಣದೆ
ಶಂಕಿಲ್ಲದ ಹನುಮಗೆ ಸನುಮತವೊ

ಲಂಕೆಯ ವೊಳಪಕ್ಕಂಡಿರ ಪುರವ
ಊರೊಳು ಮನೆತಪ್ಪದರಿಸಿದೆಯ
ಕಾಡಲ್ಲಿ ರಾಮರ ರಾಣಿಯ ಕಾಣದೆ
ಸೇರಿದ ಹನುಮಗೆ ಸನುಮತವೊ

# ನೀಲವರ್ಣನ ಸ್ವಾವೆ ನಿಜಂ ಭಕ್ತಗೆ ಮಂಗಳಂ

ಜಯಮಂಗಳಂ
ನಿತ್ಯ ಶುಭಮಂಗಳಂ । ಪಲ್ಲವಿ ।

ಮಂಗಳಂ ಮಕರ ಕುಂಡಿಲನಿಗೆ
ಮಂದಾರಧಾರನಿಗೆ ಮಹಭಕ್ತಗೆ
ಜಯದಂತರಂಗ ಗೋಪಾಲಗೆ

ಉದಯವಾಗಲು ಮುನ್ನ ಉರಚಿದನು ರವೆಗಳನು
ಮದನ ಬಾಣವಕಿತ್ತು ಮಕಲನಿಗೆ ತನ್ನುದರ ಬಾಣವ ಕೊಟ್ಟು
ಕುಂಭಕರ್ಣನನೆಟ್ಟು ಬೆದರಿಸಿ ಕಾದಿದೆ ಹನುಮಂತಗೇ

ಬಾಲಹನುಮಯ್ಯನಿಗೆ ಬಹುರುದ್ರ ವೈದ್ಯನಿಗೆ
ನೀಲವರ್ಣನ ಸ್ವಾವೆ ನಿಜಭಕ್ತಗೆ

# ಜಯಮಂಗಳಂ ಜಾನಕೀ ರಮಣಗೇ

ಜಯಮಂಗಳಂ ಶ್ರೀರಾಮಚಂದ್ರಗೆ
ಜಯಮಂಗಳಂ ಜಾನಕಿ ರಮಣಗೆ । ಪಲ್ಲವಿ

ದಂಡಕವನದೊಳಗಿರುತಿರಲು ರಾಮ
ಬೊಂಡು ಮಾಡಲು ಮೃಗ ಬರುತಿರಲು
ಕಂಡು ಸೀತಾಂಗನೆ ಬಯಸಿದಳಾ ಮೃಗ
ಕೊಂಡು ಬರಲು ರಾಮ ತೆರಳಿದರು

ಸೀತೆಯ ಕಾಣದೆ ವನವನೆಲ್ಲ ರಾಮ
ಬ್ರಾಂತುಗೊಂಡು ಹಾಗೆ ತಿರುಗಿದರು
ಸೀತೆ ಇಹಾಳೆಂಬ ವಾಕ್ಯವ ಕೇಳಿ
ಸೇತುವೆ ಕಟ್ಟಿದರು ವಾರುದಿಗೆ

ಲಂಕೆಗೆ ಹೋಗಿ ರಾವಣನ ಕೊಂದು
ಲಂಕ ವಿಭೀಷಣಗೆ ಪಟ್ಟವ ಕಟ್ಟಿ
ಪಂಕಜಮುಖಿ ರಾಮಚಂದ್ರರು ಸಹವಾಗಿ
ಬಿಂಕದಿಂದ ಅಯ್ಯೋಧ್ಯೆಗೆ ತೆರಳಿದರು

## ಶ್ರೀರಾಮನಿಗೆ ಶುಭಮಂಗಳಂ

ಶೂರ ಶ್ರೀರಾಮನಿಗೆ ಶುಭಮಂಗಳಂ । ಪಲ್ಲವಿ ।

ನಾರದಾವಂದನಿಗೆ ನವನೀತ ಚೋರನಿಗೆ
ವಾರುದೀ ಶಯನನಿಗೆ ವನಜಾಕ್ಷಗೆ
ದೀರ ದಶರಥನ ಗರ್ಭದಿ ಜನಸಿ
ಧೈರ್ಯದೊಳು ಘೋರ ತಾಟಕಿ ಕೊಂದ ಧೀರನಿಗೆ ಮಂಗಳಂ

ಪುಸಿಯಿಲ್ಲದಾತನಿಗೆ ಪುಣ್ಯನಾಮಾಕೃತಿಗೆ
ಅಸಾಯ ಶೂರನಿಗೆ ನಗಧರನಿಗೆ
ಕುಶಲ ಕೌಶಿಕನ ಯಾಗವ ಕಾಯ್ದು
ದಾರಿಯೊಳು ಪಶುಪತಿಯ ತಂದ ಸರ್ವೇಶ್ವರನಿಗೆ ಮಂಗಳಂ

ಓಂ ಮೃಗ ಬ್ಯಾಂಟೆಯನು ಹೋಗಿ ಶ್ರೀರಾಮನು
ಕಳನು ಸುಮ್ಮಾನದಿಂ ಸೀತೆಯನೊಯ್ಯಲು
ತಮ್ಮ ಲಕ್ಷಣನ ಸಹ ಕರೆದು ವಿಭೀಷಣನ
ಮರ್ಮವಂ ತಿಳಿದ ಮಹಾತ್ಮನಿಗೆ ಮಂಗಳಂ

ಭೂತಾಳವನರಸಿ ಮಾತೆಗೆ ಕೋಪವುದ್ಭವಿಸಿ
ಕಾತರಿಸಿ ಜನರು ಕಂಗೆಡುತ ಬರಲು
ಭೂತಾಳದ ನಾರಿ ಸೀರೆಯನುಟ್ಟು ಕಾನನದಿ
ಖ್ಯಾತಿಯನು ಪಡೆದ ರಘುನಾಥನಿಗೆ ಮಂಗಳಂ

ಕೊಂದು ರಾಕ್ಷಸ ಪಡೆಯ ವಂದಿತ ವಿಭೀಷಣನ
ಆನಂದದಿಂ ಸಾಮ್ರಾಜ್ಯ ಪದವಿಯನಿತ್ತು
ಇಂದುಮುಖಿ ಸಹಿತ ಅಯೋಧ್ಯಪುರಕ್ಕೆ ತಂದ
ಶ್ರೀರಾಮ ಶ್ರೀಚನ್ನಕೇಶವಗೆ ಮಂಗಳಂ

## ಭಾಗವಂತಿಕೆ ಪದಗಳು–೩

### ಇತರ ಬಿಡಿ ಪದಗಳು

# ಪ್ರದಕ್ಷಿಣೆ ಪದಗಳು

ಮಂಗಳ ಮಹಿಮ ನಮೋ
ವೆಂಕಟರಾಯನ ತೋರೆಮಗೆ । ಪಲ್ಲವಿ ।

ಎಲ್ಲ ನಾಮವ ಹೇಳೊ ವೈಷ್ಣವರ ಪಾದವ
ಮೆಲ್ಲಾನೆ ಶ್ರೀಪಾದವ ನೆನೆವೆ
ಬಲ್ಲಿದ ಬಸುಮನ ಪ್ರಾಣಕ್ಕೆ ಮುನಿದೆಲ್ಲೊ
ವಲ್ಲಭ ರಘುರಾಮಚಂದ್ರ ನಮೋ

ಸ್ವಾಮಿಯ ನಾಮವ ಹೇಳೊ ವೈಷ್ಣವರ
ಸೀಮೆಯೊಳಗೆ ಕೊಂಡಾಡೆವೆಲ್ಲಾ
ಭೂಮಿಗೆ ಸ್ಥಿರವಿಲ್ಲ ಚೋಳಪಾಳಪರಾಯ
ರಾಮ ಕೂಡಿ ಹನುಮಂತ ನಮೋ

ಒಡಯ ಕೌಪತಿ ಹಮ್ಮೀರ ಚನ್ನಯ್ಯ
ತುಂಟರೊಳಗೆ ಮೊದಲೆ ಹಗಯ
ಉಂಟಾದ ರಕ್ಕಸರೆಲ್ಲರ ಗೆದ್ದೆಲ್ಲೊ
ಜಿನ್ನೇನಹಳ್ಳಿಯ ಚನ್ನರಾಯ ನಮೋ

ವಸಗೆಯವೊಳಗುಳ್ಳ ವೈಷ್ಣವರ ಪಾದವ
ವಸಪ್ರಿಯದಿಂದ ಕೊಂಡಾಡೆವೆಲ್ಲ
ದೆಸೆದೆಸೆಯುಳ್ಳ ಅಸುರರ ಗೆದ್ದೆಲ್ಲೊ
ಹೊಸಹಳ್ಳಿಯ ಹನುಮಂತ ನಮೋ

ಕಲ್ಲು ಮಳಿಗೆಯಲಿದ್ದೆ ಕಂಸಾರನ ಗೆದ್ದೆ
ಮೆಲ್ಲಾನೆ ಮೇಲುಕೋಟ್ಗೆ ನೆಡೆದೆಯಲ್ಲೊ
ಕಾಲ್ಯಾಣಿಯಲಿ ನಿಂದು ಎಲ್ಲಾರ ಸಲಹೀದೆ
ಮಲ್ಲಘಟ್ಟದ ಹನುಮಂತ ನಮೋ

ಕತ್ತಲ ಮಳೆಯಲ್ಲಿ ಬಂದನೀತ
ಕತ್ತರಿಯಘಟ್ಟದಲ್ಲಿ ನಿಂದನೀತ
ಸುತ್ತೇಳು ಭಕ್ತಾರನೆಲ್ಲಾರ ಸಲಹೀದ
ಕತ್ತರಿಯ ಘಟ್ಟದ ಹನುಮಂತ ನಮೋ

ಈ ಲೋಕಕೆಲ್ಲಾ ಇದು ಪುಣ್ಯಸ್ಥಳವಲ್ಲ
ಗಾಳಿ ಪೂಜೆಯಲೋಗಿ ನೆಲಸೀದೆಯಾ
ಗಾಳಿ ಪೂಜೆಂಬೋದೊಂದು ಏಳುಸುತ್ತಿನ ಕೋಟೆ
ಗಾಳಿಪೂಜೆಯ ಶಕುನಿರಾಯ ನಮೋ

ನೋಟದಿಂದಲೆ ಹೋಗಿ ನೊಣವಿನ ಕೆರೆಯಲಿ ನಿಂದೆ
ಬೇಟೆಯ ಪುರದಲ್ಲಿ ನೆಲಸಿದಯ
ಪಾಠಿಸಿದವರಿಗೆ ವರಗಳ ಕೊಟ್ಟಲ್ಲೊ
ಬ್ಯಾಟೆಯ ತಿಮ್ಮರಾಯ ನಮೋ

ನಗ್ಗುವ ಅಸುರರನೆಲ್ಲರ ಹಿಡಿತಂದು
ಹೆಗ್ಗೆಗ್ಗಿಯಲೆಗಳ ಮುರಿದೆಯಲ್ಲ
ಹೆಗ್ಗಳವಾದ ಪವ್ಡಾವ ಗೆದ್ಯಲ್ಲೊ
ನುಗ್ಗೆಹಳ್ಳಿ ನರ್‍ಸಿರಾಯ ನಮೋ

ಸುತ್ತೇಳು ಲೋಕದ ವೈಷ್ಣವರ ಪಾದವ
ವಿಷ್ಣಂಗಾದಾರನೆ ಇಲ್ಲಾವಲ್ಲಾ
ಒಬ್ಬನೆ ಸಲಹೀದೆ ಲೋಕವನೆಲ್ಲ
ಹೆಬ್ಬಾಳ ಚನ್ನರಾಯ ನಮೋ

ಕೆಂಡಾದ ಒಳಗೆ ಎಣ್ಣೆಯ ಹುಯ್ಕೊಂಡು
ಕೆಂಡಾವ ಕಂಡರೆ ಹುಸಿ ನಗುತ
ಗಂಡು ಶರೀರಗಳೆಲ್ಲರ ಗೆದ್ಯೆಲ್ಲೊ
ದಿಂಡಗೂರ ನಾಗಭಕ್ತ ನಮೋ

ಹೊನ್ನ ತಾರೆಂದರೆ ಅನ್ನವ ನೀಡಿದೆ
ಪನ್ನಂಗಧಾರನ ಗಿರಿಯೊಳಗೆ
ಅನ್ನವುಂಟು ಆಳಿಲ್ಲವೆನಿಸಿ ಕೊಂಡೆ
ಅನ್ನದಾನಿ ಬಾಳುಮಲ್ಲ ನಮೋ

ದರುಶನದಿಂದಲಿ ಅರಸು ಮುದ್ರೆಯನೋಡಿ
ಸರಸವನಾಡುತಲವ ಬರುವ
ಪರುಸೆಯ ಕಂಡರೆ ಹುಸಿ ನಗೆನಗುವಲ್ಲೊ
ನರಸಿಪುರದ ನರಸಿರಾಯ ನಮೋ

ಒಳ್ಳೇವನೆನುತಿದ್ದೆ ಕಳ್ಳನಾದೆ
ಅಟ್ಟಿಕೊಂಡು ಹೋದರೆ ಸಿಕದೋಡೆ ಹೋದೆ
ವಪ್ಪದಿಂದ ನೆಲಸೀದೆ ಬೆಟ್ಟಬೆಳಗುಳದಲ್ಲಿ
ಕಂಡುಗದಕ್ಕಿಯ ಶ್ರವಣ ನಮೋ

ಎಂಟೆಂಟು ದಿನಕೆ ಶನಿವಾರದ ಶ್ಯಾವೆ
ಬಿಲ್ಲುಬಾಣದ ಶ್ಯಾವೆ ಹೆಗಲಮೇಲೆ
ತಮ್ಮ ನೆನೆವ ಭಾಗವಂತರ ಸಲಹೀದೆ
ಬಂಡೆಯ ಬೂಕನಕೆರೆ ರಂಗ ನಮೋ

ಕುಂಬಾದ ಮಳೆಯಲ್ಲಿ ಬಂದನೀತ
ನೆಂಬೀದ ಭಕ್ತರನೆಲ್ಲ ಸಲಹೀದ
ಕುಂಬೇನಹಳ್ಳಿಲ್ಲಿ ನಿಂದನೀತಾ
ಕುಂಬೇನ ಹಳ್ಳಿಯ ಹನುಮಂತ ನಮೋ

ಹಿಂಡೇವನಾಡುವ ಧನುಜರೆಲ್ಲ
ಹಿಂಡಿ ಹಿಂಡಿ ಕರುಳ ತೆಗೆದೆಯಲ್ಲ
ರುಂಡಾದಗದ್ದೆಯ ಬಯಲಲ್ಲಿ ನೆಲಸೀದೆ
ಸಿಂಧಘಟ್ಟದ ಕಲ್ಲೆಲಿಂಗ ನಮೋ

ಭಾಗವಂತರ ಕೈಲಿ ಒಂದೊಂದು ತಾಳ
ತಾಳ ಚಕ್ಕರವಾದಿ ಕುಳಿತಾವ ಮ್ಯಾಳ
ತಾಳ ಮ್ಯಾಳಕ್ಕೆ ಒಪ್ಪುವ ಜಾಣ
ದ್ಯಾವರಳ್ಳಿ ಕಂಚಿರಾಯ ನಮೋ

ಸನ್ನೆಯನಾಡುವ ದನುಜರನೆಲ್ಲ
ಬೆನ್ನಲ್ಲಿ ಕರುಳಾನೆ ತಗಿಡೆಯಲ್ಲಿ
ಹೊನ್ನಕಳಸಕ್ಕೆ ಒಪ್ಪವ ಜಾಣ
ಚನ್ನಪಟ್ಟಣದ ಚನ್ನರಾಯ ನಮೋ

ಮದ್ದು ತಾರೆಂದರೆ ಮರವ ಕಿತ್ತಂದೆ
ಉದ್ದಂಡಧಾರನ ಗಿರಿಯೊಳಗೆ
ವಿದ್ಯಾಬುದ್ಧಿಯ ಕೊಟ್ಟು ಲೋಕವ ಸಲಹೀದ
ಮದ್ದೂರು ಹಲ್ಲಣರಾಯ ನಮೋ

ಮಳ್ಯಾನೆ ಉಯ್ಸಿದೆ ಬೆಳ್ಯಾನೆ ಬೆಳ್ಸೀದೆ
ಮನದಿಂದ ಭಕ್ತರ ಸಲಹೀದೆಯ
ಮಳೆಯ ಬೆಳೆಯಕೊಟ್ಟು ಲೋಕವ ಸಲಹೀದೆ
ಮಳವಳ್ಳಿ ಹಲ್ಲಣರಾಯ ನಮೋ

ಈ ಲೋಕಕೆಲ್ಲ ಇದು ಪುಣ್ಯಸ್ಥಳವಲ್ಲ
ಮೇಲು ಕೋಟೆಯಲೋಗಿ ನೆಲಸೀದೆಯಾ
ಭೂಲೋಕಕೆಲ್ಲಾ ನಾಮವನಿತ್ತಲ್ಲೊ
ಬಾರೊ ಚನಪಿಳ್ಳೆರಾಯ ನಮೋ

ಆಗಲೆ ಹೋದೆ ಈಗಲೆ ಬಂದೆ
ನಾಗಮಂಗಲದಲ್ಲಿ ನೆಲಸೀದೆಯ
ನಾಗಮಂಗಲವೆಂಬೋದು ನಾಲ್ಕು ಸುತ್ತಿನ ಕೋಟೆ
ನಾಗಪುರಿಯ ಚನ್ನರಾಯ ನಮೋ

ಚಿಕ್ಕೂರಿಗಿಂತ ದೊಡ್ಡೂರ ಹೆಚ್ಚೇನೊ
ಚಿಕ್ಕೂರ ಊರಮುಂದೆ ನೆಲಸೀದೆಯ
ಹೆಚ್ಚು ಮಾತನಾಡಿ ಗೆದ್ದವರಿಲ್ಲಿ
ಚಿಕ್ಕೂರ ತಿಮ್ಮರಾಯ ನಮೋ

ಬಣ್ಣಾ ಬಳಿದು ಸಣ್ಣ ಸೀರೆಯನುಟ್ಟು
ಕಮ್ಮಣ್ಣ ಕಸ್ತೂರಿ ತಿಲಕವನಿಟ್ಟು
ತಮ್ಮ ನೆನೆವ ಭಾಗವಂತರ ಸಲಹೀದ
ಕಲಗೇರಿ ವರ್ಧಾರಾಯ ನಮೋ

ಕಲಿಯುಗ ಬೇಂಟೆಯನಾಡಿದನೀತ
ಕದಳೀಯ ವನದಲ್ಲಿ ನಿಂದನೀತ
ಕಡೆಗಣ್ಣಿನಲಿ ನೋಡಿ ವರಗಳ ಕೊಟ್ಟೆಲ್ಲೊ
ಕದಬಳ್ಳಿ ಕಾವೇಟಿ ರಂಗ ನಮೋ

ಕನ್ನೆಯಘಟ್ಟದಲ್ಲಿ ಹುಲ್ಲೆ ಬೆನ್ನತ್ತಿದೊ
ತಲ್ಲಣಗೊಂಡವರಣ್ಯವೆಲ್ಲ
ತಮ್ಮ ನೆನೆವ ಭಾಗವಂತರ ಸಲಹೀದ
ಬೊಳ್ಳೂರು ಮಾಧವರಾಯ ನಮೋ

ವಂಚನೆಯಿಲ್ಲಿದೆ ಒಬ್ಬನ ಸಲಹೀದೆ
ಚುಂಚನಧಾರನ ಗಿರಿಯೊಳಗೆ
ಪಂಚಪಾತಕನೆ ಕೋಳೆ ಶಿವನಕೂಮಾರನೆ
ಚುಂಚನಗಿರಿ ಭೈರಸಿದ್ಧ ನಮೋ

ಬೆಟ್ಟದಮೇಲಣ ವರದಸಾವಂತಿಗೆ
ದಿಟ್ಟಮಂಡೆಯ ನೀರು ಮಣಿದುರುಬು
ಹುಟ್ಟು ಬಂಜರಿಗೆಲ್ಲ ಮಕ್ಕಳ ಕೊಟ್ಟೆಲ್ಲೊ
ಶೆಟ್ಟಿಗೆರೆಯ ರಂಗರಾಯ ನಮೋ

ತಳಮಳೆವಿಲ್ಲದೆ ತಾಮಸವಿಲ್ಲದೆ
ಪೊಡವೀಯ ಭಕ್ತರ ಸಲಹೀದೆಯ
ಸಡಗರವಾದೇನೊ ಚೋಳಪಾಳಪರಾಯ
ಕಡಬದ ರಘುರಾಮಚಂದ್ರ ನಮೋ

ಗುರುಗುಟ್ಟುತ ಬಂದು ಅಡವೀಲಿ ನಿಂದೆ
ಪೊಡವಿಯ ಭಕ್ತರ ಸಲಹೀದೆಯ
ಗುಡಿಯನೊಲ್ಲದೆ ಗುಡ್ಡದ ಮೇಲೆ ನಿಂದೆ
ಗುಡುಮಾಧವ ಮಂಡೆರಾಯ ನಮೋ

ಮುನ್ನೂರು ಮೂರು ಕೋಟಿ ಅಸುರರ ಗೆದ್ದೆಲ್ಲೊ
ಮುಗುಲಿಗೆ ಡೊಂಕಾಗಿ ಬೆಳೆದೆಯಲ್ಲೊ
ಲೀಲೆಯ ಸ್ಥಳದಿಂದ ದಂಡೆತ್ತಿ ಬಂದೆಲ್ಲೊ
ಬಾರೋ ಮುಳು ಬಾಗಿಲ ಹನುಮಂತ ನಮೋ

ಬಟ್ಟಗೊಡಯನಾತೆ ಪೊಡವಿ ಬಂಜೆಯನಾದೆ
ದಿಟ್ಟದಿಂದಲಿ ಹೋಗಿ ನೆಲಸಿದೆಯ
ಕೆಟ್ಟಮನುಜರನೆಲ್ಲಾರ ಸಲಹೀದ
ಪಟ್ಟಣದ ರಂಗರಾಯ ನಮೋ

ಬಂಜೆಗೊಡೆಯನಾಗಿ ಬರಡಾಯನ ಮಾಡಿ
ನಂಬಿದ ಭಕ್ತರ ಸಲಹಿದೆಯ
ಬಂದಂತ ಪಾಪವ ಪರಿಹಾರ ಮಾಡಿದ
ನಂಜನಗೂಡು ನಂಜುಂಡ ನಮೋ

# ಪ್ರಹ್ಲಾದ ಚರಿತ್ರೆ

ನೆಂಬಿದೆವು ನಾರಾಯಣ ನಾವ್ ನಿಮ್ಮ ಚರಣವ
ಬಂಧನವ ಬಿಡಿಸೊ ಕಂಬದ ನರಸಿಂಹ । ಪಲ್ಲವಿ

ದೂಷಕರ ವೈರಿಯೆ ದಾಸರಾ ರತ್ನವೆ
ವಾಸುದೇವರೆ ಕೇಳು ಶ್ರೀಕೃಷ್ಣನೇ
ಜಗದೊಡಯ ಲೋಕವನ್ನು ಉಳಿಹಿಕೊ ಬೇಕೆಂದು
ದೇವಕ್ಕಳೆಲ್ಲ ಭಿನ್ನಪ ಮಾಳ್ದರಾಗ

ಮೇದಿನಿಯ ಸುರುಟುತ ಕಂಕಳಲ್ಲೌಚುತ
ಹಿರಣಾಂಕನೆಂಬ ರಾಕ್ಷಸ ಬಂದ
ವಶಿಷ್ಠ ವಾಲ್ಮೀಕಿ ಮುನಿಯು ತಾ ನಾರದರು
ಸನಕಾದಿ ಸಹಿತ ಭಿನ್ನಪ ಮಾಳ್ದರಾಗ

ಕಿನ್ನರರು ಕಿಂಪುರುಷ ಗರುಡ ಗಂಧರ್ವರು
ತಂಬೂರ ನಾರದರು ಹರಿಯ ಸಹಿತ
ಹಸನಾಯಿತೀ ಲೋಕ ವಶವಾಯಿತಿಂತೆಂದು
ದಶರಥರಾಯ ಭಿನ್ನಪ ಮಾಳ್ದರಾಗ

ಹತ್ತುತಲೆ ಇಪ್ಪತ್ತು ಶಿರವರಿದು ಎಸೆದವನ
ಕುಂಭಕರ್ಣನ ತಲೆಯ ಚೆಂಡಾಡಿದ
ಒಂದು ಬಾಣದಲಿ ವಾಲಿಯ ಕೊಂದು ಸುಗ್ರೀವಗೊಲಿದು
ಅಂಗದಗೆ ಸ್ಥಿರಪಟ್ಟವಿಟ್ಟಂತ ಸ್ವಾಮಿಯ

ಅಂದು ರಾವಣನ ಕೊಂದ ಪಾಪವ ಕೇಳಿ
ಬಂದು ಕಾಶಿಯಲಿ ತೀರ್ಥವ ನೋಡೆಲೊ
ವಾರಣಾಸಿಗೆ ಹೋಗಿ ಶ್ರೀರಂಗದಲ್ಲಿ ನೋಡಿ
ದಾನವನು ಮಾಡಿ ಬಾರೆಂದ ಲಕ್ಷಣನ

ಅನ್ನದಾನ ಕನ್ಯದಾನ ವಸ್ತ್ರದಾನವ ಮಾಡಿ
ಗೋವು ದಾನವ ಮಾಡಬೇಕೆನುತಲಿ
ಹನ್ನೆರಡು ಕೋಟಿ ದಾನವನು ಮಾಡಬೇಕೆಂದು
ಭರತ ಶತೃಘ್ನರ ಕೇಳಿ ಬಾರೊ ಲಕ್ಷ್ಮಣನೇ

ಹಿರಣಾಂಕ ತಮ್ಮ ರಾಣಿಯ ಕರೆದು ಮಾತಾಡಿ
ಓದನ ಕಲಿಸಬೇಕು ಪ್ರಲ್ಹಾದಗೇ
ಬರೆಸಿದನು ಓಲೆಯ ಕರೆಸಿದನು ಪಾದ್ರಿಯ
ಅರಸು ಹಿರಣಾಸುರ ಕರೆಬಿಟ್ಟ ಮಗನ

ಹರನ ಕುರುಹಿಡಿದು ತಪಸಿದ್ದು ಪಡೆದೆ ಮಗನ
ಹಣೆಯ ಬರಹ ಬ್ರಹ್ಮ ತೊಡೆಯರೇನೆ
ಎನ್ನ ಕೊಲ್ಲುವರುಂಟೆ ಜಗದೊಳಗೆ ಹಾಗೆಂದ
ಹಿರಣಾಂಕ ತಮ್ಮ ರಾಣಿಯ ಕೂಡೆ ನುಡಿದ

ಕಂಡೆ ನಾನೇಳೆಂಟು ದಿನದಿಂದ ಮುಂಗನಸ
ಎಂದೂ ಇಂಥ ಸ್ವಪ್ನ ತೋರಲಿಲ್ಲ
ಅರಮನೆಗೆ ಬಂದು ಬರಸಿಡಿಲು ಎರಗೋದ ಕಂಡೆ
ಬಗೆಯುವುದ ಕಂಡೆ ನಾ ನಡುಬಾಗಿಲೋಳು

ಬ್ರಹ್ಮ ತಾನೋದಿ ವಾಲೆಯ ಸೀಳಿಟ್ಟರೆ
ತೊಲಗತೀ ಹಿರಣನಿಗೆ ಹಣಿಯ ಬರಹ
ಎನ್ನ ಕೊಲ್ಲುವರುಂಟೆ ಜಗದೊಳಗೆ ಹಾಗೆಂದು
ಹಿರಣಾಂಕ ತಮ್ಮ ರಾಣಿಯ ಕೂಡೆ ನುಡಿದ

ಸತ್ತ ಸುದ್ದಿಯ ಕೇಳಿ ನಿನಗಿಂತ ದೊಡ್ಡದೆ ಮಗನೆ
ಹುಟ್ಟಿದೇ ಗೇಣಗಲ ಭೂಮಿ ನನಗೆ
ಮುತ್ತಿನ ಮಣಿಯಂತ ಪ್ರಾಹ್ಲಾದ ನಾನಿನ್ನ
ಬಿಟ್ಯೆಂಗೆ ದುಃಖವ ಮರಯಲೊ ಮಗನೆ

ಕೋಗಿಲೆಯ ಮರಿಯನು ಕಾಗೆಯು ಸಾಕ ಬಲ್ಲದೆ
ಸೋಗೆಯ ವನದೊಳಗೆ ಗೋಪಾಲನವನೇ
ಸಾಗರಾಶಯನನ ಪಾದವ ನಂಬಿವಿನಿ
ಹೋಗೆನ್ನ ತಾಯಿ ನೀನಳುಬೇಡವೆಂದ

ಹುಯ್ಯಿಸಿಕೊಂಡರೆ ಮಗನೆ ಬೈಯ್ಯಿಸಿಕೊಳ್ಳಲು ಬೇಡ
ಮುಂದರಿತು ಅಕ್ಷರವ ಓದೆನು ತಲಿ
ಗಲ್ಲವನು ಪಿಡಿದು ಮುದ್ದಾಡಿ ಮಗನ ನೋಡಿ
ಮೆಲ್ಲಾನೆ ಹೋಗೆಂದು ಕಳುಹಿದಳು ಮಠಕೆ

ಓನಮೋ ಶಿವನೆಂದು ಬರೆಯಂದರೆ ಅವನ
ಆದಿನಾರಾಯಣನೆ ಗತಿ ಎಂದು ಬರೆದ
ಮರೆಯ ಬೇಡಕ್ಷರವ ನೋಡೋದು ಎಂದರೆ
ಎನ್ನೊಡೆಯ ನಾರಾಯಣ ಗತಿ ಎಂದು ಬರೆದ

ಸೊಕ್ಕನಾಡಲಿಬೇಡ ದೊಕ್ಕೆಮುರಿವೆ ನಿನ್ನ
ದಕ್ಕೀತೇ ಹಿಂದಲಾ ಹೀನ ನುಡಿಯು
ಮತ್ಸರವಮಾಡಿ ಹಿರಣನ ಕೂಡೆ ಸೆಣಸಿದರೆ
ದೃಷ್ಟ ಪ್ರಾಹ್ಲಾದ ನಿನಗುಳುವಿಲ್ಲವೆಂದ

ಒಂದು ದಿನ ಈ ಓದೆ ಹೇಳಿದರೆ ಗುರುವೆಂದು
ಹಾಗೆಂದ ಮಾತಿಗೆ ತಾನು ತಾಳಿ
ಮುಂದರಿತು ಮಾತನಾಡದೋದು ಬರೆ ಹೋಗೆಂದು
ನೊಂದು ಕೋಪದಿಂದ ಹಿರಣಾಕ್ಷ ನುಡಿದ

ಬಿಟ್ಟು ಕಂಗೆಟ್ಟು ಓದುತಲವನೆ ಓದುವರೇ
ದುಷ್ಟ ಹಿರಣಾಸುರನೆಡಬಲದೊಳೂ
ಕೆಟ್ಟಿತಲ್ಲೊ ದೊರೆಯು ನಿನ್ನರಸುತನ ಇಂದಿಗೆ
ಕರಗಳ ಮುಗಿದು ಭಿನ್ನಪ ಮಾಳ್ದರಾಗ

ಸಂಗಡದಲ್ಲಿದ್ದ ದೂತರ ಕರೆದು ಹಿರಣಾಂಕ
ಕೊಂಡು ಹಿಡಿತನ್ನವನ ಬಿಡಬೇಡಿ ಎಂದ
ಮುಂದಲೆಯ ಹಿಡಿದು ಎಳಕೊಂಡು ಬನ್ನಿರಿ ಎಂದು
ಸಂಗಡಲ್ಲೈದು ಮಂದಿ ಕಳುಹಿಸಿದನಾಗ

ಬರುವ ದೂತರ ಕಂಡು ನಸುನಗುತ ಪ್ರಾಹ್ಲಾದ
ಮಂದಾರದಾರನಿಗೆ ಶರಣೆಂದನಾಗ
ಏನು ಕಾರಣ ಬಂದಿರೇಳೇಳಿಯೆನಲಾಗಿ
ತಂದೆ ಹಿರಣಾಸುರ ಕರೆಬಿಟ್ಟ ಮಗನ

ಉಟ್ಟ ಹೊನ್ನುಡಿದಾರ ತೊಟ್ಟ ಬಾಪುರಿಸಹಿತ
ಇಕ್ಕಿದ್ದ ಕಾಲುಕಡಗಾವಳಿಯು
ಮತ್ತೆ ಎಡಗೈಯೊಳಗೆ ಹಲಗೆ ಬಳಪ್ಪಪಿಡಿದು
ಕಟ್ಟಾಳು ಹೊರಟನು ತಂದೆಯ ಬಳಿಗೆ

ಮೂರುರಾಯರ ಗಂಡನೆಂಬ ಚೌಕಳಿನಿಟ್ಟು
ಮೇಲಾದಿ ಪದಕ ಕಂಟಿಯ ಸರವು
ವಾರೆಗಣ್ಣಿನ ನೋಟ ಕಡೆಗಣ್ಣಿನ ಭಾವ
ಸೂರ್ಯನ ಪ್ರಭೆಯಂಗೆ ಬರುವ ಮಗನ ಕಂಡು

ಬರುವ ಮಗನ ನೋಡಿ ಹಿರಣಾಂಕ ಬೆರಗಾದ
ತನ್ನ ಕೋಪವ ತಾನೇ ತಾಳಿ ಕೊಂಡ
ಹಿಂದಲೊರುಷ ಕಲಿತ ಓದುಮಗನೆಂದರೆ
ಮಂದಾರದಾರನಿಗೆ ಶರಣೆಂದನಾಗ

ಹಗೆಯವನ ಕೊಂಡಾಡುವುದ ಬಿಡ ಎಲಾ ಪ್ರಾಹ್ಲಾದ
ಮಗನಲ್ಲವೇ ನೀನು ನನಗೆನುತಲಿ
ಕಡಿದು ಹಾಕುವೆನೆಂದು ಕಂಡೆಯವನೆತ್ತಿದ
ಪ್ರಧಾನಿ ಬಂದಡ್ಡಲಾದನಾಗ

ಏರುವರೆ ವಾಹನ ತುರುಗವುಂಟಾದರೆ
ಪದ್ದಿನೆಗಲ ಮೇಲೆ ತಾ ಬರುವನೆ
ಹಾಸುಮಂಚ ಸುಪ್ಪತ್ತಿಗುಂಟಾದರೆ
ಆದಿಶೇಷನ ಮೇಲೆ ಮಲಗೋನ ಮೆಚ್ಚಿದೆಯಲ್ಲೊ ಮಗನೆ

ಹದ್ದು ಎನ್ನಲು ಬಹುದು ಮುದ್ದಗರುಡೋತ್ತಮ
ಹೊದ್ದಿ ಹೊರದವರನೆಲ್ಲ ಸಲಹುವಾ ದೇವನಾ
ರಾವಣ ಸೀತೆಯ ಸೆರೆಯ ಕೊಂಡೋಗುವಾಗ
ವಜ್ರದ ರಥ ಹೊದ್ದ ಪ್ರಾವಸ್ತುವ

ತಾಯಿ ತಂದೆಯ ಮಾತ ಕೇಳದಾ ಮಗನಿಗೆ
ಗುರಿವಿನಾಗ್ನೆಯ ಮೀರಿದ ಶಿಶುವಿಗೆ
ನವನರಕ ಜನ್ಮವು ತಪ್ಪದು ಹಾಗೆಂದು
ಪ್ರಧಾನಿ ನೀ ಹೋಗಿ ಪ್ರಹ್ಲಾದಗೆ

ಕೂಳವಲ್ಲೋದನಿಗೆ ಪ್ರಾಣದಂಬಲವೇನು
ಹೇರು ವಪ್ಪಿದ ಮೇಲೆ ಸುಂಕವೇನೋ
ನೂರು ಶೂಲವು ನೆಟ್ಟರೆ ಬಂದುಬಾಯೊಳಗೆ
ಏರುವುದು ಶೂಲದವೊಂದೆ ಅಲ್ಲವೇನೊ

ಗಾರುಗತ್ತಲೆ ಬರಸಿಡಿಲೆಂಬೊ ಆನೆಯ
ತರಿಸಲಾ ಮಾವಟಿಗ ತರಿಸೆನುತನಲಿ
ಅರಸು ಹಿರಣಾಸುರ ಕರಸಿ ವೀಳ್ಯವ ಕೊಟ್ಟು
ಕರಕಷ್ಟ ಎಂಬ ಮಾವಟಿಗ ತಂದಾನೆಯ

ತುಣಿಯಲ ಮದ್ದಾನೆ ಹಿಂದಕೇ ತಿರುಗಿತು
ಆರ್ಭಟಿಸಿ ಎದ್ದು ಐನೂರು ಕೊಂದಿತು
ಅಷ್ಟಾಂಗಕೆರಗಿತು ಸೊಂಡಿಲೊಳು ಸುತ್ತಿತು
ಮಂಡೆಯ ಮೇಲೆ ಮಡಗಿಕೊಂಡಿತು ಆನೆ

ಮದಸೊಕ್ಕಿದಾ ಆನೆ ಹೊಕ್ಕಿತೂರೊಳಗೆಲ್ಲ
ಅಂಗಡಿ ರಾಜಬೀದಿಯನೆಲ್ಲ ಮುರಿದಿತು
ಶೃಂಗಾರದ ತೋಟ ಮಾಳಿಗೆಯಲ್ಲಾ ಮುರಿದು
ಕೊಂದು ಹಿಡಿತದಲ್ಲವನ ಬಿಡಬೇಡಿ ಎಂದು

ಕಂದನಾ ಮುಂದಲಯ ಹಿಡಿದು ಬಾಗಿಸೋದ
ಕಂಡಳು ಉಪ್ಪರಿಗೆ ಮೇಗಲಿಂದ
ಅವನ ಕೊಂದುದುಂಟಾದರೆ ಇಸ್ತು ಪ್ರಾಣವ ಬಿಡುವೆ
ಗಂಡನ ಕೂಡೆ ಭಿನ್ನಪ ಮಾಳ್ದಳಾಗ

ಹುಚ್ಚುಹಿದೆದೀತೇನೋ ಮಲನಾಡು ಹಿಡಿದೀತೆ
ಯಾವ ದಯ್ಯಾ ನಿನಗೆ ಹಿಡಿದೀತೇನೊ
ಕಲ್ಲುಗಾಣಕೆ ಹಾಕಿ ಅರಸಿದರೆ ನಾನಿನ್ನ
ಎಲ್ಲಿ ತೋರುವೆ ನಿನ್ನೊಡೆಯ ನಾ ಎಂದಾ

# ಕರುಣವಿಲ್ಲವೆ ರಂಗ

ಕರುಣವಿಲ್ಲದೆ ನಮ್ಮೇಲೆ
ಅರಿಕೆ ಬಲ್ಲಂತಾನೆ ನಡುಕೇರಿ ರಂಗ
ಕರುಣವಿಲ್ಲವೆ ನಮ್ಮೇಲೆ
ಅರಿಕಿಲ್ಲ ಧರಿಕಿಲ್ಲ ವರ ಕೇರಿರಂಗ । ಪಲ್ಲವಿ ।

ಅಕ್ಕಿ ಬ್ಯಾಳೆಯ ಹೇರು ಬಹುದಿನದ ಹರಿಸ್ಯಾವೆ
ಲೆಕ್ಕವ ಮಾಡುತಲವ ಬರುವ
ಅಕ್ಕರದಿಂದಲೆ ಸಲಹಬೇಕೆಂದರೆ
ಮಕ್ಕಳಾಟಿಕೆ ಯಾಕೊ ಮನದಲ್ಲಿ ರಂಗ

ವಳಗಿದ್ದ ಗುಡಿಯ ಸಾರಿಸಿಕೊಂಡು ಬರಲಾಗಿ
ಹೊರಗಿದ್ದ ಕೊಂಬು ಕಾರಣ ಮಗುವೆ
ನಡುಕೇರಿ ರಂಗ ನಿಮ್ಮ ಹರಿಸ್ಯಾವೆ ಅಹುದೆಂದು
ಅರಿತು ಮತ್ತೊಂದಳ್ಳಿ ಹೋಗಲಿಲ್ಲ ಸ್ವಾಮಿ

ಕಾಸಿಗೆ ಸಾವಿರ ಅರಿಕಿಲ್ಲದಾರೇನು
ಮಾತಿನ ಜಾರ್ಜ್ಯಕ್ಕೆ ಒಂದೇ ವೀಳ್ಯ
ಶೇಷಾದ್ರಿ ಗಿರಿರಂಗನ ದಯವು ತಪ್ಪಿದ ಮೇಲೆ
ದಾಸೇನ ಮಾಡ್ಯಾನು ದಯವಿಲ್ಲ ಸ್ವಾಮಿ

ಮಣ್ಯಕ್ಕೆ ಜೇನು ಸಕ್ಕರೆ ತುಪ್ಪದಭಿಷೇಕ
ಹಣ್ಣ ತಗೆದ ಕಾರಣ ಮಗುವೆ
ಉನ್ನಂತದಾಸರು ಜಯಗೋವಿಂದೆಂಭಾಗ
ಮತ್ತೊಂದ ಸಲ್ಲಿಗೆ ನಮನ್ಯಾಕೊ ಮರೆತೊ

ಒಂದು ರೂಪಿನಲಿ ಹರಿಯಾಗಿ ನಿಂದೆ
ಒಂದು ರೂಪಿನಲಿ ಮರವ ಚಿಗುರಿಸಿದೆ
ತುರುವೆಕೆರೆಯ ತೆಂಕಬಾಗಿಲೊಳಗೆ
ನೆಲೆಯಾಗಿ ನೆಲೆಸೀದೆ ನಡುಕೇರಿ ರಂಗ

ಸುತ್ತೇಳು ಲೋಕಕ್ಕೆ ಎತ್ತಿ ಮಾರುವ ಹಣ್ಣ
ಹತ್ತು ರೂಪಿನಲಿ ಹರಿ ಬೆಳೆದ ಹಣ್ಣ
ಭಕರೊಡೆಯ ಭಾಗವಂತರ ಬೇಲೂರ
ನೆಲೆಯಾಗಿ ನೆಲಸೀದೆ ನಡುಕೇರಿ ರಂಗ

# ಹರಿಯ ನಾಮ

ಯಾವ ನಾಮ ಜಗವ ಕಾಯ್ವ ನಾಮ
ಜಗದೊಡೆಯ ನಾರಾಯಣ ನಿಮ್ಮ ನಾಮ
ಯಾವ ನಾಮ ಜಗವ ಕಾಯ್ವ ನಾಮ
ದೇವ ಗುರು ಹಿರಿಯರಿಗೆ ಹೆಚ್ಚ ನಾಮ । ಪಲ್ಲವಿ ।

ನಾಮ ಹುಟ್ಟಿತು ನಾಮ ಮೇಲುಕೋಟೆಯ ವಳಗೆ
ತೀರ್ಥ ಹುಟ್ಟಿತು ಹಿರಿಯ ತಿರುಮಲಲ್ಲಿ
ಈ ನಾಮ ಸಾಕೆಂದು ಜಂಬೂದ್ವೀಪದ ನಾಮ
ತುಂಬಿದ್ದ ಜನರೆಲ್ಲಾ ಕೊಂಬ ನಾಮ

ಹುಟ್ಟಿತೈಯ್ಯ ನಿಮ್ಮ ನಾಮ ನಿತ್ಯ ಪದವಿಯ ನಾಮ
ಮತ್ತೆ ದೇವಕ್ಕಳಿಗೆ ಸಂದ ನಾಮ
ಹುಟ್ಟಿದ್ದ ಹೋಮವೊ ಹುಟ್ಟಿತೈಯ್ಯ ನಿಮ್ಮ ನಾಮ
ಬರೆಯ ಬಲ್ಲನ ಕೈಲಿ ಬಂದ ನಾಮ

ಅತ್ತಿ ಆಲದ ಮರವ ಮೆಟ್ಟಿ ಮುರಿದ ನಾಮ
ಪೂತನಿಯ ಮೊಲೆಪಾಲನುಂಡ ನಾಮ
ಅಂದು ಅಸುರರ ಕೊಂದು ಬಿಂಗಿಯಾಂಟವನಾಡಿ
ವಂದು ಸದರಿಯ ಮೇಲೆ ಬಂದ ನಾಮ

ಕಾಳಿಂಗನಾಗನ ಮಡುವ ಕಲಕಿದ ನಾಮ
ಹದಿನೇಳು ಕಂಬಗಳ ಕಿತ್ತ ನಾಮ
ಈರೇಳು ಭುವನವನು ತಡಿಯ ಮಗುಚಿದ ನಾಮ
ರಥದ ಬಂಡಿಯ ಕೀಲ ಮುರಿದ ನಾಮ

ಆತ ಭೂತರನೆಲ್ಲ ಸೆರೆಯನಾಳಿದ ನಾಮ
ಸೀತೆಯನು ಸೆರೆಬಿಡಿಸಿ ತಂದ ನಾಮ
ಪಾತಾಳ ಲೆಂಕೆಗೆ ಹೋಯಿತೊ ಆ ನಾಮ
ಕೋಟಿ ರಾಕ್ಷಸರ ಸದೆ ಬಡಿದ ನಾಮ

ದನುಕೆ ರಾಮರು ಕುಳಿತು ಮುನಿಶಾಪ ಪಡುವಾಗ
ಧನವನೆತ್ತುವನೊಬ್ಬನಿಲ್ಲವಲ್ಲ
ಧನುವದಲ್ಲನೆ ಹೂಡಿ ಅಮುಕಿ ಬಾಣವ ಪಿಡಿದು
ಜನಮೆಚ್ಚ ಕಾಗೆಯ ಎಸೆದ ನಾಮ

ಧನುಕೋಟಿ ರಾಮರ ನೆರಳ ತುಂಬಿದ ನೀರು
ಹೊಳೆವ ಕಂಗಳ ನೀರು ತುಂಬಲಾಗ
ಚಿನ್ನದಲಿ ಕೊಂಡಿಲೊ ರನ್ನವನು ತಾಗುತ
ವಂಚನೆಯ ಕರಿಹನುಮ ತಂದ ನಾಮ ।.

# ಮೇಲುಕೋಟೆ ವೈಭವ

ಏನು ಹೇಳಲಿ ಸ್ವಾಮಿ ರಾಮರ್ವೈಭೋಗವ
ನಾಡಕ ನಡವ್ಯೆರಿ ಮರೆವ ಬೆಡಗ । ಪಲ್ಲವಿ ।

ನಂದ ಹೂವಿನ ತೋಟ ನಡುವೆ ಕಲ್ಯಾಣಿಯು
ಮೇಲೆ ಯಾದವಗಿರಿಗೆ ಕಾವಲಾಳು
ನಡೆದರೆ ಕಾಲಿಲ್ಲ ಹೆಳವರೊ ತೊಳವರೊ
ಹೆಳವರನ್ ತೊಳವರೊಂದಾಡಿದರೆ ಯಾದವರ ಬೇಡುತವರೆ

ಒಂದು ದಿನದಲ್ಲಿ ಮೂರವತಾರ ತಾಳಿದವನೆ
ಸಾಲ ದೈತ್ಯರ ಪಡೆಯ ಸೀಳಿದವನೆ
ನಿಜ ಭಾಗವಂತರಿಗೆ ನಿಜಭಕ್ತ ನೀನಾದೆ
ಮೇಲುಕೋಟೆಯ ಚಲುವರಾಯನಾದೆ

ಮಂಟಪದ ಮನೆನೂರು ಉಂಟು ನಾಟಕ ಶಾಲೆ
ಬಂಟ ಹನುಮಯ್ಯನಿಂದ ಬಾಗಿಲೊಳಗೆ
ಎಂಟು ದಿಕ್ಕಲ್ಲಿ ಎಂಟು ಭೋರೆಂಬ ವಾದ್ಯಗಳು
ವೈಕುಂಠ ಕಾಣಯ್ಯ ಮೇಲುಕೋಟೆ

ಅಯ್ಯನಾ ಗುಡಿಬಳಸಿ ಅಂಗ ಶ್ರೀರಂಗವಾದೊ
ಅಯ್ಯನಾ ಗುಡಿ ಮೇಲೆ ಮೇಲುಗಳಸ
ಸೊಗಸಾಗಿ ನಿಂದವನೆ ಗರುಡುಗಂಬದ ವಡೆಯ
ಅರಸು ಚನಪಿಳ್ಳೆ ರಾಯನ್ವೈಭೋಗವ

ಅಯ್ಯನಾ ಗುಡಿಬಳಸಿ ಅಂಬರದ ವಟ್ಟಿಗೆ
ಕುಂಬಿಕಾ ಗಿಡಿಗಿಂಡಿ ಚುಂಬಿನವರು
ದಂಡಾಡಿ ಆಮೇಲೆ ನಿಂದಿರುವ ಪರುಸೆಯ
ಚಂದ ನೋಡುವ ಬನ್ನಿ ಚಲುವರಾಯಸ್ವಾಮಿ

ಡಮಡಮ ಎಂಬುವುದು ಮಾನ ಕೊಂಬಿನ ಕಾಳೆ
ಜಗಜಂಪು ಜಂಪು ಸತ್ತಿಗೆಯ ನೆರಳು
ಗಮಗಮ ಗುಡುತೈತೆ ಹಿಗ್ಗಾಳೆ ಪರಿಮಳ
ತೆಗೆತೆಗೆದು ಹಿಡಿರೈಯ್ಯ ಹಣ್ಣು ಜವನವ

ಬಳಸಿ ಬಂದರೆ ಪದವಿ ಬಂಗಾರ ತೊಟ್ಟಿಯು
ಕಳಸನೇರಿದ ತೇರು ಶೃಂಗರಿಸುತ
ಅಳುಕದೆಯು ಘನತೇರು ಹೆಬ್ಬಂಟಿ ಘಳಿರೆಂದು
ಪವಡಿಸಿದ ಪರುವತ್ತ ಮೇಲುಗಳಸ

ಮುಂಬಾಗಲುಪ್ಪರಿಕೆ ಮೂರುಲೋಕದ ಪರುಸೆ
ತುಂಬುಲೆಂಕೆಯ ಸ್ವಾಮಿ ಕೆಳಗೆ ನಗುತ
ಸಂಬಳದ ಬಂಟನೊ ಸಮಿಕಿದ ಸೈನ್ಯವರೊ
ತುಂಬಿದರು ಕಾಣಯ್ಯ ಮೇಲುಕೋಟೆ

# ರಕ್ಷಿಸೊ ಎನ್ನನು ಅಕ್ಷಯ ಗುಣಪೂರ್ಣ

ರಕ್ಷಿಸೊ ಎನ್ನನು ಅಕ್ಷಯ ಗುಣಪೂರ್ಣ
ಪಕ್ಷಿವಾಹನನೆ ಲಕ್ಷ್ಮಿರಮಣನೆ । ಪಲ್ಲವಿ ।

ಪಾದವಿಲ್ಲದೆ ಜಲದೊಳು ಮುಳುಗಾಡಿ
ವೇದಾ ಚೋರಕರನ್ನು ಸೀಳಿ ಬಿಸಾಡಿ
ವೇದಾಂಚಲದೊಳು ನಿಂತು ಕೈ ನೀಡಿ
ಸಾಧುಸಜ್ಜನ ಫಲ ನೀ ದಯ ಮಾಡಿ

ವಾರಿಧಿಮಥನದಿ ಸುರರಿಗೆ ವೊಲಿದು
ಮೇರು ಮಂದಲವನ್ನು ಗೀತೇ ಒಲಿದು
ವಾರಿಜಾಕ್ಷನೆ ವೈಕುಂಟದಿಂದಿಳಿದು
ಊರಿದೆ ಚರಣವ ಗಿರಿಯೊಳು ನಲಿದು

ಧರಣಿಯ ವೈದಾನವಗಾಗಿ ನೀನು
ಹರಣವ ಸೂಕರನಂತಾದುದೇಳು
ಚರಣ ಸೇವಕರಿಗೆ ನೀ ಕಾಮಧೇನು
ಕರುಣಾಳು ಸಲಹೆನ್ನ ನಂಬಿದೆ ನಾನು

ತರಳಾನು ಕರೆಯು ಕಂಬೊದೊಳುದಿಸಿದೆಯೊ
ದುರುಳ ದಾನವರ ಸಂಹರಿಸಿದೆಯೊ
ಕರುಳ ಮಾಲೆಯ ಕೊರಳೊಳು ಧರಿಸಿದೆಯಾ
ಮರಳಿ ಬಂದಪಣೆ ಗಿರಿ ಸೇರಿದೆಯೊ

ಕೋಮಲ ರೂಪದಿ ಧರಣಿಯನಳದೆ
ಆ ಮಹಾ ಬಲಿಯ ಪಾತಾಳಕ್ಕೆ ತುಳಿದೆ
ಸ್ವಾಮಿ ಪುಷ್ಕರಣಿಯ ತೀರದಿ ಬೆಳದೆ
ಪ್ರೇಮದಿ ಭಕ್ತ ಕಾಮಿಸಿ ಹೊರದೆ

ತಾತನಪ್ಪಣೆಯಿಂದ ಮಾತೆಗೆ ಮುನಿದೆ
ಜತಿ ಕ್ಷತ್ರಿಯರ ವಿಷ್ಣಾರಿಸಿ ತರಿದೆ
ನೂತನವಾಗಿ ಅನಾಮದಿ ಬೆರೆದೆ
ದಾತುಗೆಟ್ಟನೊ ಸಹ ದೈಯ್ಯಿಗಳಿರದೆ

ದಶರಥನುದರದಿ ಶಿಶುವಾಗಿ ಬೆಳೆದೆ
ವಸುಮತಿ ತನುಜೆಯ ಕುಶಲದಿ ತಂದೆ
ಅಸುರರ ಹೆಸರನ್ನು ವುಳಿಸದೆ ಕೊಂದೆ
ಕುಸುಬನಾಭನ ಗಿರಿಯಲ್ಲಿ ನಿಂದೆ

ಮದುರೆಯೊಳುದಿಸಿ ಗೋಕುಲದಲ್ಲಿ ಬೆಳೆದೆ
ವುದಿಯ ಮಧ್ಯದಿ ದುರ್ಗವ ಒಲಿದೆ
ಹದಿನಾರು ಸಾವಿರ ಸತಿಯಾ ನೆರೆದೆ
ಉದಯವಾದೆಯೊ ವೇದಗಿರಿಳು ನಲಿದೆ

ಶಶಿಮುಖಿಯರನ ಮೋಹಿಸುವಂಥ ಬಗೆಗೆ
ಅಸನವ ಬಿಡುವುದುಚಿತವೊ ನಿನಗೆ
ವಸುಧೆಗುತ್ತಮನಾಗಿ ಯಶವಂತಗಿರಿಯೊಳು
ಹಸನಾಗಿ ನಿಂತಿಹ ಚರಣ ಸನ್ನಿಧಿಯೊಳು

ವಾಜಿನೇರಿಯೆ ಸೀಜೆಯ ಪಿಡಿದೆ
ಮಾಜುವ ಕಲಿಯನ್ನು ಕಡೆಯೊಳು ಕಡಿದೆ
ಮೂಜಗದೊಡೆಯನ ಮನದೊಳಗಿರುವೆ
ಮೂಜ ಬೇಡಲೊ ವೆಂಕಟೇಶನ ವೊಡಿವೆ

ಹತ್ತವತಾರದಿ ವಿಸ್ತಾರದಿಂದ
ಕರ್ತುವರ ತಿಮ್ಮಪ್ಪನು ಬಂದ
ಭೃತ್ಯವತ್ಸಲನಾಗಿ ಭೂಮಿಗೆ ಬಂದ
ಅರ್ತಿಯೊಳು ಭಕ್ತರ ಸಲಹುವೆನೆಂದ

# ಕಾಮದಾರನೆಂಬ ಹುವ್ವಿಗೆ

ಕಾಮದಾರನೆಂಬ ಹುವ್ವೀಗೆ
ಕೋಮಲೆಂಕೆ ಎಂಬ ಹೆಣ್ಣಿಗೆ । ಪಲ್ಲವಿ ।

ಹರಿಯು ಸೃಷಿಸಿದೊಂದು ಹರಿನೀರು ತೋಟ
ಬ್ರಹ್ಮಸೃಷ್ಟಿಸಿದೊಂದು ಕಾಳ್ಯೇವನೆ
ಹರಿವ ನೀರೊಂದು ಪಲ್ಲೇಸುವ ಮಗ್ಗಿಗೆ
ಮಾಲೆದಾರಣ್ಣನ ಕಾವಲು ಹರಿಯೆ

ಕಲ್ಲು ಕಟ್ಟಿದ ಬಾವಿ ಬೆಲ್ಲದ ಸೋಪಾನ
ಎಲ್ಲರು ಮೊಗೆವುದೊಂದೀ ಬಾವಿ-ಯೊಳಗೊಬ್ಬ
ಬಲ್ಲದ್ದ ಹರಿಬಂದು ತುಳುಕಾಡುತ್ತಾನೆ

ನಾರಿ ಪಟ್ಟೆಯನುಟ್ಟು ನೀರಿಗೆ ಹೋಗೋಳೆ
ಊರ ಕುರವ ಹೇಳೆ ಕೋಮಲೆ
ಬಟ್ಟಕುಚದ ಮೇಲೆ ಬೆಳ್ಳಿಯ ಶಿವದಾರ
ಮುತ್ತಿನಂಗಡಿ ಕಾಣಾ ನಿಜಗಲ್ಲದುರುಗ

ಸತ್ಯರು ಶರಣರು ಮತ್ತೆ ಶಿವಭಕ್ತರು
ರೇವಣ್ಣ ಸಿದ್ಧಯ್ಯ ಹನುಮಂತ-ಹೊರಟಾಗಿ
ಮೂರು ಲೋಕವೆಲ್ಲ ಹೊಳಗಾಯಿತೆ ಹರಿಯೆ

ಕಂಚಿನಾಕಲು ಕೋಟೆ ಮಿಂಚುವ ಡೆಂಕಿಣಿ
ಕಂಚಿನಾ ಉಯ್ಯಾಲೆ ಮನೆಯ ಮುಂದೆ
ಸುತಲೆಲ್ಲ ಸುಳಗೇರಿ ಸುರಹೊನ್ನ ಸಂಪಿಗೆ
ಕೊನೆಮುಡಿ ಕೊತ್ತಳದಳವಲ್ಲೊ ಹರಿಯೆ

# ಬಿಳಿಯ ಕಲ್ಲು ಬ್ಯಾಂಟೆಯ ತಿಮ್ಮರಾಯ

ಬಿಳಿಯ ಕಲು ಬ್ಯಾಂಟೆಯ ತಿಮ್ಮರಾಯ
ವನದೊಳಗಿರುವರು ನಮ್ಮವರೈಯ್ಯ । ಪಲ್ಲವಿ ।

ಆರಬಾರವಗೈದು ಕಣದಲ್ಲಿ ರಾಶಿ
ಹೋರಾಟಗಿಕ್ಕೋರು ನಮ್ಮವರೈಯ್ಯ
ಊರವಳಗೆ ಶನಿವಾರದ ಒಂದೊತ್ತು
ವಾರವನಿರುವರು ನಮ್ಮವರೈಯ್ಯ

ಬಿಲ್ಲು ಬಾಣವ ಹೂಡಿ ಗಂಟೆ ಶಯಮಾಡಿ
ವಲ್ಲದೆ ಬರುವರು ನಮ್ಮವರೈಯ್ಯ
ವಲ್ಲಾದೆ ಗಂಟೆಯ ಹೂಡಿ ಬೆಳಕಿನಲ್ಲಿ
ಹುಲ್ಲೆಯನಿಡಿವರು ನಮ್ಮವರೈಯ್ಯ

ತಮ್ಮ ಕೈಲಿ ಹಿಡಿ ಬಿಲ್ ಬಾಣವ ತೆಕ್ಕೊಂಡು
ತಮ್ಮ ನೆನೆವ ದಾಸರಿಗೊಲಿದೆ
ಹಮ್ಮಿನಿಂದಲೆ ಕೌಲಿ ಬಾಣವ ಪಿಡುಕೊಂಡು
ಚಿಮ್ಮುತ ಬರುವರು ನಮ್ಮವರೈಯ್ಯ

ತಿರುನಾಮ ತಿರುಚೂನ ತಿರುನಾಮವನಿಟ್ಟುಕೊಂಡು
ಹಸನಾಗಿ ಬರುವರು ನಮ್ಮವರೈಯ್ಯ
ಹೆಸರ ಹೇಳಿದಾನ ಧರ್ಮವ ಮಾಡುವ
ಅಸುರರು ಕೆಂಚರು ನಮ್ಮವರೈಯ್ಯ

ವಮ್ಮಾನ ವರಸೀನ ಗುರುವೀನ ಪಾದವ
ನಂಬಿಕೊಂಡಿರುವಾರು ನಮ್ಮವರೈಯ್ಯ
ನಮ್ಮನಾಳುವ ರಾಯನ ಚಿಗುಬ್ಯಾಂಟೆ ರಾಯನ
ಸಮಕದಲ್ಲಿವರು ನಮ್ಮವರೈಯ್ಯ

# ಬಿಲ್ಲು ಬಾಣವ ಕೈಗೊಂಡ

ಬಿಲ್ಲು ಬಾಣವ ಕೈಗೊಂಡ
ಚೆನ್ನಿಗ ಗೂಳೂರು ಬ್ಯಾಂಟೆಯರಾಯ
ಬಿಲ್ಲು ಬಾಣವ ಕೈಗೊಂಡ
ವಲ್ಲಭ ಗೂಳೂರು ಬ್ಯಾಂಟೆಯರಾಯ । ಪಲ್ಲವಿ ।

ಹುಲಿಯು ಕರಡಿಯು ಮೊಲವು ಸಾರಂಗನು
ಬಲುಮಟದಲಿ ಬ್ಯಾಂಟೆಯ ಹೊರಟ
ಹಲವು ಪರಿಯ ಶಂಕನ ಕಾಡೆಮ್ಮೆಯು
ಬಲು ಮೃಗದಾ ಬ್ಯಾಂಟೆಯ ಹೊರಟ

ಬಿಲ್ಲನಿಡಿಯಲು ಭೂಚರ ನಡುಗಲು
ಮೆಲ್ಲಾನೆ ತವರಕ್ಕುದುರಾಲು
ತಲ್ಲಣಿಸಿದವಾರಣ್ಯದ ಮೃಗಗಳು
ಹುಲ್ಲೆ ಮಲೆಯ ಸೇರುವುದ ಕಂಡೆ

ಗಂಡು ಭೇರುಂಡನೋ ಷಂಡು ಶಾರ್ದೂಲನೊ
ತಂಡ ತಂಡವಿ ಮೃಗ ಜಾತಿಗಳ
ದಿಂಡಗೆಡಸಿದ ಸುರಾರಿಗಳೆಲ್ಲರ
ಕಂಡಿಸಿ ಜಗ ಬ್ಯಾಂಟೆಯ ಹೊರಟ

ಗಂಡರಿಗೆ ಗಂಡನೊ ಬಾಳರ ತಿಮ್ಮನೊ
ಸರವರದಲ್ಲಾಡುತ ಬರಲು
ಸುರಮುನಿ ಕೆಂಚರು ಕೆಂಚರು ಶಯವಾಗಿ
ಪರಮ ಪುರುಷ ಬ್ಯಾಂಟೆಯ ಹೊರಟ

ಜಲಹಂಪಡೆಯೊ ಎಲೆಮುಡಿ ಪೊತ್ತಳೆ
ಎಲೆಯ ಮೇಲೆ ಸ್ವಾಮಿಗೆ ನಿದ್ರೆ
ಬಲದಲಿ ಕಮಲವು ಎಡದಲಿ ತೋರಣ
ಬಲಮುರಿಯುತ ವೇದವ ತಂದ

ಜಲ ನಡುಗಿತುಗೋಪಿಯ ದೋಸ್ತ್ರಂಗಳ
ಜಲತಾರದ ಮರನೇರಿದೆಯ
ಜಲದಿಲಾಭನಂ ಲಕ್ಷ್ಮಿಯ ಪತಿಯ
ಜಲದಿ ಕೆರೆಯ ಬ್ಯಾಂಟೆಯ ಹೊರಟ

# ದಾಸ ನೆಯ್ದ ದೇವಂಗವ

ದಾಸನೆಯ್ದ ದೇವಂಗವ
ಜಗನಿಜಪುರ ಬ್ಯಾಡವಂದನು ಚನ್ನಲಿಂಗ । ಪಲ್ಲವಿ

ತಂದನೂರಿಗೆ ಹೋಗಿ ತಂದಾನು ಹತ್ತಿಯ
ತಂದದುರುಗಾಯಿ ಬೆಸಗೊಂಡನು
ತಂದದುರುಗಾಯಿ ಬೆಸಗೊಂಡ ದುಸುಮಯ್ಯ
ನಂದೇಶ್ವರನಿಗೆ ಶರಣೆಂದನು

ಎಕ್ಕುವು ತಟ್ಟೆಗೆ ಅಡಕ ಮುತ್ತುಗಳೂಡಿ
ಪಚ್ಚೆ ಕರ್ಪೂರದ ಅರಳೂಡಿ–ಜಾಜಿಯ
ತುಪ್ಪದಂತೆ ಅಂಜಿ ಅಸನಾದೊ

ಶಾಸ್ತ್ರವ ನೆನೆಯುತ್ತ ಸಸ್ತಾಳೆ ಅರಳೆಯ
ವಿಷಕಂಠ್ನ ಮರುಳಾನೆ ನೆನೆಯುತ್ತ–ದುರುಗಾಯಿ
ಸಸ್ತಾಳೆ ಅರಳೆಯ ಅಲಂಪೂರಿ

ಚಿನ್ನದಾ ಅಂಜಗಡ್ಡೆ ಚನ್ನತಾ ತಕ್ಕೊಂಡು
ಪನ್ನಂಗದಾರನ ನೆನೆಯುತ್ತ–ದುರುಗಾಯಿ
ಚನ್ನಾಗಿ ಅಂಜಿ ಅಸನಾದೊ

ಚಿನ್ನದ ರಾಟೆಗೆ ರನ್ನದ ಕದರೂಡಿ
ರನ್ನ ಮಾಣೀಕದ ಬೊಂಬೆಯ ಕೆಲಸ
ಕನ್ನೆ ಕಾಮನೆಂಬ ಅಂಜಿಯ ಪಿಡುಕೊಂಡು
ಚನ್ನಾಗಿ ಅಂಜಿ ಅಸನಾದೊ

ದಾಸನ ಮಡದಿ ಲೋಕಕ್ಕೆ ಕಡು ಚಲುವೆ
ಹಾಸ ಹಣಿದಳೊಂದು ಹದಿನಾರ್ಯೋ ಜನವ
ಹಾಕಿ ಮಾಡಿದಳೊಂದು ಇಪ್ಪತ್ತೋಜನವ
ಪಾಸುಪತೆ ಎಂಬ ಅಕ್ಕತಂಗಿಯರ ನೂಲ
ಹಾಸಿನ ತಲೆ ಕಟ್ಗೆ ಹಾಕಿ ಸೇರಿಸಿ ಧಾಸ

ನಾಲ್ಕುದೀವ್ಗೆ ಬೆಳಕಿನಲ್ಲಿ ನೂಕಿದನು ರಥಗಳನು
ಕಾಕೇಶ್ವರನಿಗೆ ಶರಣೆಂದೆ
ಕಾಕೇಶ್ವರನೆಂಬ ಅಣಿಕೋಲು ಪಿಡುಕೊಂಡು
ಲೋಕೇಶ್ವರನಿಗೆ ಶರಣೆಂದೆ

ರಾಜನದ ಗಂದಿಗೆ ರತುನದ ಕುಂದಿಗೆ
ಧರೆಯ ಮೇಗಲ ಮಂಜು ಜಕ್ಕೆಂದು ಜಗದಿವೊ
ಯಂತ್ರ ಮಂತ್ರಗಳೆಂಬ ಅಣಿಕೋಲ ಪಿಡುಕೊಂಡು
ಆರುತಿಂಗಳ ನೂಲ ಅಸಮಾಡಿ ದಾಸ

ಗುಡಿಯ ನೆಯ್ದು ಗೋಪುರವ ನೆಯ್ದು
ಗುಡಿಗೆ ತಕ್ಕೊಂದು ಮೂರುಲಿಂಗವ ನೆಯ್ದು
ಪರುಸೆಯ ನೆಯ್ದು ಪಾರ್ವತಿಯ ನೆಯ್ದು
ಹರುಷದಿಂದ ಚನ್ನಬಸವನ ನೆಯ್ದು

ಕಂಚಿನ ನಿಲುಗಂಭವನಿಕ್ಕಿನೆಯ್ದು
ಪಂಚಗಟ್ಟದ ಪರಮೇಶ್ವರನ ನೆಯ್ದು
ದಾಳ ಬಾನ ನಿಶಾನಿಯ ನೆಯ್ದು

ಗುಡಿಯನೆಯ್ದು ಗೋಪುರವನೆಯ್ದು
ಗುಡಿಗೆ ತಕ್ಕದು ಮೂರು ಲಿಂಗವ-ನೆಯ್ದು
ಒಡಯ ತಿಮ್ಮಪ್ಪನ ಒಡನಿಕ್ಕಿನೆಯ್ದು

ಪೂಜೆನೆಯ್ದು ಪೂದೋಟವ ನೆಯ್ದು
ಅಗ್ಗಾಣಿ ಬಿಂದಿಗೆ ಮುಂದೆ ಮುಂದೆ-ಮಜ್ಜನಶಾಲೆ
ಪುಷ್ಪದ ತಟ್ಟೆಯ ಒಡನಿಕ್ಕಿ ನೆಯ್ದು

ಜಾಜಿಯನೆಯ್ದು ಕಿರ್‌ಜಾಜಿಯ ನೆಯ್ದು
ಪರಿಪರಿ ಪಚ್ಚೆ ಕಿರ್‌ಜಾಜಿಯ-ನೆಯ್ದು
ನಂದಿ ಬಟ್ಟಲು ನಾಗಸಂಪಿಗೆನೆಯ್ದು

ಕೂಸು ನೆಯ್ದು ಕುಪ್ಪಸವ ನೆಯ್ದು
ಕೂಸಿನ ಕಾಲಿಗೆ ಗೆಜ್ಜೆಯ ನೆಯ್ದು
ಕೂಸುನುಂಬೋದೊಂದು ಬಟ್ಟಲ ನೆಯ್ದು
ಅರುಳೋಲೆ ಮಾಗಾಯಿಸ್ಯವಾಗಿ ನೆಯ್ದು

ಎತ್ತುನೆಯ್ದು ಚಿತ್ತಾರವ ನೆಯ್ದು
ಬಿತ್ತುವ ಕೂರಿಗೆ ಶಡ್ಡೆಯ ನೆಯ್ದು
ವಕ್ಕಲಮಗನೆತ್ತಿ ವಾಜನ ನೆಯ್ದು
ಅಡಿಗಲ್ಲು ಚಮಟಿಗೆ ಸೈವಾಗಿ ನೆಯ್ದು

ಕೆರೆಯ ನ್ಯೆದ ಕೀಳೇರಿಯ ನೆಯ್ದು
ಕೆರೆಯಲ್ಲಿರುವ ಮಿಾನು ಮತ್ಸ್ಯವ ನೆಯ್ದು
ಮಾಡಿದ್ದ ಪಾಪಕ್ಕೆ ಎರಲಿಂಗ ಬೇಕೆಂದು
ಪರುವತ್ತ ಮಲ್ಲಯ್ಯನ ಶಿಖರವ ನೆಯ್ದು

# ಬೃಂದಾವನ ಕೋಟೆ ಮಾತಾಡಮ್ಮ

ಬೃಂದಾವನ ಕೋಟೆ ಮನೆಯವಳಮ್ಮ
ಬೃಂದಾವನದೇವಿ ಮಾತಾಡಮ್ಮ । ಪಲ್ಲವಿ ।

ಎಳೆಸೊಸಿ ಎಳೆಯೋಳೆ ಎಳೆ ಪರಿಮಳದವಳೆ
ಎಸಳೇಳು ದಳ ಚಿಗುರೋಳೆ
ಯಿಂತ ಅಸುರ ಸಂಹರ ಬಂದ ಮಾತಾಡಮ್ಮ

ಸತಿಯೋಳು ಸಕಲ ಜೀಯಂಗಳ ಸಲಹೋಳೆ
ಪದ್ಮಾವತಿಯ ನಾರಾಯಣ
ತಳೆತಳೆಂಬುವ ರಾಮ ರತುನದುಪ್ಪರಿಕೆಯ
ಸಮರೆಂಬ ಹರಿ ಬಂದ ಮಾತಾಡಮ್ಮ

ಪಚ್ಚೆಯ ನೆರಿಗೋಳೆ ಪವನಿಟ್ಟ ಮುಡಿಯೋಳೆ
ಅಚ್ಚ ಕಂಗಳ ನೀರು ಹೂಮಾಲೆ
ಮತ್ಸವನರಿಯದೆ ಮದಕಂತಲಿರುವಂತೆ
ಅಚ್ಚುತ ಹರಿ ಬಂದ ಮಾತಾಡಮ್ಮ

ಕಡಗ ಕಂಕಣಹಾರ ಬಂದಿ ಸೂಗಂಧೆ
ಕುಂಕುಮ ಶ್ರೀಗಂಧ ವೆಸಗುವಳಮ್ಮ
ಅಂಕೋಜಿ ಲಂಕೆಯ ಪರಿಮಳವೆಸಗುವ
ಶಂಕು ಚಕ್ರಧರ ಬಂದ ಮಾತಾಡಮ್ಮ

ಕಾಮನ ತಾಯೆ ರತಿಗೆ ಸೋದರದತ್ತೆ
ದೇವಕಿ ದೇವಿಯ ಸೊಸೆ ನೀನು
ದೇವ ಶ್ರೀಹರಿಯ ಮೋಹದ ರಾಣಿ ನೀನು
ರವಣನ ಹರಿಬಂದ ಮಾತಾಡಮ್ಮ

# ನೋಡಿರೋ ಕಾದಿನ ಕೇರಿರಂಗನ

ನೋಡಿರೋ ಕಾದಿನ ಕೇರಿರಂಗನ
ನಾಡಾಡಿ ದೊರೆಗಳಿಗೆ ಅಳವಿಲ್ಲದವನ । ಪಲ್ಲವಿ ।

ಶ್ರೀ ಲಕ್ಷ್ಮಿಯಸುತ ಕಮಲದೊಳರ್ಜುನ
ಭೂಲೋಕಪಾಲ ಭೂಮಿಯ ಧರನ
ಸಾಲಹೆಡೆಯ ಮೇಲೆ ಶಯನಾವ ಮಾಡುವಂತೆ
ನೀರ ಮೇಲೆ ಶಯನಾಮ ನಿಜರೂಪನ

ಹುಟ್ಟಿ ಹುಟ್ಟಿದ ಸೀರೆ ಪಟ್ಟೆ ಸೀರೆಯ ಮೇಲೆ
ಕಟ್ಟಿದ್ದ ಮುತ್ತಿನ ಹಾರಗೊಂಡೆದಿಂದ
ಹಸ್ತ ಕಟ್ಟಿದ ಕಂಠಮಾಲೆ ಪವಕವನಿಟ್ಟು
ಕಟ್ಟಾಳು ಹೊರಟಳು ಕಡು ಚಲ್ವರಮಣಿ

ಅಂಡೊದರಿ ತನ್ನ ಉದರದೊಳಿಂಬಿಟ್ಟು
ಭೂಮಂಡ್ಲಕೆ ಪಾದವ ನೀಡ್ದೋನ
ಗಂಡು ಬ್ರಹ್ಮನೀ ಮೊತನಿ ಪಾಲುಂಡು
ಗೊಂಡೇವ ಹಿಡಿದು ಕೊಂಡಾಡಿದೋನ ।

# ಬೇಲೂರ ಚನ್ನಯ್ಯ

ಬೇಲೂರ ಚನ್ನಯ್ಯ ಅವನೀಲವರ್ಣನ ಕಾಣೆ
ಬೇಳುವೆಯಾ ಮಾಡಿ ವಲ್ಲದೆ ಹೋದೆ ಕೆಲದೆ । ಪಲ್ಲವಿ ।

ಅವ ದಸರಿಯ ನಲಿಗವನು ಅವ ಕುಸುಳು ಬಾಣವ ಪಿಡಿದವನು
ಯೆಸಳು ಹೊಂಬಣ್ಣನಾ ಚಲುವಕಾಣೆ ಕೆಲದೆ
ಯೆಸಳು ಹೊಂಬಣ್ಣನಾ ಚಲುವನ ಕರತಂದಾರೆ
ಕುಸುರಿ ಮೂಗುತಿಯಾ ಕೊಡುವನಲ್ಲೆ ಕೆಲದೆ

ಅವ ಕಡಗ ಗಾಜಿನಕಂಭ ಅವ ಸೂಗಂದದ ವೈಯ್ಯಾರಿ
ಸಂಪಿಗೆಯ ವನವ ಚಲುವ ಕಾಣೆ ಕೆಲದೆ
ಸಂಪಿಗೆಯ ವನದ ಚಲುವನ ಕರತಂದರೆ
ಅವ ಮುತ್ತಿನ ಬಟ್ಟು ಕೊಡುವೆನಲ್ಲೆ ಕೆಲದೆ

ಅವ ಮೂರು ಜಾಜಿಯ ಗಿಣ್ಣಿರಿದು ಅವ ಜಾಜಿಯಾ ನಿಜಗೆಂಪು
ಅವ ಸಣ್ಣಾನೆ ನಾಮದ ಚೆಲುವ ಕಾಣೆ ಕೆಲದೆ
ಅವ ಸಣ್ಣಾನೆ ನಾಮದ ಅವ ಯಣ್ಗೆ ಯಾನೆ ಗಂಟನಾ
ನಮ್ಮ ಚನ್ನಿಗರಾಯ ಹೌದಾದರೆ ನಾನಿಮಗೆ
ಅವ ಕೆನ್ನೆಯ ಸರವಾ ಕೊಡುವೆನಲ್ಲೆ ಕೆಲದೆ

ಆತ ಬಂದ ರಬಸಿಗೆ ಲದರಿದವೊ ಗಿಳಿವಿಂಡು
ಲದರಿದವೋ ನಮ್ಮ ಗಾಜು ಕೆಲದೆ
ಲದರಿದವೊ ನಮ್ಮ ಗಾಜು ಪೌಜು ಸೂವನದ
ಕರಿಯಂಚೀನ ಸೀರೆ ತಾರಾ ಹೇಳೆ ಕೆಲದೆ

ಆಚೆಯಾ ತಡಿಯಲ್ಲಿ ನೀನ್ಯಾಕಿದ್ದೊ ಗುರುರಾಯ
ಲೋಪುರದಾ ಕೋಲ ಕಾರಾಡಿಗೆ ಕೆಲದೆ
ಲೋಪುರದಾ ಕೋಲ ಕರಡಿಗೆಯ ತೆಕ್ಕೊಂಡು
ಅವ ಲೋಕಪಾಲಿಪನಾ ಕ್ಷೀರಹೋದೊ ಸ್ವಾಮಿ

# ಶಿವನ ಪೂಜೆಯ ಮಾಡುವ

ಈ ಸ್ವಾಮಿ ವಪ್ಪುಳ್ಳ ಶರಣರೆಲ್ಲ
ಪುಷ್ಪಕೋಗವನೇಳಿರೊ
ಈ ಸ್ವಾಮಿ ವಪ್ಪುಳ್ಳ ಶರಣರೆಲ್ಲ
ಪತ್ತೆಗೋಗುವನೇಳಿರೊ । ಪಲ್ಲವಿ ।

ಆವರೆಯು ತಾವರೆಯು ಘಟದ ಕೆಂದಾವರೆಯು
ಅರಸು ತಮ್ಮೆಯ್ಯವರ ಸರಸ್ವತಿಯೊಳು
ನಂದ ಪಕ್ಷಿಯ ಕಂಡೆ ಗರುಡ ಪಕ್ಷಿಯ ಕಂಡೆ
ಲಿಂಗದ ಶಿವನ ಪೂಜೆಯ ಮಾಡುವ

ಲಿಂಗದಾರರು ಕೂಡಿ ಸಂಗಲೋಗುವ ಬನ್ನಿ
ಗಂಗೆಯಲಿ ಮಿಂದು ಮಜ್ಜನವ ಮಾಡಿ
ಲಿಂಗಕರ್ಪಿತವಾದ ಬಿಲ್ವಪತ್ರೆಯ ತಂದು
ಲಿಂಗದೇ ಶಿವನ ಪೂಜೆಯ ಮಾಡುವ

ಉತ್ತರಾಣಿಯಪುಷ್ಪ ಉತ್ತಮಾದ್ರಿಯ ತಂದು
ಮತ್ತೆ ಶ್ರೀಗಂಧ ಲೇಪವ ಮಾಡುವಾ
ಮುಚ್ಚಿ ಮುಸುಕನಿಟ್ಟು ಅರಳ ದೀಪವನಚ್ಚಿ
ವಪ್ಪದಿಂದ ಶಿವನ ಪೂಜೆಯ ಮಾಡುವ

ಹಳದ್ಯೆದು ಬಿಳದ್ಯೆದು ರಾಜನದ ಕೆಂಪ್ಯೆದು
ಹದಿನ್ಯೆದು ಬಗೆಯ ಕಣಗಲ ಪುಷ್ಪವ-ತಂದು
ಹರಹರಾ ಎಂದು ಪೂಜೆಯ ಮಾಡುವ

ಮುಡಿವಾಳವ ತಂದು ಜಡೆಯ ಶೃಂಗರಿಸಿ
ಹೆಡೆ ಹೆಡೆಗೆ ಎಸಳು ಜವನವ ತುಂಬಿ
ಮುಡಿ ಮುಡಿಗೆ ಮೇಲಾದ ಪಚ್ಚೆತೆನೆಗಳ ತಂದು
ದೃಢದಿಂದ ಶಿವನ ಪೂಜೆಯ ಮಾಡುವ

## ಪೂಜೆಯ ಅಂದವ ನೋಡಿರೊ

ಪೂಜೆ ಅಂದವ ನೊಡಿರೊ
ಮೂಜಗದೊಡೆಯ ಮುದ್ದು ಮೂರುತಿಯ
ಪೂಜೆ ಅಂದವ ನೋಡಿರೊ
ಮೂಜಗದೊಡೆಯ ಚಲುವು ಚನ್ನರಾಯನ । ಪಲ್ಲವಿ ।

ಲೋಕಕಧಿಕವಾದ ಜನ್ನೇನಹಳ್ಳಿಲಿ ನಿಂದೆ
ಪರುವತದೊಳಗೆ ಸಿಂಗರಿಸಿಕೊಂಡೆ
ಧರೆಯೊಳಗುಟ್ಟಿದ ಪಾದವಸ್ತುವನೆಲ್ಲ
ಚೆನ್ನಿಗರಾಯನ ಪೂಜೆಗೊಳ್ಳಿ

ಅಡ್ಡಗಂಬದ ಭಾವ ಬೆಟದಂತೆ ಮಿರಜಾಜಿ
ದೊಡ್ಡ ದೊಡ್ಡ ಘನತೇರು ಭಾವದಿರ
ಮುದ್ದು ತಪ್ಪಿದ ರಂಗನ ಬಾಲಸೃಷ್ಟಿಯ ಮೇಲೆ
ಹೊದ್ದಿದ್ದ ಜನರೆಲ್ಲ ಹೊಳಬಾಯಾಗಿರಲಿ

ಇಂದಿತ್ತಾರದಲಿಗ್ಯೆದ ಚಿತ್ರದಿ ಕದಲಿಯು
ಮುಕ್ಕಣ್ಣ ಸೂಲಿಗರು ಹೊಳೆದಂಗೆ
ಸೃಷ್ಟಿಲಿ ಬ್ರಹ್ಮನು ಶಿವತಾನು ಮೊದಲಾಗಿ
ಅಷ್ಟಪಾಲಿಪರೆಲ್ಲ ಹೊಲಬಾಯಾಗಿರಲಿ

ನಿಲುವಗನ್ನಡಿ ಭಾವ ಹೊಳೆವ ಚಂದ್ರಮನಂತೆ
ಹೊಳೆವುಳ್ಳ ಚಂದ್ರನು ಹೊಳೆದಂಗೆ
ಘನವುಳ್ಳ ಘನಬಾಳೆ ಕಂಬದೊಳು ನೆಲಸೀದೆ
ಇಳೆಯೊಳಗೀ ಪೂಜೆ ಹಸನಾದವೊ

ಜೋತಿಯ ಚಂದಕ್ಕೆ ಪಾತಾಳ ಬೆಳಕಾದೊ
ಸೀತಾಳೆ ಪರಿಮಳವೆಸಗುತಿವೆ
ಸೀತಪತೆ ರಂಗ ನಿಮ್ಮ ಚರುಪಿನ ಸೇವಗೆ
ಗೋಟಿಯುರಾರತಿ ಎತ್ತಿದರು

## ಶಿವನ ಪರಿವಾರಕೆ ಜಯಮಂಗಳಂ

ಜಯಮಂಗಳಂ
ನಿತ್ಯ ಶುಭಮಂಗಳಂ । ಪಲ್ಲವಿ ।

ಮಂಗಳಂ ಮದ್ದಳೆಯ ನಂದೀಶ ಭೃಂಗಿಗೆ
ಮಂಗಳಂ ವೀರಭದ್ರ ಗಣೇಶಗೆ
ಮಂಗಳಂ ಶಣ್ಮುಕಗೆ ಶ್ರೀಗೌರಿ ಗಂಗಿಗೆ
ಮಂಗಳಂ ಪ್ರಮುಖಾದಿ ಬಸುವರೆಲ್ಲರಿಗೆ

ಮಲ್ಲೇಶ ಶ್ರೀಶಯನ ಮದನಾರಿ ರುದ್ರನಿಗೆ
ಮಲತವರ ಮರ್ದಿಸುವ ಮಹದೇವಗೆ
ಬಿಲ್ವಪತ್ರೆಗೆ ಒಲಿದ ಭೀಮೇಶ ಲಿಂಗನಿಗೆ
ಅಲ್ಲಮಪ್ರಭುರಾಯ ನಂಜುಂಡಗೆ

ಶ್ರೀಗುರು ಹಿಮಗಿರಿಯ ಕೇತಾರ ಲಿಂಗಗೆ
ನಾಗಭೂಷಣ ಕಾಶಿ ವಿಶ್ವೇಶಗೆ
ಯೋಗಿಗಳ ಹೃದಯನಿಗೆ ಯತಿ ಮಹಾಲಿಂಗಗೆ
ಶ್ರೀಗಿರಿಜೆಯರಸು ಗಂಗಾಧರನಿಗೆ

# ಲಕ್ಷ್ಮಿದೇವಿಗೆ ಮಂಗಳಾರತಿ

ಮುದ್ದುಪಾಧಕೆ ತಕ್ಕ ಗೆಜ್ಜೆ ಪರಾಕು
ವಜ್ರ ಮಾಣಿಕದೀವಿಗೆಯು ಪರಾಕು
ಮಧ್ಯ ಮಧ್ಯದಿ ಅರುಳೋಲೆ ಪರಾಕು
ಮುದ್ದು ಮಹಾಲಕ್ಷ್ಮಿಗೆ ಪರಾಕು
ಇಂತೆಂಬ ವಜ್ರದಾರತಿ ಬೆಳಗಿರೆ

ಬಡನಡುವಿಗೆ ಪಟ್ಟೆ ಸೀರೆಯ ಪರಾಕು
ತೊಡಗೆಲಿ ವಾಣಕಂಚಿ ಡಾಬು ಪರಾಕು
ಮುಡಿಯೊಳು ಮುತ್ತಿನದಂಡೆ ಪರಾಕು
ಹಳದಿ ಮಹಾಲಕ್ಷ್ಮಿಗೆ ಪರಾಕು
ಇಂತೆಂಬ ಜಯಮಂಗಳಾರತಿ ಬೆಳಗಿರೆ

ಕಂಟದೊಳೆ ನವ ಚಿಂತಾಕು ಪರಾಕು
ಯ್ಯಾಂಟವು ಜಲ್ಲಿಗೆ ಬಿಲ್ಲೆಯ ಪರಾಕು
ಪಂಚ ರತ್ನತೋಳ್ ತಲೆಯು ಪರಾಕು
ಜಂಪೆ ಮಹಾ ಲಕ್ಷ್ಮಿಗೆ ಪರಾಕು
ಇಂತೆಂಬ ಮುತ್ತಿನಾರತಿ ಬೆಳಗಿರೆ

ಬಿಡೆ ನಿಮ್ಮ ಪಾದವ ದೇವಿ ಪರಾಕು
ಕೊಡು ನಮಗೆ ಬೇಡಿದ ವರವ ಪರಾಕು
ಮುಡಿಯೊಳು ಮುತ್ತಿನ ದಂಡೆ ಪರಾಕು
ಹಳದಿ ಮಹಾಲಕ್ಷ್ಮಿಗೆ ಪರಾಕು
ಇಂತೆಂಬ ಮುತ್ತಿನ ಆರತಿ ಬೆಳಗಿರೆ

ತೊಂಡಲು ಮುತ್ತಿನ ದಂಡೆ ಪರಾಕು
ಗೊಂಡೇವು ಶೌರ್ಯಗಂಟೆ ಪರಾಕು
ಚಂದ್ರನ ಮುಖಕೆ ಮೂಗುತಿ ಪರಾಕು
ರಂಜಿ ಮಹಾಲಕ್ಷ್ಮಿಗೆ ಪರಾಕು
ಇಂತೆಂಬ ಜಯ ಮಂಗಳಾರತಿ ಬೆಳಗಿರೆ

# ಶ್ರೀ ಕೃಷ್ಣನಿಗೆ ಮಂಗಳಾರತಿ

ಜಯಯಮಂಗಳಂ
ನಿತ್ಯ ಶುಭಮಂಗಳಂ । ಪಲ್ಲವಿ ।

ಶ್ರೀವತ್ಸಲಾಂಚನಿಗೆ ಕ್ಷೀರಾಬ್ಧಿ ಶಯನನಿಗೆ
ಗೋವರ್ಧನೋದ್ಧಾರ ಗೋವಿಂದಗೆ
ಮಾವ ಕಂಸನ ಕೊಂದು ಮಕರ ಕುಂಡಿಲವಿಟ್ಟ
ಜೀವರಾಶಿಗಳ ಚಿನ್ಮಯ ರೂಪಗೆ

ಅಂಬುಧೀ ಶಯನನಿಗೆ ಅಖಿಳ ಲೋಕೇಶನಿಗೆ
ಶಂಬು ಅಜಸುರ ಮುನಿಗಳ ವಂದ್ಯಗೆ
ಎಂಬತ್ತುನಾಲ್ಕು ಲಕ್ಷ ಜೀವರಾಸಿಯನೆಲ್ಲ
ಬೊಂಬೆಯನು ಮಾಡಿ ಕುಣಿಸುವ ದೇವನೆ

ಪನ್ನಾಂಗ ಶಯನನಿಗೆ ಪಾವನಾ ಚರಿತನಿಗೆ
ಸನ್ನುತಾನುತ ಸಜ್ಜನ ಪೋಷಗೆ
ಎನ್ನೊಡೊಯ ಶ್ರೀಯರಸು ಮುದ್ದು ಶ್ರೀಕೃಷ್ಣಗೆ
ತಮ್ಮ ನೆನವ ದಾಸ ರಕ್ಷಿಪ ದೇವಗೆ

ನೀಲ ಮೇಘಾಂಗನಿಗೆ ನಿಜ ಸರಣು ಸಂಘನಿಗೆ
ಕಾಲಭಯನಾಶನಿಗೆ ಕಮಲಾಕ್ಷಗೇ
ಬಾಲಚಂದ್ರಾಗ್ನಿಗೆ ಬಹುಕೋಟಿ ತೇಜನಿಗೆ
ಮೂರುಲೋಕಕೆ ಒಡೆಯ ಮುರವೈರಿಗೆ

ಕಾಮಪಿತನಾದವಗೆ ಕಡು ಚೆಲ್ವ ಮಾಧವಗೆ
ಸಾಮಗಾನ ವಿಲೋಲ ಸರ್ವೇಶಗೆ
ಓಮದೇವರ ಮಿತ್ರ ವಸುದೇವರ ಪುತ್ರ
ಶ್ರೀ ಮಹಾಲಕ್ಷ್ಮೀಶ ಗೋವಿಂದಗೆ

ವರಾಹವತಾರನಿಗೆ ದುರಿತ ಸಂಹಾರನಿಗೆ
ಪರಮ ಪಾವನಗೆ ಪಾಪ ವಿನಾಶಗೆ
ಧರೆಯೊಳುತ್ತಧಿಕವೆಂದೆಸುವ ಕಣ್ವನ ಪುರದೊಳಗೆ
ಸ್ಥಿರವಾಗಿ ನೆಲೆಸಿರುವ ಶ್ರೀಕೃಷ್ಣಗೆ

[ಈವರೆಗಿನ ಭಾಗವಂತಿಕೆ ಪದಗಳ ಸಂಗ್ರಹ: ಹಿರಿಯಣ್ಣ ಮೇಟಿಕೆರೆ ೧೯೭೫.
ಕೃತಿ : ಭಾಗವಂತಿಕೆ ಪದಗಳು ರಾಮಾಯಣ]

# ಸೀತಾಪತಿಯ ಪದ

ಸುತ್ತ ಮುತ್ತೈದೇರು ಲಂಕ ದುರ್ಗವನು
ಹೆಚ್ಚಿ ಬಂದವರ ಮೊರೆಯಿಟ್ಟರು

ಸೀತಾಪತೆ ಶ್ರೀರಾಮ ಬತ್ತಾವನೆಂದು
ಭೂತಾಳದೊಳಗೆಲ್ಲ ಕಪಿಗಳು ಕೂಡಿ
ಆತನೊಡನೆ ಲಂಕೆಯ ಮುಟ್ಟಬೇಕೆಂದು
ಸೇತ್ವೆ ಕಟ್ಟಿದರಯ್ಯ ಸುತ್ತ ಸಾಗ್ರಕೆ

ಅಣ್ಣಾಳು ಅರಸಾಳು ಬಲವೆಲ್ಲ ಕೂಡಿ
ಸೀತಾಪತೇ ಶ್ರೀರಾಮರ ದಂಡು
ಸೇತ್ವೆಯ ಕಟ್ಟಿದ ಆಚೆಯ ನಡೆಯಲಿ
ಆಚೆಗೆ ಬಂದು ಪಾಳ್ಯವ ಬಿಟ್ಟರಲ್ಲ

ಕಿಮ್ಮಿಗಿಲೆದ್ದಂಗೆ ಎದ್ದವು ಕಪಿಗಳು
ಗುಡುಗುಟ್ಟಿ ನೆಲವ ಬಗೆದು ನೋಡುತ
ಜೀಯೆಂಬ ಕಾಳಿಯು ಜೀಯೆಂಬ ಮದ್ದಾನೆ
ತೆಂಗ ಬಾಗಿಲಿಗೆ ಅಂಗದನ ಬಿಟ್ಟ

ಆ ಮುತ್ತ ಬಂದ ದಂಡ ಮೊತ್ತಗಳಾದವು
ಸುತ್ತಲ ಸಭೆಯಲಿ ನೋಡಿ ಕಂಗೆಡುತ
ಅಂದಳಾಗ ಸಹಿಹೋಗಿ ಕೆಂದೂಳ ಮುಸುಗುತ್ತ
ಗಂಧಮಾದನ ಬಿಟ್ಟ ಪಡುವ ಬಾಗಿಲಿಗೆ

ಕಾರ ಮುಗಿಲು ಕಾರಂಜಿನಿ ನೆರೆಯೂರಿ
ಹೇಮಗಿರಿಗೆ ನಡೆಯುವ ದಂಡು
ಭೂಮಿಗೆ ಏಳುವರ್ಷದ ಹಿರಿಯ ಜಾಂಬವ ತಾನು
ಜಾಂಬವ ಮುನಿ ಬಿಟ್ಟ ಮೂಡ ಬಾಗಿಲಿಗೆ

ಓ ನೀಲವರ್ಣದೋರು ತೇಜಿಯ ಸೇರಿ
ಬಲವಂತನಿಬ್ಬರು ಹೌದು ಕಾಣಯ್ಯ
ಹುಯ್ಯೋ ಗುಡಾರವ ಎಡದಾರಣಿಯಲ್ಲಿ
ನೀಲವರ್ಣನ ಬಿಟ್ಟ ಬಡಗ ಬಾಗಿಲಿಗೆ

ಅಂಗೋಜ ತಿರುಗಿದ ಸಂಗೋಜ ಮರುಗಿದ
ಬಂದು ರಾಮರಿಗೆ ಬಿನ್ನಹ ಮಾಡಿ
ಇಂದಿನ ಕಾಳಗ ಎನಗೆ ಸಲುವುದೆಂದು
ನಿಂದು ಬಿನ್ನೈಸಿದ ಲಂಕೆಯ ದಾಸ

ರಾಮರೆಲ್ಲೆಲ್ಲೊ ಲಕ್ಷ್ಮಣರೆಲ್ಲೊ
ಭೂಮಿಯೊಳಗೆ ತಿರುಗಾಡುವರೆಲ್ಲೊ
ರಾಮರ ಮಡದಿ ಕದ್ದು ಕೊಂಡೊಯ್ವಾಗ
ನಾ ಕಂಡರೆ ಬಿಡೆ ಕಿಚ್ಚೋಡಿ ಹನುಮ

# ದೊಡ್ಡ ಸೇರ್ವೆಪದ

ಕೇಳಿರಿ ದಶರಥ ರಾಮರ ಬಲದಲಿ
ಅವರಾಡುವ ಪಂಥ ಪಟಗಳನು

ಮುತ್ತು ಮಹಾ ಸಿಂಹಾಸನ ಪೀಠಕೆ
ಮುತ್ತು ಮಾಣಿಕ ನವ ರತ್ನಗಳು
ಕೆತ್ತನೆ ನಸನಸ ನವ ಚಿನ್ನದಲಿ
ಚಿತ್ತಾಜನ್ಯೆಯನಿಗಳವಡಿಸಿ

ರತ್ನದ ವರಗುಂಬ ರಡಿಯ ಕಿರೀಟ
ಕೆತ್ತಿದ ಪದಕ ಚೌಕಳಿ ಗಂಧ
ಉಪ್ಪರಿಕೆ ಬಿಲ್ಲ ಸರಕಂಠಮಾಲೆಯು
ಹತ್ತು ರೂಪಿನಲಿ ಹರಿಧರಿಸಿ

೧

ಮುತ್ತಿನ ಒರಗು ಸಿಂಹಾಸನ ಗದ್ದುಗೆ
ಅದರೊತ್ತಿನೊಳಗೆ ಮೌರತ ಮಾಡಿ
ಅದರೊತ್ತಿನೊಳಗೆ ಅನುಜರು ಲಕ್ಷ್ಮಣ
ಸುತ್ತ ಬಳಸಿ ಮನ್ಯವರೆಲ್ಲ

ಹತ್ತಿದ ಪಂಜಿನ ದೀವಿಗೆ ಬೆಳಕು
ಸುತ್ತ ಗಾವುದ ಹನ್ನೆರಡು ಎಂದ
ಮತ್ತೆ ಮತ್ತೆ ಬರುವ ದೊರೆಗಳ ಪಾಳ್ಯ
ಈ ಕ್ಷಣ ಸಭೆ ನಮಗಳವಲ್ಲ

೨

ತರತರದಲಿ ಹನ್ನೆರಡು ಗಾವುದವು
ದೊರೆ ದೊರೆಗಳ ನಿಂದಿರಿಸಿದರಾಗ
ಪರಿಚಾರರು ಭಟ್ಟರು ಉಗ್ಗಡಿಸುತ
ಬರುವ ವಾದ್ಯದ ರಭಸ ಚಂದ

ಧರೆ ನಡುಗಿ ಲಂಕಾಪುರ ಬೆದರಿತು
ಖರ ದೂಷಕರ ಕೊಲ್ಲುವರು
ಮಸ್ತಕಂಠಟಕ ಮಲಮಿಾನೆ ಕಂಟಕ
ಅಸುರರೂರಿಗೆ ಸುಟ್ಟ ಹೋಗಿ

೪

ಬಂದನಂಗದನು ಬಾಲಾತ್ಮದಲಿ
ನಿಂದನು ರಾಮರಿಗೆದುರಾಗಿ
ಮುಂದೆ ಗಳಿಸುತ ಮೊದಲು ಕೆಂದೇಸುತ
ಸಂದೂ ಭಟರು ಜಟ್ಟರಾರೆಂದು
ಇಂದ್ರಧರನು ಅಡ್ಡಲಾದರೆ ಹೊಡೆವನು
ಸಂಗೂ ಗಾಯಕೆ ಅಂಗಜನೆದ್ದ

೫

ಕರಿಕರಿಪತ್ತ ಏಳುಕೋಟಿ ಮನೆಯ
ಕರಿಕರಿ ಗವಿಯ ಗವಾಕ್ಷನಾ
ಗಿರಿಗಳ ಕಂಕಳಲವಿಸಿಕೊಂಡು ಹೋಗುವ
ಸರಿಗೆ ತೂಕದ ದುದಿಗೆಯ ಪಿಡಿದು
ಶರಧಿಗೆ ಬಾಲವ ಬೆಳೆಸುವೆನೆನುತ
ಬಳಸಿ ಬಂದು ಲೋಕವನೆಲ್ಲಾ
ಧರೆಯೊಳಗೆ ನಮಗೆದುರಾರಿಲ್ಲವೆಂದು
ಶಿರವ ನಲಿದು ತೂಗಿದ ಹರಿಯು

೬

ಧರೆಗೆ ಪಂಡಿತನೆಂಬೋ ಗುರುವಿನ ಧ್ಯಾನ
ಹರಿಯ ಕಮಲ ಚರಣಕೆ ಎರಗಿ
ಶ್ರೀ ಹರಿರೂಪವನಾದರೆ ತೋರುವೆ
ಕರುಣಿಸು ನಿಮ್ಮ ಕಾರ್ಯದ ಕೃಪೆಯ

ಕಂಡಾಕ್ಷಣದಲೆ ಕಾರ್ಯವ ತೂಗುತ
ಮುಂದೆ ಗಳಿಸುತಾ ಮುಕ್ತಿಯ ಫಲವಾ
ಸಂದನಾಗ ವೀಳ್ಯವ ಪಾಲಿಸು ಎಂದು
ಸಿಂದು ಬಿನ್ನಹ ಮಾಡಿದರು

೭

ಜಾಂಬವ ಬಿನ್ನಹ ಮಾಡಿದನಯ್ಯ
ಜಾಂಬವರೆ ಅರಸರು ಕೂಡಿ
ಅಂಬಾರವ ಗಿರ್ ಅನ್ನಿಸುವೆ ಧರೆಯೊಳ್
ಸಂಬೂಣಿಯೊಳ್ ಸುರ್ ಅನ್ನಿಸುವೆ
ಕುಂಬಿಣಿಯೊಳು ಜಾಂಬವಗಿದಿರಿಲ್ಲ
ಆಗೆಂಬೋ ಮಾತಿಗೆ ಈಡಾಡಿ
ಸುಮರಂಗದಿಂದಲಿ ಸಕಲ ಜೀವಾತ್ಮರ
ಅಂಗಜ ಪತಿ ತಮ್ಮನೆ ನಡೆಸಿದನು

೮

ದೇವತಾ ತೇಶ್ಚಂದ್ಧರಿ ಹನುಮಂತ
ದೇವತೆಗೆಡೆ ನೀ ಸಮರಂತ
ದೇವಗೊಂದಿಸಲಿ ಸುರನಲಿದಾಡಲು
ದೇವ ಲಂಕೆಯಲ್ಲಿಗೆ ತರಲೊ
ದೇವ ಲಂಕೆಯ ಸಾಗ್ರದಿ ಕಡದರೊ
ದ್ಯಾವ ದೇವಿ ಎಲ್ಲಿಗೆ ತರಲೊ
ದೇವ ನಿಮ್ಮ ಕರುಣವ ಕೃಪೆ ಮಾಡು ನಮಗೆ
ಯಾವ ಬಿರುದು ನಮಗಿದಿರಿಲ್ಲ

೯

ನೀರ ಸೇನನು ಬಂದ ನೀರ ಜಲಧಿಯೊಳ್
ನೀರ ಮೇಲೆ ಸೈರಣೆ ಪ್ರೇಮ
ಬಾಲ ಅಡ್ಡಲಾಕುವೆ ಸಾಗ್ರದೊಳ್
ಮೇಲೆ ನೆಡಸುವೆ ನಿಮ್ಮಯ ಚರಣ
ಕಾಲ ಊಳಿಗವ ಮಾಡುವೆ ಯಮದೂತರ
ಸಾಲ ಮಾಳಿಗವೆಂಬ ಲೋಕದೊಳು
ನೀಲ ಕಟ್ಟರ ಲೆಂಕಿಣಿಯೆಂಬೋ ಡೂಲ
ಲಾಲಿಸಿ ಕೊಡಿರೊ ನಿಮ್ಮಯ ಕೈಯ

೧೦

ಕರೆ ಸುಗ್ರೀವನ ಕರೆ ಜಾಂಬುವನ
ಧರೆಯೊಳಗಿದ್ದ ಸೈ ಎಂದ
ಕರೆ ಅಂಗದನ ಕರೆ ಹನುಮಂತನ
ಕರೆಸಿ ಬೇಗ ಋಷಿ ಕಪಿಯ
ಕಪೀಶ್ವರ ಅಸುರ ಠಾಣ್ಯದಿ ಬಿನ್ನಹ ಮಾಡಿ
ಕುಶಲ ತರುವೆನು ಲೆಂಕಿಣಿ ದೊರೆಗಳ
ಹೆಸರುಗೆಡಿಸಿ ಕೊಲ್ಲುವೆನೀಗ
ಹಸ್ತಿನಾಪುರದಿಂದ ಹಸಿದು ಬಂದವರಾರು
ವಾಸ ಮಾಡುವರಯ್ಯ ಒಂದು ನಿಮಿಷ
ಹುಸಿದರೆ ನಿಮ್ಮಡಿಗಾಯಿತು ಎನುತ
ಋಷಿ ಕಪೀಶ್ವರ ಮರುಗತಲಿರ್ದ

೧೧

ಪಡುಗಡೆಯ ಸುಗ್ರೀವನ ಠಾಣ್ಯದಿ
ಎನ್ನೊಡೆಯಗೆ ಬಿನ್ನಹ ಮಾಡಿದರು
ಕಡಿವನು ಮತಶಿರಗಳ ಕುಂಭಕರ್ಣನ
ಕೆಡಹಿ ತುಳಿವೆನಿದಿರಾದವರ
ಮಡುವಿನ ಮಾಯದ ಮೊದಲ ರಕ್ಕಸರ
ಹಿಡಿವೆನು ಅವರ ಜಡೆ ಪಿಡಿದು
ಕೊಡುವೆನವರ ಭೂತಕೆ ಬಲಿಯ
ಹಿಡಿವೆನು ಶಂಕಿಣಿ ಡಂಕಿಣಿಯರ
ಕೊಡು ವೀಳ್ಯವನೆಂಬುತಲಿರ್ದ

೧೨

ಕಡಿಗಡಲೆಯ ಠಾಣ್ಯದೆ ಭುಜಬಲದಲಿ
ಎನ್ನೊಡೆಯಗೆ ಬಿನ್ನಹ ಮಾಡಿದರು
ಕಡಿವೆನು ಯತಶಿರಗಳ ಕುಂಭಕರ್ಣನ
ಕೆಡವಿ ತುಳಿವೆನಿದಿರಾದವರ
ಮಡುವಿನ ಮಾಯದೆ ಮೊದಲ ರಕ್ಕಸರು
ಹಿಡಿವೆನು ಪಡಿಮ ಅಶ್ವರ ದ್ಯಾನವ
ಹಿಡಿವೆ ಸೆರೆಮನೆಂಬುತಲಿರ್ದನು

೧೩

ಸಂಡ್ಯೈಟೋಣ ಜಟೋಗ್ರನರವಸಿಗೆ
ಭೂಮಂಡಲ ಬೆಚ್ಚಿ ಬೆದರಿದಕೆ
ಗಂಡುಗಲದಕೆ ನುಡಿದವಾದ್ಯಗಳು
ಕಂಡ ಪುರುಷ ತಲೆದೂಗಿದರು
ಹಿಂದಲ ವಾಲ್ಯಕೆ ಪೂಮಳೆಗರೆಯಲು
ಪುಂಡ ರಕ್ಕಸರಿದ್ದ ಪಡೆಯೊಳಗೆ
ಕಂಡರು ವಿಟಲ ಕಪಿನಾಯಕನ
ಭೂಮಂಡಲದೊಳ್ ನೆಲಸಿದ ಋಷಿಕಪೀಶ್ವರರ

ಅಸುರ ಠಾಣ್ಯದಿ ಎನ್ನ ಸುರರಿಗೆ ಬಿನ್ನಹ ಮಾಡಿ
ಕುಶಲ ಗೆಡಿಸುವೆ ಲಂಕಿಣಿ ದೊರೆಗಳ
ಹೆಸರುಗೆಡಿಸಿ ಕೊಲ್ಲುವೆನೀಗ
ಹಸ್ತಿನಾ ಪುರದಿಂದ ಹಸಿದು ಬಂದವರ್‍ಯಾರು
ವಾಸ ಮಾಡುವರಯ್ಯ ಒಂದು ನಿಮಿಷ
ಹುಸಿದರೆ ಇಮ್ಮಡಿಗಾಯಿತು ಎನುತ
ಋಷೀ ಕಪೀಶ್ವರ ಮರುಗತಲಿರ್ದ

# ಪ್ರಹ್ಲಾದ ಚರಿತ್ರೆ

ನಂಬಿದೊ ನಾರಾಯಣ ನಾವು ನಿಮ್ಮ ಚರಣವ
ಬಂದಾನ ಬಿಡಿಸೊ ಬಳಿ ನಾರಸಿಂಹನೆ

ದೂಷಕ ವೈರಿಯೇ ದಾಸರರತ್ನವೆ
ವಾಸುದೇವರೆ ಕೇಳು ಶ್ರೀಕೃಷ್ಣನೆ
ಜಗದೊಡೆಯ ಬಂದು ಲೋಕವನಾಳಬೇಕೆಂದು
ದೇವರ್ಕಳೆಲ್ಲ ಬಿನ್ನಪ ಮಾಡಿದರಾಗ

ಮೇದಿನಿಯ ಸುತ್ತುತ ಕಂಗಳಲ್ಲಿ ಎಸೆವುತ
ಹಿರಳಂಕನೆಂಬ ರಾಕ್ಷಸನ ಕೊಂದು
ಅಷ್ಟಿಷ್ಟು ವಾಲ್ಮೀಕಿ ಮುನಿ ನಾರದರು
ಸರ್ಪಶಯನನಿಗೆ ಬಿನ್ನಹ ಮಾಡಿ ಸ್ವಾಮಿ

ಹತ್ತು ತಲೆ ಇಪ್ಪತ್ತು ಕೈಗಳು ಶ್ರೀಹರಿ ಮೆಚ್ಚನು
ಕುಂಭಕರ್ಣನ ತಲೆಯ ಚೆಂಡಾಡಿ
ಬಂದು ಬಾಣದಿ ಕೊಂದು ಸುಗ್ರೀವಗೆ ಒಲಿದವನೆ
ಅಂಗದಗೆ ಶ್ರೀಪಟ್ಟ ಕಟ್ಟಿಸಿದಂತ ಸ್ವಾಮಿ

ಅಂದು ರಾವಣನ ಕೊಂದು ಪಾಪವ ಕೇಳಿ
ಬಂದು ಕಾಶಿಯಲಿ ತೀರ್ಥವನಾಳುತಾಗ
ವಾನರಾಶಿಯ ಮಾಡಿ ಶ್ರೀರಂಗದೆಡೆಗೆ ಹೋಗಿ
ದಾನವನು ಮಾಡಬೇಕು ಲಕ್ಷ್ಮಣನೆ

ಅನ್ನದಾನ ವಸ್ತ್ರದಾನ ಕನ್ಯಾದಾನವ ಮಾಡಿ
ಗೋದಾನವನಾದರು ಮಾಡಬೇಕು
ಹನ್ನೆರಡು ಕೋಟಿ ದಾನವ ಮಾಡಬೇಕೆಂದು
ಭರತ ಶತ್ರುಘ್ನರ ಕೇಳ್ದ ಲಕ್ಷ್ಮಣನೆ

ಬ್ರಹ್ಮತಾ ಓದಿದ ವಾಲೆಯ ಹರಿದು ಬಿಟ್ಟರೆ
ತೊಡಲ್ಯೆತ ಇರುಳಂಕನಣೆಯ ಬರಹವ
ಜಗದೊಳಗೆ ಇಂದಿವನ ಕೊಲ್ಲಬೇಕೆನ್ನುತಲಿ
ದೇವರ್ಕಳೆಲ್ಲ ಬಿನ್ನಪ ಮಾಡಿ ಸ್ವಾಮಿ

ಕೊಲ್ಲ ಬಹುದೆ ಕೇಳಿ ಬ್ರಹ್ಮದೇವರ್ಕಳೆ
ಕೊಂದರೆ ಪಾಪವು ನಮಗಿಲ್ಲವು
ಬ್ಯಾರೆ ರೂಪವ ತಾಳಿ ಕೋರೆಯಿಂ ಸೀಳುವೆನು
ಕರುಳು ಕಿತ್ತು ಭೂಮಿಗೊರಗಿಟ್ಟೆನೆಂದ

ತನ್ನ ರಾಣಿಯ ಕರೆದು ಮಾತ್ನಾಡಿ ಹಿರುಳಂಕ
ವಿದ್ಯಾವ ಕಲಿಸಬೇಕು ಪ್ರಹ್ಲಾದನಿಗೆ
ಕರಸಿರು ಪಾದ್ರಿಯ ಬರಹೇಳಿ ಬೇಗದಲಿ
ಹರಸುವೆ ರಣಶೂರ ಕರವಿಟ್ಟು ಮಗನ

ದೊರೆಗಳ ದೇವ ಚಿತ್ತ್ಯೆಸಯ್ಯ ಬಿನ್ನಪವ
ಓದುವ ಮಠಕವನ ಕಳುಹಬೇಡಿ
ಅರಮನೆಗೆ ಬರಸಿಡಿಲು ಎರಗುವದ ಕಂಡೆ
ರಕ್ತದ ಕೋಡಿ ಹರಿಯುವುದ ಕಂಡೆ ನಾನು

ಕಂಡೆ ನಾನೆಂಟು ದಿನದಿಂದ ಮುಂಗನಸುಗಳ
ಎಂದೆಂದು ಇಂಥ ಸ್ವಪ್ನವ ಕಾಣಲಿಲ್ಲ
ಅರಮನೆಗೆ ಹೆಬ್ಬುಲಿ ಹೋಗುವುದ ನಾ ಕಂಡೆ
ಕರುಳು ಬಗಿವುದ ಕಂಡೆ ನಾ ಬಾಗಿಲೊಳಗೆ

ಮುಂದಲೆ ಹಿಡಿದು ಎಳೆವುದ ಕಂಡೆ
ಉಪ್ಪರಿಕೆ ಮೇಲಿಂದ ಬೀಳುವುದ ನಾ ಕಂಡೆ
ಬಿದ್ದ ಪೆಟ್ಟಿಗೆ ಪ್ರಾಣ ಬಿಡುವೆನೆಂದು
ತನ್ನ ಗಂಡನ ಕೂಡೆ ಬಿನ್ನಹವ ಮಾಡಾಳು

ಕೆಟ್ಟೆಕೆಟ್ಟೆನೆಂದು ನೊಟ್ಟಿಗೆ ಮುರಿಯುತ
ದುಷ್ಟ ಪ್ರಲ್ಹಾದನ ಹಿಡಿತರುವರು
ಕಟ್ಟಿ ಮದ್ದಾನೆಯ ಮುಂದಾಕಾಕುವುದ ನಾ ಕಂಡೆ
ಹೆದರಿ ಕಂಗೆಟ್ಟೆನಾ ಸ್ವಪ್ನದಲಿ

ಚಮದ್ರಸೂರ್ಯಾದಿಗಳು ಹಿರುಳಂ ಕನಾಯುಷ್ಯವ
ಅಂದು ಪಡೆದು ಬಂದೆ ಶಿವನ ಕೈಯಲ್ಲಿ
ಜಗದೊಳಗೆ ಎನ್ನನು ಕೊಲ್ಲುವರ್‍ಯಾರೆಂದು
ತನ್ನ ರಾಣಿಯ ಕೂಡೆ ನುಡಿದನಾ ರಣಶೂರ

ಹರನಲ್ಲಿ ತಪಿಸಿ ನಾ ಪಡೆದೇನು ನನ್ನ ಮಗನ
ಒಪ್ಪತ್ತಿನಾ ಊಟ ನಾ ಉಣಲಿಲ್ಲ
ಒಂಬತ್ತು ತಿಂಗಳು ಒಡಲೊಳಗೆ ಹೊತ್ತಿದ್ದೆ
ಕಂದಯ್ಯ ನಿನ್ನ ಬಿಟ್ಟು ಹ್ಯಾಗಿರಲೊ ನಾನು

ಧರಣಿಯ ಮೇಲೆ ಎನಗಿಂತ ದೊಡ್ಡವರು ಯಾರು
ಹೊಯ್ಲದೆಣಗಲ ಭೂಮಿಯಮೇಲಣ
ಮುತ್ತಿನ ಮಣಿಯಂಥ ಪ್ರಹ್ಲಾದನ
ನಾನಿನ್ನ ಬಿಟ್ಟಂಗೆ ದುಃಖವ ಮರೆಯಲಯ್ಯ

ಕೋಗಿಲೆ ಮರಿಯೆಂದು ಕಾಗೆ ಸಾಕಬಲ್ಲುದೆ
ಸೋಗೆಯ ವನದಿ ಗೋಪಾಲನವನೆ
ಸಾಗರಶಯನನ ಪಾದವ ನಂಬಿರುವೆ
ಹೋಗಮ್ಮ ತಾಯೇ ನೀ ಹೆದರಬೇಡ

ಹೊಡಸಿಕೊಂಡರು ಮಗನೆ ಬೈಸಿಕೊಳ್ಳಲು ಬೇಡ
ಮುಂದರಿದು ಅಕ್ಷರವ ಓದು ಕಂಡ್ಯಾ
ಗಲ್ಲವನು ಹಿಡಿದು ಮುದ್ದಾಡಿ ಮಗನ ನೋಡಿ
ಮೆಲ್ಲನೆ ಹೋಗೆಂದು ಕಳುಹಿದಳಾಗ

ಓನಾಮೋ ಶಿವಾಯ ಎಂದು ಬರೆಯೆಂದರೆ
ಆದಿನಾರಾಯಣ ಎಂದು ಬರೆದ
ಮರೆಯಬೇಡಕ್ಷರವ ಓದಿನೋಡೆಂದರೆ
ಎನ್ನೊಡೆಯ ನಾರಾಯಣನೆ ಗತಿಯೆಂದನು

ಹೆಚ್ಚುನಾಡಲು ಬೇಡ ಸೊಕ್ಕು ಮುರಿಯುವೆ ನಿನ್ನ
ದಕ್ಕಿಯಿಂದಣ ನುಡಿಯು ಮತ್ಸರವ ಮಾಡಿ
ಹಿರಳಂಕನೊಳ್ ಸೆಣಸಿದರೆ
ದುಷ್ಟಪ್ರಲ್ಹಾದನಿಗುಳಿಗಾಲವಿಲ್ಲೆಂದ

ಒಂದು ದಿನ ಹೇಳಿ ಹೋದೆನೆಂದ ನಮಗುರುವು
ಹಾಗೆಂದ ಮಾತಿಗೆ ನಾ ತಾಳಿದೆ
ಮುನ್ನರಿತು ಮಾತಾಡೊ ಜೋಯಿಸ ಎಂದರೆ
ಬಂದು ಕೋಪದಲ್ಲಿ ನುಡಿದ ಪ್ರಹ್ಲಾದ

ಬಿಟ್ಟು ಕಂಗೆಟ್ಟು ತಾ ಓಡುವನ ಜೋಯಿಸ
ದುಷ್ಟ ಇರುಳಂಕನ ಎಡಬಲಕೆ
ಕೆಟ್ಟಿತಲ್ಲ ಸ್ವಾಮಿ ಅರಸುತನ ಇಂದಿಗೆ
ಕರಗಳನ್ನು ಎತ್ತಿ ಬಿನ್ನಹ ಮಾಡುವನಾಗ

ಸಂಗಾತ ಬರುವ ದೂತರ ಕಳುಹಿ ಹಿರುಳಂಕ
ಕೊಂಡು ಹಿಡಿತನ್ನಿ ಬಿಡಬೇಡಿ ಎಂದ
ಮುಂದಲೆಯ ಹಿಡಿದು ಎಳಕೊಂಬಲ್ಲಿ ಆಗೆಂದು
ಸಂಗಾತ ಐದು ಮಂದಿ ಕಳುಹಿದನಾಗ

ಬರುವ ದೂತರ ಕಂಡು ನಸುನಗುತ ಪ್ರಹ್ಲಾದ
ಮಂಧಾರಧರನಿಗೆ ಶರಣೆಂದನು
ಬಂದ ಕಾರಣವೇನು ಹೇಳುಹೇಳೆನುತಲಿ
ನಿಮ್ಮ ತಂದೆಯು ರಣಶೂರ ಕರವಿಟ್ಟ ಮಗನ

ಹುಟ್ಟು ಹೊನ್ನುಡುದಾರ ತೊಟ್ಟ ಬಾಪುರಿ ಸಹಿತ
ಕಟ್ಟಿದನಾಕಾಲ ಕಡಗ ಬಳೆಯು ಸಹಿತ
ಮತ್ತೆ ಬಳ್ಳಾಪ ಕೈಯಲಿ ಹಿಡುಕೊಂಡು
ಕಟ್ಟಾಳು ನಡೆದು ಬಂದ ತಂದೆಯ ಬಳಿಗೆ

ಆದಿ ನಾರಾಯಣನ ಗಂಡನೆಂಬ ಬಿಂಕುಳನಿಟ್ಟು
ವಾರ ಕಣ್ಣಿನ ನೋಟ ಕಡೆಯ ಹುಬ್ಬಿನ ಭಾವ
ಸೂರ್ಯ ಪ್ರಭೆಯಂತೆ ಬರುವ ಮಗನ ನೋಡಿ
ದೂರದಿಂದ ಕಂಡು ಬೆರಗಾದ ಹಿರುಳಿಂಕ

ಬರುವ ಮಗನ ನೊಡಿ ಬೆರಗಾದ ಹಿರುಳಂಕ
ಬಂದ ಕೋಪವೆಲ್ಲ ಅಡಗಿಸಿಕೊಂಡು
ಇದುವರೆಗೆ ಕಲಿತಿದ್ದ ಓದೊ ಮಗನೆ ಎಂದರೆ
ಮಂಧಾರಧರನಿಗೆ ಶರಣೆಂದನಾಗ

ಧರೆಯೊಳಗೆ ಹುಟ್ಟಿದ ಕತ್ತಿ ಆಯುಧವ ತಂದು
ಕಟ್ಟಿಮುಂದದ ನೀ ನೋಡೆನುತಲಿ
ಎತ್ತಿದಳಾಕ್ಷಣವೆ ಮೇಲಕ್ಕೆ ಎತ್ತಿದರೆ
ಪ್ರಧಾನಿಯು ಬಂದು ಅಡ್ಡಲಾಗುವನಾಗ

ಹತ್ತೆಂಟು ಶೂಲವ ನೆಟ್ಟರೆ ಭಯವೇನು
ಏರುವುದು ಒಂದೆ ಶೂಲ ಎಂದನು
ಪ್ರಾಣದಾಸೆಯ ಮೇಲೆ ಏತರಂಬಲವೇನು
ಹೋಗಮ್ಮ ತಾಯೆ ನೀನೆದರಬೇಡ

ಪುತ್ರ ಹುಟ್ಟಿದ್ದಕ್ಕು ವ್ಯರ್ಥವಾಯಿತಲ್ಲ
ಪಟ್ಟಕೊಪ್ಪುವ ಮಗನು ಎನುತಿರ್ದೆನು
ಮತ್ತೆ ಹಗೆಯ ಕೊಂಡಾಡಬೇಡವೆಂದು
ಎತ್ತಿ ಮುದ್ದಾಡಿದ ರಣಶೂರ

ಹದ್ದು ಎನ್ನಲಿಬೇಡ ಗರುಡ ಪುರುಷೋತ್ತಮನ
ಒದ್ದು ಒಲಿದರೆ ಸಲುಹುವ ದೇವನ
ಕದ್ದು ರಾವಣ ಸೀತೆ ಸೆರೆಯ ಕೊಂಡೊಯ್ಯುವಾಗ
ಹೆಚ್ಚಿದರಥವಡ್ಡ ಪರವಸ್ತುವ

# ಪ್ರಹ್ಲಾದ ಚರಿತ್ರೆಯ ಮುದ್ರಿಕೆ

ನಾರಾಯಣನೆಂಬೊ ಧ್ಯಾನಿರಬೇಕು
ನಾಲಗೆಯೊಳಗೊಂದು ನಾಕು ಇರಬೇಕು
ಜೋಡಿಸ್ಥಿರಮಣಿಯ ತುಂಬಿರಬೇಕು
ಕೊರಳಲ್ಲಿ ತುಳಿಸಿಯ ಸರವಿರಬೇಕು

ಒಡೆಯನ ಪಾದವ ಕಂಡಿರಬೇಕು
ಒಡೆದ ದಂಡೇ ಗೋಪಾಲಿರಬೇಕು
ಧರ್ಮದ ಕಾರ್ಯವು ಕೈಗೂಡಬೇಕು
ಕರದು ಮಾಡುವರೆಲ್ಲ ದಾನಧರ್ಮಗಳ

ಸುಮಾನುಗಾಲಲಿ ಹೊಮ್ಮು ಮುರಿದವನ
ಹೊಮ್ಮುನ ನುಡಿಗೆ ಬಿಟ್ಟರು ಆಗ
ಓದೊ ಮಠಕೆ ಹೋಗೊ ಪ್ರಹ್ಲಾದ
ಓನಾಮವ ಬರೆಯೆಂದನು ಆಗ

ನಾರಾಯಣ ಎಂದು ಬರೆದನು ಆಗ
ಇನ್ನು ಬಿಡು ಎನಗೆ ಯಮನಾದೆ
ಕಲ್ಲು ಗಾಣಕೆ ಹಾಕಿ ಅರಸುವೆನೆಂದ
ಕರುಣಿಸಿ ಬುದ್ಧಿಯ ಹೇಳುವೆನೆಂದ

ಅನುದಲಿ ಬರೆವುದು ಮನದಲಿ ಬಂದು
ಚಿನ್ಮಯ ರೂಪವ ತೋರೇನೆಂದ
ಉಕ್ಕಿನ ಕಂಬವು ಒಣ ಪ್ರಹ್ಲಾದ
ಚಿಟಿಲು ಚಿಟಿಲು ನಿಟಿನಿಟಿಲೆಂದು

ಉರಿವೋ ಮಂಡಲ ಹೊಕ್ಕೆಡೆ ಎನುತ
ಕೊಬ್ಬಿದ ರಾಕ್ಷಸರ ಮುರಿಯಲಿ ಕಂಬ
ಏಳೇಳು ದಿನದ ಮೊದಲಿಗನವನು
ಸೂಳೈಸಿ ಕಂಕಣ ನೀಡುವವನು

ಹಾಲು ಬೇಳೆ ಅಕ್ಕಿಯು ತುಪ್ಪವು
ಪಾಲಿಸಿರೈಯ್ಯ ನಿಫಲರ ಮನಕೆ
ಮಂಗಳ ಮಹಿಮ ಕಂಗಳಾಧಾರ
ಅಂಗೈನೊಳಗೆ ಆಡಿಸಿಕೊಂಬ

ಶೃಂಗಾರದ ಮದಲಿಂಗನ ನೋಡಿ
ಹಸೆಯ ಜಗುಲಿಯ ಎಸೆವೊ ಚಪ್ಪರ
ದಿಕ್ಕುದಿಕ್ಕಿನ ಹರಿದೋಗುವ ಸಂತೆ
ಆಗಲೆವೊಡೆದಂ ಬೆಳ್ಳಿಯ ಮನೆಯ

ಆಗೊಂಬೆಗೆ ತೊಟ್ಟಿಲವನೆ ಕಟ್ಟಿ
ಜೋ ಜೋ ಎಂದು ಜಗುಳ ಪಾಡಿ
ಜೋ ಕೃಷ್ಣನ ತಾನೆಯ ಪಾಡಿ
ಅರ್ಜುನ ತಲೆ ಮುಂಡವ ಕಾಯ್ದ ಜೋ ಜೋ

ಪ್ರಹ್ಲಾದಗೆ ವರವ ಇತ್ತವ ಜೋ ಜೋ
ವಿಭೀಷಣಗೆ ಪಟ್ಟವ ಕಟ್ಟಿದ ಜೋ ಜೋ
ಜೋ ಜೋ ಬೆಳ್ಳೂರ ಆದಿ ಮಾಧವಗೆ
ಶಂಕುಚಕ್ರಗದಾ ಮುದ್ರೆಯುಳ್ಳವಗೆ

ಕೊಟ್ಟರು ವರಗಳ ಇಟ್ಟರು ಶಾಪ
ಇಟ್ಟರೆ ರಾಯನ ತೀರ್ಥಪ್ರಸಾದ
ಬನ್ನಿಯ ತರದಲಿ ಬಾಳುವರಿವರು
ಹೋಗೋಗೋ ಹೆಚ್ಚಿನ ಜ್ಞಾನವುಳ್ಳವನೆ

ಭುಗಿಲು ಭುಗಿಲು ನಾ ಎನ್ನುತ ಬರಲಿ
ಚಿಮಿಲು ಚಿಮಿಲು ನಾ ಎನ್ನುತ ಬರಲಿ
ಏಳುತ ಬೀಳುತ ಹೋಯ್ತಮ ಶರಣ
ಹಾಳುಮಾಡಿಕೊಂಡ್ಯಾಮನ ಪುರವ
ಹನುಮನ ಸಾಹಸ ಜಾಂಬವನೆ ಬಲ್ಲ
ತೋಳಕುಂಟ ವೈಕುಂಠನ ಪುರವ

## ದಳ ಎರಡು : ಬಿಡಿ ಹಾಡುಗಳು

# ಪಯಣಗತಿ

ಗಿರಿಗೆ ಹೋಗುವ ಸಮಯ
ಹರಿದಂಗಲಂಗಳ ಮಾಡಿ
ಕರವಿಲ್ಲದವರಿಗೆ ಸಂಬಳವ ತಿದ್ದಿ

ಕಲುವ ಶಾಸನದಿಂದ ಕೈಹಿಡಿದು ಕಳುಹಿದರೆ
ಕುಲಕೋಟಿ ಹಂಗುಷಗೆ ಒಂದುಕ್ಷರ
ಹರಿದು ಹೋಗುವುದಂತೆ ನಾವು ಮಾಡಿದ ಕರ್ಮ
ಉರಿಗೆ ಒಡ್ಡುವರಂತೆ ಕರಗದಂತೆ

ಸಲಹು ದೇವರ ದೇವರ ಶ್ರೀ ವೆಂಕಟೇಶ್ವರ
ಕಲಿಯುಳ್ಳ ವಿಠಲ ನಮ್ಮ ಕೈಹಿಡಿಯೋ ಮನವೆ
ಹರುಷದಿಂದಲಿ ಹೊರಡಿ ಪರುಷೆ ತಿಮ್ಮಪ್ಪಗೆ
ವರುಷಕ್ಕೊಂದು ತಿಂಗಳು ದಂಡು

ಒಂದನೇ ಕಲಿಬಂತು ಮುಂದೆ ಶಾಸನಫಲವು
ಎಂದೆಂದಿಗೂ ಮರಳಿ ಜಲ್ಮವಿಲ್ಲ
ತಂದೆ ತಾಯಲಿ ಇಪ್ಪತ್ತೊಂದು ಶಿಕ್ಷವೋ ಮೋಕ್ಷವೋ
ತಿಳಿದು ಮತ್ತೆರಡನೆಯ ಕಲಿ ಬಂದರೆ

ಸಂಧಿಸಿ ಅವನ ಕಿಂಕರ ಮುಟ್ಟೆ ನಾನೊಂದು
ಬಂದ ದುರಿತಗಳಲ್ಲಿ ಪರಿಹಾರವೊ
ದಂದುಗದ ಒಳಸಿಕ್ಕಿ ನೊಂದೆನೆನ್ನಲುಬೇಡಿ
ಗೋವಿಂದ ಗೋವಿಂದ ಎನುತ ಹೊರಡಿ

ಮೂರನೆಯ ಕಲಿಬಂದು ಮುಂದೆ ಶಾಸನಫಲವು
ಮೀರಿ ಮತ್ತೈದನೆಯ ಕಲಿ ಬಂದರೆ
ತೋರುವೆನು ವೈಕುಂಠ ಪುರರಾಜ ಬೀದಿಯನು
ಸೂರೆಗೊಂಬುವರ ಮನ ಹರಿಯುಬಿಡನು

ಬೇರೊಂದು ಗತಿಯ ಮೀರಿಸಲು ಬೇಡಿ
ಚಿತ್ತವ ಸೂರೆಗೊಂಬುವರ ಮನ ಪರಮ ಸುಖವು
ಆರೆ ಎನ್ನಲು ಬೇಡಿ ದೂರವೆನ್ನಲು ಬೇಡಿ
ಮುದದಲಿ ಮುಕುಂದ ಎನುತ ಹೊರಡಿ

ಅಳಿವ ಕಾಯವನೆಚ್ಚಿ ಉಳಿದೀರಿ ಹಿಂದಾಗಿ
ತಿಳಿದು ಮತ್ತೇಳನೆಯ ಕಲಿ ಬಂದರೆ
ಇಳೆಯೊಳಗೆ ತಮ್ಮ ನೆಂಬಿದ ಭಕ್ತನಿವನೆಂದು
ಕಲಿಯುಳ್ಳ ಹರಿ ತಮ್ಮ ಬಳಿಗೆ ಕರೆದ

ಬಳಲಿದ ಮಗನೆ ಬಾರೆಂದು ಮೈತೊಳೆದು
ಒಳಗಿಟ್ಟುಕೊಂಡ ತಮ್ಮ ಭಕ್ತರೊಡನೆ
ಬಳಲಿಕೆಯ ತೋರಿ ಹೊರಲಾರೆ ಎನ್ನಲುಬೇಡಿ
ಬಳಿಗೆ ರಾಮರ ಪಾದ ವಿಠಲಗಿರಿಗೆ

ಕಲಿಯುಗಕೆ ವೈಕುಂಠವೆನಿಸಿತೊನವನಗರ
ಶಿಲೆಯುಳ್ಳ ಕಲ್ಲುಗಳೆಲ್ಲ ವಿಠಲಮಯ
ಒಂದು ಶಿಲೆಯೊಳಗೆ ಎಪ್ಪತ್ತೇಳು ತೀರ್ಥವು
ವಳವು ಬಲ್ಲವರೆಲ್ಲ ಮನುಮುನಿಗಳು

ಬಲುಮೆ ಭೂಮಂಡಲವ ಎತ್ತಿ ತಂದಿತ್ತವಗೆ
ಒಲುಮೆಯುಳ್ಳವನಿಗೆ ಸಂಪತ್ತು ಕೊಡುವ
ಸಲಹು ದೇವರ ದೇವ ಶ್ರೀವೆಂಕಟೇಶ್ವರ
ಕಲಿಯುಳ್ಳ ವಿಠಲ ನಮ್ಮ ಕೈಹಿಡಿಯೊ ಮನವೆ

ಲಾಲಿಶ್ರೀ ವೆಂಕಟಗಿರಿವಾಸನ
ಸ್ವಾಮಿಯ ದಂಡು ನಡೆವ ಸೊಬಗ
ಶ್ರೀ ಲಕ್ಷ್ಮೀರಮಣನ ಸಂತೈಸುತ
ಭೂಲೋಕವ ಪಾಲಿಸೆ ಎನುತ
ಪಾಲಗಡಲ ಮಧ್ಯದಲಿ ಬಂದು
ನೀಲಗಿರಿ ಮಧ್ಯಕೆ ನೆಲಸಿ
ಭೂಲೋಕ ಸುಖಿ ಸಾಮ್ರಾಜ್ಯವ ಜಯಿಸುತ
ಸಾಲು ದೀವಿಗೆ ಒಡ್ಡೋಲಗವ
ಬಾವಕಿಯರಸನ ಗುಡಿತವು ಪಾಡುತ
ನೀಲವರ್ಣ ಮೆರೆಯುತಲಿರ್ದ

ಕೊಂಗು ಕೊಡಗು ಮಲೆಯಾಳದೇಶ
ಪಡವಲ ಗಟ್ಟಿ ಪಡವಲ ರಾಜ್ಯ
ಅಡಿಯಡಿಯಗ್ಗಿನ ಬೀಡಿನ ಜನರು
ಹಿಡಿ ಹೊನ್ನಿನ ಪನ್ನೀರ ಚೆಂಬ
ಸಡಗರದಿಂದ ಯಾಲಕ್ಕಿಯ ಕಂಡರು
ಗುಡಿಗೊಪ್ಪುವ ವಸ್ತುವ ಕಂಡು
ನಡೆದರು ಭಾಗೀರಥಿ ಹೊಳೆಯಲ್ಲಿ
ಯೆಡೆಗೈದರು ರಾತ್ರಿಯಗಳಿಗೆಯಲಿ

ಅಂಬುಧಿ ಅಷ್ಟಾಂಗಗೆ ವಂದಿಪ
ತುಂಬಿತು ಅಷ್ಟ ಗ್ರಾಮಗಳು
ಅಂಬೋದನ ಪಟ್ಣ ಕಾಣದೆ
ಹೊಂಬಾಳೆ ಮಧ್ಯದ ವನವು
ಗಂಭೀರದ ರಸಬಾಳೆ ಚಿಂತಾಮಣಿ
ನಿಂಬೆ ಹಲಸು ಆಗರಿಸುತ್ತ

ಅಲ್ಲೇ ಹರಿಭಕ್ತರ ಸುರಜೀಯವ
ಮೆಲ್ಲ ನಡಗೆಯ ತಂದರಿಗೆ
ನೆಲ್ಲಾದರೆ ಕೊನೆ ಮೊಸರೊಲ್ಲದ ಕೊನೆ
ಬೆಲ್ಲದ ಪಾನಕ ಬಳಲ್ದರಿಗೆ
ನಿಲ್ಲದೆ ಶಿಶು ಪಾಲ್ಬೆಣ್ಣೆಯನು
ಅಲ್ಲೇ ಕರೆಯುತಲವರೆ
ಬಿಲ್ಲು ವಸ್ತ್ರ ನಡೆದಿಳ್ಳಿಗೆ ತಂದರು
ಎಲ್ಲಾ ಆಚಾರ್ಯರು ಸಹಿತ

ಮೂಗ ಬದ್ಧರು ಕಿವುಡ ಕಿಂಗಿವುಡರು
ಲೋಭಿಗಳಾಗಿ ಹೊರಕ್ಕೆ ಬಿದ್ದು
ಮೂಗೂರು ಕಾವೇರಿ ಅರ್ಥವ ತಿಳಿಯದೆ
ಯೋಗಿಗಳಾಗಿ ಹೊರಕ್ಕೆ ಬಿದ್ದು
ಆಗೊಂಬವ ಶಾಸ್ತವ ತಿಳಿದರು ಕಿವುಡರು
ಶೀಗ್ರದಿ ಕಂಗಳ ತೆರೆದು
ಭಾಗವಂತರು ಕೊಂಡಾಡುತ ನಲಿದರು
ಆಗ ಮರ್ತ್ಯಕೆ ಜಯ ಎಂದು

ಹರುಷದಿಂದಲಿ ಜೀಯ ಹಸಿಹಸಿ ಎನುತ
ಹರಿಯ ವದಾಂಗಳ ಬೇಕೆನುತಲಿ
ಧರೆಗಧಿಕವಾದ ಸಮಯ ಕುಮಾರನು
ಧರೆಗುತ್ತಮ ಚೆನ್ನಪಟ್ಟಣವು
ಬಿರುದಿನ ಸಮಗೊಳಿ ನಗೆಶ್ರೀ ಮುಖವ
ಒರೆದುಕೊಟ್ಟು ಕಳುಹಿದನಾಗ
ಪುರುಷೊಂದೇಶದಿ ಪಕ್ಷಂದೇಶದಿ
ಹರಿಶರಣರ ಕರೆಸಿರಿ ಬೇಗ

ಕರ್ಪೂರ ಕಡಿಸೂಸ್ತ್ರದಂಬುಲಗಳು
ಮುಪ್ಪಟ್ಟೆ ಚಂದ್ರದ ಗಾವಿಚಪ್ಪರಳಿದ
ಮಾಂದಳಿರಿನ ತೋರಣ
ಚಪ್ಪರಗಳ ಶೃಂಗಾರಮಾಡಿ
ಒಪ್ಪಾಣಿ ಕೈಂದಗುಲ ಶತಗೋಪುರ
ಉಪ್ಪರಳಿಕೆ ಸಮಗಳನೆಸಗಿ
ಒಪ್ಪೊಪ್ಪೊ ಚನ್ನಪಟ್ಟಣ ಮೂರ್ತೆಯದೊಳು
ಮುಪ್ಪಯಣವ ಮಾಡಿದರಾಗ

ಜಟ್ಟಿಜನರು ನಿಜವಾಸದ ಕವಿಗಳು
ಬಿಟ್ಟಣೆ ಬಲಬಲವರ್ತಿಗಳು
ಬಿಟ್ಟಂತನದಲಿ ಓದುವರ್ ಭಾರತವ
ನೆಟ್ಟನೆ ವಾರುಧಿ ಮಾದಳಿಕೆ
ಕಟ್ಟಾಳುವಾಯ್ತು ಈಗ ನಡೆಯುವ ದಂಡು
ವಿಟಸಂಪಿಗೆ ಮೋದಳಕೆ
ತೊಟ್ಟಿಲ ಶಿಶು ಬಾಲೆಯರು ಸಹಿತ
ಬಿಟ್ಟರು ಬನ್ನೇರ ಘಟ್ಟದಲಿ

ದೋಣುದಮ್ಮಟೆ ಗಿಡಿಮುಡಿವಾದ್ಯ
ಮೋದಳಕೆ ಕೊಂಬುಕಾಳೆ ವೀರಣಮೌರಿ
ಸೂಳೈಸಿ ಮೆರೆಯುವ ವಾದ್ಯದ ಗಮಕಿಗೆ
ಹರಿದವು ದಿಕ್ಕುದಿಕ್ಕಿನ ಪರಿಷೆ
ಪಾಳ್ಯವು ನಡುಗಿತು ಪಾದ ಕೆಂದೂಳಿಗೆ
ದೂಳಿಗೆ ನವನವ ಛತ್ರಿಗಳು
ಸಾಲಾರತಿ ಎತ್ತುವರು ಕೊಂಡಾಡುತ
ಕೋಲಾರಕೆ ಬಿಟ್ಟರು ಬೇಗ

ಅರಗೆರೆಯಲಿ ಗವ್ವಾರಗಳೊಪ್ಪುವ
ಸುರಗಿ ಬಿಕ್ಕು ಬಿದಿರುಗಳಿಂಡು
ಗಿರಿಗುಟ್ಟುವ ಕಪಿಜರಿದಾಡುವ
ಮಸಿಮಲವಸನಂಗಳ ನಾವಿರವೊ
ಕುರುವಿಟ್ಟರು ತಮ್ಮರಿಯ ಸೇವಕರ
ಅರಿಯದೆ ಅವರಿಗೆ ಜೀಯಗಳ
ಹರುಷದಿ ಜನರೆಲ್ಲ ಕೊಂಡಾಡುತ
ಹರಿದಂಡಿಗೆ ಬಿದ್ದರು ಬೇಗ

ತಳಿಮಳೆ ಮಳೆ ಕತ್ತಲೆ ಬಾದಿ
ಅಳಕುತಳುಕುತಾನಾಗುತಲೆ
ಕಳವಳದಲಿ ಚಿಂತಾಡುತ ಪಾಡುತಲಿ
ತಿಳಿದು ಹೇಳಿ ಅರ್ಥದ ಹದನು
ಎಳೆಯ ಮಾದಳದ ತ್ರಿಮುಳರದವೊಂದಿಪ
ತಿಳುವಳಿಕೆಯಲಿ ತವಕವ ಮಾಡಿ
ಮುಳುಬಾಗಿಲ ಹನುಮಪ್ಪಗೆ ದೂಪವ
ಕಾಣಿಕೆ ಕೊಟ್ಟರಗಿದರಾಗ

ದೃಢ ಭಕ್ತಿಯಲಿ ನಿಂತರೆ ವಿಷ್ಣುವಿನ ಪಾದ
ಪಣತಿ ಪಣೆಯ ನಾಮಗಳು
ಹಣವಿನ ನಾಯದ ಅಮೃತದ ಗುಂಡಿನ
ದಣಿವಿನ ನಾಮದ ಸಂಪತ್ತಿಗೆ
ಪಠಶಯನನ ಕಾಣದೆ ತವರದಲಿ ಮಾಡುತ
ಬಂದೊದಗಿದ ಹದನಕೆ ಬೇಗ
ಮುಂದಕೆ ನಡೆಯುತ ಗೋವಿಂದ ಎನುತ
ಹಣುಪಾಳಿಕೆ ಬಿಟ್ಟರು ಬೇಗ

ಮೀಸಲು ವೈಕುಂಠಕೆ ನಿಶ್ಚಡಿಯು
ಲೇಸೊಪ್ಪುವ ಸೋಪಾನಗಳು
ಪನ್ನೀರಿನಲಿ ಸೂಸಲು ಶ್ರುತಿಯು
ಬೀಸನಿಗೆಯ ಚಮ್ಮಾಳಿಗಳು
ಲೇಸೊಪ್ಪುವ ಕಿರುಡೊಂಕಿನ ಡೊಂಪಿನ
ಲೇಸೊಪ್ಪುವ ಸೋಪಾನಗಳು
ಶೇಷಗಿರಿಯ ತಪ್ಪಲಲಿ ಆ ಸಮಯದಲಿ
ಕೊಂಡಾಡ ಹೊರಟರು ಶೇಷನ ಗಿರಿಯ ಏರುವರು

ಹರಿಮಂತ್ರೀಮದಾರಣಿಯಲ್ಲಿ
ಹರಿಮಂತ್ರೀ ನೀಲಿಯಗುದುರೆ
ಅರಿಯೆಂಬೊ ಮಾರ್ಗವು ದೇವ ಕರಣಿಕಗೆ
ಅರಿಚಿಂತೆ ಅರಿ ಮಾನ್ಯರಿಗೆ
ಹರಿಯೊ ವರಹಾವತಾರನಿಗೆ
ಹರಿಯೇ ಗತಿಯೆಂಬುತಲವರೆ
ಹರಿಕಥೆ ಕೇಳುತ ಮತ್ತೇಳು ಲೋಕವು
ಹರಿಚರಣಕೆ ಬಂದರು ಬೇಗ

ಅಲ್ಲಿಂದ ತಿರುಪತಿಗೆ ಬಂದರು ಜನರು
ನಿಂದರು ಗುಢಾರಗಳೊಯ್ದು
ತಂದರು ಪಟಶಯನನ ಕಾಣಿಕೆಯ
ಕೆಂದಾವರೆ ಮುಗಿಲೊಪ್ಪುತಲಿ
ನಿಂದು ಹರುಷದಿ ದರುಶನವಾಯ್ತು
ಸಂಜೆಯ ಕಾಲದ ಸಮಯದಲಿ

ಹಿರಿವಂತಿಗೆ ಸುರವಂತಿಗೆ ಸಂಪಿಗೆ
ಜಾಜಿ ಪದ ಮಾಲೆಗಳಿಂದ
ತರತರದಲಿ ಕಟ್ಟುವ ಮಾಲೆಗಳ
ಪರಿಮಳಿಸುವ ಚೆಲ್ಲಿಗಳಿಂದ
ಕರೆಚೆಲ್ವಿನಿಂದವೊಪ್ಪುವ ನಾದಮಣಿ
ಅರಸು ಆಗ ಮೆರೆಯುತಲಿರ್ದ

ಪಸರಿಸಿ ಮೆರೆವ ಪಚ್ಚೆತೊಲೆ ಜಂತೆ
ಎಸೆವ ವಜ್ರದ ಕಂಬಗಳು
ಎಸಳೊಡೆದ ನವರತ್ನದ ಬೋದಿಗೆ
ಶಶಿಕಾಂತ[illegible]ರ್ತಯದೊಳಗೆ
ಎಸಳಿನ ತಗಡಿನ ಮೇಲಿನ ಮುಸುಕು
ಎಸುವ ಕಾಲು ಬಾಗಿಲವಾಗ
ಹೊಸ ವೈಕುಂಠಕೆ ನಿಪದೇ ವಾದ್ಯ
ಎಸವುತಾರೆ ದಾಸರು ಗಣಿಗೆ

ಅಪರ ಮಹಿಮನೆ ಆದಿ ಮರ್ದಿಪನೆ
ಸರ್ಪನಗಿರಿಗೆ ಒಲಿದು ಬಂದ್ಯ
ಸರ್ಪನ ಪೆಸರಿನ ಗಿರಿಯ ಮಧ್ಯೆ

ಅಪ್ಪ ಸಲಹೊ ವೆಂಕಟರಾಯ
ಸುತ್ತಲುದೇಶದ ಪರುಷೆಯ ಕೂಡಿಸಿಕೊಂಡು
ತಪ್ಪದೆ ಕಪ್ಪವ ತೆಗೆದುಕೊಳ್ಳುವನೀಗ
ಒಪ್ಪು ತಿರುನೆಲೆ ಕಲ್ಯಾಣಿಯ ಕೃಪೆಯಿಂದ
ಅಪ್ಪ ಸಲಹೊ ವೆಂಕಟರಾಯ

ವಿಸ್ತರದಲಿ ನಿಂದರು ಕನಕಯ್ಯನವರು
ಉತ್ತಮ ತಾಳ ದಂಡು ಸಹಿತ
ಚಿತ್ತರಥನಂದನ ಹರಿಸಹಿತ
ಮುಹೂರ್ತವ ತಂದುಕೊಡಿರೊ ಮನಕೆ
ಚಿತ್ತಜನಯ್ಯನ ಹಾಡುತ ಪಾಡುತ
ಬಚ್ಚಿಟ್ಟರು ಪರಸಾದಗಳ
ಒಪ್ಪುವ ತಿರುಮಲೆ ರಾಯನ ಕೃಪೆಯಿಂದ
ಲಾಲಿಶ್ರೀ ವೆಂಕಟಗಿರಿದಾಸನ
ದಂಡು ನಡೆಯುವ ಸೊಬಗ

# ನೀತಿಪದ

ರಾಮರಾಮೆನ್ನಿರೊ
ಶ್ರೀರಾಮ ನೆನೆದರೆ ಪಾವನ್ನರಾದೆವಲ್ಲ
ತುಂಬಿದ ಪಟ್ಣಕೆ ಒಂಬತ್ತು ಬಾಗಿಲು
ಸಮರಂಗದರಸುಗಳೈದು ಮಂದಿ
ನೆಂಬಿ ನೆಚ್ಚಿ ನೀವ್ ಹಿಗ್ಗದಿರಿ

ಸ್ಥಿರವಿಲ್ಲವೀಕಾಯ ಎಲವಿನ ಹಂಜರ
ಬಿಡದೆ ಹೊದೆಯುವ್ವುದು ಚರ್ಮದ ಹೊದಿಕೆ
ಜಲಮುಹೂರ್ತನಂಗಳು ಕೀಲಿನ ರಾಜ್ಯ
ಹೊಲಸು ಜನ್ಮವನ್ನೆತ್ತಿ ಹಿಗ್ಗದಿರಿ

ತೊಗಲು ಗೊಂಬೆಯ ಮಾಡಿ ಜಗದೊಳಗಿಂಬಿಟ್ಟು
ಜಗವನ್ನರಿಯದೆ ಮುಂದೆ ತಿರುಗದಿರಿ
ಜಗವನ್ನರಿಯದ ಮುನ್ನತಿರುಗುವುದೀ ಕಾಡು
ಹೊಲಸು ಜನ್ಮವನೆತ್ತಿ ಹಿಗ್ಗದಿರಿ

ಮಡದಿ ಮಕ್ಕಳ ಕೈಲಿ ಒಡವೆಗಳುಂಟೆಂದು
ಸಡಗರದಿಂದಲಿ ಹಿಗ್ಗದಿರಿ
ಒಡವೆಯ ನೆಲವುಂಡು ಜೀವವ ಯಮನುಗೊಂಡು
ಮಡದಿಯ ಮತ್ತೊಬ್ಬ ಚೆನ್ನ ಕುಂಡ್ಹೋದ

ನಾಡ ದೇಶವೆಲ್ಲ ಕೂಡಿ ಕಪ್ಪವ ತೆತ್ತು
ಬೇಡಿದ ವರಗಳ ನೀಡುವರಯ್ಯ
ಮೂಡಲಗಿರಿಯ ತಿಮ್ಮಪ್ಪನ ಸ್ಮರಣೆಯ
ಈ ನಾಡ ದೇಶವೆಲ್ಲ ಮರೆಯದಿರಿ

## ಕೃಷ್ಣನ ಪದ

ಒಬ್ಬಾಳ ಹೊಟ್ಟೆಯಲಿ ಹುಟ್ಟಿದ ಕೃಷ್ಣ
ಒಬ್ಬಾಳ ತೋಳಲಿ ಬೆಳೆದಾನು ಕೃಷ್ಣ
ಕೊಬ್ಬಿ ದೊರೆ ಭೂಮಿಯ ಮೂರ್ಛೆಜ್ಜೆ ಮಾಡಿ
ತಬ್ಬಿಬ್ಬಿನಾಟಗಳೆಲ್ಲಿ ಕಲಿತೊ ಜಗದ ಮೋಹನನೆ

ಮಗುವಾಗಿ ಪೂತನಿಯ ಮೊಲೆಯನುಂಡು
ಜಗದಗಲಕೆ ಅವಳನು ಕೆಡಹಿ
ನಗುತ ಬಂದು ಗೋಪಿಯ ಮೊಲೆಯನುಂಡು
ತಬ್ಬಿಬ್ಬಿ ನಾಟಕಗಳ ಎಲ್ಲಿ ಕಲಿತೊ

ಮಡುವಿಗೆ ದುಮುಕಿ ಕಾಳಿಂಗನ ತುಳಿದು
ಮಡದೀರು ವಾಲಿಯ ಬೇಡುತ ಬರಲು
ಎಡೆಯ ಮೇಲೆ ಶ್ರೀಪಾದವನೂರಿ
ಕಟಿ ಕಟಿಶಾಂಭವದೆಲ್ಲಿ ಕಲಿತೊ

ದುರ್ಯೋಧನನು ತನ್ನೊಡ್ಡೋಲಗದಲ್ಲಿ
ಹರಿಯೆಂದರೆ ಕರ್ದರೆ ಬರನು
ಧರೆಯ ಉಂಗುಷ್ಟದಿಂದ ಒತ್ತಿ ಕೌರವನ
ಉರುಳಿಸಿ ಕೆಡುವುದ ಎಲ್ಲಿ ಕಲಿತೊ

ದ್ರೋಣಾಚಾರ್ಯರ ದ್ರವಿಯಲಿ ಸಿಕ್ಕಿ
ಕಾಣದೆ ಸೂರ್ಯಚಕ್ರದಿ ಮರೆಸಿ
ಕಾಣದೆಯಿದ್ದ ಸೈನ್ಯವನ್ನು ಕಾಣಿಸಿ
ಕೊಲ್ಲುವುದ ನೀ ಎಲ್ಲಿ ಕಲಿತೊ

ಕಾಣದೆ ಇರ್ದನ ಕಾಣಿಸಿ ಆಕ್ಷಣ
ಬಾಣದಿ ಅವನ ಗೋಳನೆ ಮುರಿದು
ಶೋಣಿಗೆ ಈಡಾದಂತೆ ಮಾಡುವ
ಜಾಣನೆ ಇವುಗಳ ಎಲ್ಲಿ ಕಲಿತೊ

# ಗೊಲ್ಲರ ಹಟ್ಟಿಯಲ್ಲಿ ಹೇಳುವ ಪದ

ಕಾಶಿ ಪೀತಾಂಬರ ಕೈಯಲಿ ಕೊಳಲು
ಪೂಸಿದ ಶ್ರೀಗಂಧ ಮೈಯೊಳಗಮ್ಮ
ದೇಶದ ಪುಷ್ಪದ ಮಾಲೆಯ ಧರಿಸಿದ
ವಾಸುದೇವನ ಕಾಣಿರೇನಮ್ಮ

ಅಮ್ಮ ನಿಮ್ಮ ಮನೆಗಳಲ್ಲಿ
ರಂಗಸೇನನು ಬಂದ ಕಾಣಿರೇ
ಕಾಲಿಗೆ ಕಿರುಗೆಜ್ಜೆ ನೀಲವರ್ಣದ ನಾಟ್ಯ
ಆಡುತ ಪಾಡುತ ತಾಯಿಗೆ ಲೋಕವ
ಬಾಯಲಿ ತೋರಿದ ಮಾಧವ ಹರಿಬಂದ ಕಾಣಿರೇನೆ

ಕೈಯಲಿ ಕಂಕಣ ಬೆರಳಲಿ ಉಂಗುರ
ಕೊರಳಲಿ ಹಾಕಿದ ಹುಲಿ ಉಗುರಮ್ಮ
ಕರ್ಣಕುಂಡಲ ಕಾಲಂದಿಗೆ ಗೆಜ್ಜೆಯು
ಉರಗಸೇನನು ಬಂದ ಕಾಣಿರೇನೆ

ಮಕ್ಕಳಂದದಲಿ ಮಲಗುತ ಬರುವ
ಸುಖನಿದ್ರೆಯೊತ್ತಿನಲಿ ನಲಿಯುತ ಬರುವ
ಹೆಚ್ಚಿದ ಅರಸರ ಶಿರಗಳ ಹರಿವ
ಪಕ್ಷಿವಾಹನ ಬಂದ ಕಾಣಿರೇನೆ

# ಈಶ್ವರನ ಪದ

ಲಿಂಗಧಾರಿಗಳು ಕೂಡಿ ಸಂಗಜಾತ್ರೆಗೆ ಹೋಗಿ
ಗಂಗೆಯಲ್ಲಿ ಮೀರಿ ಮಜ್ಜನ ಮಾಡಿ
ಲಿಂಗಕರ್ಪಿತವಾದ ಬಿಲ್ವ ಪತ್ರೆಯ ತಂದು
ಹಿಂಗದೆ ಶಿವನ ಪೂಜೆಯ ಮಾಡುವ

ಪುಷ್ಪಕೋಗನ ಬನ್ನಿ ಉತ್ತಮರೆಲ್ಲರು ಕೂಡಿ
ಉತ್ತರಾಣಿಯ ತಂದು ಮತ್ತೆ ಶ್ರೀಗಂಧಗಳ ಲೇಪ ಮಾಡಿ
ಮುಚ್ಚಿ ಮುಸುಕಿಟ್ಟು ಚಿಗುಳಿ ಧೂಪಗಮದೋರಿ
ಒಪ್ಪದಿಂದ ಶಿವನ ಪೂಜೆಯ ಮಾಡುವ

ಓಣಿಯ ಒಳಗಲ ಉತ್ತರಾಣಿಯ ತಂದು
ಮತ್ತೆ ಶ್ರೀಗಂಧಗಳ ಲೇಪನ ಮಾಡಿ
ಉತ್ತಮರೆಲ್ಲ ಕೂಡಿ ಉತ್ತರಾಣಿಯ ತಂದು
ಧೃಡದಿಂದ ಶಿವನ ಪೂಜೆಯ ಮಾಡುವ

ಹಳದ್ಯೆದು ಬಿಳಿದ್ಯೆದು ಮಾದಳದ ಕೆಂಪೈದು
ಹದಿನ್ಯೆದು ನೆಲೆಯ ಕಣಗಲ ಪುಷ್ಪ ಕಳತಂದು
ಪುಷ್ಪದಿಂದ ಶಿವನ ಪೂಜೆಯ ಮಾಡುವ
ಹದಿನ್ಯೆದು ನೆಲೆಯ ಕಣಿಗಲ ಪುಷ್ಪಗಳ

ಬೆಟ್ಟದ ಒಳಗಣ ಜಿಟ್ಟಿಜಾಲವ ತಂದು
ಚಿಟ್ಟಿಗರು ಕಳತಂದು ಪುಷ್ಪದಿಂದ
ಅವರಿಬ್ಬರು ಚಿಟ್ಟಿಗರು ಕಳತಂದ ಪುಷ್ಪದಿಂದ
ಧೃಡದಿಂದ ಶಿವನ ಪೂಜೆಯ ಮಾಡುವ

ಆವರೆ ತಾವರೆ ಬೆಟ್ಟಕೆಂದಾವರೆ
ಯಾವ್ಯಾವ ದೇವರಿಗು ಮರೆಯಾದವು
ನಂದಿವಾಹನನೇರಿ ಗರುಡಪಕ್ಷಿಯ ತಂದು
ಹಿಂಗದೆ ಶಿವನ ಪೂಜೆಯ ಮಾಡುವ

## ದಳ ಮೂರು : ಗುಡಿದುಂಬಿಸುವ ಪದಗಳು

## ಗುಡಿಸುತ್ತ ಹೇಳುವ ಪದ

ಹುಟ್ಟಿತೇಜೋ ಜನಕೆ ದುಷ್ಪಾತ್ಮಜಕನಕೆ
ಮುಟ್ಟಿ ಮೊಲೆ ಹಾಲುಂಡ ಕಾರಣದಿಂದ
ದೃಷ್ಟಿ ತಾಗಿತೆ ನಿಮಗೆ ರಂಗೈಯ್ಯ

ತರುವ ಕಾಯಲಿಗರೆದು ಬಿರುದಿನ ಮಳೆಗರೆದು
ಬೆರಳಲಿ ಗಿರಿಗಳ ನೆಲಸಿದ ಕಾರಣ
ಬೆರಳು ತಾಗಿತೆ ನಿಮಗೆ ರಂಗೈಯ್ಯ

ಬಾಲಾತ್ಮ ಸಭೆಯಿಂದ ಪಾಲಿಪರ ಒಡಗೊಂಡು
ಕಾಲಲಿ ಮಡಗೊಳ ಕಲಕಿದ ಕಾರಣ
ನಿಮ್ಮಪಾದ ಉಳುಕೀತೆ ನಿಮಗೆ ರಂಗೈಯ್ಯ

**ಸರಳು**

ಸೇತುವೆ ಕಟ್ಟಿ ಸೇತುವೆ ಕಟ್ಟಿ
ದಾಟಿಸ್ದ ರಾಮ ಲಕ್ಷ್ಮಣರ
ನೀಟಿಸ್ದ ಮಣಿ ರಾವಣ ಕುಂಭಕರ್ಣರ
ಸಾಸಲಗಿರಿಯ ಪೇಟೆಯ
ಬಾಗಿಲ ಹನುಮಂತ ಭಕ್ತರ ಸಹಿವಂತ
ಮತ್ಸಾವತಾರದಲ್ಲಿ ಹೋಗಿ
ಸುಖಿಯ ತಂದವನು ನೀನು
ಅಹುದು ಕಾಣಯ್ಯ
ಕಳಿಕಳಿಯ ಸಂಹಾರುಣಿ
ಕರ್ಣಕುಂಡಿಲ ಕಿವಿಯಲ್ಲಿ
ಎಲದೊಳಚಿವನಮಾಲೆ ಕೊರಳಿನಲಿ
ನೆಲ ಒಳ್ಳೆದೆಂದು ನೆಲಸಿದ
ಚೆಲುವ ಬೆಳ್ಳೂರ ಮಾಧವ

ಅರ್ಜನಂಪರ್ಜನಂ
ಮುಂಡೆ ಮನೆ ಕೆಂಡಕೇಳೊ ಹೊತ್ತಿಗೆ

ಕಂಡೆ ನೆಂಬವರು ಮೊದಲೆ ಇಲ್ಲ
ಎಂಟು ದಿನಕೆ ಹದಿನಾರು ಸಾವಿರ
ಆನೆ ಕಾಳಗ ಮಡಿದು
ಅಗ್ನಿಪ್ರವೇಶಕೆ ಹೋಗೆನೆಂದ
ನೆಲದಲ್ಲಿ ಕೂರ್ಮವನಾದ
ಜಲದಲ್ಲಿ ಬಂದರೆ ಮತ್ಸ್ಯವನಾದ
ಆಕಾಶಕ್ಕೆ ಹೋದರೆ ಗರುಡೋತ್ತಮನಾದ
ಇಂದ್ರಲೋಕಕೆ ಹೋಗಿ ಇಂದ್ರಬಿಲ್ಲನು ಮುರಿದು
ಈಶ್ವರನ ಭಕ್ತಿ ಸುಟ್ಟು
ಅಂದ್ರ ದ್ರೌಪತಿಯ
ಬಂದಾನ ಕಾಯ್ದಂತಲ್ಲ
ಅಯ್ಯ ನಿಮ್ಮ ಹೃದಯದ
ನಾಮವ ನೆನೆದರೆ ನಮಗೆ
ಮಾಗಿಯ ಮಂಜಿನ ಕವಳ ಹರಿದಂತೆ ಕಾಣಯ್ಯ

ಮುದ್ದು ಚೆನ್ನ ಶ್ರೀ ವೆಂಕಟೇಶ್ವರ
ನಮ್ಮ ಕೇಳಿದನು ಹನುಮಂತ
ಹುಲಿಕೋಡಗನ ಕೈಯಲ್ಲಿ ಏನಾಗುವುದೆಂದು

ನೀವಿಟ್ಟ ನಾಮದ ತೀರ್ಥದ ಬಲುಮೆ
ಯಿಂದ ನೂರಾರ ಗೆಲ್ಲುವೆನಯ್ಯ
ಆದಿ ಪತಿವ್ರತೆಯ ಅಸುರರು ಕದ್ದುಕೊಂಡು
ಹೋದರಂತಲ್ಲಯ್ಯ ತಮ್ಮ ಲಂಕಾಪುರಕೆ
ವಿಚಾರಣೆಯಿಂದ ಇತ್ತ ಹನುಮಂತನ ಕರೆಸಿ

ಉಂಗುರವನಿಟ್ಟು ಅಮ್ಮನಿದ್ದ ಬಳಿಗೆ
ಅರಸಕ್ಕೋದ ಹನುಮಂತ
ಜಂಬುನೇರಳೆ ಮರದಡಿ
ರಂಭೆ ಜಾನಕಿ ಶೋಕಿಸುತಿರಲು
ಅಂಬರದಿಂದ ಇಳಿಸಬಿಟ್ಟ ಉಂಗರವ

ಬಿದ್ದ ಉಂಗುರವನು ಕಂಡು
ರಾಮಲಕ್ಷ್ಮಣರು ಹಿಂದೆ ಬರುವರೊ ಮುಂದೆ ಬರುವರೊ
ಹದ್ದು ಗಿಣಿ ತಂದುವೇನೋ ಮುದ್ರೆಯುಂಗುರವೆಂದು
ದುಃಖಮಾಡಿದಳಂತಯ್ಯ ಸೀತಾ ಅಮ್ಮಯ್ಯನವರು
ಅಷ್ಟಂಗಕ್ಕೆರಗಿದ ಹನುಮಂತ

ಏಳೇಳು ಶಂಕರನ ಮೊದಲು ಯಾರಂಬಾರಮ್ಮ
ಹೆಚ್ಚಿದ ಬಿಲ್ಜಾಣಗಳಲ್ಲಿ ಯಾರಂಬಾರಮ್ಮ
ಅಣ್ಣನೀ ಬಲು ಸಣ್ಣವನಲ್ಲೊ
ಅನ್ನಾಹಾರ ಮೊದಲೇ ಇಲ್ಲ
ಕೊಂಬೆಗೆ ಕೋಟಿ ರಾಕ್ಷಸರ ಕಾವಲು
ಕಣ್ಣುಮರೆಯಾದಂತೆ ಒಂದೆರಡು ಹಣ್ಣ
ಕಿತ್ತುಕೊ ಹೋಗೆಂದಳಂತೆ ಸೀತಾ ಅಮ್ಮಯ್ಯನವರು
ಹಣ್ಣಿಗಪ್ಪಣೆಯ ತಕ್ಕೊಂಡು ಹನುಮಂತ
ಉದಯದ ಮರವು ತತ್ತಿಯ ಮರವೊ
ತತ್ತಿಬ್ಯಾಲಭಿಕ್ಕೆಯ ಮರವೊ
ಬಿಕ್ಕೆ ಬ್ಯಾಲನೇರಿಳೆ ಮರವೊ
ತೆಂಗು ಹಲಸು ಕಿತ್ತಳೆ ಮರವು
ಅಂಬರಕ್ಕೆ ಸೋಕುವ ಅಡಿಕೆ ಮರವೂ
ಎಲ್ಲೆಗಳು ಚಲ್ಲೆಗಳು

ಕತ್ತಿಗಜಸುಲ್ತಾನ್ ಮೊದಲಾಗಿ
ಹಗಲು ಆರಣ್ಯವೇರಿ ಮುಗಿಲು ತೋರಣ ಕಟ್ಟಿ
ಜಗದೊಡೆಯನ ಕೂಡೆ ಒಡೆದು ಮಾತನಾಡಿದರಂತಲಯ್ಯ

ಕೂಡಿದ ಹುಲಿಮುಖದ ಕೊತ್ತ ರಾಕ್ಷಸ
ಇತ್ತ ಕೇಳಲೆ ಬಿನ್ನಪವನು ನೀನು
ನೆತ್ತಲಿತ್ರಿಪುರವ ಗೆದ್ದವನರಿಯೆ

ವಿಷದ ಮೊಲೆಹಾಲುಂಡವನರಿಯೆ
ಹಿರಳಂಕನ ಕರುಳ ಕಿತ್ತು
ಕೊರಳಿಗೆ ರುಂಡ ಮಾಲೆಯನಾಕಿ
ಪಣೆಚೆಂಡಾಡಿದೆಯಂತಲ್ಲಯ್ಯ
ರಾಕ್ಷಸರ ತಲೆಗಳನೆಲ್ಲ

ಹದ್ದಿನ ಕಲ್ಲ ಮುದ್ದು ಹನುಮಂತ
ರಾಮಭಕ್ತ ಸಹಿವಂತ
ರೋಮಕ್ಕೆ ಸಹಸ್ರಲಿಂಗ ಹನುಮಂತ
ದಾರುಣಿ ದಾಟಿ ಹುಲ್ಲು ರಾಕ್ಷಸರನೆಲ್ಲ
ಬಡಿದು ಬೊಬ್ಬಿಟ್ಟು
ಪಾತಾಳ ಲೋಕಕ್ಕೆ ಇಳಿದು
ಮಹಿರಾವಣನ ಕೊಂದು

ಸೀತೆಯನು ಅರಸಲು ವನದೇಶ ಬಂದು
ಭೂತಾಳದೊಳಗೆ ತಾ ನಿಂದ ಹನುಮಂತ

ಸಕಲ ಜನರು ಲಕ್ಷ್ಮೀಪತಿಗೆ
ಶ್ರೀರಾಮ ರಾಮ ಗೋವಿಂದ ಎನ್ನಿ

## ದೊಡ್ಡ ಮಂಗಳಾರತಿ

ಶ್ರೀ ಲಕ್ಷ್ಮೀರಮಣಗೆ
ಜಯಮಂಗಳಂ ನಿತ್ಯ ಶುಭಮಂಗಳಂ

ಆದಿ ನಾರಾಯಣನಿಗೆ ಕ್ಷೀರ ಸಾಗ್ರದಲಿ ನೆಲಸಿರ್ಪಗೆ
ಆಲದೆಲೆಯ ಮೇಲೆ ಲೋಲನಾಗಿರ್ದವಗೆ
ಕಾರುಣ್ಯಮೂರುತಿ ವೆಂಕಟ ರಮಣನಿಗೆ
ಜಯಮಂಗಳಂ ನಿತ್ಯ ಶುಭ ಮಂಗಳಂ

ದಶರಥ ರಾಮನಿಗೆ ಅಸುರ ಸಂಹಾರನಿಗೆ
ಹೆಸರು ಸೀತಾರಾಮನೆನಿಸಿರ್ಪಗೆ
ಕುಶಲದಲಿ ಸೇತುವೆಯ ಕಟ್ಟಿ ನಡೆಸಿದಾತಗೆ
ಪಶುಪತಿ ಕಾಯ್ದ ವೆಂಕಟರಮಣನಿಗೆ

ಗೋಕುಲದೊಳಗೆ ಹುಟ್ಟಿ ಗೋವುಗಳ ಕಾಯ್ದು
ಗೋಪಾಲಕೃಷ್ಣ ನೆಲಸಿರ್ಪಗೆ
ಹದಿನಾಲ್ಕು ಲೋಕವ ಬಾಯೊಳಗೆ ತೋರಿದ
ಸಾಕ್ಷಾತ್ತೊಡೆಯ ಶ್ರೀ ವೆಂಕಟರಮಣನಿಗೆ

ಕೊಟ್ಟರೆ ವರವೌದು ತಪ್ಪಿಲ್ಲವೆಂಬುದನು
ಪ್ರತ್ಯಕ್ಷದಿಂದ ನೆಲಸಿಕೊಂಬುವರು
ನೆಟ್ಟನೆ ತಿರುಪತಿ ಒಳಗೆ ನಿಂತಿರುವಂಥ
ಭಕ್ತವತ್ಸಲ ಶ್ರೀ ವೆಂಕಟರಮಣನಿಗೆ

ಸ್ವಾಮಿ ಶಂಕರನಾರಾಯಣಗೆ
ಅಗಣಿ ಒಗಣಿ ದಾವಣಿ ಸೀಮೆಯ
ಶ್ರೀರಂಗ ಕಂಚಿಕಾಳೇಶ್ವರಿ ಕುಂಬಕೋಣೆಯ
ಕಾಣಿಕೆತಂದಿದೆ ವೆಂಕಟರಮಣನಿಗೆ

ಅಂದು ಪರದಾಕ್ಷಣವ ನಿಂದು ಮಾಡುವ ಜನರು
ಬಂದು ಕೋನಾರಿಯಲಿ ಸ್ನಾನವ ಮಾಡಿ
ತಂದರು ಮನೆಮನೆಗೆ ಧೂಪಕಾಣಿಕೆ ಹೊನ್ನು ಹಣಗಳ
ಸಂದಿವವು ಹರಕೆ ವೆಂಕಟರಮಣನಿಗೆ

ಕೊಂಗು ಕೊಡಗು ಮಲೆಯಾಳ ಪಾಂಡವದೇಶ
ಗೌಳಿಗುಜ್ಜಲ ಕರ್ನಾಟಕ ದೇಶ
ಉಡುಪಿ ನಾರಾಯಣ, ನಿಮ್ಮ ಮುಡುಪು ಬಂದೊ
ಭಕ್ತವತ್ಸಲ ಶ್ರೀ ವೆಂಕಟರಮಣನಿಗೆ

ಶುಕ್ರವಾರ ಪೂಜೆ ಪುಲಿಕಾಪುಲೇಪತಿಯ
ಮತ್ತೆ ಪುಷ್ಕರಣಿಯಲಿ ಸ್ನಾನವನು ಮಾಡಿ
ಅರ್ಥಿಯಿಂದಲಿ ತೀರ್ಥಪ್ರಸಾದವನು ಪಾವನ ಮಾಡಿ
ಎತ್ತುವರೆ ಗರುಡಗಂಬಕೆ ಜ್ಯೋತಿಯ

ವರಹಾವತಾರನಿಗೆ ದುರಿತಸಂಹಾರನಿಗೆ
ಬಂಧುಜನ ಪ್ರಿಯನಿಗೆ ಬಹುಧೀರಗೆ
ನಂದನಂದನಿಗೆ ನಾರಾಯಣಗೆ
ಸುವರ್ಣಮೂರ್ತಿ ಲಕ್ಷ್ಮೀನಾರಾಯಣಗೆ

ಅಂಬುಧಿಧರನಿಗೆ ಅಪರ ಕುಲಭಕ್ತನಿಗೆ
ಶಂಭುಶೋಣಿಯ ಲಿಂಗ ಭಕ್ತರ ಸಲಹುವ ದೇವನೆ
ಎಂಬತ್ನಾಲ್ಕು ಕೋಟಿ ಜೀವರಾಶಿಗಳ
ಗೊಂಬೆಗಳ ಮಾಡಿ ಕುಣಿಸುವ ದೇವಗೆ

ರಕ್ಕಸರಾವಣನ ಮೆಟ್ಟಿ ಕೊರಳ ಪಿಡಿದು
ಒತ್ತಿತಾಕೊಂದು ಗೆಲದಿರ್ಪಗೆ
ನೆಟ್ಟನೆ ತಿರುಪತಿಯ ಒಳಗೆ ನಿಂತಿರುವ
ಭಕ್ತವತ್ಸಲ ಶ್ರೀ ವೆಂಕಟ ರಮಣನಿಗೆ

ಶ್ರೀವತ್ಸಲಾಂಚನಿಗೆ ಕ್ಷೀರಾಬ್ಧಿಶಯನನಿಗೆ
ಗೋಪಿಜನೋದ್ಧಾರ ಗೋಪಾಲಗೆ
ಮಾವ ಕಂಸನ ಕೊಂದು ಮಕರಕುಂಡಲವಿತ್ತು
ಜೀಯಾತ್ಮನಾದ ಚಿನ್ಮಯ ದೇವಗೆ

ಜಯಮಂಗಳಂ ನಿತ್ಯ ಶುಭಮಂಗಳಂ

# ಮುದ್ರಿಕೆ

ಕೆಸರೊಳಗಲ ಮಾಣಿಕ್ಯವೊಂದಿರಬೇಕು
ಹೆಸರಿಗೆ ಪ್ರಹ್ಲಾದ ದಣಿದಣಿತಿರಲಿ
ನಸಳಿಯಂತು ಮುಖ ಹೊಳೆಯುತ ಬರಲಿ
ಕುಶಲದ ಅಸುರ ರಾಯನುದ್ಧರಿಸಿ

ಹಸಿಯಲಿ ಅಂಗ್ರಿದಣಿಯಲಿ ಕಾಂತಿ
ದಿಕು ದಿಕ್ಕಿನಲಿ ಹರಿದೋಗುವ ಸಂತೆ
ಕರಸಿದ ಕಾರಣ ಕಮಲ ನೇತ್ರೆ
ಓದೋಮಠದಲಿ ಪಾಲಿಪನವನ

ಕಾಲದೈತ್ಯರ ಕೋಟಿಮರ್ದಪನ
ಆದಿನಾರಾಯಣಗೊಲಿದಿರ್ಪನ
ಪರಮ ಭಕ್ತರಿಗೆಲ್ಲ ಹರಿಶ್ಚಂದ್ರಪ
ನಾನಾ ಬಗೆಯಲಿ ಕರೆಸಿದನವನ

ಜಾನಕಿ ರಮಣನ ಧ್ಯಾನವ ಬಿಡೆನು
ಬಿಡೊ ಬಿಡೊ ಎನ್ನಗೆ ಯಮನಾದೆ
ಹಿಡಿದ ಕಂಡ್ರೆಯಲಿ ಕಂಡ್ರಿಸುವೆನು ಎನಲು
ಹೋಗೋಗೊ ರಾಕ್ಷಸ ನಿನ ಮಗನಲ್ಲ

ನೀಲವರ್ಣದ ದಾಸರ ಪತಿಯ
ಹನುಮದೇವರ ಸನು ಮೂರುತಿಯ
ಮನದೊಳು ಮತ್ತೊಂದನುಭವವಿಲ್ಲ
ಬಲ್ಲವನಾದರೆ ಹೋಗೆಲೊ ಪುಲ್ಲ ನಿಲ್ಲುನಿಲ್ಲು ನೀ
ಬದುಕುವನಲ್ಲ

ನನ್ನ ಉದರಕೆ ರಂಗ ಬಂದವನೆ
ಹಾಗಂದ ಮಾತಿಗೆ ಹಿರುಳಂಕೆ ಬಿಟ್ಟ
ಕಂದನ ತೆಗೆದು ಗಗನಕೆ ಇಡುತ
ಚಂದ್ರಾಯುಧದಲಿ ಮೈಯ್ಯ ಚುಚ್ಚುತ

ಕೋಟಿ ಸರ್ಪನ ತಂದು ಮೈಯ ಕಚ್ಚಿಸುತ
ಬೆಟ್ಟವ ಕಿತ್ತು ಮ್ಯಾಲೆ ಹಾರುತ
ಮದಬಂದ ಮದ್ದಾನೆಯ ಬಿಟ್ಟುಬಿಟ್ಟು ತರಲು
ಪಟ್ಟದಾನೆಯ ಕುಟ್ಟೆ ಮೆಟ್ಟಿಸಿ ನೋಡಿ

ಹಿರಿದು ಇದೇನೆಂದು ಬೆರಗಾಗಿ ಹೋದ
ಎಲ್ಲವನೊ ನಿಮ್ಮೊಡೆಯನೆಂದರೆ
ಇಲ್ಲೆ ತೋರುವೆನೆಂಬುವ ತರಳ
ಕಲ್ಲುಕಂಬದಲಿ ತೂಗಿಸಿ ತರಲೆ

ನಿಲ್ಲಿಸ್ದ ಕಂಬ ಇಬ್ಭಾಗವಾದೊ
ಮಬ್ಭಾಗಿತು ಚಂದ್ರಾಯನದಿಬ್ಬ

ಕೊಬ್ಬಿದ ರಾಕ್ಷಸನ ಪಡೆದು
ಸಂಥೆಯ ತುಂಬ ನಿಂದಸುರರು
ಲೆಕ್ಕವಿಲ್ಲದೆ ಸತ್ತೊರಗಿತು ಪುರಿಯು
ಉಕುವ ಜಲಧಿಗೆ ಸಿರಿಯಂಪರಿಯೆ
ಮುಕ್ಕಣ್ಣನ ಪಟ್ಟದಂಡಿನ ದಳವು
ಚಕ್ರದ ಮೇಲೆ ಕೊಳ್ಳಾಡಿದನವನ
ಭುಗಿಲು ಭುಗಿಲನೆ ಚಿಮಿ ಚಿಮಿಲೆಂದು
ಲೆಕ್ಕದಿಂದ ಅಸುರನ ಒಡಲ ಬಗೆವುತ
ರಾಕ್ಷಸರ ಸೀಳಿ ಭುಜಬಲ ಹುಟ್ಟಿ

ಕಾಲಚಕ್ರಕೆ ನಿಮ್ಮೊಲೆಯ ಬರೆದು
ಬಾಲನಮೇಲೊಂದಭಯವನಿತ್ತು
ಅರ್ಜುನಪರ್ಜುನರೆಲ್ಲ ಮೆರೆದು
ಧರೆಯಳಗೊಂದಕ್ಷರ ಬರೆದು
ನರರೊಂದರಿಯಲಿ ಪೂಮಳೆಗರೆಯಲಿ

## ತೀರ್ಥವನ್ನೊಪ್ಪಿಸುವ ಮಂಗಳಾರತಿ

ಉಕ್ಕುಕಂಠದಲಿ ನೀನು ಕರೆದರೊ ಎಂಬುವನ
ಸೊಕ್ಕಿಸಿ ಹಿರಣ್ಯಕನ ಮತ್ಸರವ ಗೆಲಿದವಗೆ
ಚಿಕ್ಕವನಾಗಿ ಪೂತನಿಯ ಮೊಲೆಹಾಲ ಉಂಡವಗೆ
ಉಕ್ಕುವೇದಗಳ ತಂದವಗೆ ಜಯಮಂಗಳಂ ನಿತ್ಯಶುಭಮಂಗಳಂ

ಕೊಡುಬಾಲಲೀಲೆಯನು ಬಾಳ ರಚ್ಚೆಯನು
ಜಡಿದು ಉಯ್ಯಾಲೆಯನೇರಿ ತಾಟಕೀಯ ಗೆಲಿದವಗೆ
ಬಾರೊ ಮಡದೀರ ಮನಗೊಂಡು ನಮ್ಮಣ್ಣ ಕೋನಯ್ಯನೆ
ಗರಿಪಿತನ ಸುತನು ಮಗಳಿಗೆ ಮಾವನಾದವನು

ಗಿರಿಯ ತಂದಿಟ್ಟು ಸಂಹಾರಿಣಿಯ ಗೆಲಿದವನೆ
ಗಿರಿಗೆ ನೀ ತಾಳಿ ಒಲಿದವನೆ
ಬಾರೊ ಒಳಗೆರೆಯ ಒಳಗೊಂಡು ನುಗ್ಗೇಹಳ್ಳಿಯಿಂದ
ಮುದ್ದು ಚೆಲ್ವ ನರಸಿಂಹನೆ

ಆಕರ : ಭಾಗವಂತಿಕೆ ಮೇಳ
ಸಂ. : ಡಾ॥ ಜೀ.ಶಂ. ಪರಮೇಶ್ವರಯ್ಯ : ೧೯೭೪.

# ಚೌಡಮ್ಮನ ಭಾಗವಂತಿಕೆ ಪದ

ಭಾಗವಂತಿಕೆಯವರು ವಿಷ್ಣು ಸಂಬಂಧಿ ರಚನೆಗಳನ್ನು ವಿಶೇಷವಾ ಹಾಡುತ್ತಾರಾದರೂ ಕೆಲವೊಮ್ಮೆ ಇತರ ಗ್ರಾಮದೇವತೆಗಳ ಬಗೆಗ ಹಾಡುವುದು ಉಂಟು. ಕೆಲವು ದಶಕಗಳ ಹಿಂದೆ ಉಜ್ಜನಿ ಚೌಡಮ್ಮ ಮೇಲೂ ಹಾಡುತ್ತಿದ್ದುದರ ಒಂದು ಸಾಕ್ಷಿ ಇಲ್ಲಿದೆ.

**ಪ್ರಾರ್ಥನೆ**

ಗಜಮುಖ ಪಾಲಿಸೋ ಗನವಂತಿಯ
ಗಜವೊಂದು ನಿಪಕೊಡೋ ನಿಜಗುಣ ಮತಿಯ ॥ ಪಲ್ಲವಿ
ಹೊನ್ನುಪಾದದ ಗೆಜ್ಜೆ ಕಡಗ ಕಾಲಂದಿಗೆ
ಚೆನ್ನಾದ ವೊಡ್ಡಿವಾಣ ಭರಣ ಕಿರೀಟಕೆ

ಎಳ್ಳು ಸಕ್ಕರೆ ಬೆಲ್ಲ ಒಳ್ಳೆ ತೆಂಗಿನಕಾಯಿ
ಒಳ್ಳೊಳ್ಳೆ ಪಾಲು ಬಾಳೇಯ ಹಣ್ಣು
ಬಳ್ಳಾಬಳ್ಳಾದಿಂದ ದಿಳ್ಳಿದಿಳ್ಳಿ ದೂಪಕೆ
ಒಂದಿರುಳಿಗೆ ತಂದರು ಮೊದಲಿರುಳೆ

**ಚೌಡಮ್ಮ**

ಚೌಡಮ್ಮ ಕುಂದಾಣದ ಕೋಟೆ ಮನೆಯೋಳೆ ॥ ಪಲ್ಲವಿ ॥*
ಎಳೆಸೂಸಿ ಎಲೆಯೋಳೆ ಮಳೆಪೈರ ಮುಡಿಯೋಳೆ
ಪದ್ಮವೊಂದಣ ತೋರೆ ರಾಣಿಯೇ
ಸಾಜ ಹರಿಬಂದ ಮಾತಾಡಮ್ಮ
ಬೃಂದಾವನ ದೇವಿ ರುಘುಬಂದ ಮಾತಾಡಮ್ಮ

ಪಚ್ಚೇಯಂ ಮುಡಿಯೋಳೆ ಪಾಲೀಸಿ ಮೆರಿಯೋಳೆ
ಅಚ್ಚ ಕಂಕಣನ್ಯಾರೆ ಕೋಮಾಲೆ
ಮಚ್ಚರವಾನರಿಯಾದೆ ಮರ್ಕದಲ್ಲಿರುವೆ
ಅಚ್ಯುತ ಪರಿಬಂದ ಮಾತಾಡಮ್ಮ

---

* ಪ್ರತಿ ಎರಡು ಸಾಲಿಗೊಮ್ಮೆ ಮೇಲಿನ ಪಲ್ಲವಿಗಳನ್ನು ಹಾಡಿಕೊಳ್ಳಬೇಕು.

ಕಂಕಣ ಕೈಯ್ಯೋಳೆ ಬಂದೀಯ ಸುಖದಂಡೆ
ಕುಂಕುಮ ಕಸ್ತೂರಿ ಮೈಯ್ಯವಳೆ
ಅಂಕಾದ ಲೆಂಖೆಯ ಪರಿಮಳ ಶಿವಶಂಖು
ಚಿತ್ರಾದ ಹರಿಬಂದ ಮಾತಾಡಮ್ಮ

ಮೀರಬಾರದೋ ವಿಧಿಯ ಮೀರಬಾರದೋ
ಸೇರುಸ್ದ ಹಣೆಯಲ್ಲಿ ಬರೆದಂತ ಬರಹ ॥ ಪಲ್ಲವಿ ॥*
ಮಾರಿ ಮಸಣಿ ದುರ್ಗಿ ಚೌಡಿ ಕೋಣವಾ ಕಾಯಲೀ
ವೀರಭದ್ರ ತಮ್ಮತಾಯ ಶಿರವ ಹರಿಯಲಿ
ವಿನಾಯಕನೊಬ್ಬನಾ ಹೊಟ್ಟೆ ಹೊಡಿಯಲಿಲ್ಲವೇ
ಕಾಲಬೈರವವೆಂಬರೆಲ್ಲ ಕದ್ದೆಹೋದರೋ**

❑

---

* ಪ್ರತಿ ಎರಡು ಸಾಲಿಗೊಮ್ಮೆ ಮೇಲಿನ ಪಲ್ಲವಿಯನ್ನು ಹೇಳಿಕೊಳ್ಳಬೇಕು.
** ಈ ಪದವನ್ನು ಹೆಚ್ಚಾಗಿ ಮಾರಮ್ಮನ ಮೇಲೆ ಹಾಡುತ್ತಾರೆ. ಕೆಲವರು ಚೌಡಮ್ಮನಿಗೂ ಅನ್ವಯಿಸಿ ಹಾಡುತ್ತಾರೆ. ಆದರೆ ಇಲ್ಲಿ 'ಮಾರಿಮಸಣಿ' ಎಂದೂ 'ಕೋಣನಕಾಯಲಿ' ಎಂದೂ ಬರುವುದರಿಂದ ಈ ಪದ ಮಾರಮ್ಮನಿಗೇ ಅನ್ವಯಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

(ಆಕರ : ಉಜ್ಜನಿ ಚೌಡಮ್ಮ : ಹಿ.ಚಿ.ಬೋರಲಿಂಗಯ್ಯ: ೧೯೭೯ : ೧೫೫-೧೫೬)

# ರಂಗದ ಪದಗಳು

ಉತ್ತರ ಕರ್ನಾಟಕದ ದಟ್ಟಿಕುಣಿತ, ಹೆಜ್ಜೆಮೇಳ, ಅಲಾಯಿ ಕುಣಿತ, ಕೋಲಾ ಭಾಗದ ಮಜೇನು ಕುಣಿತ ಮೊದಲಾದ ಕುಣಿತಗಳನ್ನು ಹೋಲುವ ಹಳೇ ಮೈಸೂ ಭಾಗದ ಒಂದು ಕುಣಿತ ವಿಶೇಷವೇ ರಂಗದ ಕುಣಿತ. ಇಲ್ಲಿ ರಂಗ ಎಂದ ಬೇರೇನೂ ಅಲ್ಲ; ಊರ ಗ್ರಾಮದೇವತೆಯ ಗುಡಿಯ ಮುಂದಿನ ಅಂಗಳ. ಊ ಜಾತ್ರೆಯ ಅಂಗವಾಗಿ ಪ್ರತೀದಿನ ಸಂಜೆ ಊರ ಯುವಕರೆಲ್ಲಾ ಸೇರಿ ಹಾಡ ವಾದ್ಯಗಳೊಂದಿಗೆ ಕುಣಿತ ಮಾಡುವುದನ್ನೇ ರಂಗಕುಣಿಯುವುದು ಅಥವಾ ರಂಗ ಕುಣಿತ ಎಂದು ಕರೆಯಲಾಗುತ್ತದೆ. ತುಮಕೂರು, ಮಂಡ್ಯ, ಹಾಸನ, ಮೈಸೂರ ಚಿಕ್ಕಮಗಳೂರು ಮೊದಲಾದೆಡೆ ಈ ಕುಣಿತ ಸಂಪ್ರದಾಯವಿದೆ. ಊರ ಪರಿ ಪ್ರಾರಂಭವಾದುದರ ಸೂಚನೆಯಾಗಿ, ಹಬ್ಬದ ವಾತಾವರಣವನ್ನು, ಜಾಗ್ರತೆಯನ ಎಲ್ಲರಲ್ಲಿ ಉಳಿಸಿಕೊಳ್ಳುವ ಆಶಯ ಈ ಪದ್ಧತಿಯನ್ನು ಪ್ರಾರಂಭಿಸಿದ್ದ ಓನ್ನೆಲೆಯಲ್ಲಿದ್ದಂತಿದೆ. ಅದೇ ತಾನೇ ಸುಗ್ಗಿ ಮುಗಿದದ್ದರ ಖುಷಿ, ಕೃಷಿ ಕಾರ್ಯ ಬಿಡುವಿನಲ್ಲಿ ಮನರಂಜನೆ ಪಡೆಯುವುದು, ಚಿಕ್ಕವರಿಗೆ ಕುಣಿತಾದಿಗಳ ತರಬೇ ನೀಡುವುದು.... ಈ ಎಲ್ಲಾ ಉದ್ದೇಶಗಳೂ ಇಲ್ಲಿ ಇವೆ.

ಊರ ಪರಿಷೆ ಪ್ರಾರಂಭವಾದದ್ದರ ಸೂಚನೆಯಾಗಿ ಕಂಬಹಾಕುವ ಆಚರ ಕೆಲವು ಗ್ರಾಮಗಳಲ್ಲಿದೆ. ಹಾಗೆ ಕಂಬ ಹಾಕಿದ ದಿನದಿಂದ ಪ್ರಾರಂಭಿಸಿ, ಊ ಹಿರಿಯರು, ಕಿರಿಯರು ದೇವಸ್ಥಾನದ ಮುಂದೆ ಅಥವಾ ಕಂಬ ಹಾಕಿದ ಸ್ಥಳದ ರಾತ್ರಿ ಬಹುಹೊತ್ತಿನವರೆಗೆ ರಂಗ ಕುಣಿಯುತ್ತಾರೆ. ಕುಣಿತದಲ್ಲಿ ಪಾಲ್ಗೊಳ್ಳುವವರಿ ಪ್ರತ್ಯೇಕ ವೇಷ-ಭೂಷಣಗಳೇನೂ ಇರುವುದಿಲ್ಲ. ಸಾಮಾನ್ಯವಾಗಿ ದಿನನಿತ್ಯ ಉಡುಗೆಯಲ್ಲಿಯೇ ಇದ್ದು ಕಾಲಿಗೆ ಗೆಜ್ಜೆಕಟ್ಟಿ, ಕೈಲಿ ಒಂದು ವಸ್ತ್ರ ಹಿಡಿದುಕೊಳ್ಳುತ್ತಾ ಕೆಲವೆಡೆ ಬಿಳಿ ಪಂಚೆ, ಶರ್ಟು ತೊಟ್ಟು ತಲೆಗೆ ಬಿಳಿ ಪೇಟ ಸುತ್ತಿ, ನಡುವಿಗೊಂದ ವಸ್ತ್ರ ಬಿಗಿದುಕೊಳ್ಳುತ್ತಾರೆ.

ಕುಣಿತ ಮಾಡುವವರು ಸಮಸಂಖ್ಯೆಯಲ್ಲಿ ಎಷ್ಟು ಜನರಾದರೂ ಇರಬಹುದ ಸಾಮಾನ್ಯವಾಗಿ ಅರೆ ವೃತ್ತಾಕಾರವಾಗಿ ನಿಂತು ವಾದ್ಯದ ಗತ್ತಿಗೆ ಅನುಗುಣವಾ ವಿವಿಧ ಹೆಜ್ಜೆಗಳ ವರಸೆಗಳಲ್ಲಿ ಕುಣಿತ ಮಾಡುತ್ತಾರೆ. ತಮಟೆ, ನಗಾರಿ ನುಡಿಸು ವಾದ್ಯದವರು ಬಹುಮಟ್ಟಿಗೆ ಈ ಕುಣಿತದವರನ್ನು ನಿಯಂತ್ರಿಸುತ್ತಾರೆ. ಅರ್ಥಾತ

ಅವರು ಹಾಕುವ ತಾಳದ ಗತಿಗಳಿಗನುಗುಣವಾಗಿ ವಿವಿಧ ಬಗೆಯ ಕುಣಿತಗಳನ್ನು ಮಾಡುತ್ತಾರೆ. ಈ ಕುಣಿತಗಳಲ್ಲಿ ಮಾರಮ್ಮನ ಗತಿ, ನಂದಿಕಂಬದ ಗತಿ, ಬಾಬಯ್ಯನ ಗತಿ, ಕತ್ತರಗಾಲ ಗತಿ, ತಿರಗಣಿ ಗತಿ, ಕೂತಾಟದ ಗತಿ ಮೊದಲಾದ ವೈವಿಧ್ಯಗಳಿದ್ದು ಅವು ಕುಣಿತದ ಏಕತಾನತೆಯನ್ನು ಮುರಿಯುವ ಮೂಲಕ ನೋಡುಗರಲ್ಲಿ ಆಕರ್ಷಣೆಯನ್ನು ಉಳಿಸಿಕೊಳ್ಳುವುದಲ್ಲದೆ, ಕುಣಿಯುವವರಿಗೆ ಹುರುಪನ್ನು ತುಂಬುವಲ್ಲಿಯೂ ನೆರವಾಗುತ್ತವೆ. ಇದೇ ಸಂದರ್ಭದಲ್ಲಿ ಅವರು ಹಲವಾರು ಪದಗಳನ್ನು ಹಾಡುತ್ತಾರೆ. ಇವನ್ನು ರಂಗದ ಪದ ಎನ್ನುತ್ತಾರೆ. ಒಟ್ಟಾರೆ, ಸುಗ್ಗಿಯ ಸಂಭ್ರದ ದಿನಗಳ ಹಾಡುಕುಣಿತಗಳಾದುದರಿಂದ ಇವನ್ನು ಕೆಲವೆಡೆ ಸುಗ್ಗಿಕುಣಿತ ಎಂದೂ ಕರೆಯುವುದುಂಟು. ಕೆಲವೆಡೆ ಕಗ್ಗದ ಪದ ಎನ್ನುವುದೂ ಇದೆ.

'ರಂಗದ ಪದ'ಗಳನ್ನು ಕುರಿತು ಡಾ॥ ಡಿ. ಲಿಂಗಯ್ಯ ಅವರ ಕೆಲವು ಮಾತುಗಳು ಹಾಗೂ ಅವರು ಸಂಗ್ರಹಿಸಿ ಪ್ರಕಟಿಸಿದ ಕೆಲವು ಪದಗಳನ್ನು ಈ ಮುಂದೆ ನೀಡಿದೆ :

ರಂಗದಲ್ಲಿ ಹಾಡುವ ಪದಗಳಾದುದರಿಂದ ಇವುಗಳಿಗೆ ರಂಗದ ಪದಗಳು ಎಂದು ಹೆಸರಾಗಿದೆ. ಊರ ಮುಂದಿನ ಮಾರಿಗುಡಿಯ ಮುಂದೆ ರಂಗ ಕಟ್ಟುತ್ತಾರೆ. ಮಾರಿ ಹಬ್ಬ ಅಥವಾ ಊರಿನ ಪ್ರಮುಖ ದೇವತೆಯ ಹಬ್ಬಕ್ಕೆ 8–10 ದಿನ ಮೊದಲೇ ರಂಗ ಕಟ್ಟಿ ಊರಿನ ಹಿರಿಯರು, ಕಿರಿಯರು ಸೇರಿ ರಂಗದ ಕುಣಿತ ಕುಣಿಯುವರು. ಇದಕ್ಕೆ ರಂಗದ ಕುಣಿತ ಅಥವಾ ಅಗಲು ಕುಣಿತ ಎಂದು ಕರೆಯುವರು. ರಂಗದ ಪದಗಳು ಸಮಯ ಸ್ಫೂರ್ತಿಯಿಂದ ಸೃಷ್ಟಿಯಾಗುವುದೇ ಹೆಚ್ಚು. ಕುಣಿತದವರಲ್ಲಿ ಎರಡು ಗುಂಪುಗಳಾಗಿ ಒಬ್ಬೊರನ್ನೊಬ್ಬರು ಸೋಲಿಸುವ ಉತ್ಸಾಹದಿಂದ ತಾವು ಕಲಿತಿದ್ದ ಅಥವಾ ಆ ಸಂದರ್ಭದಲ್ಲೇ ಕಟ್ಟಿಕೊಂಡ ಹಾಡುಗಳನ್ನು ಎತ್ತರದ ದನಿಯಲ್ಲಿ ರಾಗವಾಗಿ ಹಾಡುವರು. ಮೂರ್ನಾಲ್ಕು ಹಾಡುಗಳಿಗೊಮ್ಮೆ ಎಲ್ಲರೂ ಜೋರಾಗಿ "ಕಿಲಲಲಽಽ ಲಲೋ ಕೀಽಽ ಕಲಾಽಽ' ಎಂದು ಕಾಕ ಹಾಕುವರು. ರಂಗದ ಪದಗಳಲ್ಲಿ ಮಾರಮ್ಮನ ಮೇಲಿನ ಹಾಡುಗಳೇ ಹೆಚ್ಚಾಗಿದ್ದರೂ ಇಂಥದೇ ಹಾಡುಗಳಿರಬೇಕೆಂಬ ನಿಯಮವಿಲ್ಲ. ಹಬ್ಬಕ್ಕೆ ತಕ್ಕಂತೆ ಆಯಾ ದೇವತೆಗೆ ಸಂಬಂಧಿಸಿದ ಹಾಡುಗಳು ಹೆಚ್ಚಾಗಿ ಕೇಳಿಬರುತ್ತವೆ. ಜೊತೆಗೆ ಪ್ರಣಯ, ರಸಿಕತೆ, ಕೀಟಲೆಗೆ ಸಂಬಂಧಿಸಿದ ಹಾಡುಗಳೂ ಸೃಷ್ಟಿಯಾಗುತ್ತವೆ. ಅಷ್ಟೇನು, ಅಶ್ಲೀಲ ಹಾಡುಗಳೂ ಈ ಸಂದರ್ಭದಲ್ಲಿ ಕೇಳಿಬರುತ್ತವೆ.

ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಹಲವು ಹಾಡುಗಳು ಇಲ್ಲಿವೆ. ಹಾಡಿದವರು : ಪೀಹಳ್ಳಿ ಸಣ್ಣೇಗೌಡ, ಮಂಡ್ಯ ಜಿಲ್ಲೆ. ಸಂಗ್ರಹ : 1961.

ಇಲ್ಲಿನ 2, 12, 13, 20, 23ನೇ ಪದಗಳನ್ನು ಹೇಳಿದವರು ಹೊಸೂರು ಕಾಳೇಗೌಡನ ಮಗ ಬಸವೇಗೌಡ. ಸಂಗ್ರಹ : 1967.

## ರಂಗದ ಪದಗಳು

ರಂಗ ಕಾನೋ ಲಂಗೋಟಿ ನನ ಮಗನೆ
ಬಚ್ಚಲಲ್ಲಿ ಬೆಳೆವ ಬದನೆಕಾಯ । ತಾಳೀಗೆ
ನೇತಾಕಿ ವೊಡೆಯೋ ದಗಡೀಯ

ಆತುಭೂತು ಮರ ಬೇತು ವುಣಿಸೇ ಮರ
ರಾತಾಗಿ ಬೆಳೆವ ಕಿರುಮೆಣಸಿ । ತಾಳೀಗೆ
ನೇತಾಕಿ ವೊಡೆಯೋ ದಗಡೀಯ

ಪದ ಬಂದ್ರೆ ಪದ ಯೇಳೊ ಪದ ಬರ್ದೇರೆ ನನ್ ಕಾಲಿಗೆ ಬೀಳೋ
ಪದ ಉಂಟು ನನ್ನ ಎದೆಯಲ್ಲಿ । ಲಾ ಐದ
ಮಾತಿಗೊಂದು ಪದವಾ ಕೊಡಬಲ್ಲೇ

ಅಂಗಂತ ಯಾಕೇಳಿಯೋ ನಿನ್ ಬಾಯಿಗೆ ಬಂಗತ್ತ
ಚೆನ್ನಪ್ಪನ ಕೆರೆಯ ವಡೆಬತ್ತ । ಲಾ ಐದ
ನಿನ್ನ ನಾಲಿಗೆಯ ನರ ಬತ್ತಾ

ನಾನ್ ಹೇಳಿದ್ದ ಯೇಳ್ ಬ್ಯಾಡಕನೊ ನಿನ್‌ನಾಲಿಗ್ಗೆ ನಚ್ಚಿರ್ ಮುತ್ತ
ಬನ್ನೂರು ಕೆರೆಯ ತ್ವರೆ ಬತ್ತ । ಗಿರು ಬತ್ತ
ನಿನ್ ತೊಡೆಲಿರುವ ಎರಡು ನರ ಬತ್ತ

ಕುರುಬನೊಂದಿಗಾಡಿ ಕುರಿಯ ಕಾಯುದ ಕಲಿತೆ
ಎಲೆಯ ತೋಟದ ತೊರೆಯನ । ಒಂದಿಗಾಡಿ
ಎಲೆಗೊಂದು ಪದವ ನಾ ಕಲಿತೇ

ಆಚೆ ಪಾಲಿನ ವುಡುಗ ಈಚೆ ಪಾಲಿಗೆ ಬಾರೊ
ದೋಸೆ ತಂದಿವ್ನಿ ತಿನ್‌ಬಾರೊ । ಲಾ ಐದ
ಆಟ ತಂದಿವ್ನಿ ಕುಡಿ ಬಾರೊ

---

೧. ನೇತಾಕಿ–ನೇಣು ಹಾಕಿ. ದಗಡಿ–ಧಾಂಡಿಗ. ೨. ಆತುಭೂತು–? ಬೇತು–? ರಾತಾಗಿ–ಸೊಂಪಾಗಿ, ಚೆನ್ನಾಗಿ. ೩. ಲಾ ಐದ–ಎಲ್ಲೈ ಹುಡುಗ. ೪. ಬಂಗು–ಒಂದು ಚರ್ಮ ರೋಗ. ೫. ನಚ್ಚಿರ–ಸಣ್ಣ ಇರುವೆ. ತ್ವರೆ–ತೊರೆ, ಹೊಳೆ. ೬. ತೊರೆಯ–ಬೆಸ್ತ.

ನನ್ನೊಂದಿಗ್ ಆಡ್ವೈದ ನನಗಿಂತ ಮೊನೆಗಾರ
ಉಕ್ಕಡದಿಂದಾಚೆ ಸಣ್ಣಣ್ಣ । ಆಕಿದ ಕಾಕ
ಎದೆಯಲ್ಲಿ ಪಾಪಾಸ ವೊಡೆದಂಗೆ ೮

ನಾನೊಂದು ಯೇಳ್ತೇನಿ ನೀನೊಂದ ಕೇಳೈದ
ಅಳ್ಳೊಲದಲ್ಲೊಂದು ಕುಳ್ಳೈದ । ಆಕಿದ ಕಾಕ
ಕಿವಿಯಲ್ಲಿ ಕವಣೆಯ ವೊಡೆದಂಗೆ ೯

[1]ಕಾಕ ಆಕಿದ ರಂಗ ಕರಿಯ ಗಟ್ಟದ ರಂಗ[1]
ವುಲಿಯ ವುಬ್ಬಿನ ಮೊನೆಗಾರ । ಆಕಿದ ಕಾಕ
ಸೂಳೇರ [2]ಬೀದೀಲಿ[2] ನಿಲಬಾರ ೧೦

ಕಾಕ ಆಕೋನ್ಯಾರೆ ಕರಿಯ ಬ್ಯಾಡರ ವುಡುಗ
ಗುಲಿಗಂಜಿ ಬೆಟ್ಟ ಗುರಿಕಾರ । ಆಕಿದ ಕಾಳ
ಸೂಳೆಯ ಮನೆ ಮುಂದೆ ಸುಳುದಾವು ೧೧

ಬಂದರೆ ಬರುಯೇಳು ಬಾನಂದಾಡಿಯ ಮ್ಯಾಲೆ
ಬನ್ನೂರು ಮ್ಯಾಲೆ ಕುದುರೆಯ । ಬುಟುಗಂಡು
ನನ್ನೂರು ಮ್ಯಾಲೆ ಬರುಯೇಳು ೧೨

ಮಲ್ಲಿಗೆರೆಯವನೆ ಮೆಲ್ಲಗೆ ಕುಣಿಯೋನೆ
ನನ್ನೂರ ಪದವ ಯೋಳೋನೆ । ಗೆಣೆಕಾರ
ಅರ್‌ವಳ್ಳಿ ಮರಕಾಣೊ ಕಿಣ್‌ಣಣ್ಣ ೧೩

ಯಾಕಲಾ ವುಡುಗ ಬಿಂಕದಿಂದಾಡ್ತೀಯೊ
ಈ ಕಾಲ ನಿನಗೆ ಸ್ಥಿರವಲ್ಲ । ಲಾ ಐದ
ವುಳಿ ಮಜ್ಜಿಗೆ ಕುಡಿದು ಲೊಳವಾದೆ ೧೪

ಕೋಳಿ ಕೂಗಿತು ಕುಂಬಳದ ವೂವ
ಬಿದಿರು ಕೂಗಿತು ಬೆಟ್ಟವ । ಚಾಮುಂಡಿ
ಕತ್ತಿ ಕೂಗಿತು ಕದನವ ೧೫

---

೭. ಆಟ-ಆಟು, ಒಂದು ಬೈಗುಳ ಪದ. (ಉದಾ: ನಿನ್ನ ಬಾಯಿಗೆ ನನ್ನ ಆಟುಯ್ಯಾ).
ಬಾಯಿಯ ಕಲ್ಮಶದ್ರವ. ೧೦. ಕಾಕ-ಕೇಕೆ, ನಿಲಬಾರ-ನಿಲ್ಲಲು ಅವಕಾಶ ಕೊಡುವುದಿಲ್ಲ
1. ಕಾಕಾಕು ರಂಗ ಕರಿಯ ಬೆಟ್ಟರಂಗ. 2. ಕೇರಿ

ಕುಂತು ಕುಣಿಗಲ ಗೆದ್ದೆ ನಿಂತು ಮಾಗಡಿ ಗೆದ್ದೆ
ಮಾತ್ನಲ್ಲಿ ಗೆದ್ದೆ ಮದುರೆಯ । ಮೈಸೂರ
ಜೂಜ್ನಲ್ಲಿ ಗೆದ್ದೆ ಬೆಲೆವೆಣ್ಣಾ

ಕುಂಬಳದ ವೂ ಚೆಂದ ಕುಂಬಳದ ಎಲೆ ಚೆಂದ
ಕುಂಬಾರರ ವುಡುಗಿ ಕಡುಚಲುವೆ । ಆದರೆ
ಗುಂಬ ತಟ್ವೂದ ಬುಡಲೊಲ್ಲ

ಕೆಂಪಿನ ಯೆಣ್ಣೆ ಕೇರಿಗೆ ನೀ ಬರಬೇಡ
ಪಂತ ಮಾಡವರೆ ನಿನ ಮೇಲೆ ಮೈಸೂರವರು
ಜಂತಿಗೆ ಮಾಲೆಯ ಬರೆದವರೆ

ಮಾವಯ್ಯ ಮಾವಯ್ಯ ಮಗಳಿಗೆ ಬುದ್ಧಿ ಕಲಿಸೊ
ಎಲೆಯ ತ್ವಾಟದ ಎಡೆವಳ್ಗೆ । ನಿನ ಮಗಳು
ಮುಟ್ಟೇಳಿ ನನ್ನ ಇರಗೊಡಳು

ಬೂದುನೂರೋಳೆ ಬೂಗುಡಿ ಕಿವಿಯೋಳೆ
ಕೋಡೀಲಿ ನೀರ ಮೊಗಿಯೋಳೆ । ಮಾವನ ಮಗಳೆ
ಕೂಡುಕತ್ತೀನಿ ಕುಲವೇಳೆ

ಅಳ್ಳದಲ್ಲಿ ಆಚರಕೆ ತಿಟ್ಟಲ್ಲಿ ಈಚರಕೆ
ಯೆನ್ ಕೊಡುವ ಮಾವ ಸೋದರಕೆ । ಆದಾರೆ
ಮಗ ಬೊಡ್ಡಿ ವೊಯ್ತಾಳೆ ಆದರಕೆ

ಅತ್ತೆ ಮಗಳಂತ ಅತ್ತೆ ಮಗಳಂತ ಅತ್ತಿರ್ಕೆ ನಾವೋದಿ
ಅತ್ತಿತ್ತ ಮೊಕವ ತಗ್ದಳೊ । ಅತ್ತೆ ಮಗಳು
ಒತ್ತಾದೊತ್ತಲ್ಲಿ ನನ್ನ ಅರಸೀಳೊ

[1]ವೋಗೋಳೋಯ್ತೀಯೆ[1] ನನಗೊಂದು [2]ಮಾತೇಳೆ[2]
ಕೊಂಡುಕೊಟ್ಟೇನು ಕರಮೀನ । ಬದನೆಕಾಯ
ಉಂಡುಂಡ ತಾವು [3]ನೆನಕೊಳ್ಳೇ[3]

---

೧೪. ಚೊಳವಾದೆ–ಹೆಚ್ಚು ಹುಳಿಯಾಗಿ ನಾರುವುದು. ೧೬. ಬೆಲೆವೆಣ್ಣಾ–ಬೆಲೆಯಾದ ಹೆಣ್ಣು. ೧೭. ಗುಂಬ–ಕುಂಭ, ಕೊಡ, ಮಡಕೆ. ೧೮. ಜಂತಿ–ಜಂತೆ, ಮಾಳಿಗೆ ಕಟ್ಟಲು ಹಾಸುವ ಗಳ.

ಆಕಳ್ಕೆ ಯೆಚ್ಚಾದೊ ತೂಕಡ್ಕೆ ಗನವಾದೊ
ಯಾವೂರ ಬಾಲೆ ನೆನ್ನಾಳೊ । ಮೈಸೂರ
ಜಾಜಿ ವೂವಿನ ಮನೆಯೋಳು ೨೪

ಆ ಮೆಣ್ಸೆ ಈ ಮೆಣ್ಸೆ ವಾಲಾಡೊ ಕಿರಿಮೆಣ್ಸೆ ತಾಳಲ್ಲಿ
ನನಗೆ ಮೋಸ ಕೊಟ್ಟೋದ್ನಲ್ಲ ಮರಿ ವುಡುಗಿ ೨೫

ಬಡಗಲ ಬನ್ನಳ್ಳಿ ಬಡಗಲ ಬನ್ನಳ್ಳಿ ಮೂಡಲ ಕೀರೆ ತ್ವಾಟ
ಬಾಮಿ ತಡಿಗಂಟ ಬರಿಯೆಣ್ಣೆ । ಗಿರಿಯೆಣ್ಣೆ
ನಿನ್ ಗಂಡ ಕೇಳಿದ್ರ ಕೊಡಿಯೆಣ್ಣ ೨೬

ಕ್ವಾಟೆ ಕ್ವತ್ತಲ ಮ್ಯಾಗೆ ರಾಟೆ ನೂಲೋಳ್ಯಾರೆ
ಊಟಕ್ಕೋಯ್ತೀನಿ ಕೈ ನೀಡೆ । ಎಲೆ ಬಾಲೆ
ಕ್ವಾಟೆ ನಿನ್ನಿಂದ ಗೆಲಬ್ಯಾಕು ೨೭

ಸಿಗ್ಗೆಟ್ಟಿಲ್ದ ಯೆಣ್ಣಿಗೆ ಸೀಗೆ ಮುಳ್ಳಿನ ರವಕೆ
ನಗ್ಗಲ್ದ ಮುಳ್ಳೀನ ತಲ್ದಿಂಬು । ಆ ಯೆಣ್ಗೆ
ಸಿಗ್ಗೆಟ್ಟನೆಗ್ಗೆ ನಿದ್ದೆ ತಿಳಿಯಾವೆ ೨೮

ಬೇಲೂರ ಯೆಣ್ಣೆ ಬೇಗಾನೆ ರಾಗಿ ಮಾಡೆ
ಕೂರುಗೆ ನಿಂತವೆ ಬಯಲಲ್ಲಿ । ಮೈಸೂರ
.ರಾಣಿ ನಿಂತವಳೆ ಬಿಸುಲಲ್ಲಿ ೨೯

ಪಟ್ಟಣಕೆ ವೊಯ್ತೀನಿ ಕಟ್ಟಾಣಿ ಬುತ್ತಿಯ
ಕಟ್ಟಣಾರೂವೆ ಕರುಚಲುವೆ । ಕಟ್ಟೇದ್ ಬುತ್ತಿ
ಲೊಕ್ಯಾನಿತಾಕೆ ಲೊಟಪಿಟಿ ೩೦

---

೨೧. ಅಳ್ಳ–ಹಳ್ಳ, ಈಚರಕೆ–ಈಕಡೆಗೆ. ೨೨. ಅತ್ತಿರ್ಕೆ–ಹತ್ತಿರಕ್ಕೆ.
ಒತ್ತಾದೊತ್ತಲ್ಲಿ–ಒಂದು ಹೊತ್ತಿನಲ್ಲಿ, ಮಧ್ಯರಾತ್ರಿಯಲ್ಲಿ.
೨೩. ಕರಮೀನು–ಒಣಗಿಸಿದ ಸಣ್ಣ ಮೀನು. ೨೪. ಆಕಳ್ಕೆ–ಆಕಳಿಸುವಿಕೆ.
ತೂಗಡ್ಕೆ–ತೂಗಡಿಸುವಿಕೆ. ಗನ–ಹೆಚ್ಚು. ೨೫. ಕೀರೆ ತೋಟ–ಕೀರೆಯ ಸೊಪ್ಪಿನ
ತೋಟ.

[1] ವೋಗೋನೊಯ್ತದ್ಕೆ. [2] ಮಾತೇಳೊ. [3] ನೆನಕೊಳ್ಳೋ.

ನಾಗಮಂಗಲಕೋಗಿ ನಾನೊಂದು ಯೆಣ್ತಂದಿ
ನಾಕು ಮಾರುದ್ದ ಮೊಲೆಯೋಳ । ನಾ ತಂದಿ
ನಾಚಿಕೆಯಾಯ್ತಲ್ಲೋ ಸಬೆಯೊಳಗ

ಸೊಪ್ಪಿಗಂತ ನಾ ಬತ್ತೀನಿ ಸೌದೆಗಂತ ನೀ ಬಮ್ಮಿ
ಇಬ್ಬರು ಕೂಡಿ ಮಾತನಾಡುಮ

ಇಬ್ಬರು ಕೂಡಿ ಮಾತನಾಡುವ ವೊತ್ತಲ್ಲಿ
ನಮ್ಮತ್ತೆ ಕಂಡ್ರೆ ಸುಮ್ಗೆ ಬುಟ್ಟಳಾ

ಅಡಗಿನ ಏರಿಮ್ಯಾಲೆ ಬೆಡಗಿನ ಸಿಂಬಿಲೂಡಿ
ನಿನ್ನಂತವನೊಬ್ಬ ಪುರುಷನೊಂದಿಗೇ । ನಾನಾಡಿ
ನೆನ್ನಿಂದೆಲೂ ನೀರ ತರನಿಲ್ಲ

ಪಂತಗಾರನೆಡ್ತಿ ಗಂತದಿಂದ ಗೆದ್ಕೋನಿ
ಗಂಡನುಳ್ಳೋಳ ತೊಡೆಮ್ಯಾಲೆ । ಕೂತ್ಕಂಡು
ಚೆಂಡಾಡಿ ಬಳೆಯ ಒಡ್ದಾನು

ಆವುರ್ಕೆ ಮ್ಯಾಲೆ ಸಾವುರ್ಕೆ ಕವಿದಾವೊ
ಸಾವಿರದೊಂದ್ ಕೋಟಿ ಗೌಡ್‌ಗಳ । ಮನೆಯ ಯೆಣ್ಣು
ಸಿಕ್ಕೀತೊ ಸಿವನ ದಯದಿಂದ

'ವೊನ್ನೆ ಮೇಟಿಕಂಬ ಅನ್ನೆರಡೆತ್ತಿನ ಬಾರ'
ಬಾಸಿಂಗದ ಕ್ವಳಗ ಬಲಗೈಲಿ । ಯಿಡ್ಕಂಡು
ರಾಸ್ಯಕ್ಕೆ ಕೈಯ 'ಮುಗಿದಾನ'

ಮುದ್ದೇಯ ಯಿಟ್ಟಿಗೆ ಮುದುಗುರಿ ಬಾಡೀಗೆ
ಸಿದ್ದಾಪುರದೆಣ್ಣಿನ ಒಲವೀಗೆ । ಲಿಂಗಯ್ಯ
ಕಿದ್ದಂಡೆ ಕಾದು ನಿಂತವನೆ

---

೨೭. ಕ್ವತ್ತಲ-ಕೊತ್ತಳ. ೨೮. ಸಿಗ್ಗೆಟ್ಟಲ್ದ-ನಾಚಿಕೆಯಿಲ್ಲದ. ೨೯. ಕೂರುಗೆ-ಕೂರಿಗೆ, ಉಳುಮೆ ಮಾಡಿದ ಹೊಲದಲ್ಲಿ ಬೀಜ ಬಿತ್ತಲು ಬಳಸುವ ಮರದ ಸಾಧನ. ೩೦. ಕಟ್ಟಾಣಿ-ಕಟ್ಟಮ್ಮಿ. ಕಟ್ಟಣರೂವೆ-ಸುಂದರಿ. ಲೊಟಪಿಟಿ-ನಿಶ್ಶೇಷ, ಏನೂ ಉಳಿಯಲಿಲ್ಲ. ೩೧. ಬಮ್ಮಿ-ಬಾರೆ [ಬಾರೇ+ಅಮ್ಮಿ]

ಒಡಕೆ ಕಟ್ಟೇಲಿ ತಡಕ ಕುಯ್ಯೋನ್ಯಾರೋ
ಕಚ್ಚೆಗೆ ಕಳ್ಳನ್ನು ಅವಿಸೋನೆ । ರಾಮಣ್ಣ
ಕಚ್ಚೆಗೆ ಬೀಳ್ತಲ್ಲೊ ರಣಕಾಟಿ ೩೯

ಆಯತ್ವಾರ ಅಮಾಸ ನಮ್ಮಲ್ಲಿ ಕಮ್ಮಿನ ದ್ವಾಸೆ
ಕನ್ನಣ್ಣೂಗ ನಂಗೂ ಕೈಬಾಸೆ । ಆದರೆ
ಅವಳ್ಗಂಡ ಸುತ್ತರೆ ನನಗ್ವಾಸೆ ೪೦

ಕೋಗಿಲೆ ಕೋಗಿಲೆ ಕೊಂಬಲ್ಲಿ ಮೊಟ್ಟೆ ತಗದೊ
ವೊಂಬಾಳೆ ಒಳ್ಗೆ ಮರಿ ಮಾಡಿ । ಕೋಗಿಲೆ
ಮುಂಗಾರು ವೊತ್ತಾಯ್ತು ದನಿತೋರೊ ೪೧

ಅಡ್ಡಗುಡ್ಡ ಅಡ್ಡಗುಡ್ಡದಲ್ಲಿ ಆಡು ಕಾಯುವನಾರೊ
ದೊಡ್ಡಟ್ಟಿಗೌಡ ದೊಡ್ಡು ಮಗ । ಕಾಯ್ವ ಆಡು
ದುಡ್ಡಿಗೊಂದಾಡು ಬೆಲೆಯಾದೊ ೪೨

ಪಚ್ಚೆ ತಲಕಾಡು ಪದುಮಿ ನಂಜನಗೂಡು
ಮುತ್ತು ಎಂಬೋದು ಮುಡುಕ್ತೆರೆ । ಬೀದೀಲಿ
ತೆಪ್ಪಾಡಿತಾವೆ ಸಿವಮಲ್ಲೂ ೪೩

---

೩೫. ಗಂತರದಿಂದ–ಗತ್ತಿನಿಂದ. ಗೆದ್ಕೋನಿ–ಗೆದ್ದುಕೊಳ್ಳುವೆನು. ೩೬. ಆವುರ್ಕೆ–? ೩೭. ವೊನ್ನೆ–ಹೊನ್ನೆ ಮರದ. ಮೇಟಕಂಬ–ಕಳದ ಮಧ್ಯೆ ನೆಡುವ ಕಂಬ. (ಹುಲ್ಲು ತುಳಿಸಲು ದನಗಳನ್ನು ಈ ಕಂಬಕ್ಕೆ ಕಟ್ಟುವರು). ಬಾರ–(ಎತ್ತುಗಳ) ಸಾಲು ? ಬಾಸಿಂಗದ ಕ್ವಳಗ–ಹೂಮಾಲೆಯಿಂದ ಅಲಂಕರಿಸಿರುವ ಕೊಳಗ. ರಾಸ್ಯ–ರಾಶಿ. ೩೮. ಯಿಟ್ಟೆಗೆ–ಹಿಟ್ಟಿಗೆ. ಮುದುಗುರಿ ಬಾಡು–ಮುದಿಯಾದ ಕುರಿಯ ಮಾಂಸ. ಕಿದ್ದಂಡೆ–ಮನೆಯ ಸೂರಿನ ಕೆಳಗೆ ? ಕಾದು–ಕಾಯ್ದುಕೊಂಡು. ೩೯. ಒಡಕೆ–ಕೆರೆಯಲ್ಲಿ ಎತ್ತರಕ್ಕೆ ಬೆಳೆಯುವ ಜೊಂಡು. (ಗುಡಿಸಲುಗಳ ಮೇಲ್ಭಾಗಕ್ಕೆ ಹೊದಿಸಲು, ಗಾಡಿಗಳಿಗೆ ತಡಿಕೆ ಕಟ್ಟಲು ಇದನ್ನು ಬಳಸುವರು. ಇದನ್ನು ಆನೆ ತಿನ್ನುತ್ತದೆ.) ಕಳ್ಳು–ಕರಳು. ಅವಿಸು–ಬಚ್ಚಿಡು. ರಣಕಾಟ–ರಣಹದ್ದು.

[4] ಅನ್ನೇಡೆತ್ತಿನ ಬಾರಿ ವೊನ್ನೆ ಕಂಬದ ಮೇಟಿ. [5] ಮುಗಿದವನೇ.

೪೦. ಆಯತ್ವಾರ–ಆದಿತ್ಯವಾರ. ಕಮ್ಮು–ಒಂದು ಧಾನ್ಯ. ನನಗ್ವಾಸೆ–ನನಗೆ ಅನುಕೂಲ. ೪೧. ಕೊಂಬಲ್ಲಿ–ಮರದ ಕೊಂಬೆಗಳಲ್ಲಿ. ೪೨. ಆಡು–ಮೇಕೆ. ದುಡ್ಡು–ಹಿಂದಿನ ನಾಲ್ಕು ಕಾಸು. ೪೩. ತೆಪ್ಪಾಡು–ತೇಲಾಡು. ಸಿವಮಲ್ಲು–?

ಆಕರ : ಕರ್ನಾಟಕ ಜನಪದ ಕಾವ್ಯಗಳು :
ಸಂಗ್ರಹಕ, ಸಂಪಾದಕ: ಡಿ. ಲಿಂಗಯ್ಯ; ೧೯೭೬

## ಒಗಟಿನ ಹಾಡುಗಳು*

ತೋಟದಲ್ಲಿ ವುಟ್ಟುವುದು ನೀಟಾಗಿ ಬೆಳೆವುದು
ಊಟಕ್ಕುಂದಾಗಿ ಬರುವುದು । ಲಾ ಪದುಮ
ಬಲ್ಲಂತ ಜಾಣ ಒಡೆದೇಳೊ ?
ಊಟಕ್ಕುಂದಾಗಿ ಬರುವುದು ಲಾ ಪದುಮ
'ಬಾಳೆಎಲೆ' ಕಾಣೊ ಕಡುಜಾಣ.

ಅಂತರದಲ್ಲಾಡೂದು ಅಡಕೆಯಲ್ಲ ತೆಂಗಲ್ಲ
ಕಾಳ ನಾಯಲ್ಲ ಕಪಿಯಲ್ಲ । ಲಾ ಪದುಮ
ತಿಳಿದಂತ ಜಾಣ ಒಡೆದೇಳೊ ?
ಕಾಳ ನಾಯಲ್ಲ ಕಪಿಯಲ್ಲ ಲಾ ಪದುಮ
'ಸೂರ್ಯಚಂದ್ರ'ರು ಕಾಣೋ ಕಡುಜಾಣ.

ನೀರಲ್ಲಿ ವುಟ್ಟೂದು ನೀರಲ್ಲೆ ಬೆಳೆವುದು
ನೀರು ಕಂಡರೆ ಜರಿಯುವುದು । ಲಾ ಪದುಮ
ಬಲ್ಲಂತ ಜಾಣ ಒಡೆದೇಳೊ ?
ನೀರು ಕಂಡರೆ ಜರಿಯುವುದು ಲಾ ಪದುಮ
'ಉಪ್ಪಲ್ಲವೇನೊ' ಕಡು ಜಾಣ.

ಓಣೀಲಿ ಉಡುವುದು ಓಣಿಲ್ಲೆ ಬೆಳೆವುದು
ವೊಗೋವ್ರ ಸೆರಗ ಇಡಿವುದು । ಲಾ ಪದುಮ
ತಿಳಿದಂತ ಜಾಣ ವೊಡೆದೇಳೊ ?
ವೋಗೋವ್ರ ಸೆರಗ ಇಡಿವುದು ಲಾ ಪದುಮ
'ಉತ್ತರಾಣಿ' ಕಾಣೊ ಕಡುಜಾಣ.

ಗಿಡದಲ್ಲೆ ವುಟ್ಟೋದು ಗಿಡದಲ್ಲೆ ಬೆಳೆಯೋದು
ಬಾಯ್ಮುಚ್ಚಿ ಕೈಯೆತ್ತಿ ಜೂಜಾಡುವ । ಪದುಮವ
ಗೊತ್ತಿದ್ದರೇಳೋ ಕಡುಜಾಣ ?
ಬಾಯ್ಮುಚ್ಚಿ ಕೈ ಎತ್ತಿ ಜೂಜಾಡು ಪದುಮವು
'ಮಲ್ಲಿಗೆ' ಕಾಣೋ ಕಡು ಜಾಣ.

---

೨. ಅಂತರ–ದೂರ, ಆಕಾಶ. ಕಾಳನಾಯಿ–ಕಪ್ಪುನಾಯಿ. ೩. ಜರಿ–ಕರಗು.

ಒಬ್ಬಣ್ಣ ಮಲ್ಲಿಗೆ ಒಬ್ಬಣ್ಣ ಸಂಪಿಗೆ
ಒಬ್ಬಣ್ಣ ಸುತ್ತ ಬಣಜಿಗನೊs । ಎದೆs ಮ್ಯಾಲೆ
ಗುಬ್ಬಿ ಮಂಟುಪದ ಕರಡಿಗೆಯೊs.
ಯಾವಣ್ಣ ಮಲ್ಲಿಗೆ ಯಾವಣ್ಣ ಸಂಪಿಗೆ
ಯಾವಣ್ಣ ಸುತ್ತ ಬಣಜಿಗನೊs । ಎದೆs ಮ್ಯಾಲೆ
ಗುಬ್ಬಿ ಮಂಟಪದ ಕರಡಿಗೆಯೊs ? ೬

(ಅಪೂರ್ಣ)

* 'ಇವನ್ನು ರಂಗಕಟ್ಟಿದಾಗಲೂ, ಹಬ್ಬ-ಹರಿದಿನಗಳ ಸಂತೋಷ ಸಂದರ್ಭಗಳಲ್ಲೂ ಹಾಡುತ್ತಾರೆ. ಸಾಮಾನ್ಯವಾಗಿ ಸಮವಯಸ್ಕರ ನಡುವೆ ಇಂಥಾ ಹಾಡುಗಳು ವಿನಿಮಯವಾಗುತ್ತವೆ. ಒಬ್ಬರು ಇನ್ನೊಬ್ಬರ ಜಾಣ್ಮೆ ಪರೀಕ್ಷಿಸುವ ಸಲುವಾಗಿ, ಒಬ್ಬರನ್ನು ಒಗಟಿನಿಂದ ಸೋಲಿಸಿ, ತಾನು ಗೆದ್ದು ಶಹಬಾಸ್‌ಗಿರಿ ಪಡೆಯುವ ಉದ್ದೇಶದಿಂದಲೂ ಈ ಒಗಟು ಹಾಡುಗಳನ್ನು ಬಳಸುತ್ತಾರೆ.' – ಡಿ. ಲಿಂಗಯ್ಯ. ಅದೇ ಪು. ೩೨.

ಹಾಡಿದವರು : ಪೀಹಳ್ಳಿ ಸಣ್ಣೇಗೌಡ; ಸಂಗ್ರಹ ೧೯೬೧. ೬ನೇ ಒಗಟು ಹಾಡಿದವರು : ಹೊಸೂರು ಕಾಳೇಗೌಡನ ಮಗ ಬಸವೇಗೌಡ. ಸಂಗ್ರಹ ೧೯೬೭

ಆಕರ : ಕರ್ನಾಟಕ ಜನಪದ ಕಾವ್ಯಗಳು.
ಸಂ. : ಡಿ. ಲಿಂಗಯ್ಯ

---

೬ ಬಣಜಿಗ–ವ್ಯಾಪಾರಿ.

## ಕಗ್ಗದ ಪದ (ರಂಗದ ಪದ)

ಒತ್ತಿನಂತೆ ಎದ್ದು ಯಾರ್‍ಯಾರ ನೆನೆದೇನೋ
ಎಳ್ಳುಜೀರಿಗೆ ಬೆಳೆಯೋಳ । ಬೆಳೆಯೋ ಭೂಮಿ ತಾಯಿ
ಉದಯದಲಿ ಎದ್ದು ನೆನೆದೆನೋ ॥

ಮುತ್ತುರಾಯ ಚೆಂದ ಮೂಡುಬಾಗಿಲು ಚೆಂದ
ಉಕ್ಕುಕ್ಕಿಬರುವ ಹೊಳೆಚಂದ । ಮುತ್ತುರಾಯ
ನಿನ್ನ ಒಪ್ಪತ್ತಿನ ಪೂಜೆ ಬಲು ಚೆಂದ ॥

ನೋಡಿದರೆ ನೋಡಬೇಕು ಮೂಡಲ ಶಿವಗಂಗೆ
ಕೋಡುಗಲ್ಲು ಹತ್ತಿ ಬಸವನಾ । ನೋಡಿದರೆ
ನಾವು ಮಾಡಿದ ಪಾಪ ಪರಿಹಾರ ॥

ಎಂಟೆಂಟು ದಿವಸಕೂ ಉಂಟೇನೆ ಶನಿವಾರ
ಎಂಟೆಮ್ಮೆ ಕರೆದ ನೊರೆ ಹಾಲು । ಹಾಲ ಪಾಯಸವ ಮಾಡಿ
ಬಂಟ ಹನುಮಯ್ಯನಿಗೆ ಎಡೆ ಆದೋ ॥

ಹೊತ್ತು ಹುಟ್ಟಿತು ಹೂಡಯ್ಯ ರಥವನ್ನು
ಮುತ್ತಾದೊ ನಂಗೆ ಬೆವರುತ್ತಾ । ಬೈರುವಾ
ಹತ್ತಯ್ಯ ಗೊಂಬೆ ಹೊಸ ತೇರ ॥

ಅಕ್ಕಿ ಹದವಾದೋ ಅವಲಕ್ಕಿ ಹದವಾದೋ
ಅಕ್ಕಿ ಅವಲಕ್ಕಿ ಹದವಾದೊ । ನಮ್ಮನೆಯ
ಕಂದನಿಗೆ ಪೈಣ ಒದಗಿದೋ ॥

ಕಂದ ಅಳದಿರೋ ಕಂದಯ್ಯ ಅಳದಿರೋ
ಕಂದನಾ ತಾಯಿ ಅಳದಿರೋ । ತಿಂಗಳಿಗೆ
ಗಂಧ ಇಟ್ಟಂಗೆ ಬರುತೀನಿ ॥

ಹುಳ್ಳಿ ಹದವಾದೋ ಚಿನಕುಳ್ಳಿ ಹದವಾದೋ
ಉಳ್ಳಿ ಚಿನಕುಳ್ಳಿ ಹದವಾದೋ । ನಮ್ಮನೆಯ
ಬಾಲಣ್ಣನಿಗೆ ಪೈಣ ಒದಗಿದೋ ॥

ಬಾಲ ಅಳದಿರೋ ಬಾಲಯ್ಯ ಅಳದಿರೋ
ಬಾಲನ ತಾಯಿ ಅಳದಿರೇ । ತಿಂಗಳಿಗೆ
ನಾಮ ಇಟ್ಟಂಗೆ ಬರುತ್ತೀನಿ ॥

ಕೋಳಿ ಕೂಗಿತ್ತು ಕುಂಬಾಳ ಹೂವಿಗೆ
ಬೆಟ್ಟಕೂಗಿತ್ತು ಬಿದುರಿಗೆ । ಚಾಮುಂಡಿ
ಕತ್ತಿ ಕೂಗಿತ್ತು ಜಗಳಕ್ಕೆ ॥

ಆಡಾಡುತ್ತ ಬಂದ ಆಡಿನ ಕೊಂಬಿನಂತೆ
ಹಾಡೋ ನನ ಮೇಲೆ ಪದನಾವ / ಎಲೆ ಹುಡುಗ
ನಿನೆಗೆ ಆರೆತ್ತೇಳು ಆಟ ಕುಡಿಸೇನು ॥

ಏಳೇಳುತ್ತಾ ಬಂದ ಎತ್ತಿನ ಕೊಂಬಿನಂಗೆ
ಎತ್ತೊ ನನ ಮೇಲೆ ಪದನಾವ । ಎಲೆ ಹುಡುಗ
ನಿನಗೆ ಏಳೆತ್ತೋಳು ಆಟ ಕುಡಿಸೇನು ॥

ಕುಣಿಕುಣಿಯುತ್ತಾ ಬಂದ ಕುಂಬಳ ಹಣ್ಣಿನಂಗೆ
ಕುಣಿಯೋ ನನ್ನ ಮೇಗೆ ಪದನಾವ ।
ಕುಂಬಾರೋಳ ಆಟ ಕುಡಿಸೇನು ॥

ಹೇಳಿದ್ದು ಒಡ್ಡಲ್ಲ ಮುಂದಕ್ಕೂ ಹೇಳಲ್ಲ
ಮತ್ತೊಂದು ಪದವು ನಿನಗ್ಯಾಕೊ / ಎಲೆರಾಮ
ಮಾಯಕಾರ ತಿಮ್ಮಯ್ಯ ಉಣುಬಂದ ॥

ಶನಿವಾರ ಬಂದಿತ್ತು ಸಾರಿಸಿರಿ ಗುಡಿಸೀರಿ
ಕ್ಯಾಸಕ್ಕಿ ಮುತ್ತ ಕೆದರೀರಿ / ನಮ್ಮನೆಯ
ಮಾಯಕಾರ ತಿಮ್ಮಯ್ಯ ಉಣುಬಂದ ॥

ಬೆಟ್ಟದ ಅರಸಮ್ಮ ಹುಟ್ಟುತಲೇ ಬಿನ್ನಾಣಿ
ಬಟ್ಟಾಲ ಹಿಡಿದವಳೆ ಬಲಗೈಲಿ / ಅರಸವ್ವ
ದೃಸ್ಟಿ ಬಿಟ್ಟವಳೆ ದೂರಕ್ಕೆ ॥

ನೀರಿಗೋಗೋ ಹೆಣ್ಣೆ ನಿಲ್ಲೆ ನಾ ಬರುತೀನಿ
ನಿನ್ನಾಣೆ ನಿನ್ನ ಕೊಡದಾಣೆ । ಕತ್ತಿನಾ
ಬಣ್ಣದ ಸರದಾಣೆ ಬರುತೀನಿ ॥

ಚಿನ್ನದ ಚೀಲಕ್ಕೆ ರನ್ನದ ಬಾಯಿದಾರ
ನಿನ್ನೊಂದಿಗೆ ಆಡಿ ಗೆಣಿಕಾರ / ನಾನು
ನೆನ್ನಿಂದ ನೀರ ತರಲಿಲ್ಲ ॥

ಆಚೆಕೇರಿಯೋನೆ ಚೀಟಿ ವಸ್ತ್ರದವನೆ
ಪಾರಿವಾಳದಂಗೆ ಸುಳಿಯೋನೆ / ಸುಳಿಯೋ ನನ್ನ ಗೆಳೆಯ
ದೂರು ಬತ್ತಾದೆ ನಿನ್ನ ಮೇಲೆ ॥

ದೂರು ಬಂದರೂ ಬರಲಿ ವಯ್ಯಾರ ನಿನಗಿರಲಿ
ರಾಣಿ ನಿನ್ನ ಮುಖ ಕಳೆ ಇರಲಿ / ಗೆಣುಕಾತಿ
ನೂರು ಬಿದ್ದಾರು ನನಗಿರಲಿ ॥

ಬಾಳೆಗೆ ಮುಳ್ಳುಂಟ ಬದನೆಗೆ ಚಪ್ಪರುಂಟ
ಕೋಡುಂಟ ನಾರಿ ಕುದರೇಗೆ / ಶ್ರೀರಾಮರ
ಬಿಲ್ಲುಬಾಣಕೆ ಎದುರುಂಟ ॥

**ಒಡಚೋಪದ**

ಓಡೋದು ಮೋಡವಲ್ಲ, ಗುಡುಗು ಮಿಂಚುಂಟು ಮಳೆಯಲ್ಲ
ರಕ್ಕೆ ಉಂಟಣ್ಣ ಪಕ್ಷಿಯಲ್ಲ ಪದನಾವ / ನೀ
ಬಲ್ಲಂತ ಜಾಣ ಬಿಡಿಸೇಳೋ ॥

ಓಡುವುದು ಮೋಡವಲ್ಲ, ಗುಡುಗು ಮಿಂಚುಂಟು ಮಳೆಯಲ್ಲ
ರೆಕ್ಕೆ ಉಂಟಣ್ಣಾ ಪಕ್ಷಿಯಲ್ಲ । ಪದನಾವ
ಏರೋಪ್ಲೇನ್ ಅಲ್ಲವೇನೋ ಸೂಜಾಣ ॥

ಹಾದರಗಿತ್ತಿಗೆ ಹಗಲೊಬ್ಬ ಇರುಳೊಬ್ಬ
ಮಂಚದ ಮೇಲೊಬ್ಬ ಕೆಳಗೊಬ್ಬ । ಅಂತ ಪದನಾವು
ನೀ ಬಲ್ಲಂತ ಜಾನ ಬಿಡಿಸೇಳೋ ॥

ಹಾದರಗಿತ್ತಿಗೆ ಹಗಲೊಬ್ಬ ಇರುಳೊಬ್ಬ
ಮಂಚದ ಮೇಲೆ ಒಬ್ಬ ಕೆಳಗೊಬ್ಬ । ಅಂತ ಪದನಾವ
ಪೇಸೆಂಟ್ ಅಲ್ಲವೇನೋ ಸೂ ಜಾಣ ॥

ಒಂದೇ ಮಾತುಂಟು ಹನ್ನೆರಡು ನರಗಾಗಿ
ಗಂಡಿಲ್ಲದೇ ಅವಳು ಬಸುರಾಗಿ । ಬಸುರಾದಂತ ಪದನಾವು
ನೀ ಬಲ್ಲಂತ ಜಾಣ ಬಿಡಿಸೇಳೊ ॥

ಒಂದೇ ಮಾತುಂಟು ಹನ್ನೆರಡು ನರಗಾಗಿ
ಗಂಡಿಲ್ಲದೇ ಅವಳು ಬಸುರಾಗಿ । ಬಸುರಾದಂತ ಪದನಾವು
ತಾಳೆಹೂ ಅಲ್ಲವೇನೋ ಸೂ ಜಾಣ ॥

ಏಳುನೂರು ಎಂಟುನೂರು ಗಂಟುನೂರು ಗಸಿನೂರು
ಮಂಟಪನೂರು ಮನೆ ನೂರು । ನೂರಂತ ಪದನಾವು
ನೀ ಬಲ್ಲಂತ ಜಾಣ ಬಿಡಿಸೇಳೊ ॥

ಏಳೂನೂರು ಎಂಟುನೂರು ಗಂಟುನೂರು ಗಸಿನೂರು
ಮಂಟಪನೂರು ಮನೆ ನೂರು । ನೂರಂತ ಪದನಾವು
ಬಲೆಯಲ್ಲವೇನೋ ಸೂ ಜಾಣ ॥

ಮನೆ ಮೇಲೆ ಮನೆ ಕಟ್ಟಿ ಮಾಯದ ಗಾಳಿ ಬೀಸಿ
ಮನೆಯಲ್ಲ ಕಾಣೋ, ಮಾಳಿಗೆಯಲ್ಲ । ಪದನಾವು
ನೀ ಬಲ್ಲಂತ ಜಾಣ ಒಡಿದೇಳೋ ॥

ಮನೆ ಮೇಲೆ ಮನೆ ಕಟ್ಟಿ ಮಾಯದ ಗಾಳಿಬೀಸಿ
ಮನೆಯಲ್ಲಿ ಕಾಣೋ ಮಾಳಿಗೆಯಲ್ಲ । ಪದನಾವು
ರಥವಲ್ಲವೇನೋ ಸೂ ಜಾಣ ॥

ತೋಟದಲ್ಲಿ ಹುಟ್ಟೋದು ತೋಟದಲ್ಲಿ ಬೆಳೆಯೋದು
ಸಾಸರಕ್ಕೆ ಮುಂದೆ ಬರೋದು । ಬರುವಂತ ಪದನಾವು
ಹೊಂಬಾಳೆ ಅಲ್ಲವೇನೋ ಸೂಜಾಣ ॥

ಬೇಲಿಲಿ ಹುಟ್ಟೋದು ಬೇಲೀಲಿ ಬೆಳೆಯೋದು
ಸಾಪರಕ್ಕೆ ಮುಂದೆ ಬರೋದು । ಬರುವಂತ ಪದನಾವು
ನೀ ಬಲ್ಲಂಥ ಜಾಣ ಒಡಿದೇಳೋ ॥

ಬೇಲೀಲಿ ಹುಟ್ಟೋದು ಬೇಲೀಲಿ ಬೆಳೆಯೋದು
ಸಾಸರಕ್ಕೆ ಮುಂದೆ ಬರೋದು । ಬರುವಂತ ಪದನಾವು
ಅರಸಕಂಬವಲ್ಲವೇನೋ ಸೂ ಜಾಣ ॥

ಹಾಡಿದ್ದು : ಲಕ್ಕಣಗೌಡರ ಮಗ ರಂಗೇಗೌಡ, ಬೆಟ್ಟದ ಕೋಟೆ, ಬೆಳ್ಳೂರು ಹೋಬಳಿ, ಬಿಳಿಗುಂದ ಅಂಚೆ, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ.
ನನಗಾಗಿ ಕರಡು ಬರಹ ಮಾಡಿಕೊಟ್ಟ ಕಲಾವಿದರು : ಬಿ.ಕೆ. ರಾಮಣ್ಣ, ಭೈರಸಂದ್ರ, ಬಿಳಿಗುಂದ ಅಂಚೆ. ದಿನಾಂಕ : 17–03–2006.

– ಸಂ. : ಟಿ. ಗೋವಿಂದರಾಜು

# ಪಟಾ ಕುಣಿತದ ಹಾಡುಗಳು

ಸುಮಾರು ೨೦ ಅಡಿಯಷ್ಟು ಉದ್ದದ ಬಿದಿರುಗಳುವಿಗೆ ಉದ್ದಕ್ಕೂ ಬಣ್ಣ ಬಣ್ಣದ ಬಟ್ಟೆಗಳನ್ನು ಕ್ರಮವಾಗಿ ಸುತ್ತಿ, ಜೊತೆಗೆ ಬಣ್ಣದ ಕುಚ್ಚುಗಳಿಂದ ಇನ್ನಷ್ಟು ಸೊಗಸಾಗಿ ಕಾಣುವಂತೆ ಅಲಂಕರಿಸಿ, ಮೇಲಿನ ತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಸಣ್ಣ ಛತ್ರಿಯನ್ನು ಸಿಕ್ಕಿಸಿ ಮಾಡಿದ್ದೇ "ಪಟಾ". ಗಟ್ಟಿಯಾದ ಬಟ್ಟೆ ಚೀಲವೊಂದನ್ನು ಹೆಗಲಿಗೆ ಅಡ್ಡವಾಗಿ ನೇತುಹಾಕಿಕೊಂಡು ಅದರಲ್ಲಿ ಈ ಪಟದ ಕೆಳ ತುದಿಯನ್ನು ಇಟ್ಟುಕೊಂಡ ಯುವಕ ಅದರ ವಜನ್ನನ್ನು, ಉಯ್ಯಲನ್ನು ಬಹು ಜಾಗರೂಕತೆಯಿಂದ ನಿಯಂತ್ರಿಸಿಕೊಂಡು ವಾದ್ಯದ ಗತ್ತಿಗೆ ತಕ್ಕಂತೆ ಹಿಂದಕ್ಕೂ ಮುಂದಕ್ಕೂ ಒನೆದಾಡಿಸುತ್ತಾ ಕುಣಿತ ಮಾಡುತ್ತಾನೆ. ಸ್ವಲ್ಪಮಟ್ಟಿಗೆ ಇದೇ ಬಗೆಯಲ್ಲಿರುವ ನಂದಿಧ್ವಜ ಶೈವ ಸಂಪ್ರದಾಯ ಪ್ರತಿನಿಧಿಸಿದರೆ, ಪಟದ ಕುಣಿತ ವೈಷ್ಣವ ಸಂಬಂಧೀ ಉತ್ಸವಗಳಲ್ಲಿ ಅದರಲ್ಲೂ ಮಂಡ್ಯ, ಮೈಸೂರು, ಬೆಂಗಳೂರು ಹಾಗೂ ತುಮಕೂರು ಭಾಗದ ಗ್ರಾಮೀಣರಲ್ಲಿ ಕಂಡುಬರುತ್ತದೆ.

ಪಟಾ ಕುಣಿತದ ಕಲಾವಿದರು ಈಚೆಗೆ ಬಣ್ಣದ ಸಮವಸ್ತ್ರ ಧರಿಸುವ ಅಭ್ಯಾಸ ಬೆಳೆದಿದೆ. ಕಾಲಿಗೆ ಗೆಜ್ಜೆ ಕಟ್ಟಿ, ಒಂದು ಕೈಲಿ ಸಣ್ಣ ವಸ್ತ್ರ ಹಿಡಿದು ಬೀಸುತ್ತಾ ಅಡಿಗಡಿಗೆ ಕೇಕೆ ಹಾಕುತ್ತಾ ಗುಂಪಿನಲ್ಲಿ ಕುಣಿತ ಮಾಡುವ ಸಾಹಸ ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡುತ್ತದೆ. ಹೆಜ್ಜೆಯ ವಿನ್ಯಾಸ-ತಾಳಕ್ಕೆ ತಕ್ಕಂತೆ ನಡೆವ ಕುಣಿತದಲ್ಲಿ ಹೆಜ್ಜೆ ಕುಣಿತ, ಗೆಜ್ಜೆ ಕುಣಿತ, ಸಾಲುಹೆಜ್ಜೆ, ಸುತ್ತು ಹೆಜ್ಜೆ ಮೊದಲಾದ ವಿಧಗಳನ್ನು ಗುರುತಿಸಲಾಗಿದೆ. ಉತ್ಸವಗಳಲ್ಲಿ ಪಟಾ ಕುಣಿತ ಇತರ 'ಕುಣಿತ ಕಲೆ'ಗಳೊಂದಿಗೆ ಮೇಳೈಸುತ್ತದೆ.

ಕುಣಿತ ಮಾಡುವಾಗ ಪದಗಳನ್ನು ಹೇಳುವ ಬಗೆಗೆ ಅದೇಕೋ ಯಾವ ಅಧ್ಯಯನಕಾರರೂ ದಾಖಲಿಸಿಲ್ಲ. ಆದರೆ, ನಾನು ಭೇಟಿ ಮಾಡಿದ ವಕ್ತೃವೊಬ್ಬರು – "ಚುಂಚನಗಿರಿಯಲ್ಲಿ ಪಟಾ ಕುಣಿಯುವಾಗ ಪದ ಹಾಡುತ್ತಾರೆ. ಒಂದು ಹಾಡು ಹಾಡಿ ನಿಲ್ಲಿಸಿದಾಗ (ರಂಗದ ಕುಣಿತದ ಹಾಗೆ) ವಾದ್ಯದ ಗತ್ತಿಗೆ ತಕ್ಕಂತೆ ಅವರು ಕುಣಿತ ಮಾಡುತ್ತಾರೆ" ಎಂದು ಹೇಳಿದ್ದಲ್ಲದೆ ಕೆಲವು ಪದಗಳನ್ನು ಹಾಡಿದ್ದಾರೆ. ಅವನ್ನು ಈ ಮುಂದೆ ನೀಡಿದೆ :

**ಭೈರವೇಶ್ವರ ಪಟಾಕುಣಿತದ ಪದಗಳು**

ಉಗ್ಗಿಯ ಮಾಡಿವಿನಿ ಸಿದ್ಧರಿಗೆ ನೀಡಿವ್ನಿ
ಉಗ್ಗಿಯ ಮೇಲೆ ಎರೆದುಪ್ಪ/ಎರೆದಿವ್ನಿ
ಮುದ್ದುಬೈರುವ ಉಣಬಾರೋ ॥

ವಡೆಯಾಽದೊಂಬಾಳೆ ನಡುಮಲ್ಲಿ ಗದ್ದಿಗೆ ವೂಡಿ
ಕಡಲೆಕ್ಕೈ ಬಣ್ಣ ತೆರೆವುದು । ಪತ್ರೆಗುಳ್ನ
ಪೂಜಾದೋ ನಮ್ಮ ನಡುಮಲ್ಲಿ ॥

ಕಡೆಯ ಕಂಬದ ತಾವ ವಡಮೂಡೋ ಬ್ಯೆರೂವ
ಕಡೆದ ಬೆಣ್ಣೆಯ ಸರಿಪಾಲು । ಕೊಟ್ಟೇನು
ವಡ ಮೂಡು ನಮ್ಮ ನಡುಮಲ್ಲಿ ॥

ಗಂಗೆಗೌರೀರಬ್ಬ ಮುಂದೆ ದೀವಳಿಗಬ್ಬ
ಎಂದಿಗು ಬಂದ್ಯದೆ ಶಿವರಾತ್ರಿ। ಶಿವನಬ್ಬ
ಮಾಲಿಂಗಗೊಸ್ತ್ರ ಧರಿಸೋದು ॥

ಶಿವರಾತ್ರಿಹಬ್ಬ ಸಿರಿಕಾಣೆ ನಮ್ಮಲ್ಲಿ
ಶಿವಶಿವ ಎಂಬೋ ಗಿಳಿಬಂದು । ಕೂತಾವಲ್ಲೆ
ಶಿವನ ಕೆಂಜೆಡೆಗೆ ಮರುಗ್ಯವ ॥

ಹಂಚಿ ಹುಲ್ಲಲ್ಲಿ ವಂಚಾಡೋನಿವನ್ಯಾರೆ
ಕಂಚಿನ್‌ಗುರಾಣಿ ಕೈಯಲಂಬ (ಅಂಬು=ಬಾಣ) । ಹಿಡಕಂಡು
ವಂಚಾಡಿ ಹುಲಿಯ ವಡದವ್ನೆ ॥

ವನ್ನಾಣಿ ಮಾಳವ್ವ ಒಳಗೇನ ಮಾಡಿಯೆ
ನಾಳೆ ಬ್ಯೆರುವನ ಆಯತಾರ । ಒಂದೊತ್ತು
ಹಾಲಿಗೆ ಹೆಪ್ಪ ಕೊಡುಬಾರೆ ॥

ಬಾಳೆ ಎಲೆ ಮೇಲೆ ಭಾಗ್ಯವಂತರ ಮಗ ಬಂದ
ಏಳೆ ಮಾಳ್ಯವ್ವ ದೊರೆ ಬಂದ । ಈರಣ್ಣ
ಹೂಬತ್ತಿಏರ ವಡಗಂಡು ॥
(ಹೂಬತ್ತಿ=ಅರಳೆಯ ಹೂಬತ್ತಿ ಅಥವಾ ಏಭೂತಿಏರು)

ಬುಧವಾರ ನಾರಿ ಭೂಮಿ ತಣ್ಣಗು ಮಾಡೆ
ಭೂ ಮಂಡಲ ನೋಡೆ ಮಡಿ ಹಾಸೆ । ಚುಂಚನಗಿರಿಯ
ರುಷಿಗಳು ಬರುತಾರೆ ಶರಣೆನ್ನೆ ॥

ಆಯುತಾರ ನಾರಿ ನೆಲವ ತಣ್ಣುಗುಮಾಡೆ
ಮಣೆಯನೇ ಹಾಕೆ ಮಡಿ ಹಾಸೆ । ಚುಂಚನಗಿರಿಯ
ಶರಣರು ಬರುತಾರೆ ಶರಣೆನ್ನೆ ॥

ಜಡೆಯೋನು ಬತ್ತಾನೆ ಬಿಡಿರಮ್ಮ ಬೀದಿಯ
ಜಡೆಯೋನು ಜಂಗುಮ ಬೈರುವ । ಬತ್ತಾನೆಂದು
ಬಿಡಿರಮ್ಮ ಬೀದಿ ಚವುಕವ ॥

ಚಿಕ್ಕ ಚಿಕ್ಕ ಜೋಗಿ ಚಿಕ್ಕ ಪಾತರೆ ಜೋಗಿ
ಚಿಕ್ಕಮರದಲ್ಲಿ ಅಕ್ಕಿ ಪಡಿಯ । ಇಟ್ಟವ್ನಿ
ಚಿಟ್ಟು ಮಾಡಬೇಡ ಹಿಡಿ ಜೋಗಿ ॥

ದೊಡ್ಡ ದೊಡ್ಡ ಜೋಗಿ ದೊಡ್ಡ ಪಾತರೆ ಜೋಗಿ
ದೊಡ್ಡ ಮರದಲ್ಲಿ ಅಕ್ಕಿ ಪಡಿಯ । ಕೊಟ್ಟವ್ನಿ
ಗುದ್ದಾಡಬ್ಯಾಡ ಹಿಡಿ ಜೋಗಿ ॥

ನಾಗಮಂಗಲೊಡ್ಡಿ ನಾರೇರ ತುರುಬೊಡ್ಡಿ
ಸೂಳೇರ ಕೇರಿ ಬಯಲೊಡ್ಡಿ । ಮೇದಾವಲ್ಲೆ
ಜಾಣ ಬೈರುವನ ಗಿಣಿ ಹಿಂಡು ॥

ಜಾಣಬೈರುವನ ಜಾರುಗುಪ್ಪೆಯ ಮೇಲೆ
ಜಾರಿಬಿದ್ದವೆ ಬಿಳಿಯಲೆ । ಸೂಳೇರವ್ವ
ಜಾಲಾದೂವ ಎಂದು ಮುಡಿದಾಳೆ ॥

ತಣ್ಣೀರು ಉಯಕಂಡು ತಣಿಬಟ್ಟೆ ಉಟ್ಟುಕಂಡು
ತಣ್ಣಗೆ ಮಲಗ್ಯವ್ನೆ ಗಿರಿಮ್ಯಾಲೆ/ಬೈರೂವ
ಸಿಸೂ ಮಕ್ಕಳ ಕೊಟ್ಟು ಕಳುಹಯ್ಯ ॥

ಬಾಲಕಬೈರುವನ ಬೇಡಿಕೊಳ್ಳೆ ಅಕ್ಕಯ್ಯ
ಬೇಡಿಕೊಳ್ಳೆ ಬೆಳ್ಳಿ ತಿರುಸೂಲ । ಕೊಟ್ಟೇನೆಂದು
ಬೇಡಿಕೊಳ್ಳೆ ಗಂಡ ಮಗದೀರು ॥

ಕಾಯ ವಡಿಸೇನು ಕಾಯ್ಯೆ ನಂ ಭವರನ
ಕಾಯ ತಪ್ಪಿದರೆ ಎಳಗಾಯ । ವಡಿಸೇನು
ಎಳನೀರಿನ ಕೋಡಿ ಹರಿಸೇನು ॥

ವಜ್ಜುರಗಂಬಳಿ ಮೇಲೆ ನಿದ್ದುರೆ ಮಾಡೋ ಹೆಣ್ಣೆ
ಮುದ್ದು ಬೈರುವನ ಮಡುದೇನೆ । ಮಾಳವ್ವ
ನೀನಿದ್ದ ಪಟ್ಟುಣದ ಹೆಸುರೇಳೆ ॥

ಹೆಸರ ಹೇಳಿದರೆ ದೆಸೆಕೋಟೆ ಬೆದೆರ್‍ಯಾವು
ಅಸವಲ್ಲದ ಕೋಟೆ ಅಗುಲೇಯು । ಅಗುಲೆ ಕನ್ನವ ಕೊರೆದು
ದೆಸೆವಂತ ಬೈರುವ ಸೆರೆ ತಂದ ॥

ಕಪ್ಪಿನ ಬಟ್ಟೀಗು ಪಟ್ಟೆ ಸೀರೀಗು
ಮಾಳೆವ್ವ ನೀನಿರುವ ಚೆಲುವಿಕೆಗು । ಗಂಗಾಧರ
ಮಾಳಿಗೆ ಕನ್ನ ಕೊರುದಾನೆ ॥

ಆಲ ಕಾಸಿವ್ನಿ ಹರಿವಾಣ ಬೆಳಗಿವ್ನಿ
ಬಾಳೆ ಹಣ್ಣ ಸುಲಿದಿವ್ನಿ । ಬೈರುವ
ಬಾಯಾರಿ ಬರುವ ಪರುಸೇಗೆ ॥

ತುಪ್ಪ ಕಾಸಿವ್ನಿ ಬಟ್ಟಾಲ ಬೈಳಗಿವ್ನಿ
ಕಿತ್ತಾಳೆ ಹಣ್ಣ ಸುಲಿದಿವ್ನಿ । ಭೈರುವ
ಕಿತ್ತಾಡಿ ಬರುವೋ ಪರುಸೆಗೆ ॥

ನುಗ್ಗೆಯ ಮರದಡಿ ಮೊಗ್ಗು ಮುನ್ನೂರು ಜಡೆ
ನಿದ್ರೆ ಮಾಡ್ಯವರೆ ನಮ್ಮ ಗುರುವು । ಬೈರುವ
ನುಗ್ಗೆಯ ಮರದ ನೆರಳಿಗೆ ॥

ತ್ರಬಸು ಮಾಡ್ಯವರೆ ನಮ್ಮ ಗುರು ಭೈರುವ
ಅಗಚೆಯ ಮರದ ನೆರಳಿಗೆ । ಭೈರುವ
ತ್ರಬಸು ಮಾಡ್ಯವರೆ ನಮ್ಮ ಗುರುವು ॥

(ಈ ಪದಗಳನ್ನು ನನಗಾಗಿ ಹಾಡಿದ ವಕ್ತೃವಿನ ಮಾಹಿತಿ ಅಕಸ್ಮಾತ್ ಕೈತಪ್ಪಿ ಹೋಗಿದೆ.) – ಟಿ. ಗೋ.

(ಚುಂಚನಗಿರಿಯಲ್ಲಿ ಪಟಾ ಕುಣಿಯುವಾಗ ಹಾಡುವ ಹಾಡುಗಳು – ಒಂದು ಹಾಡು ಹಾಡಿ ನಿಲ್ಲಿಸಿದಾಗ ಪಟಾ ಹಿಡಿದವರು ವಾದ್ಯದ ಗತ್ತಿಗೆ ತಕ್ಕಂತೆ ಕುಣಿತ ಮಾಡುತ್ತಾರೆ).

# ಸೋಮನ ಕುಣಿತದ ಪದಗಳು

ಮುಖವಾಡ ಕಲೆಗೆ ಪುರಾತನ ಇತಿಹಾಸವಿದೆ. ಜಗತ್ತಿನ ವಿವಿಧ ಸಂಸ್ಕೃತಿಗಳಲ್ಲಿ ಮುಖವಾಡ ಕಲೆ ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಅಭಿವ್ಯಕ್ತಿ ಪಡೆದಿದೆ. ಆದರೆ, ಅದು ಕೆಲವು ಪ್ರದೇಶಗಳಲ್ಲಿ ಮಾತ್ರ ಈಗಲೂ ತನ್ನ ಪ್ರಾಧಾನ್ಯತೆಯನ್ನು ಉಳಿಸಿಕೊಂಡಿದೆ.

ಹಳೇಮೈಸೂರು ಪ್ರಾಂತ್ಯದ ತುಮಕೂರು, ಹಾಸನ, ಮಂಡ್ಯದಂತಹ ತೀರಾ ಕೆಲವೇ ಜಿಲ್ಲೆಗಳ ನಿರ್ದಿಷ್ಟ ವ್ಯಾಪ್ತಿಯಲ್ಲಿ ಇನ್ನೂ ಉಳಿದಿರುವ ಸೋಮನ ಕುಣಿತ ಮುಖವಾಡ ಕಲೆಯ ಅಪರೂಪದ ಮಾದರಿಗಳಲ್ಲಿ ಒಂದೆನಿಸಿದೆ. ನಮ್ಮ ಇತರ ಎಷ್ಟೋ ಕಲೆಗಳಂತೆ ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿ, ಆಚರಣಾತ್ಮಕ ಸಂದರ್ಭಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿದ್ದ ಈ ಕಲೆ ಈಗ ಬದಲಾದ ಸನ್ನಿವೇಶಕ್ಕನುಗುಣವಾಗಿ ಮನರಂಜನಾತ್ಮಕ ಕಾರ್ಯಕ್ರಮಗಳಲ್ಲಿಯೂ ಪ್ರಧಾನವಾಗಿ ಕಾಣಿಸಿಕೊಳ್ಳತೊಡಗಿದೆ.

ಸೋಮನ ಕುಣಿತವನ್ನು ನೋಡುವಾಗ ನಮಗೆ ಟಿಬೇಟಿನ ಬೌದ್ಧ ಧರ್ಮಾಚರಣೆಯಲ್ಲಿನ ಮುಖವಾಡ ಕುಣಿತ ಕಲೆ ನೆನಪಿಗೆ ಬರುವುದು ಆಶ್ಚರ್ಯವಲ್ಲ. ಟಿಬೆಟ್ ಬಿಟ್ಟರೆ ಬಹುಮಟ್ಟಿಗೆ ಕರ್ನಾಟಕದಲ್ಲಿ ಮಾತ್ರವೇ ಅಂತಹ ಇನ್ನೊಂದು ಕಲೆ ಕಂಡುಬರುವುದು ಕುತೂಹಲದ ಸಂಗತಿ (ಕರ್ನಾಟಕದ ನೆರೆಯ ರಾಜ್ಯಗಳಲ್ಲಿ ಇಂತಹ ಕಲಾ ಪ್ರಕಾರ ಇರುವುದು ನನ್ನ ಗಮನಕ್ಕೆ ಬಂದಂತಿಲ್ಲ). ಈ ದೃಷ್ಟಿಯಿಂದ, ಜಾಗತಿಕ ಮಟ್ಟದಲ್ಲಿ ಮುಖವಾಡ ಕಲೆಯ ಬಗೆಗೆ ಅಧ್ಯಯನ ಮಾಡುವವರು ಕರ್ನಾಟಕದ ಸೋಮಗಳನ್ನು ಅತ್ಯವಶ್ಯಕವಾಗಿ ನೋಡಲೇಬೇಕಾಗುತ್ತದೆ.

ಸೋಮನ ಮುಖವಾಡಗಳನ್ನು ಸಾಮಾನ್ಯವಾಗಿ ಭೂತಾಳೆಯಂತಹ ವಿಶೇಷ ಮರದಿಂದ ವಿಧಿಬದ್ಧವಾಗಿ ತಯಾರಿಸಲಾಗುತ್ತದೆ. ದೊಡ್ಡಗಾತ್ರದ ರುಂಡದಂತಿರುವ ಈ ಮುಖವಾಡಕ್ಕೆ ಬಣ್ಣ ಹಚ್ಚಿ ವಿಶೇಷವಾಗಿ ಅಲಂಕರಿಸಲಾಗಿರುತ್ತದೆ. ಈ ಮುಖಗಳಿಗೆ ಬಳಿಯುವ ಕೆಂಪು, ಹಳದಿ ಅಥವಾ ಕಪ್ಪು ಬಣ್ಣಕ್ಕನುಗುಣವಾಗಿ ಬೇರೆ ಬೇರೆ ಹೆಸರಿನಿಂದ ಅವನ್ನು ಗುರುತಿಸುವುದುಂಟು. ನಿರ್ದಿಷ್ಟವಾದ ವ್ಯಕ್ತಿಗಳು ಅವನ್ನು ಆಚರಣೆ ಸಂದರ್ಭದಲ್ಲಿ ತಮ್ಮ ತಲೆಗೆ ಧರಿಸಿ, ಕುಣಿತ ಮಾಡುವುದು ಸಂಪ್ರದಾಯ.

ಸೋಮಗಳನ್ನು ಗ್ರಾಮ್ಯವಾಗಿ ಚಾಮಗಳು ಎಂದೂ, ಇದಕ್ಕೆ ಇರುವ ದೈವಿಕ ಆವರಣದ ಹಿನ್ನೆಲೆಯಲ್ಲಿ ಸೋಮದೇವರು ಎಂದೂ, ಕೆಲವೆಡೆ ಅವುಗಳ ಬಣ್ಣ, ಸ್ವಭಾವಕ್ಕನುಗುಣವಾಗಿ ಕಂದಣ್ಣ, ಪಾತಣ್ಣ, ಭೌಬೌ ರಾಯ ಎಂದು ಕರೆಯುವುದುಂಟು.

ಸೋಮಗಳನ್ನು ಸಾಮಾನ್ಯವಾಗಿ ಆಯಾ ಊರಿನ ಗ್ರಾಮದೇವತೆಯ ಬಂಟರೆಂದೂ ನಂಬುತ್ತಾರೆ. ಆದರೆ, ಇದಕ್ಕೆ ಹೊರತಾಗಿ ಭಿನ್ನ ಪರಿಕಲ್ಪನೆಯ ಸೋಮಗಳೂ, ಕೆಲವಡೆ ಇರುವುದುಂಟು. ಸೋಮಗಳನ್ನು ಮೂರು ಮುಖ್ಯ ವರ್ಗಗಳಾಗಿ ವಿಭಜಿಸಬಹುದು : ೧. ಗ್ರಾಮದೇವತೆಯ ಬಂಟ ಅಥವಾ ದೂತನೆಂದು ನಂಬಲಾದ ಸೋಮಗಳು. ಇವು ದೀಕ್ಷೆಯಾದವರು ಮಾತ್ರ ಹೊತ್ತು ಕುಣಿಯುವ ಒಕ್ಕಲ (ಒಪ್ಪಿತ ಭಕ್ತರ) ಮನೆಯಲ್ಲಿ ಪೂಜೆ ಪಡೆವ ಸೋಮಗಳು.

೨. ಜಾತ್ರೆ, ಉತ್ಸವಗಳಲ್ಲಿ ವಿನೋದಕ್ಕಾಗಿ ಯಾರುಬೇಕಾದರೂ ಧರಿಸಿಕೊಂಡು ಕುಣಿವ, ಸಾಮಾನ್ಯ ರೀತಿಯ ಮುಖವಾಡಗಳು. ಉದಾ.ಗೆ ದಂಡಿನಶಿವರದಲ್ಲಿನ "ಬುರುಡೆಸೋಮ"ಗಳು.

೩. ಜಾತ್ರೆಯ ನಿರ್ದಿಷ್ಟವಾದ ಸಂದರ್ಭದಲ್ಲಿ ಮಾತ್ರ ಗುಡಿಯಿಂದ ಹೊರಬಂದು, ನಿಗದಿತ ರೀತಿಯಲ್ಲಿ ಮಾತ್ರ ಪ್ರದರ್ಶನ ನಡೆಸುವ ಸೋಮಗಳು. ಉದಾ.ಗೆ ದಂಡಿನಶಿವರದ ಹೊನ್ನಾದೇವಿ ಜಾತ್ರೆಯ "ಅಳುವ ಸೋಮ"ಗಳು. ಕೆಲವೆಡೆ ಸಾಯುವ ಸೋಮ, ಯುದ್ಧ ಮಾಡುವ ಸೋಮಗಳೂ ಇವೆ.

ಈ ಮೇಲೆ ಹೇಳಿದ ಮೊದಲ ವರ್ಗದ ಸೋಮಗಳನ್ನು ವೈಷ್ಣವ ಪಂಥದ ಸೋಮಗಳು ಹಾಗೂ ಶೈವ ಸಂಪ್ರದಾಯವ ಸೋಮಗಳೆಂದು ಒಳ ವಿಭಾಗ ಮಾಡಿಕೊಳ್ಳಬಹುದು. ಹಾಸನ ಹತ್ತಿರದ ಕಬ್ಬಳಿ, ಅರಸೀಕೆರೆ ತಾಲೂಕಿನ ಬೆಳಗುಂಬ ಮೊದಲಾದೆಡೆ ಇಂಥಾ ಶೈವ ಪ್ರಭಾವದ ಸೋಮಗಳಿವೆ. ಕಬ್ಬಳಿಯಲ್ಲಿ ಇದನ್ನು 'ವೀರಭದ್ರ' ಎಂದು ಕರೆಯುತ್ತಾರೆ. ಇವೆಲ್ಲಾ ಆಯಾ ಊರಿನ ಗ್ರಾಮದೇವತೆಯ ಉತ್ಸವ ಹಾಗೂ ಕೆಲ ವಿಶೇಷ ಆಚರಣೆಗಳಲ್ಲಿ ಮಾತ್ರ ಭಾಗವಹಿಸುತ್ತವೆ. ಅಂದರೆ ದೇವರ ಪ್ರತಿನಿಧಿಯಾಗಿ ಭಕ್ತರ ಮನೆಗೆ ಹೋಗಿ ಪೂಜೆ ಪಡೆಯುವುದು, ಮಣೇವು ಹಾಕುವುದು ಭವಿಷ್ಯ ಹೇಳುವುದು ಪ್ರೇತ ಬಿಡಿಸುವುದು ಇತ್ಯಾದಿ ವಿಧಿಗಳನ್ನು ಮಾಡುವ ಸೋಮಗಳೂ ಉಂಟು. ಹೀಗಾಗಿ, ಗ್ರಾಮದ ಹೊರಗೆ, ಆಚರಣಾ ಸಂದರ್ಭದಿಂದ ಪ್ರತ್ಯೇಕಗೊಂಡು, ಸಾರ್ವಜನಿಕ ಸಮಾರಂಭಗಳಲ್ಲಿ ಮನರಂಜನೆಗಾಗಿ ಪ್ರದರ್ಶನ ನೀಡುವ ಸೋಮಗಳು ಕೇವಲ ಒಂದೆರಡು ಹಳ್ಳಿಯ ತಂಡದವು ಮಾತ್ರ (ಕೆಲವರು ಇಂಥಾ ಪ್ರದರ್ಶನಗಳಿಗಾಗಿಯೇ ಪ್ರತ್ಯೇಕ ಮುಖವಾಡಗಳನ್ನು ಮಾಡಿಸಿಕೊಂಡಿದ್ದಾರೆ). ಸೋಮಗಳ ಗುಣ-ಹಿನ್ನೆಲೆಗನುಗುಣವಾಗಿ ಅವುಗಳ ಪ್ರದರ್ಶನ ಕ್ರಮವೂ ಭಿನ್ನವಾಗಿರುತ್ತದೆ.

ಗ್ರಾಮದೇವತೆಯ ಉತ್ಸವ-ಮೆರವಣಿಗೆ ಹೊರಟಾಗ ಜನರ ಗಮನವನ್ನು ಆಕಡೆ ವಿಶೇಷವಾಗಿ ಸೆಳೆಯುವುದಲ್ಲದೆ ಹೆಚ್ಚುಕಾಲ ಜನರನ್ನು ಅಲ್ಲಿ ಹಿಡಿದಿಡುವ ಹಾಗೂ ಒಟ್ಟು ಮೆರವಣಿಗೆ ಕ್ರಿಯೆಗೆ ಒಂದು ಅಲೌಕಿಕ ನೆಲೆಯ ಕಳೆ ತಂದುಕೊಡುವ ಆಶಯದಿಂದ ನಮ್ಮಲ್ಲಿ ನಂದಿಧ್ವಜ, ವೀರಭದ್ರನ ಕುಣಿತ, ಪೂಜಾ ಕುಣಿತ ಮೊದಲಾದ

ಕಲಾ ಸಂಪ್ರದಾಯಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ಸೋಮನ ಕುಣಿತ ಸಹ ಅದೇ ಆಶಯದಿಂದ ರೂಪುಗೊಂಡ ಇನ್ನೊಂದು ಧಾರ್ಮಿಕ ಪ್ರದರ್ಶನ ಕಲೆಯಾಗಿದೆ.

ಪ್ರದರ್ಶನದಲ್ಲಿ ಅನುಕೂಲಕ್ಕೆ ತಕ್ಕಂತೆ ಸಾಮಾನ್ಯವಾಗಿ ಎರಡು ಅಥವಾ ನಾಲ್ಕು ಸೋಮಗಳ ಕುಣಿತವಿರುತ್ತದೆ. ಬೀದಿಯುದ್ಧಕ್ಕೆ ಅಲ್ಲಲ್ಲಿ ನಿಂತು ಸೋಮಗಳ ಕುಣಿತಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ವಾದ್ಯಮೇಳದ ಗತ್ತಿಗನುಗುಣವಾಗಿ ಎಡ-ಬಲಕ್ಕೆ ಲಯಬದ್ಧವಾಗಿ ತೊನೆಯುತ್ತಾ ಸೋಮನ ಮುಖವಾಡಧಾರಿಗಳು ಕುಣಿತ ಮಾಡುತ್ತಾರೆ. ಅವರ ಎದುರಿಗೆ ಚಾಟಿ ಹಿಡಿದು ನಿಂತ ಸೋಮನ ಪೂಜಾರಿ ಅಥವಾ ಸೋಮಗಳನ್ನು ಕುಣಿಸುವಾತ ಅವನ್ನು ನಿಯಂತ್ರಿಸುತ್ತಾನೆ. ಸೋಮಗಳ ಕುಣಿತಕ್ಕೆ ಪ್ರೇರಕವಾಗಿ ಆತ ಪದಗಳನ್ನು ಹಾಡುತ್ತಾನೆ (ಅವನ್ನು ಕಗ್ಗದ ಪದ ಎಂದೂ ಕರೆಯಲಾಗುತ್ತದೆ). ಈ ಪದಗಳಿಗೂ, ಸೋಮಗಳ ಕುಣಿತಕ್ಕೂ ಸಂಬಂಧವಿದೆ ಎಂದು ಮೇಲ್ನೋಟಕ್ಕೆ ಭಾಸವಾದರೂ, ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅಂಥಾ ಅನಿವಾರ್ಯ ಸಂಬಂಧವಿದೆ ಅನ್ನಿಸುವುದಿಲ್ಲ. ಏಕೆಂದರೆ, ಪೂಜಾರಿಯು ಒಂದು ತ್ರಿಪದಿಯನ್ನು ಹೇಳಿ ನಿಲ್ಲಿಸಿದಾಗ ವಾದ್ಯಗಳ ಗತ್ತಿಗನುಗುಣವಾಗಿ ಸೋಮಗಳು ಕುಣಿತ ಮಾಡುತ್ತವೆ. ಅರ್ಥಾತ್, ಆತ ಹಾಡುವಾಗ ಈ ಸೋಮಧಾರಿಗಳು ಹಾಗೂ ವಾದ್ಯದವರು ತಟಸ್ಥವಾಗಿ ನಿಂತಿರುತ್ತಾರೆ. ಅಂದರೆ, ಭಾರವಾದ ಮುಖವಾಡ ಧರಿಸಿ ಕುಣಿತ ಮಾಡುವವರಿಗೆ ಮತ್ತೆ ಮತ್ತೆ ಕಿರುವಿಶ್ರಾಂತಿಯ ಅಗತ್ಯವಿರುತ್ತದೆ. ಅವರು ಹಾಗೆ ತುಸು ಸುಧಾರಿಸಿಕೊಳ್ಳಲು ನೆರವಾಗುವುದಕ್ಕಾಗಿಯೇ ನಡುನಡುವೆ ಒಂದೊಂದು ಬಿಡಿ ಪದ ಹಾಡಲಾಗುತ್ತದೆ. ಪ್ರೇಕ್ಷಕರೂ ಆ ಪದಗಳನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲೂ ಸಾಧ್ಯವಾಗುತ್ತದೆ. ಆದರೆ, ಒಟ್ಟಾರೆಯಾಗಿ ನೋಡುಗರಿಗೆ, ಅವೆಲ್ಲಾ ಒಂದಕ್ಕೊಂದು ಸಂಬಂಧ ಪಡೆದಂತೆ, ಪೂಜಾರಿಯ ಹಾಡಿಗೆ ಪ್ರತಿಯಾಗಿ ಸೋಮಗಳು ಅಭಿನಯ ಮಾಡಿದಂತೆ ಭಾಸವಾಗುತ್ತದೆ.

ಇಲ್ಲಿ ಸೋಮನ ಪದಗಳು ಎಂದಾಕ್ಷಣ ಎಲ್ಲವೂ ಸೋಮನಿಗೇ ಮೀಸಲಾದ ಪದಗಳೆಂದೇನೂ ಭಾವಿಸಬೇಕಿಲ್ಲ; ಸೋಮನ ಕುಣಿತದ ಸಂದರ್ಭದಲ್ಲಿ ಹಾಡುವ ಪದಗಳೆಂದಷ್ಟೇ ವ್ಯಾಪಕಾರ್ಥದಲ್ಲಿ ತಿಳಿಯಬೇಕು. ಏಕೆಂದರೆ, ಇವು ಸೋಮನನ್ನು ಕುರಿತಾಗಿ ಅಷ್ಟೇ ಅಲ್ಲದೆ, ಗ್ರಾಮದೇವತೆ ಕುರಿತ ಪದಗಳೂ ಆಗಿರುತ್ತವೆ. ಹಾಗೆಯೇ, ಮೆರವಣಿಗೆ ಸಂದರ್ಭದಲ್ಲಿ ಊರ ಬೀದಿಯಲ್ಲಿ ಎದಿರಾಗುವ ಇತರ ದೈವಗಳ ಗುಡಿ ಮುಂದೆ ಕುಣಿವಾಗ ಆ ದೈವಗಳ ಮೇಲೆಯೂ ಪದಗಳನ್ನು ಹಾಡಲಾಗುತ್ತದೆ. ಒಟ್ಟಾರೆ, ಇವೆಲ್ಲಾ ಆಯಾ ದೇವರ ಸ್ತುತಿ ಪರವಾದ ಪದಗಳು. ಸೋಮ ಆ ಎಲ್ಲಕ್ಕೂ ಒಂದೇ ಬಗೆಯಾಗಿ ಕುಣಿತ ಮಾಡುತ್ತವೆ. ಬಹುಮಟ್ಟಿಗೆ ಈ ಪದಗಳು ಆಯಾ ದೇವರಿಗೇ ನಿರ್ದಿಷ್ಟವಾದುವೂ ಆಗಿರುವುದಿಲ್ಲ. ದೇವರ ಹೆಸರನ್ನು ಬದಲಿಸಿಕೊಂಡು ಯಾವುದೇ ದೇವರ ಹೆಸರು ಸೇರಿಸಿ, ಎಷ್ಟು ಬೇಕಾದರೂ ಬೆಳೆಸಬಹುದಾಗಿದೆ. ರಂಗದ ಪದ, ಪಟಾ ಕುಣಿತದ ಪದ ಹಾಗೂ ಸೋಮನ ಪದಗಳು ಪರಸರ ಹೋಲಿಕೆ ಪಡೆದಿವೆ.

# ಸೋಮನ ಕುಣಿತದ ಪದಗಳು

**ಕೆಂಪಿನ ಸ್ವಾಮ ಕುಣುದಾವೊ .....**

ಅಮ್ಮನ ಗುಡಿಮುಂದೆ ಗಮ್ಮನ್ನದೇನಮ್ಮ
ಗಂಡು ಬೂತಾಳೆ ಗಜಲಿಂಬೆ । ಮರದಡಿಯ
ಸ್ವಾಮಿ ಬೈರುವನ ಗುಡಿಪಟ್ಟ

ಕುಂತು ಕುಣಿಗಲು ಗೆದ್ದೆ ನಿಂತು ಮಾಗಡಿ ಗೆದ್ದೆ
ಮಾತಿನಲಿ ಗೆದ್ದೆ ಮದುರೇಯ । ಮಧುರೆ ವನ್ನಮ್ಮನ
ಜಾತುರೆಲಿ ಗೆದ್ದೆ ಧವನಾವ

ಯಾಕೋ ಈರಣ್ಣ ನಿನ್ನ ಮೊಗ ಸಪ್ಪಗೆ
ನೋಡೋಕೆ ಬಂದೋರು ನಗುತಾರೆ । ಈರಣ್ಣ
ಕಾಲಿಗೆ ಬಿದ್ದೇನು ಕಲಿಯಾಗೊ

ಕುಣಿಯಾಕು ಬರದಿದ್ರು ಕಣಕಾಲು ಗೆಜ್ಜ್ಯಾಕೋ
ತರವಲ್ಲ ತಗಿಯೊ ಈರಣ್ಣ । ಈ ಊರ
ತಳವಾರರುಡುಗರು ನಗುತಾರೇ

ಅಂಕದ ಆಲುಮರ ಬಿಂಕದ ಬೇವಿನಮರ
ವನ್ನಮ್ಮಾಕಿದ ಕಿರುಬೇವು । ಕಿರುಬೇವಿನ ಮರದಡೆ
ಕೆಂಪಿನ ಸ್ವಾಮ ಕುಣುದಾವೊ

ವನ್ನಮ್ಮನ ಹಬ್ಬಕೆ ಯಾರಾರು ಬರಬೇಕು
ರಾಯದುರುಗದ ತಿಗುಳಾರು । ತಿಗುಳಾರ ತೋಟದ
ಕಾಯಿ ವಂಬಾಳೆ ಬರಬೇಕು

ಕೆರೆಯ ಕೋಡೀಲಿ ಕೆಂದೂಳು ಏನಮ್ಮ
ಮಡಿವಾಳರೆಣ್ಣೆ ಮಡಿ ಎತ್ತೆ । ವನ್ನಮ್ಮನ
ಮರಿ ಬಸವ ನೀರ ಕುಡಿ ಬಂದೊ

(ಈ ಪದಗಳನ್ನು ಹಾಡಿದವರು ಡಿ.ಆರ್. ಕರಿಯಪ್ಪ ಎಂಬ ಯುವಕ. ಈತ ಎಡಿಯೂರು ಹತ್ತಿರದ ದೊಡ್ಡಮಧುರೆ ಗ್ರಾಮದವ. ಪಿ.ಯು.ಸಿ. ವರೆಗೆ ಓದಿದ್ದಾನೆ. ಬೆಂಗಳೂರಿನ ಅಂಗಡಿಯೊಂದರಲ್ಲಿ ಉದ್ಯೋಗ ಮಾಡುತ್ತಾನೆ. ಚಿಕ್ಕಬಾಣಾವರದ (ಬೆಂಗಳೂರು) ಬಳಿ ಭೇಟಿಯಾದಾಗ ಸಾಂದರ್ಭಿಕವಾಗಿ ಕೇಳಿ (ದಿನಾಂಕ ೨೯-೦೪-೨೦೦೭) ಈ ಪದಗಳನ್ನು ಬರೆದುಕೊಳ್ಳಲಾಗಿದೆ).

**ಸಂ. : ಟಿ. ಗೋವಿಂದರಾಜು**

## ಕಿಚ್ಚು ಕಿಚ್ಚೆದ್ದು ಕುಣಿಯುತ...

ಗದ್ದಿಗೆ ಮೇಗಲಿಂದ ಎದ್ದುಬಾರೆ ದೇವವ್ವ
ಇದ್ದsರೆ ನಿನ್ನ ಶಿವನಾಣೆ । ಸೀರ್‍ಯವ್ದ
ಮಗ್ಗು ಬಂದ್ಯವೆ ಮುಡಿ ಬಾರೆ

ಬಾಗಲು ಚಿಕ್ಕದಂದು ಬಗ್ಗಿ ಬಾರೆ ದೇವವ್ವ
ಭಾಗ್ಯ ಉಳ್ಳೋಳು ನಿನ ಮಗ । ದೂತಯ್ಯ
ಬಾಗಲಿಗೆ ಮುತ್ತ ಬಿಡಿಸಾನು

ಮೂಡಮುಂದ ಕುಂತಿರುವ ಮುದ್ರೆ ಮೂಗುತಿಯೋಳೆ
ಸದ್ದಿಲ್ಲವಲ್ಲೆ ಗುಡಿಯಲ್ಲಿ । ದೇವಮ್ಮ
ಸದ್ದು ತೋರಮ್ಮ ಸ್ಯಬಿಗೆಲ್ಲ

ಅಕ್ಕಿ ವೊಂಬಾಳೆ ತಂದೇವು ನೆತ್ತೀಗೆ ಮುಡಿಸೇವು
ಅಕ್ಕಿ ವೊಂಬಾಳೆ ಫಳಿರೆಂದು । ದೇವವ್ವ
ನಿನ್ನ ಗುಡಿ ವೊಂಬಾಳೆ ಲಳಿರೆಂದು

ಕುದುರೆಯ ಕುಣಸುತ್ತ ಚದುರೇರ ಬೀದಿಗೆ ಬಂದsಳು
ಕುದುರೆಲ್ಲಿ ಕುದುರೆ ಮರಿಯೆಲ್ಲಿ । ಈ ವೂರ
ದೊಡ್ಡಮಾನ್ಯವರ ಮಗಳೆಲ್ಲಿ

ಏಳುತಲೆದ್ದು ಯಾರಾನ ನೆನುದೇವು
ಸಾಲುಗೇರಿ ಮ್ಯಾಗೆ ಇರುವೋಳ । ದ್ಯಾವಮ್ಮನ
ಏಳುತಲೆದ್ದು ನೆನದೇವು

ಇಲ್ಲಿಂದ ಕೈಯ ಯಾರಿsಗೆ ಮುಗುದೇವು
ವಜ್ಜುರದ ಬಾಗಲಿಗೆ ಇರುವ । ದ್ಯಾವವ್ವಗೆ
ಏಳುತಲೆದ್ದು ಕೈಯ ಮುಗುದೇವು

ದಂಡಿಗೋಗುತೆನೆಂದು ಜೋಡುಗುದುರೆ ನಾಕ್ಕಂಡು
ಜೋಡುಗುದುರೆ ಲಕಗಾಮು ಬಲಗೈಲಿ । ಹಿಡಕಂಡು ಹೋಗುವಾಗ
ಈಳ್ಯವುದ ತೊಟ್ಟು ಎದುರಾದೊ ॥ ೮ ॥

ಅಣ್ಣತಮ್ಮಂದಿರಿಗೆ ಹತ್ತಿತು ಕಾಳುಗ
ಕಿತ್ತನೂರು ಕೆರೆಹೊಳೆ ಮೆಟ್ಟಿ । ಬರುವಾಗ
ಅಚ್ಚಗನ್ ದೇವಗನ್ನೇರು ತಡೆದಾರು ॥ ೯ ॥

ಬಾರೆ ಮ್ಯಾಗುಲೋನೆ ಗಾರೆ ಗುಡಿಯೋನೆ
ಗಾಳಿಬೀಸುದುರೆ ಬಳುಕೋನೆ । ಚಿಕ್ಕಯ್ಯಗೆ
ಗಾಳಿಗೋಪುರವೇನಯ್ಯ ಗುಡಿಯಲ್ಲಿ ॥ ೧೦ ॥

ಆರೆಯ ತರುಸ್ಯಾನು ಗುದ್ದಿಲಿ ತರುಸ್ಯಾನು
ಬೋರೆಂಬ ಕಾಳೆ ನಿಡುಸ್ಯಾನು । ಚಿಕ್ಕಯ್ಯ
ನೀರೊಳ್ಳೆವೇನಯ್ಯ ಕುಡಿಯಾಕೆ ॥ ೧೧ ॥

ಆಲದಮರಕೆ ಹೋರಿ ತಗರುಕಟ್ಟಿ
ಹೋರ್‍ಯಾಡುತಾನೆ ರಣದಲ್ಲಿ । ಚಿಕ್ಕಯ್ಯ
ಬೋರ್‍ಯಾಡುತಾನೆ ರಣದಾಗೆ ॥ ೧೨ ॥

ಹತ್ತು ಗಾಳೀಯ ಹುತ್ತಕ್ಕೆ ಕೂಡಾಕಿ
ಕಿಚ್ಚು ಕಿಚ್ಚೆದ್ದು ಕುಣಿಯುತ । ಚಿಕ್ಕಯ್ಯ
ಬೋರ್‍ಯಾಡುತಾನೆ ರಣದಲ್ಲಿ ॥ ೧೩ ॥

ಚಿಕ್ಕದು ಚಿಕನಾಯಕನಳ್ಳಿ ದೊಡ್ಡಬಾಣಾವಾರ
ತಗ್ಗೀನಲ್ಲೈತೆ ವನವಳ್ಳಿ । ಉಡಿನಾಮ
ದೊಡ್ಡಚಿಕ್ಕಯ್ಯನ ಹಣಿಮ್ಯಾಲೆ ॥ ೧೪ ॥

ಚಿಕ್ಕ ಚಿಕ್ಕಲಿಂಗ ಚಿಕ್ಕವೆರಡೆಲಿಂಗ
ಚಿಕ್ಕ ಚಿಕ್ಕಯ್ಯನ ಎದಿಮ್ಯಾಲೆ । ಲಿಂಗಽಕೆ
ಚಿತ್ತಾರದೆಣಿಕೆ ಹೆಣಿಸ್ಯಾನು ॥ ೧೫ ॥

ದೊಡ್ಡ ದೊಡ್ಡ ಲಿಂಗ ದೊಡ್ಡವೆರಡೆ ಲಿಂಗ
ದೊಡ್ಡ ಚಿಕ್ಕಯ್ಯನ ಎದಿಮ್ಯಾಲೆ । ಲಿಂಗಽಕೆ
ವಡಿವಾಣ'ದೆಣಿಕೆ ಹೆಣಿಸ್ಯಾನು (1 = ಒಡ್ಯಾಣ) ॥ ೧೬ ॥

ಹಂಚೀನ ಹುಲ್ಲಾಗೆ ಹೊಂಚಾಡೊನಿವನ್ಯಾರೊ
ಕಂಚೀಯ ಗುರಾಣಿ ಕೈಲಂಬ[2] । ಹಿಡಕಂಡು
ಹೊಂಚ್ಯಾಡಿ ಹುಲಿಯ ವಡುದಾನು (2 = ಕೈಲಿ ಅಂಬು) ॥ ೧೭ ॥

ಹಳ್ಳಕೊಳ್ಳದ ನೀರು ಬೆಳ್ಳಿಯ ಕೈ ಚಂಬು
ಅಲ್ಲಿ ಚಿಕ್ಕಯ್ಯನ ಸಿವಪೂಜೆ । ಆಗುವಾಗ
ಬೆಳ್ಳಿಯ ಗಂಟೆ ಘಳಿರೆಂದೊ ॥ ೧೮ ॥

ಕಣ್ಣು ಬಿಟ್ಟರೆ ಕನ್ನೂಡಿ ವಳವೆಲ್ಲ
ಚನ್ನಪಟ್ಟಣದ ಮಳಿಗೆಯ । ಮಳಿಗೆ ಬಾಗಲು ಮುಂದೆ
ಚಿನ್ನದ ಗುಂಡು ವಳುದಾವೊ ॥ ೧೯ ॥

ಮುಂದೆ ಬರೊ ತಗರ ಏನೆಂದು ಕರೆಯಲಿ
ಉಂಗರಗೋಡು ಉರಿಗೋಡು । ಸ್ವಾಮಿ ಚಿಕ್ಕಯ್ಯನ
ಈರ ಮಕ್ಕಳಿಗೆ ಎಡಿಯಾದೊ ॥ ೨೦ ॥

ಎಂಬತ್ತು ಕಂಬಕ್ಕೆ ಎಂಬತ್ತು ದೀವಿಗೆ
ಕಂಬವನ್ಯಾರೊ ಕಡದಽರೊ । ತಿಮ್ಮಯ್ಯ
ನಿನ ರ‍್ಯಂಬೆಯನ್ಯಾರೊ ತಿದ್ದಿದಽರು ॥ ೨೧ ॥

ಬಂದಳು ದ್ಯಾವವ್ವ ನಿಂದಳೂರು ಮುಂದೆ
ಗಂಗಽಳದಾಗೆ ರತನೀರ । ನೀರು ತೆಂಗಿನ ಕಾಯಿ
ಕರೆ ತಲ್ಲಿ ತಾಯಿ ದೇವಮ್ಮನ ॥ ೨೨ ॥

ಹಳ್ಳಿಯ ಗೌಡಽರು ಇಳ್ಳೆದ್ದು ಬರುವಾಗ
ಬಳ್ಳಕ್ಕಿ ಹಿಂಡು ಬೆದರಿದೊ । ಬೆಟ್ಟದ ಸೇರಿ
ಒಂದೊತ್ತಿನ ಮೇವು ತೋರದಽವೊ ॥ ೨೩ ॥

ಒಪ್ಪತ್ತಿನೂಟದೋಳೆ ಚುಚ್ಚಿನ ಬಾಯಿಬೀಗ
ಉಕ್ಕ ಮರಳಾಗೆ ಬರಲಾರೊ ॥ ದ್ಯಾವವ್ವ
ಒಪ್ಪಿಕಽಳೆ ನಿನ್ನ ಹರಿಕೇಯ ॥ ೨೪ ॥

ಕುಂಕುಮದ ಬೀದಿಽಲಿ ಕುಂತಿರೊಳಿವಳ್ಯಾರೆ
ಕುಮಕುಮದ ಸೀರೆ ನ್ಯರಿಗ್ಯಳು । ದ್ಯಾವಮ್ಮ
ಕುಂತು ನೋಡ್ಯಾಳೆ ಮೈಸೂರ ॥ ೨೫ ॥

ಬಳೆ ಬಂದವಲ್ಲೆ ಬಳೆಗುಳ್ಳ ಗರತಿsಗೆ
ಬಳಿಯಾಗಿ ಬಳೆಯ ತೊಡು ಬಾರೆ । ದೇವವ್ವ
ಬಳೆಬಂದೋ ಬಂಕs ಮರದಿಂದ ॥ ೨೬ ॥

ಬಳೆಯ ತೊಡುವಾಗ ಬಲಗಡೆ ಸೀತವರ್‍ರ್ಯಾರೆ
ಬಳೆಗಾರರಣ್ಣ ಕೈಬಿಡೊ । ನನ್ನಳಿಯ
ಎಳಳ್ಳಿ ಗೌಡರ ಕೇಳಿ ಬರುತೀನಿ ॥ ೨೭ ॥

ಅರಳಿಮರದೋಳೆ ಅಬ್ಬಿಗುಡಿಯೋಳೆ
ಗುಬ್ಬಿ ಚಿಂತsಕುದ ಕೊರಳೋಳೆ । ದೇವವ್ವ
ನಿನ್ನಬ್ಬವೇನಮ್ಮ ಗುಡಿಯಲ್ಲಿ ॥ ೨೮ ॥

ಸುಕ್ರವಾರದೋಳೆ ಚಿಕ್ಕಬಟ್ಟೆನೋಳೆ
ಸುಕ್ರವಾರವೇನಮ್ಮ ಗುಡಿಯಲ್ಲಿ । ಎಲ್ಲಮ್ಮ
ನೀನು ಸೂಜೀಲಿ ಬೀಗ ತಗಿಯೋಳೆ ॥ ೨೯ ॥

ದ್ಯಾವವುಟ್ಟಾಳೆ ದೇವಾಂಗ ಸೀರೆsಯ .
ನವುಲು ಗೊಂಡೇವುನ ಸೆರಗಿsನ । ಸೀರೇನುಟ್ಟು
ನಾಗರಿಗೆ ತನಿಯ ಎರದsಳು ॥ ೩೦ ॥

ತೆಳ್ಳನೆ ನೀರಿಗು ಬಟ್ಟಿನ ನೀರಿಗು
ಬೆಚ್ಚಿ ಬೆಚ್ಚಿ ಬಿಸಲೀಗು । ದ್ಯಾವವ್ವನ
ಪಟ್ಟೆ ಜೋತುರವ ಮಡಿಮಾಡಿ ॥ ೩೧ ॥

ಉದ್ದಕ್ಕಿಕ್ಕುದ ನಾಮ ಉದರೀತು ಕುಮಕುಮ
ಮದ್ದಗಿರಿಗೋಗಿ ಬರುವೋನ । ದೂತಯ್ಯವ
ಗದ್ದ ಬೆವರೀತು ಬಿಸಲೀಗೆ ॥ ೩೨ ॥

ಅಂಗಿ ಮ್ಯಾಲಂಗಿ ಸುಂಗರದ ನಡುಕಟ್ಟು
ತಂಗಿಮನಿಗೋಗಿ ಬರುವನು । ಬರುವsನು ಚಿಕ್ಕಯ್ಯನ
ಅಂಗಿಯ ಗುಂಡಿ ಹೊಳುದಾವು ॥ ೩೩ ॥

ಏರಿಮ್ಯಾಲೆ ನಿಂತುಕಂಡು ಯಾರಾನ ನೋಡ್ಯಾಳು
ದೂರವೋಗ್ಯವನೆ ಕಣ್ಣೆ ನಿನಮಗ । ಪೂಜಾರಿ
ಪೂಜೆಗೆ ವೂವ ತರುವsಕೆ ॥ ೩೪ ॥

ಪೂಜಾರಿ ತಂದೂವ ಪೂಜಿಗೆ ಸಲ್ಲವು
ಪೂಜಾರಿ ಮಗ ದೊರಿ ಮಗ । ದ್ಯಾವವ್ವ
ಪೂಜಿಗೊತ್ತಾಯ್ತು ದಯವಂಗೆ ॥ ೩೫ ॥

ಗುಡುಗುಡೆಂದಿತ್ತು ಗುಬ್ಬಿಕಲಿ ಮಿಂಚಿತ್ತು
ಹೆಬ್ಬೂರು ಮ್ಯಾಲೆ ಮಳೆಇಯಾಡ । ಹಿಗ್ಗಿನಸಂತೆ
ಗಬ್ಬಕದೊಂಬಾಳೆ ಗುರಿ ನುಡಿದು ॥ ೩೬ ॥

ತುಂಬಿದ ಕೆರೆಯಾಗೆ ತೂಬೆತ್ತೊ ನಿವನ್ಯಾರೆ
ಗಂಗಮ್ಮ ತಾಯಿ ನಿನಮಗ । ದ್ಯಾವಮ್ಮ
ಗಬ್ಬದೊಂಬಾಳಿಗೆ ನೀರ ಬಿಡುತಾನೆ ॥ ೩೭ ॥

ಸೂಳೆಯ ಮಲ್ಲಿ ಸುಣಕಾಯ ಮರೆತಾನೊ
ದೊಂಬಕ್ಕೆ ಸೂಳೆಗುಡಲಾಗೆ । ದೂತಯ್ಯ
ಸೂಳೇರ ಮುಂದಲೆಯ ಹಿಡುದಾನು ॥ ೩೮ ॥

ಸೂಳೇರ ಬೀದಿಗೆ ಹೋಗುಬ್ಯಾಡ ದೂತಯ್ಯ
ಹಡು ಕಟ್ಟವರೆ ನಿನಮ್ಯಾಲೆ । ಚಿಕ್ಕಯ್ಯ
ಅಡಿಕೆ ಜೂಜು ಕಟ್ಟವರೆ ನಿನಗೀಗ ॥ ೩೯ ॥

ಕುಂತು ಕುಣಗಲು ಗೆದ್ದ ನಿಂತು ಮದುರವ ಗೆದ್ದ
ಮಾತಿನಲಿ ಗೆದ್ಯಲ್ಲೊ ನೆಲಮಂಗಲವ । ಚಿಕ್ಕಯ್ಯ
ನ್ಯಾಯದಲಿ ಗೆದ್ಯಲ್ಲೊ ಚುಂಚನಗಿರಿ ದವನವ ॥ ೪೦ ॥

**ಹಾಡಿದವರು** : ಎಲ್ಲಪ್ಪ (ಸು. ೫೦ ವರ್ಷ), ಅರೆವಾದಕರು ಹಾಗೂ ಎಲ್ಲಮ್ಮ ದೇವರ ಪೂಜಾರಿ, ಅಣತಿ, ಬಾಗೂರು ಹೋಬಳಿ, ಚನ್ನರಾಯಪಟ್ಟಣ ತಾ॥

**ಸಂಗ್ರಹ** : ದಿನಾಂಕ ೨೭-೧೦-೨೦೦೯ (ಸಂಜೆ). **ಸ್ಥಳ** : ಟಿ. ದಾಸರಹಳ್ಳಿ, ಬೆಂಗಳೂರು. **ಸಂದರ್ಭ** : ಅಣತಿ ಊರಿನ ಒಕ್ಕಲಿನವರು ತಮ್ಮ ಮನೆ ಗೃಹಪ್ರವೇಶದ ಅಂಗವಾಗಿ ಬೀರಲಿಂಗೇಶ್ವರ ಹಾಗೂ ಲಕ್ಷ್ಮಿದೇವರನ್ನು ಕರೆಸಿದ್ದಾಗ ಬಂದಿದ್ದವರು. ಒಂದು ಸೋಮನನ್ನು ತಂದಿದ್ದರು. ಸಂಜೆ, ದೇವರು ಇಳಿಸಿದ ಮೇಲೆ ಬಿಡುವಾಗಿ ಕುಳಿತಿದ್ದಾಗ ಕೇಳಿ ಬರೆದುಕೊಂಡಿದ್ದು. **ಸಂಗ್ರಹ** : ಟಿ. ಗೋವಿಂದರಾಜು.

# ಕಂಸಾಳೆ ಕಾವ್ಯ-ಕುಣಿತ

ಇದು ಧಾರ್ಮಿಕ ಹಿನ್ನೆಲೆಯಲ್ಲಿ ಪ್ರದರ್ಶನ ಪ್ರಕಾರ. ಮಲೆಮಾದೇಶ್ವರನ ದೀಕ್ಷೆ ಪಡೆದ ಭಕ್ತರು ಅಂದರೆ, ಗುಡ್ಡರು ಮಾದೇಶ್ವರನ ಪುರಾಣ, ಮಹಿಮೆಗಳನ್ನು ಊರೂರಲ್ಲಿ ಪ್ರಚುರಪಡಿಸುವ ಯತ್ನಕ್ಕೆ ಇಂಬಾಗಿ ಈ ಆಕರ್ಷಕ ಹಾಡು-ಕುಣಿತದ ಕಲಾರೂಪವನ್ನು ಆವಿಷ್ಕರಿಸಿಕೊಂಡಂತೆ ಕಾಣುತ್ತದೆ. ಮಾದೇಶ್ವರನ ಕಾವ್ಯ ಸ್ವತಃ ನಾಟಕೀಯ ಪ್ರಸಂಗ, ನಡೆಗಳಿಂದ, ಆಹ್ಲಾದಕರ ಮಟ್ಟುಗಳಿಂದ ಕೂಡಿದ ಒಂದು ಗೀತರೂಪಕ. ಅದನ್ನು ಮತ್ತಷ್ಟು ಛಂದಗೊಳಿಸುವಂತೆ, ಕೇಳುಗರಲ್ಲಿ ಮೂಡಬಹುದಾದ ಏಕತಾನತೆ ಭಾವವನ್ನು ಹತ್ತಿಕ್ಕಿ ಪೂರ್ಣಾವಧಿಯಲ್ಲಿ ಹಿಡಿದಿಟ್ಟುಕೊಳ್ಳುವಂತೆ ಅಳವಡಿಸಿಕೊಂಡ ನೃತ್ಯಾಭಿನಯವೇ ಕಂಸಾಳೆ ಕುಣಿತ.

ಕಂಸಾಳೆ ಎಂದರೆ ಕಂಚಿನಿಂದ ಮಾಡಿದ ತಾಳ- ಅಥವಾ ಬಟ್ಟಲು ಎಂದರ್ಥ. ಇದರಲ್ಲಿ ಎರಡು ಭಾಗ. ಎಡಗೈಲಿ ಹಿಡಿವ ಬಟ್ಟಲು ಅಂಗೈ ಅಗಲದ್ದು. ಇದಕ್ಕೆ ಅರ್ಧ ಅಂಗುಲ ಉದ್ದದ ಕಂಟವಿರುತ್ತದೆ. ಇದರ ಮೇಲೆ ಮುಚ್ಚಬಹುದಾದ, ದೊಡ್ಡ ಆಕಾರದ ತಟ್ಟೆಯಂತಹ ಇನ್ನೊಂದು ಸಾಧನವಿದೆ. ಈ ಮುಚ್ಚಳ ಅಥವಾ ತಟ್ಟೆಯ ನಡುವೆ ಉಬ್ಬಿದ ರಚನೆ ಇದ್ದು, ಅದರಲ್ಲಿನ ರಂಧ್ರದಲ್ಲಿ ಸುಮಾರು ಮೊಳದುದ್ದದ ಗಟ್ಟಿದಾರ ಅಳವಾಡಿಸಲಾಗಿರುತ್ತದೆ. ಈ ತಟ್ಟೆಗೆ 'ಗರಿ' ಎಂಬ ಹೆಸರೂ ಇದೆ. ಈ ಗರಿಯನ್ನು ಬಲಗೈಲಿ ಹಿಡಿದು, ಎಡಗೈಲಿ ಹಿಡಿದ ಬಟ್ಟಲಿಗೆ ಲಯಬದ್ಧವಾಗಿ ತಾಡಿಸಿದಾಗ ಕಂಚಿನ ಮನೋಹರ ನಾದ ಹೊರಹೊಮ್ಮುತ್ತದೆ. ಕಲಾವಿದರು ಕಾವ್ಯ ಭಾಗದ ಹಾಡಿನ ಲಯ-ಧಾಟಿಗೆ ತಕ್ಕಂತೆ ಈ ಕಂಸಾಳೆ ಹಿಡಿದು ಬೀಸುತ್ತಾ, ಬಡಿಯುತ್ತಾ ಗುಂಪಾಗಿ ಕುಣಿತ ಮಾಡುತ್ತಾರೆ.

ಹಾಡುಗಾರರು ಮಾದೇಶ್ವರನ ಕಾವ್ಯಭಾಗಗಳನ್ನು ಒಂದೆಡೆ ಕುಳಿತು ಅಥವಾ ನಿಂತು ಇಲ್ಲವೇ ಮೆಲ್ಲನೆ ನಡೆಯುತ್ತಾ ಹಾಡುತ್ತಾರೆ. ಆಗ ಪ್ರಧಾನವಾಗಿ ಕಂಸಾಳೆಗಳೊಂದಿಗೆ ದಮ್ಮಡಿ ಮತ್ತು ಚಿಟಿಕೆ ತಾಳಗಳನ್ನು ಬಳಸುತ್ತಾರೆ. ಆದರೆ, ಜನರ ಗುಂಪು ಸೇರಿದಾಗ ಹೆಚ್ಚಿನ ಆಕರ್ಷಣೆಗಾಗಿ ಕಂಸಾಳೆಗಳನ್ನು ಬೀಸುತ್ತಾ ಬಡಿಯುತ್ತಾ ಕುಣಿತ ಪ್ರದರ್ಶಿಸುತ್ತಾರೆ. ಆದ್ದರಿಂದ ಅದನ್ನು ಬೀಸು ಕಂಸಾಳೆ ಎಂದೇ ಕರೆಯಲಾಗುತ್ತದೆ.

ಮಾದೇಶ್ವರನ ಮಹಾಕಾವ್ಯದಲ್ಲಿ ಏಳು ಸಾಲುಗಳು ಅಥವಾ ಪ್ರಧಾನ ಭಾಗಗಳಿದ್ದು, ಅವನ್ನು ಪೂರ್ಣಮಾಡಲು ಅನೇಕ ದಿನ-ರಾತ್ರಿಗಳು ಬೇಕಾಗುತ್ತದೆ. ಆದರೆ, ಅವುಗಳಲ್ಲಿ ಕೆಲವು ಪ್ರಸಂಗ ಅಥವಾ ಧಾಟಿಗಳಿಗೆ ಮಾತ್ರ ಬೀಸು ಕಂಸಾಳೆ ಕುಣಿತವನ್ನು ಪ್ರದರ್ಶಿಸಲು ಸಾಧ್ಯವಿರುತ್ತದೆ. ಉದಾ.ಗೆ

"ತಂದನನ್ನ ತಂದನ್ನ।
ತಂದೆಽನನಽನ ......."

– ಈ ಪಲ್ಲವಿ– ಇದನ್ನು ಅನುಸರಿಸಿಬರುವ ಕಾವ್ಯಭಾಗಕ್ಕೆ ಬೀಸು ಕಂಸಾಳೆ ಸರಿ ಹೊಂದುತ್ತದೆ. ಆದರೆ, 'ಕಲಿಹಾಡು', 'ಗಜಮುಖನೆ....', 'ಆಡಿದವರ ಮನವ ಬಲ್ಲೆ ....' ಇಂತಹ ಪಲ್ಲವಿ ಮೊದಲಾದ ಭಾಗಗಳನ್ನು ಸಿಂಗಲ್ ತಾಳದಲ್ಲಿ ಹಾಡಲಾಗುತ್ತದೆ. ಇದಕ್ಕೆ ಬೀಸು ಕಂಸಾಳೆ ಬಳಸುವುದು ಸಾಧ್ಯವಾಗುವುದಿಲ್ಲ. ಹಾಗೆಯೇ, 'ವಿಗ್ನೇಸ್ವರನೆ ಹರಹರ ..... ಗೌರಿಯ ಮುದ್ದಿನಕುಮಾರನೇ .....' ಹಾಡನ್ನಾಗಲೀ, ಲಿಂಗರಾಜಮ್ಮನ ಪ್ರಸಂಗ ಭಾಗವನ್ನಾಗಲೀ ಡಬಲ್ ತಾಳದಲ್ಲಿ ಹಾಡಲಾಗುತ್ತದೆ.

ಬರೀ ಹಾಡು, ಕುಣಿತದ ಏಕತಾನತೆಯನ್ನು ಮೀರುವುದಕ್ಕಾಗಿ ಕಲಾವಿದರು ಅನೇಕ ಚಮತ್ಕಾರದ ಪ್ರದರ್ಶನಗಳನ್ನು ಅಳವಡಿಸಿಕೊಂಡಿರುವುದೂ ಉಂಟು. ಚಾಮುಂಡಿ, ಕರಾಟೆ, ಫ್ಲವರು, ಪಿರಮಿಡ್ಡು, ಕೋಲಾಟ, ಜಂಬು .... ಹೀಗೆ, ಕಸರತ್ತಿನಿಂದ ಕೂಡಿದ ಅನೇಕ ಚಮತ್ಕಾರ ವೈವಿಧ್ಯಗಳಿದ್ದು, ಆ ಒಂದೊಂದು "ಗಿಮ್ಮಿಕ್ಕು" ಆದ ಮೇಲೂ 'ಹುಲಿಹೆಜ್ಜೆ' ನಡಿಗೆ– ಅಭಿನಯ ಇರುತ್ತದೆ (ಇದು ಇನ್ನೊಂದು ವರಸೆ ತೋರಲು ಸಿದ್ಧವಾಗುವ ನಡುವಿನ ವರಸೆ). ದಮ್ಮಡಿ ಮತ್ತು ಕಂಸಾಳೆಗಳನ್ನು ಒಂದೇಟು, ಎರಡೇಟು, ಮೂರೇಟು ಹೀಗೆ ವಿವಿಧ ತಾಳಗಳಲ್ಲಿ ನುಡಿಸಲಾಗುತ್ತದೆ. (ವೈಯಕ್ತಿಕ ಮಾಹಿತಿ : ಕಲಾವಿದ ಕುಮಾರಸ್ವಾಮಿ, ಮೈಸೂರು; ಚೇತನ್, ಮೊದಲನೇ ಬಿ.ಎ., ಮಹಾರಾಜ ಕಾಲೇಜು, ಮೈಸೂರು; ಡಾ. ಪಿ.ಕೆ. ರಾಜಶೇಖರ, ಮೈಸೂರು).

ಕಲಾವಿದ ಯು.ಎಸ್. ರಾಮಣ್ಣ, ಕಂಸಾಳೆ ಹಾಡು–ಕುಣಿತದ ತಾಂತ್ರಿಕ ಮಾಹಿತಿಯನ್ನು ಒಂದೆಡೆ ದಾಖಲಿಸಿದ್ದಾರೆ :

"ವಾಲಿಗವ್ವೋ ನಿಮ್ಮ ವಾಲಿಗವ್ವೋ
ಶಿವನ ಮಹದೇವನ್ ವಾಲಿಗವ್ವೋ
ವಾಲಿಗವೆಂದಾರ ರೇಗೂತ ಬರುತಾರ
ಶಿವನ ಮಹದೇವನ್ ವಾಲಿಗವ್ವೋ"

– ಎಂಬ ಮೇಳದವರ ಹಾಡಿಗೆ ಒಂಟಿ ನೃತ್ಯದಲ್ಲಿ ಮೊದಲು ಒಬ್ಬನೇ ಕಂಸಾಳೆ ಬೀಸುತ್ತಾ ಕುಣಿಯುತ್ತಾನೆ. ಇಲ್ಲಿ 'ಮನೆ' ಕಟ್ಟುವ ಪದ್ಧತಿಯೊಂದು ಕಾಣಬರುತ್ತದೆ. ಕಲಾವಿದ ರಂಗದ ಮೇಲೆ ಸುತ್ತಿಹಾರಿ, ಬಾಗಿ, ಮಲಗಿ, ಹುಲಿಯಂತೆ ಹೆಜ್ಜೆಹಾಕಿ, ಜಿಂಕೆಯಂತೆ ನೆಗೆದು, ಬಳ್ಳಿಯಂತೆ ಸುಮಾರು ಐದರಿಂದ ಆರು ನಿಮಿಷಗಳ ಕಾಲ ಕುಣಿಯುತ್ತಾನೆ. ಒಂಟಿಯಾಗಿ ಮಾಡುವವರು ವಿರಳ. ಇದು ಕಠಿಣವಾದುದು .... ಜೋಡಿ ಕುಣಿತದಲ್ಲಿ ಇಬ್ಬರು ಭಾಗವಹಿಸುತ್ತಾರೆ. ಇದರಲ್ಲಿ ಮೈನವಿರೇಳಿಸುವ ಚಮತ್ಕಾರವನ್ನು ನೋಡಬಹುದು. 'ಕಳರಿಪಯಟ್ಟು'ವಿನ ಮಾದರಿಯಲ್ಲಿ ಕಲಾವಿದರು ಕುಣಿಯುತ್ತಾರೆ. ಜೋಡಿ ಕುಣಿತದ ಕೊನೆಯಲ್ಲಿ ಈ ಜೋಡಿಗೆ ಒಬ್ಬೊಬ್ಬರಾಗಿ ಸೇರುತ್ತಾ ಒಂದು ನೃತ್ಯ ಮಾಡುವುದೇ ಗುಂಪು ಕುಣಿತ. ಇದು ಸಮಸಂಖ್ಯೆಯಲ್ಲಿರುತ್ತದೆ. ಗುಂಪಿನ ಆಕಾರ ಕಮಲದ ಹೂವಿನಂತಿದ್ದು ಮೊದಲು ಮೊಗ್ಗಾಗಿ, ನಂತರ ಅರಳಿದ

ಕಮಲದಂತೆ, ವಿವಿಧ ಭಂಗಿಗಳಲ್ಲಿ ಸುಮಾರು ೪೫ ನಿಮಿಷಗಳ ಕಾಲ ಮೇಳದ ಹಾಡಿನ ನಾದಕ್ಕೆ ತಕ್ಕಂತೆ ಕುಣಿದು ಒಬ್ಬೊಬ್ಬರಾಗಿ ನೇಪಥ್ಯಕ್ಕೆ ಸರಿಯುತ್ತಾರೆ. ಕೆಲವು ತಂಡಗಳು ಮರಗಾಲು ಕುಣಿತವನ್ನು ಮಾಡುವುದುಂಟು .... ಒಂಟಿ ಕುಣಿತ ಮಾಡುವ ಕಲಾವಿದ ಕಡೆಯಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕುಣಿಯುವುದನ್ನು (ಹಿಂದೆ) ನೋಡಬಹುದಾಗಿತ್ತು ....' (ದಕ್ಷಿಣ ಭಾರತೀಯ ಜಾನಪದ ಕೋಶ; ಪು.೮೯; ಪ್ರಸಾರಾಂಗ, ಕವಿವಿ., ಹಂಪಿ; ೨೦೧೧).

ಮಾದೇಶ್ವರ ಕಾವ್ಯದ ಪ್ರಸಂಗ ಭಾಗಗಳ ಕೆಲವು ನುಡಿಗಳನ್ನು ಮಾದರಿಗಾಗಿ ಇಲ್ಲಿ ಆಯ್ದುಕೊಟ್ಟಿದೆ. ಸಂಕಮ್ಮನ ಸಾಲಿನ ನುಡಿಗಳು :

*"ಆವುಳಂದ ಚಂದ ನೋಡವನೆ*
*ಚಂದ ಚಾರ ನೋಡವನೆ*
*ಚಲುವ ಭಾವ ನೋಡವನೆ*
*ಆವುಳ್ ಸುದ್ದಾ ಸುಳಿಯ ನೋಡವನೆ*
*ದಪ್ಪಾ ದುಡುವ ನೋಡವನೆ*
*ನಡುಗೆ ನುಡುಗೆ ನೋಡವನೆ*
*ಮಂಡೆ ದಾವ ನೋಡವನೆ*
*ಕೆಂಪೂ ರೂಪ ನೋಡವನೆ*
*ಸಂಕಮ್ಮನನ್ನೇ ಮೆಚ್ಚಿವನಲ್ಲೋ*
*ಮಲೆಯ ಸ್ವಾಮಿಗ ನೀಲಯ್ಯ*
*ಕೋಡ್ಯಾ ನೀಡವ್ವ ಕೋಡುಗಲ್ಲಯನಿಗೆ"*

*"ಬಳೆಗಾರ ಶೆಟ್ಟಿ ಬತ್ತಾನೆ*
*ಬಳೆ ಅಂತ ಸಾರ್‍ತಾನೆ*
*ಬಾಗಿಲಲ್ಲಿ ಬಗ್ಗಿ ನೋಡ್ತಾಳೇ*
*ಅಂದ ಚಂದ ನೋಡ್ತಾನೆ !*
*ರೂಪುಲಾವಣ್ಯ ನೋಡ್ತಾನೆ !*
*ನೋಡಿದವನು ಎತ್ತಿಕೊಂಡೇ ಹೋದರೆ ! —"*

## ಬೀಸು ಕಂಸಾಳೆ ಹಾಡಿನ ವಾಲುಗಗಳು

'ದೇವರ ಗುಡ್ಡರು ಮಾದೇಶ್ವರನನ್ನು ಸ್ತುತಿಸುವ ಗೀತೆಗಳನ್ನು ವಾಲುಗೆ ಪದಗಳೆಂದು ಕರೆಯುತ್ತಾರೆ. ಬೀಸುಕಂಸಾಳೆಯಲ್ಲಿ ಇವುಗಳ ಪಾತ್ರ ಪ್ರಧಾನವಾದುದು .... ವಾಲುಗೆ ಪದಗಳಲ್ಲಿ ಬಿಡಿ ವಾಲುಗ, ಜೋಡ್ವಾಲುಗ ಮೊದಲಾಗಿ ನಾಲ್ಕು ವಿಧ. ಒಂದೊಂದು ಸಾಲಿಗೂ ಸೊಲ್ಲು ಹಾಡಿಸಿಕೊಳ್ಳುತ್ತ ಮುಂದುವರಿಯುವ ಹಾಡು ಬಿಡ್ವಾಲುಗ. ಎರಡೆರಡು ಸಾಲಿಗೆ ಸೊಲ್ಲು ಹಾಡಿಸಿಕೊಳ್ಳುವುದು ಜೋಡ್ವಾಲುಗ. ನಾಲ್ಕು ಸಾಲುಗಳ ಪ್ರತಿ ಪದ್ಯಕ್ಕೆ ಸೊಲ್ಲು ಹಾಡಿಸಿಕೊಳ್ಳುವುದು ಕಟ್ಟೋಲಗ. ಸೊಲ್ಲೇ ಇಲ್ಲದೆ ಎಷ್ಟು ಸಾಲು ಬೇಕಾದರೂ ಮುಂದುವರೆಯುವುದು ತೊಡಕುವ್ವಾಲುಗ. ಇದರ ಕೆಲವು ನಿದರ್ಶನಗಳು :

**ಬಿಡ್ವಾಲುಗ :**

*ಕಂಡದೋಕುಳಿ ಗಂಡ್ಸನ*
*ಕಂಡಾರಿಯೋ ದುಂಡು ಮಾದೇವನ /ಸೊಲ್ಲು /*

*ಆರಿಯದ ಮಕ್ಕಳಿಗೊಲದವನ*
*ಕಂಡಾರಿಯೊ ದುಂಡು ಮಾದೇವನ ।*

ಹೀಗೆ ಪ್ರತಿ ಸಾಲಿಗೂ 'ಕಂಡಾರಿಯೋ ....' ಎಂದು ಹಾಡಿ, ಬಳಿಕ ಸೊಲ್ಲಿನ ಪೂರ್ಣಭಾಗ ಹಾಡಬೇಕು.

**ಜೋಡ್ವಾಲುಗ :**

*ಇಳಿದಾರೊ ಇಳಿದಾರೊ ಮಾದೇವ*
*ಗಿರಿಯಿಂದಿಳಿದಾರೊ ಮಾದೇವ । ಸೊಲ್ಲು*

*ಬಟ್ಟ ಬಟ್ಟ ಮೊಕುದೋರು*
*ದೈವದವ್ರು ಮಾದಯ್ಯೋದು ।*

*ಬೆಳ್ಳಿ ಕಟ್ಟೇನ ಬೆತ್ತಗಳೋ*
*ಬೆನ್ನೇಲೆ ಕುರು ಜಡಿಗಳೋ ।*

*ದೈವದ ಮಾದಯ್ಯ ಬರುವಾಗ*
*ಇಟ್ಟ ಕಲ್ಲು ಕಿಡಿಗುಟ್ಟಿದವೋ ।*

*ಕೂಗೋ ಕೂಗೋ ದೇವಾನ*
*ಕೂಗಿ ಕರೆಯೊ ದುಂಡು ಮಾದೇವನ । ಸೊಲ್ಲು ।*
*ಎಳಗಾವಿ ಎಳುದೊದ್ದು ಸಳುಗಾವಿ ಮುಸುಗುಟ್ಟು*
*ಮಲೆಯಲ್ಲಿ ನೆಲುಗೊಂಡ ಮಾದೇವನ ।*

**ಕಟ್ಟೋಲುಗ :**

*ಗದ್ದಿಗೆ ಸಿಂಗಾರವೊ – ಮಾದೇವ್ನ*
*ಗದ್ದಿಗೆ ಸಿಂಗಾರವೊ*
*ಗದ್ದಿಗೆ ಮ್ಯಾಗಳ ಮುದ್ದು ಮಾದೇವನ*
*ಹೆಬ್ಬುಲಿ ಸಿಂಗಾರವೊ ॥ ಸೊ ॥*

*ದೇವಾನ ಸಿಂಗಾರವೊ*
*ಮಾದೇವನ ಸಿಂಗಾರವೊ*
*ಗದ್ದಿಗೆ ಮ್ಯಾಗಳ ಮುದ್ದು ಮಾದೇವನ*
*ಹೆಬ್ಬುಲಿ ಸಿಂಗಾರವೊ । —*

ಆಕರ : ಡಾ॥ ಪಿ.ಕೆ. ರಾಜಶೇಖರ : ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ; ಸಂಯುಕ್ತ ಪ್ರಕಾಶನ, ಮೈಸೂರು; ೧೯೭೩.

# ಗುಡ್ಡರ ಮೇಳ

ವೀರಭದ್ರನಂತಹ ಯಾವುದೋ ಮೂಲ ಕುಣಿತದ ಪ್ರಭಾವದಿಂದ ಇತರ ಕೆಲವು ಗ್ರಾಮ ದೇವತೆಗಳನ್ನು ಹಾಡು-ಕುಣಿತಗಳಿಂದ ಮೆರೆಸುವ ಪದ್ಧತಿಗಳು ಹುಟ್ಟಿಕೊಂಡಿರಬಹುದೆಂದು ಭಾಸವಾಗುತ್ತದೆ. ವೀರಮಕ್ಕಳ ಕುಣಿತ (ಹುಚ್ಚಮ್ಮ ದೇವತೆಯ ಆರಾಧನೆಗಾಗಿ ಮಡಿವಾಳರು ರೂಪಿಸಿಕೊಂಡ ಕಲಾ ಪ್ರಕಾರ), ಗೊರವರ ಕುಣಿತ (ಮೈಲಾರಲಿಂಗನ ಆರಾಧನೆ)ಗಳನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. ಇವುಗಳ ಗುಂಪಿಗೇ ಸೇರುವ, ಆದರೆ, ಸಾಹಿತ್ಯದ ದೃಷ್ಟಿಯಿಂದ ಈ ಎಲ್ಲಕ್ಕೂ ವಿಭಿನ್ನ ನೆಲೆಯಲ್ಲಿ ನಿಲ್ಲುವ ಇನ್ನೊಂದು ಬಗೆಯ ಕುಣಿತ ಕಲೆಯೇ "ಗುಡ್ಡರ ಮೇಳ."

ಪ್ರದರ್ಶನದಲ್ಲಿ ನೋಡಿದಾಕ್ಷಣ ಭಾಸವಾಗುವುದು ಇದು 'ವೀರಗಾಸೆ ಕುಣಿತ' ಎಂದು. ಏಕೆಂದರೆ ಇದರಲ್ಲಿಯೂ ಒಬ್ಬಾತ ವೀರಗಾಸೆಯ ವೀರಭದ್ರನಂತೆಯೇ ವೇಷ ಭೂಷಣ ಹಾಕಿಕೊಂಡಿರುತ್ತಾನೆ. ಬಲಗೈಲಿ ಖಡ್ಗ, ಎಡಗೈಲಿ ವೀರಭದ್ರನ ಚಿತ್ರ ಕೆತ್ತಿದ ತಗಡಿನ ಪಟ, ಸೊಂಟಕ್ಕೆ ರುಂಡಮಾಲೆ, ತಲೆಗೆ ಉದ್ದವಾದ ಬಿಳಿಕೂದಲು... ಹೀಗೆ. ಮಧ್ಯೆ ಮಧ್ಯೆ 'ದಕ್ಷಯಜ್ಞ' ಮೊದಲಾದ ಪ್ರಸಂಗಗಳ ಕುರಿತಾದ 'ಖಡ್ಗ' ಹೇಳುವುದು – ಇತ್ಯಾದಿ ಸಾಮಾನ್ಯವಾಗಿರುತ್ತದೆ. ಮೇಳದಲ್ಲಿ ಒಬ್ಬ ಹಾಡುತ್ತಾ, ಚಕ್ರಬಳೆ (ತಮಟೆಯಂತಹ ಚಿಕ್ಕ ಚರ್ಮವಾದ್ಯ) ನುಡಿಸಿದರೆ, ಉಳಿದ ನಾಲ್ವರು ತಾಳ ಹಾಕುತ್ತಾ, "ಲಿಂಗವೆ ಬಾರೋ – ಲಿಂಗವೆ ಬಾರೆ..." ಎಂದಿತ್ಯಾದಿ ಕುಣಿಯುತ್ತಾ, ವೀರಭದ್ರನ ವೇಷದವನನ್ನೂ ಕುಣಿಸುತ್ತಿರುತ್ತಾರೆ. ಕುಣಿತದ ಕ್ರಮ ಸಾಮಾನ್ಯವಾಗಿ ಹೀಗಿರುತ್ತದೆ :

'ಖಡ್ಗ ಹಿಡಿದ ವೀರಭದ್ರನ ವೇಷದವ ಮಧ್ಯೆ ಮಧ್ಯೆ ನಿಂತು "ಹೇ... ಹೇ..." ಎಂದು ಉಗ್ಗಡಿಸಿದರೆ ಉಳಿದವರೂ 'ಹೇ... ಹೇ... ಅಯ್ಯಾ....' ಎಂದು ಆತನನ್ನು ಬೆದರಿಸಿ, ಅಡ್ಡಿ ಮಾಡುವಂತೆ ಅಭಿನಯಿಸುತ್ತಿರುತ್ತಾರೆ. ಆ 'ವೀರಭದ್ರ' ಕುಳಿತಾಗ, ಚಕ್ರವಾದ್ಯ ಹಿಡಿದವ ಶಿವಕತೆ ಹೇಳುತ್ತಾನೆ. ಹಿಮ್ಮೇಳದವರು ಆ ಪ್ರತಿಯೊಂದು ನುಡಿಗೂ "ಭಲರೇ" ಎಂದು ದನಿ ಇಕ್ಕುತ್ತಿರುತ್ತಾರೆ. ಕೊನೆಯಲ್ಲಿ ಖಡ್ಗ ಹಿಡಿದ ವೇಷಗಾರ ಬಡಿಯುವವನಂತೆ ಮುನ್ನುಗ್ಗಿದಾಗ, ಉಳಿದವರು ಆತನನ್ನು ತರುಬಿ ಅಡ್ಡಿ ಮಾಡುವಂತೆ – ರಂಗದಲ್ಲೆಲ್ಲಾ ಓಡಾಡುತ್ತಾರೆ. ಆ ಸಂದರ್ಭದಲ್ಲಿ 'ವೀರಭದ್ರ'ನಿಗೆ ಮೈದುಂಬುವೂ ಇದೆ. ಆತ ಮರಳಿ ಪ್ರಜ್ಞೆ ಪಡೆದ ಮೇಲೆ ತಟಸ್ಥನಾಗಿ ನಿಲ್ಲುತ್ತಾನೆ. ಆಗ ಮೇಳದವರು ಮಂಗಳಗೀತೆ ಹಾಡುವುದರೊಂದಿಗೆ ಮುಕ್ತಾಯವಾಗುತ್ತದೆ. ಇದೊಂದು ರೀತಿಯ ಒರಟಾದ, ಅಷ್ಟೇನೂ ಆಕರ್ಷಕವೆನಿಸದ ಪ್ರದರ್ಶನ ಎನ್ನಿಸುವುದುಂಟು.

ಈ ಮೇಳದ ಪ್ರಧಾನ ವೇಷ 'ವೀರಭದ್ರ'ನದಂತಿದ್ದರೂ ಇದು ಶೈವ ಪರಂಪರೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡದ್ದು ಅಲ್ಲ. ಇದನ್ನು ಪ್ರದರ್ಶಿಸುವವರು ಹಾಲುಮತಸ್ಥರು (ಪ್ರದರ್ಶನ ನೀಡಿದವರು "ಸೋವಾರದ ಕುರುಬರು"). ಈ ಕಲೆಯ ಹಿನ್ನೆಲೆಯಲ್ಲಿರುವುದು ತ್ರಿಪುರದಹನ ಕತೆಯಾದರೂ, ಅಂತ್ಯದಲ್ಲಿ ಆ ರಾಕ್ಷಸರ ಪತ್ನಿಯರು ಲಕ್ಷ್ಮಿದೇವಿಯರಾಗಿಯೂ, ವಿಷ್ಣು ಶ್ರವಣಬೆಳಗೊಳದಲ್ಲಿ ಗೊಮ್ಮಟನಾಗಿಯೂ ಪರಸ್ಪರ ಶಾಪದಿಂದ ಹುಟ್ಟಿದರೆಂದೂ, ಆ ಲಕ್ಷ್ಮಿ ದೇವರ ಆರಾಧನೆಯ ಅಂಗವಾಗಿ ಅವಳ ಈ ಗುಡ್ಡರು ಊರಲ್ಲಿ ಉತ್ಸವಾದಿ ಮಾಡಿದಾಗ ಕುಣಿಯುತ್ತಾ ಅವಳನ್ನು ಮೆರೆಸುತ್ತಾರೆನ್ನುತ್ತಾರೆ. ಹೀಗೆ, ಮೆರೆಸುವುದು ಲಕ್ಷ್ಮಿದೇವರನ್ನಾದರೂ, ಮೆರೆಸುವ ಗುಡ್ಡರು ಅಳವಡಿಸಿಕೊಂಡಿರುವ ವೇಷ–ಭೂಷಣ ವೀರಭದ್ರನದಾಗಿದೆ ! ಇನ್ನೂ ಮುಂದುವರೆದು, ಗಮನಿಸ ಬೇಕಾದದ್ದೆಂದರೆ, ಗ್ರಾಮದೇವತೆ ಮಾರಮ್ಮನ ಜಾತ್ರೆಯಲ್ಲಿ ದೇವರು ಮೆರೆಸುವಾಗ ಆಸಾದಿಗಳು ಮಾರಿಪುರಾಣ ಹೇಳುವುದರ ಜೊತೆಗೆ ಅಲ್ಲಲ್ಲಿ ಮಾರಿಯನ್ನು ಅಶ್ಲೀಲ ಹಾಡುಗಳ ಮೂಲಕ ನಿಂದಾಸ್ತುತಿ ಮಾಡುವ ಹಾಗೆ, ಈ ಗುಡ್ಡರೂ ಕೆಲವೊಮ್ಮೆ ಲಕ್ಷ್ಮಿಯನ್ನು ಅತ್ಯಂತ ಅಶ್ಲೀಲ ಶಬ್ದಗಳ ತ್ರಿಪದಿಗಳನ್ನು ಹಾಡಿ ಕೊಂಡಾಡುತ್ತಾರೆ. ಹೆಚ್ಚಿನ ವಿವರಕ್ಕೆ ಹಾಗೂ ಹಾಡುಗಳ ಮಾದರಿಗಾಗಿ ನೋಡಿ : ಡಾ। ಟಿ. ಗೋವಿಂದರಾಜು : ನಮ್ಮೋರು; ಪು. ೧೬೩–೧೬೪).

ಒಂದು ಹಾಡು ಹೀಗಿದೆ :

"ಸೋಬಾನನ್ನಿರೆ ಸೋಬಾನ ಎನ್ನಿರೆ
ಸೋಬಾನ ಎನ್ನಿ ಜನರೆಲ್ಲ ॥ ಪ ॥

ನಮ್ಮ ಸೋಬಾನಕೆ ಯಾರ್‍ಯಾರು ಬರಬೇಕು
ಕೋಗಲದುಲ್ಲಿ ಗಿಣಿಮೋಣಿ । ಸಂಗಾಟ
ರಾಗನಾಡ್ಯದೆ ಘನ ಗುಣ್ಣು ॥

ತಿಬ್ಬಲಹೂವ ತ್ಯಬ್ಬಿ ಪೂಜಿಸಿಕೊಂಡ
ಹೆಬ್ಬೆಟ್ಟದಲ್ಲಿ ನೆಲಗೊಂಡ । ಸಿಕರದ ಬಸವ
ಉಗ್ಗುಡಿ ಸೋಬನದ ಮತಿಕೊಡೊ ॥

ಮತಿಕೊಡೊ ಮಾದೇವ ಸತಿಕೊಡೊ ಸೋಮೇಲಿಂಗ
ಇದ್ಯವ ಕಲಿಸೋ ಹಿರಿಯೋನೆ । ಗೌರೀಯ
ಮುದ್ದಿನ ಕಂದ ಬೆನವಣ್ಣ ॥

ಕ್ವಾಣ ಕ್ವಾಟ್ಗೆಲಾದೆ ಗಾಣದಟ್ಟಿಲಾದೆ
ಮೋಣದೆಣ್ಣೀನ ತೊಡದಸೀಯ
ಮೋಣದೆಣ್ಣಿನ ತೊಡದಸಿ ತುಣ್ಣಪ್ಪರಾಯ
ಮೇಣಿನ ಕೆಳಗೆ ಹಸೆ ನಿಲ್ಲು ॥

ಬಂಡಿಬಂಡಿ ಮ್ಯಾಲೆ ಬಂದವ್ರೋ ದಿಬ್ಬಣ
ಒಂದೊಂದ ತುಣ್ಣೆ ನೊಗದುದ್ದ । ಹುಚ್ಚಮ್ಮ
ತಂದಾಕೆ ನಿನ್ನ ಮರದುಲ್ಲ ॥

ಅಲ್ಲಿ ಸರಸರ ಇಲ್ಲಿಯೇ ಸರ ಸರ
ಹುಲ್ಲೊಳಗೆ ಹಾವು ಸರ ಸರ । ಹುಚ್ಚಮ್ಮನ
ತುಲ್ಲೊಳಗೆ ತುಣ್ಣೆ ಸರ ಸರ ॥

ಅಲ್ಲಿ ಲೊಡಲೊಡ ಇಲ್ಲಿಯ ಲೊಡಲೊಡ
ಕಲ್ಲೊಳಗೆ ಬಂಡಿ ಲೊಡ ಲೊಡ । ಹುಚ್ಚಮ್ಮನ
ತುಲ್ಲೊಳಗೆ ತುಣ್ಣೆ ಲೊಡ ಲೊಡ ।
ಇನುವೊಂದು ಹರವಯ್ಯ ಪುರದೊಳಗೆಲ್ಲ
ದುಮ್ಮಿಸಾಲೆ ವಸವಂತಗಳ ॥

ಈ ತುಲ್ಲಿಗಿಂತ ಆ ತುಲ್ಲು ಮೇಲು
ಆ ತುಲ್ಲಿಗಿಂತ ಈ ತುಲ್ಲೆ ಮೇಲು
ಗೌರಿಯ ಮೇಲೆ ಗಂಗೆ ತಂದ ತುಲ್ಲ
ಗಂಗೆಯೆಂಬೋ ತುಲ್ಲ ಶಿವನ ಜಡೆಯೊಳಗಿಲ್ಲವೆ
ಇನುವೊಂದ ಹರವಯ್ಯ ಪುರದೊಳಗೆಲ್ಲ ॥

ನಿನ್ನ ಕೆಯ್ಯ ನಿನ್ನಕ್ಕಾನ ಕೆಯ್ಯ
ನಿನಗಿಂತ ಹಿರಿಯೋರ ಮದಲೇ ಕೆಯ್ಯ
ಯಾಕೇ ಕೇದೀ ಎಂದು ಮಾಕೊಂಡು ಬಂದರೆ
ನೂಕಿ ಕೇದೆ ನಿನ್ನ ಕ್ವಾಣೇಯ ತಕ್ಕ
ಇನುವೊಂದ ಹರವಯ್ಯ ಪುರದೊಳಗೆಲ್ಲ ॥

ಆಟಿನೊಳಗೆ ಹುಟ್ಟಿದ ಮಕ್ಕಳೆಲ್ಲ
ಬ್ಯಾಟಿರಾಯ ತಿಮ್ಮಪ್ಪನ ಹೆಸರು
ತಾಟಿಸಿ ಕೇದೇನ ಬಾಯೆಲ್ಲ ಹಾಟು
ಕೋಟೆ ಶಂಕರನ್ಯಾರು ಬ್ರಹ್ಮನ್ಯಾರಮ್ಮ
ದುಮ್ಮಿಸ್ಯಾಲೆ ವಸವಂತಗಳ ॥

(ಆಕರ : ನಮ್ಮೋರು; ಡಾ॥ ಟಿ. ಗೋವಿಂದರಾಜು; ೨೦೦೪)

# ವೀರಮಕ್ಕಳ ಹಾಡುಗುಣಿತ

ಹಾಡು ಮತ್ತು ಕುಣಿತ ಎರಡಕ್ಕೂ ಬಹುಮಟ್ಟಿಗೆ ಸಮಾನ ಅವಕಾಶ ಇರುವ ಪ್ರದರ್ಶಕ ಕಲೆಗಳ ಗುಂಪಿಗೆ ಸೇರುವ ಮತ್ತೊಂದು ಕಲೆ ವೀರಮಕ್ಕಳ ಕುಣಿತ.

ಈ ಕಲಾ ಪ್ರಕಾರ ಮಂಡ್ಯ ಜಿಲ್ಲೆಗೆ, ಅದರಲ್ಲಿಯೂ ಮಂಡ್ಯ ತಾಲೂಕಿಗೇ ಸೀಮಿತವಾದಂತೆ ಕಂಡುಬರುತ್ತದೆ. ಇನ್ನೊಂದು ವಿಶೇಷವೆಂದರೆ, ಇದು ಅಲ್ಲಿನ ಮಡಿವಾಳ ಶೆಟ್ಟಿ ಜಾತಿ ಸಮುದಾಯಕ್ಕೆ ಮೀಸಲಾದ ಕಲೆಯಂತೆಯೂ ಆಗಿರುವುದು. ಮಂಡ್ಯ ತಾಲೂಕಿನ ಮುದಗಂದೂರು ಕೊಡಿಯಾಲ ಮತ್ತು ಕೊತ್ತತ್ತಿಗಳಲ್ಲಿ ಮಡಿವಾಳ ಶೆಟ್ಟಿಗಳೇ ಈ ಕಲಾ ಪ್ರದರ್ಶನ ಮಾಡುವುದು. ಅದೇ ತಾಲೂಕಿನ ಹಲ್ಲೇಗೆರೆಯಲ್ಲಿನ ಬೆಸ್ತರೂ ಈ ಕಲೆಯನ್ನು ಪ್ರದರ್ಶಿಸ ಬಲ್ಲವರಾಗಿದ್ದಾರೆ. ಇದನ್ನೊಂದು ಅಪವಾದಾತ್ಮಕ ನಿದರ್ಶನ ಎನ್ನಬಹುದೇನೋ. ಬಹುಶಃ ಇವರು ಮಡಿವಾಳ ಕಲಾವಿದರ ಪ್ರಭಾವದಿಂದಲೇ ಅಭ್ಯಾಸ ಮಾಡಿಕೊಂಡಿರುವ ಸಾಧ್ಯಾತೆಯೂ ಇದೆ. ಶರಣ ಮಡಿವಾಳ ಮಾಚಿದೇವರ ಕಾಲದಿಂದಲೇ ಈ ವೀರಮಕ್ಕಳ ಕುಣಿತ ದೇವರ ಸೇವೆಯ ಒಂದು ಭಾಗವಾಗಿ ಹುಟ್ಟಿಕೊಂಡಿತೆಂದೂ, ಇಂಥಾ ಸೇವಾ ಕಾರ್ಯ ಮಾಡುತ್ತಿದ್ದುದರಿಂದಲೇ ತಮಗೆ ವೀರಮಡಿವಾಳರೆಂಬ ಹೆಸರು ಆಯಿತೆಂದೂ ಇವರು ಹೇಳಿಕೊಳ್ಳುವುದುಂಟು.

ಈ ಕಲಾ ಸಂಪ್ರದಾಯವನ್ನು ಈ ಸಮುದಾಯಕ್ಕೆ ಸೇರಿದವರು ಸಾಮಾನ್ಯವಾಗಿ ಚಿಕ್ಕವಯಸ್ಸಿನಿಂದಲೇ ಶ್ರದ್ಧೆ-ಭಕ್ತಿಯಿಂದ ಅಭ್ಯಾಸ ಮಾಡುತ್ತಾರೆ. ಕೊತ್ತತ್ತಿಯ ಮಡಿವಾಳ ಶೆಟ್ಟಿಗಳಲ್ಲಂತೂ ಹಬ್ಬ ಹರಿದಿನಗಳಲ್ಲಿ ಮನೆಗೊಬ್ಬರಂತೆ ಬಂದು ಕುಣಿತದಲ್ಲಿ ಸೇರಬೇಕೆಂದೂ, ತಪ್ಪಿದವರಿಗೆ ದಂಡ ವಿಧಿಸುವ ಪದ್ಧತಿ ಇರುವುದಾಗಿಯೂ ಹೇಳುವುದು ಈ ಕಲೆಯೊಂದಿಗೆ ಆ ಸಮುದಾಯದವರಿಗೆ ಬೆಳೆದುಬಂದಿರುವ ಬದ್ಧತೆಯ ಕುರುಹಾಗುತ್ತದೆ. ಬಟ್ಟೆ ಮಡಿ ಮಾಡುವುದೇ ಮೊದಲಾದ ತಮ್ಮ ಕುಲಕಸುಬಿನೊಂದಿಗೇ ಈ ಕಲಾ ಪ್ರದರ್ಶನವನ್ನು ಮಾಡುತ್ತಾರೆ.

ಕೊತ್ತತ್ತಿಯ ಹುಚ್ಚಮ್ಮನನ್ನು ತಮ್ಮ ಕುಲದೇವತೆ ಎಂದು ಆರಾಧಿಸುವ ಇವರು ಆ ದೇವತೆಯ ಜಾತ್ರೆ-ಉತ್ಸವಗಳಲ್ಲಿ ಅಲ್ಲದೆ, ಇತರ ಊರ ಹಬ್ಬ-ದೇವರುಗಳಲ್ಲಿಯೂ ಮೆರವಣಿಗೆ ಹೊರಟಾಗ ಮುಂದೆ ನಿಂತು – ಆಯಾ ದೇವರುಗಳ ಮೇಲೆ ಹಾಡಿ, ಕುಣಿದು, ಕೇಕೆ ಹಾಕುವುದು ಇವರ ಆರಾಧನಾ ಪದ್ಧತಿಯ ಒಂದು ಕ್ರಮವಾಗಿದೆ.

ಈ ಪ್ರದರ್ಶನ ತಂಡದಲ್ಲಿ ಸಾಮಾನ್ಯವಾಗಿ ೧೫ ಜನ ಕಾಸೆಕಟ್ಟುವವರು ಅರ್ಥಾತ್ ಕುಣಿತ ಮಾಡುವರಿದ್ದರೆ, ಹಿಮ್ಮೇಳದಲ್ಲಿ ಇಬ್ಬರು ಹಾಗೂ ಚಕ್ರಾದಿ ಬಳೆ,

ಉಯ್ಯಲು ತಮಟೆ, ನಗಾರಿ, ತಾರಸಿ ಹಾಗೂ ಕಂಸಾಳೆ ನುಡಿಸುವ ವಾದ್ಯದವರಿರುತ್ತಾರೆ. ತಲೆಗೆ ಬಿಳಿ ರುಮಾಲು, ಎದೆಗೊಂದು ಬಟ್ಟೆ, ಇಜಾರ, ಸೊಂಟಕ್ಕೆ ಕೆಂಪು ನಡುಕಟ್ಟು, ಬೆನ್ನಿಗೆ ಗೌನು, ಕಾಲಿಗೆ ಗೆಜ್ಜೆ ಹೀಗೆ ಸಾಂಪ್ರದಾಯಿಕ ವೇಷಭೂಷಣ ತೊಟ್ಟು, ಹಾಡು ಮತ್ತು ವಾದ್ಯದ ಗತ್ತಿಗೆ ಅನುಗುಣವಾಗಿ ಎರಡೆಜ್ಜೆ, ಮೂರೆಜ್ಜೆ, ತೆಗೆಜ್ಜೆ, ಆದಿತಾಳದೆಜ್ಜೆ, ಮೂರ್ನೆಕಾಲೇಟು, ತಟ್ಟೇಟು, ಸುತ್ತು ಕುಣಿತ ಮೊದಲಾದ ಬಗೆಗಳಲ್ಲಿ ಕುಣಿತ ಮಾಡುತ್ತಾರೆ.

ಕರಿಯ ನೇರಿಳೆ ಮರಕೆ ಕಲ್ಲು ಇಟ್ಟವರ್ಯಾರೊ
ಗುಂಪು ನೋಡಿ ಇಟ್ಟ ಗುರಿಕಾರ । ಮಾರವ್ವ
ನಿನ್ನ ವೀರಮಗ ಕೆಂಪು ನೋಡಿ ಇಟ್ಟ ಹವಳದಾ
ಕೀಕೀಕೀ...

– ಇದು ಇವರು ಹೇಳುವ ದೇವರ ಹೊಗಳಿಕೆಯ ಹಾಡುಗಳಲ್ಲಿ ಒಂದು ಮಾದರಿ. ಪ್ರದರ್ಶನದ ಅಂಗವಾಗಿ ಕುಣಿತದ ಹಾಡುಗಳನ್ನಲ್ಲದೆ, ಕೆಲವೊಮ್ಮೆ "ಕಟಿಕೆ"ಗಳನ್ನು ಹೇಳುತ್ತಾರೆ. ಈ 'ಕಟಿಕೆ'ಗಳು ವೀರಗಾಸೆ ಕುಣಿತ (ವೀರಭದ್ರನ ವೇಷ)ದವರ ಸಾಹಚರ್ಯದಿಂದ ಇವರಿಗೆ ಬಂದಿರುವ ಸಾಧ್ಯತೆ ಇದೆ. ಏಕೆಂದರೆ, ಅವನ್ನು ಹೇಳುವ ಕ್ರಮ, ಅಲ್ಲಿನ ವಸ್ತು ವಿಶೇಷಗಳಲ್ಲಿ ಇರುವ ಹೋಲಿಕೆ ಮೇಲ್ನೋಟಕ್ಕೇ ವೇದ್ಯವಾಗುತ್ತದೆ. ವೀರಭದ್ರನ ವೇಷದವರ ಜೊತೆ ಸೇರಿ ತಾವೂ ಕಟಿಕೆ ಹೇಳುವುದಾಗಿ ಈ ಕಲಾವಿದರು ಹೇಳಿದ್ದು ಇದನ್ನೇ ಸಮರ್ಥಿಸುತ್ತದೆ. ವೀರಗಾಸೆಯವರು "ಖಡ್ಗ" ಎಂದು ಹೇಳುವುದನ್ನೇ ಇವರು ಕಟಿಕೆ ಎಂದು ಹೇಳುತ್ತಾರೆ – ಎಂದರೆ ತಪ್ಪಾಗದು. ಇವರಲ್ಲದೆ ಗೊರವರು, ದಾಸಯ್ಯ ಮೊದಲಾದವರಲ್ಲಿಯೂ ಇದೇ ಬಗೆಯ ಅಭಿವ್ಯಕ್ತಿ ಇರುವುದು ಇಲ್ಲಿ ಸ್ಮರಣೀಯ.

ಗೊರವರು "ದೋಣಿಸೇವೆ" ಸಂದರ್ಭದಲ್ಲಿ "ಖಡ್ಗ"ಗಳನ್ನು ಹೇಳಿದರೆ ದಾಸಯ್ಯಗಳು ಮಣೇವು ಹಾಕುವಾಗ ವಿಶೇಷವಾಗಿ ಈ ಆರಾಧನಾ ಸ್ತೋತ್ರ ನುಡಿಗಳನ್ನು ಜೋರಾಗಿ ಹೇಳುತ್ತಾರೆ. ಮಿಕ್ಕೆಲ್ಲಾ ಸಂಪ್ರದಾಯದವು ಸಾಮಾನ್ಯವಾಗಿ ಶಿವ ಪರವಾದ ಸ್ತೋತ್ರ–ಪುರಾಣಗಳಾಗಿದ್ದರೆ ದಾಸಪ್ಪನವು ಸಹಜವಾಗಿಯೇ ನಾರಾಯಣ (ತಿರುಪತಿ ತಿಮ್ಮಪ್ಪ)ನ ಸ್ತುತಿ–ಪುರಾಣಗಳಾಗಿರುತ್ತವೆ. ಮತ್ತು ಇವರು ಈ ವಚನಗಳನ್ನು "ಪರಾಕು"ಗಳೆಂದು ಕರೆಯುತ್ತಾರೆ. ಹೇಳುವ ಕ್ರಮ, ಉದ್ದೇಶ–ಆಶಯ, ವಚನಗಳ ಸಂರಚನೆ ಬಹುಮಟ್ಟಿಗೆ ಏಕಪ್ರಕಾರವಾಗಿರುತ್ತದೆ. ಪಾರ್ವತಿಯನ್ನು ವಿವಾಹವಾಗಲು ಬಂದ ಶಿವನನ್ನು ಗಿರಿರಾಜನು ಹೀಯ್ಯಾಳಿಸಿದ್ದರಿಂದ ಸಿಟ್ಟಿಗೆದ್ದ ಶಿವ ಢಮರು, ಕೊಳಲು ಹಿಡಿದು ನಾಂಟ್ಯವಾಡುತ್ತಾನೆ. ಆಗ ಬಂದ ಹಣೆಬೆವರನ್ನು ಭೂಮಿಗೆ ಒಗೆದಾಗ ವೀರಭದ್ರ ಅವತರಿಸುತ್ತಾನೆ. ಇನ್ನು ಮುಂದೆ ನೀನು ವೀರಗಾಸೆಯಲ್ಲಿ ಇದನ್ನು ಹೇಳು ಎಂದು ಶಿವ ಆದೇಶಿಸುತ್ತಾನೆ. ಅದೇ "ಖಡ್ಗ" ಎಂಬುದು ಗೊರವರ ಕೆಂಚಮಲ್ಲಯ್ಯ ಅವರು ನೀಡಿದ ವಿವರಣೆ (ಸಂದರ್ಶನ: ೨೯–೭–೧೯೮೦, ಬೆಂಗಳೂರು). ಅಂದರೆ, ಇವರ ಸಂಪ್ರದಾಯಕ್ಕೂ ವೀರಗಾಸೆಯ

ಪ್ರಭಾವ ಇರುವುದು ಈ ಮೂಲಕ ಸೂಚಿತವಾಗುತ್ತದೆ. ಬಹುಶಃ ವೀರಗಾಸೆಯ ಪ್ರೇರಣೆಯಿಂದಲೇ ವೈಷ್ಣವ ಪಂಥದ ದಾಸಪ್ಪ ಪರಾಕು ಹೇಳುವ ಪದ್ಧತಿಯನ್ನು ರೂಪಿಸಿಕೊಂಡಿರಬಹುದು.

ಈ "ಖಡ್ಗ"ವೇ ಇತರ ಕೆಲ ಆರಾಧನಾ ಸಂಪ್ರದಾಯಗಳಲ್ಲಿ ಕಗ್ಗ, ಕಟಿಕೆ ಇತ್ಯಾದಿ ರೂಪಾಂತರವಾಗಿದೆ ಎನ್ನಬಹುದಾಗಿದೆ. ಸಂಸ್ಕೃತದ 'ಖಡ್ಗ'ವು ಪ್ರಾಕೃತದಲ್ಲಿ 'ಖಗ್ಗ' ಎಂದಾಗಿ, ಕನ್ನಡಕ್ಕೆ ಬಂದಾಗ 'ಕಗ್ಗ'ವಾಗಿದೆ ಎಂದು ಎಂ. ಚಿದಾನಂದಮೂರ್ತಿ ಅವರು ಹೇಳಿದ್ದಾರೆ (ನೋಡಿ: 'ಭಾಷಾ ವಿಜ್ಞಾನ ಮತ್ತು ಛಂದಸ್ಸು' ಸಂಪುಟ, ಪು. ೫೬೦). ಈ ಲೇಖನದಲ್ಲಿ ಅವರು ಬೇರೆ ಬೇರೆ ದೇವರನ್ನು ಮೆರೆಸುವಾಗಿನ ಹಾಡುಗಳಿಗೆ ಕಗ್ಗ ಎಂಬ ಹೆಸರು ಇರುವುದರ ಬಗೆಗೆ ಪ್ರಸ್ತಾಪಿಸಿದ್ದಾರೆ (ಆದರೆ, ಅವರು ಬರೆದಿರುವಂತೆ ಸೋಮನ ಮುಖವಾಡ ಇಟ್ಟುಕೊಂಡು ಕುಣಿಯುವವ ಸ್ವತಃ ಕಗ್ಗದ ಪದ ಹಾಡುವುದಿಲ್ಲ; ಸೋಮನನ್ನು ಕುಣಿಸುವಾತ ಹೇಳುತ್ತಾನೆ). ಚಿ.ಮೂ. ಅವರು ಹೇಳುವಂತೆ "ಕಗ್ಗ ಎಂದರೆ ಒಬ್ಬ ಮಹಿಮಾನ್ವಿತ ವ್ಯಕ್ತಿಯ (ಅಥವಾ ದೈವದ) ಸ್ತೋತ್ರರೂಪದ ಕಥನ ಗೀತವೆಂದು ಸ್ಪಷ್ಟವಾಗುತ್ತದೆ" (ಅದೇ ಪುಟ). ಕಗ್ಗದ ಪದಗಳಲ್ಲಿ ಕೆಲವೆಡೆ ಅಶ್ಲೀಲ ರಚನೆಗಳೂ ಇರುತ್ತವೆ. ದೇವರ ಹೊಗಳಿಕೆಯ ಶಿಷ್ಟತೆಯನ್ನು ಒಳಗೊಂಡಿದ್ದ ಈ ಪದಗಳನ್ನು ಕೆಲವು ವಿನೋದಕ್ಕಾಗಿ ಅಶ್ಲೀಲ ಹಾಡುಗಳಾಗಿಯೂ ಬದಲಿಸಿಕೊಂಡರು. ಗುಡ್ಡರಮೇಳದಲ್ಲಿಯಂತೂ ಕಲಾವಿದರು ವೀರಭದ್ರನಂತೆ ವೇಷ ಹಾಕಿ, ದಕ್ಷಯಜ್ಞದ ಕತೆಯನ್ನು 'ಖಡ್ಗ'ವಾಗಿ ಹೇಳಿದರೂ ತಮ್ಮ ಲಕ್ಷ್ಮೀದೇವರನ್ನು ಮೆರೆಸುವಾಗ ಅತ್ಯಂತ ಅಶ್ಲೀಲ ಭಾವದ ಹಾಡುಗಳನ್ನೇ ಹಾಡುತ್ತಾರೆ (ನೋಡಿ: ನಮ್ಮೋರು; ಡಾ। ಟಿ. ಗೋವಿಂದರಾಜು; ಪು. ೧೫೯–೧೬೫).

ಹೀಗೆ, 'ಕಗ್ಗ' ಪದವು ಕೇವಲ ವೀರಭದ್ರ ಮಾತ್ರವಲ್ಲ, ಯಾವುದೇ ಗ್ರಾಮದೇವತೆಯ ಸ್ತೋತ್ರ ಅಥವಾ ಕಥನ ಎಂಬ ಅರ್ಥವಿಸ್ತಾರ ಪಡೆದುಕೊಂಡುದಲ್ಲದೆ ಮುಂದೆ ಅಶ್ಲೀಲ ಹಾಡುಗಳಿಂದಾಗಿ ಹೀನಾರ್ಥಕ್ಕೂ ಬಳಸಾಗಿದೆ ಎಂಬ ಮಾತನ್ನು ಚಿದಾನಂದಮೂರ್ತಿಯವರು ಹೇಳಿದ್ದಾರೆ.

ಆರಾಧನಾ ಸಂಪ್ರದಾಯದ ಭಾಗವಾಗಿ ವಿವಿಧ ಪಂಥಗಳಲ್ಲಿ ಹುಟ್ಟಿಕೊಂಡಿರುವ ಹಾಡು ಅಥವಾ ವಚನ ಮತ್ತು ಕುಣಿತಗಳ ಸ್ವರೂಪ, ಅವುಗಳ ಪರಸ್ಪರ ಹೋಲಿಕೆ, ಪ್ರಭಾವ, ಭಿನ್ನತೆಗಳನ್ನು ಈ ಪಂಥಗಳು ಆ ಕಲಾಂಶಗಳನ್ನು ತನ್ನ ಉದ್ದೇಶಕ್ಕಾಗಿ ದುಡಿಸಿಕೊಂಡಿರುವ ಬಗೆಯನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ ವೀರಭದ್ರನ ಖಡ್ಗ, ಗೊರವರು ಹೇಳುವ 'ಖಡ್ಗ'ಗಳು, ದಾಸಯ್ಯಗಳು ಮಣೇವು ಹಾಕುವಾಗ ಹೇಳುವ 'ಪರಾಕು'ಗಳು (ಅರ್ಥಾತ್, ಖಡ್ಗ, ಕಗ್ಗ, ಕಟಿಕೆ, ಪರಾಕು ಮೊದಲಾದ ಸಂವಾದಿ ರೂಪಗಳನ್ನು) ಒಂದೆಡೆ ಸೇರಿಸಿ ಅಭ್ಯಾಸ ಮಾಡುವ ಅಗತ್ಯವಿದೆ. ಅಂತೆಯೇ, ಈ ಭಾಗದಲ್ಲಿ ಅಂತಹ ಕೆಲವು ಪಠ್ಯಗಳನ್ನು ಮಾದರಿಗಾಗಿ ಸಂಗ್ರಹಿಸಿ ಸೇರಿಸಿದೆ.

# ವೀರಮಕ್ಕಳ ಕುಣಿತ : ಕಲೆ ಮತ್ತು ಕಲಾವಿದರ ಹಿನ್ನೆಲೆ

ನಮ್ಮ ಬಹಳಷ್ಟು ಜನಪದ ಕಲೆಗೆ ಒಂದೊಂದು ಪೌರಾಣಿಕ ಹಿನ್ನೆಲೆ ಇರುವಂತೆ, ವೀರಮಕ್ಕಳ ಕುಣಿತಕ್ಕೆ ಒಂದು ಐತಿಹ್ಯ-ಪುರಾಣ ಇದೆ. ವಚನಕಾರರ ಕಾಲಕ್ಕೆ ಹೋಗುವ ಆ ಕತೆಯನ್ನು ಕಲಾವಿದರು ಇತಿಹಾಸದ ರೀತಿಯಲ್ಲಿ ನಿರೂಪಿಸುತ್ತಾರೆ. ಆ ಕಥಾನಕ ಹಾಗೂ ಕಲಾವಿದರ ಸಾಮಾಜಿಕ ಹಿನ್ನೆಲೆ, ಕಲಾ ಪ್ರದರ್ಶನ ಇತ್ಯಾದಿ ಕುರಿತಂತೆ ಅವರದೇ ಮಾತುಗಳಲ್ಲಿ ಇಲ್ಲಿ ದಾಖಲಿಸಿದೆ :

'ಮಡಿವಾಳ ಮಾಚಯ್ಯ ಈಶ್ವರನ ಬೆವರಲ್ಲಿ ಹುಟ್ಟಿದೋನು. ಆತನೇ ಈರಭದ್ರ, ಕಲ್ಯಾಣಪಟ್ಟಣದಲ್ಲಿ ಮಡಿವಾಳ ಮಾಚಯ್ಯನಾದ. ಅವನ ಕುಲದೋರು ನಾವು.

ಮಡಿವಾಳ ಮಾಚಿದೇವರು, ಮಲ್ಲಿಗೆ ಮಾದೇವಿ ಬಸವಣ್ಣೋರಿಗೆ ಮಡಿ ಮಾಡಿಕೊಡ್‌ತಿದ್ದರು. ಲಕ್ಷದ ತೊಂಬತ್ತಾರು ಗಣಂಗಳಿಗೆಲ್ಲಾ ಲಿಂಗದ ಮಡಿ ಕೊಡ್‌ತಿದ್ದರು. ಒಂದಾನೊಂದು ದಿವ್ಸದಲ್ಲಿ ಬಸವಣ್ಣೋರು ಮಡಿಯಾಗಿದ್ರು; ಬಿಜ್ಜಳರಾಯ ಮೈಲಿಗೆ ಥರಾ ಕಾಣ್ತಾ ಇದ್ರು, ಆಗ, ಮಂತ್ರಿಯಾದ ಬಸವಣ್ಣಾ ಮಡಿಯಾಗಿದ್ದಾರೆ; ದೊರೆಯಾದ ನಾನು ಬಿಜ್ಜಳರಾಯ – ಮೈಲಿಗೆ ಥರಾ ಕಾಣ್ತಾ ಇದ್ದೀನಲ್ಲಾ – ಅಂತ, ಬಿಜ್ಜಳರಾಯನಿಗೆ ಮಡಿ ಮಾಡಿಕೊಡಬೇಕು ಅಂತ ಕೇಳಿದಾಗ, ಮಾಚಿದೇವರು, ಲಿಂಗವಂತರಿಗಲ್ಲದೆ ಮತ್ತೊಬ್ಬರಿಗೆ ಮಡಿ ಮಾಡುವುದಿಲ್ಲ – ಅಂತ ದ್ವಾರಪಾಲಕರಿಗೆ ಹೇಳಿಕಳಿಸಿದಾಗ, ಅವರು ಬಂದು ಹಂಗೇ ಹೇಳ್ತಾರೆ. ಆವಾಗ ಇರಲಿ; ಬಸವಣ್ಣೋರಿಗೆ ಮಡಿ ಮಾಡಿ ತೆಗೆದುಕೊಂಡು ಹೋಗೋ ಕಾಲದಲ್ಲಿ – ಬರುವ ಮಾರ್ಗದಲ್ಲಿ ಅಡ್ಡಲಾಗಿ ಲಿಂಗದ ಮಡಿಯನ್ನು ಮುಟ್ಟಲು, ಆ ಮಾಚಿದೇವರು, ಲಿಂಗದ ಮಡಿಯ ಗಂಟನ್ನು ಆಕಾಸಕ್ಕೆಸೆಯಲು, ಗಂಟು ಆಕಾಸದಲ್ಲೇ ನಿಂತುಕೊಂಡುಬಿಡ್ತು. ಆಗ, ನೀನು ಮಹಾಸರಣ ಅಂತ ಬಿಜ್ಜಳರಾಯನು ಮಾಚಿದೇವರಿಗೆ ಸರಣಾದನು. ಆಗ ಮಾಚಿದೇವರು ಕೋಪದಿಂದ ಸದೆಬಡಿದು ಬಸವಣ್ಣಾರ ಹತ್ರ ಹೋಗಲು ಆವಾಗ ಜಂಗಮರೆಲ್ಲ ರಕ್ತಾಕಾರವಾಗಿ ಮೈಲಿಗೆಯಾದರು. ಆವಾಗ ಬಸವಣ್ಣೋರ ಹತ್ರ ಹೋಗಿ ಮಾಚಿದೇವರು ಸರಣು ಬಸವಣ್ಣ ಅಂದರು. ಬಸವಣ್ಣನವರು ಸರಣು, ಸರಣು ಮಾಚಿದೇವರು ಅಂದು ಬಿಟ್ರು – ಎಲ್ಡು ಸಲ. ಸ್ವಾಮಿ, ನಾನು ಒಂದು ಸಾರಿ ಸರಣು ಅಂದ್ರೆ, ನೀವು ಎಲ್ಡು ಸಾರಿ ಸರಣು ಅಂದ್ರಲ್ಲಾ ! ಈ ಸಾಪ ಇಮೋಚನೆ ಆಗಾಕೆ ಏನು ಮಾಡೋದು ? ಅಂದ್ರು, ಆವಾಗ ಬಸವಣ್ಣೋರು ಲಕ್ಷದ ತೊಂಬತ್ತಾರು ಗಣಂಗಳ ಬಟ್ಟೇನ ನೀರಿನಲ್ಲಿ ಅಜ್ಜಿ ಮಡೀ ಮಾಡಾಕಿಲ್ಲ; ಉಬ್ಬೇಲಿ ಸುತ್ತಿ ಬೇಯಿಸೋವಂಗಿಲ್ಲ; ಹೇನುಕೂರೆ ಸಾಯುವಂಗಿಲ್ಲ – ಹಂಗೆ ಲಿಂಗದ ಮಡಿ ಮಾಡಿ ನೀನು ಕಲ್ಯಾಣ ಪಟ್ಟಣಕ್ಕೆ ಬಾ; ಆವಾಗ ಕಲ್ಯಾಣ ಪಟ್ಟಣದ ದ್ವಾರದಲ್ಲಿ ನಿನ್ನ ಸಿಲೆಯಾಗಿ ನಿಲ್ಸಕಂತೀನಿ – ಅಂದ್ರು,

ಆವಾಗ ಮಾಚಿದೇವರು ಯೆಂಡ್ತಿಯ ತಲೇಯ ಬಾನಿ ಮಾಡಿ, ಬೆನ್ನ ಒಗಿಯೋ ಕಲ್ಲು ಮಾಡಿ, ಅವಳ ರಕ್ತಕಾರದಿಂದ ಮಡಿ ಮಾಡಿ ತಂದಿದ್ದೀನಿ, ಸ್ವಾಮಿ, ಅಂದಾಗ, ಓರ್ವನೇ ತಂದರೆ ಒಪ್ಪಿಸಿಕಳ್ಳಾದಿಲ್ಲ; ನೀವು ಇಬ್ರೂ ಬರಬೇಕು-ಅಂದ್ರು, ಆವಾಗ ನನ್ನ ಸತಿ ಇಲ್ಲ, ಸ್ವಾಮಿ-ಅಂದಾಗ, ಮೂರ್ ಸಾರಿ ಮಲ್ಲುಗು ಮಾದೇವಿ ಅಂತ ಕೂಗಬೇಕು-ಅಂದರು. ಆವಾಗ ಹಂಗೆ ಕೂಗಿದಾಗ ಪ್ರತ್ಯಕ್ಷ ಆಗಿ ಬಂದು, ಪತೀನ್ನ ನೋಡಿ, ಬಸವಣ್ಣೋರ ನೋಡಿ, ಪಕ್ಕಂತ ಬಾಯಿ ಬಿಟ್ಟಾಗ ಬಾಯಲ್ಲಿ ಮಲ್ಲಿಗೆ ಊವ ಸುರಿದೋ ! ಅದಕೇ ಆಕೆಗೆ ಮಲ್ಲುಗು ಮಾದೇವಿ – ಅಂತ ಹೆಸರಾಯ್ತು.

* * * *

ನಮ್ಮ ಊರಲ್ಲಿ ದೇವರ ಜಾತ್ರೆ, ಬೀರೇಶ್ವರ ಪರ, ಕುಲದೇವರು ಹುಚ್ಚಮ್ಮನ ಮೆರವಣಿಗೆ – ಇಂಥಾ ಸಂದರ್ಭದಲ್ಲಿ, ಪಕ್ಕದ ಮತ್ತಳ್ಳಿ ಸಿದ್ಧೇಶ್ವರಕೊಂಡ, ಪೀಹಳ್ಳಿ ಬೋರೇದೇವರ ಉತ್ಸವ, ಹುಲ್ಲುಕೆರೆ ಮುದ್ದಮ್ಮನ ಕರಗ.... ಇಂಥಾ ಸಂದರ್ಭದಲ್ಲೆಲ್ಲಾ ಹೋಗಿ ವೀರಮಕ್ಕಳ ಕುಣಿತ ಮಾಡ್ತೀವಿ. ನಾವು ಹಲವಾರು ಗ್ರಾಮಗಳಿಗೆ ಹೋಗ್ತೀವಿ. ಆ ಊರಿನ ದೇವರ ಮೇಲೆ ಹಾಡ್ತೀವಿ. ಮಂಡ್ಯ ತಾ। ಕೆರಗೋಡುನಲ್ಲಿ ದೈತಮ್ಮ – ಆ ದೇವರಿಗೆ ಬಯ್ಯೋದು ಉಂಟು. ನಾವು ಆ ಅಭ್ಯಾಸದೋರು ಅಲ್ಲ.

ವಾದ್ಯ, ಹಾಡು, ಕುಣಿತ-ಎಲ್ಲಕ್ಕೂ ಮಡಿವಾಳರೇ. ತಮಟೇನೂ ನಾವೇ ಬಡಿಯೋದು. ದೊಡ್ಡ ಮೆರವಣಿಗೆಗಳಿಗೆ ಹರಿಜನರೇ ತಮಟೆ ಬಡಿಯಲು ಬರ್ತಾರೆ.

ಚಕ್ರಾದಿ ಬಳೆ-ಎರಡು, ಉಯ್ಯಲು ತಮಟೆ-ನಾಲ್ಕು, ಕಾಯಿ ನಗಾರಿಕಾಯಿ-ಎರಡು, ತಾರಸಿ-ಒಂದು, ಕಂಸಾಳೆ ಬಟ್ಟಲು-ಒಂದು, ಕಾಲಿಗೆ ಗೆಜ್ಜೆ, ಕೈಗೆ ಗಗ್ಗರ, ತಲೆಗೆ ಬಿಳಿ ರುಮಾಲು, ನಡುವಿಗೆ ನಡುಕಟ್ಟು, ತೊಡೆಗೆ ಈಜಾರ, ಬೆನ್ನಿಗೆ ಗೌನು, ಎದೆಗೆ ಎದೆಬಟ್ಟೆ-ಇವು ನಮ್ಮ ವೇಷ. ಕಾಸೆ ಕಟ್ಟಿದವರು ೧೫ ರಿಂದ ೨೦ ಜನ ಇರ್ತಾರೆ. ಚಿಕ್ಕವರಿದ್ದಾಗಿನಿಂದಲೇ ಕಲಿಯಲು ಶುರು ಮಾಡ್ತಾರೆ.

'ನಾವು ಪಕ್ಕದೂರಿಗೆ ಆದರೆ ಒಂದರಿಂದ ಒಂದೂವರೆ ಸಾವಿರ ದೂರದ ಊರಿಗೆ ಆದರೆ-ಎರಡು ದಿನದ ಕೆಲಸ ಕೆಡ್ತದೆ-ಅದಕ್ಕೇ ಐದರಿಂದ ಹತ್ತು ಸಾವಿರ ಕೇಳ್ತೀವಿ.

**ಮಾಹಿತಿ :**

ಯಜಮಾನ್ ಸಿದ್ಧಯ್ಯ, ೮೦ ವರ್ಷ, ಅಕ್ಷರಸ್ಥರು
ಪುಟ್ಟರಸಯ್ಯ (೫೮), ಅನಕ್ಷರಸ್ಥ
ಈರಣ್ಣ (೩೫), ೫ನೇ ತರಗತಿ,
ಪುಟ್ಟಸ್ವಾಮಿ (೪೦), ೬ನೇ ತರಗತಿ
ಎಲ್ಲರೂ ಮಡಿವಾಳ ಸಮುದಾಯದವರು.
ಕೊತ್ತತ್ತಿ (ಅಂಚೆ), ಮಂಡ್ಯ ತಾ.
ಸಂಗ್ರಹ : ೧೨-೦೨-೨೦೦೫, ಜಾನಪದಲೋಕ (ರಾಮನಗರ)
ಸಂ. : ಟಿ. ಗೋವಿಂದರಾಜು.

**ಚಕ್ರಾದಿ ಬಳೆ** : ವೀರಮಕ್ಕಳು ತಮ್ಮ ಹಾಡು-ಕುಣಿತಗಳಿಗೆ ಸಾಥಿಯಾಗಿ ಬಳಸುವ ವಾದ್ಯದ ಹೆಸರು ಚಕ್ರಾದಿ ಬಳೆ. ಇದನ್ನು ತಯಾರಿಸುವ ಕ್ರಮ ಹೀಗಿದೆ: ಮೊದಲು ಜೇಡಿ ಮಣ್ಣಿನಿಂದ (ಸುಟ್ಟು) ಒಂದು ಬಳೆಯ ಆಕಾರ ಮಾಡುವುದು. ಆ ಬಳೆಯು ಮುಂಭಾಗದಲ್ಲಿ ಸು. ಒಂದೂ ಮುಕ್ಕಾಲು ಅಡಿ ಅಗಲ; ಬಾಯಿ ಅಂದರೆ ಹಿಂಭಾಗ ಸು. ಒಂದು ಅಡಿ ಅಗಲವಾಗಿರಬೇಕು. ಆಮೇಲೆ ಅದಕ್ಕೆ ಚರ್ಮ ಅಳವಡಿಸುವ ಕ್ರಿಯೆ: ಎರಡು ಅಥವಾ ಮೂರು ಸೂಲು ಹಾಕಿದ (ಮರಿ ಹಾಕಿದ) ಮೇಕೆಯ ಚರ್ಮ ಹೊಟ್ಟೆ ಭಾಗದಲ್ಲಿ ದೊಡ್ಡದಾಗಿ ಬೆಳೆದಿರುತ್ತದೆ. ಅಂತಹ ಮೇಕೆಯ ಚರ್ಮವನ್ನು ಹೊಟ್ಟೆಯ ಭಾಗದಲ್ಲಿಯೇ (ಬೆನ್ನಿನ ಕಡೆ ಅಲ್ಲ) ನೇರಕ್ಕೆ ಸಿಗಿದು, ಕಾಲುಗಳ ಭಾಗ ಹಿಡಿದು ಎಳೆದು, ಬಿಗಿಯಾಗಿ ಅಗಲಿಸಿ ಹರಡಿ, ಸುತ್ತಲೂ ಮೊಳೆಗಳನ್ನು ಹೊಡೆಯಬೇಕು. ಇರುವೆ ಬರದಂತೆ ಆ ಚರ್ಮದ ಸುತ್ತಲೂ ಹಾಗೂ ತೇವಾಂಶ ಹೀರುವಂತೆ ಚರ್ಮದ ಮೇಲೆಯೂ ಬೂದಿ ಹಾಕುತ್ತಾರೆ. ಅದೇ ಸ್ಥಿತಿಯಲ್ಲಿ ಎರಡು ದಿನ ಬಿಸಿಲಲ್ಲಿ ಒಣಗಿದ ಮೇಲೆ ಗಾಜು ಅಥವಾ ಚೂರಿಯಿಂದ ಚರ್ಮಕ್ಕೆ ಸೀಳು ಆಗದಂತೆ ಎರೆಯುತ್ತಾರೆ. ಆ ಚರ್ಮವನ್ನು ಒಂದು ದಿನ ನೀರಿನಲ್ಲಿ ಉನಿ(ನೆನೆ)ಹಾಕಿ, ಬಳಿಕ ಆರಿಸಬೇಕು. ಬೆಳಿಗ್ಗೆ ಮುರಲೆ ಸೊಪ್ಪು ತಂದು, ಅದನ್ನು ಕಲ್ಲಿನಲ್ಲಿ ಅರೆದುಕೊಳ್ಳಬೇಕು. ಹೈನುರಾಗಿಯಿಂದ ಹಿಟ್ಟು(ಮುದ್ದೆ) ಮಾಡಿ, ಅದನ್ನು ಆ ಸೊಪ್ಪಿನೊಂದಿಗೆ ಅರೆದು ಸರಿ ಮಾಡಕೊಳ್ಳಬೇಕು.

ಈ ಸರಿಯನ್ನು ಮಣ್ಣಿನ ಬಳೆಯ ಸುತ್ತಲೂ ಸವರಿ, ಅದರ ಮೇಲೆ ಈ ತೇವ ಆರಿಸಿದ ಚಕ್ಕಳವನ್ನು ಇಟ್ಟು-ನಾಲ್ಕು ಜನ ಒಂದೇ ಕಾಲಕ್ಕೆ-ಸುತ್ತಲೂ ಬಿಗಿಯಾಗಿ ಎಳೆದು ಒತ್ತಬೇಕು. ಆಮೇಲೆ ಒಬ್ಬ ತನ್ನ ತೊಡೆಗಳ ನಡುವೆ ಆ ಬಳೆಯನ್ನು ಇರುಕಿಸಿ ಇಟ್ಟುಕೊಂಡು ಕುಳಿತು, ಚೂರಿಯಿಂದ ಆ ಚರ್ಮದ ಮೇಲ್ಭಾಗವನ್ನು ಬಿಗಿಯಾಗಿ ಒತ್ತಿ ಒಳಕ್ಕೆ ನೀವಬೇಕು ಮತ್ತು ಹಾಗೆ ಒತ್ತುತ್ತಾ, ಬಳೆಯ ಒಳಭಾಗಕ್ಕೆ ಸವರಿದ ಸರಿಗೆ ಈ ಚರ್ಮದ ಅಂಚನ್ನು ಅಂಟಿಸಬೇಕು. ಹಾಗೆ ಮಾಡಿದ ಮೇಲೆ ಅದನ್ನು ಒಂದು ರಾತ್ರಿಕಾಲ ಗೋಡೆಗೆ ನೇತುಹಾಕಬೇಕು ಅಥವಾ ಮನೆಯಲ್ಲಿ ನೆರಳಲ್ಲಿ ಇಟ್ಟು ಮೇಲೆ ಹೆಡಿಗೆ ಮುಚ್ಚಬೇಕು. ಬಳಿಕ, ಬಳೆಯ ಒಳಭಾಗಕ್ಕೆ ಬಟ್ಟೆ ಮುಚ್ಚಿ, ಬಾಯಿಭಾಗ ಮೇಲೆ ಮಾಡಿ ಬಿಸಿಲಿಗೆ ಇಟ್ಟರೆ, ಬಳೆಯ ಸುತ್ತಲೂ ಒಣಗಿ ಬಿಗಿಯಾಗುತ್ತದೆ. ಬಳಿಕ ಚರ್ಮದ ಮುಂಭಾಗವನ್ನು ಬಿಸಿಲಲ್ಲಿರಿಸಿ ಒಣಗಿಸಿದರೆ ಚರ್ಮ ಮತ್ತಷ್ಟು ಬಿಗಿಯಾಗಿ ಅಂಟಿಕೊಳ್ಳುತ್ತದೆ. ಮಣ್ಣಿನ ಆ ಬಳೆಯಲ್ಲಿ-ಸುಡುವ ಮೊದಲೇ ಎರಡು ರಂಧ್ರ ಮಾಡಿರುತ್ತಾರೆ. ಚರ್ಮ ಹೊದಿಸುವಾಗ ಮುಚ್ಚಿದ ಚರ್ಮ ಕೊರೆದು, ರಂಧ್ರಗಳಿಗೆ ದಾರ ಹಾಕಿಕೊಳ್ಳುತ್ತಾರೆ.

ಹೀಗೆ ಹೊಸದಾಗಿ ಸಿದ್ಧಪಡಿಸಿದ ಚಕ್ರಾದಿ ಬಳೆಯನ್ನು ಆಗಲೇ ಒಮ್ಮೆಯಾದರೂ ಬಡಿದು, ಸಡಿಲ ಮಾಡಬೇಕು. ಇಲ್ಲವಾದರೆ, ಚರ್ಮ ಬಿಗಿ ಬಂದು ತಾನಾಗಿ ಒಡೆದುಹೋಗುತ್ತದೆ.

# ವೀರಮಕ್ಕಳ ಕುಣಿತದ ಹಾಡುಗಳು

**ಮೊದಲನೆಯ ಅಂಕ**

ಸರಸ್ವತೀ ತಾಯೆ ಮದಿವಾಗಲೆಂದು
ಸುರರೆಲ್ಲ ಕೂಡಿ ಸಾಸಿವೆಯನಿಕ್ಕಲು
ವರಮುನಿಗಳು ಕೊಟ್ಟು ಅಮೃತವಾಗಲಮ್ಮ ।

ಉಟ್ಟಳು ಬಟ್ಟಾವಳಿಯಂ
ತೊಟ್ಟಳೇ ನವರತ್ನದ ತೊಡಿಗೆಯ ಕಂಠಾಭರಣಂ
ಕೈಯಲ್ಲಿ ಪುಸ್ತಕವಂ ಪಿಡಿದರೆ
ಶ್ರೀರಾಮದೇವಿಯ ಪಾದಪೂಜೆಗೆ ನಮಸ್ತೇ ನಮೋss ॥

ಆರು ಬಳ್ಳಕ್ಕಿ ಎಸರು ಬೇಳೆ
ಮೂರು ಬಳ್ಳಕ್ಕಿ ಎಸರು ತ್ವಾವೆ
ಒಂಬತ್ತು ಬಳ್ಳ ನೀರು ಮಜ್ಜಿಗೆ
ಅರಿವೆದಂಟು ಒಂದಳ್ಳಿಗೆ ಸಾಲದೆಂಬ
ವಟ್ಟೆಯ ಬಿನsಕss ॥

ಮತಿಕೊಡೋ ಮಾದೇವ ಸುತಿಕೊಡೋ ಸಾದೇವ
ಇದ್ದಿ ಬುದ್ದಿ ಕಲಿಸ್ತಂತೋರ್‍ಯಾರು ವಿಗ್ನೇಸ್ವರನು
ಸ್ವಾಮಿ ಓದುವs ಮಠದೋಳಗಿರ ಬಾಲೆ ॥

ಓದುವ ಮಠದೊಳಗೆ ಬಿನುವಣ್ಣರಾಯ
ಸ್ವಾಮಿ ಓದುವs ಮಠದೊಳಗಿರ ಬಾಲೆ ॥

ಗುಡಗುಡಿ ಗುಟ್ಟಿತ ಬಂದಾವನ
ಗುಂಡಿಗೆ ಪಾವಾsಡ ಗೆದ್ದಾವನ
ಇಂತ ನೆಂಬಿದ ಶಿವಭಕ್ತರಿಗೆ
ಅಂಜರಿಪಂಜಾರಿಗೊಲಿದ್ಯಾವನಾ ॥

ಆಲುಮಜ್ಜನ ದೊಡಿಯಾವನ
ಸಾಲುದುರಿತದ ಗಂಡsನ
ಇಂತನೆಂಬಿದ ಶಿವಭಕ್ತರಿಗೆ
ಅಂಜರಿ ಪಂಜಾರಿಗೊಲಿದsವನ ॥

ವೀರನ ಕರಗು ತೋರೋ । ಗಂಗೂಡಿ
ವೀರನ ಕರಗು ತೋರೋ
ಇಂತ ಪ್ರಾಣದಲ್ಲೊಬ್ಬನ ಸಾಮಂತಿ ವೀರsನ
ಕಾಣದೇನಿಲ್ಲವೇನೋ ॥

ಉಬ್ಬರಿಕೆ ಕಂಬಗೊsಳು–ಉಚ್ಚಮ್ಮನಿಗೆ
ಜಪ್ಪುವ ಪಲ್ಲಕ್ಕಿಯೋ
ಕೆಂಚೂಗು ಆರುತಿಯೇ–ಕ್ಯಾತಮ್ಮನಿಗೆ
ಮಿಂಚುವ ಪಲ್ಲಕ್ಕಿಯೇ
ಇಂತ ಕೆಂಪಯಾರೈಬೋಗ ಆದಿಬೀರಯ್ಯನಿಗೆ
ಜಾಣ ಬೀದಿಗೆ ಬsರಲೋ ॥

ಮಲ್ಲಿಗೆ ಊವಿನ ಸಾರವೋ–ಮಲ್ಲಣ್ಣನಿಗೆ
ಮರಗದ ಗಮಗಮಲೋ
ಜಾಜಿ ಊವಿನ ಸಾರವೋ–ಬ್ಯಾಲಮ್ಮನಿಗೆ
ಜವನದ ಗಮಗಮವೋ

ಸಂಪಿಗೆ ಊವಿನ ಸಾರವೋ–ಮಾರಮ್ಮನಿಗೆ
ತಂಪತ್ತಿನ ವಾಲಿಗವೋ
ಇಂತ ಕೆಂಪಯಾರೈಬೋಗ ಆದಿ ಬೋರೇಲಿಂಗು
ಜಾಣ ಬೀದಿಗೆ ಬರಲೋ ॥

(ಈವರೆಗಿನ ಹಾಡಿನ ಭಾಗವನ್ನು "ಮೊದಲನೆಯ ಅಂಕ" ಎಂದು ಉಲ್ಲೇಖಿಸಿದ ಗಾಯಕ, ಇದನ್ನು ಹಾಡುವಾಗಿನ ಸಂದರ್ಭ ಹಾಗೂ ಉದ್ದೇಶದ ಬಗೆಗೆ ಹೇಳಿದ್ದು ಹೀಗೆ: ಕಲಾವಿದರು ಒಮ್ಮೆ ಕುಣಿತ ಮಾಡಿ ನಿಲ್ಲಿಸಿದ ಮೇಲೆ ಈ ಮೊದಲ ಅಂಕದ ಚರಣಗಳನ್ನು ಹಾಡಲಾಗುತ್ತದೆ. ಹಾಡುಗಾರರು ಹಾಡುತ್ತಿರುವಾಗ ವಾದ್ಯದವರು 'ಬಳೆ' ವಾದ್ಯವನ್ನು ಕಾಯಿಸಿ, ಹದ ಮಾಡುತ್ತಿರುತ್ತಾರೆ. ಕಾಸೆಕಟ್ಟಿದವರು ಮುಮ್ಮೇಳದೊಂದಿಗೆ ದನಿ ಇಕ್ಕುತ್ತಾರೆ ಅಥವಾ ಸುಮ್ಮನೇ ನಿಂತಿರುತ್ತಾರೆ. ದೇವರ 'ಪೂಜೆ' ಊರ ಬೀದಿಯಲ್ಲಿ ಮೆರಕೊಂಡು ಬರಲಿ–ಮೆರವಣಿಗೆ ಬರುವಾಗ – ಎಂದು ತಮ್ಮ ಊರಿನ ನಾಲ್ಕೂ ದೇವತೆಗಳ ಹೆಸರು ಮೇಲೆ ಈ ಪದಗಳನ್ನು ಹಾಡಲಾಗುತ್ತದೆ. ಇದಾದ ಮೇಲೆ ಗಣೇಶನ ಸ್ತುತಿಯನ್ನು ಹಾಡುವಾಗ ಮತ್ತೆ ಕುಣಿತ ಮಾಡಲಾಗುತ್ತದೆ) :

ಸರಣು ಸರಣು ಸದಾಸಿವಾ ಸುತ
ಸರಣು ಶ್ರೀ ಗಣನಾಯಕಾs–ನಮ್ಮ
ದೇವ ಪಾರ್ವತಿ ಸಾಯಕ
ವಾಸ ಮೋದಕ ಪದಕ ಸರಪಣಿ
ವಾಸ ಪಾರ್ವತಿ ನಂದನ

ಧಿಮಕು ಧಿಮಕು ಮಂಗಳಾರತಿ
ದಿನಕೆಯೋಳು ಪೂಜೆಯು
ಮಂಗಳಾರತಿ ಎತ್ತಿರಮ್ಮ–ಸು
ರಂಗಕರ ಸಿವಲಿಂಗಕೆ

ಎರಡು ಕೈಯಲಿ ಮುರಡಿ ಸರಪಣಿ
ಬೆರಳಿನುಂಗುರ ಧರಿಸಿದ
ಕಾಮಿತಾ ಫಲದಾಯಕ
ಸರಣು ಸರಣು ಸದಾಸಿವಾ ಸುತ.....

(ಹೀಗೆ ಮೇಳದೊಂದಿಗೆ ಹಾಡುತ್ತಾ "ಎರಡನೇ ಕಾಲಿನ ಹೆಜ್ಜೆ ಕುಣಿತ" ಮಾಡಲಾಗುತ್ತದೆ).

ನಮ್ಮಮ್ಮ ಸಾರದೆ ಉಮಾಮಹೇಸ್ವರಿ
ನಮ್ಮೊಳಗಿವನ್ಯಾರಮ್ಮ । ನಮ್ಮಮ್ಮ......
ಯಾಸುಳ್ಳ ಬಕ್ತರ ಸಲಹುವ ನಿವನಮ್ಮ
ಧೀರ ತಾ ಗಣನಾಥನು

ಉಟ್ಟದಟ್ಟಿಯು ಕಾಸೆ ಬಿಗಿದುಟ್ಟ ಚಲ್ಲಣ
ದಿಟ್ಟದೋನಿವನ್ಯಾರಮ್ಮ – ಓ ಯಮ್ಮಾ
ದಿಟ್ಟದೋನಿವನ್ಯಾರಮ್ಮ

ಮೋರೆ ಕಪ್ಪಿನ ಭಾವ ಮರದsಗಲದ ಕಿವಿ
ಕೋರೆ ದವಡೆ ಇವನ್ಯಾರಮ್ಮ
ಲೇಸಾದಿ ಜನರನ್ನು ಸಲಹುವ ನಿವನಮ್ಮ
ಧೀರ ತಾ ಗಣನಾಥನು

ಪಟ್ಟದರಾಣಿ ಪಾರ್ವತಿಯ ಕುಮಾರನು
ವಟ್ಟೆಯ ಗಣನಾಥನು

ಕಾಸಿ ವಿದ್ಯೆನು ಬಲ್ಲ ರಮಣಿಯೆಂಬನು ವಲ್ಲ
ಲೇಸಾದಿ ಗಣನಾಥನು

(– ಇದನ್ನು ಹಾಡುವಾಗ "ಮೂರನೇ ಕಾಲಿನ ಕುಣಿತ" ಮಾಡಲಾಗುತ್ತದೆ.)

ವಕ್ಕಲು ನಂದಾನಪುರ – ಅಕ್ಕಯ್ಯ
ನೀವು ಕೇಳಿರಿ
ಮಿಕ್ಕ ಜಾತಿಗಳಂತೆ ಕಾಕು ಮಾಡುವಳಲ್ಲ
ವಕ್ಕಲು ನಂದಾನಪೂರ – ಅಕ್ಕಯ್ಯ
ನೀವು ಕೇಳಿರಿ

"ದುಂಡ ಮುತ್ತು ಕೆಂಡಪಿಡಿದು
ಕೊಂಡಾಡುವ ಕೃಷ್ಣನ
ವಕ್ಕಲು ನಂದಾನ ಪೂರ.....

ಧರೆಯಾಗಧಿಕ ಮರನ ಪುರನ
ಇರುವ ಶ್ರೀ ನಾರಸಿಮ್ಮ ವಕ್ಕಲು....

(– ಇದು "ಸುತ್ತಕುಣಿತದ ಹೆಜ್ಜೆ"ಯೊಂದಿಗೆ ಹಾಡುವುದು.)

ಮುಟ್ಟದಿರು ಎನ್ನನ ರಂಗಯ್ಯಾ
ಮುಟ್ಟದಿರು ಎನ್ನನ
ಕರುಳಗಂಗಳ ಬಾಲೆ ಮರುಳ ಚಲ್ಲಿದ ಮ್ಯಾಲೆ
ಸೆರಿಯವರ ಕೂಡಾಡಿ ಕಲಿತೆಲ್ಲೆ ಬೆಡುಗ
ದಿಂದಿರುಗ ಮೇಲೊರುಗ ಬಿಡು ಎನ್ನ ಸೆರುಗ
ಮುಟ್ಟದಿರು ಎನ್ನನ.....

ಇಂಥವ್‌ಳೊಬ್ಬಳ ಕೂಡಿ ಆಡಿ ಬರುವದ ಕಂಡೆ
ಯಾ ಸಾರಿ ನಂಟ ಬಹು ತುಂಟ ಪ್ರಶಂಟ
ಬಿಡುಯಣಗಂಟ ॥ ಮುಟ್ಟದಿರು....

(– ಇದನ್ನ ಹಾಡುವಾಗ ಮೂರನೇ ಕಾಲು ಹೆಜ್ಜೆಕುಣಿತ ಮಾಡಲಾಗುತ್ತದೆ.)

ವೀರು ಮಕ್ಕಳಿಯ ವೀರು ಮಕ್ಕಳಿಯ
ವಿಕ್ಕೋಳಿ ಗಂಧಾಟ

ಮೂಡಲ ರಾಜ್ಯಕ್ಕೆ ಹೊರಟವಳೆ ಹುಚ್ಚಮ್ಮ
ಮುತ್ತಿನ ವನವ ಸೇರಿದಳು

ಪಡುವಲ ರಾಜ್ಯಕ್ಕೆ ಹೊರಟವನೆ ಸಿದ್ಧಯ್ಯ
ಪಚ್ಚೇಯ ವನ ಸೇರಿದನು

ತೆಂಕಲ ರಾಜ್ಯಕ್ಕೆ ಹೊರಟವಳೆ ಕ್ಯಾತಮ್ಮ
ತೆಂಗಿನ ವನವ ಸೇರಿದಳು

ಬಡಗಲ ರಾಜ್ಯಕ್ಕೆ ಹೊರಟವನೆ ಅಂಕದೀರು
ಬನ್ನಿಯ ವನವ ಸೇರಿದನು

(– ಈ ಭಾಗವನ್ನು ಹಾಡುವಾಗ ಕಲಾವಿದರು ನಿಂತೇ ಇರುತ್ತಾರೆ. ಅಂದರೆ, ಈ ಹಾಡಿಗೆ ಕುಣಿತ ಮಾಡುವುದಿಲ್ಲ.)

ಆಲದಾ ವನವ ನೋಡೆ–ಉಚ್ಚಮ್ಮನ ಕೊರಳೊಳಗೆ
ವಾಲಾಡುವ ಮುತ್ತ ನೋಡೆ

ಅತ್ತಿಯ ವನವ ನೋಡೆ ಕ್ಯಾತಮ್ಮನ ಕೊರಳೊಳಗೆ
ಕೆತ್ತಿರುವ ಮುತ್ತ ನೋಡೆ

ಇಂಬಿಯ ವನವ ನೋಡೆ ಉಚ್ಚಮ್ಮನ ಕೊರಳೊಳಗೆ
ತುಂಬಿರುವ ಮುತ್ತ ನೋಡೆ

ಕಿತ್ತಲಿಯ ವನವ ನೋಡೆ ಕ್ಯಾತಮ್ಮನ ಕೊರಳೊಳಗೆ
ಕೆತ್ತಿರುವ ಮುತ್ತ ನೋಡೆ

(– ಇವೆಲ್ಲಾ "ಬಿಡುಪದ"ಗಳು. ಇವನ್ನು ಹಾಡುವಾಗ ಕುಣಿತ ಮಾಡುವುದಿಲ್ಲ; ನಿಂತೇ ಹಾಡಲಾಗುತ್ತದೆ. ಹೀಗೆ ಕುಣಿತದವರಿಗೆ ಬಿಡುವು ಕೊಡುವುದರಿಂದಾಗಿಯೇ ಇವನ್ನು "ಬಿಡು" ಅರ್ಥಾತ್ ಬಿಡುವಿನ ಪದ ಎಂದು ಕರೆದಿರಬಹುದು.)

**ಕುಣಿತದ ಹಾಡು** :

ಹಾಲರಬಿ ವತ್ತುಕೊಂಡು ಕಾರೆಮುಳ್ಳ ತುಳದುಕೊಂಡು
ಪೂಜೆಯ ವತ್ತಿಗೆ ದಯಮಾಡೆ ಉಚ್ಚಮ್ಮ

ವಡ್ಡರ ಮನೆಯಲ್ಲಿ ವಾಲಾಡಿ ಬರುವಾಗ
ಅಡಕೆವಂಬಾಳೆ ವಡೆದಾವೋ ಉಚ್ಚಮ್ಮ

ಕಾಲಲ್ಲಿ ಸರಗೆಜ್ಜೆ ಸೊಂಟದಲ್ಲಿ ಉರುಗೆಜ್ಜೆ
ಕೊರಳಲ್ಲಿ ರತ್ನದ ಮಾಲೆಧರಿಸಿ ॥ ಆಲರಬಿ ವತ್ತುಕಂಡು.... ॥

ಆನೆ ಮೇಲೆ ಅಂಕದಿರು ಕುದುರೆ ಮೇಲೆ ಸಿದ್ಧಯ್ಯ
ಕೋಣನ ಮ್ಯಾಲೆ ಉಚ್ಚಮ್ಮ ಕುಂತವ್ಳೆ ॥ ಆಲರಬಿ.... ॥

ಮೂಗುತಿ ಮುಂಬಾರ ನಿಮ ಯಣಗಂಟು ಹಿಂಭಾರ
ನಿಮ್ಮ ಪಟ್ಟೆಯ ಸೀರೆ ನಡುಭಾರ ॥ ಆಲರಬಿ..... ॥

ದುಂಡುಡುಗೆ ಚಂದ ನಿಮ್ಮ ಮಂಡೇಯು ಬಲು ಅಂದ
ಮಂಡೇಯಲಿರುವ ಗುಲಾಬಿ ಚಂದ ॥ ಆಲರಬಿ.... ॥

ಈ ಭಾಗ ಹಾಡುವಾಗ ಸುತ್ತುಕುಣಿತ ಹಾಗೂ ಎರಡನೇ ಕಾಲು ಹೆಜ್ಜೆ ಕುಣಿತ ಮಾಡಲಾಗುತ್ತದೆ. ಚಕ್ರಾದಿ ಬಳೆಯನ್ನು "ತಟ್ಟೇಟು" ತಾಳದಲ್ಲಿ ನುಡಿಸಲಾಗುತ್ತದೆ.

**ಕುಣಿತದ ಹಾಡು**

ಮೇಳ : ಒಳ್ಳೆ ತನ ತಂದನನನs । ನಂದನು ತಂದೆನನನs
ತಂದೇನಾ ನಾನ್ಯಾ ॥ ಪ ॥

ಮುಮ್ಮೇಳ : ಅವನ ಏಳುವತ್ತೀಗೆ ಯಾರ್‍ಯಾರ ನೆನದೇವು

ಹಿಮ್ಮೇಳ : ತಂದೇನಾನ

ಮುಮ್ಮೇಳ : ಅವನ ಎಳ್ಳು ಜೀರಿಗೆಯ ಬೆಳಿಯೋಳೆ ಭೂಮಿತಾಯಿ

ಹಿ : ಬೆಳಿಯೋಳೆ ಭೂಮಿ ತಾಯಿ

ಪಲ್ಲವಿ : ಒಳ್ಳೆ ತನತಂದನನನs.....

ಮು : ಎನ್ನ ಗುರುವಿನಟ್ಟೀಲಿ ಗುಜ್ಜಾರಿ ಮಂಚಾವೆ

ಹಿ : ತಂದೇನಾನ

ಮು : ಅವನ ಗುಜ್ಜಾರಿ ಮಂಚಕ್ಕೆ ವಜ್ಜರದ ತಲೆದಿಂಬು

ಹಿ : ವಜ್ಜರದ ತಲೆದಿಂಬು

ಮ : ಅವನ ಕಲ್ಲಡಕೆ ಮೇಲೆ ಸಣ್ಣ ಸೂಜಿಯ ಮಡಗಿ

ಹಿ : ತಂದೇನಾನ

ಮು : ಹನ್ನೆರಡು ವರುಷತ ಬಸೀದನಯ್ಯ

ಪ : ಒಳ್ಳೇ ತನ ತಂದನಾನ.

ಮು : ಎನ್ನ ಗುರುವಿನ ಕುದರಿಗೆ ಗುರಗಂಜಿ ಕಡಿವಾಣ
ಅವನು, ನೆಂಗಣುಸಿ ನಗುವ

ಹಿ : ನೀಲಗುದುರೆಯ ದೇವ

ಮು : ಅವನು, ಅಂದಲಗರಿಯವನ ಹಳದಿವದುಪನಯ್ಯ

ಹಿ : ತಂದೇನಾನ...

ಮು : ತನ್ನೊಕ್ಕುಲೆಲ್ಲ

ಹಿ : ವನ್ನೊಕ್ಕಲಾಗಲಿ....

## ಕುಣಿತದ ಹಾಡು

(ನಿಂತು ಪದ ಹಾಡುವುದು; ಬಳೆ ಏಟು ಬಿದ್ದಾಗ – ಬಳೆ ವಾದ್ಯ ನುಡಿಸಿದಾಗ ಅದರ ಗತ್ತಿಗೆ ತಕ್ಕಂತೆ ಕುಣಿಯುವುದು) :

ಮೇಳಪಲ್ಲವಿ : ಒಳ್ಳೆ ಹಾರ ಹಾರ ಮುತ್ತಿನಹಾರ ಬೆಳ್ಳಿಯ ಶಿವದಾರ

ಹಿ : ಹಾರವನಾಕಿದಳಮ್ಮ ಕೊರಮಿ

ಮು : ಅವನ ಒಂದು ಕಾಲಿsಗೆ ನೆಲವಿನ ಗಂಟ ನೋಡೆ

ಹಿ : (ಅದೇ–ಪುನರಾವರ್ತನೆ)

ಮು : ಅವನ ಎರಡು ಕಾಲಿನ ನೆಲವಿನ ಗಂಟ ನೋಡೆ

ಹಿ : (ಪುನರಾವರ್ತನೆ)

ಮು : ಅವಳು ಕಣಿ ಕಣಿ ಎಂದು

ಹಿ : ಸಾರಿದsಳು ಕೊರಮಿ

ಮು : ಬೆಳ್ಳಿಬೆತ್ತವ ಬಲಗೈಯಲಿಡಿದು
ವಜ್ಜುರದ ಗೂಡೆಯ ಕಂಕ್ಕಳ್ಳಿ ಇರುಕಿ

ಹಿ : (ಪುನರಾವರ್ತನೆ)

ಮು : ಕಣಿ ಕಣಿ ಎಂದು ಸಾರಿದsಳು ಕೊರಮಿ

ಹಿ : (ಅದೇ ಪುನರಾವರ್ತನೆ)

ಮು : ಮುತ್ತು ಕೊಟ್ಟೇನು ಕಣಿ ಹೇಳೇ ಕೊರಮಿ

ಹಿ : (ಪುನರಾವರ್ತನೆ)

ಮು : ಮುತ್ತು ನಮ್ಮನೆಯ

ಹಿ : ಮುಸುಕಿನ ಜ್ವಾಳಾ

ಮೇಳಪಲ್ಲವಿ : ಒಳ್ಳೆ ಹಾರ ಹಾರ.... ಶಿವನದಾರ....

ಮು : ರತ್ನ ಕೊಟ್ಟೇನೆ

ಹಿ : (ಪುನರಾವರ್ತನೆ)

ಮು : ರತ್ನ ನಮ್ಮನೆಯ

ಹಿ : ರಾಗಿಯಕಲ್ಲು

ಮೇಳ : (ಪಲ್ಲವಿ : ಒಳ್ಳೆ....)

ಮು : ಒಂಟೆ ಕೊಟ್ಟೇನೆ ಕಣಿ ಹೇಳೇ ಕೊರಮಿ

ಹಿ : (ಪುನರಾವರ್ತನೆ)

ಮು : ಒಂಟೆ ನಮ್ಮನೆಯ

ಹಿ : ಮಣ್ಣೊಂಟೆ ಕsಣೆ ॥ ಪಲ್ಲವಿ ॥

ಮು : ಆನೆ ಕೊಟ್ಟೇನೆ ಕಣಿ ಹೇಳೆ ಕೊರಮಿ

ಹಿ : (ಪುನರಾವರ್ತನೆ)

ಮು : ಆನೆ ನಮ್ಮನೆಯ

ಹಿ : ಆವಿನ ಮರಿಯೆ

ಮೇಳ : (ಪಲ್ಲವಿ)

**ಕಟಿಕೆ**

ಮುಮ್ಮೇಳ : ಬಾಲ್ಯರೆ

ಹಿಮ್ಮೇಳೆ : ಉಳ್ಳತ್ತು

ಮು : ಬಾಲ್ಯರೆ ವೀರ

ಹಿ : ಉಳ್ಳತ್ತು

ಮು : ನಮ್ಮ

ಹಿ : ಉಳ್ಳತ್ತು

ಮು : ಪರಮೇಶ್ವರನ*
ಜಟಾ ಮುಕ್ಟದಲ್ಲಿ
ಗಂಗೆ
ತೊಡೆಯ ಮೇಲೆ
ಪಾರ್ವತಿ
ಗರುಡ
ಗಂಧರ್ವರು
ಇರುತಿರ್ಪರಯ್ಯ
ಎಂತೆಂದೊಡೆ
ನಮ್ಮ
ಪರಮೇಶ್ವರನು
ಕೈಲಾಸದ
ಗದ್ಗೆ ಮೇಲೆ
ಮೋರ್ತಮಾಡಿ
ಕುಳಿತಿರುವ
ವೇಳೆಯಲ್ಲಿ
ಪಾರ್ವತಿಯಾದ
ದಕ್ಷ
ಬ್ರಮ್ಮನು
ಬಂದು
ಈತನು
ಯಾರು ಯಾರು
ಎಂದು
ಕೇಳಲು
ಈತನ
ಶಿವಾಚಾರಿ

ಈತನು
ಗಣಾಚಾರಿ
ಈತನು
ಪರಶಿವ
ಮೂರ್ತಿಯು
ಎಂದು
ಹೇಳಲು
ಈತನು
ಪರಶಿವ
ಮೂರ್ತಿಯೇ
ಒದಿಯಲು
ಬಟ್ಟೆಯಿಲ್ಲ
ಹುಲಿಚರ್ಮವನ್ನು
ಉಟ್ಟುಕೊಂಡಿರುವನು
ಮೈಗೆ
ವಿಭೂತಿಯನ್ನು
ಧರಿಸಿರುವನು
ಮಣ್ಣಿನ
ಪಾತ್ರೆಯನ್ನು
ಕೈಯಲ್ಲಿ
ಹಿಡಿದುಕೊಂಡಿರುವನು
ಈತನು
ಪರಶಿವ
ಮೂರ್ತಿಯೇ
ಇರಲಿ
ಈತನ

* ಮುಮ್ಮೇಳದ ಒಬ್ರ ಹೇಳಿದ ಪ್ರತೀ ನುಡಿಗೂ ಹಿಮ್ಮೇಳದ ಒಬ್ಬ "ಉಳ್ಳತ್ತು" ಎಂದು ಹೀಗೆ ಮೊದಲಿಂದ ಕೊನೆಯವರೆಗೂ ಪ್ರತಿ ನುಡಿಯಬೇಕು.

ಕೈಲಾಸ
ಪಟ್ಟಣವನ್ನು
ಕಿತ್ತು
ನಾನು
ಆಳಬೇಕೆಂಬ
ಅಭಿಲಾಸೆಯಿಂದ
ಈ ಭೂಮಿಯ
ಮೇಲೆ
ಮುನ್ನೂರು
ಮುವತ್ತು
ಯೋಜನದ
ಯಾಗವನ್ನು
ಏರ್ಪಡಿಸಿ
ಯಾಗಕ್ಕೆ
ಶ್ರೀಗಂಧದ
ಸೌಧೆಯನ್ನು
ತರಿಸಿ
ಅಚ್ಚಲಿ
ಯಾಗದ
ವಗೆಯು
ನಮ್ಮ
ಜಗದೇಶ್ವರ
ದೇವರಿಗೆ
ತಾಕಲು
ಆಗ
ನಮ್ಮ
ಜಗದೇಸ್ವರ
ದೇವರು

ಕೋಪರೂಢನಾಗಿ
ನಿಲ್ಲಲು
ಎಲೆ
ಪಾರ್ವತಿಯೇ
ನಿಮ್ಮ
ತಂದೆಯಾದ
ದಕ್ಷ
ಬ್ರಹ್ಮನಿಗೆ
ಮರಣಗಾಲ
ಸಮೀಪಿಸಿದೆ
ಎಂದು
ಹೇಳಲು
ಆಗ
ಪಾರ್ವತಿಯು
ಎಲೆ
ಸ್ವಾಮಿಯೆ
ನನ್ನ
ತಂದೆಯ
ತಪ್ಪನ್ನು
ಮನ್ನಿಸಿ
ಪ್ರಾಣ ಭಿಕ್ಷೆಯನ್ನು
ಕೊಡಿ
ಎಂದು
ಕೇಳಲು
ಆಗ
ನಮ್ಮ
ಜಗದೇಸ್ವರ
ದೇವರು

ಪಾರ್ವತಿಯ
ಮಾತನ್ನು
ಕೇಳದೆ
ತಮ್ಮ
ಎಡಗಡೆಯ
ಕಣ್ಣಿನ
ಬೆವರನ್ನು
ತೆಗೆದು
ಭೂಮಿಗೆ
ಬಿಸಾಡಲು
ಸತಕೋಟಿ
ರಾಕ್ಷಸರು
ದುರ್ಗಿಯರು
ಹುಟ್ಟಿದರೆ
ತಮ್ಮ
ಬಲದ
ಕಡೆಯ
ಬೆವರಂ
ತೆಗೆದು
ಭೂಮಿಗೆ
ಬಿಸಾಡಲು
ನಮ್ಮ
ಚನ್ನವೀರಭದ್ರ
ದೇವರು
ಹುಟ್ಟಿದ
ಅವತಾರವೇನೆಂದರೆ
ಕಡಿಹುಬ್ಬು
ಕುಡಿಮೀಸೆ

ಈಟಿ
ಬರ್ಜಿ
ತ್ರಿಸೂಲ
ಡಮರುಗ
ಪಾಸುಪತಾಸ್ತ್ರ
ಗರುಡಾವಿಗೆ
ಮುಳ್ಳಾವಿಗೆ
ಮೆಟ್ಟಿಕೊಂಡು
ಹುಟ್ಟಿದನಯ್ಯ
ನಮ್ಮ
ಚನ್ನವೀರಭದ್ರ
ದೇವರು.
ಹುಟ್ಟಿದ
ಆರ್ಭಟಕ್ಕೆ
ಭೂಮಿಯೇ
ನಡುಗಿತು
ಆಕಾಸವೇ
ಗುಡುಗಿತು
ಕೆಂಧೂಳುಗಳೆದ್ದು
ಓಹೋ
ಎಂದು
ಕೂಗಿಕೊಳ್ಳಲು
ಆಗ
ನಮ್ಮ
ಜಗದೇಸ್ವರ
ದೇವರು
ರುದ್ರನು
ಉಟ್ಟಿದ

ಆರ್ಭಟಕ್ಕೆ
ಈಗಾಯ್ತಲ್ಲ
ಎಂದು
ಈಗಲೀಗ
ಜಗತ್ತು
ಉಳಿವಂತಿಲ್ಲ
ಎಂದು
ಭದ್ರಕಾಳಿ
ಎಂಬ
ಎಣ್ಣು
ಮಗುವನ್ನು
ಸ್ರುಸ್ಟಿಸಿ
ಅವಳ ಕೈಯಲ್ಲಿ
ಆರತಿಯನ್ನು
ಕೊಟ್ಟು
ರುದ್ರನ
ಬಳಿಗೆ
ಕಳುಹಿಸಲು
ಏಕಾರ್ತಿ
ದೂಪಾರ್ತಿ
ಪಂಚಾರ್ತಿಯನ್ನು
ಎತ್ತಲು
ಆಗ
ನಮ್ಮ
ರುದ್ರನ
ಕೋಪವು
ಸೊಲ್ಪ
ಸಾಂತಿಯಾಯಿತು

ಆಗ
ನಮ್ಮ
ರುದ್ರನು
ಎಲೆ
ಜನಕನೆ
ನಮ್ಮ ಮೇಲೆ
ವೈರಿ
ಯಾರೆಂದು
ಕೇಳಲು
ಎಲೆ
ರುದ್ರನೆ
ಇದೇ
ದಕ್ಷಿಣಾವತಿ
ಎಂಬ
ನಗರದಲ್ಲಿ
ದಕ್ಷ
ಬ್ರಮ್ಮನೆಂದು
ನಾಮಾಂಕಿತದಿಂದ
ಮೆರೆಯುತ್ತಿರುವನು
ಆತನನ್ನು
ಸಂವರಿಸಿ
ಬಾ
ಎಂದು
ಆಸೀರ್ವದಿಸಿ
ಕಳುಗಿಸಲು
ನಮ್ಮ
ರುದ್ರನು
ಹೋಗುವ

ಮಾರ್ಗದಲ್ಲಿ
ಮಹಾಮಾರಿಯರೆಂಬ
ಅಡ್ಡಗಟ್ಟಲು
ಅವರ
ರಟ್ಟೆಯಂ
ತರಿದು
ಮುಂದಕ್ಕೆ
ಯಾಗಮಂಟಪಕ್ಕೆ
ಹೋಗಲು
ದೈವರೂಪನಾಗಿ
ನಿಂತಿರುವ
ದಕ್ಷ
ಬ್ರಮ್ಮನನ್ನು
ನೋಡಿ
ನಮ್ಮ
ರುದ್ರನ
ಕೈಕಾಲುಗಳು
ನಡುಗುತ್ತಿರಲು
ಆಗ
ತಲೆಯೆತ್ತಿ
ನಮ್ಮ
ರುದ್ರನು
ನೋಡಲು
ಈತನೆ
ಸರಿ
ನಮ್ಮ
ತಂದೆಯ
ವೈರಿ

ಎಂದು
ಎಲೆ
ದಕ್ಷ
ಬ್ರಹ್ಮನೆ
ನನ್ನ
ತಂದೆಯು
ನಿನ್ನನ್ನು
ಸಮ್ಮರಿಸಲು
ಆಗ್ನೆಯಂ
ಮಾಡಿರುವನು
ಯುದ್ಧಕ್ಕೆ
ಸಿದ್ಧನಾಗು
ಎಂದು
ಏಳಲು
ಆಗ
ದಕ್ಷ
ಬ್ರಮ್ಮನು
ಎಲೆ
ರುದ್ರನೆ
ನನ್ನ
ಅಪರಾಧವನ್ನು
ಮನ್ನಿಸಿ
ಪ್ರಾಣಬಿಕ್ಷೆಯನ್ನು
ಕೊಡಿ
ಎಂದು
ಕೇಳಲು
ಆಗ
ನಮ್ಮ

ರುದ್ರನು
ಕೇಳದೆ
ಆತನನ್ನು
ಸಮ್ಮರಿಸಿ
ಕೈಲಾಸಕ್ಕೆ
ಹೋಗುವ
ಮಾರ್ಗದಲ್ಲಿ
ಪಾರ್ವತಿಯು
ಯಗ್ನಗುಂಡದಲ್ಲಿ
ಬಿದ್ದು
ಗೋಳಾಡುತ್ತಿರಲು
ಎಲೆ
ತಾಯಿಯೇ
ನೀನಾರು
ಈ ರೀತಿ
ಗೋಳಾಡಲು
ಕಾರಣವೇನು
ಎಂದು
ಕೇಳಲು
ಎಲೆ
ರುದ್ರನೆ
ನಾನು
ನಿಮ್ಮ
ತಾಯಿ
ನಿಮ್ಮ
ತಾತನನ್ನು
ಸಮ್ಮರಿಸಿದ
ಸುದ್ದಿಯನ್ನು
ಕೇಳಿ
ಈ ರೀತಿ
ಗೋಳಾಡುತ್ತಿರುವೆ
ಎಂದು
ಹೇಳಲು
ಆಗ
ದಕ್ಷ
ಬ್ರಮ್ಮನ
ಹೆಂಡತಿಯಾದ
ವೇದಾವತಿಯು
ತನ್ನ
ಓಲೆಗಳನ್ನು
ಮತ್ತು
ಮಾಂಗಲ್ಯವನ್ನು
ಕಳೆದುಕೊಂಡು
ಒಂದು
ತಟ್ಟೆಯಲ್ಲಿ
ಇರಿಸಿಕೊಂಡು
ಎಲೆ
ರುದ್ರನೆ
ನನ್ನ
ಓಲೆಬಾಗ್ಯ
ಮತ್ತು
ಮಾಂಗಲ್ಯಬಾಗ್ಯ
ವನ್ನು
ಉಳಿಸಿಕೊಡಿ
ಎಂದು
ಕೇಳಲು

ಆಗ
ನಮ್ಮ
ರುದ್ರನು
ಒಂದು ಕಡೆ
ಪಾರ್ವತಿಯ
ದುಕ್ಕ
ಒಂದು ಕಡೆ
ವೇದಾವತಿಯ
ದುಕ್ಕ
ವನ್ನು
ನೋಡಿ
ಯಾಗಕ್ಕೆ
ಕಟ್ಟಿದ್ದ
ಟಗರಿನ
ತಲೆಯನ್ನು
ಕಡಿದು
ದಕ್ಷ
ಬ್ರಹ್ಮನ
ಸಿರಸ್ಸಿಗೆ
ಅಂಟಿಸಿ
ಗಿರಿರಾಜನೆಂದು
ನಾಮಾಂಕಿತವನ್ನು ಮಾಡಿ
ಸರ್ವರೂ
ಕೈಲಾಸಕ್ಕೆ
ಹೊರಟು ಹೋದರು
ಲಿಂಗಾಂಗ್ಯ
ಲೀಲಾವಿನೋದ
ರುದ್ರನಾಂಟ್ಯ
ಶಿವತತ್ವ
ವಡೆಯ ಪರ್ವತ ॥

ಬಸವನ ಜಯಂತಿ, ವಿವಾಹ ಮೊದಲಾದ ಸಂದರ್ಭಗಳಲ್ಲಿ ಲಿಂಗಾಯಿತರಲ್ಲಿ ನಿಗದಿಯಾದವರು ವೀರಭದ್ರನ ವೇಷ ಹಾಕುತ್ತಾರೆ. ಅವರ ಜೊತೆ ಸೇರಿ ಈ ವೀರಮಕ್ಕಳೂ "ಕಟಿಕೆ" ಹೇಳುವುದುಂಟು. ಅಂತಹ "ಕಟಿಕೆ"ಗಳಲ್ಲಿ ಒಂದು ಮಾದರಿ ಇದು. ಇಂಥಾ ದೀರ್ಘ 'ಕಟಿಕೆ' ಅಲ್ಲದೆ ವಿವಿಧ ಸಂದರ್ಭಗಳಲ್ಲಿ ಹೇಳುವ ಹಲವು ಮಿನಿ ಕಟಿಕೆಗಳೂ ಇವೆ. ಅವುಗಳಲ್ಲಿ ಕೆಲವು ಹೀಗಿವೆ :

೧

ಓಹೋ
ಮುಮ್ಮೇಳ : ಉಳಿವಿನ ಶಾಖದಲ್ಲಿ
ಹಿಮ್ಮೇಳ : ಕೊಂಡಾಡಬಹುದೇ ?
ಮು : ಕನಕ ಕನಕ
ಹಿ : ಕನಕ ರೂಪು*
ಪಜ್ಜೆಕಲ್ಲು
ಪಾಣಿಬಟ್ಲು
ಮುತ್ತಿನುಂಡೆ
ಮುರವಗೆಜ್ಜೆ
ಅರುವನೀರನ್ನೆ
ಹಳ್ಳಕೆ ತಳ್ಳಿ
ಬರುವ ನೀರನ್ನೆ

* ಹೀಗೆ ಮುಂದಿನ ನುಡಿಗಳನ್ನು ಮುಮ್ಮೇಳ ಹಾಗೂ ಹಿಮ್ಮೇಳದವರು ಕ್ರಮವಾಗಿ ಹೇಳುವುದು. ಈ ಪದ್ಧತಿ ಎಲ್ಲಾ 'ಕಟಿಕೆ'ಗಳಿಗೂ ಅನ್ವಯ ಆಗುತ್ತದೆ.

ಮಕಮಜ್ನಮಾಡ್ಲಿ
ಏರಿ ಕೆಳಗಲ
ಹಣ್‌ಕಾಯಿ ತಂದು
ತ್ವಾಟದೊಳಗಲ
ತುಂಬೆಮಷ್ಪ ತಂದು
ಸಾಕ್ಷಾತ್ ಎಂಬ
ಗುರು ಸಿದ್ರಾಮಲಿಂಗು ॥

೨

ಓಹೋ
ಉಳಿವಿನ ಶಾಖದಲ್ಲಿ
ಯಾಕ ಬಂದಿಯಮ್ಮ
ಕಾಕನಾಡಿಂದ
ಬೇಕಾದಾಸಿಗೆ
ಮೈಮೇಗಲೊಡಿವೆ
ಚಿನ್ನದಾ ಸತ್ತಿಗೆ
ನೆರಳಿನಿಂದೆ
ನೀಮುರುದು ಮನ್ನರ
ಲಂಕೆಯೂ ಕೊಂದೆ
ಲಂಕೆ ರಾವಣನ
ಕೊಂದು ವಳಗಿಟ್ಟೆ
ರಾಯರ್‍ಯಾರಿಂದ
ಸೀಮೆಯಾರಿಂದ
ಭೂಮಿಯಾರಿಂದ
ಮಕ್ಕಳ್ಯಾರಿಂದ
ವಕ್ಕಲ್ಯಾರಿಂದ
ತಾಯಿ ಹುಚ್ಚಮ್ಮನಿಂದ ॥

೩

ಓಹೋ
ಉಳಿವಿನ ಶಾಖದಲ್ಲಿ
ಇಷ್ಟೊತ್ತು ಮದಲಾಗಿ
ಕಾಣಮ್ಮ ನಿಮ್ಮ
ಯೋಳಾಳು ಭೂಮೀಲಿ
ವಡದು ಮೂಡಿದವಳ
ನೀವುಟ್ಟಿ ಯಪ್ಪತ್ತು
ಏಳು ನೂರೊರುಸ
ಸಾವರೊಕ್ಕಲಿಗೆ
ಪರುಸೆಯಾ ಕೊಟ್ಟೆ
ರಸಬಾಳೆ ತೊಟ್ಟು
ಪಲ್ಲೇಸಿ ಕಂಬ
ಅಂದವಾದ ಹುಚ್ಚಮ್ಮನಿಗೆ
ಹೂವಿನ ಕಂಬ ॥

೪

ಓಹೋ
ಉಳಿವಿನ ಶಾಖದಲ್ಲಿ
ಹುಟ್ಟಿತು ಕಂಬಳಿ
ಕುರಿಯನ್ನ ಪಡೆಯ
ಸನ್ನೆ ಸನ್ನೆಗೆ
ಮಂದೆಗಾಲ ಹಿಡಿಯ
ಅಚ್ಚಬಿರುದನ ಕಾಳಿ
ಉಕ್ಕರಿಸಿ ಹಿಡಿಯ
ಮಂಕಯ್ಯ ಮರುಳಯ್ಯ
ನೀವೇ ಸಂತಾನ
ಕುರುಬಾರ ಬೀರಯ್ಯ

ನೀವೇ ಸಂತಾನ
ಕಲ್ಲಡಕೆ ಮೇಲೆ
ಸಣ್ಣ ಸೂಜಿಯ ಮಡಗಿ
ಹನ್ನೆರಡು ವರುಷ
ತಬಸಿದ್ದನಯ್ಯ
ಆಗ ಪಡೆದನಂತೆ
ಮಂಕಯ್ಯ ಮರುಳಯ್ಯ
ಕೊರಳ ಚಕ್ರಾದಿಯ ॥

**ದೇವರ ವಂಶಾವಳಿ (ಕಟಕಿ)**

ಅನಂತ *
ಅದ್ಭುತ
ತಮಂಧ
ತಾರಜ
ತಂಡಜ
ಭಿನ್ನಜ
ಭಿನ್ನಾಯುಕ್ತ
ಅವಿಯಾಯುಕ್ತ
ಅಮಂಧಾಯುಕ್ತ
ಮನೀರಣ
ಮಹಾನೀರಣ
ವಿಶ್ವಾವಸು
ಇಸ್ವವರ್ಣ
ಅಲಂಕೃತ
ಕೃತಾಯುಗ
ತ್ರೇತಾಯುಗ
ದ್ವಾಪರಯುಗ

* ಪ್ರತಿ ನುಡಿ ಹೇಳಿ ನಿಲ್ಲಿಸಿದಾಗಲೂ ಹಿಮ್ಮೇಳದವನು 'ಉಳ್ಳತ್' ಎಂದು ದನಿಗೂಡಿಸಬೇಕು.

ಕಲಿಯುಗ
ಇಂತೀ ಹದಿನೆಂಟು
ಯುಗಂಗಳಲ್ಲಿ
ಆವಾ ವಸ್ತು ಹುಟ್ಟಿತು ಎಂದರೆ
ಅನಂತನೆಂಬಯುಗದಲ್ಲಿ
ಸಾಕ್ಷಾತ್ ಸರ್ವಜ್ಞನೆಂಬ
ಈಸ್ವರ ಒಬ್ಬನೇ ಇದ್ದನು
ಅದ್ಭುತನೆಂಬ ಯುಗದಲ್ಲಿ
ಪಾರ್ವತಿ ಹುಟ್ಟಿದಳು
ತಮಂಧನೆಂಬ ಯುಗದಲ್ಲಿ
ನಾರಾಯಣ ಹುಟ್ಟಿದನು
ನಾರಾಯಣನೆಂಬ ನಾಭಿಯಲ್ಲಿ
ಕಮಲ ವುಟ್ಟಿತು.
ಆ ಕಮಲದಲ್ಲಿ
ಬ್ರಮ್ಮ ಪುಟ್ಟಿದ
ತಾರಜನೆಂಬ ಯುಗದಲ್ಲಿ
ಬ್ರಮ್ಮನಿಗೆ
ಅಜನೆಂಬ ಪೆಸರಾಯಿತು
ಅಂಡಜನೆಂಬ ಯುಗದಲ್ಲಿ
ಬ್ರಮ್ಮಾಂಡವೆಂಬುದು ಒಂದು
ಕತ್ತಿ ಪುಟ್ಟಿತು
ಬಿನ್ನಜನೆಂಬ ಯುಗದಲ್ಲಿ
ಆ ಕತ್ತಿ ಬಿನ್ನವಾಯಿತು
ಅವ್ಯಾಯುಕ್ತನೆಂಬ ಯುಗದಲ್ಲಿ
ಮೇಗ ಪಾರಿಜಾತಗಳು ಪುಟ್ಟಿದವು
ನಿಂದಲ್ಲಿ ಭೂಮಿಯು ಪುಟ್ಟಿತು
ಅಮಂಧಾಯುಕ್ತನೆಂಬ ಯುಗದಲ್ಲಿ
ಅಷ್ಟಕುಲ ಪರ್ವತಗಳು ಪುಟ್ಟಿದವು
ಮನೀರಣನೆಂಬ ಯುಗದಲ್ಲಿ
ಸಪ್ತಸಮುದ್ರಗಳು ಪುಟ್ಟಿತು
ಮಹಾನೀರಣನೆಂಬ ಯುಗದಲ್ಲಿ

ಲಕ್ಷ ಜೀವರಾಶಿಗಳು ಪುಟ್ಟಿದವು
ವಿಸ್ವಾವಸುವೆಂಬ ಯುಗದಲ್ಲಿ
ಸೂರ್ಯಚಂದ್ರಾದಿಗಳು ಪುಟ್ಟಿದವು.
ಇಸ್ವವರ್ಣನೆಂಬ ಯುಗದಲ್ಲಿ
ಮೆದುಳೆ ಪುಟ್ಟಿತು
ಅಲಂಕೃತನೆಂಬ ಯುಗದಲ್ಲಿ
ಕಾಮಧೇನು ಪುಟ್ಟಿತು
ಕೃತಯುಗದಲ್ಲಿ
ದೇವದಾನವರಿಗೆ ಯುದ್ಧವಾಯಿತು
ತ್ರೇತಾಯುಗದಲ್ಲಿ
ರಾಮ ರಾವಣನಿಗೆ ಯುದ್ಧವಾಯಿತು
ದ್ವಾಪರ ಯುಗದಲ್ಲಿ
ಕೌರವ ಪಾಂಡವರಿಗೆ ಯುದ್ಧವಾಯಿತು
ಕಲಿಯುಗದಲ್ಲಿ
ಮೋರಿ ಕದಂಬರಿಗೆ ಯುದ್ಧವಾಯಿತು*
ಇಂತೀ ಹದಿನೆಂಟು ಯುಗಂಗಗಳಲ್ಲಿ
ರಾಜ್ಯವನ್ನಾಳಿದ ರಾಜರುಗಳ
ಪೆಸರುಗಳು ಯಾವಾವುದೆಂದಡೆ –
ಆದಿನಾರಾಯಣನ ಮಗ ಬ್ರಮ್ಮ
ಬ್ರಮ್ಮನ ಮಗ ಇಂದ್ರಿಯ
ಇಂದ್ರಿಯನ ಮಗ ನಯನೇಂದ್ರಿಯ
ನಯನೇಂದ್ರಿಯನ ಮಗ ಕಾಲಸ್ವ
ಕಾಲಸ್ವನ ಮಗ ದುಂದುಮಾಂತವ
ಆ ದುಂದು ಮಾಂತವನ ಮಗ ತ್ರಿಶಂಕು
ತ್ರಿಶಂಕುವಿನ ಮಗ ಹರಿಶ್ಚಂದ್ರ
ಹರಿಶ್ಚಂದ್ರನ ಮಗ ರೋಹಿತಾಶ್ವನ
ರೋಹಿತಾಶ್ವನ ಮಗ ನಳ
ನಳನ ಮಗ ಪುರೂರವ

* ಅಂದರೆ, "ಮನೆಮನೆಯವರಿಗೆ ಕದನ" ಎಂಬ ಅರ್ಥವಂತೆ.

ಪೂರೂರವನ ಮಗ ಪೋರೂಟಿ
ಪೋರೂಟಿನ ಮಗ ಪರಿತಾಶ್ವ
ಪರಿತಾಶ್ವನ ಮಗ ಮಹಂಧಾತ
ಮಹಂಧಾತನ ಮಗ ಮೋರಗೀಚ
ಮೋರಗೀಚನ ಮಗ ಸಿಳಪ
ಸಿಳಪನ ಮಗ ದಿಗು
ದಿಗುವಿನ ಮಗ ರಘು
ರಘುವಿನ ಮಗ ಆರುಣ್ಯ
ಆರುಣ್ಯನ ಮಗ ಮೃಗರಾಜ
ಮೃಗರಾಜನ ಮಗ ದಶರತ
ದಶರತನ ಮಗ ರಾಮ
ರಾಮನ ಮಗ ಲವ
ಲವನ ಮಗ ಬಿಂದು
ಬಿಂದುವಿನ ಮಗ ಅಲಿಪ್
ಅಲಿಪನ ಮಗ ಸಿಳ್ಳುಗೋಪಾಲ
ಸಿಳ್ಳುಗೋಪಾಲನ ಮಗ ನಂದಗೋಪಾಲ
ನಂದಗೋಪಾಲನ ಮಗ ವಸುದೇವ
ವಸುದೇವನ ಮಗ ಶ್ರೀಕೃಷ್ಣ
ಶ್ರೀಕೃಷ್ಣ ಮಗ ಶ್ರೀವಿಷ್ಣು
ಶ್ರೀವಿಸ್ಣುವಿನ ಮಗ ಮನ್ಮತ
ಮನ್ಮತನ ಮಗ ಅನಿರುದ್ಧ
ಅನಿರುದ್ಧನ ಮಗ ದುಸ್ವಾಸ
– ಇಂಥಾವರೆಲ್ಲರೂ ಪ್ರಳಯಕ್ಕೆ ಒಳಗಾದರು
ಲಿಂಗಾಂಗ \ ಲೀಲವಿನೋದ.
ಶಿವತತ್ವ ರುದ್ರನಾಂಟ್ಯ ತಗೋ ಲಿಂಗಾಂಗ್ಯ
(ಈ ಕೊನೇ ನುಡಿ ಹೇಳುತ್ತಿದ್ದಂತೆ ತಮಟೆಯವರು 'ಜಡಿ', 'ಜಡಿ' ಎಂದು ಜೋರು ವಾದ್ಯಬಾರಿಸತೊಡುಗತ್ತಾರೆ. ಅದರ ಗತ್ತಿಗನುಗುಣವಾಗಿ ಉಳಿದವರು ಕುಣಿತ ಮಾಡುತ್ತಾರೆ).

## ದೊಡ್ಡ ಬಸವಣ್ಣನ ಕಟಿಕೆ

ಬಸವಣ್ಣನೇ ಧರೆಗೆ ದೊಡ್ಡವನೆಂದು [೧]
ವೇದಶಾಸ್ತ್ರ ಪುರಾಣಗಳು ಸಾರುತಿವೆ
ಬಸವಣ್ಣನವರ ಕೊಂಬುಗಳಲ್ಲಿ
ಅಸ್ವಿನಿ ದೇವತೆಗಳು ಪುಟ್ಟಿದರು.
ಬಸವಣ್ಣನ ಕಣ್ಣುಗಳಲ್ಲಿ
ಸೂರ್ಯಚಂದ್ರಾದಿಗಳು ಪುಟ್ಟಿದರು
ಬಸವಣ್ಣನವರ ಪಾದದಲ್ಲಿ,
ಇಂದ್ರ ಲೋಕವೇ ಹುಟ್ಟಿತು
ಬಸವಣ್ಣನವರ ಚಿಟ್ಟುಕೊಳವೀನಲ್ಲಿ [೨]
ಮಹಾಮುನಿ ಗಣಂಗಳು ಹುಟ್ಟಿದರು
ಬಸವಣ್ಣನವರ ಬಲ ಪಾದದಲ್ಲಿ
ಬ್ರಮ್ಮಾಂಡವೇ ವುಟ್ಟಿತು.
ಬಸವಣ್ಣನವರ ಎಂಟುಕೋಟಿ ರೋಮಗಳಲ್ಲಿ
ಮಹಾ ಮುನೀಶ್ವರರು ಪುಟ್ಟಿದರು
ಬಸವಣ್ಣನವರ ಕಂಟದಲ್ಲಿ
ಮಹಾಲಿಂಗವೇ ಪುಟ್ಟಿತು
ಬಸವಣ್ಣನವರ ಬೆನ್ನುರಿ ವಳೆಯಲ್ಲಿ
ಪಾರ್ವತಿ ಪರಮೇಸ್ವರರು ಹುಟ್ಟಿದರು
ಕಲಿಯುಗ ಕಲ್ಯಾಣದಲ್ಲಿ
ಮಡಿವಾಳಿ ಮಾಚಯ್ಯನ ಮನೆಯಲ್ಲಿ
ಎಲ್ಡು ಸಾವಿರದ ಅರವತ್ತು ವರ್ಸದಲ್ಲಿ
ಒಂದು ದುಸ್ಪವಿಲ್ಲದ ಗಂಡುಗತ್ತೆ ಸತ್ತಿತಂತೆ
ಸತ್ತ ಕತ್ತೆಗೆ ಅವರ ಮತದಾರರೆಲ್ಲಾ ಸೇರಿ
ಅದಕೆ ಮಕಮಜ್ಜನವನ್ನು ಮಾಡಿ
ಅರಿಸಿದ ಕುಂಕುಮ ಗಂದಲೇಪನವನ್ನು ಮಾಡಿ
ಕೈಲಾಸಕ್ಕೆ ತೆಗೆದುಕೊಂಡು ಹೋಗುತ್ತಿದ್ದರು.

---

೧. ಪ್ರತಿ ಸಾಲನ್ನು ಮುಮ್ಮೇಳದವ ಹೇಳಿ ನಿಲ್ಲಿಸಿದಾಗ ಹಿಮ್ಮೇಳದ ಒಬ್ಬ 'ಉಳ್ಳತ್' ಎಂದು ನಡಿ ಇಕ್ಕಬೇಕು.
೨. 'ಪಾದಗಳ ಹಿಂಭಾಗದಲ್ಲಿ ಇರುವ ಕಿರು ಬೆರಳುಗಂತಹ ಅವಯವಗಳು'

ಕೈಲಾಸದ ಪರ್ವತದಲ್ಲಿ
ಹುಲಿಯನ್ನು ಕಂಡು
ಸತ್ತಬೀಳನ್ನು ಬಿಸಾಡಿ
ಕಲ್ಯಾಣ ಪಟ್ಟಣಕ್ಕೆ ಓದರು.
ಕಲ್ಯಾಣ ಪಟ್ಟಣದ ಸಟ್ಟರ ಮನೆಯಲ್ಲಿ
ಒಂದು ಬಸವಣ್ಣ ಸತ್ತಿನಂತೆ
ಸತ್ತ ಬಸವಣ್ಣನಿಗೆ ಅವರ ಮತದಾರರೆಲ್ಲರು ಸೇರಿದರು
ಹರಳಯ್ಯ ಸೆಟ್ಟಿ, ಗೋದಿಸಟ್ಟರು ಹವಳಾದ ಪಟ್ಟರು
ಮುತ್ತಿನ ಸಟ್ಟರು
ಇಂಥಾವರೆಲ್ಲರೂ ಸೇರಿ ಆ ಬಸವಣ್ಣನನ್ನು
ಮುಟ್ಟು ಮುಟ್ಟೆಂದು ಮುಟ್ಟದೆ
ಕಾಲಿಗೆ ಹಗ್ಗದ ಕುಣಿಕೆಯನ್ನು ಹಾಕಿ
ಕಲ್ಯಾಣ ಪಟ್ಟಣದ ಬೀದಿಯಲ್ಲಿ
ಚರಚರನೆ ಎಳೆದುಕೊಂಡು ಹೋಗುತ್ತಿರುವಾಗ
ಯೋಳ್ನೂರೆಪ್ಪತ್ತು ಜನಗಣಂಗಳು
ಅದನ್ನು ನೋಡಿ
ಅಯ್ಯೋ ಪಾಪಿಗೇಡೆ ಮುಂಡೇ ಮಕ್ಕಳಿರಾ
ಕತ್ತೆ ಮಾಡಿದ ಪುಣ್ಯವೇನು
ಬಸವಣ್ ಮಾಡಿದ ಕರ್ಮವೇನು ಎಂಬುದಾಗಿ
ಯೋಳ್ನೂರೆಪ್ಪತ್ತು ಜನ ಸರಣರು
ವಕ್ಕಲಿಗರ ಮುದ್ದಯ್ಯ
ವಲೆಯರ ವನ್ನಯ್ಯ
ಮಾದುಗರ ಹರಳಯ್ಯ
ಕುರುಬರ ಬೀರಯ್ಯ
ಕುಂಬಾರ ಗುಂಡಯ್ಯ
ಹಡಪದ ಅಪ್ಪಣ್ಣ
ಇಂಥಾವರು ಸರಣರು ಸೇರಿ
ಬಸವಣ್ಣನನ್ನು ಕಲ್ಯಾಣ ಪಟ್ಟಣಕ್ಕೆ
ತಗದುಕೊಂಡು ಹೋಗಿ
ಅದರ ಚರ್ಮವನ್ನು ಸುಲಿದು
ಎಣ್ಣೆ ತುಂಬುವುದಕ್ಕೆ ಬುದ್ದಲಿಕೆಯಾಯಿತು

ಬೀಸಿ ವಡೆಯಲಿಕೆ ಕವಣೆಕಲ್ಲಾಯಿತು
ಅರವತ್ಸಾವುರ ಸರಣರಿಗೆ ಪಾದರಕ್ಷೆಯಾಯಿತು
ಮಿಕ್ಕ ಚೂರಲ್ಲ ಪಾರ್ವತಮ್ಮನವರ ಕೊರಳಿಗೆ ತಾಳಿ ಚೂರಾಯಿತು
ಇನ್ನು ಮಿಕ್ಕ ಚೂರುಪಾರೆಲ್ಲ
ಮಲ್ಲಿಕಾರ್ಜುನ ಸ್ವಾಮಿಯವರಿಗೆ
ವಡಿಯಲಿಕೆ ನಗಾರಿಯಾಯಿತು
ಇನ್ನು ಕಲಿಯುಗ ಜಾಸ್ತಿಯಾಯಿತು
ಇಂಥಾ ಪಾಪಗೇಡಿ ಮುಂಡೇ ಮಕ್ಕಳನ್ನ
ಮೂಗ ಗಿಣ್ಣಿಗಿಣ್ಣಿಗೆ ಕೂದಿ
ನಿಂಬೇ ಹಣ್ಣು ಹಚ್ಚಿ ಸಮುದ್ರದ ಕರೆಗೆ ಬಿಟ್ಟುಬಿಡು
ಎಂಬುದಾಗಿ ಹೇಳಿ
ಬಸವಣ್ಣನವರು ಉದ್ದಂಡಪ್ಪನವರಿಗೆ ನಾಯವನ್ನು ಕೊಟ್ಟು
ಕಾಯ ಸಹಿತ ಕೈಲಾಸಕ್ಕೆ ಹೋದರಂತೆ
ಲಿಂಗಾಂಗ್ಯ

(ವಾದ್ಯ, ಕುಣಿತ ಪ್ರಾರಂಭ)

– (ಹಾಡಿದ್ದು : ಯಜಮಾನ್ ಸಿದ್ಧಯ್ಯ ಮತ್ತು ತಂಡದವರು)

ಸಂ. ಟಿ. ಗೋವಿಂದರಾಜು

# ವೀರಭದ್ರನ ಒಡಪು ಕುಣಿತ

ಎಲ್ಲಾ ಧರ್ಮಗಳೂ ತಮ್ಮ ತತ್ವ, ಉದ್ದೇಶಗಳನ್ನು ಜನಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತಿಳಿಸಿಕೊಡಲು ತಮ್ಮದೇ ರೀತಿಯ ಕಲಾರೂಪಗಳನ್ನು ಸೃಷ್ಟಿಸಿಕೊಂಡಿವೆ. ವೀರಶೈವ ಪ್ರಚಾರಕರು ಸಹ ಅದರಿಂದ ಹೊರತಾಗಿಲ್ಲ. ವೀರಶೈವವನ್ನು ವಿಶೇಷವಾಗಿ, ವೀರಭದ್ರನ ಪುರಾಣ-ವಿಶೇಷಗಳನ್ನು ಅತ್ಯಂತ ನಾಟಕೀಯವಾಗಿ ನಿರೂಪಿಸುವ ಒಂದು ಪಾತ್ರವಾಗಿ ಜನಪದ ಪ್ರದರ್ಶಕ ಕಲೆಗಳಲ್ಲಿ ವೀರಭದ್ರನ ಒಡಪುಗಳು ಮತ್ತು ಕುಣಿತ ಗಮನ ಸೆಳೆಯುತ್ತದೆ.

ದಕ್ಷ ಪ್ರಜಾಪತಿಯ ಮೇಲಿನ ಸೇಡಿನಿಂದಾಗಿ ಶಿವನ ಜಟೆಯಿಂದ ವೀರಭದ್ರನ ಅವತಾರವಾಯಿತೆಂಬುದು ಕತೆ. ದಕ್ಷನ ಯಜ್ಞವನ್ನು ಧ್ವಂಸಮಾಡಿ, ಆತನ ತಲೆ ಕಡಿದ ವೀರಭದ್ರನ ಅಟಾಟೋಪವನ್ನು ಕಣ್ಣಿಗೆ ಕಟ್ಟುವಂತೆ ತೋರಿಸಲು ಪಾತ್ರಧಾರಿ ಹಾಕುವ ವೇಷ, ಹಾವ-ಭಾವ, ಆರ್ಭಟ, ಮಾತುಗಾರಿಕೆ, ಅವಕ್ಕೆ ಪೂರಕವಾದ ವಾದ್ಯ ಮೇಳಗಳು ಯಶಸ್ವಿಯಾಗುತ್ತವೆ.

ಲಿಂಗಾಯಿತ ತತ್ವಾನುಯಾಯಿಗಳಲ್ಲಿ ವಿಶೇಷವಾಗಿ ಬಡಗಿ, ಪುರವಂತ ಮೊದಲಾದ ಕೆಲವು ಕಾಯಕ ವೃತ್ತಿಯವರು ವೀರಭದ್ರನ ವೇಷಹಾಕುವ ಪದ್ಧತಿ ಇರಿಸಿಕೊಂಡಿದ್ದಾರೆ. ಇವರಿಗೆ ಲಿಂಗದಬೀರರು, ವೀರಗಾಸೆಯವರು ಎಂಬ ಹೆಸರುಗಳೂ ಇವೆ. ಕುಲಸ್ಥರ ವಿವಾಹಾದಿ ಧಾರ್ಮಿಕ ಆಚರಣೆಗಳಲ್ಲಿ ವೀರಭದ್ರ ಅಥವಾ ವೀರಗಾಸೆ ತಂಡದವರಿಗೆ ಆಹ್ವಾನ ಇರುತ್ತದೆ. ಶಿವಲಾಂಛನದ ವಿಶೇಷ ವೇಷಭೂಷಣಗಳಿಂದ ಅಲಂಕೃತನಾದ ವ್ಯಕ್ತಿ, ಸಮಾಳ, ಸನಾದಿ ಮೊದಲಾದ ವಾದ್ಯಗಳ ಆರ್ಭಟವನ್ನನುಸರಿಸಿ, ತಾನೂ ದೊಡ್ಡ ದನಿಯಲ್ಲಿ ಖಡ್ಗ ಅಥವಾ ವಡಬುಗಳನ್ನು ಹೇಳುತ್ತಾನೆ. ವಡಬು ನಿಂತಾಗ ಮತ್ತು ಮಧ್ಯೆ ಮಧ್ಯೆ ವಾದ್ಯಗಳನ್ನು ನುಡಿಸಲಾಗುತ್ತದೆ.ಆಗ ವೇಷಧಾರಿಯೂ ಖಡ್ಗ, ಗುರಾಣಿಗಳೊಂದಿಗೆ ಅಬ್ಬರಿಸಿ ಕುಣಿತ ಮಾಡುತ್ತಾನೆ.

ವಡಬು ಉಗ್ಗಡಣೆ ವೀರಾವೇಶದ ಉದ್ಗಾರದಂತಿರುತ್ತದೆ. ಉಗ್ಗಡಿಸುವಲ್ಲಿ ವೀರಾವೇಶದ ಜೊತೆಗೆ ಭಾವಾವೇಶವಿರುತ್ತದೆ. ಉತ್ಸಾಹ ಉಕ್ಕುತ್ತಿರುತ್ತದೆ. ಪುರಾತನ ಖಡ್ಗ ಅಥವಾ ವಡಬುಗಳಲ್ಲಿ ವೀರಗಾಥೆಗಳೇ ಹೆಚ್ಚು; ಅಲ್ಲಿ ವೀರಭದ್ರನ ವೀರತನ, ವೀರವೇಷ, ವೀರಾಯುಧಗಳ ಪರಿಚಯವಾಗುತ್ತದೆ. ಈ ವಡಬುಗಳು ವಚನ ಪ್ರಕಾರಕ್ಕೆ ಪ್ರೇರಣೆ ನೀಡಿದುವು ಎಂಬ ಅಭಿಪ್ರಾಯವೂ ಇದೆ.

ವಡಬುಗಳಲ್ಲಿ ಆರಂಭದ ಉಗ್ಗಡಿಕೆ 'ಆಹಾಹಾರುದ್ರ.....' ಎಂಬುದೇ ಒಂದು ರೀತಿಯಲ್ಲಿ ವಡುಬುಗಳ ವೀರಾಂಕಿತವೇನೋ ಎಂಬಂತೆ ವೀರಭದ್ರಾನ್ವಯವಾಗಿವೆ. ವಡಬುಗಳ ಒಳಮಿಡಿತಗಳೆ ವೀರರಸೋಜ್ವಲಿತವಾಗಿರುವ ಕಾರಣ ವಡಬುವಿನ ಶಬ್ದಗಳೆಲ್ಲ ವೀರಭದ್ರ ಪರಿಸರವನ್ನು ನಿರ್ಮಿಸುತ್ತವೆ. ವೀರಾಂಕಿತ ಪ್ರತಿಮಾಗಳಂತೆ ಭಾವಪ್ರೇರಣೆ ಒದಗಿಸುತ್ತವೆ. ವಡಬುವಿನ ವೀರಾಂಕಿತ 'ಅಹಹಾ ರುದ್ರ'ದಲ್ಲಿ ವೀರಭದ್ರನ ಸ್ಮರಣೆ ಅದ್ವಿತೀಯವಾಗಿರುತ್ತದೆ. ಅವನ ಕಥಾನಕಗಳು, ವ್ಯಕ್ತಿತ್ವ ವರ್ಣನೆಗಳು, ಆಯುಧಗಳ ಅವನ ಜನನಗಾಂಭೀರ್ಯ ಇತ್ಯಾದಿಗಳೇ ವಡಬುವಿನ ವಸ್ತುವಾಗಿರುತ್ತವೆ. ಆದರೂ ಶಿವಶರಣರು ಹಾಗೂ ವಚನವಸ್ತುಗಳನ್ನು ಕಾಲಾಂತರದಲ್ಲಿ ವಡಬುಕಾರರಾದ ವೀರಗಾಸಿ ಪುರವಂತರು ಸೇರಿಸಿಕೊಂಡು ಘೋಷವಾದುವುದುಂಟು. ಕೆಲವು ವಡಬುಗಳನ್ನ ಈಗ ಗಮನಿಸಬಹುದು :

i. ಅಹಹಾರುದ್ರ–ಅಹಹಾವೀರ, ನಮ್ಮ ಶ್ರೀ ವೀರಭದ್ರ ದೇವರು ಹುಟ್ಟಿದಾಗಲೆ ಹೂವಿನಕಾಶಿ, ವಿಷ್ಣುಕಾಶಿ, ಬ್ರಹ್ಮಕಾಶಿ, ಮೆಟ್ಟುವ ಹೊನ್ನಿನ ಹಾವಿಗೆ ಸಾವಿರ ಶಿರಸ, ಎರಡು ಸಾವಿರ ಭುಜ ಮೂರು ಸಾವಿರ ಕಣ್ಣು.... ನಮ್ಮ ವೀರಭದ್ರ ದೇವರು ಹೇಗೆ ಬರುತ್ತಿದ್ದರೆಂದರೆ ಕೂಗುವ ಹೆಗ್ಗಾಳ, ಕೈಯೊಳು ತಿರುಗುವ ಚಪ್ಪಗೊಡಲಿ, ಗುಜದಾಂಡು.... ಶೂಲಬಾಣ ಶಶಿಯ ಬಾಣ ರಾಟಿಬಾಣ ಹೊಗೆಯ ಬಾಣ ಇಂತಿಪ್ಪು ನಮ್ಮ ಶ್ರೀ ವೀರಭದ್ರದೇವರು ಅಯ್ವತ್ತಾರು ದೇಶದ ಆಯುಧಗಳನ್ನು ಧರಿಸಿಕೊಂಡು ಹೇಗೆ ಬರುತ್ತಿದ್ದರೆಂದರೆ ಖಿಡ್ಗಂಕಕ್ಕಲಲಲ ಎಂದು ಕೂಗುತ್ತ.... ಕರಿ(ಕು) ವೀರಭದ್ರ ಕರುಣಾಸಮುದ್ರ ಖಡೆ ಎಂದ.

ii. ಅಹಹಾವೀರ ಅಹಹಾರುದ್ರ ಅಹಹಾ ಶರಭಿ ನಮ್ಮ ವೀರಭದ್ರ ದೇವರೂ ದಕ್ಷನ ಹೋಮ ಕುಂಡಕ್ಕೆ ಬಂದಾಗ ಆತನ ಘೋರರೂಪ ಹೇಗಿತ್ತೆಂದರೆ ಮುಖವು ಸೂರ್ಯನಂತೆ ಹೊಳೆಯುತ್ತಿತ್ತು ಕಣ್ಣುಗಳು ಕಿಡಿಗಳನುಗುಳುತ್ತಿದ್ದುವು.... ಶ್ರೀ ವೀರಭದ್ರ ಕಡಕ್ಕೆಡೆ.

iii. ವಿಭೂತಿ ಕುರಿತಂತೆ : 'ಅಹಹಾ ರುದ್ರಾ, ಮಹದೈಶ್ವರ್ಯವು ಪ್ರಾಪ್ತಿಯಾಗಬೇಕೆಂದರೆ ಶ್ರೀ ವಿಭೂತಿಯಲ್ಲಿದೆ. ಮತ್ತೆ ಬೇರಿಲ್ಲ ನೋಡಾ। ಸರ್ವಸಿದ್ಧಿ ದೊರಕಬೇಕಾದರೆ ಶ್ರೀ ವಿಭೂತಿಯಿಂದಲ್ಲದೆ ಮತ್ತೆ ಬೇಕಿಲ್ಲ ನೋಡಾ....'

iv. ಬಸವೇಶ್ವರನ ಕುರಿತು 'ಅಹಹಾ ರುದ್ರಾ ನಮ್ಮ ಬಸವೇಶ್ವರನು ಭಕ್ತ ಜನಂಗಳ ನಾಲ್ಕು ವಿಧದಿ ಸಲಹುವನು; ಅಥರ್ವಣ ವೇದಗಳನ್ನು ವಿಷ್ಣು ತಂದು ಬ್ರಹ್ಮನಿಗೆ ಬ್ರಹ್ಮ ತಂದು ಸರಸ್ವತಿಗೆ.... ವಿಘ್ನೇಶ್ವರ ರೇವಣ ಸಿದ್ದೇಶ್ವರನಿಗೆ ಕೊಟ್ಟನು ಆಗ ರೇವಣಸಿದ್ಧರನು ಎನಗೆ ಕೊಟ್ಟನು....' ಖಿಡೇ ಖಿಡೇ.

– ಈ ವಡಬುಗಳಲ್ಲಿ ವೀರಶೈವದ ಸಾಂಸ್ಕೃತಿಕ ಆಚಾರಗಳನ್ನು ಬಸವಣ್ಣ, ರೇವಣಸಿದ್ಧೇಶ್ವರ ಪಾರಂಪರಿಕ ಮಣಿಹವನ್ನು ಸ್ಮರಿಸಿಕೊಳ್ಳುವ ಹವಣು ಇದೆ.

ಹೀಗೆ ಪಾರಂಪರಿಕ ಸಾಹಿತ್ಯ ಹಾಗೂ ವಚನಗಳಿಂದ ಪ್ರೇರಿತರಾದ ಪುರವಂತರು, ವೀರಗಾಸೆಗಳು, ಲಿಂಗಬೀರರು ವಡಬುಗಳನ್ನು ಹೇಳುವಲ್ಲಿ ಅವನ್ನೆಲ್ಲ ಬಳಸಿಕೊಂಡು ವೀರಭದ್ರ ಚರ್ಯೆಯನ್ನು ತೋರುತ್ತಾರೆ. ಕಾಲಾಂತರದಲ್ಲಿ ವಡಬುಗಳಲ್ಲಿ ಶರಣರ ವ್ಯಕ್ತಿತ್ವಗಳನ್ನು ಆಧುನಿಕ ವಿಷಯಗಳನ್ನೂ ಮೇಳೈಸಿರುವುದು ಇಂದಿನ ಉಗ್ಗಡಿಕೆಗಳಲ್ಲಿ ಕಾಣಬರುತ್ತದೆ.

೧. ಅಹಹಾ ವೀರಾ, ಆಹಹರುದ್ರ.... ಶ್ರೀ ಶಂಕರನು ಕಡುಕೋಪದಿಂ ಕಿಡಿಗಣ್ಣ ತೆರೆಯಲು ಆಗ ಶ್ರೀ ವೀರಭದ್ರನು ಗುಡುಗುಡಿಸಿ ಆರ್ಭಟಿಸಿ ಪೊಡವಿಯು ನಡಗುವಂತೆ ಕೇಕೆ ಹೊಡೆದು.

೨. ಅಹಹಾ ವೀರಾ, ಅಹಹಾ ರುದ್ರ, ಅಕಂಡಹಲಿಗೆ, ಮಾರಾಂಕ ಖಡ್ಗ, ತರಿಶೂಲ, ಶಂಖು, ಡಮರುಗ, ಭುಗಿಲ್, ಭುಗಿಲ್ .... ನಮ್ಮ ಗಂಡುಗಲಿ ಕರಿವೀರಭದ್ರ ಧಿಗಲ್ ಭುಗಿಲ್ .... ಭದ್ರಕಾಳಿಯ ರಮಣ ಮೊರೆಹೊಕ್ಕ ಭಕ್ತರ ಮೇಲೆ ಬಹು ಕರುಣಃ ಕಡೆ ಕಡೆ.

೩. ದಕ್ಷನ ಹರಿದ ತಲೆಗೆ ಕುರಿದಲೆಯನ್ನಿಟ್ಟು ರಕ್ಷಿಸಿದ ನಮ್ಮ ಅಭಿನವ ರುದ್ರ ಕರುಣಾಸಮುದ್ರ ಶ್ರೀ ವೀರಭದ್ರ ಕಡಕ್ಕಡೆ।

೪. ರಾಚೋಟಿ ವೀರಭದ್ರದೇವರ ಪ್ರತಾಪವೆಂತೆಂದೊಡೆ। ಪಾತಾಳದಿಂ ಕೆಳಗೆ ಪಾದ। ಸುರಲೋಕದಿಂ ಮೇಲೆ ಉತ್ತಮಾಂಗ ಬ್ರಹ್ಮಾಂಡವೇ ಮಕುಟಾ। ಗಗನವೇ ಮುಖ....

ಈ ವಡಬುಗಳ ಉದ್ಗಾರಗಳಿಂದ, ಪ್ರಭಾವಪ್ರೇರಿತವಾದಂತೆ 'ಅಲ್ಲಾಹ್‌ಶರಭಾವತಾರ ಕಡಕ್ಕಡೇ' ಎಂದು ಗುಗ್ಗುಳ ಸಮಯದಲ್ಲಿ ಮುಸ್ಲಿಮರೂ ಉಗ್ಗಡಿಸಿದ ಬಗ್ಗೆ ಹೇಳಲಾಗಿದೆ.

(ಆಕರ : ಡಾ॥ ಎಂ.ಜಿ. ನಾಗರಾಜ್ : ಕಲ್ಯಾಣ ನಾಡಿನಲ್ಲಿ ವೀರಭದ್ರ; ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ; ೨೦೧೦; ಪು-೫೪-೫೬).

# ಸಿಂದ್ ಮಾದಿಗರ ಹಾಡ್ಗುಣಿತಗಳು

ಸಿಂದ್ ಮಾದಿಗರು, ಮಾದಿಗರ ಉಪ ಪಂಗಡಗಳಲ್ಲಿ ಒಂದಾಗಿದ್ದು ಸಾಮಾಜಿಕವಾಗಿ ಮಾದಿಗರನ್ನು ಆಶ್ರಯಿಸಿ ಬದುಕಿದವರು. ಆದರೆ ಸಾಂಸ್ಕೃತಿಕವಾಗಿ ತಮ್ಮದೇ ಅನನ್ಯತೆಯನ್ನು ಪಡೆದುಕೊಳ್ಳಲು ಸಾಧ್ಯವಾಗಿರುವುದು ಅವರಲ್ಲಿನ ಸಿಂದ್ ಕುಣಿತ ಆಚರಣೆ, ಸಿಂದು ಭಾಗವತದಂತಹ ಕಲೆಗಳಿಂದ. ಈಗ ಅವು ಅಪರೂಪವಾಗಿದ್ದರೂ ಅಧ್ಯಯನದ ದೃಷ್ಟಿಯಿಂದ ಬಹು ಮಹತ್ವ ಪಡೆದಂತಹವು. ಕೋಲಾರ ಭಾಗದ ತೆಲುಗು ಮಾತೃಭಾಷೆಯ ಈ ಜನ ಸಮುದಾಯದ ಕುರಿತು ಸಾಹಿತಿ ಕೋಟಗಾನಹಳ್ಳಿ ರಾಮಯ್ಯ ಅವರು ಬರೆದಿರುವ ಪುಸ್ತಕದಿಂದ ಆಯ್ದ ಭಾಗಗಳನ್ನು ಇಲ್ಲಿ ನೀಡಿದೆ :

**ಸಮುದಾಯದ ಹೆಸರಿನ ಅರ್ಥ ಮತ್ತು ಪ್ರಾಚೀನತೆಯ ಚರ್ಚೆ**

ಯಾವುದೇ ಜನಾಂಗದ ಮೂಲ ಅವರು ಸ್ವೀಕರಿಸಿರುವ ಕಸುಬನ್ನು ಅವಲಂಬಿಸಿರುವುದು ಭಾರತೀಯ ಸಮಾಜದ ಪ್ರಧಾನ ಲಕ್ಷಣವೇ ಆಗಿದೆ. ಮಾದಿಗ ಜನಾಂಗಕ್ಕೆ ಈ ಹೆಸರು ಬಂದಿರುವುದು ಕೂಡ ಇದೇ ಕಾರಣದಿಂದ. ಮಾದಿಗ ಪದ ತೆಲುಗು ಮೂಲವಾದ್ದರಿಂದ ತೆಲುಗಿನ ಅರ್ಥಕೋಶದಲ್ಲೂ ಈ ವೃತ್ತಿಗೆ ಸಂಬಂಧಿಸಿದಂತೆಯೇ ಅದರ ಅರ್ಥಗಳನ್ನೂ ನೀಡಲಾಗಿದೆ. ಆ ಪ್ರಕಾರ 'ಮಾದಿಗ' ಎಂದರೆ ಚಪ್ಪಲಿ ಹೊಲೆದು ಬದುಕುವ ಜಾತಿ, ಗೋಹಿಂಸಕ, ಮಾತಂಗ, ಚಪ್ಪಲಿ, ವ್ಯವಸಾಯಕ್ಕೆ ಬೇಕಾದ ಕಪಿಲೆ ಬಾನೆ, ಚರ್ಮಪಟ್ಟಿ ಇತ್ಯಾದಿ ಸಿದ್ಧಪಡಿಸಲು ಚರ್ಮ ಮೂಲ ವಸ್ತುವಾದ್ದರಿಂದ, ಅದನ್ನು ಪಡೆಯಲು ಗೋವುಗಳನ್ನ ಕಡಿದು, ಸಿಗಿದು ಮಾಡುವುದರಿಂದ, ಅದನ್ನು ಪಡೆಯಲು ಗೋವುಗಳನ್ನ ಕಡಿದು, ಸಿಗಿದು ಮಾಡುವುದರಿಂದ ಮಾದಿಗರು ಉಳಿದವರ ಕಣ್ಣಿಗೆ ಗೋಹಿಂಸಕರಾಗಿ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಚರ್ಮಗಾರಿಕೆಯೇ ಕಸುಬಾದ ಮಾದಗರಿಗೆ ಈ ವೃತ್ತಿ ಮೂಲದ ಹೆಸರು ತಗುಲಿಕೊಂಡಿದ್ದೇನೋ ಸರಿ. ಆದರೆ ಈ ಮಾದಿಗ ಪದದ ಹಿಂದೆ 'ಸಿಂದ್' ಸೇರಿ 'ಸಿಂದ್ ಮಾದಿಗ' ಆದದ್ದರ ಹಿನ್ನೆಲೆ ಏನಿರಬಹುದು? ವೃತ್ತಿ ಸೂಚಕ ಮಾದಿಗ ಪದದಂತೆಯೇ ಸಿಂದ್ ಕೂಡ ಇವರ ವೃತ್ತಿಯನ್ನೇ ಸೂಚಿಸುತ್ತಿರಬಹುದೆ? ಹಾಗಾದರೆ 'ಸಿಂದು' ಎಂಬುದು ಯಾವ ವೃತ್ತಿ? ಸಿಂದು ವೃತ್ತಿಯನ್ನು ತಮ್ಮ ಮೂಲ ಕಸುಬಾದ ಚರ್ಮಗಾರಿಕೆಯನ್ನು ತೊರೆದ ನಂತರ ಕೈಗೊಂಡಿರಬಹುದೆ? ಅಥವಾ ಅದಕ್ಕಿಂತ ಮೊದಲೆ? ಇಲ್ಲ ಜತೆ ಜತೆಯಲ್ಲಿ ಎರಡೂ ವೃತ್ತಿಗಳು ಸಾಗುತ್ತಾ ಬಂದು ಒಂದು ಹಂತದಲ್ಲಿ ಮೊದಲ ವೃತ್ತಿ ಕೈಬಿಟ್ಟು ಎರಡನೆಯದನ್ನೇ ಆಯ್ಕೆ

ಮಾಡಿಕೊಂಡಿರಬಹುದೆ? ಈ ಎಲ್ಲ ಪ್ರಶ್ನೆಗಳಿಗೆ ಸಿಗುವ ಸಮರ್ಥ ಉತ್ತರದಲ್ಲೇ 'ಸಿಂದ್ ಮಾದಿಗ' ಹೆಸರಿನ ಅರ್ಥ ಮತ್ತು ಪ್ರಾಚೀನತೆಯೂ ಅಡಗಿದೆ ಎನ್ನಬಹುದು.

ಸಿಂದ್ ಎಂಬ ತೆಲಗು ಆಡುಮಾತಿನ ಪ್ರಯೋಗ 'ಚಿಂದು' ಪದದಿಂದ ಹುಟ್ಟಿದ್ದು, ಚಿಂದು ಎಂದರೆ ನಾಟ್ಯ, ಮಾದಿಗರ ಬಳಿ ಯಾಚಿಸುವ ಒಂದು ಶಾಖೆ ಎಂಬ ಅರ್ಥವನ್ನು ತೆಲುಗು ಅರ್ಥಕೋಶ ನೀಡಿದೆ. 'ಚಿಂದಾಡು' ಎಂದರೆ ಆವೇಶದಿಂದ ಕುಣಿದಾಡು ಎಂಬರ್ಥವಿದೆ. ಆವೇಶದಿಂದ ನಾಟ್ಯವಾಡಿ ಮಾದಿಗರ ಬಳಿ ಭಿಕ್ಷೆ ಬೇಡುವ ಮಾದಿಗ ಶಾಖೆಯೇ 'ಚಿಂದು ಮಾದಿಗರು' ಆರ್ಥಾತ್ ಸಿಂದ್ ಮಾದಿಗರು ಆಡು ಮಾತಿನಲ್ಲಿ 'ಸಿನ್ನಮಾದಿಗಲು' ಅಂದರೆ ಚಿಕ್ಕಮಾದಿಗರು ಎಂಬ ಪ್ರಯೋಗ ರೂಢಿಯಲ್ಲಿದೆ.

ಮಾದಿಗ ಕುಲದ ಮೂಲ ಸಂಸ್ಕೃತಿಯ ಭಾಗವಾದ ಸಿಂದ್ ಮಾದಿಗರು ಇತಿಹಾಸದ ಯಾವ ಹಂತದಲ್ಲಿ ಪ್ರತ್ಯೇಕ ಉಪಶಾಖೆಯಾಗಿ ಟಿಸಿಲೊಡೆದರು ಎಂಬುದು ಚಿದಂಬರ ರಹಸ್ಯವಾಗಿಯೇ ಉಳಿದಿದೆ. ಈ ಪ್ರತ್ಯೇಕತೆ ಮಾದಿಗ ಕುಲದಲ್ಲೇ ಇರುವ ಇತರೆ ಪಂಗಡಗಳ ಸ್ವರೂಪದ್ದೆ ಅಥವಾ ಸಂಪೂರ್ಣ ಭಿನ್ನವಾದದ್ದೆ ಎಂಬುದು ಕೂಡ ಬಿಡಿಸಲಾಗದ ಒಗಟಾಗಿಯೇ ಉಳಿದಿದೆ. ಸಿಂದ್ ಮಾದಿಗರು ಮಾದಿಗ ಕುಲದ ಬಹುತೇಕ ಸಾಂಸ್ಕೃತಿಕ ಆಚರಣೆಗಳಲ್ಲಿ ಏಕೀಭವಿಸಿದರೂ ಉಳಿದ ಪಂಗಡಗಳಲ್ಲಿಲ್ಲದ ಕೆಲವು ವೈಶಿಷ್ಟ್ಯಗಳನ್ನು ಹೊಂದಿದ್ದಾರೆ. ಈ ವೈಶಿಷ್ಟ್ಯತೆಗಳೇ ಇವರ ಪ್ರತ್ಯೇಕತೆಗೂ ದಾರಿ ಮಾಡಿರಬಹುದಾದ ಸಾಧ್ಯತೆ ಇದೆ. ಈ ವೈಶಿಷ್ಟ್ಯಗಳಿಗೆ ನಿರ್ದಿಷ್ಟ ಚಾರಿತ್ರಿಕ ಪ್ರೇರಣೆಗಳೂ ಇರುವಂತಿದೆ.

ಸಿಂದ್ ಮಾದಿಗರ ಅನನ್ಯತೆ ಮತ್ತು ಪ್ರತ್ಯೇಕತೆಗೂ, ಎಲ್ಲ ಮಾದಿಗ ಕುಲಗಳಿಗೂ ಕಡ್ಡಾಯವಾದ ಬಹುಮುಖ್ಯ ಸಾಂಸ್ಕೃತಿಕ ಆಚರಣೆ 'ತಂಗಡಿದ್ಯಾವರ'ಕ್ಕೂ ಅನ್ಯೋನ್ಯ ಸಂಬಂಧವಿದೆಯೆಂಬುದನ್ನು ಈಗಾಗಲೇ ಈ ಜನಾಂಗದ ಪೌರಾಣಿಕ ಹಿನ್ನಲೆಯನ್ನು ಶೋಧಿಸುವ ಈ ಅಧ್ಯಯನದ ಮೊದಲ ಪುಟಗಳಲ್ಲಿ (ನೋಡಿ: ಸಿಂದ್ ಮಾದಿಗರ ಸಂಸ್ಕೃತಿ ಕೃತಿಯ ಮೊದಲ ಅಧ್ಯಾಯ) ವಿವರಿಸಲಾಗಿದೆ. 'ತಂಗಡಿದ್ಯಾವ್ರ'ದ ಅವಿಭಾಜ್ಯ ಅಂಗವಾದ ಸಿಂದ್ ಕುಣಿತದ ಆಚರಣಾ ಹಕ್ಕು ಇರುವುದು ಕೂಡ ಸಿಂದ್ ಮಾದಿಗರಿಗೆ ಮಾತ್ರ ಎಂಬುದನ್ನು ಸೂಚಿಸಲಾಗಿದೆ. ಈ ಸಿಂದ್ ಕುಣಿತದಿಂದಾಗಿಯೇ ಇವರಿಗೆ ಈ ಹೆಸರು ಬಂದಿರುವುದನ್ನು 'ಇದುವರೆಗೆ ನಡೆದಿರುವ ಸಮೀಕ್ಷೆ'ಯಡಿ ಚರ್ಚಿಸಲಾಗಿದೆ. ಈ ವೃತ್ತಿ ವಿಕಾಸವಾದ ಬಗೆಯನ್ನು ವಿಶ್ಲೇಷಿಸುವುದರ ಮೂಲಕ ಜನಾಂಗದ ಹೆಸರಿನ ಅರ್ಥ ಮತ್ತು ಪ್ರಾಚೀನತೆಯ ಚರ್ಚೆಯನ್ನು ಬಹುಮಟ್ಟಿಗೆ ಪೂರ್ಣಗೊಳಿಸಬಹುದೆನ್ನುತ್ತದೆ.

ಬುಡಕಟ್ಟು ಸ್ವರೂಪದ ಜನಾಂಗಗಳಲ್ಲಿ ಪ್ರಚಲಿತವಿರುವ ಸಾಂಸ್ಕೃತಿಕ ಆಚರಣೆಗಳು ಒಂದು ನಿರ್ದಿಷ್ಟ ಸೂತ್ರ ಮತ್ತು ಚೌಕಟ್ಟಿನ ಆಧಾರದ ಮೇಲೆ ನಡೆಯುವುದಷ್ಟೇ ಅಲ್ಲದೆ ಅದರ ಪ್ರತಿಯೊಂದು ಹಂತವೂ ಹೀಗೆ ಮತ್ತು ಇಂಥವರಿಂದಲೇ ನಡೆಯಬೇಕೆಂಬ ನಿಯಮಕ್ಕೂ ಒಳಪಟ್ಟಿರುತ್ತವೆ. ಉದಾಹರಣೆಗೆ ಮಾರಮ್ಮನಿಗೆ

ಕೋಣ ಬಲಿಕೊಡುವ ಆಚರಣೆಯನ್ನೇ ನೋಡಬಹುದು. ಕೋಣನ ಮುಂದಲೆಯನ್ನು ಇಂಥವರು ಹಿಡಿಯಬೇಕು, ಇಂಥವರು ಹೀಗೆಯೇ ಕಡಿಯಬೇಕು, ಇಂತಿಂಥವರಿಗೆ ಹೀಗೆಯೇ ಬಲಿ ಹಂಚಬೇಕೆಂಬ ಸೂತ್ರ, ನಿಯಮಗಳು ಬದ್ಧಗೊಂಡಿವೆ. ಈ ಬದ್ಧ ನಿಯಮಗಳ ಉಲ್ಲಂಘನೆ ಘೋರ ಪರಿಣಾಮಗಳಿಗೆ ದಾರಿಯಾಗಬಹುದೆಂಬುದು ಆದಿಮ ಜನಾಂಗಗಳ ನಂಬಿಕೆ.

'ತಂಗಡಿ ದ್ಯಾವ್ರ'ವೂ ಇದಕ್ಕೆ ಹೊರತಲ್ಲ. ಈ ಆಚರಣೆಯ ಅವಿಭಾಜ್ಯ ಅಂಗವಾದ ಸಿಂದ್ ಕುಣಿತಕ್ಕೆ ವಿಶೇಷ ಆಚರಣಾತ್ಮಕ ಕೌಶಲ್ಯ ಅಗತ್ಯವಿದ್ದು ಅದನ್ನು ಸಮರ್ಥವಾಗಿ ನೆರವೇರಿಸುತ್ತಾ ಬಂದ ಮಾದಿಗರಲ್ಲಿನ ಒಂದು ಗುಂಪಿನಷ್ಟೇ ಇದು ಸೀಮಿತವಾಗಿರಬಹುದು. ಈ ಆಚರಣಾತ್ಮಕ ಕೌಶಲ್ಯಕ್ಕೆ ಮುಂದೆ 'ಪಾವಿತ್ರ್ಯ' ಅಂಟಿಕೊಂಡು ಅದು ವಂಶ ಪಾರಂಪರ್ಯೆಯ ಕುಲ ಹಕ್ಕಾಗಿ ಮುಂದುವರೆದಿರಬಹುದು. ಸಿಂದ್ ಕುಣಿತದ ಶೈಲಿ ಮತ್ತು ಸ್ವರೂಪವನ್ನು ಅವಲೋಕಿಸಿದರೆ ಈ ವಿಶ್ಲೇಷಣೆ ಇನ್ನಷ್ಟು ಸ್ಪಷ್ಟಗೊಳ್ಳಬಹುದು.

ಸಿಂದ್ ಕುಣಿತ ಮುಖ್ಯವಾಗಿ ಪ್ರಸಾದನ, ಕುಣಿ, ಗೇಯ ಎಂಬ ಮೂರು ವಿಭಾಗಗಳನ್ನು ಒಳಗೊಂಡಿದೆ. ಪೂಜೆಗೆ ಬಳಸಲಾದ ಅರಿಶಿಣ-ಕುಂಕುಮಗಳೇ ಪ್ರಸಾದನಕ್ಕೆ ಮೂಲ ಸಾಮಾಗ್ರಿ. ಅರಿಶಿಣ, ಕುಂಕುಮಗಳನ್ನು ಮುಖ, ಮೈ ಕೈಗಳಿಗೆ ಪ್ರಸಾದನವಾಗಿ ಬಳಿದುಕೊಂಡು ಕುಣಿತಕ್ಕೆ ಸಜ್ಜಾಗುತ್ತಾರೆ. ಇದು ತಯಾರಿ ಹಂತ. ನಂತರದ ಹಂತ ಕುಣಿತ. ತಂಗಡಿ ಗಿಡದ ಸುತ್ತ ೫೦-೬೦ ಗಜಗಳ ಅಂತರದಲ್ಲಿರುವ ಆಯಕಟ್ಟಿನ ಜಾಗವೇ ರಂಗವೇದಿಕೆ. ಈ ರಂಗವೇದಿಕೆಯಲ್ಲಿ ಕೊಂಗುವಾಲ ಕತ್ತಿಗಳನ್ನು ಹಿಡಿದು, ಮಾದಿಗ ಕುಲ ಪುರಾಣವಾದ ಸಿಂದ್ ಕತೆಯನ್ನು ಗೇಯ, ನಾಟಕ ರೂಪದಲ್ಲಿ ಪ್ರದರ್ಶಿಸುತ್ತಾ ಕುಣಿಯುವುದೇ ಮುಂದಿನ ಹಂತಗಳು.

ಈ ಕುಣಿತವು ನಿರ್ದಿಷ್ಟ ಗತಿ, ಲಯಕ್ಕನುಸಾರವಾಗಿ ತಮಟೆ, ಜೌಂಕಣಿ(ಚೌಡಿಕೆ)ಗಳ ಹಿಮ್ಮೇಳಕ್ಕೆ ತಕ್ಕಂತೆ ಇರುತ್ತದೆ. ಇದು ಮೂಲತಃ ಆದಿಮ ಆಚರಣೆಯಾಗಿರುವುದರಿಂದ ಸಹಜವಾಗಿಯೇ ಮನುಷ್ಯನ ಹುಟ್ಟರಿವುಗಳ ಅಭಿವ್ಯಕ್ತಿ ಕ್ರಮವಾಗಿದೆ. ಬೇಟೆ, ಕದನ, ತೃಷೆಗೆ ಸಂಬಂಧಿಸಿದ ಪ್ರಾಥಮಿಕ ಅಭೀಪ್ಸೆಗಳನ್ನು ಪೂರೈಸಿಕೊಳ್ಳುವುದರ ಸಚಿತ್ರ ನಿರೂಪಣೆಯೇ ಈ ಸಿಂದ್ ಕುಣಿತ. ಮದುವೆಯ ಭಾಗವಾಗಿಯೇ ಈ ಆಚರಣೆಯನ್ನು ಅಳವಡಿಸಿಕೊಂಡಿರುವುದಕ್ಕೂ ಒಂದು ವಿಶೇಷ ಕಾರಣ ಇರುವಂತಿದೆ.

ಸಾಮಾನ್ಯವಾಗಿ 'ಮದುವೆ'ಯು ಮುಂದಿನ ಬದುಕನ್ನು ಸ್ವತಂತ್ರವಾಗಿ ನಿರ್ವಹಿಸಲು ರೂಪಿಸಿರುವ ವ್ಯವಸ್ಥೆ. ಈ ಅಧಿಕೃತ ಒಪ್ಪಂದದ ಮೂಲಕ ಗಂಡು ಮತ್ತು ಹೆಣ್ಣು, ಸಂತಾನ ಹಾಗೂ ಸ್ವತಂತ್ರ ಘೋಷಣೆಗೆ ಹಕ್ಕುದಾರರಾಗುತ್ತಾರೆ. ಈ ಸಂತಾನ ಮತ್ತು ಘೋಷಣೆಗೆ ನೀಡಲಾದ ಚೌಕಟ್ಟೆ ಕುಟುಂಬ. ಆದ್ದರಿಂದ ಚಿಕ್ಕಂದಿನಲ್ಲೇ ಅಂದರೆ ಮೈ ನೆರೆಯುವ ಮುನ್ನವೇ ಮದುವೆಯಾಗುವ ಹೆಣ್ಣಿಗೆ ಮತ್ತು ವಯಸ್ಕ

ಗಂಡಿಗೆ ವಯೋಮಾನದಲ್ಲಿರುವ ಅಸಮತೆ ಹೋಗಲಾಡಿಸುವ, ಆ ಮೂಲಕ 'ಕುಟುಂಬ' ಘಟಕದ ಜವಾಬ್ದಾರಿಯನ್ನಷ್ಟೇ ಮುಖ್ಯವೆಂದು ಭಾವಿಸುವ ಒಂದು ಆಚರಣಾತ್ಮಕ ತರಪೇತಿನ ಅಗತ್ಯ ಮನಗಂಡೇ ಇದನ್ನ ಮದುವೆಯ ನಂತರದ ಮುಖ್ಯ ಅಚರಣೆಯನ್ನಾಗಿ ಅಳವಡಿಸಿಕೊಂಡಿರಬಹುದು. ಆದ್ದರಿಂದಲೇ ಈ ಕುಣಿತದ ಮೂಲಕ ಪ್ರಾರಂಭದಲ್ಲಿ ಬೇಟೆ, ಕದನ, ಲೈಂಗಿಕ ತರಪೇತು ನೀಡುತ್ತಿರಬೇಕು. ಆನಂತರ ಒಟ್ಟು ಮಾದಿಗರ ಕುಲಗಳ ಉಳಿವಿಗೇ ಮುಳಿವಾಗಬಹುದಾದ ಸಂದರ್ಭಗಳು ತಲೆದೋರಿದ್ದರಿಂದ ಕುಲ ಐಕ್ಯತೆಗಾಗಿ ಇದನ್ನೊಂದು ಮಾಧ್ಯಮವಾಗಿ ಬಳಸುವುದು ಶುರುವಾಗಿರಬೇಕು. ಯಾಕೆಂದರೆ ಸಿಂದ್ ಕತೆಯ ಗೇಯ ರೂಪದ ಪ್ರದರ್ಶನ ಅದರ ಮೂಲ ಆಚರಣೆಯಾದ ಕುಣಿತಕ್ಕೆ ಹೋಲಿಸಿದಾಗ ಕುಣಿತಕ್ಕಿಂತ ಪ್ರಾಚೀನವಾಗಿರುವುದು ಕಂಡುಬರುತ್ತದೆ. ಬಹುಶಃ ಮಾದಿಗರು ಬುಡಕಟ್ಟು ಹಂತದಲ್ಲಿದ್ದಾಗಿನಿಂದಲೇ ಈ ಆಚರಣೆಯ ಉಗಮವಾಗಿರಬೇಕು.

ಮಾದಿಗರು ಕಾಡು ಗುಡ್ಡಗಳಲ್ಲಿ ನೆಲೆಸಿರುವ ಕಿರಾತಕ ಹಂತದಲ್ಲಿರುವಾಗಲೆ ಅವರಿಗೆ ಈ ತಂಗಡಿ ಗಿಡದ ಸಂಬಂಧ ಬೆಳೆದಿರಬಹುದು. ಗಾಯಗೊಂಡ ಭಾಗಕ್ಕೆ ಅಥವಾ ರಕ್ತಕುರುವಿಗೆ ಈ ಗಿಡದ ಚಕ್ಕೆ, ಸೊಪ್ಪನ್ನು ಅರೆದು ಮೆತ್ತಿದ ಕೂಡಲೆ ರಕ್ತಸ್ರಾವ ನಿಂತು ಹೋಗುವ ಜಾನಪದ ಚಿಕಿತ್ಸೆಯ ಗುಟ್ಟು ಇವರ ಅನುಭವದ ಕೊಡುಗೆಯೇ ಆಗಿರಬೇಕು. ಈಗಲೂ ನೇಗಿಲು ಉಳುವಾಗ ನೊಗ ಹೊತ್ತ ಎತ್ತಿನ ಭಾಗ ಹರಿದು, ಗಾಯಗೊಂಡರೆ ತಂಗಡಿ ಗಿಡದ ಚಕ್ಕೆ ಸೊಪ್ಪನ್ನು ಅರೆದು ಮೆತ್ತಿ.... ಉಳುವುದನ್ನು ಮುಂದುವರೆಸುತ್ತಾರೆ. ಹಾಗೂ ರಕ್ತಕುರು ಎದ್ದಾಗ ಇದರ ಸೊಪ್ಪನ್ನು ಅರೆದು ಮೆತ್ತುತ್ತಾರೆ. ಹೀಗೆ ಹರಿದ ಚರ್ಮವನ್ನು ಮತ್ತಷ್ಟು ಹರಿಯಗೊಡದೆ ರಕ್ಷಿಸಿ ಹದಗೊಳಿಸುವ ಸಾಧನವಾಗಿ, ಆ ಮೂಲಕ ಅದಕ್ಕೊಂದು ಪುರಾಣ ಪ್ರತಿಮಾ ಆವರಣ ಸೃಷ್ಟಿಯಾಗಿರಬಹುದು.

ಬುಡಕಟ್ಟು ಹಂತದಿಂದ ಪಲ್ಲಟಗೊಂಡು ಕೃಷಿ ಸಮುದಾಯಗಳೊಂದಿಗೆ ನೆಲೆ ನಿಲ್ಲಬೇಕಾದ ಅನಿವಾರ್ಯತೆ ಒದಗಿದಾಗ ಇವರ ಚರ್ಮಗಾರಿಕೆಗೆ ಈ 'ತೆಂಗಡಿಗಿಡ' ವರವಾಗಿ ಚರ್ಮ ಹದಗೊಳಿಸುವ ದೇಸಿ ಕೌಶಲ್ಯಕ್ಕೆ ಕಾರಣವಾಗಿರಬಹುದು. ಇಂಥ ಮಹತ್ವವೇ 'ತಂಗಡಿಗಿಡ'ವನ್ನು ದೈವತ್ವದ ಪ್ರತೀಕವಾಗಿಸಿ ಅದರ ಸುತ್ತ ಪುರಾಣ ಪ್ರತಿಮಾ ಆವರಣ ನಿರ್ಮಾಣಗೊಂಡಿರಬೇಕು. ಜಾಂಬವ ತಾತ ವಿಶ್ವಕರ್ಮನಿಗೆ ಈ ತಂಗಡಿ ಗಿಡದ ಎಲೆ, ಹೂ, ಕಾಯಿಗಳನ್ನು ತಾಳಿ, ಕಾಲುಂಗರಕ್ಕೆ ಮಾದರಿಯಾಗಿಟ್ಟು ಕೊಳ್ಳುವಂತೆ ಮಾರ್ಗದರ್ಶನ ನೀಡಿದ್ದು ಕೂಡ ಇದೇ ಹಂತದ ಅನುಭವ ಜನ್ಯ ಪ್ರತಿಮಾ ಕಲ್ಪನೆಯಾಗಿರಬೇಕು.

ಆದರೆ ಸಿಂದ್ ಕುಣಿತದ ಉಗಮ 'ತಂಗಡಿದ್ಯಾವರ'ಕ್ಕೂ ಹಿಂದಿನ ಪ್ರತ್ಯೇಕ ಆದಿಮ ಆಚರಣೆಯಾಗಿರುವ ಸಾಧ್ಯತೆ ಇದೆ. 'ತಂಗಡಿಗಿಡ'ಕ್ಕೂ ಸಿಂದ್ ಕುಣಿತಕ್ಕೂ ಅನಂತರವಷ್ಟೆ ಸಂಬಂಧ ಕೂಡಿ ಬಂದಿರಬೇಕು. 'ಸಿಂದ್ ಕುಣಿತ' ಎಂಬ ಹಣೆ ಪಟ್ಟಿಯೂ ತಂಗಡಿ ದ್ಯಾವರದಂತೆ ಈ ಆದಿಮ ಕುಣಿತಕ್ಕೆ ಅನಂತರ ಅಂಟಿ ಬಂದಿರುವ,

ಕ್ರಿಯಾ ವಾಚಕ ಇರಬಹುದು. ಇದೆಲ್ಲಕ್ಕೂ ಮೊದಲು ಮೂಲದಲ್ಲಿ ಈ ಕುಣಿತ ಅಪ್ಪಟ ಬೇಟೆ, ಕದನ, ಲೈಂಗಿಕ ಹುಟ್ಟರಿವುಗಳ ಅಭಿವ್ಯಕ್ತಿ * ನೃತ್ಯವಾಗಿತ್ತೆಂಬುದನ್ನು ಮುಂದಿನ ವಿವರಣೆಗಳಿಂದ ಮನಗಾಣಬಹುದು.

ಕ್ಷೇತ್ರ ಕಾರ್ಯದ ವೇಳೆ 'ಸಿಂದ್' ಪದದ ಅರ್ಥ ಹೇಳುವಂತೆ ಕೇಳಿದ ಕೂಡಲೆ ಮಹಿಳೆಯರ ಮುಖದಲ್ಲಿ ಮುಸಿಮುಸಿ ನಗು ಶುರುವಾಗುತ್ತಿತ್ತು. ಸಿಂದ್ ಎಂದರೆ ಸಮುದ್ರ ಎಂದು ಗಂಡಸರು ವಿಷಯ ತೇಲಿಸುತ್ತಿದ್ದರು. ಮೊದಲು ಯಾಕಿರಬಹುದೆಂದು ತಿಳಿಯಲಿಲ್ಲ. ಕೊನೆಗೆ ಅಸಾದಿ ವೃತ್ತಿ ಗಾಯಕರಾದ ಮುಷ್ಟೂರು ವೆಂಕಟರಮಣಪ್ಪ ಮತ್ತು ಸಂಪಲ್ಲಿ ವೆಂಕಟಪ್ಪ ಅದರ ನಿಶ್ಚಿತ ಅರ್ಥವನ್ನು ಹೇಳುವುದರ ಬದಲು ಒಗಟಿನಂತೆ ಮಾತನಾಡತೊಡಗಿದರು. ಅವರ ಮಾತಿನ ಅರ್ಥ 'ಈ ಜಗತ್ತು ಹುಟ್ಟಿದ್ದೇ ಸಿಂದ್ ತುಳಿದದ್ದರಿಂದ' ಎನ್ನುವಲ್ಲಿಗೆ ಬಂತು ಮತ್ತು ಒತ್ತಾಯಿಸಲಾಗಿ ಸಿಂದ್ ಕತೆಯಲ್ಲಿ ಬರುವ ಒಂದು ಭಾಗವನ್ನೇ ಹಾಡಿದರು. ಆ ಭಾಗ ಹೀಗಿದೆ :

ಸಿಂದು ಸಿಂದು ಅಂಟಾರು ಸ್ವಾಮಿ
ಯಾಡ ಪುಟ್ಟಿಂಡೇದಿ ಸಿಂದುಕಾದಾ ತಾಲಿಲ್ಲೋ

ಮೀ ತಂಡ್ರಿ ಪೊಯ್ಯಿ ಮೀ ತಲ್ಲಿದಗ್ಗರ
ಸಿಂದು ತೊಕ್ಕಿತೇನೆ ನುವ್ವು ಪುಟ್ಟಿಂಡೇದಿ/ತಾಲಿಲ್ಲೋ

ಆಹೋ ರಾತ್ರಿ ಕಾಲಮಲೋನ
ಕನ್ಯಾ ಪುರುಷುಡು ಸಿಂದು ತೊಕ್ಕುತಾಡು/ತಾಲಿಲ್ಲೋ
ಸಿಂದು ತೊಕ್ಕಿತೇನು ಬಿಂದು ಕಲಿಗೇದಿ
ಬಿಂದುವು ಕದಿಲಿತೇನೆ ಬಿಡ್ಡ ಪುಟ್ಟೇದಿ/ತಾಲಿಲ್ಲೋ

**ಕನ್ನಡದಲ್ಲಿ**

ಸಿಂದು ಸಿಂದು ಅಂತಾರೆ ಸ್ವಾಮಿ
ಎಲ್ಲೆಲ್ಲೂ ಹುಟ್ಟಿದ್ದು ಸಿಂದುತಾನೆ/ತಾಲಿಲ್ಲೋ
ನಿಮ್ಮ ತಂದೆ ಹೋಗಿ ನಿಮ್ಮ ತಾಯಿಯ ಹತ್ತಿರ
ಸಿಂದು ತುಳಿದದ್ದಕ್ಕೇನೆ ನೀನು ಹುಟ್ಟಿರೋದು/ತಾಲಿಲ್ಲೋ

---

* ಈ ಸಿಂದ್ ಕುಣಿತ–ಆಚರಣೆಗೂ ಜೇನುಕುರುಬರ ಕೊಂತಪೂಜೆ ಆಚರಣೆಯ ಆಶಯಕ್ಕೂ ಎಷ್ಟೊಂದು ಸಾಮ್ಯ ಇದೆ ಎಂಬುದಕ್ಕೆ ಓದಿ: ಕಿಕ್ಕೇರಿ ನಾರಾಯಣ: "ಜೇನುಕುರುಬ ಶಮಣರು" ಲೇಖನ, 'ಅರುಹು ಕುರುಹು' ಸಾಹಿತ್ಯಕ ಪತ್ರಿಕೆ (ಮೈಸೂರು), ಜುಲೈ–ಸೆಪ್ಟೆಂಬರ್, 2009.

– ಟಿಗೋ.

ಆಹೋ ರಾತ್ರಿ ಕಾಲದಲೆಲ್ಲಾ
ಕನ್ಯಾಪುರುಷನು ಸಿಂದು ತುಳಿಯುತ್ತಾನೆ/ತಾಲಿಲ್ಲೋ
ಸಿಂದು ತುಳಿದರೇನೆ ಬಿಂದು ಉಕ್ಕುವುದು
ಬಿಂದು ಕೂಡಿದರೇನೆ ಕಂದ ಹುಟ್ಟೋದು/ತಾಲಿಲ್ಲೋ

ಈ ಮೇಲಿನ ಭಾಗದಿಂದ ಸಿಂದ್ ಕುಣಿತದ ಮೂಲ ಸ್ವರೂಪ ಸ್ಪಷ್ಟವಾಗಿಯೇ ಇದೆ. ಇದೊಂದು ಲೈಂಗಿಕ ಕ್ರಿಯೆಯನ್ನು ಸಾದರಪಡಿಸುವ ನೃತ್ಯ. ಕತ್ತಿಹಿಡಿದು ಕುಣಿಯುವ ಶೈಲಿ, ಭಂಗಿಯೂ 'ಸಂಭೋಗ'ದ ತದ್ರೂಪ ವರ್ಣನೆ ಎಂಬುದರಲ್ಲಿ ಅನುಮಾನವಿಲ್ಲ. ಆವೇಶ, ಪಾದಚಲನೆ, ದೇಹದ ತಿರುಚಾಟ, ಕುಣಿತದ ರಭಸ ನೋಡಿದರೆ ಇದು ಸಂಭೋಗದ ಆರಂಭದಿಂದ ಹಿಡಿದು ಅಂತ್ಯದವರೆಗಿನ ಹಂತ ಹಂತದ ನಿರೂಪಣೆ ಎಂಬುದರಲ್ಲಿ ಸಂದೇಹವಂತೂ ಇಲ್ಲ. ಕತ್ತಿ ಹಿಡಿದು ಕಡಿದಿಟ್ಟ ಕುರಿಯ ತಲೆಯನ್ನು ಹಲ್ಲಿನಿಂದ ಕಚ್ಚಿ ಬಿಸಾಡಿಯೋ ಅಥವಾ ಕತ್ತಿಗೆ ಸಿಕ್ಕಿಸಿಕೊಂಡು ಕುಣಿಯುವುದಂತೂ ಬೇಟೆಯಾಡಿ ಆಹಾರ ಸಂಗ್ರಹಿಸುವ ಆದಿಮ ಬದುಕಿನ ಹಸಿಹಸಿ ವಾಸನೆಯೇ ಆಗಿದೆ. ಆದ್ದರಿಂದ ಸಿಂದ್ ಕುಣಿತ ತೀರ ಪ್ರಾಚೀನವಾಗಿರುವುದರ ಜೊತೆಗೆ ಸಿಂದ್ ಮಾದಿಗ ಜನಾಂಗದ ಪ್ರಾಚೀನತೆಯನ್ನು ದೃಢಪಡಿಸುತ್ತದೆ. ಈ ಪ್ರಾಚೀನತೆಯ ಹಸಿ ಹಸಿ ರೂಪ ಬ್ರಿಟೀಷರ ಕಣ್ಣಿಗೆ ಭೀಭತ್ಸಕಾರಿಯಾಗಿಯೂ, ಸಾಮಾಜಿಕ ಗಲಭೆಗೆ ಕಾರಣವಾಗಿಯೂ ಕಂಡದ್ದರಿಂದ ಈ 'ಮಾದಿಗ ಚಿಂದು ಅಥವಾ ಕತ್ತಿ ಕುಣಿತ ೧೮೫೯ ಮತ್ತು ೧೮೭೪ ರಲ್ಲಿ ನಿಷೇಧಗೊಂಡಿತ್ತು.[೧]

ತಂಗಡಿಗಿಡ ಮತ್ತು ತಂಗಡಿ ದ್ಯಾವರಕ್ಕೆ ಸಿಕ್ಕ ಪ್ರಾಮುಖ್ಯತೆಯಿಂದಾಗಿ ಸಿಂದ್ ಕುಣಿತ ಅದರ ಭಾಗವಾಗಿ ಸೇರ್ಪಡೆಯಾಗಿರಬೇಕು. ಆದಾಗಲೆ ಪ್ರತ್ಯೇಕ ಆಚರಣಾ ಕೌಶಲ್ಯ ರೂಢಿಸಿಕೊಂಡಿದ್ದ ಸಿಂದ್ ಮಾದಿಗರ ಕುಲ ಹಕ್ಕಾಗಿರಬೇಕು. ಪ್ರಾರಂಭದಲ್ಲಿ ಸಿಂದ್ ಮಾದಿಗರಿಲ್ಲದ ತಂಗಡಿದ್ಯಾವ್ರವನ್ನು ಊಹಿಸಿಕೊಳ್ಳುವುದೂ ಅಸಾಧ್ಯವಾಗಿತ್ತು.

ಪ್ರಸಾದನ, ಅಂಗಿಕ ಅಭಿನಯ, ನಾಟ್ಯ, ಗೇಯ, ಸಂಗೀತ ಸಮ್ಮಿಳಿತವಾದ ಈ ಸಿಂದ್ ನೃತ್ಯದ ವಂಶ ಪಾರಂಪರ್ಯ ಕೌಶಲ್ಯದಿಂದಾಗಿಯೇ ಅವರು ಮುಂದೆ ಭಾಗವತ ಪರಂಪರೆ ಆರಂಭವಾದಾಗ ಅದನ್ನು ತಮ್ಮದೇ ಶೈಲಿಗೆ ಅಳವಡಿಸಿಕೊಂಡು ಯಶಸ್ವಿಯಾಗಿ 'ಚಿಂದು ಭಾಗವತಲು' ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು. ಸಿಂದ್ ತುಳಿಯುತ್ತಿದ್ದ ಸಿಂದ್ ಮಾದಿಗರು 'ಚಿಂದು ಭಾಗವತ'ರಾಗಿ ನೆಲೆಗೊಂಡ ಬಗೆ ಇದೆಂದು ವ್ಯಾಖ್ಯಾನಿಸಬಹುದು.

ಸಿಂದ್ ತುಳಿಯುತ್ತಿದ್ದುದಕ್ಕಾಗಿ ಆಚರಣೆಯಲ್ಲಿ ಪಾಲು ಪಡೆಯುತ್ತಿದ್ದ ಸಿಂದ್ ಮಾದಿಗರು, ಮುಂದೆ ಇದನ್ನೇ ಕುಲ ಹಕ್ಕಾಗಿ ಮಾಡಿಕೊಂಡಿರುವ ಸಾಧ್ಯತೆಯೇ ಅಧಿಕ.

---

೧. E. Thurston : Castes and Tribes of Southern India Vol. IV P.294 Govt. Press, Madras.

ಈ ಎಲ್ಲ ಕಾರಣಗಳಿಂದ ಸಿಂದ್ ಮಾದಿಗರ ಹೆಸರು ಅವರ ವೃತ್ತಿ ಸೂಚಕವಾದ 'ಸಿಂದ್ ಕುಣಿತ'ದಿಂದಲೇ ಹುಟ್ಟಿಕೊಂಡಿದ್ದು ಅವರ ಸಾಂಸ್ಕೃತಿಕ ಇತಿಹಾಸವೂ ಇದರೊಂದಿಗೆ ಬೆಸೆದುಕೊಂಡಿರುವುದು ಸ್ಪಷ್ಟವಾಗುತ್ತದೆ. ಹಾಗೆಯೆ ಇವರ ಪ್ರಾಚೀನತೆಯೂ ಕೂಡ.

**ಸಿಂದ್ ಕತೆ**

ಈ ಸೃಷ್ಟಿಯ ಮೂಲ ಸಾಮಗ್ರಿಗೆ ತಾರ್ಕಿಕ ತಳಹದಿಯನ್ನು ಕೊಟ್ಟುಕೊಂಡು ಅದನ್ನು ನಾಟಕ ಮತ್ತು ಗೇಯ ರೂಪಗಳಿಗೆ ಇಳಿಸಲಾಗಿದೆ. ಸಿಂದ್ ಮಾದಿಗರು ಪ್ರದರ್ಶಕ ಕುಲವೃತ್ತಿಯವರಾದ್ದರಿಂದ ಅವರಿಗಿದು ಅನಿವಾರ್ಯವೂ ಆಗಿದೆ. ಇದರ ಬದಲಾದ ಪ್ರದರ್ಶಕ ಪ್ರಕಾರಗಳನ್ನು ಸಿಂದ್‌ಕತೆ, ಎಲ್ಲಮ್ಮ ಆಟ, ಮಾದಿಗ ಆಟ, ಮಾದಿಗ ಪುರಾಣ, ಆದಿಜಾಂಬವ ಪುರಾಣ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಪ್ರಾರಂಭದಲ್ಲಿ 'ತಂಗಡಿದ್ಯಾವ್ರ'ದ ಭಾಗವಾಗಿ ಸಿಂದ್ ತುಳಿಯುತ್ತಾ ಹಾಡುತ್ತಿದ್ದ ಕಾರಣ ಇದಕ್ಕೆ ಸಿಂದ್ ಕತೆ ಎಂದೇ ಹೆಸರು ಬಿದ್ದಿದೆ.

ಮೂಲ ಸೃಷ್ಟಿಕತೆಯಲ್ಲಿಲ್ಲದ ಅನೇಕ ಅಂಶಗಳು ಈ ಸಿಂದ್ ಕತೆಯಲ್ಲಿ ಸೇರಿಕೊಂಡಿವೆ. ಅವು ಪುರಾಣ ಇತಿಹಾಸದಿಂದ ಹಿಡಿದು ಪ್ರಚಲಿತ ಸಾಮಾಜಿಕ ರೀತಿನೀತಿಗಳವರೆಗೂ ಈ ಹರವು ವ್ಯಾಪಿಸಿದೆ. ಈ ವೃತ್ತಿ ಜರೂರಿಗಿಂತಲೂ ಮಹತ್ತರವಾದ ಸಾಂಸ್ಕೃತಿಕ ಜವಾಬುದಾರಿಯನ್ನು ನಿರ್ವಹಿಸಲು ಈ ರೂಪಾಂತರ, ಅಳವಡಿಕೆ ನಡೆದಿರುವ ಹಾಗೆ ಭಾಸವಾಗುತ್ತದೆ. ಈ ಅಳವಡಿಕೆಯ ಪ್ರಮಾಣ ಪಣವೈಷಮ್ಯದ ಸಾಮಾಜಿಕ ಸಂಘರ್ಷ ಘಟ್ಟದಲ್ಲಿ ಅತಿ ಹೆಚ್ಚಿರುವಂತಿದೆ. ಒಟ್ಟಾರೆಯಾಗಿ ಈ ಸಿಂದ್ ಕತೆಯನ್ನು ತಮ್ಮ ಕುಲದ ಸಮ್ಯಕ್ಯತೆಗೆಂದು ಪ್ರಧಾನ ಸಾಧನವಾಗುವಂತೆ ಬಳಸಿಕೊಂಡಿರುವುದಂತೂ ಎದ್ದು ಕಾಣುತ್ತದೆ.

ಸಿಂದ್ ಕತೆ ಮುಕ್ತ, ಸರಳ, ದ್ವಿಪದಿಗಳ ರೂಪದಲ್ಲಿದ್ದು ಯಾವ ಭಾಗದಿಂದ ಬೇಕಾದರೂ ಆರಂಭಿಸಬಹುದಾದಷ್ಟು ಸ್ವತಂತ್ರ ಶೈಲಿಯಲ್ಲಿದೆ. ಇದು ಬಹುತೇಕ ಕಥನ ಗೀತೆಯನ್ನು ಹೋಲುತ್ತಿದ್ದರೂ ಕತೆ ಘಟನೆಯಿಂದ ಘಟನೆಗೆ ಮುಂದುವರಿಯದೆ ಅಲ್ಲಲ್ಲಿ ನಿಂತು ತರ್ಕವನ್ನೋ, ಸಿದ್ಧಾಂತವನ್ನೋ, ಪೂರಕ ಉಪಕತೆಯನ್ನೋ ನಿರೂಪಿಸಿ ಮತ್ತೆ ಮುಂದೆ ಸಾಗುತ್ತದೆ.

ಭಾಷೆ ಮತ್ತು ವಸ್ತುವಿನ ದೃಷ್ಟಿಯಿಂದ ಇದು ಹೆಚ್ಚು ಆಕ್ರೋಶ, ಪ್ರತಿಭಟನೆಯ ಸಾಕಾರವಾಗಿದೆ. ಕೆಲವೊಮ್ಮೆ ಕೇಳುವವರನ್ನು ಉದ್ರೇಕಿಸಿ ಸಾಮಾಜಿಕ ನ್ಯಾಯಕ್ಕೆ ತಕ್ಷಣ ಕಾರ್ಯ ಪ್ರವೃತ್ತರಾಗುವಂತೆ ಮಾಡುವಷ್ಟು ಪರಿಣಾಮಕಾರಿಯಾಗಿಯೂ ಇದೆ. ಮುಖ್ಯವಾಗಿ ಇದಕ್ಕೆ ಸಾಮಾಜಿಕ ನ್ಯಾಯಕ್ಕಾಗಿ ಸ್ಥಾಪಿತ ಮೌಲ್ಯಗಳೊಂದಿಗೆ ಘರ್ಷಣೆಗಿಳಿಯುವ ಇರಾದೆ ಇರುವುದರಿಂದ ಅದಕ್ಕೆ ಬೇಕಾದ ತರ್ಕ ಮತ್ತು ಸೈದ್ಧಾಂತಿಕ ಹಿನ್ನೆಲೆಯನ್ನು ಸಮರ್ಥವಾಗಿಯೇ ಕ್ರೋಢೀಕರಿಸಿಕೊಂಡಿದೆ ಎನ್ನಬಹುದು.

ಈ ಸಿಂದ್ ಕತೆ ಅನೇಕ ಗ್ರಹಿಕೆಗಳಿಗೆ ಗ್ರಾಸವಾಗುವಂತಿದ್ದರೂ ಅದರ ತರ್ಕ ಮತ್ತು ಪ್ರತಿಭಟನೆಯ ಅಂಶಗಳಿಗಷ್ಟೆ ಪ್ರಾಶಸ್ತ್ಯಕೊಟ್ಟು ವಿಶ್ಲೇಷಿಸಲಾಗಿದೆ.

'ದಂಡಾವು ನನಸಾಮಿ/ದಂಡಾವು ನನದೊರೆಯೇ
ನೋಡಂಥ ಸಭೆಗೆಲ್ಲ/ದಂಡಾವಯ್ಯ/'

ಹೀಗೆ ಹೆತ್ತ ತಾಯಿಗೆ, ಹೆತ್ತ ತಂದೆಗೆ, ಗುರುವಿಗೇ (ವಿಶ್ವಕರ್ಮನಿಗೆ) ಕೈಯಲ್ಲಿನ ಕೊಂಗವಾಲ ಕತ್ತಿಗೆ (ಕೊಕ್ಕರೆಯ ಕೊರಳಿನಂತೆ ಬಾಗಿದ ಕತ್ತಿ) ಇದು ಅವರ ಕುಲದ ಹೆಗ್ಗಳಿಕೆ ಮತ್ತು ಹೆಗ್ಗುರುತು) ಭೂದೇವಿ ತಾಯಿ, ಆಕಾಶವೇಣಿ, ಸೂರ್ಯ ಚಂದ್ರ ಹೀಗೆ ತನ್ನ ಅಸ್ತಿತ್ವಕ್ಕೆ ಕಾರಣೀಭೂತವಾದವರಿಗೆಲ್ಲ ನಮಿಸುವ ನಾಂದಿ ಪದದೊಂದಿಗೆ ಸಿಂದ್ ಕತೆ ಆರಂಭವಾಗುತ್ತದೆ.

'ತಮ್ಮ ಅಸ್ತಿತ್ವ ಕುಲದ ಅಸ್ತಿತ್ವವನ್ನು ಅವಲಂಬಿಸಿದೆ. ಅದರ ಉಳಿವೇ ನಮ್ಮ ಉಳಿವು' ಎಂಬ ಸಾಂಸ್ಕೃತಿಕ ಅರಿವಿನಿಂದಾಗಿ ಮುಂದಿನ ಸಾಲುಗಳಲ್ಲಿ ತಮ್ಮ ಕುಲ ಪ್ರಾಚೀನತೆಯನ್ನು ಅದರ ಉನ್ನತತನವನ್ನು ಎತ್ತಿಹಿಡಿಯುತ್ತಾರೆ. 'ತಾತಾ ಜಾಂಬವಂತ ಭೂಮಿಗಿಂತ ಆರು ತಿಂಗಳು ಮೊದಲು ಹುಟ್ಟಿದವನಾದ್ದರಿಂದ ಅವನ ಮಕ್ಕಳಾಗಿರುವ ನಾವು ಕೂಡ ಆದಿಯಲ್ಲೆ ಹುಟ್ಟಿದವರು. ಹಾಗೂ ಆದಿಶಕ್ತಿಯಲ್ಲಿ ಹುಟ್ಟಿದವರು' ಎಂಬ ಎರಡೂ ಅರ್ಥವನ್ನು ಒಂದೇ ಪದದ ಮೂಲಕ ಬಿಂಬಿಸಲಾಗಿದೆ. ಅಷ್ಟೆ ಅಲ್ಲ ಯಾರು ವೇದ ಶಾಸ್ತ್ರಗಳ ವಾರಸುದಾರರು ಎಂದು ಹೇಳುತ್ತಿದ್ದಾರೋ ಅವರಿಗೆ ಮೊದಲು ವೇದ ಹೇಳಿಕೊಟ್ಟವರು. ವೇದಬ್ರಾಹ್ಮಣರಿಗೆ ತಂದೆಯ ಸಮಾನರು ಎಂದು ನಮ್ರವಾಗಿಯೇ ತಿಳಿಸುತ್ತಾರೆ.

ತಮ್ಮನ್ನು ಕೀಳೆಂದು, ಮಾದಿಗರೆಂದು ಕರೆಯುವ ಜಾತಿ ವ್ಯವಸ್ಥೆಯ ತಳಹದಿಯನ್ನೇ ಪ್ರಶ್ನಿಸುವ ಇವರು ಮುಖ್ಯವಾಗಿ ಬ್ರಾಹ್ಮಣರು ಮತ್ತು ಕೋಮಟಿಗರನ್ನು ತಮ್ಮ ಕುಲಬಂಧುಗಳೆಂದು ಘೋಷಿಸಿ ಅವರ ದ್ರೋಹ ಮತ್ತು ಸಮಯ ಸಾಧಕತನ, ಆತ್ಮವಂಚಕ ಪ್ರವೃತ್ತಿಗಳನ್ನು ಬೀದಿಗೆಳೆಯುತ್ತಾರೆ. ಮೇಲುಜಾತಿಯ ಹಣೆಪಟ್ಟಿ ಹಚ್ಚಿಕೊಂಡಿರುವ ವಸಿಷ್ಟ ತಮ್ಮ ಮನೆ ಮಗಳಾದ ಆರಂಜೋತಿಯನ್ನು ಮದುವೆಯಾಗಿರುವುದು, ಇವರು ಎತ್ತಿ ಆಡಿಕೊಳ್ಳುವುದಂತೂ ಅವರು ಅದೊಂದು ಗೌರವಾರ್ಹ ಘನತೆಯ ಸಂಬಂಧ ಎಂದು ಪರಿಗಣಿಸಿಲ್ಲವೆಂಬುದನ್ನು ತೋರುತ್ತದೆ. ಈ ದೃಷ್ಟಿಯು ಅವರಲ್ಲಿರಬಹುದಾದ ಸಾಂಸ್ಕೃತಿಕ ಜಾಗೃತಿಯ ದ್ಯೋತಕ. ಸಾಮಾನ್ಯವಾಗಿ 'ಮೇಲು ಎನ್ನಿಸಿಕೊಂಡಿರುವ ಜಾತಿಗಳೊಂದಿಗೆ ಬೆಳೆಸುವ ವೈವಾಹಿಕ ಸಂಬಂಧ ಘನತೆಯದೆಂದು ಭಾವಿಸಿ ಬಿಡುವುದು ಸಂಸ್ಕೃತಿಯನ್ನು ತಮ್ಮದಕ್ಕಿಂತ ಶ್ರೇಷ್ಠವೆಂದು ಒಪ್ಪಿಕೊಂಡಿದ್ದರಿಂದ ಆಲೋಚನಾಕ್ರಮ ಆದರೆ ಇವರಲ್ಲಿ ಇಂಥ ಕೀಳರಿಮೆಯ ಕಿಂಚಿತ್ ಸೂಚನೆಯೂ ಇಲ್ಲ. ಬದಲಿಗೆ 'ವಸಿಷ್ಠ' ತಮ್ಮ ಮನೆ

ಮಗಳಾದ ಆರಂಜ್ಯೋತಿಗೆ ತಕ್ಕ ಜೋಡಿಯಲ್ಲವೆಂದು ಮಗಳೇ ಒಪ್ಪಿಕೊಂಡ ಮೇಲೆ ಇನ್ನೇನು ತಾನೆ ಮಾಡಲು ಸಾಧ್ಯ ಎಂಬ ನಿರ್ಲಿಪ್ತ ನಿಲುವು ಇವರದು. ಆದ್ದರಿಂದಲೇ ಇವರು ತಮ್ಮ ಆಳದ ಅಸಮ್ಮತಿಯನ್ನು ಯಾವ ಮುಲಾಜಿಗೂ ಒಳಪಡದೆ ಹೊರ ಹಾಕಿ ಮುಯ್ಯಿ ತೀರಿಸಿಕೊಳ್ಳುತ್ತಾರೆ.

ವಾರಕಾಂತೆ ಮಗನು ವಸಿಷ್ಠನಲ್ಲವೆ
ವಸಿಷ್ಟ ನಮ್ಮನೆಯ ಸೋದರಳಿಯ । ತಾಲಿಲ್ಲೋ
ವಸಿಷ್ಟ ನಮ್ಮನೆಯ ಭಾದ್ಯೆಯ ಮದುವೆಯಾಗಿ
ಹೆಣ್ಣ ತಕ್ಕಂಡ್ಹೋಗಿ ಕುಂತಾನಲ್ಲ । ತಾಲಿಲ್ಲೋ
ಹಳೆಯ ಗೋಡೆಗಳಲ್ಲಿ, ಮಾದಿಗಿತ್ತಿ ಇದ್ದಾರೆ
ಮನಸೋತು ಬಂದದ್ದು ಹಾರವನು । ತಾಲಿಲ್ಲೋ

ಇವರ ಪ್ರಕಾರ ವಸಿಷ್ಠ ವಾರಕಾಂತೆ ಅಂದರೆ ವೇಶ್ಯೆಯಾದ ಊರ್ವಶಿಯ ಮಗ. ಆದರೂ ಆರಂಜ್ಯೋತಿ ಒಪ್ಪಿದ್ದರಿಂದ ಸೋದರಳಿಯ. ಇದರಲ್ಲೇನೂ ಇವರಿಗೆ ಹೆಚ್ಚುಗಾರಿಕೆ ಕಾಣುತ್ತಿಲ್ಲ. 'ಹಳೆಯ ಗೋಡೆಗಳಲ್ಲಿ ಮಾದಿಗಿತ್ತಿ ಇದ್ದಾರೆ. ಮನಸೋತು ಬಂದದ್ದು ಹಾರವನು' ಎಂದೇ ಹಿಯ್ಯಾಳಿಸುತ್ತಾರೆ. 'ಈ ಹಳೆಯ ಗೋಡೆಗಳು' ಎಂಬ ಪದ ಪ್ರಯೋಗ ಇವರ ಇನ್ನೊಂದು ಜನಪದ ಗೀತೆಯಲ್ಲೂ ಬಂದಿರುವುದರಿಂದ ಈ ಪದಕ್ಕೆ ತನ್ನದೇ ಮಹತ್ವ ಇರುವಂತಿದೆ. 'ಹಳೆಯಗೋಡೆ' ಎಂದರೆ ತಾವು ಪೂರ್ವಕಾಲದವರು, ಅನಾದಿಗಳು ಎನ್ನುವ ಸೂಚನೆಯೂ ಇರುವಂತಿದೆ. ಈ ವಸಿಷ್ಠನೆಂಬ ಶಿಷ್ಟ ಸಮಾಜದ ಉದಾರವಾದಿಗೆ ಆ ಮೂಲಕ ಅಶಿಷ್ಟ ಸಮುದಾಯಕ್ಕೆ ನಡೆಯುವ ಮಂಗಳಾರತಿ ಇಲ್ಲಿಗೇ ನಿಲ್ಲುವುದಿಲ್ಲ.

ಸಿಂದ್ ಕತೆ ಚೌಡಿಕೆಗಳ ಹಿಮ್ಮೇಳದಲ್ಲಿ ಇಬ್ಬರು (ಗಂಡ-ಹೆಂಡತಿ) ಅಥವಾ ಅದಕ್ಕಿಂತ ಹೆಚ್ಚು ಜನ ತಂಡದಿಂದ ಪ್ರದರ್ಶನಗೊಳ್ಳುವ ಗೇಯ ನಾಟಕವಾದ್ದರಿಂದ ಮುಖ್ಯ ಗಾಯಕ ಕೊಂಚ ಸಾಮಾಜಿಕವಾಗಿ ಆಕ್ಷೇಪಾರ್ಹ ಸಂಗತಿಗಳನ್ನು ಹಾಡಿನಲ್ಲಿ ಪ್ರಸ್ತಾಪಿಸಿದ ಕೂಡಲೇ ಉಳಿದವರು ಆಕ್ಷೇಪಕ್ಕೆ ಒಳಗಾದ ಸಾಮಾಜಿಕ ಗುಂಪಿನ ಪರವಹಿಸಿ ತಗಾದೆ ತೆಗೆಯುತ್ತಾರೆ. ಆಗ ಮುಖ್ಯ ಗಾಯಕ ಆತ ಗಾದೆಗೆ ಉತ್ತರ ನೀಡುವ ನೆಪದಲ್ಲಿ ತರ್ಕ ಪೂರಕವಾಗುವಂತೆ ಬೇರೆ ಬೇರೆ ಸಂಗತಿಗಳನ್ನು ದಾರ್ಶನಿಕದ ಉಕ್ತಿಗಳನ್ನು ಉದುರಿಸಿ ಎದುರಾಳಿಯ ಬಾಯಿ ಮುಚ್ಚಿಸುವುದರ ಜೊತೆಗೆ ನಾಟಕೀಯ 'ಒತ್ತುಕೊಡುವುದರ ಮೂಲಕ ಆ ತರ್ಕ ಕೇಳುಗರ ಮನದಲ್ಲಿ ಅಚ್ಚೊತ್ತಿಕೊಳ್ಳುವಂತೆಯೂ ಮಾಡುತ್ತಾರೆ. ಈ ತಂತ್ರಕತೆಯ ಏಕತಾನತೆಯನ್ನು ಮುರಿದು ರಂಜಕ ತಿರುವು ಕೊಡುವುದರ ಜತೆಗೆ ತಮ್ಮ ನಿರ್ದಿಷ್ಟ ಉದ್ದೇಶ, ತರ್ಕ ಪರಿಣಾಮಕಾರಿಯಾಗಿ ಬೇರು ಬಿಟ್ಟುಕೊಳ್ಳುವಂತೆ ಮಾಡುತ್ತದೆ.

ಉದಾಹರಣೆಗೆ ಮುಖ್ಯಗಾಯಕ 'ಹಳೆಯಗೋಡೆಗಳಲ್ಲಿ ಮಾದಿಗಿತ್ತಿ ಇದ್ದಾರೆ ಮನಸೋತು ಬಂದದ್ದು ಹಾರವನು' ಎಂದ ಕೂಡಲೆ ಸಹಗಾಯಕಿ ತಕ್ಷಣ ವಾದಕ್ಕೆ

ಎರಗುತ್ತಾಳೆ. ಅವರ ವಾದ–ವಿವಾದಗಳಲ್ಲಿ ಮೇಲೆ ತಿಳಿಸಿದ 'ತಂತ್ರ' ಯಶಸ್ವಿಯಾಗುತ್ತದೆ ಎನ್ನುವುದರ ಸ್ಯಾಂಪಲ್ ನೋಡಿ ಸಹಗಾಯಕಿ :

ಏನೋ ಏನೋ ಏನೆಂದೆ.... ಹಳೆಗೋಡೆಗಳಲ್ಲಿ ಮಾದಿಗತ್ತಿ ಇದ್ದರೂನು ಮನಸೋತು ಬಂದದ್ದು ಹಾರವನು ಅಂದೆಯಾ.... ಸೂಳೆಮಗನೆ ಚರ್ಮ ಸುಲಿದುಬಿಟ್ಟೇನು ಹುಶಾರ್.....

ಮುಖ್ಯಗಾಯಕ; ಹೌದು ಸ್ವಾಮಿ.... ಯಾಕೆ ? ನಿಮಗ್ಯಾಕೆ ಇಷ್ಟುಕೋಪ.... ತಾವು ಯಾವ ಜನ ಸ್ವಾಮಿ ?

ಸಹಗಾಯಕಿ; ಏನೋರು !

ಮುಖ್ಯಗಾಯಕ; ಏನೋರಾ ! ಹಂಗಾರ ಇನ್ನೊಂದು ಕತೆ ಸ್ವಾಮಿ

ಎನ್ನುತ್ತಾ ಆದಿಯಲ್ಲಿ ಆದಿಜಾಂಬವಂತ ಹುಟ್ಟಿದರಿಂದ ಶುರುಮಾಡಿ ವಿಶ್ವಬ್ರಹ್ಮ.... ವಿಶ್ವಕರ್ಮನೇ ಹೇಗೆ ಕಲಿಯುಗದಲ್ಲಿ ಬಳಸುವ ಸಕಲ ಸಾಧನ ಸಲಕರಣೆಗಳ ನಿರ್ಮಾತೃ ಎಂಬುದನ್ನು ಪ್ರತಿಪಾದಿಸುತ್ತಾರೆ.

ನಿನ್ನ ಕಿವಿಯ ಓಲೆ ಮಾಡಿದವನ್ಯಾರ ?
ತಾಯಿ ಗರ್ಭದಿಂದೊಳಗಿಂದ ಧರಣಿಗೆ ಬಂದಂದು
ನಾಭಿಯ ಕುಯ್ದು ಕತ್ತಿಗೆ ನಾಥನ್ಯಾರು ?
ಸುತ್ತುವ ನೇಗಿಲಗಿರಗಿರದೊಳಗೆ, ಹಾರೆ ಗುದ್ದಲಿ
ಗಡಪ್ಯಾರೆ, ಕತ್ತಿವರವಲ್ಲವೆ ? ಈ ವರದಾನಕ್ಕೆಲ್ಲ ಕಾರಣನಾದವನು
ವಿಶ್ವಕರ್ಮನಲ್ಲವೆ ? ಎಂದು ವಿಶ್ವಕರ್ಮನ ಪ್ರಾಮುಖ್ಯತೆಯನ್ನು
ಮೇಲ್ಮೆಯನ್ನು ಉತ್ತರಿಸುತ್ತಾರೆ.

ಇದಂತೂ ಆಗಿನ ಸಾಮಾಜಿಕ ಸನ್ನಿವೇಶದಲ್ಲಿ ನಡೆಯುತ್ತಿದ್ದ ಪಣ ಸಮರದ ಫಲವೇ ಆಗಿದೆ. ಪಂಚಾಳರು ಎಡಗೈ ಪಣಗಳ ನಾಯಕರಾಗಿದುದ್ದರಿಂದ, ಹಾಗೂ ಸಿಂದ್ ಮಾದಿಗರು ಪಣ ಚಿಹ್ನೆ ಹೊರುವ ಅಧಿಕೃತ ವಾರಸುದಾರರಾದ್ದರಿಂದ ಎಡಗೈ ಪಣಗಳ ಐಕ್ಯತೆ ಮತ್ತು ಶ್ರೇಷ್ಠತೆಗಾಗಿ ಹೀಗೆ ವಿಶ್ವಕರ್ಮರ ಅನಿವಾರ್ಯತೆಯನ್ನು ಒತ್ತಿ ಹೇಳುವ ಕರ್ತವ್ಯನಿರ್ವಹಿಸಿದ್ದಾರೆ. ವಿಶ್ವಕರ್ಮರನ್ನು ಮುಂದಿಟ್ಟುಕೊಂಡು ತಮ್ಮ ಕಾಲದ ಶ್ರೇಷ್ಠತೆಯನ್ನು ಸಾರಿದ್ದಾರೆ.

(ಪೂರ್ಣ ಪಠ್ಯಕ್ಕೆ ನೋಡಿ : ಸಿಂದ್ ಮಾದಿಗರ ಸಂಸ್ಕೃತಿ–ಕೋಟಗಾನಹಳ್ಳಿ ರಾಮಯ್ಯ).

## ಸಿಂದ್ ಕತೆ ಕಾವ್ಯ

ತಾಲಿಲ್ಲೋ ಲಿಲ್ಲಾಯಿಲೋ । ಶಿವ ತಾಲಿಲ್ಲೋ ಲಿಲ್ಲಾಯಿಲ್ಲೋ ॥
ತಾಲಿಲ್ಲೋ ಲಿಲ್ಲಾಯಿಲೋ । ಓಂ ರಾಲಿಂಗ ಲಿಲ್ಲಾಯಿಲೋ ॥
ದಂಡಾವು ನನಸಾಮಿ । ದಂಡಾವು ನನದೊರೆಯೆ
ನೋಡೋಂಥ ಸಭೆಗೆಲ್ಲ ದಂಡಾವಯ ॥ ॥ ತಾಲಿಲ್ಲೋ ॥
ನೋಡೋಂಥ ಸಭೆಗೆಲ್ಲ ದಂಡಾವಯ್ಯ ಸಾಮಿ
ನನ ಹೆತ್ತ ತಾಯೀಗೆ ದಂಡಾವಯ್ಯ ॥ ತಾಲಿಲ್ಲೋ ॥
ನನ ಹೆತ್ತ ತಾಯೀಗೆ ದಂಡಾವಯ್ಯ ನನಸಾಮಿ
ನನ ಹೆತ್ತ ತಂದೇಗೆ ದಂಡಾವಯ್ಯ ॥ ತಾಲಿಲ್ಲೋ ॥
ನನ ಹೆತ್ತ ತಂದೇಗೆ ದಂಡಾವಯ್ಯ ನನಸಾಮಿ
ನನ ಪಾಲಿನ ಗುರುವೀಗೆ ದಂಡಾವಯ್ಯ ॥ ತಾಲಿಲ್ಲೋ ॥
ನನ ಪಾಲಿನ ಗುರುವೀಗೆ ದಂಡಾವು ನನಸಾಮಿ
ನನ ಕೈಯ್ಯ ಕತ್ತೀಗೆ ದಂಡಾವಯ್ಯ ॥ ತಾಲಿಲ್ಲೋ ॥
ನನಕೈಯ್ಯ ಕತ್ತೀಗೆ ದಂಡಾವು ನನಸಾಮಿ
ಭೂದೇವಿ ತಾಯೀಗೆ ದಂಡಾವಯ್ಯ ॥ ತಾಲಿಲ್ಲೋ ॥
ಭೂದೇವಿ ತಾಯೀಗೆ ದಂಡಾವು ನನಸಾಮಿ
ಆಕಾಶ ವೇಣೀಗೆ ದಂಡಾವಯ್ಯ ॥ ತಾಲಿಲ್ಲೋ ॥
ಆಕಾಶ ವೇಣೀಗೆ ದಂಡಾವು ನನಸಾಮಿ
ಸೂರ್ಯ ಚಂದ್ರಾದಿಗಳಿಗೆ ದಂಡಾವಯ್ಯ ॥ ತಾಲಿಲ್ಲೋ ॥
ಆದಿಯಲ್ಲೆ ಹುಟ್ಟಿದೆನಯ್ಯ ಮೊದಲು
ಅಧಿಕ ಜಾಂಬುವ ಕುಲವು ನನ್ನದು ॥ ತಾಲಿಲ್ಲೋ ॥
ಕೊಂಗವಾಲವ ಕತ್ತಿ ಹಿಡಿದು
ನಾನು ಕ್ವಾರೆ ಮೀಸೆಯ ತಿದ್ದಿಕೊಂಡೆ ॥ ತಾಲಿಲ್ಲೋ ॥
ವೇದ ಬ್ರಹ್ಮಾದಿಗಳಿಗೆ ತಂದೆ
ನಾನು ಮೊದಲು ವೇದ ಶಾಸ್ತ್ರಗಳ ಹೇಳಿರುವೆ ॥ ತಾಲಿಲ್ಲೋ ॥
ಅಲೆ ಅಲೆಯ ಜಲದಮೊಳಗೋ ತಂದೆ
ಮೊದಲು ಆಗ ಜನಿಸಿರುವೆನಯ್ಯಾ ॥ ತಾಲಿಲ್ಲೋ ॥

ಕುಲ ಮತಗಳಿಗೆ ತಂದೆ
ಮೊದಲು ಮೂಲ ವೇದವ ಹೇಳಿದವನು ॥ ತಾಲಿಲ್ಲೋ ॥
ವೇದ ಬ್ರಾಹ್ಮಣರಿಗೆ ತಂದೆ ಮೊದಲು
ವೇದ ಶಾಸ್ತ್ರವ ಹೇಳಿರುವೆ ॥ ತಾಲಿಲ್ಲೋ ॥
ಮುತ್ತೀನ ಛತ್ರಿಗಳೋ ಮೂರು ಅಂದಣಗಳೋ
ಸಲ್ಲುವುದೇ ನಮ್ಮ ಆದಿ ಜಾಂಬವನಿಗೆ ॥ ತಾಲಿಲ್ಲೋ ॥
ಯಿದ್ಯೆಗಳ ಗುರುವು ಈರನಾಯಿಗಾ
ಯಿಶ್ವ ಬ್ರಹ್ಮ ನಿನಗೆ ದಂಡಾವಯ್ಯ ॥ ತಾಲಿಲ್ಲೋ ॥
ಯಿದ್ಯಾಗಳವರಿಗೆ ಮುದ್ರೆಗಳ ಕೊಟ್ಟಂಥ
ಪಾಂಚಾಳ ಗುರುವಿಗೆ ದಂಡಾವಯ್ಯ ॥ ತಾಲಿಲ್ಲೋ ॥
ಲಿಂಗವೆಲ್ಲಿ ಹುಟ್ಟಿತು ಜಂಜ್ಯವೆಲ್ಲಿ ಹುಟ್ಟಿತು
ಯಿಭೂತಿ ಹುಟ್ಟಿದ ಯಿವರ ಎಲ್ಲಿ ॥ ತಾಲಿಲ್ಲೋ ॥
ಲಿಂಗಗಳು ಹುಟ್ಟಿದ ಸ್ಥಳ ಹೇಳೆಂದು
ಜಂಗಮರು ಬಲು ಬಾಧೆ ಇಟ್ಟರಯ್ಯ ॥ ತಾಲಿಲ್ಲೋ ॥
ಅಂಗಾವು ಲಿಂಗಾವು ಓಂಕಾರ ಒಂದೇ
ಲಿಂಗಾವಿರುವೆಡೆ ಜಂಗಾಮೆಂತರಿವಾ ॥ ತಾಲಿಲ್ಲೋ ॥
ಲಿಂಗಾವು ನನ್ನದು ಜಂಜ್ಯಾವು ನನ್ನದು
ಗಂಗೆ ನನ್ನದು ಗಂಗೆ ಸ್ಥಾನವು ನನ್ನದು ॥ ತಾಲಿಲ್ಲೋ ॥
ಗಂಗೆ ನನ್ನದು ಗಂಗೆ ಸ್ಥಾನವು ನನ್ನದು
ಏಕ ನನ್ನದು ಏಕಕ್ಕೆ ಪೀಠ ನನ್ನದು ॥ ತಾಲಿಲ್ಲೋ ॥
ಏಕ ನನ್ನದು ಏಕ ಪೀಠವು ನನ್ನದು
ಪಿಳ್ಳು ಜುಟ್ಟು ನನ್ನದು ಜಂಜ್ಯಾವು ನನ್ನದು ॥ ತಾಲಿಲ್ಲೋ ॥
ವಾರಕಾಂತೆ ಮಗನು ವಶಿಷ್ಟನಲ್ಲವೆ
ವಶಿಷ್ಟು ನಮ್ಮನೆಯ ಸೋದರಳಿಯ ॥ ತಾಲಿಲ್ಲೋ ॥
ವಶಿಷ್ಟು ನಮ್ಮನೆಯ ಭಾರ್ಯೆಯ ಮದುವೆಯಾಗಿ
ಹೆಣ್ಣ ತಕ್ಕೊಂಡ್ಹೋಗಿ ಕುಂತಾನಲ್ಲ ॥ ತಾಲಿಲ್ಲೋ ॥
ಹಳೆಯ ಗೋಡೆಗಳಲ್ಲಿ ಮಾದಿಗಿತ್ತಿ ಇದ್ದಾರೆ
ಮನಸೋತು ಹೋಗಿದ್ದು ಹಾರವನು ॥ ತಾಲಿಲ್ಲೋ ॥
ಕ್ವಾಮಿಟಿ ಕ್ವಾಮಿಟಿ ಅಂತಾರೆ ಸ್ವಾಮಿ
ಕ್ವಾಮಿಟಿ ನಮ್ಮ ಕುಲಬಾಂಧವನು ॥ ತಾಲಿಲ್ಲೋ ॥
ದೊಡ್ಡ ಮನೆಯವನನ್ನ ಮದುವೆ ಬರಲ್ಹೇಳಿ
ಒಪ್ಪಿಸಿ ಕರೆಸದಳು ಕ್ವಾಮಿಟೆಲ್ಲಮ್ಮ ॥ ತಾಲಿಲ್ಲೋ ॥

ಚಿಕ್ಕ ಮನೆಯವನನ್ನ ಮುಂದಿಟ್ಟುಕೊಂಡು
ಅಕ್ಷತೆಹಾಕಿದನೋ ಜಾಂಬವನು ॥ ತಾಲಿಲ್ಲೋ ॥
ಯಿದ್ಯೆಗಳ ಗುರುವೆ ಈರನಾಯಿಗಾ
ವಿಶ್ವ ಬ್ರಹ್ಮ ನಿನಗೆ ದಂಡಾವಯ್ಯ ॥ ತಾಲಿಲ್ಲೋ ॥
ಕಂಚಿ ಕಾಳಮ್ಮನಿಗೆ ದಂಡಾವಯ್ಯ ಸ್ವಾಮಿ
ವಿಶ್ವ ಬ್ರಹ್ಮ ನಿನಗೆ ದಂಡಾವಯ್ಯ ॥ ತಾಲಿಲ್ಲೋ ॥
ತಾಳಿ ತಾಳಿ ಅಂತಾರೆ ಜನರು
ತಾಳಿ ಹುಟ್ಟಿದ ತಾವೆಲ್ಲಿಯದೋ ॥ ತಾಲಿಲ್ಲೋ ॥
ತಾಲಿಲ್ಲೋ ಲಿಲ್ಲಾಯಿಲೋ
ಲಿಂಗಾರೇ ಶಿವು ಲಿಂಗಾರೇ
ತಾಳಿ ಮಾಡಿದೋನು ವಿಶ್ವ ಬ್ರಹ್ಮನಲ್ಲವೆ
ಆದಿ ತೋರಿದೋನು ಆದಿಜಾಂಬವನು ॥ ತಾಲಿಲ್ಲೋ ॥
ಗೋವಾದ್ರಿ ಬೆಟ್ಟಾದಿ ದೇವೇಂದ್ರ ದೇವತೆಗಳು
ಬೆಂಕಿ ಮಳೆ ಕಲ್ಲು ಮಳೆ ಸುರಿಸಿದರೋ ॥ ತಾಲಿಲ್ಲೋ ॥
ಬೆಂಕಿ ಮಳೆ ಕಲ್ಲು ಸುರಿಸಿದಾಗ
ಅವರ ಮನೆಗೇನೆ ಒಂದು ಸಿಡಿಲು ವಾಲಿತ್ತೋ ॥ ತಾಲಿಲ್ಲೋ ॥
ಬೆಂಕಿ ಸಿಡಿಲಾದ್ರು ಒಬ್ಬಾನ ವಶವಲ್ಲ
ದೇವ ಪಿಂಡಾವು ತಾನೇ ಕೈಲಿಡಿದನೋ ॥ ತಾಲಿಲ್ಲೋ ॥
ಬೆಂಕಿ ಸಿಡಿಲಾದ್ರು ಒಬ್ಬಾನ ವಶವಲ್ಲ
ವಿಶ್ವ ಬ್ರಹ್ಮನ ಕೈಗೆ ಕೋಡು ಅಂದರು ॥ ತಾಲಿಲ್ಲೋ ॥
ಬೆಂಕಿ ಸಿಡಿಲಾದ್ರೂ ಕೈಯಲ್ಲಿ ಹಿಡಕೊಂಡು
ನಗರಕ್ಕೆ ಬಂದಾನೋ ವಿಶ್ವಬ್ರಹ್ಮ ॥ ತಾಲಿಲ್ಲೋ ॥
ನಗರಾದ ಬೆಟ್ಟಕ್ಕೆ ದಿಗಿಲು ಹುಟ್ಟಿ
ದಿಗಿಲಿಂದ ಮೈಣಾವ ತೀಡಿದನೋ ॥ ತಾಲಿಲ್ಲೋ ॥
ಬೆಂಕಿ ಜ್ವಾಲೆ ಇಟ್ಟು ತಿದಿಯಲ್ಲಿ ಊದಿದ
ಮೈಣಾವು ಕರಗಿ ಉಸಿರಾಡದೆ ಹೋಯಿತಲ್ಲ ॥ ತಾಲಿಲ್ಲೋ ॥
ವಿಷ್ಣು ಮಾನಷು ದ್ವಾರ ಸೂರ್ಯ ಮಾನಷು ದಾರ
ಮೂರನೆಯ ಗಳಿಗೆಯಗಂಟ ಹೋರಾಡಿದ ॥ ತಾಲಿಲ್ಲೋ ॥
ಅಗಸ್ತ್ಯ ಮಹಾ ಮುನಿಯ ಶಾಪಾವು ತಗುಲಿ
ವಿಶ್ವ ಬ್ರಹ್ಮ ತಾನೂ ಮುಳುಗ್ಹೋದನು ॥ ತಾಲಿಲ್ಲೋ ॥

ಬೆಂಕಿ ಸಿಡಿಲಾದರೂ ಕೈಯಲ್ಲಿ ಹಿಡಕೊಂಡು
ಜಾಂಬವನ ವಾಡಗೆ ತಿರುಗಿ ಬಂದಾಣೊ ॥ ತಾಲಿಲ್ಲೋ ॥
ಹನ್ನೆರಡು ಸ್ತಂಭಗಳ ಪಡಸಾಲೆಯಲ್ಲಿ
ಓಲೋಗವ ಮುಗಿಸಿ ಇದ್ದ ಜಾಂಬವನು ॥ ತಾಲಿಲ್ಲೋ ॥
ವಿಶ್ವಬ್ರಹ್ಮ ಬಂದು ಬೀದಿಯಲ್ಲಿ ಕೂತು
ಕೂಲಿಮೆ ತಿತ್ತಿಗಳೆರಡ ಕೊಡು ಅಂದಾನೋ ॥ ತಾಲಿಲ್ಲೋ ॥
ಕತ್ತಿಗಳು ಹಾರೆಗಳು ಇಲ್ಲದ ಹೊತ್ತಲ್ಲಿ
ಹ್ಯಾಗಂತ ಮಾಡಲಯ್ಯ ನಾನು ॥ ತಾಲಿಲ್ಲೋ ॥

**ವಿಶ್ವಬ್ರಹ್ಮ** : ಏನು ತಾತ, ವಯಸ್ಸಿಗೆ ತಾತ, ನೀರಿಗೆ ತಾ, ವಿರಾಟನಿಗೆ ತಾತ, ಈ ಭೂಮಿಗೆ ಆರು ತಿಂಗಳು ದೊಡ್ಡವನೆ ನೀನು, ಈಶ್ವರುನಿಗೆ ಲಗ್ನ ಆಗಬೇಕು, ಕೊರಳ ತಾಳಿ ಬೇಕು ತಾತ, ನನಗೆ ತಿತ್ತಿಗಳು ಬೇಕು, ಸಲಕರಣೆಗಳ್ಯಾವೂ ಇಲ್ಲ. ಅಗಸ್ತ್ಯ ಮಹಾಮುನಿ ಶಾಪದಿಂದ ನನ್ನ ವರವು ಹೋಗಿದೆ. ನಾನು ಬಾಧೆಪಡುತ್ತಿರುವೆ. ನನಗೆ ತಿತ್ತಿಗಳು ಬೇಕು ತಾತ.

ತಾತ ಅವನು ಆದಿ ಜಾಂಬವಂತನು
ಮಗನನ್ನೇ ಕೊಂದು ತಾನು ತಿತ್ತಿ ಸುಲಿದನೋ ॥ ತಾಲಿಲ್ಲೋ ॥
ಚರ್ಮವ ತಿತ್ತಿಗಳ ಆಗಿಸಿದ ಸ್ವಾಮಿ
ಕೈಗಳನ್ನೇ ಹಿಡಿ ಚಿಮ್ಮಟಿಗೆ ಆಗಿಸಿದೆ ॥ ತಾಲಿಲ್ಲೋ ॥
ಕೈಗಳನ್ನೇ ಹಿಡಿ ಚಿಮ್ಮಟಿಗೆ ಆಗಿಸಿದೆ
ಸಿರವ ಕುಮಟಾವ ಆಗಿಸಿದೆ ॥ ತಾಲಿಲ್ಲೋ ॥
ಸಿರ ಕುಮಟಾವ ಆಗಿಸಿದೆ ಸ್ವಾಮಿ
ತಲೆಮಿದುಳ ಬೆಳ್ಳಿಗಾರ ಆಗಿಸಿದೆ ॥ ತಾಲಿಲ್ಲೋ ॥
ತಲೆ ಮಿದುಳ ಬೆಳ್ಳಿಗಾರ ಆಗಿಸಿದೆ ಸ್ವಾಮಿ
ಕಿವಿಗಳ ತಕ್ಕಡಿ ಆಗಿಸಿದೆ ॥ ತಾಲಿಲ್ಲೋ ॥
ಕಿವಿಗಳ ತಕ್ಕಡಿ ಆಗಿಸಿದೆ ಸ್ವಾಮಿ
ಕಣ್ಣುಗಳ ಕಣ್ಣದ ಆಗಿಸಿದೆ ॥ ತಾಲಿಲ್ಲೋ ॥
ಕಣ್ಣುಗಳ ಕಣ್ಣದ್ದ ಆಗಿಸಿದೆ ಸ್ವಾಮಿ
ಮೂಗ ಊದುಗೊಳವೆ ಆಗಿಸಿದೆ ॥ ತಾಲಿಲ್ಲೋ ॥
ಮೂಗ ಊದುಗೊಳವೆ ಆಗಿಸಿದೆ
ತುಟಿಗಳ ತೂಗು ಬುಟ್ಟು ಆಗಿಸಿದೆ ॥ ತಾಲಿಲ್ಲೋ ॥

ತುಟಿಗಳ ತೂಗು ಬಟ್ಟು ಆಗಿಸಿದೆ ಸ್ವಾಮಿ
ಹಲ್ಲುಗಳ ಆಖರಾಯಿ ಆಗಿಸಿದೆ ॥ ತಾಲಿಲ್ಲೋ ॥
ಹಲ್ಲುಗಳ ಆಕರಾಯಿ ಆಗಿಸಿದೆ ಸ್ವಾಮಿ
ಗಂಟಲ ಸ್ವರವ ಆಗಿಸಿದೆ ॥ ತಾಲಿಲ್ಲೋ ॥
ಗಂಟ್ಲ ಸ್ವರ ಆಗಿಸಿದೆ ಸ್ವಾಮಿ
ಗುಂಡಿಗೆಯ ಇದ್ದಿಲು ಆಗಿಸಿದೆ ॥ ತಾಲಿಲ್ಲೋ ॥
ಗುಂಡಿಗೆಯ ಇದ್ದಿಲು ಆಗಿಸಿದೆ ಸ್ವಾಮಿ
ಎದೆಯ ಪೀಠ ಆಗಿಸಿದೆ ॥ ತಾಲಿಲ್ಲೋ ॥
ಎದೆಯ ಪೀಠ ಆಗಿಸಿದೆ ಸ್ವಾಮಿ
ಕರುಳ ನೆಲ್ಲೋಟ್ಟು ಆಗಿಸಿದೆ ॥ ತಾಲಿಲ್ಲೋ ॥
ಕರುಳ ನೆಲ್ಲೋಟ್ಟು ಆಗಿಸಿದೆ ಸ್ವಾಮಿ
ದೊಕ್ಕೆ ಗುಂಪಿಟ್ಟ ಆಗಿಸಿದೆ ॥ ತಾಲಿಲ್ಲೋ ॥
ದಕ್ಕೆ ಗುಂಪಿಟ್ಟ ಆಗಿಸಿದೆ ಸ್ವಾಮಿ
ಕಾಲುಗಳು ಚಮ್ಮಟಗೆ ಆಗಿಸಿದೆ ॥ ತಾಲಿಲ್ಲೋ ॥

**ಆದಿಜಾಂಬವ :**

ಏನು ಕಂದಾ ನನ್ನ ದೊಡ್ಡ ಮಗನನ್ನು ಕೊಂದು ನಿನಗೆ ಬೇಕಾದ ಆಯುಧಗಳನ್ನು ಮಾಡಿಕೊಟ್ಟಿದ್ದೇನೆ. ನೀನು ಹೋಗಿ ಆ ಈಶ್ವರನ ಮದುವೆ ಮಾತ್ರಕ್ಕೆ ತಾಳಿ ಬೊಟ್ಟು ಮಾಡಿಕೊಡು ಹೋಗು.

**ವಿಶ್ವಬ್ರಹ್ಮ :**

ಏನು ತಾತ ನಿನ್ನ ದೊಡ್ಡ ಮಗನನ್ನು ಕೊಂದು ನೀನೇನೋ ನನಗೆ ಬೇಕಾದ ಆಯುಧಗಳನ್ನು ಮಾಡಿಕೊಟ್ಟೆ ಅದೇನೋ ಸರಿ. ಆದರೆ ಪ್ರಪಂಚದಲ್ಲಿ ನಿನ್ನ ಹೆಸರು ಮಾತ್ರ ಉಳಿದು ಹೋಗುತ್ತ ನನ್ನ ಹೆಸರು ಅದಕ್ಕೆ

ನೀನು ಮಸಾ ಕತ್ತಿ ಮಾಡಿಸಿದೆ ತಾತ
ನಾನು ಮಸಾಕತ್ತಿ ಕೈಲಿಡಿಸುವೆ ॥ ತಾಲಿಲ್ಲೋ ॥
ಚಂದ್ರಗ್ರಹಣದ ದಿನ ಮಾಡಿಸಿದ ಕತ್ತಿ
ಸೂರ್ಯ ಗ್ರಹಣದ ದಿನ ನೋಡಿಸಿದೆ ॥ ತಾಲಿಲ್ಲೋ ॥
ಝುಗ ಝುಗ ಅನ್ನೂವ ದಂಥಾ ಹಿಡಿಕತ್ತಿ
ಎತ್ತಿದರೆ ಏಳು ಗೇಣು ಉದ್ದ ಇರುವುದೋ ॥ ತಾಲಿಲ್ಲೋ ॥
ಕತ್ತಿ ತೆಗೆದುಕೊಂಡು ಕಾಶಿ ಘೋಷಾದಲ್ಲಿ
ದಿಟ್ಟಗ ಸಿಂದು ಆಡಿದೆನೋ ॥ ತಾಲಿಲ್ಲೋ ॥

ಕೆಂಪು ಬಾವುಟಗಳು ಕ್ವಾರೆ ಮೀಸೆಯು
ಸಲ್ಲುವುದೆ ನಮ್ಮ ಆದಿಜಾಂಬವನಿಗೆ ॥ ತಾಲಿಲ್ಲೋ ॥
ಸಣ್ಣಕತ್ತಿ ದೊಡ್ಡಕತ್ತಿ ಸಾಣೆ ಹಿಡಿಯೋವಾಗ
ಸಿಂಧು ತುಳಿದದ್ದು ನನ ಕತ್ತಿಯೋ ॥ ತಾಲಿಲ್ಲೋ ॥
ಸಣ್ಣ ಕತ್ತಿ ದೊಡ್ಡಕತ್ತಿ ಸಾಣೆ ಹಿಡಿಯೋವಾಗ
ಏಳು ಖಂಡುಗ ಉಕ್ಕು ಉದುರೀತಲ್ಲ ॥ ತಾಲಿಲ್ಲೋ ॥
ಉದುರೀದ ಉಕ್ಕನ್ನು ಮೂಟೇಗೆ ತುಂಬಿ
ರಾಸೂಟಿ ಕೋಟೆಗೆ ಕಳುಹಿಸಿದರೋ ॥ ತಾಲಿಲ್ಲೋ ॥
ಸಿಂದು ಸಿಂದು ಅಂತಾರೆ ಸ್ವಾಮಿ
ಎಲ್ಲೆಲ್ಲೂ ಹುಟ್ಟು ಸಿಂದು ಅಲ್ಲವೇನು ॥ ತಾಲಿಲ್ಲೋ ॥
ಅಂತಾರೆ ಹನುಮಂತನೊಡನಿರುವ ಎಲ್ಲ ಛತ್ರಿಗಳು
ಸಲ್ಲುವುದೆ ನಮ್ಮ ಪಾಲಿನ ಗುರುವಿಗೆ ॥ ತಾಲಿಲ್ಲೋ ॥
ವೇದಗಳ ಓದಿ ನೋಡಿರಿ
ಸೋದಿಸಿ ನಮ್ಮ ಆದಿಕುಲವು
ಏನೋ ಹೇಳಿರಿ ॥ ತಾಲಿಲ್ಲೋ ॥
ಜಾತಿಗಳು ಹದಿನೆಂಟು ಜಾತಿಗಳು
ಈ ಪ್ರಪಂಚದಲ್ಲಿ ಜಾತಿಗಳು ॥ ತಾಲಿಲ್ಲೋ ॥
ಹದಿನೆಂಟು ಜಾತಿಗಳು
ಹದಿನೆಂಟು ಜಾತಿಗಳು
ಹದಿನೇಳು ಹುಟ್ಟಿದ ತಾವು ಹೇಳಿರಿ ॥ ತಾಲಿಲ್ಲೋ ॥
ಗೋವಿಂದ ಗೋವಿಂದ ಅಂತಾರೆ
ಈ ಪ್ರಪಂಚದಲ್ಲಿ ಗೋವಿಂದ ಗೋವಿಂದ ಅಂತಾರೆ
ಗೋಪುಗೆ ಸಂದ ಗೋಸಾಂಗನು ಯಾವ ಕುಲವಯ್ಯ ॥ ತಾಲಿಲ್ಲೋ ॥
ಹೇಳು ವೇದವ ಹೇಳು ಅಂತಾರೆ
ಈ ಪ್ರಪಂಚದಲ್ಲಿ ಹೇಳು ಶಾಸ್ತ್ರವ ಹೇಳು ಅಂತಾರೆ
ಚಪ್ಪಲಿ ಕೊಯ್ದ ಜಾಂಬವನು ಯಾವ ಕುಲವಯ್ಯ ॥ ತಾಲಿಲ್ಲೋ ॥
ನಾರದಾ ಮುನಿ ಯಾವ ಕುಲವಯ್ಯ
ಈ ಪ್ರಪಂಚದಲ್ಲಿ ನಾರದಾ ಮುನಿ ಯಾವ ಜಾತಿಯೋ ॥ ತಾಲಿಲ್ಲೋ ॥
ನಾ ಅಂದರೆ......... ತಂದೆ
ದಾಸಿ ಕುಲವು ಏನೋ ಹೇಳಿರೋ ॥ ತಾಲಿಲ್ಲೋ ॥

ಊರ್ವಸೀಗೆ ಗಂಡ ಯಾರಯ್ಯ
ಈ ಪ್ರಪಂಚದಲ್ಲಿ ಊರ್ವಸೀಗೆ
ಗಂಡ ಯಾರಯ್ಯ ॥ ತಾಲಿಲ್ಲೋ ॥
ಮರಳು ಮೂಟೆಯ ಅನ್ನ ಮಾಡಿದ
ಆರಂಜ್ಯೋತಿ ಯಾರ ಮಗಳು ॥ ತಾಲಿಲ್ಲೋ ॥
ಆದಿ ಆದಿಗೆ ಮೊದಲು ಆದಿ ಶಾಸ್ತ್ರಕ್ಕೆ ಮೊದಲು
ಆದಿಗೆ ಆರ್ತಿಂಗ್ಳು ದೊಡ್ಡವರೋ ॥ ತಾಲಿಲ್ಲೋ ॥
ಹಂದೀನಿ ತಿಂತೀವಿ ಊರ ಒಳಗಿರ್ತೀರಿ
ಅಕ್ಷತೆ ಸುರಿದಾನೋ ಜಾಂಬವನು ॥ ತಾಲಿಲ್ಲೋ ॥
ಇಲ್ಲಸಲ್ಲದೆಂದು ಕಲಹಕ್ಕೆ ಬಂದಾರೆ
ಕಂಚೇಲಿ ಇದೆಯಣ್ಣ ಶಾಸನವೂ ॥ ತಾಲಿಲ್ಲೋ ॥
ಕಂಚೀಯ ಶಾಸನವ ಎಷ್ಟಂತ ಬರೆದರೂ
ಕಾಳಮ್ಮ ಮಗನೇನೆ ನಮ್ಮ ಗುರುವು ॥ ತಾಲಿಲ್ಲೋ ॥
ಹಳೆಯ ಗೋಡೆಗಳಲ್ಲಿ ಮಾದಿಗಿತ್ತಿ ಇದ್ದರೂನೂ
ಮನಸೋತು ಹೋಗಿದ್ದು ಹಾರವನು ॥ ತಾಲಿಲ್ಲೋ ॥

**ಸಹಕಥಿಕೆ :**
ಏನೋ ಏನೋ ಏನೆಂದೆ.... ಹಳೆಯ ಗೋಡೆಗಳ ಮದ್ಯೆ ಮಾದಿಗಿತ್ತಿ ಇದ್ದರೂನೂ ಮನಸೋತು ಹೋಗಿದ್ದು ಹಾರವನು ಅಂದೆಯಾ. ಸೂಳೆಮಗನೆ ಚರ್ಮ ಸುಲಿದುಬಿಟ್ಟೇನು.... ಹುಷಾರ್......
ಕಥಿಕೆ : ಹೌದು ಸ್ವಾಮಿ..... ಯಾಕೆ ? ನಿಮಗ್ಯಾಕಿಷ್ಟು ಕೋಪ. ತಾವು ಯಾವ ಜನ ಸ್ವಾಮಿ..... ?
ಸಹಕಥಿಕೆ : ಏನೋರು.....
ಕಥಿಕೆ : ಏನೋರಾ..... ಹಂಗಾರೆ ಇನ್ನೊಂದು ಕಥೆ ಸ್ವಾಮಿ
ಭುವಿಯಲು ಹುಟ್ಟಿದ ದೇವಾಲಯಗಳೆಲ್ಲ
ಹುಟ್ಟಿದ ಕಾಲವು ಎಂತಿತ್ತು
ಸರ್ವಶೂನ್ಯನಾಗಿ ಸರ್ವನಿರ್ವಾಣವಾಗಿ
ಭೂಮಂಡವೆಲ್ಲ ಕತ್ತಲು ಅಮರಿಕೊಂಡು
ಅಮರಿದ ಮೇಲಂದು ಆದಿ ಓಂಕಾರ
ಪಣವಾಚರದಿ ಸೆಲ್ಲುಲುಕಿ
ಸೊಲ್ಲಿನೊಳಗೆ ವಿರಾಟ ಬ್ರಹ್ಮ ಜನುಮಿಸಿ

ಪಂಚ ಭೂತಗಳು ಪಲ್ಲವಿಸಿ
ಇಂದು ಪಂಚಾಗದೊಳಗೆ ಆದಿಬ್ರಹ್ಮನು
ಮನೋಗತವಾಗಿ ದಷ್ಟ ನಿಷ್ಟ ಖಚಿತವಯ್ಯ
ಬ್ರಹ್ಮ ಸೃಷ್ಟಿಯೇ ಬ್ರಹ್ಮಾಂಡವೆಲ್ಲ
ಕಲ್ಪಿಸಿದರಯ್ಯ ಬ್ರಹ್ಮರು ಕರುಣೆಯಿಂದ
ಈ ಕಲಿಯುಗದಂದು ಮರೆತರು ಕಳ್ಳ ಜನರು
ಹೀಗೆ ಆದಂತ ಕುಲಗಳಲ್ಲಿ
ಅಧಿಕಾನು ಅಧಿಕನಾರು.....?
ಪಾಂಡವರ ಪಗಡೆ ತಡೆಯದಕ್ಕೆ ಬಾಧ್ಯನಾರು.....?
ಸೋಲಿಗೆ ಅರ್ಹವಾಗಿಸಿದ ಅವದ್ಯನಾರು.....?
ನಿನ್ನ ಕಿವಿಯ ಓಲೆಯ ಮಾಡಿದ್ಯಾರು.....?
ಮಾಂಗಲ್ಯ ಹೊಳಪಿಸಿದ ಮಾನ್ಯನ್ಯಾರು....?
ತಾಯಿ ಗರ್ಭದಿಂದ ಧರಣಿಗೆ ಬಂದದು
ನಾಭಿಯ ಕೊಯ್ದ ಕತ್ತಿಗೆ ನಾಥನ್ಯಾರು....?
ಸುತ್ತುವ ನೇಗಿಲ ಗಿರಗಿರದೊಳಗೆ
ಹಾರೆ, ಗುದ್ದಲಿ, ಗಡಪ್ಪಾರೆ, ಕತ್ತಿ ವರವಲ್ಲವೆ ?
ಗೋವಿಂದ ಗೋವಿಂದ ಅಂತೀರಿ ಸ್ವಾಮಿ
ಗೋವಿಂದ ಹುಟ್ಟಿದ ತಾವೆಲ್ಲಿದು ॥ ತಾಲಿಲ್ಲೋ ॥
ಗೋವನ್ನ ಕೊಯ್ದು ಗೋವನ್ನ ಅರೆದು
ಗೋವಿಂದ ಹಿಡಿಸುವ ಗೋಸಂಗಿಯೋ ಲಿಂಗ ॥ ತಾಲಿಲ್ಲೋ ॥
ಆ ಗೋವನ್ನ ಕೊಯ್ದು ಆ ಚರ್ಮದ ಮೇಲೆನೆ
ನಾಲುಕ್ಕು ಮೂಲೆಗೂ ನಾಲಕ್ಕು ಪಾಲಾದ್ರು ಹಾಕಿದೆ ॥ ತಾಲಿಲ್ಲೋ ॥
ವಿಷ್ಣುದು ಒಂದು ಪಾಲು, ಈಶ್ವರನದು ಒಂದು ಪಾಲು
ಬ್ರಹ್ಮನದು ಒಂದು ಪಾಲು ಜಾಂಬವನದು ಒಂದು ಪಾಲು ॥ ತಾಲಿಲ್ಲೋ ॥
ವಿಷ್ಣುಗೆ ಕೊಟ್ಟ ಪಾಲು ಒಟ್ಟು ಸೇರಿಸಿಕೊಂಡು
ಸುದ್ದ ನಾಮವ ಮಾಡಿದ ಸೂತ್ರದಂತೆ ಅಣ್ಣ ॥ ತಾಲಿಲ್ಲೋ ॥
ಈಶ್ವರನಿಗೆ ಕೊಟ್ಟ ಪಾಲು ಒಟ್ಟು ಸೇರಿಸಿಕೊಂಡು
ಈಭೂತಿ ಮಾಡಿದನು ಯಿಶ್ವದಲ್ಲಿ ಅಣ್ಣ ॥ ತಾಲಿಲ್ಲೋ ॥
ಬ್ರಹ್ಮನಿಗೆ ಕೊಟ್ಟ ಪಾಲು ಒಟ್ಟುಮಾಡಿಕೊಂಡು
ಚಂದನವ ಮಾಡಿದನು ಗೋಪ್ಯದಲ್ಲಿ ಅಣ್ಣ ॥ ತಾಲಿಲ್ಲೋ ॥

ಜಾಂಬವನು ಪಾಲೆಲ್ಲ ಜಗತ್ತಿಗೆ ಹಂಚಿದ
ಮದ್ಯದಲ್ಲಿ ಕುರುಣೆಯಾಯಿತು ಒತ್ತುವ ತಿತ್ತಿಯಾಯಿತು ॥ ತಾಲಿಲ್ಲೋ ॥
ಆದಿಗೆ ಬೀದಿಗೆ ಮದ್ಯದಲ್ಲಿ ಅಷ್ಟಲೋಕಕ್ಕೆ
ಆರು ತಿಂಗಳು ದೊಡ್ಡಾವರು ॥ ತಾಲಿಲ್ಲೋ ॥
ಕಣ್ಣಿಗೆ ಆಧಾರ ನನ್ನ ತೊಗಲು ಸ್ವಾಮಿ
ಅಂಡಿಗೆ ಆಧಾರ ನನ್ನ ತೊಗಲು ॥ ತಾಲಿಲ್ಲೋ ॥
ಈಶ್ವರನ ಎಂಜಲೆಲೆ ಬೀದಿ ನಾಯಿಗಳಿಗಾಯ್ತು
ಜಾಂಬವನ ಎಂಜಲೆಲೆ ಜಗತ್ತಿಗೇ ಮೇಲು ॥ ತಾಲಿಲ್ಲೋ ॥
ಅವರು ಇವರು ಅವರು ಮುಟ್ಟಾರು ಯಾರು
ಯಾರ‍್ಯಾರ ನೋಡಿದರೂ ನನ್ನಾವರೇ ॥ ತಾಲಿಲ್ಲೋ ॥
ಕಣ್ಣಿಗೆ ಆಧಾರ ನನ್ನವರು
ಅಂಡಿಗೆ ಆಧಾರ ನನ್ನವರು ॥ ತಾಲಿಲ್ಲೋ ॥
ಕತ್ತಿ ತಕ್ಕೊಂಡು ಕಾಸಿ ಕಟ್ಟಿಕೊಂಡು
ದಿಷ್ಟೆಯಿಂದ ಸಿಂದು ಆಡಿದೆನೋ ॥ ತಾಲಿಲ್ಲೋ ॥
ಸಿಂದು ಸಿಂದು ಅಂತಾರೆ ಸ್ವಾಮಿ
ಎಲ್ಲೆಲ್ಲೂ ಹುಟ್ಟಿರೋದು ಸಿಂದು ತಾನೆ ॥ ತಾಲಿಲ್ಲೋ ॥
ನಿಮ್ಮ ತಂದೆ ಹೋಗಿ ನಿಮ್ಮ ತಾಯಿ ಹತ್ತಿರ
ಸಿಂದು ತುಳಿದಿದ್ದಕ್ಕೇನೆ ನೀನು ಹುಟ್ಟಿರೋದು ॥ ತಾಲಿಲ್ಲೋ ॥
ಅಹೋ ರಾತ್ರಿ ಕಾಲದಲ್ಲೆಲ್ಲಾ
ಕನ್ಯಾ ಪುರುಷನು ಸಿಂದು ತುಳಿಯುತ್ತಾನೆ ॥ ತಾಲಿಲ್ಲೋ ॥
ಸಿಂದು ತುಳಿದರೇನೆ ಬಿಂದು ಉಕ್ಕುವುದು
ಬಿಂದು ಕೂಡಿದರೇನೆ ಕಂದ ಹುಟ್ಟೋದು ॥ ತಾಲಿಲ್ಲೋ ॥
ಕಾಲ ಮೇಘದಿಂದ ಹಿಡಿದು ನನ್ನ ತೊಗಲು
ರೇಪಲ್ಲಿ ವಾಡೆಯಲ್ಲಿ ಗೋಪಮ್ಮ ತಗುಲಿಸಿದ
ಕಡೆಗೋಲು ಸಿಲುಕಿದ ತೊಗಲು ನನ್ನ ತೊಗಲು ॥ ತಾಲಿಲ್ಲೋ ॥
ಅಂಟದ ಮುಟ್ಟದ ಬ್ರಹ್ಮ ರೇವಿನ ಬಳಿ
ಜಂಜ್ಯಾದಿ ಹುಟ್ಟೋದು ನನ್ನ ತೊಗಲೇ ॥ ತಾಲಿಲ್ಲೋ ॥
ಸಹಕಥಿಕೆ : ನಿಲ್ಲಿಸು ನಿಲ್ಲಿಸು ನಿಲ್ಲಿಸೋ...... ಸೂಳೇಮಗನೆ
ಅಂಟದ ಮುಟ್ಟದ ಬ್ರಹ್ಮ ರೇವಿನ ಬಳಿ
ಜಂಜ್ಯಾದಿ ಹುಟ್ಟೋದು ನನ್ನ ತೊಗಲೇ ॥ ತಾಲಿಲ್ಲೋ ॥

ಅಲಲಲಾ ಸೂಳೆ ಮಗನೇ ಎಷ್ಟೊಂದು
ಕೊಬ್ಬೋ ನಿನಗೆ..... ಎಲ್ಲೋ ಜನಿವಾರದಲ್ಲಿ
ನನ್ನ ತೊಗಲು ? ಮೊದಲು ಬೊಗಳು
ಇಲದೆ ಹೋದ್ರೆ ನಿನ್ನ ತೊಗಲು ಕಳಚಿಬೀಳುತ್ತದೆ
ಕಥಿಕೆ : ಯಾಕೆ ಸ್ವಾಮಿ ಇಷ್ಟು ಬೇಗ ಮರೆತುಬಿಟ್ರಾ
ನನ್ನ ತೊಗಲು ಅಂದ್ರೆ ನಿಮ್ಮ ಜನಿವಾರ ಗೊತ್ತಾಗಲಿಲ್ವೇ
ಅದೇ ಸ್ವಾಮಿ......
ನಿನ್ನ ಜನಿವಾರದಲ್ಲಿ ಕಟ್ಕೋತಿಯಲ್ಲ ತೊಗಲು ಚೂರು..... ಈವಾಗಲ್ಲ
ಸ್ವಾಮಿ..... ಆವಾಗ ನಮ್ಮ ಆರಂಜ್ಯೋತೀನ ತಕ್ಕೊಂಡು
ಹೋದಿಯೇ... ಆವಾಗ.... ಆ ನಮ್ಮ ತಾಯಿಗೆ ತೊಗಲು
ಮಂಚಾನ ತಾತ ಜಾಂಬವಂತನು ಬೋಮಾನ ಕೊಟ್ಟುಬಿಟ್ಟ
ಆವಾಗ ನನಗೇನು ಕೊಡ್ತೀಯಾ ಮಾಮ ಅಂದೆ.... ಆವಾಗ ತೊಗಲುಕೊಯ್ದು
ನಿಮಗೆ ಜನಿವಾರ ಹಾಕಲಿಲ್ವಾ, ಅದೋಲೋ ನನ್ನ ಮಕ್ಕಳಾ....
ಒಳಗೆ ಗಾಯತ್ರೀಲಿ ಹಾಕ್ಕೊಂಡಿಲ್ವಾ ಚರ್ಮ
ಜಿಂಕೆ ಚರ್ಮ ಈ ತೊಗಲು ಜನಿವಾರ ಹಾಕ್ಕೊಂಡೆ ಮೆಟ್ಟಲ್ಲಿ ಹೊಡೀತಾರೆ
ಅಂದ್ಕೊಂಡು ಒಳಗೆ ಗಾಯತ್ರಿಲಿ ತಳ್ಳಿ ಬಚ್ಚಿಟ್ಟಿಲ್ವಾ......
ಆ ಚರ್ಮ ಆ ಅಡ್ರೆಸ್ ನಿಮಗೆ ಗೊತ್ತಾ ನಮ್ಮದು ಶ್ರೇಷ್ಠ
ನಾವು ಬ್ರಾಹ್ಮಣರು, ಎಲ್ಲೋ ಸೂಳೆ ಮಕ್ಕಳಾ.....
ಸೂಳೇಗೆ ಹುಟ್ಟಿದ ಮಕ್ಕಳು ನೀವು.... ನನ್ನ ಬಂದು.....
'ಮಾದಿಗ ನನ್ಮಗ ಅಂತೀರಾ'?
ತಾಯಿ ಊರ್ವಸಿ ಸೂಳೇಮಕ್ಕಳು ಮಾದಿಗರು
ತಾನು ಬ್ರಾಹ್ಮಣ ಗೊತ್ತು ಜಗತ್ತಿಗೆ ॥ ತಾಲಿಲ್ಲೋ ॥
ವಶಿಷ್ಠರ ಕುಲದಲ್ಲಿ ಮುದ್ದಾದ ಬೆಳಕೋ
ವಿಶ್ವದಾಬಿ ರಾಮ ವಿನುರವೇಮ ॥ ತಾಲಿಲ್ಲೋ ॥
ನಿಮ್ಮಮ್ಮಾನ ಸೂಳೆ ನಮ್ಮಮ್ಮಾನಾ.....
ಮತ್ತೆ ಬಂದು ಆರಂಜ್ಯೋತಿನ ತಕ್ಕೊಂಡೋದೇ ಹೋಗಿ ನಗರ
ಸೇರ್ಕೊಂಡೆ ಮತ್ತೆ ಮದುವೆ ಮಾಡ್ಕೊಂಡೆ....ಯಸೇ
ಜ್ಞಾನ ದಯಾಸಿಂದೋ.... ಅವರ ಓದಿಬಿಟ್ಟೆ....
ನಮ್ಮನ್ನು ಮಾದಿಗರು ಅಂದುಬುಟ್ಟೆ..... ಹೌದು ನಾವು ಮಾದಿಗರು....

ಮಾದಿಗರು ಅಂತೀರಿ ಮಾದಿಗರು ಅಂತೀರಿ
ಮಾದಿಗರಲ್ಲಿ ಇರೋ ತಪ್ಪೇನಯ್ಯ
ಮಾದಿಗ ಅಂತಾರೆ ಜನರು ॥ ತಾಲಿಲ್ಲೋ ॥
ನಮ್ಮದೂ ಗ್ವಾಡೆ ನಿಮ್ಮದೂ ಗ್ವಾಡೆ
ಯಿವರ ಕೇಳಯ್ಯ ಯಾಕೆ ಕುಲ ಕೇಳುವೆ
ಗುರುತಾದ ಜಾಂಬವ ಕುಲವು ನನ್ನದು ॥ ಮಾದಿಗ ॥
ಈ ಊರು ಬಿಟ್ಟ ಗೋವು ಎಷ್ಟು ಬೆಳೆಬೆಳೆಯಿತು
ಮೊದಲೊಂದು ಬೆಳೆಯನ್ನು ಹಚ್ಚಬೆಳೆ
ಹಚ್ಚಬೆಳೆಯಯ್ಯ ಹಾಲೊಂದು ಬೆಳೆ ॥ ಮಾದಿಗ ॥
ಹಾಲೊಂದು ಬೆಳೆಯಯ್ಯ ಮೊಸರೊಂದು ಬೆಳೆ
ಮೊಸರೊಂದು ಬೆಳೆಯಯ್ಯ ಮಜ್ಜಿಗೊಂದು ಬೆಳೆ ॥ ಮಾದಿಗ ॥
ಮಜ್ಜಿಗೊಂದು ಬೆಳೆಯಯ್ಯ ಬೆಣ್ಣೆ ಒಂದು ಬೆಳೆ
ಬೆಣ್ಣೆ ಒಂದು ಬೆಳೆಯಯ್ಯ ತುಪ್ಪ ಒಂದು ಬೆಳೆ ॥ ಮಾದಿಗ ॥
ಈ ಏಳು ಬೆಳೆ ನೀವು ಅರಗಿಸಿಕೊಳ್ಳಲಿಲ್ವಾ
ಫಸಲು ನಿಮಗಾಯಿತೋ ಹಿಪ್ಪೆ ನಮಗಾಯಿತೊ
ಮುಂದು ನಿಮಗಾಯಿತೋ ಹಿಂದು ನಮಗಾಯಿತು ॥ ಮಾದಿಗ ॥
ಮುಂದು ನಿಮಗಾಯಿತೋ ಹಿಂದೆ ನಮಗಾಯಿತು
ಬೆಲೆಯು ನಿಮಗಾಯಿತೋ ಪಾಲು ನಮದಾಯ್ತು
ರಸವು ನಿಮಗಾಯಿತೋ ಹಿಪ್ಪೆ ನಮಗಾಯ್ತು ॥ ತಾಲಿಲ್ಲೋ ॥
ಮಾದಿಗ ಆದಿಗ ಮದ್ಯದಲ್ಲಿ ಗಾಣಿಗ
ಆದಿಗೆ ಆರ್ತಿಂಗ್ಳು ದೊಡ್ಡಾವರು ॥ ತಾಲಿಲ್ಲೋ ॥
ಸುತ್ತೇಳು ಸಮುದ್ರಗಳು ನುಡಮದ್ಯೆ ಜೀವಿಗಡ್ಡೆ
ಜೀವಿ ಗಡ್ಯಾಗ ಮರಹುಟ್ಟಿತಯ್ಯ ॥ ತಾಲಿಲ್ಲೋ ॥
ರುದ್ರಾಕ್ಷಿ ಒಂದು ರಚ್ಚೆ ಭದ್ರಾಕ್ಷಿ ಒಂದು ರಚ್ಚೆ
ಬಾರಣ್ಣ ನಿನುಗಿನ್ನು ಭಾರವೇನು ॥ ತಾಲಿಲ್ಲೋ ॥
ಊರಕೋಣನ ಕೊರಳ ಕಡಿದೊಗೆದು
ಮನೆಮನೆಗೊಂದು ಜ್ಯೋತಿ ಬೆಳಗಿಸಿದವ್ರೋ ॥ ತಾಲಿಲ್ಲೋ ॥
ಏಳೇಳು ಸಮುದ್ರಗಳು ಏಕವಾಗಿ ಹರಿಯೋವಾಗ
ಕೆರೆಯ ಕಟ್ಟೆಗೆ ಬುನಾದಿ ಮೂಲ ॥ ತಾಲಿಲ್ಲೋ ॥
ಗುರುವಂತ ಹುಟ್ಟೇನಿ ಗುರುವಂತ ಬೆಳದೀನಿ
ಗುರುವಾಯಿ ನನ್ನೊಬ್ಬ ಗುರುವೆಂದುಕೋ ॥ ತಾಲಿಲ್ಲೋ ॥

ರಾಮಸ್ವಾಮಿ ಅವನು ಹತ್ತುವಂಥ ಕುದುರೆ
ಕುದುಏಯ ಜೀನೂವು ನನ್ನ ತೊಗಲೇ ॥ ತಾಲಿಲ್ಲೋ ॥
ಅಂಟಾದ ಮುಟ್ಟಾದ ಒಕ್ಕಲು ರೇವಿನ ಬಳಿ
ನೊಗದಲ್ಲಿ ಮೇಣೀಲಿ ನನ್ನ ತೊಗಲೇ ॥ ತಾಲಿಲ್ಲೋ ॥
ಹರನ ಭಾಗವತರು ಹಿಡಿದು ಬಾರಿಸೋದು
ಮದ್ದಲೆ ಮೊದಲ್ಗೊಂಡು ನನ್ನ ತೊಗಲು ॥ ತಾಲಿಲ್ಲೋ ॥
ಅಂಟಾನಿ ಮುಟ್ಟಾನಿ ಈಡಿಗಾಕುಲದೋನ
ಬೆನ್ನಲ್ಲಿ ನೆತ್ತೀಲಿ ನನ್ನ ತೊಗಲೇ ॥ ತಾಲಿಲ್ಲೋ ॥
ಅಂಟಾದ ಮುಟ್ಟಾದ ಕುರುಬ ಗೌಡರಿಗೆ
ಭೀರಪ್ಪ ತೋಲಯ್ಯ ನನ್ನ ತೊಗಲು ॥ ತಾಲಿಲ್ಲೋ ॥
ಕೆಂಪು ಬಾವುಟಗಳು ಹಚ್ಚಮೀಸೆಗಳು
ಸಲ್ಲುವುದೇ ನಮ್ಮ ಪಾಲ ಗುರುವುಗಳಿಗೆ ॥ ತಾಲಿಲ್ಲೋ ॥
ಹಿಂದೆ ಟುವ್ವಾಕಿ ಬೆಳ್ಳಿ ಸೊಂಟ ಕತ್ತಿ
ಸಲ್ಲುವುದೇ ನಮ್ಮ ಪಾಲ ಗುರುಕಾರನಿಗೆ ॥ ತಾಲಿಲ್ಲೋ ॥
ಪಂದ್ಯದ ಗುರಿಕೋಲು ತೊಗಲು ಕುಲಾಯಿ
ಸಲ್ಲುವುದೇ ನಮ್ಮ ಪಾಲ ಗುರಿಕಾರನಿಗೆ ॥ ತಾಲಿಲ್ಲೋ ॥
ತೊಗಲು ಉಡುದಾರ ಪಂದ್ಯದ ಗುರಿಕೋಲು
ಸಲ್ಲುವುದೇ ನಮ್ಮ ಪಾಲ ಗುರಿಕಾರನಿಗೆ ॥ ತಾಲಿಲ್ಲೋ ॥
ಗೊಲ್ಲರವರು ಸಾಕಿದ ಗೋಸಂಗಿಯು ॥ ತಾಲಿಲ್ಲೋ ॥
ಎತ್ತನ್ನ ಮರ್ದಿಸಿ ಹುಲಿಯನ್ನ ಗದ್ದರಿಸಿ
ಆದುರಿಸಿ ಕೊಯ್ಯೋವಂಥ ಗೋಸಂಗಿನಾ ॥ ತಾಲಿಲ್ಲೋ ॥
ಹಾಲೊಳೆ ಒಡ್ಡಲ್ಲಿ ಬೆಳೆದು ನಿಂತಿತ್ತು ಸ್ವಾಮಿ
ಏಳೆಲೆಯ ಮರ ಮತ್ತಿಮರ ॥ ತಾಲಿಲ್ಲೋ ॥
ಏಳೆಲೆಯ ಮರ ಮತ್ತಿಮರ ಸ್ವಾಮಿ
ಏಟಿಗೆ ಕಡಿದಂಥ ಗೋಸಂಗಿನಾ ॥ ತಾಲಿಲ್ಲೋ ॥
ಮರಬಿದ್ದ ಸದ್ದಿಗೆ ಸ್ವಾಮಿ
ಮನ್ನಿ ಸೀಮೆ ದಂಡು ಬೆದರಿತ್ತಲ್ಲ ॥ ತಾಲಿಲ್ಲೋ ॥
ಮರಿಸಿನಾಯನ ಪುತ್ರ ಪ್ರಭುವು ಬೀರಣ್ಣ
ಹೊರಟಾನೆ ಕತ್ತಿಗಳ ನೆರಳಲ್ಲಿಯೇ ॥ ತಾಲಿಲ್ಲೋ ॥
ರಾಮಸ್ವಾಮಿ ಅವನು ಏರೋ ಕುದುರೆಯು
ಕುದುರೇಯ ಜೀನೂವಿ ನನ್ನ ತೊಗಲೇ ॥ ತಾಲಿಲ್ಲೋ ॥

ಸೇತುವೆ ಕಟ್ಟಿ ಸಮರಾವ ನಡೆಸಿದ
ಸೈನ್ಯಾದ ಬಲವೆಲ್ಲ ನನ್ನ ತೊಗಲೇ ॥ ತಾಲಿಲ್ಲೋ ॥
ಆದಿಗೆ ಬೀದಿಗೆ ಅಷ್ಟಲೋಕಕ್ಕೆ
ಆದಿಗೆ ಆರ್ತಿಂಗಳು ದೊಡ್ಡವರು ॥ ತಾಲಿಲ್ಲೋ ॥
ಸಕಲ ಲೋಕಕ್ಕೆಲ್ಲ ಆಧಾರ ನಾವೇನೇ
ತಾತ ಜಾಂಬವನ ಮಗಳೂ ಕಾಣಾ ॥ ತಾಲಿಲ್ಲೋ ॥
ತಾತ ಜಾಂಬವನ ಮಗಳು ಓಸ್ವಾಮಿ
ವಶಿಷ್ಠ ಮಹಾಮುನಿ ಹೆಂಡತಿಯು ॥ ತಾಲಿಲ್ಲೋ ॥

ಆರಂಜ್ಯೋತಿ ಕಲ್ಯಾಣ
ವೇದಗಳ ಎತ್ತಿ ನೋಡಿರಿ
ಸೋದಿಸಿದರೆ ನಮ್ಮ ಆದಿ ಕುಲವು
ಏನೋ ಓದಿರಿ/
ಗಂಧ ಅಕ್ಷತೆ ಎಲ್ಲಿಯವು
ಆ ನಡುಮನೆಯಲ್ಲಿರೋ ಆರಂಜ್ಯೋತಿ
ನಮ್ಮ ಹೆಣ್ಣು ಮಗಳು/
ಬ್ರಾಂಮಣ ಬ್ರಾಂಮಣ ಅಂತಾರೆ
ಕಲಿಯುಗದಲ್ಲಿ ಬ್ರಾಂಮಣನೆ
ನಂ ಸೋದರಳಿಯನಯ್ಯ/
ಕಾಶಿಪುರೆ ಪಟ್ನದಲ್ಲಿ
ಆಗ ಆ ಗಳಿಗೆಯಲ್ಲಿ
ಪತಿವರತಾ ವಾರಕಾಂತೆ
ಜನುಮಾವ ಎತ್ತಿದ್ದಾಳಯ್ಯ
ಆ ಕಾಶಿಯಲ್ಲಿ/
ಜನುಮಾವೆ ಎತ್ತಿದ್ದಾಳೊ
ಪತಿವರತಾ ವಾರಕಾಂತೆ
ಹನ್ನೆರಡು ವರ್ಷ ವಯಸೆ ಬಂತು
ಬ್ರಹ್ಮದೇವನ ಪೂಜೆಗೈದಳು
ಯಾಗಗವನೆ ಮಾಡಿದ್ದಾಳಯ್ಯ/
ಹದಿನಾರು ವರುಷ ವಯಸೆ ದಾಟ
ಸಮುದ್ರಕ್ಕೆ ಹೊರಟಿದ್ದಾಳೆ

ಮುಳುಗಿ ಸ್ನಾನವ ಮಾಡಿದ್ದಾಳೆ
ಸಂದ್ಯಾವಂದನೆ ಮಾಡಿದ್ದಾಳೆ
ಬ್ರಹ್ಮದೇವನ ಪೂಜಿಸಿದಳಯ್ಯ
ಯಾಗವನೆ ಮಾಡಿದ್ದಾಳಯ್ಯ ಪತಿವರತಾ ತಾಯಿ/
ಆಗ ಆ ಗಳಗೆಯಲ್ಲಿ
ಆ ಒಬ್ಬ ಬ್ರಹ್ಮದೇವನೂ
ಹನ್ನೆರಡು ವರುಷ ವಯಸ್ಸಿನಿಂದ
ಹದಿನಾರು ವರುಷ ವಯಸೆ ಬಂತೂ
ನನ್ನ ನೀನು ಪೂಜೆಗೈದೆ
ಯಾಗಗಳೆ ಮಾಡಿರುವೆ
ಏನು ವರವು ನಿನಗೆ ಬೇಕಮ್ಮ
ಈ ವೇಳೆಯಲ್ಲಿ/
ಏನಪ್ಪ ಮಹಾಸಾಮಿ
ಹನ್ನೆರಡು ವರುಷ ವಯಸಿನಿಂದ
ಹದಿನಾರು ವರುಷ ವಯಸುವರೆಗೂ
ನಿನ್ನ ಕುರಿತು ಯಾಗಗಳೆ ಮಾಡಿರುವೆ
ಈಗ ಪುತ್ರ ಭಾಗ್ಯವು
ನನಗೆ ಬೇಕಪ್ಪಾ..... ಓ ಬ್ರಹ್ಮದೇವಾ/

ಕೇಳು ಕೇಳೆ ವಾರಕಾಂತೆ
ಕೇಳೆ ಓ ಪತಿವರತಾ ನೀನು
ಪುತ್ರ ಭಾಗ್ಯವು ನಿನಗೆ ಯಾಕೆ
ಈ ಪ್ರಪಂಚದಲ್ಲಿ.........../
ನಾನು ಸ್ವಾಮಿ ಬ್ರಹ್ಮದೇವನೆ
ಹುಟ್ಟಿರುವೆ ಈ ಪ್ರಪಂಚದಲ್ಲಿ
ಬೆಳೆದಿರುವ ಈ ಪ್ರಪಂಚದಲ್ಲಿ
ಪುತ್ರಭಾಗ್ಯವು ನನಗೆ ಬೇಕಯ್ಯ
ಬ್ರಾಂಮಣ ವಂಶ ಇಲ್ಲವಲ್ಲ
ಈ ಒಂದು ಪ್ರಪಂಚದೊಳಗೆ
ಬ್ರಾಂಮಣ ವಂಶ ನನಗೆ ಬೇಕಯ್ಯ
ಓ ಬ್ರಹ್ಮದೇವ/

ಕೇಳು ಕೇಳೆ ವಾರಕಾಂತೆ
ಕೋರಿದಂತ ವರವ ನಿನಗೆ
ಕೊರೆ ಮಾಡದೆ ಕೊಟ್ಟಿರುವೆ
ಪುತ್ರಭಾಗ್ಯವ ನಿನಗೆ ಕೊಟ್ಟಿರುವೆ.
ಓ ವಾರಕಾಂತೆ...../

ಆಗ ಆ ಗಳಿಗೆಯಲ್ಲಿ
ಗರ್ಭವಿನ್ನು ತುಂಬಿ ಬಂತು
ಒಂಬತ್ತು ತಿಂಗಾಳು ತುಂಬಿ
ಗರ್ಭದಾನವು ಆಗ ಆಯಿತೋ
ಆ ವಾರಕಾಂತೆಗೆ/

ಪತಿವರತಾ ವಾರಕಾಂತೆ
ಗರ್ಭದಾನವೆ ಆಯಿತಲ್ಲ
ಮುದ್ದಾದ ಕಂದನನ್ನು
ಅಚ್ಚು ಮೆಚ್ಚುಗೆ ಸಾಕಿದಾಳಲ್ಲೋ
ಹನ್ನೆರಡು ವರುಷ ವಯಸು ಬಂತು
ಹದಿನಾರು ವರುಷ ವಯಸು ಬಂತಲ್ಲೇ
ಆ ಗಳಿಗೆಯಲ್ಲಿ.../

ಆಗ ಆ ಗಳಿಗೆಯಲ್ಲಿ
ಕಾಯಿ ಕರ್ಪೂರ ಎತ್ತಿಕೊಂಡು
ಪೂರ್ವದೀಪಾವ ಎತ್ತಿಕೊಂಡೂ
ದಕ್ಷಿಣೆ, ತಾಂಬೂಲ ಎತ್ತಿಕೊಂಡು
ವಿಶ್ವ ಬ್ರಹ್ಮನ ಮನೆಗೆ ಬಂದಾಳೊ
ಆ ವಾರಕಾಂತೆ

ಏನುಪಾಲು ಅಣ್ಣಗಳಿರಾ
ನನ್ನ ಮುದ್ದು ಅಣ್ಣಗಳಿರಾ
ನನ್ನ ಮುದ್ದು ಮಗನಿಗಿನ್ನು
ನಾಮಕರಣವ ಮಾಡಬೇಕಪ್ಪಾ
ಹೆಸರು ಬಲವ ನೀವು ಇಡಿರಯ್ಯಾ
ನನ್ನ ಅಣ್ಣಗಳಿರಾ...../

ಆ ಒಬ್ಬ ವಿಶ್ವ ಬ್ರಹ್ಮ
ಕಾಯಿ ಒಡೆದು ಮಂಗಳಾರತಿ ತಳ್ಳಿ
ಕರ್ಪೂರವ ಬೆಳಗಿಸಿದನು
ವೇದವೆಲ್ಲ ಎತ್ತಿ ಓದಿದನೋ
ಆ ವಿಶ್ವ ಬ್ರಹ್ಮ...../

ಏನಮ್ಮಾ ವಾರಕಾಂತೆ
ಬ್ರಾಹ್ಮದೇವನ ವರದ ಬಲದಿ
ಹುಟ್ಟಿರುವನೇ ಪುತ್ರನಿನ್ನು
ಬ್ರಾಹ್ಮನೆಂದು ಹೆಸರು ಇಡಮ್ಮಾ
ಓ ವಾರಕಾಂತೆ...../

ಪತಿವರತಾ ವಾರಕಾಂತ
ಕುಮಾರನನ್ನ ಕರೆದುಕೊಂಡು
ನಗರಕಿನ್ನೂ ಬಂದಳಲ್ಲಯ್ಯ
ಆ ವಾರಕಾಂತ...../

ಹನ್ನೆರಡು ವರುಷ ವಯಸು ಬಂತು
ಹದಿನಾರು ವರುಷ ವಯಸು ಬಂತು
ಇಪ್ಪತ್ತು ವರುಷ ಪ್ರಾಯ ಬಂತಲ್ಲ
ಅಮ್ಮಾ ಕೇಳೆ ಹೆತ್ತ ತಾಯೆ ವಾರಕಾಂತೆ
ನನಗೆ ಇನ್ನು ಲಗ್ನ ಮಾಡಮ್ಮ
ನನ್ನ ಹೆತ್ತತಾಯಿ...../

ಹೆತ್ತ ಮಗನೆ ಬ್ರಾಹ್ಮಣಯ್ಯ
ಬ್ರಾಹ್ಮಣನ ವಂಶವಿನ್ನೂ
ಪ್ರಪಂಚದಲ್ಲಿ ಇಲ್ಲ ಕಂದ
ಯಾರನಿತ್ತು ಲಗ್ನ ಮಾಡಾಲೋ
ಓ ಬ್ರಾಹ್ಮಣಯ್ಯ...../

ಹುಟ್ಟಿರುವೆ ಭೂಮಿಯಲ್ಲಿ
ಬೆಳೆದಿರುವೆ ಜಗತಿಯಲ್ಲಿ
ನನಗೆ ಲಗ್ನವು ಇಲ್ಲದ್ಹೋದರೆ

ಬದುಕಬಾರದು ಭೂಮಿ ಮೇಲಿನ್ನು
ಇರಬಾರದೆ ಊರಿನಲ್ಲಿ
ನನಗೆ ಮೃತ್ಯವು ಕೂಡಿಬರಬೇಕೆ
ನನ್ನ ಹೆತ್ತತಾಯೆ...../

ಪತಿವರತಾ ವಾರಕಾಂತ
ಕಾಯಿ ಕರ್ಪೂರ, ದಕ್ಷಿಣೆ ತಾಂಬಲವ
ಪೂರ್ವದೀಪ ಎತ್ತಿಕೊಂಡು
ವಿಶ್ವಬ್ರಹ್ಮನ ಮನೆಗೆ ಬಂದಳೋ
ಆ ವಾರಕಾಂತ...../

ಆ ಒಬ್ಬ ವಿಶ್ವಬ್ರಹ್ಮ
ಜೋತಿಷ್ಯ ನೋಡಿದನು
ಪಂಚಾಂಗವ ಓದಿದನು
ಈಗಿರುವ ಗಳಿಗೆಯಲ್ಲಿ
ಲಗ್ನವಿನ್ನು ಪ್ರಾಪ್ತಿ ಇಲ್ಲವಮ್ಮಾ
ನಿನ್ನ ಪುತ್ರನಿಗೆ...../

ಏನಪ್ಪಾ ಅಣ್ಣಗಳಿರಾ
ನನ್ನ ಮುದ್ದು ಅಣ್ಣಗಳಿರಾ
ಲಗ್ನವಿನ್ನು ಇಲ್ಲದೋದರೆ
ಬದುಕನಿನ್ನು ಭೂಮಿ ಮೇಲೆ
ನನ್ನ ಮಗನು ಈಗ...../

ಏನಮ್ಮಾ ವಾರಕಾಂತೆ
ನಿನ್ನ ಒಬ್ಬ ಪುತ್ರನಾದರೂ
ಪತಿವರತೆ ದೊರಕಿ ಬಂದರೆ
ಅವಳ ನೀನು ಲಗ್ನವಾಡಬೇಕೋ
ಓ ಬ್ರಾಹ್ಮ ಕಾಯ್ಯ...../

ಏನಪ್ಪಾ ಅಣ್ಣಗಳಿರಾ
ಪತಿವರತ ದೊರೆಯೇ ವಿಧವ
ಸರಿಯಾಗಿ ಯಿವರಿಸಿ ಹೇಳಿರೋ
ನನ್ನ ಮುದ್ದು ಅಣ್ಣಗಳಿರಾ...../

ಒಂಬತ್ತು ವರ್ಣವೇ ಸೇರಿ
ಆ ಒಬ್ಬ ವಿಶ್ವ ಬ್ರಹ್ಮ
ಆ ಒಬ್ಬ ಜ್ಯೋತಿನಗರ
ನಗರ್ತಸೆಟ್ಟಿಗರವರು
ಜ್ಯೋತಿಷ್ಯ ನೋಡ್ಯಾರು
ಮರಳೊಂದು ಮೂಟೆಕಟ್ಟಿ
ಕಬ್ಬಿಣ ಒಂದು ಮೂಟೆಕಟ್ಟಿ
ಮ್ಯೆಣಾವ ಮುದ್ದೆ ಕಟ್ಟಿ
ಜ್ಯಂಬೆಲೆ ಕಟ್ಟು ಕಟ್ಟಿದರು
ಆ ಗಳಿಗೆಯಲ್ಲಿ...../

ಏನಯ್ಯ ಬ್ರಾಹ್ಮಣಯ್ಯ
ಮ್ಯೆಣಾವ ಮಡಕೆ ಮಾಡಿ
ಕುಂಭ ತುಂಬಾ ನೀರು ತುಂಬಿ
ಆದಿಸೇನನ ಮತ್ತೇ ಇಟ್ಟು
ಕುಂಭ ತುಂಬಾ ನೀರು ತಂದು
ಮರಳು ಅನ್ನಾವ ಮಾಡಿ
ಕಬ್ಬಿಣ ಬೇಳೆ ಸಾರು ಮಾಡಿ
ಜ್ಯಂಬೆಲೆ ಜೋಡಿಸಿ ಹೊಲಿದು
ಅನ್ನ ಬೇಯಿಸಿ ನಿನಗೆ ಇಟ್ಟರೆ
ಅವಳ ನೀನು ಮದುವೆಯಾಗಯ್ಯ
ಓ ಬ್ರಾಹ್ಮಣಯ್ಯ/

ಆಗ ಆ ಗಳಿಗೆಯಲ್ಲಿ
ಆ ಒಬ್ಬ ಬ್ರಾಹ್ಮಣಯ್ಯ
ಕಬ್ಬಿಣದ ಮೂಟೆ ತೆಗೆದುಕೊಂಡು
ಮರಳು ಮೂಟೆ ತೆಗೆದುಕೊಂಡು
ಮ್ಯೆಣಾವ ತೆಗೆದುಕೊಂಡು
ಜ್ಯಂಬೆಲೆಯ ತೆಗೆದುಕೊಂಡು
ಬೆನ್ನಹಿಂದೆ ಕಟ್ಟಿಕೊಂಡ
ಮ್ಯೆಣವ ಕೈಯಲ್ಲಿಡಿದಾನೋ
ಪ್ರಪಂಚವ ತಿರುಗ್ಯಾನೋ

ಪಾದಕ್ಕೆ ಶರಣು ಬಿದ್ದು
ಪಯಣಕ್ಕೆ ಎದ್ದಾನೋ
ಕಾಶಿಪುರವ ತೊರೆದಾನೋ
ಭೂಲೋಕವ ನಡೆದು ಬಂದಾನೋ
ಆ ಬ್ರಾಹ್ಮಣಯ್ಯ...../

ಭೂಲೋಕವ ನಡೆದು ಬಂದು
ಕೇಳು ಕೇಳು ಭೂದೇವತೆ
ಏಳೇಳು ದಿನದಿಂದ
ಅನ್ನಾವ ತಿಂದವನಲ್ಲ
ಹಸಿವನ್ನು ತಡೆಯಲಾರೆ
ಹಸಿವೀಗೆ ಅನ್ನ ನೀಡಾವೆ
ಓ ಭೂತ ದೇವತೆ...../

ಏನಯ್ಯ ಬ್ರಾಹ್ಮಣಯ್ಯ
ನಮ್ಮೀ ಭೂಲೋಕದೊಳಗೆ
ಹಣ್ಣು ಹಂಪಲೇ ಆಹಾರ
ತಿನ್ನುವಂಥ ವಾರವಿದು
ಅನ್ನವೆಲ್ಲಿಂದ ತಂದು ಬಡಿಸಲೋ
ಓ ಬ್ರಾಹ್ಮಣಯ್ಯ...../

ಕೇಳು ಕೇಳೆ ಭೂದೇವತೆ
ಮೈಣಾವ ಕುಂಭ ಮಾಡಿ
ಕುಂಭ ತುಂಬಾ ನೀರು ತುಂಬಿ
ಆದಿಶೇಷನ ಮತ್ತೆ ಇಟ್ಟು
ಕುಂಭ ತುಂಬಾ ನೀರು ತಂದು
ಮರಳು ಅನ್ನವ ಮಾಡಿ
ಕಬ್ಬಿಣ ಬೇಳೆ ಸಾರು ಮಾಡಿ
ಜ್ಯಂಬೆಲೆಯ ಜೋಡಿಸಿ ಹೊಲಿದು
ಅನ್ನ ಬೇಯಿಸಿ ನನಗೆ ಬಡಿಸಿದರೆ
ಹಸೀವಿಗೆ ಅನ್ನವ ಉಂಡುನಾನು
ಕಾಶಿ ಯಾತ್ರೆ ತೆರಳಿ ಹೋಗುವೆ
ನಿಮ್ಮ ಧರ್ಮದಿಂದ...../

ಏನಯ್ಯ ಬ್ರಾಹ್ಮಣಯ್ಯ
ಬೇರೆ ದೇಶಾದ ದಿಕ್ಕು
ಭಿಕ್ಷೇಯ ಎತ್ತೂವ ದಿಕ್ಕು
ಮೈಣಾವು ಕುಂಭ ಆಧೀತಾ ?
ಕಬ್ಬಿಣ ಕಡಲೆಯುಸಾರು ಆದೀತಾ ?
ಜ್ಯಂಬೆಲೆ ಊಟದೆಲೆ ಆದೀತಾ ?
ನನ್ನ ಕೈಲಾಗದು ಹೋಗಯ್ಯ
ಓ ಬ್ರಾಹ್ಮಣಯ್ಯ............/

ಆಗ ಆ ಬ್ರಾಹ್ಮಣಯ್ಯ
ಭೂಲೋಕವ ಬಿಟ್ಟನಲ್ಲ
ನಾಗಲೋಕಕೆ ನಡೆದು ಬಂದಾನಲ್ಲ
ಆ ಬ್ರಾಹ್ಮಣಯ್ಯ/
ನಾಗಲೋಕವ ಬಿಟ್ಟಾನಲ್ಲ
ಏನೆಂದು ಚಿಂತೆ ಮಾಡಿದ

ಆ ಬ್ರಾಹ್ಮಣಯ್ಯ...../
ಹುಟ್ಟಿ ಬಂದೆ ಭೂಮಿಯಲ್ಲಿ
ಬೆಳೆದು ಬಂದೆ ಜಗದ ಮೇಲೆ
ಭೂಲೋಕ ವತಿರುಗಿ ಬಂದೆ
ನಾಗಲೋಕವ ತಿರುಗಿದೆನಲ್ಲ
ದೇವ ಲೋಕವ ತಿರುಗಿದೆನಲ್ಲ
ಪತಿವರತಾ ದೊರೆಯಲಿಲ್ಲ
ಬದುಕಬಾರದೊ ಆ ಭೂಮಿಮೇಲಿನ್ನು
ನನ್ನ ಜನ್ಮವಿನ್ನೂ...../

ದೇವಲೋಕವ ಬಿಟ್ಟನಲ್ಲ
ನರಲೋಕಕೆ ನಡೆದು ಬಂದ
ಬೀದಿ ಬೀದಿ ತಿರುಗಿದನಲ್ಲ
ಮನೆ ಮನೆಯ ತಿರುಗಿದನಲ್ಲ
ಪತಿವರತಾ ದೊರೆಯಲಿಲ್ಲವೋ
ಆ ಬ್ರಾಹ್ಮಣನಿಗೆ....../

ಒಕ್ಕಲು ವೀದಿ, ಕೋಮಿಟಿ ವೀದಿಗಳ
ಬಲಿಜ ವೀದಿ, ನಗರ್ತ ವೀದಿಗಳ
ಬೇಡ ಬೀದಿ, ಅಗಸರ ಬೀದಿ
ನಾಯಿಂದ ಬೀದಿಯ ತಿರುಗಿದನಲ್ಲ
ಬೇಯಾದ ಅನ್ನವನ್ನು
ಸೋದಿಸಿ ನೋಡಿದನಲ್ಲ
ಪತಿವರತೆ ದೊರೆಯಲಿಲ್ಲ
ಬದುಕ ಬಾರದೆ ಭೂಮಿ ಮೇಲಿನ್ನು.....

ಆಗ ಆ ಬ್ರಾಹ್ಮಣಯ್ಯ
ಜಾಂಬವನ ವಾಡೆಗೆ ಬಂದು
ಜಾಂಬವನ ಮನೆಯ ಮುಂದೆ
ನಿಂತನಲ್ಲ ಬ್ರಾಹ್ಮಣಯ್ಯ
ಯಾರಮ್ಮ ಈ ನಗರಿಯಲ್ಲಿ
ಯಾರಮ್ಮ ಈ ಮಹಡಿಯಲ್ಲಿ
ನನ್ನೊಂದಿಗೆ ಮಾತಾಡಿ ಹೋಗಮ್ಮ
ನನ್ನ ಜೊತೆಗಾತಿ...../

ಏಳುಮಂದಿ ಅಣ್ಣಂದಿರು
ಬೆಟ್ಟಕ್ಕೆ ಸೌದೆಗ ಹೋಗಿರುವರೋ
ತಂದೆ ಜಾಂಬವನಾದರೂ
ದೇವಲೊಕಕೆ ಹೋಗಿರುವನೋ
ಪತಿವರತಾ ಆರಂಜ್ಯೋತಿ
ನಗರಿಯಲ್ಲಿ ಒಬ್ಬಂಟಿ
ಬ್ರಾಹ್ಮಣನನ್ನು ನೋಡಿದಳಯ್ಯ
ಪತಿವರತಾ ತಾಯಿ...../

ನಿನ್ನ ಕುಲವೆ ಬ್ರಾಹ್ಮಣ ಕುಲ
ನಮ್ಮ ಕುಲವೋ ಮತಂಗ ಕಾಲ
ನಮ್ಮ ವಾಡಗೆ ಯಾಕ ಬಂದೆಯೋ
ಓ ಬ್ರಾಹ್ಮಣಯ್ಯ...../

ಯಾವ ಜಾತಿ ಆದರೇನು
ಯಾವ ಕುಲ ಆದರೇನು
ನಿನ್ನ ತಾಯಿಯ ಹೆಸರ್ಹೇಳೆ
ನಿನ್ನ ತಂದೆಯ ಹೆಸರ್ಹೇಳೆ
ನಿನ್ನ ಹೆಸರು ನನಗೆ ಹೇಳೆ
ಓ ಹೆಣ್ಣೇ ನೀನು

ನನ್ನ ತಾಯಿ ಭೂದೇವತೆ
ನನ್ನ ತಂದೆ ಜಾಂಬವನಯ್ಯ
ಏಳು ಮಂದಿ ಅಣ್ಣಂದಿರು
ಬೆಟ್ಟದ ಸೌದೇಗೆ ಹೋಗಿರುವರು
ನನ್ನ ಹೆಸರು ಆರಂಜ್ಯೋತಿಯೋ
ನನ್ನ ವಾಡೆ ಬಿಟ್ಟು ಹೊಗಯ್ಯ............

ಆಗ ಆ ಬ್ರಾಹ್ಮಣಯ್ಯ
ಆರಂಜ್ಯೋತಿಯ ನೋಡಿದನಯ್ಯ
ಪಲುಕಗಳ ಕೇಳಿದನಮ್ಮ
ಬಿದ್ದು ಮೂರ್ಛೆ ಹೋದನಮ್ಮ
ಮತ್ತೆ ದಿಗ್ಗನೆ ಎದ್ದಾನಮ್ಮ
ಕೇಳು ಕೇಳೆ ಆರಂಜ್ಯೋತಿ
ಕೇಳೆ ಓ ಮತಂಗ ಕನ್ಯೆ
ಕೇಳೆ ಓ ಜಾಂಬವಗಿತ್ತಿ
ಏಳೇಳು ದಿನಗಳಿಂದ
ಅನ್ನ ತಿಂದವನೇ ಅಲ್ಲ
ಹಸಿವೇಗೆ ತಾಳೆಲಾರೆನೋ
ಹಸಿವೇಗೆ ಅನ್ನ ನೀಡಾವೆ
ಓ ಆರಂಜ್ಯೋತಿ...../

ಏನಯ್ಯ ಓ ಬ್ರಾಹ್ಮಣಯ್ಯ
ಈಗ ಈ ಗಳಿಗೆಯಲ್ಲಿ
ಹಣ್ಣು ಫಲಹಾರವನ್ನು
ಉಣ್ಣುವ ವಾರವಯ್ಯ
ಅನ್ನವೆಲ್ಲಿ ತಂದು ಇಡಲಯ್ಯ
ಓ ಬ್ರಾಹ್ಮಣಯ್ಯ...../

ನಿನ್ನ ಮನೆಯ ಅನ್ನಬೇಡ
ಅಕ್ಕಿ, ಬೇಳೆ ತಂದಿರುವೆ
ಅಡುಗೆ ಪಾತ್ರೆ ತಂದಿರುವೆ
ಊಟದೆಲೆಯ ತಂದಿರುವೆ
ಮ್ಯೆಣಾವ ಕುಂಭ ಮಾಡಿ
ಕುಂಭ ತುಂಬಾ ನೀರು ತುಂಬಿ
ಆದಿಸೇಸನ ಮೆತ್ತೆ ಮಾಡಿ
ಕುಂಭ ತುಂಬಾ ನೀರು ತಂದು
ಮರಳು ಅನ್ನಾವ ಮಾಡಿ
ಕಬ್ಬಿಣ ಬ್ಯಾಳೆ ಸಾರು ಮಾಡಿ
ಜ್ಯಂಬೆಲೆಯ ಇಸ್ತಿರೆಲೆ ಹೊಲಿದು
ಅನ್ನಮಾಡಿ ನನಗೆ ಇಟ್ಟರೆ
ಹಸಿವೇಗೆ ಉಂಡು ನಾನು
ಕಾಶಿಯಾತ್ರೆ ತೆರಳಿ ಹೋಗುವೆ
ಕಾಶಿಯಲ್ಲಿ ನಿನ್ನ ಸೇರುವೆ
ಓ ಆರಂಜ್ಯೋತಿ...../

ಏಳು ಮಂದಿ ಅಣ್ಣಂದಿರು
ಬೆಟ್ಟ ಸೌದೇಗೆ ಹೋಗಿರುವರು
ತಂದೆ ಜಾಂಬವನಾದರೂ
ದೇವಲೋಕ ಹೋಗಿರುವನು
ಈಗ ಆಗಲೋ ಬರಬಹುದಯ್ಯ
ಅನ್ನ ಹೇಗೆ ಮಾಡಿ ಬಡಿಸಲೋ
ಓ ಬ್ರಾಹ್ಮಣಯ್ಯ...../

ನಿನ್ನಲ್ಲಿ ಸತ್ಯವಿದ್ದರೆ
ನೀನು ಪತಿವರತೆಯಾದರೆ
ಅಷ್ಟು ಮಾತ್ರ ಅನ್ನ ಮಾಡಿ
ಹಸಿವೇಗೆ ನೀನು ಬಡಿಸಿದರೆ
ಕಾಶಿಯಾತ್ರೆ ತೆರಳಿ ಹೋಗುವೆ
ಕಾಶಿಯಲ್ಲಿ ನಿನ್ನ ಸೇರುವೆ
ಓ ಆರಂಜ್ಯೋತಿ...../

ಏನಯ್ಯ ಓ ಬ್ರಾಹ್ಮಣಯ್ಯ
ಅಷ್ಟು ಮಾತ್ರ ಅನ್ನ ಮಾಡಿ
ಹಸಿವೇಗೆ ನಾನು ಬಡಿಸಿದರೆ
ಆಡಿದ ಮಾತು ತಪ್ಪಿದೇನೆ
ಕಾಶಿ ಯಾತ್ರೆ ತೆರಳಿ ಹೋಗುವೆಯಾ ?
ಓ ಬ್ರಾಹ್ಮಣಯ್ಯ...../

ಆಕಾಶವೇಣಿ ಸಾಕ್ಷಿ ನಮಗೆ
ಭೂದೇವತೆ ಸಾಕ್ಷಿ ನಮಗೆ
ಅಷ್ಟು ಮಾತ್ರ ಅನ್ನ ಮಾಡಿ
ಹಸಿವೇಗೆ ನೀನೇ ಇಟ್ಟರೆ
ಆಡಿದ ಮಾತು ತಪ್ಪದೇನೆ
ಕಾಶಿಯಾತ್ರೆ ತೆರಳಿಹೋಗುವೆ
ಓ ಆರಂಜ್ಯೋತಿ...../

ಪತಿವರತಾ ಆರಂಜ್ಯೋತಿ
ಮನೆಗೆ ಚಿಲಕ ಹಾಕಿದಳಯ್ಯ
ಸಮುದ್ರಕ್ಕೆ ನಡೆದು ಬಂದಳು
ನೇರಳೆ ಮರದಡಿಯಲ್ಲಾದರೂ
ಮೈಣಾ, ಮರಳು
ಕಬ್ಬಿಣ, ಜ್ಯಂಭೆಲೆ ಇಟ್ಟಳಯ್ಯ
ಮೈಣಾವ ಎತ್ತಿಕೊಂಡು
ಸಮುದ್ರಕ್ಕೆ ಸ್ನಾನಕೆ ಇಳಿದಾಳೋ
ಮುಳುಗಿ ಮುಳುಗಿ ಸ್ನಾನವ ಮಾಡಿ
ಸಂಧ್ಯ ವಂದನೆ ಮಾಡಿದಳಯ್ಯ
ಜಪ ತಪಗಳ ಮಾಡಿದಳಪ್ಪ
ತಂದೆ ಜಾಂಬವನ ನೆನೆದು
ತಾಯಿ ಭೂದೇವತೆ ನೆನೆದು
ಬ್ರಹ್ಮದೇವನ ಸ್ಮರಿಸಿಕೊಂಡು
ಮೈಣಾವ ಕುಂಭ ಮಾಡಿ
ಕುಂಭ ತುಂಬ ನೀರ ತುಂಬಿ
ಆದಿಸೇಸನ ಕರೆದಳಯ್ಯ

ಮೆತ್ತೆ ಇನ್ನು ಇಟ್ಟಳಯ್ಯ
ಕುಂಭ ಎತ್ತಿ ತಲೆ ಮೇಲಿಟ್ಟು
ನೇರಳೆ ಮರದಡಿಗೆ ಬಂದಳೋ
ಕುಂಭ ಇಳಿಸಿ ಕೆಳಗೆ ಇಟ್ಟು
ಮೂರು ಕಲ್ಲು ಒಲೆಗೆ ಇಟ್ಟಳೋ
ಅರಿಶಿಣ ಕುಂಕುಮ ಇಟ್ಟಳಯ್ಯ
ಸಾಂಬರ ಕಲ್ಲ ತಿರುವ್ಯಾಳಯ್ಯ
ಕುಂಭ ತೆಗೆದು ಒಲೆ ಮೇಲಿಟ್ಟು
ಮರಳು ಎತ್ತಿ ಹುಯ್ದಾಳಯ್ಯ
ಕಬ್ಬಿಣ ಎತ್ತಿ ಹುಯ್ದಾಳಯ್ಯ
ಹಸಿ ಪಟ್ಟೆ ಬಾಳೆಲೆ ಸುಲಿದು
ಒಲೆ ಒಳಗೆ ಇಟ್ಟಳಯ್ಯ
ಮೂರು ಹೆಜ್ಜೆ ದೂರ ಬಂದು
ತಾನು ನಿಂತಳಪ್ಪಾ...../

ಆ ಒಬ್ಬ ಬ್ರಾಹ್ಮಣಯ್ಯ
ಅಡುಗೆಯೆಲ್ಲವ ಕಂಡನಪ್ಪ
ಪಲ್ಯ ಸಾರು ನೋಡಿದನಪ್ಪ
ಊಟದೆಲೆಯ ನೋಡಿದನಪ್ಪ
ಫಕ ಫಕನೆ ನಕ್ಕನಪ್ಪ
ಲಗ್ನವಿನು ಪ್ರಾಪ್ತವಾಯಿತೋ
ಓ ಬ್ರಹ್ಮ ದೇವನೆ...../

ಸಮುದ್ರಕ್ಕೆ ಹೋದನಪ್ಪಾ
ಮುಳುಗಿ ಮುಳುಗಿ ಸ್ನಾನವ ಮಾಡಿ
ಸಂಧ್ಯಾವಂದನೆ ಮಾಡಿದನಪ್ಪ
ಓಡೋಡುತ ಹೆಜ್ಜೆ ಹಾಕಿ
ನೇರಿಳೆ ವೃಕ್ಷದ ಕೆಳಗೆ
ಬಂದನಪ್ಪ ಬ್ರಾಹ್ಮಣಯ್ಯ
ಪದ್ಮಾಸನ ಹಾಕಿಕೊಂಡು
ಪಟ್ಟಾಗಿ ತಾನು ಕುಳಿತಾನೋ
ಓ ಬ್ರಾಹ್ಮಣಯ್ಯ....../

ಪತಿವರತಾ ಆರಂಜ್ಯೋತಿ
ಇಸ್ತಿರೆಲೆಯ ಹಾಕಿದಳಯ್ಯ
ಅನ್ನವನೆಲ್ಲ ಬಡಿಸಿದಳಪ್ಪ
ಪಲ್ಯಸಾರು ಬಡಿಸಿದಳಯ್ಯ
ಸಾಂಬಾರನೆ ಬಡಿಸಿದಳಯ್ಯ
ಶರಣು ಕೈಗಳ ಮಾಡಿಕೊಂಡು
ಪ್ರಾದಕ್ಷಣೆ ತಿರುಗಿದಳಯ್ಯ
ದೂರು ಬಂದು ನಿಂತಳಲ್ಲಯ್ಯ
ಓ ಪತಿವರತಾ ತಾಯಿ...../

ಆಗ ಆ ಬ್ರಾಹ್ಮಣಯ್ಯ
ಅನ್ನವನೆಲ್ಲ ಕಲಿಸಿದನಪ್ಪ
ಪಲ್ಯ ಸಾರು ಕಲಿಸಿದನಪ್ಪ
ಮೊದಲ ಕವಳ ಎತ್ತಿದನಯ್ಯ
ವಾರಕಾಂತೆಯ ನೆನೆದನಪ್ಪಾ
ಬ್ರಹ್ಮದೇವನ ಸ್ಮರಿಸಿದನಪ್ಪಾ
ಯಿಶ್ವ ಬ್ರಹ್ಮನ ನೆನೆದನಪ್ಪಾ
ನಗರ್ತರವರ ನೆನೆದರಪ್ಪಾ
ದೇವಾಂಗದವರ ನೆನೆದನಪ್ಪಾ
ಜ್ಯೋತಿನಗರ ನೆನೆದನಪ್ಪಾ
ವಾಲ್ಮೀಕರ ನೆನೆದನಪ್ಪಾ
ಒಂಬತ್ತು ವರ್ಣವೆ ನೆನೆದು
ಮೊದಲ ಕವಳ ಉಂಡನಲಪ್ಪಾ
ಮೂರು ಕವಳ ಎತ್ತಿದನಲ್ಲಪ್ಪಾ
ಜಾಂಬವನ ಸ್ಮರಿಸಿಕೊಂಡು
ಭೂದೇವಿಯ ಸ್ಮರಿಸಿಕೊಂಡು
ಮೂರು ಕವಳವ ಉಂಡನಲ್ಲಪ್ಪಾ...../

ಆಗ ಆ ವೇಳೆಯಲ್ಲಿ
ಅನ್ನವನೆಲ್ಲ ಮೂಟೆಕಟ್ಟಿ
ಬೆನ್ನ ಹಿಂದೆ ಕಟ್ಟಿದನಪ್ಪಾ
ಮೇಲೆಕೆದ್ದು ಸೆರಗ ಹಿಡಿದನೋ
ಆರಂಜ್ಯೋತಿಯ...../

ಏನಯ್ಯ ಓ ಬ್ರಾಹ್ಮಣಯ್ಯ
ನನ್ನ ಕೈಯ್ಯ ಅನ್ನ ತಿಂದು
ನನ್ನ ಸೆರಗ ನೀನು ಹಿಡಿದೆಯಲ್ಲ
ನನ್ನ ವ್ರತವೆ ಭಂಗವಾಯಿತಲ್ಲ
ಓ ಬ್ರಾಹ್ಮಣಯ್ಯ...../

ಕೇಳು ಕೇಳೆ ಆರಂಜ್ಯೋತಿ
ಕೇಳೆ ಓ ಮತಂಗ ಕನ್ಯೆ
ನಿನ್ನ ಕೈಯ ಅನ್ನ ತಿಂದೆ
ನಿನ್ನ ಸೆರಗೆ ನಾನು ಹಿಡಿದೆ
ನಾನೇ ಗಂಡ ನೀನೆ ಬಾರ್‍ಯೆ
ನನ್ನ ನೀನು ಲಗ್ನವಾಗೆ ಬಾರೇ
ಕಾಶಿ ಯಾತ್ರೆ ತೆರಳಿ ಹೋಗೋಣ
ಓ ಆರಂಜ್ಯೋತಿ...../

ಆಡಿದ ಮಾತು ತಪ್ಪಿರುವೆ
ನಿನ್ನ ವಂಶ ಇರುವವರೆಗೆ
ಈಗ ನಿನ್ನ ದ್ರೋಹವಾದರೂ
ಬೆಂಕಿಯಲ್ಲಿ ಇಟ್ಟು ನಿನ್ನ
ಸುಟ್ಟು ಬೂದಿ ಮಾಡಬೇಕಯ್ಯ
ಗಂಗೆಯಲ್ಲಿ ಕಲಸಬೇಕಯ್ಯ
ಸೆರಗು ತಾನು ಬಿಡಿಸಿಕೊಂಡಳಯ್ಯ
ಓಡಿ ಓಡಿ ಬಂದಳಯ್ಯ
ಮನೆಯ ಒಳಗೆ ಸೇರಿಕೊಂಡಳು
ಓ ಪತಿವರತಾ ತಾಯಿ...../

ಆಗ ಆ ಬ್ರಾಹ್ಮಣಯ್ಯ
ಹೆಜ್ಜೆ ತುಳಿದು ಬರದೆ ಅವನು
ಓಡೋಡಿ ಬಂದನಯ್ಯ
ಮನೆಯ ಒಳಗೆ ತೂರಿಕೊಂಡನಯ್ಯ
ಪದ್ಮಾಸನ ಹಾಕಿಕೊಂಡು
ಪಟ್ಟಾಗಿ ಕುಳಿತು ಬಿಟ್ಟನಲ್ಲ
ಓ ಬ್ರಾಹ್ಮಣಯ್ಯ....../

ಏನಯ್ಯಾ ಬ್ರಾಹ್ಮಣಯ್ಯ
ನಿನ್ನ ಕುಲವೆ ಬ್ರಾಹ್ಮಣ ಕುಲವು
ನಮ್ಮ ಕುಲವೆ ಮತಂಗ ಕುಲವು
ನಮ್ಮ ನಗರ ಬಿಟ್ಟು ಹೋಗಯ್ಯ
ಓ ಬ್ರಾಹ್ಮಣಯ್ಯ..../

ಯಾವ ಜಾತಿ ಆದರೇನು ?
ಯಾವ ಕುಲವು ಆದರೇನು ?
ನಿನ್ನ ಕೈಯ ಅನ್ನ ಉಂಡೆ
ನನ್ನ ನೀನು ಮದುವೆಯಾಗು ಬಾರೆ
ಕಾಶಿ ಯಾತ್ರೆ ತೆರಳಿ ಹೋಗೋಣ
ಓ ಆರಂಜ್ಯೋತಿ....../

ನನ್ನೊಳಗೆ ಸತ್ಯವಿದ್ದರೆ
ನಾನು ನಿನಗೆ ವರಸೆಯಾದರೆ
ಮನೆಯ ತುಂಬಾ ಮಾಂಸ ಬೇಕಯ್ಯೋ
ಓ ಬ್ರಹ್ಮದೇವ...../

ಏನಯ್ಯ ಬ್ರಾಹ್ಮಣಯ್ಯ
ಬಾಗಿಲಾಚೆ ಗಲಬಾನೆ ನೋಡು
ಹೊರಗೆ ಗೋವು ಚರ್ಮವ ನೋಡು
ಎಮಿಕೆಗಳ ರಾಶಿಯ ನೋಡು
ನಡುಮನೆಯ ಬಾಡಗುಡ್ಡೆ ನೋಡು
ದೊಮ್ಮೆಗಳ ತೋರಣ ನೋಡು
ಗುಂಡಿಗೆ ಗುತ್ತಿಗಳ ನೋಡು
ಕರುಳು ಸೆಗಣೀಯ ಪೆಂಡೆ ನೋಡು
ನಮ್ಮ ನಗರ ಬಿಟ್ಟು ಹೋಗಯ್ಯ
ಓ ಬ್ರಾಹ್ಮಣಯ್ಯ....../

ಆ ಒಬ್ಬ ಬ್ರಾಹ್ಮಣಯ್ಯ
ದೂರದೃಷ್ಟಿ ನೋಡಿಕೊಂಡ
ನಿಜವಾದ ಮಾಂಸವು ಅಲ್ಲ
ಪತಿವರತಾ ಧರ್ಮದಿಂದ

ಸೃಷ್ಟಿಸಿರುವ ಮಾಂಸವೆಂದು
ಪದ್ಮಾಸನ ಹಾಕಿಕೊಂಡು
ಪಟ್ಟಾಗಿ ಕುಳಿತುಬಿಟ್ಟನಯ್ಯಾ....
ಓ ಬ್ರಾಹ್ಮಣಯ್ಯ......./

ಬಾಗಿಲಾಚೆ ಗಲಬಾನೇ ಇರಲಿ .
ಹೊರಗೆ ಗೋವು ಚರ್ಮವೆ ಇರಲಿ
ಎಮಿಕೆಗಳ ರಾಶಿಯೇ ಇರಲಿ
ನಡುಮನೆ ಬಾಡಗುಡ್ಡವೆ ಇರಲಿ
ದೊಮ್ಮೆಗಳ ತೋರ್ನಾವೇ ಇರಲಿ
ಗುಂಡಿಗೆ ಗುತ್ತಿಗಳೇ ಇರಲಿ
ಕರುಳ ಸೆಗಣಿ ಪೆಂಡೇಯೇ ಇರಲಿ
ನಿನ್ನ ಬಿಟ್ಟು ನಾನು ಹೋಗೆನೇ....
ನನ್ನ ನೀನು ಮದುವೆಯಾಗು ಬಾರೇ ಓ ಆರಂಜ್ಯೋತಿ
ಕಾಶಿ ಯಾತ್ರೆ ತೆರಳಿ ಹೋಗೋಣ
ನಾವಿಬ್ಬರೂ ಕೂಡಿ....../
ಆಗ ಆ ಗಳಿಗೆಯಲ್ಲಿ
ಪತಿವರತಾ ಆರಂಜ್ಯೋತಿ
ಏನಯ್ಯ ಬ್ರಾಹ್ಮಣಯ್ಯ
ನಮ್ಮ ತಂದೆ ಜಾಂಬವನಾದರೂ
ದೇವಲೋಕಕೆ ಹೋಗಿರುವನಯ್ಯ
ಈಗ ಆಗಲೋ ಬಂದು ಬಿಡುವನಯ್ಯಾ
ಏಳು ಮಂದಿ ಅಣ್ಣಂದೀರು
ಬೆಟ್ಟ ಸೌದೇಗೆ ಹೋಗಿರುವರೋ
ಈಗ ಆಗಲೋ ಬಂದು ಬಿಡುವರಯ್ಯಾ
ಏಳು ಮಂದಿ ಅಣ್ಣಂದೀರು
ನಿನ್ನ ಅವರು ನೋಡಿದರಂತೂ
ಗಂಡುಗೊಡಲಿಗಳಲ್ಲಿ
ನಿನ್ನ ತಲೆಯ ಹೊಡೆದು ಬಿಡುವರೋ
ಊರ ಬಾಗಿಲಿಗೆ ಕಟ್ಟಿಬಿಡುವರೋ
ನಿನ್ನ ತಲೆಯ ತೆಗೆದು......./

ಕೇಳು ಕೇಳೆ ಆರಂಜ್ಯೋತಿ
ನಿನ್ನ ತಂದೆ ಜಾಂಬವನಾದರೂ
ನನಗಿನ್ನು ಮಾವನಂತೆ
ಏಳು ಮಂದಿ ಅಣ್ಣಂದಿರು
ನನಗಿನ್ನು ಭಾವಂದೀರು
ನನ್ನನೇನು ಮಾಡಬಲ್ಲರೋ
ನನ್ನ ತಲೆಯ ಹೊಡೆದು ಬಿಡಲಿ
ಊರ ಬಾಗಿಲಿಗೆ ಕಟ್ಟಿ ಬಿಡಲಿ
ನಿನ್ನ ಬಿಟ್ಟು ನಾನು ಹೋಗೇನೆ
ನನ್ನ ನೀನು ಮದುವೆಯಾಗು ಬಾರೆ
ಓ ಆರಂಜ್ಯೋತಿ......./

ಏಳು ಮಂದಿ ಅಣ್ಣಂದೀರು
ಬೆಟ್ಟದ ಸೌದೆ ಹೊತ್ತುಕೊಂಡು
ಮನೆಯ ಮುಂದಕೆ ಬಂದರಮ್ಮ
ಬಾಗಿಲಿಗೆ ಬಂದರಮ್ಮ
ಏನಯ್ಯ ಅಣ್ಣಗಳಿರಾ
ನನ್ನ ಮುದ್ದು ತಮ್ಮಗಳಿರಾ
ಪತಿವರತಾ ಆರಂಜ್ಯೋತಿ
ನಗರದೊಳಗೆ ಒಬ್ಬಂಟಿ
ಆ ಒಬ್ಬ ಬ್ರಾಹ್ಮಣಯ್ಯ
ಮನೆಯ ಒಳಗೆ ಬಂದಿರುವನಲ್ಲ
ಪದ್ಮಾಸನ ಹಾಕಿಕೊಂಡು
ಪಟ್ಟಾಗಿ ಕುಂತಿರುವನಲ್ಲ
ಇದು ಏನು ಕಾರಣ ಇರಬೇಕೋ
ಓ ಅಣ್ಣಗಳಿರಾ......./

ಏನಯ್ಯ ಬ್ರಾಹ್ಮಣಯ್ಯ
ನಮ್ಮ ಕುಲವೇ ಮತಂಗ ಕುಲವು
ನಿನ್ನ ಕುಲವೋ ಬ್ರಾಹ್ಮಣ ಕುಲವು
ನಮ್ಮ ನಗರಕೆ ಯಾಕೆ ಬಂದೆಯೋ
ಓ ಬ್ರಾಹ್ಮಣಯ್ಯ......./

ಏನಯ್ಯ ಭಾವಗಳಿರಾ
ನನ್ನ ಮುದ್ದು ಭಾವಗಳಿರಾ
ನಿಮ್ಮ ಒಬ್ಬ ತಂಗಿಯನ್ನ
ಪತಿವರತಾ ಆರಂಜ್ಯೋತಿಯ
ನನಗೆ ಕೊಟ್ಟು ಮದುವೆ ಮಾಡಿರಯ್ಯ
ಓ ಭಾವಗಳಿರಾ......./

ತೊಡೆ ತಟ್ಟಿ ಕೇಕೆ ಹಾಕಿದರು
ಕುಡಿಮೀಸೆ ಹೊಡೆತಿರುವಿದರು
ಗಂಡುಕೊಡಲಿ ಎತ್ತಿಕೊಂಡು
ಮನೆಯ ಒಳಗೆ ನುಗ್ಗಿದರಲ್ಲೋ
ತಂಗಿಯಾದ ಆರಂಜ್ಯೋತಿಯ
ನಿನಗೆ ಲಗ್ನವ ಮಾಡಲಾರೆವು
ಗಂಡುಕೊಡಲಿ ಮದುವೆ ಮಾಡುವೆವೋ
ಓ ಬ್ರಾಹ್ಮಣಯ್ಯ......./

ಏಳು ಮಂದಿ ಅಣ್ಣಂದೀರು
ಗಂಡುಗೊಡಲಿಗಳ ಎತ್ತಿಕೊಂಡು
ಬ್ರಾಹ್ಮಣನ ಮೇಲೆ ಎರಗಿದರಲ್ಲೋ
ಪತಿವರತಾ ಆರಂಜ್ಯೋತಿ
ಮೂಲೆಯಲ್ಲಿ ಇದ್ದವಳು
ನಡುಮನೆಗೆ ಓಡಿ ಬಂದು
ಸೆರಗಂಚು ಅಡ್ಡ ಹಿಡಿದಳೋ
ಆ ಬ್ರಾಹ್ಮಣನಿಗೆ......./

ಬ್ರಾಹ್ಮಣನದು ತಪ್ಪು ಇಲ್ಲ
ತಪ್ಪೆಲ್ಲ ನನ್ನದೇನೆ
ಬ್ರಾಹ್ಮಣನ ಕೋಲ್ಲಬೆಡಿರೋ
ನನ್ನ ತಲೆಯ ನೀವು ಹೊಡೆಯಿರೋ

ಬ್ರಾಹ್ಮಣನ ಕೊಂದು ಬಿಟ್ಟರೆ
ಬ್ರಹ್ಮ ಹತ್ಯೆ ನಿಮಗೆ ತಟ್ಟುವುದು
ಬ್ರಾಹ್ಮಣನ ಕೊಂದುಬಿಟ್ಟರೆ

ನಾನು ಮುಂಡೆ ಹೊರಬೇಕೋ
ಓ ಅಣ್ಣಗಳಿರಾ......./

ಏಳು ಮಂದಿ ನಾವು ಇದ್ದು
ತಂದೆ ಜಾಂಬುವನೆ ಇದ್ದು
ಏನು ತಪ್ಪು ಮಾಡಿದೆಯಮ್ಮ
ಸರಿಯಾಗಿ ವಿವರಿಸಿ ಹೇಳಮ್ಮ
ನಮ್ಮ ಮುದ್ದು ತಂಗಿ......./

ಏಳೇಳು ದಿನಗಳಿಂದ
ಅನ್ನಹಾರ ಇಲ್ಲದೆ
ಏಳೇಳು ಭುವನವೆಲ್ಲ
ಬ್ರಾಹ್ಮಣನು ಸುತ್ತಿ ಬಂದ
ಹಸಿವೇಗೆ ಅನ್ನವಿಲ್ಲದೆ
ನಮ್ಮ ನಗರಕೆ ಬಂದನಪ್ಪಾ
ಅನ್ನ ಮಾಡಿ ಇಟ್ಟೆ ನಾನು
-ಮೂರು ತುತ್ತು ಅನ್ನ ತಿಂದು
ನನ್ನ ಸೆರಗು ತಾನು ಹಿಡಿದ
ಓ ಅಣ್ಣಗಳಿರಾ... ನನ್ನ ವ್ರತವು ಭಂಗವಾಯಿತೋ
ನನ್ನ ಅಣ್ಣಗಳಿರಾ.......//

ಏಳು ಮಂದಿ ಅಣ್ಣಗಳು
ಈ ಮನೆಯ ಬ್ರಷ್ಟ ಮುಂಡೆ
ಇರಬಾರದೆ ಈ ಮನೆಯಲ್ಲಿ
ನಿನ್ನ ಮೊಕವ ತೋರಬಾರದು
ಮನೆಯ ದಾಟಿ ಹೊರಗೆ ಹೋಗಮ್ಮ
ಓ ಆರಂಜ್ಯೋತಿ.......//

ಈ ಮನೆಯ ಬ್ರಷ್ಟ ಮುಂಡೆ
ಇರಬಾರದು ಈ ಮನೆಯಲ್ಲಿ
ನಿನ್ನ ಮೂಖವ ತೋರಬಾರದು
ಕತ್ತು ಹಿಡಿದು ಹೊರಗೆ ದಬ್ಬಿದರು
ಓ.... ಆರಂಜ್ಯೋತಿ........./

ಏಳು ಮಂದಿ ಅಣ್ಣಂದಿರು
ಪತಿವರತಾ ಆರಂಜ್ಯೋತಿಯ
ಆ ಒಬ್ಬ ಬ್ರಾಹ್ಮಣನ
ಕತ್ತಿಡಿದು ಹೊರಗೆ ದಬ್ಬಿದರೋ
ಭಾರಿ ಬಾಗಿಲು ಮುಚ್ಚಿಬಿಟ್ಟರು
ಉಕ್ಕು ಬೀಗವ ಹಾಕಿಬಿಟ್ಟರು
ಉಕ್ಕು ಬೀಗವ ಹಾಕಿಬಿಟ್ಟರಯ್ಯಾ
ಆ ನಗರಕ್ಕಿನ್ನು......॥

ಪತಿವರತಾ ಆರಂಜ್ಯೋತಿ
ಗೊಳಗೊಳನೆ ಗೋಳ್ಯಾಡಳಲ್ಲೋ
ಎಡಗಣ್ಣಾ ಕಣ್ಣೀರಾದರೂ
ಹೊಳೆಯಾಗಿ ಹರಿದೈತೆ
ಬಲಗಣ್ಣಾ ಕಣ್ಣೀರಾದರೂ
ಕುಂಭ ವರ್ಷವಾಗಿ ಸುರಿಯತಲ್ಲೋ
ಹೆಣ್ಣಾ ಶೋಕ ಧರಣಿಗೆ ಬಂತಲ್ಲೋ
ಪತಿವರತಾ ತಾಯಿ......॥

ಅನ್ಯಾಯವರಿಯದೆ ಕಾಂತಾವೇಣಿಗೆ
ಪುಣ್ಯವರಿಯದೆ ಭೂದೇವಿಗೆ
ಪಾಪ ಪುಣ್ಯ ಒಂದೂ ಇಲ್ಲದೆ
ಏಳು ಮಂದಿ ಅಣ್ಣಂದಿರು
ಕತ್ತಿಡಿದು ಹೊರಗೆ ದಬ್ಬಿದರೋ
ಓ ಅಣ್ಣಗಳಿರಾ......./

ಹೆಣ್ಣಾ ಹುಟ್ಟು ಹುಟ್ಟೋಕ್ಕಿಂತ
ಅಡವಿಯಲ್ಲಿ ಒಂದು ಮರವಾಗಿದ್ದರೆ
ಬಂದು ಹೋಗೋ ಅಣ್ಣಂದಿರಿಗೆ
ನೆರಳಾಗಿ ನಿಲ್ಲುತ್ತಿದ್ದೆ
ಬದುಕಬಾರದೆ ಈ ಜನ್ಮವಿನ್ನ ಮೇಲೆ//

ಪತಿವರತಾ ಆರಂಜ್ಯೋತಿ
ಫರ್ಲಾಮಗೇ ಬಂದಳಲ್ಲ

ಹಿಂದೆ ಹುಟ್ಟಿದ ಅಣ್ಣಗಳು
ಒಬ್ಬರಾದರೂ ಬರುವರೆಂದು
ಹಿಂದೆ ತಿರುಗಿ ನೋಡ್ಯಾಳಲ್ಲ
ಪತಿವರತಾ ತಾಯಿ.......॥

ಹಿಂದೆ ಹುಟ್ಟಿದ ಅಣ್ಣಗಳು
ಒಬ್ಬರಾದರೂ ಬರಲೇ ಇಲ್ಲ
ನನ್ನ ಹೊಟ್ಟೆ ಉರಿಯೋ ಹಂಗೆ
ದಂಡೇಯ ಸೀಳುಗಳಂತೆ
ಧಗ್ಗನುರಿದು ಹೋಗಲಯ್ಯ
ನಿಮ್ಮ ವಂಶ ಇರುವ ತಂಕ
ಪುರಿಳೆ ಬೆಳಕು ತೆಳ್ಳ ಗಂಜಿ
ಅಂಗಡಿ ಅಕ್ಕಿ ತಂಗಡಿ ಸೌದೆಯೆಂದು
ಶಾಪಾವನೆ ಕೊಟ್ಟಳಲ್ಲಯ್ಯ
ಅಣ್ಣಗಳಿಗೆ.......//

ಕಾಶಿದಾರಿ ಬೆನ್ನ ಬಿದ್ದು
ಹಿಂದು ಮುಂದು ಬರುತಿರಲವರು
ಮಲತಾಯಿ ಮಕ್ಕಳು ಅವರು
ಕೋಮಿಟಿ ಅಣ್ಣಂದಿರು ಅವರು
ಅಡ್ಡ ಬಂದು ನಿಂತಾರಲ್ಲಯ್ಯಾ......./

ಏನಮ್ಮಾ ಆರಂಜ್ಯೋತಿ
ಪತಿವರತಾ ಮುದ್ದು ತಂಗಿ
ಬ್ರಾಹ್ಮಣನ ಹಿಂದೆ ಹೊರಟಿರುವೆ ತಾಯಿ
ನಿನ್ನ ಹಿಂದೆ ನಾವು ಬರುವೆವೋ
ಓ ಆರಂಜ್ಯೋತಿ.......//

ಹಿಂದೆ ಹುಟ್ಟಿದ ಅಣ್ಣಗಳು
ಇಷ್ಟು ಮಾತ್ರಕೂ ಬರದೆ ಹೋದರು
ಮಲತಾಯಿ ಮಕ್ಕಳು ನೀವು
ನಮ್ಮ ಹಿಂದೆ ಬರಬ್ಯಾಡದಣ್ಣ

ನಿಮ್ಮ ವಂಶ ಇರುವ ತಂಕ
ಕಾಸು ಕಾಸು ಕೂಡಿ ಬಂದು
ಕೋಟೀಗೆ ಹೆಡೆಬಿಚ್ಚಲಿ ಅಣ್ಣ
ನನ್ನ ಹಿಂದೆ ನೀವು ಬರಬ್ಯಾಡದೋ
ಓ ಅಣ್ಣಗಳಿರಾ.......//

ಆಗ ಆ ಗಳಿಗೆಯಲ್ಲಿ
ಕಾಶಿವರೆಗೂ ಹೋದರಣ್ಣ
ವಿಶ್ವನಾಥನ ಗುಡಿಯ ಮುಂದೆ
ದ್ವಾರಬಾಗಿಲಲಿ ನಿಂತರಲ್ಲಯ್ಯೋ.......//

ಆ ಒಬ್ಬ ವಿಶ್ವ ಬ್ರಹ್ಮ
ವಿಶ್ವನಾಥನ ವಿಗ್ರಹಮುಂದೆ
ಅಭಿಷೇಕ ಮಾಡುತಲಿದ್ದ
ಕಾಯಿ ಒಡೆದು ಮಂಗಳಾರತಿ ತಳ್ಳಿ
ದೇವರಿಗೆ ಬೆಳಗಿಸಿದನು
ಪೂರ್ವ ಭಾಗಕ್ಕೆ ತಿರುಗಿದನೋ
ಆ ವಿಶ್ವ ಬ್ರಹ್ಮ......./

ಬ್ರಾಹ್ಮಣನ ನೋಡಿದನಪ್ಪಾ....
ಆರಂಜ್ಯೋತಿಯ ನೋಡಿದನಪ್ಪಾ..
ಮಂಗಳಾರತಿ ತಟ್ಟೆ ಇಟ್ಟು
ಊರ ಬಾಗಿಲಿಗೆ ಬಂದಾನಪ್ಪಾ...
ಏನಯ್ಯ ಬ್ರಾಹ್ಮಣಯ್ಯ
ತಂಗಿಯೊಬ್ಬ ಆರಂಜ್ಯೋತಿಯ
ಈ ಸ್ಥಳಕೆ ಯಾಕೆ ತಂದೆಯೋ.......//

ಏನಪ್ಪಾ ಅಣ್ಣಗಳಿರಾ
ನನ್ನ ಮುದ್ದು ಅಣ್ಣಗಳಿರಾ
ಆವತ್ತಿನ ಕಾಲದಲ್ಲಿ
ಜ್ಯೋತಿಷ್ಯವ ನೋಡಿದೆಯಲ್ಲ
ಪತಿವರತಾ ದೊರಕಿದರೇನು
ಲಗ್ನವಾಗಲು ಹೇಳಿದಿಯಲ್ಲ
ಓ ವಿಶ್ವ ಬ್ರಹ್ಮ.......//

ಮೈಣಾದ ಮುದ್ದೆ ಕೊಟ್ಟು
ಮರಳು ಒಂದು ಮೂಟೆ ಕೊಟ್ಟು
ಕಬ್ಬಿಣ ಒಂದು ಮೂಟೆ ಕೊಟ್ಟು
ಜ್ಯಂಬೆಲೆ ಒಂದು ಕಟ್ಟು ಹಾಕಿ
ಯಾರಾರೂ ಬೇಯಿಸಿ ಬಡಿಸಿದರೆ
ಮದುವೆಯಾಗಲು ಹೇಳಿದ್ದೀಯಾ
ಓ ವಿಶ್ವ ಬ್ರಹ್ಮ......//

ಭೂಲೋಕವತಿರುಗಿದೆನೋ
ನಾಗಲೋಕವ ತಿರುಗಿದೆನೋ
ದೇವಲೋಕವ ತಿರುಗಿದೆನೋ
ನರಲೋಕವ ತಿರುಗಿದೆನೋ
ಪತಿವರತಾ ದೊರೆಯಲಿಲ್ಲವೋ
ಅನ್ನ ಬೇಯಿಸಿ ಇಟ್ಟವರೇ ಇಲ್ಲ
ಈ ಜಗದೊಳಗೆ.......//

ಪತಿವರತಾ ಆರಂಜ್ಯೋತಿ
ಮೈಣಾವ ಕುಂಭ ಮಾಡಿ
ಮರಳು ಅನ್ನವ ಮಾಡಿ
ಕಬ್ಬಿಣ ಬ್ಯಾಳೆ ಸಾರು ಮಾಡಿ
ಜ್ಯಂಬೆಲೆಯ ಇಸ್ತಿರೆಲೆ ಹೊಲಿದು
ಅನ್ನ ಬೇಯಿಸಿ ನನಗೊ ಬಡಿಸಿದಳೋ
ಮೂರು ತುತ್ತು ಅನ್ನವ ತಿಂದು
ಮಿಕ್ಕ ಅನ್ನವ ನಿಮಗೂ ತಂದಿರವೆ
ಮೂಟೆ ಬಿಚ್ಚಿ ನೆಲಕೆ ಇಟ್ಟನೋ
ಆ ಬ್ರಾಹ್ಮಣಯ್ಯ.......//

ಮೂಟೆ ಬಿಚ್ಚಿ ನೆಲದಿ ಇಟ್ಟಾನೋ
ಆ ಒಬ್ಬ ವಿಶ್ವ ಬ್ರಹ್ಮ
ಮೂಟೆಯ ಬಿಚ್ಚಿದನಲ್ಲ
ಪತಿವರತಾ ಮಾಡಿದ ಅನ್ನ
ಮೂಟೆ ಬಿಚ್ಚಿ ನೆಲದಿ ಇಟ್ಟಾನೋ
ಆ ವಿಶ್ವ ಬ್ರಹ್ಮ.......//

ಆ ಒಬ್ಬ ವಿಶ್ವ ಬ್ರಹ್ಮ
ಮೂಟೆ ಈಗ ಬಿಚ್ಚಿದನಮ್ಮ
ಅನ್ನವನೀಗ ನೋಡಿದನಮ್ಮ
ಹೊಗೆಯು ಹೊಗೆಯೇ ಏಳುತ್ತಿತ್ತಮ್ಮಾ
ಆ ಅನ್ನವೆಲ್ಲ/

ಆಗ ಆ ವಿಶ್ವ ಬ್ರಹ್ಮ
ಪತಿವರತಾ ಮಾಡಿದನ್ನವು
ನಾವಿನ್ನು ತಿನ್ನೆವೆನ್ನುತ
ಅಂಗೈಯಲ್ಲಿ ತುಂಬಿಕೊಂಡನು
ಅಂಗೈ ಅನ್ನವ ಆಕಾಶಕೆ ಚೆಲ್ಲಿ ಬಿಟ್ಟನಲ್ಲ
ಆ ಅನ್ನವೆಲ್ಲವು
ನಕ್ಷತ್ರಗಳಾಗಿ ನಿಂತು ಬಿಟ್ಟವಲ್ಲ
ಆ ವೇಳೆಯಲ್ಲಿ....../

ಆ ಒಬ್ಬ ವಾಲ್ಮೀಕರು
ಚಪ್ಪರವನ್ನೇ ಎತ್ತಿದರಮ್ಮ
ಆ ಒಬ್ಬ ಜ್ಯೋತಿ ನಗರಿಗರು
ಒಡವೆಗಳನ್ನೇ ಕೊಂಡು ತಂದರು
ಆ ಒಬ್ಬ ದೇವಾಂಗದವರು
ಅರಿಶಿಣ ಸೀರೆ ನೆಯ್ದು ತಂದರು
ಆ ಒಬ್ಬ ನಗರ್ತರವರು
ಅರಿಶಿಣ ಪಂಚೆ ತಂದುಕೊಟ್ಟರು
ಆ ಒಬ್ಬ ಯಾದವರಾದರೆ
ಹಾಲು, ಮೊಸರೇ ತುಂಬಿತಂದರು
ಲಗ್ನ ಸಿದ್ಧತೆ ಆರಂಭಿಸಿದರಲ್ಲ/

ಆ ಒಬ್ಬ ಬ್ರಾಹ್ಮಣನಿಗೆ
ಪತಿವರತಾ ಆರಂಜ್ಯೋತಿಗೆ
ಮುತ್ತುಗಳ ಧಾರೆ ಎರೆದರು
ರತ್ನಗಳ ಹಾರ ಹಾಕಿದರು/

ಪತಿವರತಾ ಆರಂಜ್ಯೋತಿ
ಅಣ್ಣಗಳೇಳಿದ ಮಾತನು ಕೇಳಿ
ಏನಪ್ಪಾ ಅಣ್ಣಗಳಿರಾ
ಬಾಯಿ ಮಾತು ಹೇಳಿದರಾಗದು
ನಾನಿನ್ನು ಕೇಳಲಾರೆನೋ
ಕಾಶಿಯಲ್ಲಿ, ಕಂಚಿಯಲ್ಲಿ
ಶಿಲಾಶಾಸನವ ಕೆತ್ತಿಸಿರಣ್ಣಯ್ಯ
ನನ್ನ ಅಣ್ಣಗಳಿರಾ......./

ಆಗ ಆ ಗಳಿಗೆಯಲ್ಲಿ
ಒಂಬತ್ತು ವರ್ಣಗಳೇ ಸೇರಿ
ಕಂಚಿಯಲ್ಲಿ ಕಾಶಿಯಲ್ಲಿ
ಶಿಲಾಶಾಸನವ ಕೆತ್ತಿಸಿದರು
ಏನಮ್ಮಾ ಆರಂಜ್ಯೋತಿ
ನಿನ್ನಂಥ ಪತಿವರತೆ ಇನ್ನು
ಇರಬಾರದೆ ಪ್ರಪಂಚದಲ್ಲಿ
ನೂರು ಮಂದಿ ಮಕ್ಕಳ ಹೆತ್ತು
ಚುಕ್ಕೆಗಳ ಪರ್ವತ ಸೇರಮ್ಮ
ನಮ್ಮ ಮುದ್ದು ತಂಗ್ಯೆಮ್ಮಾ......./

(ಆಕರ : ಸಿಂದ್ ಮಾದಿಗರ ಸಂಸ್ಕೃತಿ : ಕೋಟಗಾನಹಳ್ಳಿ ರಾಮಯ್ಯ).

# ಸಂಜೀತ ಪದ

ವೇಗ, ಲಯ, ಚಲನೆಗೆ ತಕ್ಕ ತಾಳ ಗತಿಯೇ ಪ್ರಧಾನವಾದ ಈ ಗೀತೆ ಕೋಲಾಟ ಪದಗಳ ಸಾಲಿನಲ್ಲಿ ನಿಲ್ಲುತ್ತಿದೆ. ಈ ಕೋಲಾಟದ ಪದ ಗೊಲ್ಲರ ಕೃಷ್ಣ ಮತ್ತು ಯಾನಾದಿ ಅಥವಾ ಚೆಂಚುಗಳ ಕನ್ಯೆಯೊಬ್ಬಳ ನಡುವೆ ನಡೆಯುತ್ತಿರುವ ಸಂವಾದವನ್ನೇ ವಸ್ತುವನ್ನಾಗಿ ಹೊಂದಿದೆ.

ಕೋಲಾಟ ಪದವಾದರೂ ಇದರ ವಿಶೇಷತೆ ಏನೆಂದರೆ ಕೃಷ್ಣನಿಗೆ ತೊಡಿಸಲಾಗಿರುವ ಎಲ್ಲಾ ವೈದಿಕ ವೇಷಗಳನ್ನೂ ಕಿತ್ತೆಸೆದು ಅವನಿಗಿರುವ ಜೈವಿಕ ಚೌಕಟ್ಟನ್ನು ಧ್ವಂಸ ಮಾಡಿ ಅವನನ್ನು ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯನನ್ನಾಗಿ ನೋಡಲಾಗಿದೆ. ಅಷ್ಟೇ ಅಲ್ಲ ಇಲ್ಲಿನ ಕೃಷ್ಣನಿಗೆ ಮರಳು ಮಾಡುವ ಮೋಹಕ ಸೌಂದರ್ಯವಿಲ್ಲ, ಸದಾ ಕೈಯಲ್ಲಿರುವ ಮುಂಗಿಯೂ ಇಲ್ಲ. ಅವನು ಮೂಗಲ್ಲಿ ಸಿಂಬಳ ಸುರಿಸುತ್ತಿರುವ ಮೂತಿನೆರೆ ತಿರುವ ಕರಗಿರುವ ಕುರೂಪಿ ಆದರೆ ಪಾಕಡಾ....!

ಜಾತ್ರೆಗೆ ಹೊರಟಿರುವ ಈ ಯಾನಾದಿ ಕನ್ಯೆಯ ಬೆನ್ನತ್ತಿ ಕಾಡುತ್ತಿದ್ದಾನೆ ಅವಳೋ ಇವನ ಬಂಡತನಕ್ಕೆ ರೋಸಿ ಹೋಗಿ ಬಾಯಿಗೆ ಬಂದ ಹಾಗೆ ಮಂಗಳಾರತಿ ಮಾಡುತ್ತಿದ್ದಾಳೆ. ಅವಳು ತನ್ನ ಸಂವಾದವನ್ನು ಆರಂಭಿಸುವುದೇ ಹೀಗೆ ಹಿಗ್ಗಾ ಮುಗ್ಗಾ ಮೂದಲಿಸುವ ಮಾತುಗಳಿಂದಲೆ

ಚೀ ಚೀ ನಮ್ಮೊನು ಚೀ ಚೀ ನಮ್ಮೊನು
ಸಿಗ್ಗು ತಪ್ಪಿದೋನು ಹೀನವೂ ಇಲ್ದೋನು
ಮಾನವೂ ಇಲ್ದೋನು
ಕೋಣ ಕುರಿ ಹಿಂಡು ಬೆನ್ನಿತ್ತಿ ಬಂದಿಯೂ/ಕೃಷ್ಣನೆ/
ಹೋಗಯ್ಯ ಹೋಗಯ್ಯ ಕೃಷ್ಣನೆ
ನಿನಗೆ ಹೊತ್ಯಾಕೆ ಹೋಗಾದು ನನಸ್ವಾಮಿ/

ಹೀಗೆ ಥೂ.......ಛೀ....... ಎನ್ನುವುದರ ಜತೆಗೆ ಶಿಷ್ಟರ ಕಣ್ಣಲ್ಲಿ ಕೊಳಲೂದುತ್ತಾ ಹಸುವಿನ ಬೆನ್ನಿಗೊರಗಿ ಗೋಪಾಲಕನೆನಸಿಕೊಂಡಿರುವ ಕೃಷ್ಣ 'ಕೋಣ ಕುರಿ ಹಿಂಡು' ಕಾಯುತ್ತಾ ಬೆನ್ನತ್ತಿ ಬಂದಿರುವವ ಅಷ್ಟೆ. ಅವನಿಗೆ ಸಿಗ್ಗು, ಹೀನ, ಮಾನ ಒಂದೂ ಇಲ್ಲ. ಇಷ್ಟು ನಿಷ್ಠುರವಾಗಿ ಬೈದರೂ ಕೃಷ್ಣ ಮಾತ್ರ ಇವಳನ್ನು ಬಿಟ್ಟುಹೋಗಲಾರ

ಅವಳ ಚೆಲುವನ್ನು ಹೊಗಳಿ ಬುಟ್ಟಿಗೆ ಬೀಳಿಕೊಳ್ಳುವ ತನಕ ಅವನದು ಆದ್ದರಿಂದಲೇ ಬಾಯಲ್ಲಿ ಯುವ ಪ್ರೇಮಿಯೊಬ್ಬನ ಬಾಯಲ್ಲಿ ಬರುವ ಕಾವ್ಯಮಯ ಪ್ರಶಂಸಾ ಪದ ಗುಚ್ಛಗಳೇ ಉದುರಿವೆ. ಕೃಷ್ಣನ ಕಣ್ಣಿಗೆ ಅವಳು 'ಬಂಗಾರ ಜಡೆಯೊಳು' ಭಾಮಾನಂದನೆ, ಗಿಣಿಗಳ ಗಿಲುಕೆ, ಚನ್ನಾರಿ ಗುಬ್ಬಿ, ಮಾವಿನ-ಚಿಗುರಂಥವಳು, ಮಲ್ಲಿಗೆ ಮೊಗ್ಗಂಥವಳು ಹೀಗೆ ಅಟ್ಟ ಹತ್ತಿಸಿದರೂ ಅವಳಂತೂ ಬಗ್ಗುವವಳಲ್ಲ. ವಿಧಿ ಇಲ್ಲದೆ ಕೃಷ್ಣ ಅವಳಿಗೆ 'ಜಾತ್ರೆ ತೋರಿಸ್ತೀನಿ, ಒಳ್ಳೆ ಆಟ ತೋರಿಸ್ತಿನಿ, ಒಳ್ಳೊಳ್ಳೆ ಹಾಡುಗಳ ಕೇಳಿಸುವೆ, ನಿನಗೆ ಡ್ರಾಮಗಳ ತೋರಿಸ್ತಿನಿ, ನಿನಗೆ ಸಿನಿಮಾಗಳ ತೋರಿಸ್ತಿನಿ' ಎಂದು ಜಾತ್ರೆಗೆ ಬರುವ ಹಳ್ಳಿಯ ಮುಗದ್ಧ ಹುಡುಗಿಯ ಮನಗೆಲ್ಲಲ್ಲು ಇರುವ ಬಣ್ಣ ಬಣ್ಣದ ಆಸೆಗಳನ್ನೆಲ್ಲ ತೋರಿದರೂ ಈ ಯಾನಾದಿ ಕನ್ಯೆಯ ಮುಂದೆ ಕ್ಯಾಬಿನೈ ಆಗುತ್ತಾನೆ. ದೀನನಾಗಿ ಹಲ್ಲು ಕಿರಿಯುವ ಅವನನ್ನು ಹಲ್ಲು ಸಾಲು ಕಂಡು ನಿನಗೆ ಹಲ್ಲುದುರಿಸಿ ಬಿಟ್ಟೇನು, ಮದುವೆ ಮಾಡಿಸಿ ರೇಪಲ್ಲಿಗೆ ಕಳಿಸಿಯೇನು ಎನ್ನುತ್ತಾ ರಾಂಗ್ ಮಾಡುತ್ತಾಳೆ. ನೂರಾರು ಗೋಪಿಸ್ತ್ರೀಯರು ರಾತ್ರೋ ರಾತ್ರಿ ರಾತ್ರಿ ತಮ್ಮ ಗಂಡಂದಿರನ್ನು ಬಿಟ್ಟು ಪರಿತಪಿಸುತ್ತಾ ಓಡೋಡಿ ಬರುವ ಚರಿತ್ರೆ ಇದ್ದ ಕೃಷ್ಣ ಇವಳಿಗೆ ಪತ್ನೀರು ಇಲ್ಲದೇನೆ ಪ್ರೇಮಾದಿ ಬಂದಿರುವ । 'ಬಾರ್ಯೆರು ಇಲ್ಲದೇನೆ ಬ್ರಾಂತೀಲಿ ಬಂದಿರುವ' ! ಸೂಳೇರು ಇಲ್ದೇನೆ ಸುತ್ತಿ ಬಂದಿರುವ ಪರದೇಶಿ ಹೀಗಂದಾಗ ಅವರ ಪುರುಷ ಮರ್ಮ ಎಚ್ಚೆತ್ತುಕೊಳ್ಳುತ್ತದೆ. ಇದುವರೆಗೂ ಮಾತು ಮಾತಿಗೂ 'ಬೈ ಬ್ಯಾಡವೆ ಕನ್ನೆ ಚಂಚೀತಾ' ಎಂದು ಗೋಗರೆಯುತ್ತಿದ್ದವನು, ಇದ್ದಕ್ಕಿದ್ದಂತೆ 'ಕುರಿಗೊಲ್ಲ ರಂಥೋರು ನನಗೆ ನಾಲ್ಕು ಸಾವಿರ ಜನರ್ಥಿಣ್ಣೆ, ಹೆಚಿ ಗೊಲ್ಲರವರು ನನಗೆ ಹತ್ಸಾವಿರ ಜನರ್ಥಿಣ್ಣೆ, ಜತೆಗೆ, ರಾಧಾ, ರಕ್ಮಿಣಿ ಒಬ್ಬ ಸತ್ಯಾಭಾಮೆ ಇಷ್ಟು ಜನ ಇದ್ದಾರೆ. ಇಷ್ಟಿದ್ದರೂ ನಿನ್ನ ಮೇಲೆ ಮನಸಾಗಿ ಬಂದಿರುವ ಎನ್ನುತ್ತಾ ಪ್ರೇಮಾನೀವೆದನೆ ಮಾಡಿಕೊಳ್ಳುತ್ತಾನೆ.

ಆಗ ಅವಳು 'ಯಾನಾದಿಯವರು ನಾವು, ನಾವು ಇಲಿಗಳ ತಿಂತಿವಿ, ಹಂದಿ, ಕೊಕ್ಕುಗಳ ತಿಂತೀವಿ, ನಾವು ಉಡ್ತಿ (ಅಳಿಲು)ಗಳ ತಿಂತೀವಿ, ನಾವು ಉಡುಗಳು ತಿಂತೀವಿ, ಇಂಥ ನೀಚ ಕುಲದಲ್ಲಿ ನಿನಗೇನು ಕೆಲಸವಿದೆಯಯ್ಯ ಎಂದು ಹಿಯ್ಯಾಳಿಸಿ ಓಡಿಸಲು ಯತ್ನಿಸುತ್ತಾಳೆ. ಅವನು ಹೋಗಲು ಬಂದವನಲ್ಲವಾದ್ದರಿಂದ ನಿಲ್ಲುತ್ತಾನೆ. ಭೂತದಂತೆ ಬೆನ್ನಟ್ಟಿದ ಇವನನ್ನು ಓಡಿಸಲು ಸೋತ ಯಾನಾದಿ ಕನ್ಯೆ ಅಪ್ಪಟ ಹಳ್ಳಿಯ ಒರಟು ಹೆಂಗಸಿನಥರ 'ಕಾಳಂಗಿಮಡುವಲ್ಲಿರುವ ನಾಗರಹಾವುಗಳು ನಿನ್ನ ಹಿಡಿದು ಕಡಿಯಬಾರಾದ, ಕಲ್ಲು ಹಾವು ಬಂದು ನಿನ್ನ ಕಚ್ಚಿ ಕೀಳಬಾರದ, ಕೆಟ್ಟಹಾವುಗಳು ಬಂದು ನಿನ್ನ ಓಡಿಸಿ ಕಚ್ಚಬರದಾ' ಎಂದು ಶಪಿಸತೊಡುಗುತ್ತಾಳೆ.

ಸಾಕಷ್ಟು ನುರಿತ ಪ್ರೇಮಿಯಾಗಿರುವ ಕೃಷ್ಣನಿಗೆ ಈ ಬೈಗುಳದ ಹಂತ ತಲುಪಿದ ಮೇಲೆ ಬುಟ್ಟಿಗೆ ಬೀಳುವುದು ತರವಲ್ಲ ಎನ್ನುವುದು ಚನ್ನಾಗಿ ಗೊತ್ತು. ಅದಕ್ಕೆ ಏಕ ಕಾಲಕ್ಕೆ ಎರಡೂ ಅಸ್ತ್ರ ಬಿಡುತ್ತಾನೆ. ಒಂದು ಮಾಮೂಲಿಯಂತೆ ಅವಳ

ರೂಪಲಾವಣ್ಯಗಳನ್ನು ಹೊಗಳುವುದು, ಇನ್ನೊಂದು ತನ್ನ ಪರಾಕ್ರಮದ ಪರಿಚಯ ಮಾಡಿಸುವುದು. ಅವಳು ಹೇಳಿದ ಹಾವುಗಳನ್ನೇ ಹಿಡಿದು ತಂದು ಅವಳಿಗೆ ಆಭರಣ ತೋಡಿಸುವುದಾಗಿ ಸವಾಲೆಸೆಯುತ್ತಾನೆ. 'ನಾಗರಹಾವಿಡಿದು ನಡುವಿಗೊಡ್ಡಾಣ ಹಾಕುವೆ, ಕಲ್ಲಾವು ಹಿಡಿದು ನಿನಗೆ ಕೊರಳ ಸರ ಮಾಡಿಸುವೆ, ಜೇರುಹೋತ ಓಡಿಮ ನಿನಗೆ ಜೆಡೆ ಬಿಲ್ಲೆ ಹಾಕುವೆ, ನೂರೊಂದು ಹಾವುಗಳಿಗೆ ನಾನು ಕುಲಗುರುವು' ಎನ್ನುತ್ತಾ ಬಡಾಯಿಕೊಚ್ಚಿಕೊಳ್ಳುತ್ತಾನೆ. ಕೃಷ್ಣನ ಈ ಬಡಾಯ ಕೊನೆಗೂ ಅವಳ ಮನ ಗೆಲ್ಲುವಲ್ಲಿ ಯಶಸ್ವಿಯಾಗುತ್ತದೆ.

**ಸಂಚೀತ ಕೋಲಾಟ ಪದ**

ನೀನು ಬೆನ್ನತ್ತಿ ಬಂದೀಯಾ
ನೀನು ಕಠ್ರಗಿದ್ದೀಯಯ್ಯ
ನಿನಗೆ ಮೂಗಲ್ಲಿ ಸಿಂಬಳ
ನಿನಗೆ ಮಾತೆಲ್ಲ ನರತೈತೆ
ನೀನು ಜಾತ್ರೆಗೆ ಬಂದೀಯಾ
ನೀನು ಕೈತಪ್ಪಿ ಬಂದೀಯಾ
ಹೋಗಯ್ಯ ಕೃಷ್ಣನೇ
ನಿನಗೆ ಹೊತ್ಯಾಕೆ ಹೋಗಾದು ನನಸಾಮಿ ॥೧॥

ಕನ್ಯೆ ಲಲನಾ ಚಿಂತಿತಾಭಾಮೇ
ಬಂಗಾರ ಜಡೆಯೋಳೆ ಭಾಮಾನಂದನೆ
ನೀನು ಗಿಣಿಗಳ ಗಿಲುಕಿಯೇ
ನೀನು ಚಿನ್ನಾರಿ ಗುಬ್ಬಿಯೇ
ಮಾವಿನ ಚಿಗುರಂತವಳೇ ನೀನು
ಮಲ್ಲಿಗೆ ಮೊಗ್ಗವಂತವಲೇ ನೀನು
ಬೈಬ್ಯಾಡವೆ ಕನ್ಯೆ ಸಂಚೀತಾ
ನಿನಗೆ ಜಾತ್ರೆ ತೋರಿಸ್ತೇನೆ ಓ ಭಾಮೆ ॥೨॥

ಚೀಚೀ ನಮ್ಮೋನು ಚೀಚೀ ನಮ್ಮೊನು
ಸಿಗ್ಗು ತಪ್ಪಿದೋನು ಹೀನವೂ ಇಲ್ಲದೋನು
ಮಾನವೂ ಇಲ್ಲದೋನು
ಕೋಣ ಕುರಿಹಿಂಡ ಬೆನ್ನತ್ತಿಬಂದೀಯಾ
ಕಠ್ರಗಿದ್ದೀಯಾ
ನಿನ್ನ ಹೆತ್ತವರು
ನಿನಗೆ ಮದುವೆ ಮಾಡಲಿಲ್ಲವೇನು

ಪತ್ನೀರು ಇಲ್ಲದೇನೆ
ನೀನು ಪ್ರೇಮಾದಿ ಬಂದೀಯಾ
ಸೂಳೇರು ಇಲ್ಲದೇನೆ
ನೀನು ಸುತ್ತಿ ಬಂದೀಯೇನು
ಬಾರ್‍ಯೆರು ಇಲ್ಲದೇನು
ನೀನು ಬ್ರಾಂತೀಲಿ ಬಂದೀಯಾ
ಹೋಗಯ್ಯ ಹೋಗಯ್ಯ ಕೃಷ್ಣನೆ
ನಿನಗೆ ಹಲ್ಲುದುರಿಸಿ ಬಿಟ್ಟೇನು ನನಸಾಮಿ
ನಿನಗೆ ಹಲ್ಲುದುರಿಸಿ ಬಿಟ್ಟೇನು ನನಸಾಮಿ
ನಿನಗೆ ಮದುವೆ ಮಾಡಿ ಕಳಿಸೇನು ರೇಪಲ್ಲಿಗೆ ॥ ೩ ॥

ಚೀ ಚೀತ ನಮ್ಮೋನು ಚೀ ಚೀ ನಮ್ಮೋನು
ಸಿಗ್ಗು ತಪ್ಪಿದೋನು ಹೀನವೂ ಇಲ್ಲದೋನು
ಮಾನವೂ ಇಲ್ಲದೋನು
ಕೋಣ ಕುರಿಗಳ ಹಿಂಡು ಬೆನ್ನತ್ತಿ ಬಂದೀಯಾ
ಬೈ ಬ್ಯಾಡವೇ ಕನ್ಯೆ
ನಿನಗೆ ಜಾತ್ರೆ ತೋರಿಸ್ತೀನಿ
ನಿನಗೆ ಆಟ ತೋರಿಸ್ತೀನಿ
ನಿನಗೆ ಒಳ್ಳೊಳ್ಳೆ ಹಾಡುಗಳ ಕೇಳಿಸುವೆ
ನಿನಗೆ ಡ್ರಾಮಾಗಳ ತೋರಿಸ್ತೀನಿ
ನಿನಗೆ ಸಿನಿಮಾಗಳ ತೋರಿಸ್ತೀನಿ
ಓ ಬೈ ಬ್ಯಾಡವೇ ಕನ್ಯೆ ಸಂಚೀತ
ನಾವು ಜಾತ್ರೆಗೆ ಹೋಗೋಣ ಸಂಚೀತಾ ॥ ೪ ॥

ಚೀ ಚೀ ನಮ್ಮೋನು ಚೀ ಚೀ ನಮ್ಮೋನು
ಸಿಗ್ಗು ತಪ್ಪೀದೋನು ಹೀನವೂ ಇಲ್ಲದೋನು
ಮಾನವೂ ಇಲ್ಲದೋನು
ಕೋಣ ಕುರಿಗಳ ಹಿಂಡು ಬೆನ್ನತ್ತಿ ಬಂದೀಯಾ
ಹೆಂಡ್ತೀರು ಇಲ್ಲದೇನೆ
ನೀನು ಪ್ರೇಮಾದಿ ಬಂದೀಯಾ
ಸೂಳೆಯರಿಲ್ಲದೇನೆ
ನೀನು ಸುತತಿ ಬಂದೀಯೇನು
ಬಾರ್‍ಯೇರು ಇಲ್ಲದೇನೇ

ನೀನು ಬ್ರಾಂತಿಯಲಿ ಬಂದಿಯೇನು
ಹೋಗಯ್ಯ ಹೋಗಯ್ಯ ಕೃಷ್ಣನೆ
ನಿನಗೆ ಹೊತ್ತಾಕೆ ಹೋಗದೋ ನನಸಾಮಿ
ಕನ್ನೆ ಲಲನಾ ಚಿಂಚೀತ ಭಾಮೆ ॥ ೫ ॥

ಬಂಗಾರ ಜಡೆಯೊಳೆ ಭಾಮಾನಂದನೆ
ಬಾರೆ ಮುದ್ದಿನ ಗೊಂಬೆ
ನೀನು ರತ್ನದ ಗೊಂಚಲು
ನೀನು ಜಾತ್ರೆಗೆ ಬಂದಿರುವೆ
ಮಾವಿನ ಚಿಗುರಂಥೋಳು ನೀನು
ಮಲ್ಲಿಗೆ ಮೊಗ್ಗಿನಂಥೋಳು ನೀನು
ನಾನು ಬಾರ್‍ಯೇರು ಇಲ್ದೇನೆ
ಬ್ರಾಂತೀಲಿ ಬರಲಿಲ್ಲ
ಸೂಳೇರು ಇಲ್ಲದೇನೆ
ನಾನು ಸುತ್ತಿ ಬರಲಿಲ್ಲ
ಓ ಪತ್ನೀರು ಇಲ್ಲದೇನೆ
ನಾನು ಪ್ರೇಮಾದಿ ಬರಲಿಲ್ಲ
ಕರಿ ಗೊಲ್ಲರಂಥೋನು
ನನಗೆ ನಾಲುಕು ಸಾವಿರ ಜನರ್ಥಣ್ಣೇ
ಹಚ್ಚ ಗೊಲ್ಲರವರು
ನನಗೆ ಹತ್ಸಾವಿರ ಜನರ್ಥಣ್ಣೇ
ಓ ರಾಧಾ ರುಕ್ಮಣಿ
ಓ ಒಬ್ಬ ಸತ್ಯಭಾಮೆ
ಪತ್ನೇರು ಇಲ್ಲದೇನೆ ಸಂಚೀತ
ನಾನು ಪ್ರೇಮಾದಿ ಬರಲಿಲ್ಲ ಓ ಭಾಮೆ ॥ ೬ ॥

ಆ ಯಾನಾದಿಯವರು ನಾವು
ನಾವು ಇಲಿಗಳ ತಿಂತೀವಿ
ಹಂದಿ ಕೊಕ್ಕುಗಳ ತಿಂತೀವಿ
ನಾವು ಉಡ್ತಿಗಳ ತಿಂತೀವಿ
ನಾವು ಉಡುಗಳ ತಿಂತೀವಿ
ನಮ್ಮ ನೀಚ ಕುಲದಲ್ಲಿ
ನಿನಗೇನು ಕೆಲಸವಿದೆಯಯ್ಯ

ನಿನಗೆ ಮನಸೆಂತು ಬಂತಯ್ಯ
ಹೋಗಯ್ಯ ಹೋಗಯ್ಯ ಕೃಷ್ಣನೇ
ನಿನಗೆ ಹೊತ್ಯಾಕೆ ಹೋಗದೋ ನನಸಾಮಿ
ಕಾಳಂಗಿ ಮಡುವಲ್ಲಿ
ನಾಗರಾವುಗಳು ಹಿಡಿದು
ನಿನ್ನ ಕಚ್ಚಿ ಕಡಿಯಬಾರದಾ
ಕಟ್ಲು ಹಾವು ಬಂದು
ನಿನ್ನ ಕಚ್ಚಿ ಕೀಳಬಾರದಾ
ಕೆಟ್ಟ ಹಾವುಗಳೇ ಬಂದು
ನಿನ್ನ ಓಡಿಸಿ ಕಚ್ಚಬಾರದಾ
ಹೋಗಯ್ಯ ಹೋಗಯ್ಯ ಕೃಷ್ಣನೇ
ನಿನಗೆ ಹೊತ್ತಾಕೆ ಹೋಗದೋ ನನಸಾಮಿ ॥ ೭ ॥

ಕನ್ಯೆ ಲಲನಾ ಚಿಂಚಿತಾ ಭಾಮೇ
ಬಂಗಾರ ಜಡೆಯೋಳೆ ಭಾಮನಂದನೆ
ಗಿಣಿಗಳ ಗುಲಕಿಯೇ
ನೀನು ಚಿನ್ನಾರಿ ಗುಬ್ಬಿಯೇ
ಮಾವಿನ ಚಿಗುರಂಥವಳೇ
ಮಲ್ಲಿಗೆ ಮೊಗ್ಗಂಥವಳೇ
ಫಕ್ಕನೆ ನಗುಬಾರೆ
ನಿನ್ನ ಹಲ್ಲೊರಸೆ ನೋಡೋಣ
ಕಾಳಿಂಗ ಮಾಡುವಲ್ಲಿ
ನಾಗರ್ಹಾವುಗಳಿಡಿದು
ನಡುವಿಗೊಡ್ಯಾಣ ಹಾಕುವೆ
ಕಟ್ಲಾವು ಹಿಡಿದು
ನಿನಗೆ ಕೊರಳಸರ ಮಾಡಿಸುವೆ
ಜೇರು ಹೋತು ಹಿಡಿದು
ನಿನಗೆ ಜಡೆಬಿಲ್ಲೆ ಹಾಕುವೆ
ನೂರೊಂದು ಹಾವುಗಳಿಗೆ ಸಂಚೀತ
ನಾನು ಕುಲಗುರುವು ಆಗಿರುವೆ ಓ ಭಾಮೆ ॥ ೮ ॥

ಆಕರ : ಸಿಂದ್ ಮಾದಿಗರ ಸಂಸ್ಕೃತಿ : ಕೋಟಗಾನಹಳ್ಳಿ ರಾಮಯ್ಯ; ಕಸಾಅ; ೧೯೯೩; ಪು. ೩೧೮-೩೨೨.

## ಮರ್ಲೋ ಮಲ್ಲಿಗೆಯಮ್ಮ :

ಕೋಲಾರ ಜಿಲ್ಲೆಯ ಮಾದಿಗರ ಹೆಣ್ಣು ಮಕ್ಕಳಿಗೆ ಅತ್ಯಂತ ಪವಿತ್ರ ಎಂದು ಆಚರಿಸುವ 'ಕದಿರಿ ಹುಣ್ಣಿಮೆ'ಯ ಹಾಡಿದು. ಹುಣ್ಣಿಮೆ ಅಮವಾಸ್ಯೆಗಳಿಗೆ ಜನಪದರ ಬದುಕಲ್ಲಿ ಬಹುದೊಡ್ಡ ಸ್ಥಾನವಂತೂ ಇದ್ದೇ ಇದೆ. ಈ ಹುಣ್ಣಿಮೆ ಆಚರಣೆಯಂತೂ ಸುಂದರ ಕಾವ್ಯವೆಂದೇ ಹೇಳಬೇಕು. ಈ ಹುಣ್ಣಿಮೆ ಬರುವುದಕ್ಕಿಂತ ಐದು ದಿನಗಳ ಮೊದಲಿನಿಂದಲೆ ಹೆಣ್ಣು ಮಕ್ಕಳು, ನಿತ್ಯ ರಾತ್ರಿ ಮನೆಹಟ್ಟಿ, ಕೇರಿಯ ಬೀದಿಗಳನ್ನೆಲ್ಲ ಗುಡಿಸಿ ಸಾರಿಸಿ ರಂಗೋಲೆ ಹಾಕುತ್ತಾರೆ. ಆ ರಂಗೋಲೆಯ ಮೇಲೆ ಮದುವೆಯಾಗದ ಹೆಣ್ಣುಮಕ್ಕಳೆಲ್ಲ ಕುಣಿಯುತ್ತಾ ರಾತ್ರಿ ಇಡೀ ಹಾಡು ಹಾಡುತ್ತಾ ಕಳೆಯುತ್ತಾರೆ. ಅಂಥ ಹಾಡುಗಳಲ್ಲಿ ಇದು ಒಂದು.

ಗಂಗಮ್ಮ-ಗೌರಮ್ಮ ಮೂಲತಃ ಸವತಿಯರು. ಅವರ ಸವತಿ ಮಾತ್ಸರ್ಯವೇ ಪ್ರಧಾನವಾದ ಬಹಳಷ್ಟು ಜನಪದ ಸಾಹಿತ್ಯ ಈಗಾಗಲೇ ಪ್ರಚಲಿತವಿದೆ. ಆದರೆ ಸಣ್ಣ ಪುಟ್ಟ ಬೇಧಗಳನ್ನು ದೊಡ್ಡದು ಮಾಡಿಕೊಳ್ಳುವ ಸಂದರ್ಭ ಇದಲ್ಲ. ಬೆಳದಿಂಗಳ ಓಸ್ನೆಲೆಯಲ್ಲಿ ಹೆಣ್ಣು ಮಕ್ಕಳೆಲ್ಲ ಕೂಡಿ ಹಾಡಿ ಆಡಿ ನಲಿಯುವ ಚಂದದ ಹಬ್ಬದ ದಿನ. ಅದಕ್ಕೆ ಈ ಹಾಡಿನ ಗಂಗಮ್ಮ-ಗೌರಮ್ಮ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಕ್ಕ-ತಂಗಿಯರು ಇವರ ಪಾಲಿಗೆ. ಇಬ್ಬರೂ ಸೇರಿ ಗಂಗೆ ಹೊಳೆ ಕಾಲುವೆಗೆ ನೀರಿಗೆ ಹೊರಟಿದ್ದಾರೆ. ಅವರು ದೇವಾನು ದೇವತೆಗಳಾದರೂ ತಮ್ಮಂತೆಯೇ ಕೊಡ ಹೊತ್ತು ನೀರಿಗೆ ಹೊರಟ ನೀರೆಯರು ಅಷ್ಟೆ. ತಮ್ಮ ಬದುಕಿನ ಅನುಭವದ ಭಾಗವಾಗಿಯೇ ಅವರನ್ನು ನೋಡುವುದು. ಮೇಲೆಲ್ಲೋ ಆಕಾಶದಲ್ಲಿಟ್ಟು ನೋಡುವ ಸಂಸ್ಕೃತಿಗಿಂತ ತೀರಾ ವಿರುದ್ಧವಾದ ಭಿನ್ನವಾದ ಮುಗ್ಧ ಸಂಸ್ಕೃತಿಯ ಆರೋಗ್ಯಕರ ಪ್ರತೀಕ. ತಾನೇ ಗಂಗೆಯಾದರೂ ಇಲ್ಲಿ ಗಂಗೆಯೂ ನೀರಿಗೆ ಹೊರಟಿದ್ದಾಳೆ. ನೀರು ಮೊಗೆಯುವ ಅಲ್ಪಕ್ರಿಯೆಯಲ್ಲೂ ಪರಸ್ಪರ ಹೊಂದಾಣಿಕೆ ಎದ್ದುಕಾಣುತ್ತದೆ.

'ಗಂಗಮ್ಮ ಮುಳುಗಿಸಿದ ಕೊಡವನ್ನು ಗೌರಮ್ಮ ಎತ್ತಿಕೊಳ್ಳುತ್ತಾಳೆ. ಗೌರಮ್ಮ ಮುಳುಗಿಸಿದ ಕೊಡವನ್ನು ಗಂಗಮ್ಮ ಎತ್ತಿಕೊಳ್ಳುತ್ತಾಳೆ. ಹಿಂದು ಮುಂದಾಗಿ ಬರುತ್ತಿರುವಾಗ ಗಂಗಮ್ಮನ ಕಾಲಲ್ಲಿ ಕಲವೇಣಿ ಮುಳ್ಳು ನಾಟಿಕೊಳ್ಳುತ್ತದೆ. ಈ ಹಾಡು ಕಟ್ಟಿದವರಿಗೆ ತುಂಬಿದ ಕೊಡ ಹೊತ್ತು ಬರುವಾಗ ತಗಲುವ ಮುಳ್ಳಿನ ನೋವನ್ನು ಹೇಳುವುದು ಮಾತ್ರ ಉದ್ದೇಶವಾಗಿರುವಂತಿದೆ. ಅದಕ್ಕೆ ಅವರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಆ ಮೂಲಕ ಗಂಡಸರಿಗೆ ತಮ್ಮ ನೋವಿನ ಕೊಂಚವನ್ನು ತಲುಪಿಸಲು ಯತ್ನಿಸಿದ್ದಾರೆ. ತಮ್ಮ ಕಾಲಿಗೆ ಮುಳ್ಳು ತಾಕಿದ್ದುನ್ನು ಸಹಜವೆಂದೆ ಸ್ವೀಕರಿಸುವ ಗಂಡಸರು ಅವರು ಪೂಜಿಸುವ ತಾಯಿ ದೇವತೆಯಾದ ಗಂಗಮ್ಮನ ಕಾಲಲ್ಲಿ ಅದು ನೆಟ್ಟಾಗ ಅವರ ಅಂತಃಕರಣ ಚುರ್ ಅನ್ನಬಹುದೇನೋ ಎನ್ನುವ ಆಸೆ. ಆದರಿಂದಲೇ ಈ ನಾಟದ ಮುಳ್ಳಿನ ಸುತ್ತವೆ ಕತೆ ಮುಂದುವರೆಯುತ್ತಿದೆ. ತಾಗಿರುವುದು ಒಣಗಿದ ಮುಳ್ಳಾದರೂ ಹೊರಬರುತ್ತಿಲ್ಲ. ಹಸಿಮುಳ್ಳಿಗಿಂತ ಒಣ

ಮುಳ್ಳು ತೆಗೆಯುವುದು ಸುಲಭ. ಒಣ ಮುಳ್ಳೆ ಆದರೂ ಹೊರ ಬರದೆ ಮುಳ್ಳು ತೆಗೆಯಲು ಯತ್ನಿಸಿದ ಗೌರಮ್ಮನ ಉದ್ಗಾರ ಇದು. ಇಲ್ಲೂ ಆಕೆಗೆ ಬೆಳ್ಳಿ, ಬಂಗಾರದ ಮೇಲಿನ ಮೋಹ ತಗ್ಗಿಲ್ಲ. ಅವಳ ಕಣ್ಣಿಗೆ ಅದು ಬೆಳ್ಳಿ ಹವಳದ ಮುಳ್ಳಾಗಿ ಕಾಣಿಸುತ್ತದೆ. ಹೀಗೆ ಬಾರದ ಮುಳ್ಳನ್ನು ಗಂಗಮ್ಮನ ತಮ್ಮನಾದ ಗಣಪೋತುಲನ್ನ ಬಂದು ಪಟ್ಟೆ ಸೀರೆಯ ತೆರೆಕಟ್ಟಿ ಹಲ್ಲಲ್ಲಿ ಕಚ್ಚಿ ಕೀಳುತ್ತಾನೆ. ಕೀವು ಹೋಗಿ ಸಿತ್ತೂರು ಕಾಲುವೆಯೇ ಕದಲುತ್ತದೆ. ನೆತ್ತರೋಗಿ ನೆಲ್ಲೂರು ಕಾಲುವೆಯೇ ಕದಲುತ್ತದೆ. ಮುಳ್ಳು ಹೋಗಿ ಮುಕ್ಕಣ್ಣನಾದ ಶಿವನ ದೇವಾಲಯ ಸೇರುತ್ತದೆ. ಗಂಗಮ್ಮನಿಗೆ ಆಗ ಆಗಿರಬಹುದಾದ ನೋವನ್ನು ಹೇಳದೆಯೇ ಆದರ ಪರಿಣಾಮಗಳನ್ನು ಮಾತ್ರ ಹೇಳಿ ಅದನ್ನು ಊಹಿಸಿ ಅನುಭವಿಸುವ ಅವಕಾಶವನ್ನು ಗಂಡಸರಿಗೆ ಬಿಟ್ಟು ಬಿಟ್ಟಿದ್ದಾರೆ. ಆದರೆ ಆ ಮುಳ್ಳೇ ಅರ್ಜಿಯಾಗಿ, ಗಂಡುಕುಲದ ಪ್ರತಿನಿಧಿಯಾದ, ಮೂರು ಕಣ್ಣಿದ್ದು ನೋಡಿ ನೆರವಿಗೆ ಬಾರದ ಶಿವನ ದೇವಾಲಯ ಸೇರಿಕೊಳ್ಳುತ್ತದೆ.

ಮಲ್ಯೋ ಮಲ್ಲಿಗೆಯಮ್ಮ
-ಗೌರಮ್ಮ ಚಂದಾದ ಹೂಬಳೆಯೋ
ಗಂಗಮ್ಮ ಗೌರಮ್ಮ ಒಬ್ಬ ಅಕ್ಕತಂಗೇರು
ಗಂಗೆ ಹೊಳೆ ಕಾಲುವೆಗೆ ನೀರಿಗ್ಹೋದಾರೋ/ಮಲ್ಯೋ/
-ಗಂಗೆ ಮುಳುಗಿಸಿದ ಕೊಡವ ಗೌರಿ ಎತ್ತಿಕೊಂಡಳು
-ಗೌರಿ ಮುಳುಗಿಸಿದ ಕೊಡವ ಗಂಗೆ ಎತ್ತಿಕೊಂಡಳು/ಮಲ್ಯೋ/
ಗಂಗಮ್ಮ ಮುಂದಾದ್ಳು, ಗೌರಮ್ಮ ಹಿಂದಾದ್ಳು
ಗಂಗಮ್ಮನ ಕಾಲಲ್ಲಿ ಕಲವೇಣಿ ಮುಳ್ಳು/ಮಲ್ಯೋ/
ಹಿಂತಿರುಗಿ ಗೌರಮ್ಮ ಮುಳ್ಳು ತೆಗಿಯಮ್ಮ
ಒಣ ಮುಳ್ಳೆ ಆದರೂ ಹೊರಬರದೆ ಮುಳ್ಳು/ಮಲ್ಯೋ/
ಬೆಳ್ಳಿ ಮುಳ್ಳೆ ಆದರೂ ಹೊರಬರದೆ ಮುಳ್ಳು
ಹವಳ ಮುಳ್ಳೆ ಆದರೂ ಬಿದ್ದು ಬರಲಿಲ್ಲೇ ಮುಳ್ಳು/ಮಲ್ಯೋ/
ಗಂಗಮ್ಮನ ತಮ್ಮ ಗಣಪೋತುಲನ್ನ
ಪಟ್ಟೆ ಸೀರೆ ತೆರೆಗಟ್ಟಿ ಹಲ್ಲಲ್ಲಿ ಕಟ್ಟಿದ/ಮಲ್ಯೋ/
ಪಟ್ಟೆ ಸೀರೆ ತೆರೆಗಟ್ಟಿ ಹಲ್ಲಲ್ಲಿ ಕಿತ್ತಾ
ಕೀವು ಹೋಗಿ ನೆತ್ತುರು ಕಾಲುವೆಯೋ ಕದಲಿತೋ/ಮಲ್ಯೋ/
ಕೀವು ಹೋಗಿ ನೆತ್ತೂರು ಕಾಲುವೆಯೋ ಕದಲಿತೋ
ನೆತ್ತರ್ಹೋಗಿ ನೆಲ್ಲೂರು ಕಾಲುವೆಯೇ ಕದಲಿತೋ/ಮಲ್ಯೋ/
ನೆತ್ತರ್ಹೋಗಿ ನೆಲ್ಲೂರು ಕಾಲುವೆಯೇ ಕದಲಿತೋ
ಮುಳ್ಳುಹೋಗಿ ಮುಕ್ಕಣ್ಣನ ದೇವಲವ ಸೇರಿತೋ/ಮಲ್ಯೋ/

ಆಕರ : ಸಿಂದ್ ಮಾದಿಗರ ಸಂಸ್ಕೃತಿ : ಕೋಟಗಾನಹಳ್ಳಿ ರಾಮಯ್ಯ; ಪು. ೩೩೦–೩೩೧; ಕಸಾಅ; ೧೯೯೩.

# ಮಾಸ್ತೀಕರ ತಂಗಡಿದ್ಯಾವರ ಹಾಡ್ಗುಣಿತ

ಒಂದು ಕಾಲಕ್ಕೆ ದಲಿತರಲ್ಲಿ ದಲಿತರೆಂದು ಪರಿಗಣಿತರಾಗಿದ್ದ ಸಮುದಾಯಗಳಲಿ ಮಾಸ್ತೀಕರೂ ಸೇರುತ್ತಾರೆ. ನೆಲ ಮೂಲ ಸಂಸ್ಕೃತಿಯ ಅನೇಕ ನಂಬಿಕೆ, ಆಚರಣೆಗಳನ್ನು ಉಳಿಸಿಕೊಂಡಿರುವ ಇಂಥಾ ಜಾತಿ ವಿಶೇಷಗಳ ಅಧ್ಯಯನ ಈ ನಾಡಿನ ಒಟ್ಟು ಸಂಸ್ಕೃತಿಯ ಅರಿವಿನ ದೃಷ್ಟಿಯಿಂದ ಬಹಳ ಅಗತ್ಯವಾಗಿರುತ್ತದೆ. ಮನುಷ್ಯನ ಆದಿಮ ಹಂತದ ಬದುಕಿನ ಕುರುಹುಗಳು, ಅರಿವಿನ ನೆಲೆಗಳು, ಇತರ ಸಮುದಾಯಗಳ ಸಾಂಸ್ಕೃತಿಕ ಚಿಂತನೆಗಳ ಸಂದರ್ಭದಲ್ಲಿ ಸಮುದಾಯವೊಂದು ತನ್ನನ್ನು ಹೇಗೆ, ಎಲ್ಲಿ ಇರಿಸಿಕೊಳ್ಳಲು ಹವಣಿಸುತ್ತದೆ ಎಂಬಿತ್ಯಾದಿ ಅಂಶಗಳನ್ನು ಅಧ್ಯಯನ ಮಾಡಲು ಈ ಎಲ್ಲಾ ಜಾತಿ ವಿಶೇಷಗಳಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಪರಿಗಣಿಸಬೇಕಾಗುತ್ತದೆ. ಮಾಸ್ತೀಕರಲ್ಲಿ ಒಂದು ಕಾಲಕ್ಕೆ ವಿಶೇಷವಾಗಿದ್ದ 'ತಂಗಡಿದ್ಯಾವರ' ಆಚರಣೆ ಒಂದು ಅಪರೂಪದ ಸಂಪ್ರದಾಯವಾಗಿದ್ದು, ಪ್ರಸ್ತುತ ಹಾಡು-ಕುಣಿತಗಳ ಅಧ್ಯಯನದ ದೃಷ್ಟಿಯಿಂದಲೂ ಗಮನಾರ್ಹವಾಗಿದೆ. ಅಂತೆಯೇ, ಅಧ್ಯಯನಕಾರ ಲಕ್ಷ್ಮೀಪತಿ ಕೋಲಾರ ಅವರು ದಾಖಲಿಸಿರುವ ಈ ಸಂಬಂಧದ ವಿವರವನ್ನು ಇಲ್ಲಿ ಆಯ್ದುಕೊಟ್ಟಿದೆ.

"ತಂಗಡಿ ದ್ಯಾವರದ ಆಚರಣೆ ತುಂಬವೇ ಕುತೂಹಲಕರವಾಗಿದೆ. ಬಾಲ್ಯ ವಿವಾಹಗಳಿದ್ದ ಕಾಲದಲ್ಲಿ ಮದುವೆಯ ಮಾರನೇ ದಿನವೇ ತಂಗಡಿ ದ್ಯಾವರ ಆಚರಿಸುತ್ತಿದ್ದರು, ಈಗ ಮದುವೆಯ ಮಾರನೇ ದಿನ ಆಗದಿದ್ದರೂ ಬದುಕಿನಲ್ಲಿ ಎಂದಾದರೂ ಒಂದು ದಿನ ದ್ಯಾವರ ಆಚರಿಸುವುದಂತೂ ಖಚಿತ. ದ್ಯಾವರದ ದಿನ ಬೆಳಗ್ಗೆಯೇ 'ಯಾಟ' (ಬೇಟೆ) ಎಂದೂ ಕರೆಯುವ, ಬಲಿಗೆಂತಲೇ ಬಿಟ್ಟ ಕುರಿಮರಿಯೊಂದನ್ನು ಹಿಡಿದುಕೊಂಡು ದ್ಯಾವರದ ಸಾಮಗ್ರಿಗಳೊಂದಿಗೆ ಈ ಮೊದಲೇ ಆರಿಸಿಟ್ಟಿರುವ ತಂಗಡಿ ಗಿಡವೊಂದರ ಬಳಿಗೆ ಹೋಗುತ್ತಾರೆ. ಮಾದಿಗ ಮಾಸ್ತೀಕರು ತಂಗಡಿಗಿಡದ ದ್ಯಾವರ ಮಾಡುವಾಗ ಸಾಧಾರಣವಾಗಿ ಸಿನ್‌ಮಾದಿಗರು ಗುರುಗಳಾಗಿ ಬರುತ್ತಾರಂತೆ. ಆದರೆ ಕೆಲವೊಮ್ಮೆ ಸಿನ್‌ಮಾದಿಗರು ಸಿಗದೇ ಹೋಗಬಹುದಾದ್ದರಿಂದ ಮಾದಿಗ ಮಾಸ್ತೀಕರಲ್ಲಿಯೇ ಕೆಲವರು ದ್ಯಾವರದ ಆಚರಣೆಯ ಕ್ರಮ ಮತ್ತು ತಂಗಡಿ ಪುರಾಣ ಕಥೆಗಳನ್ನೆಲ್ಲ ಅದರ ಗೇಯ ರೂಪದಲ್ಲಿಯೇ ಕಲಿತಿರುತ್ತಾರೆ. ಗುರುಗಳು ಸಿಗದಿದ್ದಾಗ ಇವರಲ್ಲೇ ಒಬ್ಬರು ಗುರುಗಳಾಗಿರುತ್ತಾರೆ.

ತಂಗಡಿ ಗಿಡದ ಕೆಳಗೆ 'ಪಿಳ್ಳಾರಿ' ಮಾಡಿ ಇಡುತ್ತಾರೆ. ಮೊದಲು ಪಿಳ್ಳಾರಿಗೆ ಪೂಜೆ ಸಲ್ಲುತ್ತದೆ. ನಂತರ ಹಸೀ ಕೋಳಿಮೊಟ್ಟೆಗಳನ್ನು ಗಿಡದಡಿಯಲ್ಲಿ ಇಡುತ್ತಾರೆ. ನಂತರದ ಕ್ರಿಯೆ 'ಅಮುದ' ಹಾಕುವುದು. ಅಮುದ ಅಂದರೆ ಹರಿಷಿಣ ಕುಂಕುಮ

ಬೆರೆಸಿ, ಮೊಸರಿನೊಂದಿಗೆ ಗಟ್ಟಿಯಾಗಿ ಕಟ್ಟಿದ ಉಂಡೆ ಅನ್ನ. (ಹೊಲೆಯ ಮಾಸ್ತೀಕರ ಗುಪ್ತಭಾಷೆಯಲ್ಲಿ ಅಕ್ಕಿಯನ್ನು 'ಅಮುದ ಪಳ್ಳು' ಅಂತ ಕರೆಯುವುದನ್ನು ಇಲ್ಲಿ ಗಮನಿಸಬೇಕು). ಹರಿಷಿಣದ ಅಮುದ ಮತ್ತು ಕುಂಕುಮದ ಅಮುದ ಬೇರೆ ಬೇರೆಯಾಗಿಯೇ ಇರುತ್ತದೆ. ಇದಾದ ನಂತರ ತಂಗಡಿ ಗಿಡಕ್ಕೆ ಪೂಜೆ ಸಲ್ಲಿಸಲಾಗುತ್ತೆ. 'ಯಾಟ' ಕುರಿಮರಿಗೂ ಪೂಜೆ ಸಲ್ಲುತ್ತದೆ. ದ್ಯಾವರ ನಡೆಯುವ ಈ ಹೊತ್ತಲ್ಲಿ ದ್ಯಾವರಕ್ಕೆ ಸಂಬಂಧಿಸಿದ ಬಂಧುಗಳೆಲ್ಲರೂ ಇರುತ್ತಾರೆ.

ಪೂಜೆ ಮುಗಿದ ನಂತರ ತಂಗಡಿ ಗಿಡದೆದುರು ಕುರಿಮರಿಯನ್ನು ನಿಲ್ಲಿಸಿ ಗುರುವಾಗಿ ಬಂದಿರುವ ಸಿನ್‌ಮಾದಿಗರವನು ತನ್ನ ಕೈಯ್ಯ ಕತ್ತಿಯಿಂದ ಮರಿಯ ಕತ್ತರಿಸಿ ತಂಗಡಿಗೆ ಬಲಿ ಕೊಡುತ್ತಾನೆ. ನಂತರ ಕಡಿದ ಕುರಿಮರಿ ತಲೆಯನ್ನು ಕತ್ತಿಗೆ ಸಿಕ್ಕಿಸಿಕೊಂಡು, ತಂಗಡಿ ಗಿಡದ ಸುತ್ತಲೂ ತಂಗಡಿ ಗಿಡದಹಾಡು ಹೇಳುತ್ತ ಆವೇಶದಿಂದ ಕುಣಿಯುತ್ತಾನೆ. 'ತಾಲಿಲ್ಲೋ ಲಿಲ್ಲುಮಯ । ಮಾ ಶಿವ ತಾಲಿಲ್ಲೋ ಲಿಲ್ಲುಮಯ ।' ಎಂದು ಆರಂಭವಾಗುವ ಈ ಹಾಡು ಒಂದು ರೀತಿಯ ಜಾಂಬು ಕುಲದ ಪುರಾಣೇತಿಹಾಸವನ್ನು ಬಿಚ್ಚಿಡುತ್ತದೆ. ಇದು ಕೇವಲ ಮಾಸ್ತೀಕರ ಬೈಬಲ್ ಅಷ್ಟೇ ಅಲ್ಲ, ಇಡೀ ಜಾಂಬುಕುಲದ ಬೈಬಲ್ ಎನ್ನುವಂತಿದೆ. ಈ ತಂಗಡಿ ದ್ಯಾವರ ಪದವನ್ನು ಸಮಗ್ರವಾಗಿ ಸಂಗ್ರಹಿಸಲು ಸಾಧ್ಯವಾಗಲೇ ಇಲ್ಲ. ಆದರೆ ಸಿಕ್ಕಿರುವ ಕೆಲವೇ ಸಾಲುಗಳು ಎಷ್ಟು ಶಕ್ತಿಯುತವಾಗಿವೆಯೆಂದರೆ ಒಂದೊಂದು ಸಾಲೂ ಒಂದೊಂದು ಪುರಾಣದ ಮುನ್ನುಡಿಯಂತಿದೆ; ಇತಿಹಾಸದ ನೆರಳಿನಂತಿದೆ; ಸಮಾಜ ಶಾಸ್ತ್ರ ಕೈಗನ್ನಡಿಯಂತಿದೆ.

ತಂಗಡಿ ದ್ಯಾವರ ಪದವನ್ನು ಹಾಡುತ್ತ ಗುರುಗಳು ಗಿಡದ ಸುತ್ತಲೂ ಕುರಿಮರಿ ತಲೆಯನ್ನು ಸಿಕ್ಕಿಸಿಕೊಂಡ ಕತ್ತಿಯನ್ನು ಹಿಡಿದು ಆವೇಶದಿಂದ ಕುಣಿಯುವುದು ಇನ್ನಿತರ ದ್ಯಾವರಗಳಲ್ಲಿ ಕಂಡುಬರದ ಆಚರಣೆ. ಈ ದ್ಯಾವರ ಪರಿಪೂರ್ಣವಾಗಿ ತನ್ನ ಸ್ವರೂಪದಲ್ಲಿ ಆವೇಶ, ಮಾಟ, ಕುಣಿತ ಪ್ರಧಾನವಾದ ಮಾಂತ್ರಿಕಾಚರಣೆಯೇ ಆಗಿದೆ. ಆದರೆ ಈ ಆಚರಣೆಯ ನಿರ್ದಿಷ್ಟ ನೆಲೆಗಳನ್ನು ಪಂಥಗಳ ಹಿನ್ನೆಲೆಯಲ್ಲಷ್ಟೇ ಅಲ್ಲದೆ ಆಚರಿಸುವವರ ಸಾಮಾಜಿಕ ಮೂಲದ ಮನೋ ಹಿನ್ನೆಲೆಯಲ್ಲಿಯೂ ಶೋಧಿಸುವ ಅಗತ್ಯವಿದೆ.

**ತಂಗಡಿ ಗಿಡದ ದ್ಯಾವರ ಗೀತೆ**

ತಾಲಿಲ್ಲೋ ಲಿಲ್ಲಾಯಲೋ । ಓ ಅಮ್ಮ ಮಾಲಿಂಗ ಲಿಲ್ಲಾಯಲೋ ॥

ದಂಡಾವು ನನ ದೊರೆಯೆ । ದಂಡಾವು ನನ ದೊರೆಯೆ
ನೋಡೋಂತ ಸಭೆಗೆಲ್ಲ ದಂಡಾವಯ್ಯ ॥

ನೋಡೋಂತ ಸಭೆಗೆಲ್ಲ ದಂಡಾವು ನನ ದೊರೆಯೆ
ನನ ಹೆತ್ತ ತಾಯೀಗೆ ದಂಡಾವಯ್ಯ ॥

ನನ ಹೆತ್ತ ತಾಯೀಗೆ ದಂಡಾವು ನನ ದೊರೆಯೆ
ನನ ಹೆತ್ತ ತಂದೇಗೆ ದಂಡಾವಯ್ಯ ॥

ನನ ಹೆತ್ತ ತಂದೇಗೆ ದಂಡಾವು ನನ ದೊರೆಯೆ
ನನಗೊಲಿದ ಗುರುವೀಗೆ ದಂಡಾವಯ್ಯ ॥

ನನಗೊಲಿದ ಗುರುವೀಗೆ ದಂಡಾವು ನನ ದೊರೆಯೆ
ನನ ಕೈಯ್ಯ ಕತ್ತೀಗೆ ದಂಡಾವಯ್ಯ ॥

ನನ ಕೈಯ್ಯ ಕತ್ತೀಗೆ ದಂಡಾವು ನನ ದೊರೆಯೆ
ಭೂದೇವಿ ತಾಯಿಗೆ ದಂಡಾವಯ್ಯ ॥

ಭೂದೇವಿ ತಾಯೀಗೆ ದಂಡಾವು ನನ ದೊರೆಯೆ
ಆಕಾಶವಾಣೀಗೆ ದಂಡಾವಯ್ಯ ॥

ಆಕಾಶವಾಣೀಗೆ ದಂಡಾವು ನನ ದೊರೆಯೆ
ಸೂರ್ಯಚಂದ್ರಂಗಳಿಗೆ ದಂಡಾವಯ್ಯ ॥

ತಾಲಿಲ್ಲೋ ಲಿಲ್ಲುಮಯ । ಶಿವ ತಾಲಿಲ್ಲೋ ಲಿಲ್ಲುಮಯ ॥
ಸಲ್ಲಕೂಡದೆಂದು ಸತ್ಯಕ್ಕೆ ಬಂದಾರೆ
ಕಂಚೀಲಿ ಇದೆಯಣ್ಣ ಶಾಸನವು

ಕಂಚೀಲಿ ಶಾಸನವೆಷ್ಟಾರೂ ಓದಿದರೂ
ಪಂಚಾಲ ಗುರುಗಳಿಗೆ ಮಕ್ಕಾಳು ನಾವು ॥ ತಾ ॥

ಮಾದಿಗ ಮಾದಿಗ ಅನ್ನೂವರಯ್ಯ ಜನರು
ನಮ್ಮದಲ್ದೆ ನಿಮ್ಮದೇನಿಹುದಯ್ಯ ॥

ಚಪ್ಪಾಲಿ ಚಪ್ಪಾಲಿ ಅನ್ನೂವರಯ್ಯ ಜನರು
ಜಪ್ಪರಿಸಿ ಹೇಳದಿದ್ರೆ ತೀರಾದಯ್ಯ ॥

ಊರೂರು ಹೇಳು ಮದುವೇಲಿ ಹೇಳು
ಸಂತೇಗೆ ಹೋಗಿ ಸರ್ವರಿಗು ಹೇಳು ॥

ಲಿಂಗವೆಲ್ಲಿ ಹುಟ್ಟಿ ಜಂಗಮವೆಲ್ಲಿ ಹುಟ್ಟಿ
ಜಂಗಮಕೇ ವಿಭೂತಿ ಎಲ್ಲೀದಯ್ಯ ॥

ಕಳ್ಳು ಕುಡಿದು ನಾನು ಮತ್ತೇರಿ ಬೀಳಾಲೂ
ಕೈಜಾರಿ ಬಿದ್ದೋಯ್ತು ನನ ಜಂಗವು ॥

ಎಂಜಲು ಜಂಗಾವನೆತ್ತಿಕೊಂಡು ಅವನು
ಲಿಂಗಪೂಜೆ ಬಾಳ ಮಾಡ್ತಾನೋ ಮಗನು ॥

ಜಂಗಾವು ನಮ್ಮದು ಲಿಂಗಾವು ನಮ್ಮದು
ಗಂಗೆ ನಮ್ಮದು ಗಂಗಸ್ಥಳವೆ ನಮ್ಮದು ॥

ಅಖಿಲಾಂಡೇಶ್ವರಿ ಆದಿ ಪರಾಂಜ್ಯೋತಿ
ಆದಿ ಹುಟ್ಟಿದ್ದಿದು ಖಾಯವಯ್ಯ ॥

ಕೋಮಟಿ ಕೋಮಟಿ ಅನ್ನೂವರಯ್ಯ ಜನರು
ಕೋಮಟಿ ನಮ್ಮ ಸೋದರಳಿಯನು ॥

ಬ್ರಾಹ್ಮಣರು ಬ್ರಾಹ್ಮಣರು ಅನ್ನೂವರಯ್ಯ ಜನರು
ಬ್ರಾಹ್ಮಣರು ನಮ್ಮ ಮನೆ ಅಳಿಯನಯ್ಯ ॥

ಆರುಂಧತಿ ನಮ್ಮ ಮನೆ ಮಗಳಯ್ಯ
ಬ್ರಾಹ್ಮಣನು ನಮ್ಮ ಮನೆಯಳಿಯನಯ್ಯ ॥

ಹಂದೀನ್ನ ತಿಂತಾರೆ ಊರಲ್ಲಿ ಇರ್ತಾರೆ
ಗೋವನ್ನು ತಿಂತೀವಿ ಊರ ಹೊರಗಿರ್ತಿವಿ ॥

ಹಂದ್ಯೇನು ತಿನ್ನುತ್ತೆ ಗೋವೇನು ತಿನ್ನುತ್ತೆ
ಸರಿತೂಗಿ ಹೇಳೀರಿ ಓ ಹಿರಿಯರೆ ॥

ಚಿಕ್ಕ ಕತ್ತಿ ದೊಡ್ಡ ಕತ್ತಿ ಸಾಣೆ ಹಿಡಿಯೋವಾಗ
ಏಳು ಬುಟ್ಟಿ ಉಕ್ಕು ಉದುರೀತಯ್ಯ ॥

ಉದುರೀದ ಉಕ್ಕನ್ನು ಮೂಟೇಗೆ ತುಂಬಿ
ರಾಯಚೂಟಿ ಕೋಟೇಗೆ ಕಳಕುಹೀದರಯ್ಯ ॥
ತಾಲಿಲ್ಲೋ ಲಿಲ್ಲುಮಯ । ಶಿವ ತಾಲಿಲ್ಲೋ ಲಿಲ್ಲುಮಯ ॥

**ಆಕರ** : ಮಾಸ್ತೀಕರ ಸಂಸ್ಕೃತಿ : ಲಕ್ಷ್ಮೀಪತಿ ಕೋಲಾರ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ೧೯೯೩.

❑

# ಪಂಢರಿ ಭಜನೆ ಹಾಡುಗಳು

ಭಕ್ತಿಪಂಥದ ಉಪಾಂಗವಾಗಿ ಹುಟ್ಟಿಕೊಂಡ ಆರಾಧಾನಾ ಕಲೆಗಳಿಗೆ ಮತ್ತೊಂದು ಉತ್ತಮ ಉದಾಹರಣೆ ಪಂಢರಿ ಭಜನೆ ಮತ್ತು ನೃತ್ಯ. ರಾಮರ ದಂಡು, ಸೀತೆ ದಂಡು, ಭಾಗವಂತಿಕೆ ಪದ, ಪಂಢರಿ ಭಜನೆ.... ಇಂಥಾವನ್ನೆಲ್ಲಾ ಒಂದು ಗುಂಪಿನಲ್ಲಿ ಸೇರಿಸಿ ಅಧ್ಯಯನ ಮಾಡಿದರೆ ಅವಲ್ಲಿ ಪರಸ್ಪರ ಇರುವ ಹೋಲಿಕೆಗಳು, ಆ ಮೂಲಕ ಹುಟ್ಟಿನ ಮೂಲಗಳು ಅರ್ಥವಾಗುತ್ತವೆ. ಹಾಗೆಯೇ, ಆಗಿರುವ ಭಿನ್ನತೆಗಳ ಕಾರಣಗಳೂ ಮನವರಿಕೆಯಾಗುತ್ತವೆ. ಇಷ್ಟಾಗಿಯೂ ಪಂಢರಿ ಭಜನೆ ಇವೆಲ್ಲವನ್ನೂ ಮೀರಿದ ಒಂದು ಸ್ಥಾನದಲ್ಲಿ ನಿಲ್ಲುವುದೂ ನಮ್ಮ ಗಮನವನ್ನು ಸುಲಭವಾಗಿ ಸೆಳೆಯುತ್ತದೆ.

ಅದೆಂದರೆ, ಪಂಢರಿ ಭಜನೆ ಇತರ ಕೆಲವು ಕಲೆಗಳಂತೆ ಕೇವಲ ಹಾಡು ಮತ್ತು ಕುಣಿತವಷ್ಟೇ ಆಗಿಲ್ಲ. ಆದರ ವಸ್ತು ಮತ್ತು ನಿರೂಪಣಾ ವಿಧಾನಗಳು ಅದನ್ನೊಂದು ಗೀತ-ನೃತ್ಯ ರೂಪಕದ ಸ್ಥಾನದಲ್ಲಿ ನಿಲ್ಲಿಸುತ್ತವೆ. ಅದರ ಒಂದು ಸ್ಥೂಲ ಪರಿಚಯವನ್ನು ಈ ಮುಂದೆ ನೀಡಿದೆ.

ಪಂಢರಿ ಭಜನೆ ಬಗೆಗೆ ಈ ಅಧ್ಯಯನಕಾರನಿಗೆ ಮಾಹಿತಿ ನೀಡಿದ ಹಿರಿಯ ಕಲಾವಿದ ನಂಜುಂಡಾರಾಧ್ಯ ಅವರ ಪ್ರಕಾರ ೧೯ನೆಯ ಶತಮಾನದಷ್ಟು ಹಳೆಯದಾದ ಈ ಕಲೆಯ ಸೃಷ್ಟಿಕರ್ತ ಕಡಪ ನಾರಾಯಣದಾಸ್. ಮಹಾರಾಷ್ಟ್ರದ ಪಂಢರಾಪುರ ಕ್ಷೇತ್ರ ಮೂಲ ಹಾಗೂ ಪಾಂಡುರಂಗ ವಿಠ್ಠಲ ಈ ಕಲಾ ಪ್ರಕಾರದ ಅಧಿದೈವವಾಗಿದ್ದರೂ ವೈಷ್ಣವ ಧರ್ಮದ ಪ್ರಾಬಲ್ಯದಿಂದಾಗಿ ಇದು ನಮ್ಮ ನಾಡಿನ ಕೋಲಾರ ಪರಿಸರದಲ್ಲಿ ಮಾತ್ರ ವಿಶೇಷವಾಗಿ ಅಸ್ತಿತ್ವದಲ್ಲಿರುವ ಅತ್ಯಪರೂಪದ ಕಲಾವಿಶೇಷವಾಗಿದೆ. ಈ ಭಾಗದ ಹಳ್ಳಿಗಳಲ್ಲಿ ಅದು ಎಷ್ಟೊಂದು ಹಾಸುಹೊಕ್ಕಾಗಿದೆ ಎಂದರೆ, ಊರು ದೇವರ ರಥೋತ್ಸವಗಳಲ್ಲಿ ಹಬ್ಬ-ವಿಶೇಷಗಳಲ್ಲಿ ಪಂಢರಿ ಭಜನೆ ಕಾರ್ಯಕ್ರಮ ನಡೆಸುವುದು ಸಾಮಾನ್ಯ ಆಕರ್ಷಣೆಯಾಗಿದೆ. ಜಾತ್ರೆ, ಉತ್ಸವಗಳಲ್ಲಿ ರಾತ್ರಿಯೆಲ್ಲಾ ಈ ಕಾರ್ಯಕ್ರಮ ನಡೆಯುತ್ತಿರುತ್ತದೆ. ಭಕ್ತರ ತಂಡಗಳು ಪಂಢರಾಪುರಕ್ಕೆ ಯಾತ್ರೆ ಹೋಗುವುದನ್ನು ದಿಂಡಿಯಾತ್ರೆ ಹೋಗುವುದು ಎಂದು ಕರೆಯಲಾಗುತ್ತದೆ. ಇಂಥಾ ಯಾತ್ರೆಯ ಭಾಗವಾಗಿ ಪಂಢರಿ ಭಜನೆ ತಂಡವೂ ಕೂಡಿಕೊಂಡಿರುತ್ತದೆ. ಅಕ್ಕಪಕ್ಕದ ಊರುಗಳವರೂ ವಿಶೇಷ ಸಂದರ್ಭಗಳಿಗಾಗಿಯೇ ಈ ಭಜನಾ ತಂಡಗಳನ್ನು ಕರೆಸುವ ಪರಿಪಾಟವೂ ಇದೆ. ಪ್ರತಿಯಾಗಿ ಅವರಿಗೆ ನಿರ್ದಿಷ್ಟ ಸಂಭಾವನೆ, ಊಟ ವಸತಿ ವ್ಯವಸ್ಥೆಗಳೂ ಇರುತ್ತವೆ.

ಭಜನಾ ತಂಡದಲ್ಲಿ ದೊಡ್ಡವರೂ ಇರುವುದುಂಟಾದರೂ ಸಾಮಾನ್ಯವಾಗಿ ೧೦ ರಿಂದ ೧೨ ವರ್ಷದ ಮಕ್ಕಳು ಹೆಚ್ಚಾಗಿರುತ್ತಾರೆ. ಇದರಲ್ಲಿ ಜಾತಿ ಭೇದ ಇರುವುದಿಲ್ಲ. ಗಂಡು ಮಕ್ಕಳೊಂದಿಗೆ ಹೆಣ್ಣು ಮಕ್ಕಳೂ ಇರುತ್ತಾರೆ. ಭಜನೆ-ನೃತ್ಯದ ಒಂದು ವಿಶೇಷವಾದ ಕಳಸ ನೃತ್ಯವನ್ನು ಹೆಣ್ಣು ಮಕ್ಕಳು ಮಾತ್ರವೇ ಮಾಡುತ್ತಾರೆ. ದಿಂಡಿಯಾತ್ರೆ ಹೋಗುವಾಗ ದೀರ್ಘ ಪ್ರಯಾಣದ ಕಾರಣವಾಗಿ, ಮಕ್ಕಳಿಗಿಂತ ದೊಡ್ಡವರೇ ಹಾಡು-ಕುಣಿತ (ಊರೂರಲ್ಲಿ) ಮಾಡುತ್ತಾ ಹೋಗುವುದುಂಟು.

ಈ ಕಲಾ ತಂಡದವರ ವೇಷಭೂಷಣವೂ ಸರಳ, ಆದರೆ, ಇತರ ಕಲಾ ಪ್ರಕಾರದಿಂದ ಬೇರೆಯಾಗಿ ಗುರುತಿಸಬಹುದಾದ ಮಾದರಿಯಲ್ಲಿ ಇರುತ್ತದೆ. ಇವರು ದೊಡ್ಡವರಾಗಲೀ, ಚಿಕ್ಕವರಾಗಲೀ ಜುಬ್ಬ-ಪಂಚೆ ತೊಟ್ಟು, ಸೊಂಟಕ್ಕೆ ಕಾವಿ ವರ್ಣದ ವಸ್ತ್ರ, ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲಿ ಝುಂಡಾ ಹಿಡಿದಿರುತ್ತಾರೆ. ತಂಡದ ಮುಖ್ಯಸ್ಥ ಚಿಟಿಕೆ ಹಾಕುತ್ತಾ ಹಾಡುತ್ತಾರೆ. ಮಟ್ಟುಗಳನ್ನು ಅದಕ್ಕನುಗುಣವಾಗಿ ಕುಣಿತದ ಹೆಜ್ಜೆಗಳನ್ನು ಬದಲಿಸುವ ಸೂಚನೆ ನೀಡಲೂ ಚಿಟಿಕೆಯ ಶಬ್ದ ಮಾಡುತ್ತಿದ್ದರು. ಈಗ ಸ್ಪಷ್ಟವಾಗಿ ಗೊತ್ತಾಗಲಿ ಎಂದು ಪೀಪಿ ಊದುವುದು ಅಭ್ಯಾಸವಾಗಿದೆ. ಹಾಡಿಗೆ ಸಹಚರಿಯಾಗಿ ತಾಳ, ತಬಲಗಳ ಜೊತೆಗೆ ಈಚೆಗೆ ಹಾರ್ಮೋನಿಯಂ ಹಾಗೂ ಕೆಲವೆಡೆ ಘಟಂ ವಾದ್ಯವನ್ನು ಬಳಸುವುದು ಇದೆ. ಈ ವಾದ್ಯಗಾರರು ನೃತ್ಯಗಾರರ ವೃತ್ತದಿಂದ ಹೊರಗೆ ನಿಂತು ವಾದ್ಯ ನುಡಿಸುತ್ತಾರೆ. ಚಿಟಿಕೆದಾಸರು (ಮುಖ್ಯಸ್ಥ) ಮಾತ್ರ ವೃತ್ತದ ನಡುವೆ ನಿಂತು ಹಾಡು-ಕುಣಿತ ನಿರ್ದೇಶಿಸುವುದು, ನಿಯಂತ್ರಿಸುವುದು ಮಾಡುತ್ತಾರೆ. ಸ್ಥಳಾವಕಾಶ ದೊಡ್ಡದಿದ್ದರೆ ಮಾತ್ರ ಇತರ ವಾದ್ಯಗಾರರೂ ವೃತ್ತದ ಒಳಗೆ ಕೂರಬಹುದು.

ಪಂಢರಿ ಭಜನೆ ಹಾಡು ಮತ್ತು ಕುಣಿತ ಎರಡೂ ಬೆರೆತ ಪ್ರದರ್ಶನ ಕಲಾ ಪ್ರಕಾರ. ಇದರಲ್ಲಿ ಝುಂಡಾ ಹಾಡು ಹಾಗೂ ಕೋಲಾಟದ ಹಾಡುಗಳು ಎಂದು ಎರಡು ವಿಭಾಗಗಳಿರುತ್ತವೆ. ಎರಡಲ್ಲೂ ಹಾಡು-ಕುಣಿತಗಳಿರುತ್ತವೆ. ವ್ಯತ್ಯಾಸವೆಂದರೆ ಝುಂಡಾ ಹಾಡುಗಳಲ್ಲಿ ಬಾವುಟ ಹಿಡಿದರೆ, ಕೋಲಾಟದ ಹಾಡುಗಳಲ್ಲಿ ಕೋಲು ಹುಯ್ಯುತ್ತಾ ಕುಣಿತ ಮಾಡುತ್ತಾರೆ.

ಪಂಢರಿ ಭಜನೆ ಪ್ರದರ್ಶನ ಝುಂಡಾ ಹಿಡಿದು ಕುಣಿತ ಮಾಡುವುದರೊಂದಿಗೆ ಆರಂಭವಾಗುತ್ತದೆ. ಮೊದಲ ಹಾಡು ಇದು:

"ಭಕ್ತುಲಾರ ಮೀರೂ ರಾಂಡಿ
ಮನ ಪಂಡಾರಿ ಕ್ಷೇತ್ರಮೆ ಪೋಗುದಮು...
ಮನ ಪಂಡಾರಿ ನಾಥುನೆ ಸೇವಿಂತಮು
ಮನ ವಿಟಾರ ರಾಯುನಿ ದರ್ಶಿತಮು..."

ಆದಿತಾಳದಲ್ಲಿನ ಈ ಹಾಡಿನ ಬಳಿಕ

"ಎಂತ ದೂರಮೋ ಪಂಡರಿ
ಎಂತ ದೂರಮೋ.....
ಎಂದು ಜೂಸಿನ ಕಾನಿ ಪಂಡರಿ
ಕಂಡುಲಕು ಅಗು ಪಡದೆ...."

ಎಂಬ ಹಾಡು ಪ್ರಾರಂಭವಾಗಿ ಮುಂದುವರೆಯುತ್ತದೆ. ಆ ನಂತರದ ಮೂರನೇ ಹಾಡು –

"ಇಕ ಎಂತ ದೂರಮೋ ಎದುಗಾಮೆ ಪಂಡರಿ
ಕಾನಮೆ ಪಂಡರಿ....

ಎಂಬುದನ್ನು ಹಾಡಲಾಗುತ್ತದೆ.

ಈ ಹಾಡುಗಳನ್ನು ಹೀಗೆ ಕ್ರಮವಾಗಿಯೇ ಆರಂಭಿಸಿ, ಮುಂದುವರೆಸಲಾಗುತ್ತದೆ. ಅದಕ್ಕನುಗುಣವಾದ ತಾಳ, ನೃತ್ಯದ ಗತಿಗಳು ಕೂಡಿಕೊಳ್ಳುತ್ತವೆ. ಇದೊಂದು ಗೀತಮಾಲೆ. ಅದನ್ನು ನೃತ್ಯರೂಪಕ–ಗೀತ–ನೃತ್ಯ–ನಾಟಕದಂತೆ ಅಭಿನಯಿಸುತ್ತಾರೆ. ಪಂಡರಿನಾಥನ ದರ್ಶನಕ್ಕೆ ಭಕ್ತರ ತಂಡ ಯಾತ್ರೆ ಹೋಗುವುದು, ಸುದೀರ್ಘ ಹಾದಿಯನ್ನು ನಡೆದೂ ನಡೆದೂ ಆಯಾಸದಿಂದ ಬೀಳುವುದು, ಆಗ ವಿಠಲನು ಬಾಲಕನ ರೂಪದಲ್ಲಿ ಬಂದು 'ಆಹಾ ! ಈ ಬಾಲಕರು ನನ್ನ ದರುಶನಕ್ಕಾಗಿ ಅನ್ನ–ನೀರೂ ತೊರೆದು, ನಡೆದೂ ನಡೆದೂ ಆಯಾಸಪಟ್ಟು ಬಿದ್ದಿದ್ದಾರೆ. ಇವರಿಗೆ ನನ್ನ ಪುರದ ದರ್ಶನ, ನಾನು ಮಾಯವಾಗುತ್ತೇನೆ' ಎಂದು ಹೇಳುತ್ತಾನೆ. ಬಳಿಕ, ಆಯಾಸಪಟ್ಟಂತೆ ಮಲಗಿ, ಅಭಿನಯಿಸುತ್ತಿದ್ದ ಮಕ್ಕಳು ಮೇಲೆದ್ದು –

"ಅಂದು ಪಾರು ಚಂದು ಗಂಗಾ
ಅದೇ ಮನ ಚಂದ್ರಬಾಗ
ತೊಂದರತೋ ರಾಂಡಿವೇಗ
ಸ್ನಾನ ಮಾಡುದಾಮು ಬಾಗ....."

(ಅದೋ ನೋಡು ನೀರು ಹರೀತಾ ಇದೆ. ಅದೇ ನಮ್ಮ ಚಂದ್ರಬಾಗಾ ನದಿ (ಪಂಡರಾಪುರದ ಬಳಿಯ ನದಿ)..... ಪಂಡರಿಪುರದ ಪಕ್ಷಿಗಳನ್ನು ಕೈಲಿ ಹಿಡಿದು ತಾಂಡವ ನೃತ್ಯ ಮಾಡ್ತಾ ಇದ್ದಾರೆ. ನಾವೂ ಅವರ ಜತೆ ಸೇರಿ ಕುಣಿಯೋಣ..... ಎಂಬರ್ಥದ) ಹಾಡು ಹೇಳುತ್ತಾ ತಾವು ಸ್ವತಃ ಪಂಡರಾಪುರ ತೀರ್ಥಕ್ಷೇತ್ರಕ್ಕೆ ಹೋದಂತೆ, ಕಂಡಂತೆ ಅಭಿನಯಿಸುತ್ತಾರೆ.

ಬಳಿಕ, ಈ ಕುಣಿತಗಾರರು ಪರಸ್ಪರ ಎದಿರೆದರು ನಿಂತು 'ಇದೇ ಅಲ್ಲವಾ, ಪಂಡರಿನಾಥ ಇರೋ ಕ್ಷೇತ್ರ ! ಓ; ಸಾಧುವೇ" ಎಂದು ಸಂವಾದಿಸುವ ಹಾಡು ಬರುತ್ತದೆ. ಇದೇ ಪಂಡರಿ ಕ್ಷೇತ್ರವೆಂದು ಭಾವಿಸಿ, ಚಂದ್ರಬಾಗದಲ್ಲಿ ಸ್ನಾನ ಮಾಡಿ, ಸಂಧ್ಯಾವಂದನೆ ಮಾಡಿ, ಹಣೆಗೆ ತಿಲಕ ಇಡುವುದು, ಶ್ರೀಕ್ಷೇತ್ರದ ವರ್ಣನೆ ಮಾಡುವುದು, ಸ್ವಾಮಿಗೆ ಪೂಜೆ ಮಾಡಿ, ಸೇವೆ ಮಾಡುವುದು ಮೊದಲಾದವುಗಳ ವರ್ಣನೆ ಬರುತ್ತದೆ.

ದೇವರ ಕೊಂಡಾಟ, ಭಕ್ತರ ಪ್ರಾರ್ಥನೆಗೆ ಒಲಿದು, ರಕ್ಷಿಸಿದ, ಅವನ ಪುರಾಣಗಳ ಸ್ತುತಿಯ ಹಾಡುಗಳೂ ಕ್ರಮವಾಗಿ ಇರುತ್ತವೆ.

**"ಗೋಪಿ ಬಾಲುರಾ ರಾಮನ**
**ಗುಬ್ಬಿಲಾಟು ಲಾಡುದಮ**
**ಕೋಲಾಟ ಲಾಡುದಮ...."**

ಎಂಬ ಹಾಡು ಹೇಳುತ್ತಾ ವಿವಿಧ ಬಗೆಯ ಕುಣಿತ ಮಾಡುತ್ತಾರೆ. ಬೇರೆ ಬೇರೆಯ ಭಜನೆ ಹಾಡುಗಳನ್ನು ಹಾಡುತ್ತಾರೆ.

**"ಜೈ ಭೋಲೋ ಪಾಂಡುರಂಗ ಸ್ವಾಮಿಸಕು...." "ಜೈ"**
**"ಮಾತಾ ರುಕ್ಮಬಾಯಿಸಕು...." "ಜೈ"**
**"ಸದ್ಗುರು ನಾರಾಯಣದಾಸ್‌ಕು" "ಜೈ"**
**"ಸದ್ಗುರು ವೆಂಕಟದಾಸ್‌ಕು" "ಜೈ"**

(ಹೀಗೆ ಆರಾಧ್ಯ ದೇವರೊಂದಿಗೆ ಈ ಭಜನೆ ಪ್ರಕಾರದ ಕರ್ತೃ ಮತ್ತು ತಮಗೆ ಈ ಹಾಡು-ಕುಣಿತ ಕಲಿಸಿದ ಗುರುವಿನ ಸ್ಮರಣೆಗೂ ಜೈಕಾರ ಹಾಕಿ, ಗೌರವ ಸಲ್ಲಿಸಿ, ಬಳಿಕ ತಲೆಬಾಗಿ "ಜೈ ಜ್ಞಾನದೇವ ತುಕಾರಾಮ್" ಎಂದು ಭಜಿಸುತ್ತಾ, ಮೇಲೆದ್ದು ಕೈಗಳಿಂದ ತಮ್ಮ ತಲೆಗಳ ಮೇಲೆ ಕೈ ಆಡಿಸಿಕೊಳ್ಳುತ್ತಾರೆ. ಆ ಬಳಿಕ ಗಣೇಶ, ಶಾರದೆ, ಗುರು, ಸಭಾ ಪ್ರಾರ್ಥನೆ ನಡೆಸುತ್ತಾರೆ. ಗಣೇಶನ ಪ್ರಾರ್ಥನೆಯಲ್ಲಿ ಎಲ್ಲರೂ ವೃತ್ತಾಕಾರವಾಗಿ ನಿಂತು, ಕೈಮುಗಿದುಕೊಂಡು ಹೇಳುವುದು ಕ್ರಮ. ಶಾರದೆ ಸ್ತುತಿಯಲ್ಲಿ ಬಾಗಿ ಚಪ್ಪಳೆ ತಟ್ಟಿ, ಎದ್ದು, ಸೊಂಟದ ಮೇಲೆ ಕೈ ಇಟ್ಟು ನಿಂತು ಹೇಳುವುದು. ಗುರು ಪ್ರಾರ್ಥನೆ ಮಾಡುವಾಗ ಗುರು ಮಹರಾಜ್ ಹಾಡಿಗೆ ಅಭಿಮುಖರಾಗಿ ನಿಲ್ಲುವುದು, ಮುಂದಿನ ಚರಣಗಳಿಗೆ ಕಾಲಿಗೆ ಶರಣು ಮಾಡುವಂತೆ ಅಭಿನಯಿಸುವುದು, ಸಭಾ ಪ್ರಾರ್ಥನೆಯಲ್ಲಿ ಸಭಿಕರನ್ನುದ್ದೇಶಿಸಿ ಆಂಗಿಕಾಭಿನಯದೊಂದಿಗೆ ಹಾಡುವುದು.... ಇವು ನಿರ್ದಿಷ್ಟ ಕ್ರಮವಾಗಿ ರೂಢಿಯಲ್ಲಿವೆ. ಇದಾದ ಮೇಲೆಯೇ ಈ ಹಿಂದೆ ಪ್ರಸ್ತಾಪಿಸಿದ "ಭಕ್ತುಲಾರ ಮೀರುರಾಂಡಿ...." ಎಂಬ ಭಜನೆ ಪ್ರದರ್ಶನ ಮೊದಲ ಗೀತೆ ಮತ್ತಿತರ ಗೀತ-ನೃತ್ಯಗಳು ಆರಂಭವಾಗುವುದು.

ಅದು ಮುಂದುವರೆದು, ದೇವರ ದರ್ಶನ ಇತ್ಯಾದಿ ಭಾಗಗಳೂ ಅಭಿನೀತವಾದ ಮೇಲೆ, ಪುರಾಣಗಳ ಸ್ತುತಿಯ ಹಾಡುಗಳೂ ಆದ ಮೇಲೆ, ಕೊನೆಯಲ್ಲಿ ಆಂಜನೇಯನ ಹಾಡು, ಮಂಗಿ ಹಾಡುಗಳನ್ನು ಹಾಡಲಾಗುತ್ತದೆ. ಆಂಜನೇಯನ ಗೀತೆಯಲ್ಲಿ ಮಂಗಗಳ ಹಾಗೆ ಅಭಿನಯಿಸುತ್ತಾ ನೃತ್ಯ ಮಾಡುತ್ತಾರೆ. ಸಾಂದರ್ಭಿಕವಾಗಿ ಹೆಚ್ಚು ಕುಣಿತಗಳನ್ನು ನೀಡುವಾಗ ಅಥವಾ ದೇವರ ಸ್ತೋತ್ರದ ಅಂಗವಾಗಿಯೂ ಕೆಲವೊಮ್ಮೆ ಕೈವಾರ ತಾತಯ್ಯನ ಭಜನೆ ಪದಗಳನ್ನೂ, ಹಿಂದಿಯ ಭಕ್ತಿ ಗೀತೆಗಳನ್ನು ಬಳಸಿಕೊಂಡು, ಅವಕ್ಕೂ ನೃತ್ಯ ಮಾಡುತ್ತಾರೆ.

ಪಂಡರಿ ಭಜನೆಯ ಎಲ್ಲಾ ಹಾಡುಗಳೂ ಬಹುಮಟ್ಟಿಗೆ ಆದಿತಾಳ ಅಟ್ಟತಾಳದಲ್ಲಿರುತ್ತವೆ. 'ಇಗ, ಎಂತಾ ದೂರಮೋ....' ಎಂಬ ಹಾಡು ಮಾತ್ರ 'ಜಂಪೆ'ಯಲ್ಲಿರುತ್ತದೆ.

ಹಾಡುವಾಗ ಸಾಮಾನ್ಯವಾಗಿ ಕುಣಿತ ಇದ್ದೇ ಇರುತ್ತದೆ. ಆದರೂ ಕೆಲವನ್ನು ನಿಂತೇ ಹಾಡುವುದುಂಟು. ಬಹುಶಃ ಸತತ ಕುಣಿತದ ಆಯಾಸದಿಂದ ವಿರಾಮ ಪಡೆಯುವುದು, ಅದನ್ನೂ ಒಂದು ವೈವಿಧ್ಯದಂತೆ ಬಳಸಿಕೊಳ್ಳುವ ಉದ್ದೇಶವಿರಬಹುದು. ಕೆಲವು ಹಾಡುಗಳನ್ನು ಹಾಡುತ್ತಿದ್ದಂತೆಯೇ ಕುಣಿತವೂ ಪ್ರಾರಂಭವಾದರೆ ಕೆಲವಕ್ಕೆ ಮಾತ್ರ ಹಾಡಿಗೆ ಲಘು ಹೆಜ್ಜೆಯಿಂದ ಕುಣಿತ ಪ್ರಾರಂಭಿಸಿ, ಹಾಡು ಮುಂದುವರೆದಂತೆ ಹಂತ ಹಂತವಾಗಿ ಕುಣಿತದ ವೇಗ ಹೆಚ್ಚಿಸುವ ಪದ್ಧತಿಯೂ ಇದೆ. ಇದೂ ಸಹ ಪ್ರದರ್ಶನದ ಆಕರ್ಷಣೆ ಹೆಚ್ಚಿಸುವ, ಕಲಾವಿದರಲ್ಲಾಗಲೀ, ನೋಡುಗರಲ್ಲಾಗಲೀ ಬರಬಹುದಾದ ಏಕತಾನತೆ ಮುರಿದು ವಿಶೇಷ ಸಂಚಲನ ಮೂಡಿಸುವ ಒಂದು ತಂತ್ರವಾಗಿ ಬಳಕೆಯಾಗುತ್ತದೆ. ಪ್ರದರ್ಶನವು ಲಾಲಿ ಹಾಡು ಹಾಗೂ ಮಂಗಳಾರತಿ ಪದಗಳೊಂದಿಗೆ ಮುಕ್ತಾಯದ ನಿಲುಗಡೆಗೆ ಬರುವುದೂ ಆರಾಧನಾ ಕ್ರಿಯೇಯ ಆಶಯಕ್ಕೆ ಅನುಗುಣವಾಗಿಯೇ ಸೇರಿದ ಭಾಗವಾಗಿರುತ್ತದೆ.

ಹೀಗೆ, ಪಂಡರಿ ಭಜನೆ ವೈಷ್ಣವ ಪಂಥದ, ಭಕ್ತಿ ಪ್ರಚಾರದ ಅಂಗವಾಗಿ ಹುಟ್ಟಿಕೊಂಡ ಒಂದು ಕಲೆಯಾಗಿದ್ದು ತನ್ನ ಮೋಹಕವಾದ ಸಂಗೀತ, ನೃತ್ಯಾದಿಗಳಿಂದ ಹೆಚ್ಚು ಜನರನ್ನು ಆಕರ್ಷಿಸುವ ಗುಣವನ್ನು ಹೊಂದಿದೆ. ಇದರ ವಸ್ತು ಪ್ರದರ್ಶನ ವಿಶೇಷಗಳು ಒಂದು ಹಂತದಲ್ಲಿ 'ಗೀತಗೋವಿಂದ'ದ ನೆನಪು ತಂದರೆ ಆಶ್ಚರ್ಯವೇನಲ್ಲ (ಅಲ್ಲಿರುವ ಪ್ರೇಮ-ವಿರಹದಂತಹ ಭಾವ, ವಸ್ತುವನ್ನು ಹೊರತುಪಡಿಸಿ ನೋಡಿದಾಗ). ತೆಲುಗಿನಲ್ಲಿ ರಚಿತವಾಗಿರುವ ಈ ಪಂಡರಿ ಭಜನೆ ಹಾಡುಗಳು, ಮೂಲದಲ್ಲಿ ಬಹುಶಃ ಯಾತ್ರೆಯ ಸಂದರ್ಭದಲ್ಲಿ ಅಲ್ಲಲ್ಲಿಯ ಸ್ಥಳ, ಸಂದರ್ಭಗಳ ಹಿನ್ನೆಲೆಯಲ್ಲಿ ರಚಿಸಿದ್ದಾಗಿರಬಹುದು. ಮುಂದೆ, ಆ ಹಾಡುಗಳನ್ನೂ ಇತರೆಡೆ ನೃತ್ಯರೂಪಕವಾಗಿ ಪ್ರದರ್ಶಿಸುವ ಕ್ರಮ ಹುಟ್ಟಿರಬಹುದು. ಒಟ್ಟು ಹಾಡು-ಕುಣಿತ ಮೇಳೈಸಿದ ಜನಪದ ಕಲಾ ಪ್ರಕಾರದಲ್ಲಿ ಪಂಡರಿ ಭಜನೆಗೆ ವಿಶೇಷ ಸ್ಥಾನವಂತೂ ಇದೆ.

(ಕರ್ನಾಟಕದ ಕೋಲಾರ ನೆಲದಲ್ಲಿದ್ದರೂ, ಅತ್ಯುತ್ತಮ ಕಲಾ ಪ್ರಕಾರವಾಗಿದ್ದರೂ, ಈ ಭಜನೆ ಹಾಡುಗಳು ತೆಲುಗಿನಲ್ಲಿರುವುದರಿಂದಲೋ ಏನೋ ಈ ಕೀರ್ತನಗಳ ಪುಸ್ತಕಗಳು ನಮ್ಮಲ್ಲಿ ಗಮನಿಸುವಷ್ಟು ಪ್ರಕಟವಾಗಿಲ್ಲ. ಆದ್ದರಿಂದ ಈ ಕಲಾಪ್ರಕಾರದ ಪರಿಚಯಕ್ಕಾಗಿ ನಾನು ಸಂಗ್ರಹಿಸಿದ ಕೆಲ ತುಣುಕುಗಳನ್ನಷ್ಟೇ ಇಲ್ಲಿ ನೀಡಿದ್ದೇನೆ. ರಾಜ್ಯದ ಇತರ ಭಾಗಗಳಲ್ಲಿ ಈ ಕಲಾ ಪ್ರದರ್ಶನಕ್ಕೆ ಅವಕಾಶ ನೀಡುವ, ಈ ಹಿರಿಯ ಕಲಾವಿದರಿಗೆ ಪ್ರಶಸ್ತಿ-ಗೌರವ ನೀಡುವ ವಿಷಯದಲ್ಲೂ ವಂಚನೆ ಆಗಿರುವುದು ವಿಷಾದನೀಯ.

– ಟಿ. ಗೋ.

# ಸೋಲಿಗರ ಹಾಡ್ಗುಣಿತಗಳು

ಕರ್ನಾಟಕದ ಆದಿವಾಸಿ ಸಮುದಾಯಗಳಲ್ಲಿ ಸೋಲಿಗರು ಬೇರೆ ಬೇರೆ ಕಾರಣಕ್ಕೆ ಗಮನಾರ್ಹರಾಗುತ್ತಾರೆ. ಮಲೆಮಹದೇಶ್ವರಬೆಟ್ಟ, ಬಿಳಿಗಿರಿ ರಂಗನಬೆಟ್ಟದ ದಟ್ಟ ಅರಣ್ಯದಲ್ಲಿ ವಿಶೇಷವಾಗಿಯೂ ಇತರ ಭಾಗದಲ್ಲಿ ಅತ್ಯಲ್ಪ ಪ್ರಮಾಣದಲ್ಲಿಯೂ ಕಂಡುಬರುವ ಇವರು ಮೂಲತಃ ಕಾಡಿನ ಮಕ್ಕಳು. ಈಚೆಗೆ ಅನಿವಾರ್ಯ ಕಾರಣಗಳಿಂದಾಗಿ ಹೊರಗಿನವರ ಸಂಪರ್ಕ ಹೆಚ್ಚಾಗಿದ್ದು ಸಾಕಷ್ಟು ಬದಲಾವಣೆಯ ಹಾದಿಯಲ್ಲಿಯೂ ಇದ್ದಾರೆ.

ಕನ್ನಡದ ಒಂದು ಉಪಭೇದವನ್ನು ಮಾತೃಭಾಷೆಯಾಗುಳ್ಳ ಸೋಲಿಗರು ತಮಗೇ ವಿಶಿಷ್ಟವಾದ ಹಬ್ಬ-ಹರಿದಿನಗಳನ್ನು ಹೊಂದಿದ್ದಾರೆ. ಅದರ ಅಂಗವಾದ ಆಚರಣೆಗಳಲ್ಲಿ ಸಹಜವಾಗಿಯೇ ಹಾಡು-ಕುಣಿತಗಳೂ ಇದ್ದು, ಅಧ್ಯಯನದ ದೃಷ್ಟಿಯಿಂದ ಗಮನಾರ್ಹ ಆಗುತ್ತವೆ.

".....ಆದಿವಾಸಿ ಗೀತೆಗಳಲ್ಲಿ ಕ್ರಿಯಾತ್ಮಕ ಗುಣವುಳ್ಳ ಗೀತೆಗಳೇ ಹೆಚ್ಚಾಗಿರುತ್ತವೆ. ಕೆಲಸಕ್ಕೂ ಹಾಡಿಗೂ ಬಹಳ ಹತ್ತಿರದ ಸಂಬಂಧವಿದೆ. ಬೇಟೆ ಆಡುವುದು ಮುಂತಾದ ಕೆಲಸಗಳಲ್ಲಿ ತೊಡಗಿದಾಗ ಮನುಷ್ಯನಿಗೆ ಭಾವಾವೇಶ ಉಂಟಾಗುತ್ತದೆ. ಈ ಭಾವಾವೇಶ ಇಡೀ ಗುಂಪಿಗೆ ಉಂಟಾಗುತ್ತದೆಯಲ್ಲದೆ ಈ ಆವೇಶಕ್ಕೊಳಗಾದ ಆ ಬೇಟೆಗಾರನ ಕಂಠದಿಂದ ಲಯಾನ್ವಿತವಾದ ಧ್ವನಿಗಳು ಹೊರಡುವುದಕ್ಕೆ ಸಹಾಯ ಮಾಡುತ್ತವೆ. ಅಲ್ಲದೆ, ಅವರ ಮಾಂಸಖಂಡಗಳೂ ಈ ಉದ್ವೇಗದಲ್ಲಿ ಲಯಾತ್ಮಕ ಚಲನೆ ಪಡೆಯುತ್ತವೆ. ಆಗ ಕುಣಿತಕ್ಕೂ ಹಾಡಿಗೂ ಒಂದು ಏಕತಾನತೆ ಏರ್ಪಡುತ್ತವೆ.

".....ನಿಧಾನವಾಗಿ ಆರಂಭವಾಗುವ ಹಾಡು ನಿಧಾನವಾದ ಕುಣಿತಕ್ಕೆ ಸಮ್ಮಿಳಿತವಾಗಿ ಹಂತ ಹಂತವಾಗಿ ಹಾಡುಗಾರರ, ಕುಣಿತಗಾರರ, ವಾದ್ಯದವರ ಸಮಯಸ್ಫೂರ್ತಿ ಹೆಚ್ಚಾದಂತೆ ಚುರುಕಾಗುತ್ತಾ ಹೋಗುತ್ತದೆ." (ಸೋಲಿಗರ ಸಂಸ್ಕೃತಿ,ಪು. ೨೦೮-೨೧೦).

ಈ ಹಿನ್ನೆಲೆಯಲ್ಲಿ ಸೋಲಿಗರಲ್ಲಿನ ಕೆಲವು ಹಾಡ್ಗುಣಿತಗಳನ್ನು ಹೀಗೆ ಪರಿಚಯಸಲಾಗಿದೆ.

## ಸೋಲಿಗರ ಹಾಡು-ಕುಣಿತಗಳು

### ೧) ಸಾಮಾನ್ಯ ಜನಪದ ಗೀತೆಗಳು

ಈ ಗುಂಪಿಗೆ ಸೋಲಿಗರಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಗೋರುಕೆ, ಹಾಡುಕೆ, ಗುಬ್ಬಿಯಾರೆ, ಕಗ್ಗ, ಬಿಡಿಹಾಡುಗಳು ಮುಖ್ಯವಾಗಿವೆ. ಮೇಲಿ ಹಾಡುಗಳಿಗೆ ಧಾರ್ಮಿಕ ಚೌಕಟ್ಟು ಇದ್ದು ಹಬ್ಬ ಹರಿದಿನಗಳ ಕುಣಿತದ ಸಂದರ್ಭದಲ್ಲಿ ಬಳಸುವುದರ ಜೊತೆ ಇತರೆ ಸಂದರ್ಭದಲ್ಲಿ ಬೇಸರಿಕೆ ಕಳೆಯುವ ಸಲುವಾಗಿಯೋ ಮನರಂಜನೆ ಪಡೆಯುವ ಸಲುವಾಗಿಯೋ ಹಾಡುವುದೂ ಉಂಟು. ಗೋರುಕೆ, ಹಾಡುಕೆ, ಗುಬ್ಬಿಯಾಲೆ, ಕಗ್ಗಗಳಲ್ಲಿ ಗೀತ, ನೃತ್ಯ, ವಾದ್ಯ ಸಮ್ಮಿಲಿತವಾಗಿ ಬರುತ್ತದೆ.

ಗೋರುಕೆಯನ್ನು ಗಂಡಸರು ರೊಟ್ಟಿಹಬ್ಬ, ಹೊಸರಾಗಿ ಹಬ್ಬ, ಪೊರ ಮುಂತಾದ ಹಬ್ಬಗಳಲ್ಲಿ ಕುಣಿಯುವ ಸಂದರ್ಭದಲ್ಲಿ ಕುಣಿತದ ಲಯದ ಸಲುವಾಗಿ ಬಳಸುತ್ತಾರೆ. ಈ ಸಂದರ್ಭದಲ್ಲಿ ಗಂಡಸರೆಲ್ಲರೂ ಸಂತಸದಿಂದ ಸಮೂಹ ನೃತ್ಯದಲ್ಲಿ ಭಾಗವಹಿಸುತ್ತಾರೆ. ಗೋರುಕೆಯನ್ನು ಅವರು ವಾದ್ಯದ ಲಯಕ್ಕನುಗುಣವಾಗಿ ಕುಣಿಯುತ್ತಾ ಅವರೇ ಹಾಡಿಕೊಳ್ಳುತ್ತಾರೆ. ಗೋರುಕೆ ಹಾಡಿಕೊಂಡು ಕುಣಿಯುವುದಕ್ಕೆ ಪಕ್ಕವಾದ್ಯವಾಗಿ ತಾಳ, ಮದ್ದಳೆ, ಪೀನಾಸಿಯನ್ನು ಬಳಸುತ್ತಾರೆ. ಗೋರುಕೆ ನೃತ್ಯದ ಜೊತೆಗೂಡಿ ಆರಂಭವಾಗುವುದು ಪ್ರಾರ್ಥನೆ ಮೂಲಕವಾಗಿ–

ಗೋರು ಗೋರುಕ ಗೋರುಕನಾ
ಗೋರು ಗೋರುಕ ಗೋರುಕನಾ ॥ ಪ ॥

ಚಪ್ಪಾರ ಕಂಬಾ ತಾಳಿನಲ್ಲಿ
ತಪ್ಪಾದೆ ಬರಲೋ ನಾಲಿಗೆಲೊ

ಹಕ್ಕಿ ಮಲ್ಲೀಗೆ ಹೂವಾದಲ್ಲೊ
ದೇವರ ಮಂಡೇಲಿ ಮೆರೆದಾದಲ್ಲೋ

ಸುತ್ತು ಮಲ್ಲೀಗೆ ಹೂವಾದಲ್ಲೊ
ದೇವರ ಮಂಡೇಲಿ ಮೆರೆದಾಲ್ಲೋ

ಹಾಲು ಮಲ್ಲಿಗೆ ಹೂವಾದಲ್ಲೊ
ಅಲರ ಮಂಡೇಲಿ ಮೆರೆದಾದಲ್ಲೊ

ಇಂಬೀಹೂವಿನ ದುಂಡುಮಾಲೆ
ಸ್ವಾಮಿ ಕತ್ತಿನಾ ಓಲಾಡಿದೊ

ಸೋಲಿಗರು ನಗರ ಸಮಾಜವನ್ನು ಕಂಡರಿಯದ ಮುಗ್ಧರು. ಅವರು ಕಂಡಿರುವ ಮುಂದುವರಿದ ಸಮಾಜ ಎಂದರೆ ಮಲೆಯ ಮಹದೇಶ್ವರಸ್ವಾಮಿ ಪರಿಸೆ, ಬಿಳಿಗಿರಿ ರಂಗಸ್ವಾಮಿಯ ತೇರು, ಕೀಳುನಾಡಿನ ದನಗಳ ಜಾತ್ರೆ ಮುಂತಾದುವು. ಈ ಜಾತ್ರೆಯ ವೈಭವ ಸೋಲಿಗರ ಕಣ್ಣು ಹಾಗೂ ಮನಗಳನ್ನು ಕುಕ್ಕಿ ಗೋರುಕೆಯ ಹಾಡುಗಳಲ್ಲಿ ಬಣ್ಣಿತವಾಗಿರುವುದನ್ನು ಕಾಣಬಹುದು.

ನಗರದ ಬೀದಿ ನಾನೋಡಿ
ಕೈಲಿ ರೊಂಡು ಕಾಸುಲೇ
ಇಲ್ಲಿ ಬೇಕಾದ ತಿಂಡಿ ಮಡಗೀದೆ
ಎತ್ತಿಕೊಡರೋ ನಾಡಾದೆ
ಇಲ್ಲಿ ನಕ್ಕರೆ ಪಾಕಾಲು ಮಡಗಾದೆ
ಎತ್ತಿಕೊಡಲೆ ನಾಡಾದೆ
ಇದು ಬಾಳ ಜೋಕೀನಾ ಬಂದಾದೆ
ಇದು ಜಗ್ಗೆಂದು ಜೀವ ಜರದಾದೆ

ಸೋಲಿಗರ ಗೋರುಕೆಯಲ್ಲಿ ಅವರ ಪ್ರೀತಿ ಪ್ರೇಮದ ಅಭಿವ್ಯಕ್ತಿಯನ್ನೂ ಕಾಣಬಹುದು.

ಕೋಮಾರ ಮತ್ತಿ ಬಿಲ್ಲಿನಲ್ಲಿ
ನೀ ಬರತೀನಿಲ್ಲಿಂದು ಬಾಷೆಕೊಡು
ನೀ ಬರತೀನಂತಾ ಕೈಯ್ಯಕೊಡು
ನೀ ನನ್ನ ಸಂಗಡಾ ಬಂದಿದ್ದರೆ
ನೀ ನನ್ನ ಜೊತೆಯಲ್ಲಿ ಬಂದಿದ್ದರೆ
ನೀ ಕೊಳ್ಳೆಗಾಲವಾ ತೋರಿಸಲಾ
ಒಂದು ಸಕರ ಸಪಾತಿ ತಿನ್ನಿಸಲಾ
ಗೋರು ಗೋರುಕಾ ಗೋರುಕನಾ
ಗೋರು ಗೋರುಕಾ ಗೋರುಕನಾ

ಸೋಲಿಗರು ತಮ್ಮ ಗೋರುಕೆಯಲ್ಲಿ ತಾವು ಕಂಡ ಕಾಡಿನ ಮರಗಿಡಗಳ ಹೆಸರನ್ನು ಬಳಸುತ್ತಾ ಹಾಡನ್ನು ಸಮಯಸ್ಫೂರ್ತಿಯಲ್ಲಿ ಬೆಳೆಸುವುದೂ ಉಂಟು. ಒಂದೊಂದು ಮರದ ಸೌದೆಯನ್ನೂ ಹೆಸರಿಸುತ್ತಾ ಹೇಳುವ ಈ ಕೆಳಗಿನ ಗೋರುಕೆಯನ್ನು ಗಮನಿಸಬಹುದು.

ಮತ್ತೀ ಸೈ(ಸೌ)ದೆ ಗೋರುಕನಾದೆ
ದಡಶೀನ ಸೈದೆ ಗೋರುಕನಾದೆ

ಇದು ಮಾವಿನ ಸೈದೆ ಗೋರುಕನಾದೆ
ಇದು ತಾರೀ ಸೈದೆ ಗೋರುಕನಾದೆ
ಇದು ದೊಣಿಲೆ ಸೈದೆ ಗೋರುಕನಾದೆ
ಒಂದು ಅಣವೀಲು ಸೈದೆ ಗೋರುಕನಾದೆ
ಇದು ಸರವಾಲು ಸೈದೆ ಗೋರುಕನಾದೆ
ಒಂದು ತೇಕೀನ ಸೈದೆ ಗೋರುಕನಾದೆ
ಇದು ಕಗ್ಗಾಲಿ ಸೈದೆ ಗೋರುಕನಾದೆ
ಒಂದು ಶೀಗೆಯ ಸೈದೆ ಗೋರುಕನಾದೆ

ಹೀಗೆ ಕಾಡಿನ ವೃಕ್ಷರಾಶಿಯನ್ನೆಲ್ಲಾ ಸುತ್ತುವರೆಯುತ್ತದೆ. ಸಾಹಿತ್ಯದ ದೃಷ್ಟಿಯಿಂದ ಈ ಹಾಡು ಅಷ್ಟು ಮಹತ್ವಪೂರ್ಣ ಅಲ್ಲದಿದ್ದರೂ ಕಾಡಿನ ಗಿಡಮರಗಳ ಜ್ಞಾನಕೋಶದಂತೆ ಈ ಗೋರುಕೆಗಳು ಇವೆ. ಸೋಲಿಗರ ಈ ವೃಕ್ಷಜ್ಞಾನ ಕೇವಲ ಮೇಲಿನ ಲಯದಲ್ಲಷ್ಟೇ ಮುಂದುವರಿಯದೆ ಈ ಕೆಳಗಿನಂತೆ ಗೋರುಕೆ ಮತ್ತೆ ಧಾಟಿ ಬದಲಾಗುತ್ತದೆ.

ಅರಳು ಕಂಬಿನಲ್ಲಿ ಮಣ್ಣಕ್ಕಿಗೂಡು
ಮಣ್ಣ ತೆಗೆ ತೆಗೆ ಮಣ್ಣಕ್ಕಿಮಾಮ
ದಡಸು ಕಂಬಿನಲಿ ಮಣ್ಣಕ್ಕಿಗೂಡು
ಮಣ್ಣ ತೆಗೆ ತೆಗೆ ಮಣ್ಣಕ್ಕಿಮಾಮ
ತಾರಿ ಕೊಂಬಿನಲಿ ಮಣ್ಣಕ್ಕಿಗೂಡು
ಮಣ್ಣ ತೆಗೆ ತೆಗೆ ಮಣ್ಣಕ್ಕಿಮಾಮ
ಬಾಗ ಕೊಂಬಿನಲಿ ಮಣ್ಣಕ್ಕಿಗೂಡು
ಮಣ್ಣ ತೆಗೆ ತೆಗೆ ಮಣ್ಣಕ್ಕಿಮಾಮ
ಇದು ಮಾವು ಕಡ್ಡೀಲಿ ಮಣ್ಣಕ್ಕಿಗೂಡು
ಮಣ್ಣ ತೆಗೆ ತೆಗೆ ಮಣ್ಣಕ್ಕಿಮಾಮ
ಇದು ಕಾಗೆ ಕಡ್ಡೀಲಿ ಮಣ್ಣಕ್ಕಿಗೂಡು
ಮಣ್ಣ ತೆಗೆ ತೆಗೆ ಮಣ್ಣಕ್ಕಿಮಾಮ

ಹೀಗೆ ಒಂದು ಧಾಟಿಯನ್ನು ಎತ್ತಿಕೊಂಡಾಗಲೂ ಕಾಲು ತಾಸು ಅಥವಾ ಅರ್ಧ ತಾಸಿನವರಗೆ ಕುಣಿತದೊಡನೆ ಮುಂದುವರಿಯುತ್ತದೆ. ಹಾಡಿನಲ್ಲಿ ಪುನರಾವರ್ತನೆ ಸರ್ವೇಸಾಮಾನ್ಯವಾಗಿರುತ್ತದೆ. ಅಭಿರುಚಿಯನ್ನು ಬದಲಿಸುವ ಸಲುವಾಗಿ ಧಾಟಿಗಳೂ ಅರ್ಧ ತಾಸಿಗೊಮ್ಮೆ ಬದಲಾಗುತ್ತದೆ. ಗೋರುಕೆಯ ಹಾಡಿನ ಇನ್ನೊಂದು ಧಾಟಿ ಈ ಕೆಳಕಂಡಂತಿದೆ.

ಬೆಂಡೆ ಬೇರೀನಾ ರಾಗೀಯ
ದಡಸು ಬೇರೀನಾ ರಾಗೀಯ
ತಾರಿ ಬೇರೀನಾ ರಾಗೀಯ
ಇದು ಬಿಜ್ಜ ಬೇರೀನಾ ರಾಗೀಯ
ಇದು ಸಪ್ಪೆ ಬೇರೀನಾ ರಾಗೀಯ
ಒಂದು ನಿಳಲು ಬೇರೀನಾ ರಾಗೀಯ
ಇದು ಮತ್ತೀ ಬೇರೀನಾ ರಾಗೀಯ
ಒಂದು ಹಲುಗೇ ಬೇರೀನಾ ರಾಗೀಯ
ಒಂದು ಹಳವಿಲು ಬೇರೀನಾ ರಾಗೀಯ
ಒಂದು ಬೆಯ್ಸೆ ಬೇರೀನಾ ರಾಗೀಯ
ಒಂದು ಅಗುರು ಬೇರೀನಾ ರಾಗೀಯ

ಹೀಗೆ ಮುಂದುವರಿಯುತ್ತಾ ಹೋಗುತ್ತದೆ. ಸೋಲಿಗರು ನಾಗರಿಕತೆಗೆ ಪಕ್ಕಾಗಲು ಪ್ರತ್ಯಕ್ಷವಾಗಿ ಇಚ್ಛಿಸುವುದಿಲ್ಲ. ಅವರು ತಮ್ಮ ಸಂಸ್ಕೃತಿಯ ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ ನಿಜ. ಆದರೆ ತಾವು ಬದಲಾಗಬೇಕೆಂಬ ಹಂಬಲಿಕೆ ಪರೋಕ್ಷವಾಗಿ ಇದೆ. ಈ ಬಗೆಯ ಹಂಬಲವನ್ನು ಅವರ 'ಗೋರುಕೆ' ಯಲ್ಲಿಕೇ ಕಾಣಬಹುದು. ಬಿಳೀಗಿರಿರಂಗನ ಬೆಟ್ಟದಲ್ಲಿ ಗೌರ್ನಮೆಂಟ್ ಬಸ್ಸುಗಳು ಅವರಿಗೆ ನಾಗರಿಕತೆಯನ್ನು ಹೊತ್ತು ತರುಬ ಸಾಧನಗಳು.

ಚಮರಾಜ ನಗರದ ಗೌರ್ಮೆಂಟಲೊ
ಗೌರ್ಮೆಂಟು ಗಾಡಿ ಬಂದಾದಲ್ಲೊ
ಅಡ್ಡಾರೆ ಕಯ್ಯ ಬೀಸಂದಿಗಾ
ನಿಲ್ದಾದದೆ ದೈವರಯ್ಯೋ ॥ ಗೋರು ॥

ಗುಡ್ಡಗಾಡಿನ ಹಾವು ಹರಿದಂತಹ ರಸ್ತೆಯಲ್ಲಿ ತಿರುವುಗಳು ಅಪಾರ. ಡ್ಯೆವರ್‌ಗೆ ಸೂಚನೆ ಕೊಡುವ ಗೋರುಕಗಳೂ ಉಂಟು.

ಆಗೂರಿ ಮರ ತಿರುವೀನಿಲ್ಲಿ
ನೋಡಿ ಬುಡೀಗ ಡ್ರೈವರಯ್ಯೋ
ಹನ್ನೆರಡು ಮ್ಯೆಲಿ ಫಾರೆಸ್ಟಲೋ
ಹನ್ನೆರಡಾಣಿ ತಪ್ಪಾದಲೊ
ಬಗ್ಗಾಲು ಹೊನ್ನೆ ತಾಳಿನಲ್ಲಿ
ಬಗ್ಗಿ ಬಾರೆಲೊ ಬಳಿಯಾರವೆ
ಬಗ್ಗೀ ಬಳುಕೀ ಬಂದಾಲುವೆ
ಸಕರೆ ಸ(ಚ)ಪಾತಿ ಕೊಡುವೆನೆಲೊ ॥ ಗೋರು ॥

ಮಿರಿ ಮಿರಿ ಮಿರುಗುವ ನಗರದ ಮಹಿಳೆಯ ರವಿಕೆಯನ್ನು ಅವರು ಬಣ್ಣಿಸುವ ರೀತಿ–

ಬೆಂಕಿ ಕಲ್ಲಿಟ್ಟ ಜಾಕೀಟೆಲೋ
ಮೈಮೇಲೆ ತಾನೆ ಮೆರೆದಾದಲ್ಲೋ ॥ ಗೋರು ॥

ಕೈಗಡಿಯಾರ, ಕಣ್ಣಿಗೆ ಕಪ್ಪು ಕನ್ನಡಕ, ಬೂಟು ಪ್ಯಾಂಟು ಧರಿಸಿದ ನಗರದ ತರುಣನನ್ನು ಕುರಿತು–

ಕೈಯಲ್ಲಿ ವಾಚ ಕಟ್ಟಿಲ್ಲಲೊ
ಕಣ್ಣಿಗೆ ಕನ್ನಡಿ ಹಾಕುರೆಲೊ
ನೀ ಕಾಲಿಗೆ ಬೂಡಿಸು ಹಾಕುರೆಲೊ
ನೀ ಬಲಗೈಲಿ ರೇಡಿಯೊ ತಾಬೂರೆಲೊ
ನೀ ಬಾಳ ಜೋಕೀನಾ ಬಂದಿಯಲ್ಲೊ ॥ ಗೋರು ॥

ಕೈಜೀಸಿದರೆ ಸರ್ಕಾರಿ ಬಸ್ಸು ನಿಲ್ಲುವ ವಿಚಾರವೂ ಇವರಿಗೆ ಅಚ್ಚರಿಯೆ–

ಕೊಳ್ಳೆಗಾಲಾದ ರೋಡಿನಲ್ಲಿ
ಜಾನಕಿ ಬಸ್ಸು ಬಂದಾದಲ್ಲೊ
ಅಡ್ಡಾಕಿಕಯ್ಯಾ ಜೀಸಂದಿಗಾ
ದಗ್ಗಾನೆ ಬಸ್ಸು ನಿಂತಾದಲ್ಲೊ ॥ ಗೋರು ॥

ಅವರಲ್ಲಿ ಕೆಲವರು ಅಪರೂಪಕ್ಕೆ ಮೈಸೂರಿಗೆ ಬರುವುದುಂಟು. ಆಗ ಮೈಸೂರು ಮಾರ್ಕೆಟ್ ಅವರಿಗೆ ವಿಶೇಷ ಆಕರ್ಷಣೆಯ ವಸ್ತುವಾಗಿ ಕಾಣುವುದುಂಟು.

ನನ್ನಾ ಜೊತಿಯಲ್ಲಿ ಬಂದಿದಲ್ಲೆ
ಮೈಶೂರ ಮಾರುಕಟ್ಟೆ ತೋರಿಸಲೊ
ನಗರದ ಅಂಗಾಡಿ ಚೆಗುರೆಲೆಲೊ
ಎದೆಯಾ ಜೇಜೀನ ಬರಲೀಯಲೊ ॥ ಗೋರು ॥
ಬಸ್ಸಿನ ಛಾರಜು ನಿನ್ನದೆಲ್ಲೊ
ಹೋಟೆಲ್ಲು ಕರುಶು (ಚು) ನನ್ನದೆಲ್ಲೊ ॥ ಗೋರು ॥

ಹೀಗೆ ನಾಗರಿಕತೆಯ ಒಂದೊಂದು ಅಂಶವೂ ಅವರ ಕಣ್ಣನ್ನೂ, ಮನಸ್ಸನ್ನೂ ಆಕರ್ಷಿಸಿವೆ. ಆರ್ಥಿಕವಾಗಿ ಕಡುಬಡವರಾದ ಇವರಿಗೆ ಎಟುಕಲಾರದ ನಾಗರಿಕ ವಸ್ತುಗಳ ಹಂಬಲವನ್ನು ತಮ್ಮ ಗೋರುಕೆಗಳಲ್ಲಿ ತುಂಬಿಕೊಂಡು ಹಾಡಿ ತೃಪ್ತಿಪಟ್ಟುಕೊಳ್ಳುತ್ತಾರೆ.

ಗೋರುಕೆಯನ್ನು ಹಾಡಿ-ಕುಣಿದ ನಂತರ ಕುಣಿತಗಾರರಿಗೆ ದೈಹಿಕಶ್ರಮ ಪರಿಹಾರಕ್ಕಾಗಿ ಬಿಡುವು ನೀಡಬೇಕಾಗುತ್ತದೆ. ಈ ಬಿಡುವಿನ ವೇಳೆಯಲ್ಲಿ ಕುಳಿತು ನೋಡುತ್ತಿರುವ ಪ್ರೇಕ್ಷಕರನ್ನು ಕಡೆಗಣಿಸುವಂತಿಲ್ಲ. ಹಾಗೆಯೇ ತಮ್ಮ ದೈವವನ್ನು ಒಮ್ಮೆ ಸ್ಮರಿಸುವ ಉದ್ದೇಶದಿಂದ ಕಗ್ಗವನ್ನು ಹೇಳುತ್ತಾರೆ. ಸೋಲಿಗರಲ್ಲಿ ಹೇಳುವ ಕಗ್ಗವು ವೀರಭದ್ರನ ಹಲಗೆ ಹಿಡಿದು ಕುಣಿಯುತ್ತಾ ಹೇಳುವ ವೀರಭದ್ರದೇವರ ಪವಾಡವನ್ನು ಹೇಳುವ ಹಾಡಿನಿಂದ ಪ್ರಭಾವಿತವಾದುವೇ ಆಗಿವೆ. ಉದಾಹರಣೆಗೆ-

ಎಲೆಲೆಲೊ..... ಹರಾನ್ನೆಲೊ
ಅರುಗನ್ನ ಧರಿಸೆಲೊ
ಅಸಗಿತ್ತಿ ಬಸವ ದೇವರಿಗೆ
ಕಾಯ ಒಡೆದು ಪಸರಿಸೆಲೊ
ಹಿಂಗಣ್ಣ ಮುಂಗಣ್ಣ
ಎಡದ ಪಾದಕ ಜಂಗು
ಬಲದ ಪಾದಕ ತಿದ್ರು
ಚೆಲ್ಲಾಣ ಪೂರ್ವಕ್ಕೋಗು
ಸಕುಮ ಜಂಗುಮನಾಗಿ
ಮುಂಗೈಕೆ ಸರವಾನ ಧರಿಸಿ
ಕೆಟ್ಟಾವಿನ ವಿಷಕ್ಕೆ
ಹೊಸನಾಮಗಳನ್ನ ಧರಿಸಿ
ಅಂತಿಂತ ಮರುಳು ಸಿದ್ಧರೆಲ್ಲ
ಆಲಿಯೆ ಬರಿದೆ ಎದ್ದು ಬರುವಾಗ
.................
ಕಿಲಲಲಹೋ ........

ಹೀಗೆ ಕಗ್ಗ ಕೊಂಚ ಹೊತ್ತು ನಡೆದ ಮೇಲೆ ಮತ್ತೆ ಗೋರುಕನ ಹಾಡು ಆರಂಭವಾಗುತ್ತದೆ. ಮತ್ತೆ ನಡುನಡುವೆ ಕಗ್ಗ ಇರುತ್ತದೆ. ಆದರ ಇನ್ನೊಂದು ಪಾಠವನ್ನು ನೋಡೋಣ.

ಎಲೆಲೆಲೋ....... ಬಾರ ಬಾರೆಲೋ
ಭಗದಂ ಭಗದಂ ಪಟ್ಟೆ
ಕೂರದಲ್ಲಿ ಹಲಗೆ
ಧೀರ ಧೀಮಿತ
ಬಿಡ್ಲೀ ಬಿಲ್ಲುಗಳು
ಸತೀಪತಿಗಳು

ಸಾಂಬ್ರಾಮಗಳು
ಎತ್ತೆತ್ತ ನೋಡಿದರೂವೆ
ಅತ್ತತ್ತ ಕೋಡಿ ಅರಡಾಡತಾ
ಕತ್ತೀ ಮೊನೆಯ
ಇಂತೇ ಈರಭದ್ರದೇವರಿಗೆ
ಕೊಟ್ಟೆ ಕೆಟ್ಟವರಿಲ್ಲ
ಒಡಿದು ಬೆಸೆಯವರಿಲ್ಲ
ಒಂದು ಪಾವಿನ ಹಾಲು
ಒಂದು ಪಾವಿನ ಹಕ್ಕಿ
ಹಾಲೊಳಗೆ ಹಬ್ಬ ಮಾಡಿ
ನೀರೊಳಗೆ ತೀರ್ಥಕೊಟ್ಟು
ಕರೀ ಮಲ್ಲಯ್ನ ಸೇವೆಮಾಡಿ
ಕಂಡುಗು ಧೂಪ ಕೊಂಡುಕು ನೀಡಿ
ಕೊಂಡದ ಈರಭದ್ರಸ್ವಾಮಿ
ಬತ್ತವುನೋ....... ಕೆಲಲಲಯೋ

ಈ ಗೋರುಕೆಯ ಹಾಗೆಯೇ ರೊಟ್ಟಿ ಹಬ್ಬದ ಸಂದರ್ಭದಲ್ಲಿ ಮಲೆಯ ಮಹದೇಶ್ವರರನ್ನು ಕುರಿತು, ಬಿಳಿಗಿರಿರಂಗಸ್ವಾಮಿಯನ್ನು ಕುರಿತು ಹಾಡುವಂತಹ ಹಾಡುಗಳೂ ಇವೆ. ನಿದರ್ಶನಕ್ಕೆ ಒಂದೆರಡರ ಪಾಠವನ್ನು ಗಮನಿಸಬಹುದು:

ಕೂಗೋ ಕೂಗೋ ಮಾದಾನಾ
ನಿಂದು ಕೂಗೊ ದುಂಡು ಮಾದಾನಾ ॥ ಪ ॥
ಗೇರು ಮಾಳದ ಜಡೆಯಪ್ಪನವರು
ನಿಂದು ಕೂಗೋ ದುಂಡುಮಾದೇವನ
ಮೂಡಲಗಿರಿ ಮುದ್ದು ಪಾದವೆ
ನಿಂದು ಕೂಗೋ ದುಂಡು ಮಾದೇವನ
ಕಾವಿಯ ತೊಟ್ಟು ಲಾವಿಗೆ ಮೆಟ್ಟಿ । ನಿಂದು ।
ಸಾವಿರ ಜಡೆಯ ಸವಣಾರೆಲ್ಲ । ನಿಂದು ।
ಅಲಕ್ಕಿತಪ್ಪ ಅಣ್ಣ ಮಾದಪ್ಪ । ನಿಂದು ।
ಈ ಬಡವಾನ ಮೇಲೆ ಬಂದೋಗಿ ಸ್ವಾಮಿ । ನಿಂದು ।
ಗಂಡುಲಿ ಮೇಲೆ ಗರುಡ ಸವ್ವಾರಿ । ನಿಂದು ।
ಸಂಚಾರ ಹೋಗೋದು ಸಂಜೆಯ ವೇಳೆ । ನಿಂದು ।
...................................... ಕಿಲಲಯೋ

ಇದೇ ರೀತಿಯಲ್ಲಿ ಇನ್ನೊಂದು ಪಲ್ಲವಿಯೊಡನೆ ಹಾಡು ಮುಂದುವರಿಯುತ್ತದೆ.

ಕರಗದ ಮೇಲೆ ಕರಗಾ ಮಡಗಿ
ಕರೆಯೋ ಮಾದೇವ ದೇವಾ ॥ ಪ ॥
ಮೂಡಲಗಿರಿ ಮುದ್ದುಪಾದವೆ
ಕರೆಯೋ ಮಾದೇವ ದೇವಾನಾ
ಕೊಲ್ಲಿ ಮರೆ ಬಸಪ್ಪನವರು । ಕರೆಯೊ ।
ದೊಡ್ಡ ಸಂಪಿಗೆ ಮುದ್ದುಳ್ಳ ದೊರಿಯೆ । ಕರೆಯೋ ।
.......................... ಕಿಲಲಯೋ

ಮತ್ತೊಂದೊ ಪಲ್ಲವಿ

ಅಂಗೈಮೇಲೆ ಲಿಂಗಾ ಮಡಗಿ
ಲಿಂಗಾವೆ ಮೈದುಂಬಿದುವೊ
ದೊಡ್ಡಂಪಗೆ ಮುದ್ದುಳ್ಳ ದೊರಿಯೆ
ಲಿಂಗಾವೆ ಮೈದುಂಬಿದುವೊ
ಒಂಟಿ ಜಾಡೆ ಕಾರಪ್ಪನವರೆ । ಲಿಂಗಾವೆ ।
ಗೇರುಮಾಳ ಜಡೆಯಪ್ಪನವರೆ । ಲಿಂಗಾವೆ ।
....................... ಕಿಲಲಯೋ

ಇನ್ನೊಂದು ಪಲ್ಲವಿ

ಮುಳ್ಳಾವಿಗೆ ಮುರುಡಿಗೆ ಜಂಗು
ಮೆಳ್ಳಾಗೆ ಬಂದರು ಮಾದೇವ
ಆಲಿತನಿಂದೆ ಗಾಲಿಯ ಮೇಲೆ । ಮೆಳ್ಳಗೆ ।
ಕಾವಿಯ ತೊಟ್ಟು ಲಾವಿಗೆ ಮೆಟ್ಟಿ । ಮೆಳ್ಳಗೆ ।
ಗಂಡುಗತ್ತರಿ ಇಡಿದಾರು ಸಾವಿರ । ಮೆಳ್ಳಗೆ ।
........................ ಕಿಲಲಯೋ

ಹೀಗೆ ಇಡೀರಾತ್ರಿಗೆ ಬಳಸಲಾಗುವಷ್ಟು ಪಲ್ಲವಿ ಸೋಲಿಗರಲ್ಲಿ ಸಿದ್ಧವಾಗಿವೆ. ಅವರ ಎದೆಯಲ್ಲಿ ನೂರಾರು ಪದಗಳು ಸನ್ನಿವೇಶವನ್ನು ತುಂಬುತ್ತವೆ. ಇಡೀರಾತ್ರಿ ನಿದ್ದೆಗೆಟ್ಟು ಕುಳಿತಿರುವ ಜನರಿಗೆ ಇವುಗಳ ವೈವಿಧ್ಯದಿಂದ ಮನರಂಜನೆ ನೀಡುತ್ತವೆ. ರೊಟ್ಟಿ ಹಬ್ಬದ ಸಂದರ್ಭದಲ್ಲಿ ರೊಟ್ಟಿಯನ್ನು ಬೆನ್ನಿಗೆ ಕಟ್ಟಿಕೊಂಡು ಹೇಳುವ ಗೋರುಕೆಯ ಒಂದು ಪಾಠ ಹೀಗಿದೆ:

೧. ಆ ದಕ್ಕದಕ್ಕ ಈ ದಿಮ್ಮ ದಿಮ್ಮ
ಮುದ್ದೀನ ಕಮ್ಮಾನ ಮರದಕ್ಕಿ ಬನ್ನೆ
ಸೂಟಾಕಿ ಕೀಸಿಕ್ಕಿ ನಾತನ್ನೆಲಕ್ಕು
ಈ ಹೆಣ್ಣಿಗಾಗಿ ನಾತನ್ನೆಲಕ್ಕು
ನೂರೆಯ ತುಂಡು
ಈ ಹೆಣ್ಣಿಗೆಂದು ನಾ ತನ್ನೆಲಕ್ಕು
ಕೋಟು ಜೇಬಿನಾ ನಾತನ್ನೆಲಕು
ಗೋರು ಗೋರೂಕ ಗೋರುಕ ಮಡಗ

೨. ಕಂಬಕ್ಕ ಬೆಜ್ಯಾರು ನಾ ತನ್ನೆಲಕ್ಕು
ಮಾದ ಮಾವಯ್ನ ಹೆಣ್ಣೀಗೆ ಬನ್ನೆ
ದೊಡ್ಡ ಮಾವನೂರ ಬಳಸಿಕ್ಕಿಬನ್ನೆ
ಸಿಕ್ಕ ಮಾವಾನ ಹೆಣ್ಣೀಗೆ ಬನ್ನೆ
ಗೋರು ಗೋರೂಕ ಗೋರೂಕ ಮಡಕ

ಹೀಗೆ ಪರಸ್ಪರರನ್ನು ಚುಡಾಯಿಸುತ್ತಾ ಗೋರುಕೆಗಳು ಹಾಸ್ಯದ ಹೊನಲನ್ನು ಸೃಷ್ಟಿಸುತ್ತವೆ.

'ಗುಬ್ಬಿಯಾಲೆ' ಎಂಬುದು ಸೋಲಿಗರಲ್ಲಿ ಸಿಗುವ ಇನ್ನೊಂದು ಹಾಡಿನ ಪ್ರಕಾರ ಈ ಗುಬ್ಬಿಯಾಲೆಯನ್ನು ಹಾಡುವವರು ಪ್ರಮುಖವಾಗಿ ಸ್ತ್ರೀಯರು. ಈ ಗುಬ್ಬಿಯಾಲೆಯಲ್ಲಿ ಮೇಲಿನ ಹಾಡುಗಳ ಪುನರಾವರ್ತನೆಯನ್ನೇ ವಿಶೇಷವಾಗಿ ಕಾಣಬಹುದಾಗಿದೆ. ನಿದರ್ಶನ

ಗುಬ್ಬಿಲೋಲ ಇದು ಗುಬ್ಬಿಲೋಲಾ
ದೇವಾನು ದೇವರಿಗೆ ಗುಬ್ಬಿಲೋಲಾ ॥ ಗುಬ್ಬಿಲೋಲಾ ॥
ಮಾದಪ್ಪ ಸ್ವಾಮಿಯವರು ॥ ಗುಬ್ಬಿಲೋಲಾ ॥
ಪಾರ್ವತಿ ಅಮ್ಮನಿಗೆ । ಗುಬ್ಬಿಲೋಲಾ ।
ಸಿರಿರಂಗನ ಪಾದುಕ್ಕೆ । ಗುಬ್ಬಿಲೋಲಾ ।
ಕಲಿಸಿದ ಗುರುವಿಗೆ । ಗುಬ್ಬಿಲೋಲಾ ।

'ಹಾಡುಕೆ' ಎಂಬುದು ಹಾಡುವ ಸಲುವಾಗಿ ಇರುವ ಹಾಡುಗಳನ್ನು ಕುರಿತು ಹೇಳಿದುದೇ ಆಗಿದೆ. ಹಾಡುಕೆಗೂ ಗೋರುಕೆಗೂ ಅಷ್ಟೇನೂ ವ್ಯತ್ಯಾಸ ಇಲ್ಲ. ಆದರೆ ಕೊಂಚ ಧಾಟಿಯಲ್ಲಿ ವ್ಯತ್ಯಾಸ ಇರುತ್ತದೆ. ಎರಡರಲ್ಲೂ ಬಳಸುವ ಸಾಹಿತ್ಯ ಮಾತ್ರ ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ.

ನಗರದ ಬೀದಿ ನಾ ನೋಡಿ
ಕೈಲಿಯೊಂದು ಕಾಸುಲೇ ಲೇ........ ಓ
ಇಲ್ಲಿ ಬೇಕಾದ ತಿಂಡಿ ಮಡಗೀದೆ
ಎತ್ತಿಕೊಡಲೊ ನಾಡಾದೆ ಲೇ......... ಓ
ಇಲ್ಲಿ ಸಕ್ಕರೆ ಪಾಕಲು ಮಡಗಾದೆ
ಎತ್ತಿ ಕೊಡಲೊ ನಾಡಾದೆ ಲೇ........ ಓ
ಇದು ಕಣ್ಣು ಬಿದ್ದದೆ ನಿನಮ್ಯಾಲೆ
ಜಗ್ಗೆಂದು ಜೀವ ಜರದಾದೆ ಲೇ........ ಓ

ಮತ್ತೆ ಹೂವಿನ ಹೆಸರುಗಳನ್ನು ಈ ಹಾಡುಕೆಗೆ ಬಳಸುವುದುಂಟು.

ಕೆಂಡ ಮಲ್ಲಿಗೆ ಹೂವಾದೆ
ಇದು ಕೆದರಿ ಬಿದ್ದದೆ ಮಲ್ಲಿಗೆ ಲೇ........ ಓ
ಹಳ್ಳಹಡಗದ ಹೂವಾದೊ
ಎತ್ತಿ ಮುಡಿಯಾಕೆ ಮನವಿಲ್ಲ ಲೇ........ ಓ
........................

ಮೇಲಿನ ಸೋಲಿಗರ ಹಾಡಿನ ಹಲವಾರು ಪ್ರಕಾರಗಳನ್ನು ಗಮನಿಸಿದಾಗ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಈ ಹಾಡುಗಳಲ್ಲಿ ಸಾಹಿತ್ಯದ ಪ್ರಬುದ್ಧತೆ ಇಲ್ಲ. ಕಾಡು ಮರ ಗಿಡದ ನಡುವೆ ಸಹಜವಾಗಿ ಮೂಡಿಬಂದ ಹಾಡುಗಳು ಇದಾಗಿವೆ. ಆದುದರಿಂದಲೇ ಇಲ್ಲಿ ಪಾಂಡಿತ್ಯವನ್ನು ಕಾಣಲಾರೆವು ಸಹಜ ಪ್ರತಿಭೆಯನ್ನು ಕಾಣುವೆವು. ಇಲ್ಲಿನ ಪ್ರತಿಯೊಂದು ಹಾಡೂ ಸಮಯಸ್ಫೂರ್ತಿಯಿಂದ ಕೂಡಿದುದಾಗಿದ್ದು ಸೋಲಿಗರ ಗುಂಪಿನ ಯಾವೊಬ್ಬ ಸದಸ್ಯರೂ ಸರಾಗವಾಗಿ ಹಾಡಿಕೊಂಡು ಹೋಗಲು ಅತ್ಯಂತ ಸಹಕಾರಿಯಾಗಿವೆ.

ಈ ಹಾಡುಗಳಲ್ಲಿನ ಭಾಷೆ ಸರಳ. ಅಪೂರ್ವವಾದ ಪದಸಂಪತ್ತನ್ನು ಕಾಣಲಾರೆವು. ಯಾಕೆಂದರೆ ಕಾಡಿನ ಮಧ್ಯೆ ಬೆಳೆದ ಇವರ ಭಾಷೆ ಸೀಮಿತವಾದ ಪದಸಂಪತ್ತನ್ನು ಮಾತ್ರ ಒಳಗೊಂಡಿರುವಂತಹುದು. ಭಾಷೆ ಶ್ರೀಮಂತವಾಗಿದ್ದಾಗ ಪದಪ್ರಯೋಗವನ್ನು ಧಾರಾಳವಾಗಿ ಕಾಣಬಹುದು. ಆದರೆ ಸೋಲಿಗರ ಭಾಷೆ ವಾಚಿಕವಾಗಿ ಬೆಳೆದು ಬಂದಂತಹದು ಎಂಬುದನ್ನು ನಾವಿಲ್ಲಿ ಮನಗಾಣಬೇಕು.

ಇಲ್ಲಿನ ಹಾಡುಗಳು ಅವರ ಕುಣಿತಕ್ಕೆ ಧಾರ್ಮಿಕ ವಿಧಿವಿಧಾನಗಳ ಆಚರಣೆಗೆ ಪೂರಕವಾಗಿರುವುದು ಗಮನಾರ್ಹ ಅಂಶವಾಗಿದೆ. ಮಲೆಯ ಮಹದೇಶ್ವರರನ್ನು ಕುರಿತ, ಬಿಳಿಗಿರಿ ರಂಗಸ್ವಾಮಿಯನ್ನು ಕುರಿತ, ಜಡೆಸ್ವಾಮಿಯನ್ನು ಕುರಿತ ಬಿಡಿ ಹಾಡುಗಳು ಇಲ್ಲಿ ಬರುತ್ತವೆ.

ಸೋಲಿಗರ ಹಾಡುಗಳಲ್ಲಿ ಪುನರಾವರ್ತನೆಯನ್ನು ಗುರುತಿಸಬಹುದು. ಈ ಹಾಡುಗಳ ಪುನರಾವರ್ತನೆಯು ಕೇವಲ ಸೋಲಿಗರ ಹಾಡುಗಳಲ್ಲಿ ಮಾತ್ರ ಕಂಡು ಬರುವ ಗುಣವಾಗಿರದೆ ವಿಶ್ವ ಜನಪದ ಸಾಹಿತ್ಯದ ಸಾಮಾನ್ಯ ಗುಣವಾಗಿದೆ.

ಸೋಲಿಗರ ಜ್ಞಾನ ಅಡಗಿರುವುದೇ ಅವರ ವಾಚಿಕ ಸಾಹಿತ್ಯದಲ್ಲಿ ಅದರಲ್ಲಿಯೂ ಅವರ ಜನಪದ ಗೀತೆಗಳು ಅವರ ಬುದ್ಧಿಶಕ್ತಿಯ ವಿಕಾಸಕ್ಕೆ ಪೂರಕವಾಗಿವೆ. ಮೇಲಿನ ಅವರ ಸಮುದಾಯಕ್ಕೇ ವಿಶಿಷ್ಟವಾದ ಹಾಡುಗಳಲ್ಲದೆ, ಸೋಬಾನೆ ಪದಗಳು, ಗುಡ್ಲು ಶಾಸ್ತ್ರ ಮಾಡುವಾಗ ಹೇಳುವ ಪದಗಳು, ರಾಗಿಕಲ್ಲು ಪದಗಳು, ಬಿಡಿಕಥನ ಗೀತೆಗಳು ಹೇರಳವಾಗಿವೆ. ಇನ್ನು ಪುರುಷರಲ್ಲಿಯೂ ಕೋಲಾಟದ ಪದಗಳು, ಬಂಡಿಪದಗಳೂ ಚಾಲ್ತಿಯಲ್ಲಿ ಇವೆ. ಇವೆಲ್ಲ ಕಾಡಿನಲ್ಲಿ ವಾಸಿಸುವ ಸೋಲಿಗರನ್ನು ಹೊರತುಪಡಿಸಿ ನಾಡಿನ ಸಂಪರ್ಕಕ್ಕೆ ಬಂದಿರುವ ಸೋಲಿಗರು ಗ್ರಾಮೀಣ ಸಂಸ್ಕೃತಿಯ ಪ್ರಭಾವಕ್ಕೆ ಪಕ್ಕಾಗಿರುವುದರಿಂದ ಗ್ರಾಮೀಣ ಪರಿಸರದ ಪ್ರಭಾವದಿಂದ ಮೇಲಿನ ಹಾಡುಗಳು ಅವರಿಗೆ ಚಾಲ್ತಿಗೆ ಬರುತ್ತಿವೆ. ಇದು ಸೋಲಿಗರ ಸಂಸ್ಕೃತೀಕರಣಕ್ಕೆ ಒಂದು ನಿದರ್ಶನ. ಈ ಮೊದಲು ತಿಳಿಸಿದ ಬಯಲು ಸೀಮೆಯಲ್ಲಿ ಕಾಣಸಿಗುವ ಹಾಡುಗಳ ಪಾಠಗಳೇ ಸೋಲಿಗರಲ್ಲೂ ಸಿಗುವುದರಿಂದ ಅವನ್ನು ಹೊರತಾಗಿ ಸೋಲಿಗರಿಗೇ ವಿಶಿಷ್ಟವಾದ ಸಾಹಿತ್ಯವನ್ನು ಮಾತ್ರ ಗುರುತಿಸಲಾಗಿದೆ.

**ಆಕರ** : ಸೋಲಿಗರ ಸಂಸ್ಕೃತಿ : ಡಾ॥ ಚಂದ್ರು ಕಾಳೇನಹಳ್ಳಿ; ೧೯೯೩.

# ಕಾಡುಕುರುಬರ ಹಾಡ್ಗುಣಿತಗಳು

ಕಾಡುಕುರುಬರು ಮತ್ತು ಜೇನುಕುರುಬರು ಕರ್ನಾಟಕದ ಅತ್ಯಂತ ಪ್ರಾಚೀನ ಬುಡಕಟ್ಟು ಸಮುದಾಯಗಳಿಗೆ ಸೇರಿದವರೆಂದು ವಿದ್ವಾಂಸರು ಗುರುತಿಸಿದ್ದಾರೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಪರಿಸರದ ಅರಣ್ಯ ಭಾಗಗಳಲ್ಲಿ ವಾಸಿಸುವ ಇವರು ತಮ್ಮ ಆಚಾರ ಸಂಪ್ರದಾಯಗಳ ಅಂಗವಾಗಿ ಹಾಡು-ಕುಣಿತಗಳನ್ನು ನಡೆಸುವುದುಂಟು. ಇವರು ಬೇಸಿಗೆಯಲ್ಲಿ ಆಚರಿಸುವ ದೇವರಹಬ್ಬದಲ್ಲಿ "ತಮಗೆ ಪ್ರೀತಿ ಪಾತ್ರರಾದವರ ಹೆಸರು ಹೇಳುತ್ತಾ ಕೋಲು ಹುಯ್ಯುತ್ತಾರೆ... ಬಿಸು ಸಂಕ್ರಾಂತಿ ಹಾಗೂ ಯುಗಾದಿ ವೇಳೆಗೆ ತಮ್ಮಲ್ಲೇ ಗುಂಪಾಗಿ ಸು. ಒಂದು ವಾರದವರೆಗೂ ಪ್ರತಿದಿನ ವಿವಿಧ ಬಣ್ಣ ಹಾಕಿಕೊಂಡು ವೇಷಭೂಷಣ ತೊಟ್ಟು, ಒಬ್ಬ ಕೋಡಂಗಿ ಹಾಗೂ ಒಬ್ಬ ಸೂಳೆ ವೇಷಧಾರಿಯೊಂದಿಗೆ ಬಣ್ಣಗಳಿಂದ ಸಿಂಗಾರ ಮಾಡಿದ ಕೋಲುಗಳನ್ನು ಹಿಡಿದು ವೃತ್ತಾಕಾರದಲ್ಲಿ ಕುಣಿಯುತ್ತ ಕೋಲುಹುಯ್ಯುತ್ತಾರೆ. (ಪು. ೪೨).

ಕಾಡುಕುರುಬರು ತಮ್ಮ ಮದುವೆ ಆಚರಣೆಗೆಯಲ್ಲಿಯೂ ಹಾಡುತ್ತಾ ಕುಣಿಯುವುದು ವಿಶೇಷ. ಇಲ್ಲಿ ಅದರ ಒಂದು ಮಾದರಿ ನೀಡಿದೆ :

**ಕಾಡುಕುರುಬರ ಮದುವೆ ಪದ (ಕುಣಿತದೊಂದಿಗೆ)**

ಅಮ್ಮ ಬೇಸಾಂಜಲೇ
ನರಂಗಲೆ ಸಾಂಜಲೆ
ಮುದ್ದಾಂಗಲೆ ಸಾಂಜಲೆ
ಪೂವಾಂಗಲೆ ಸಾಂಜಲೆ
ಹೊನ್ನಾಂಗಲೆ ಸಾಂಜಲೆ

...ಚಿನ್ನದ ಒಲೆ ಕೊರೆದು
ಹಿಪ್ಪೆಯ ಸೌದೆ ದಳಲೊಡ್ಡಿ ॥

ಹಿಪ್ಪೆಯ ಸೌದೆ ದಳಲೊಡ್ಡಿ ಕಾದಅಗ್ನಿ
ಎರದ್ರು ನಿದ್ರಯ್ನನ ಮಗಳಿಗೆ ॥ ೨ ॥
ಎರದ್ರು ನಿದ್ರಯ್ನ ಮಗಳಿಗೆ ಮಗಳಿಗೆ
ಅಂಗಳ ದಾಟಿ ಹಸೆ ದಾಟಿ ॥ ೨ ॥

ಅಂಗಳ ದಾಟಿ ಅಸೆದಾಟಿ
ಬಾಲಿ ಮೀಯ್ದು ನೀರು
ತೆಂಗು ವಾಲಾಡಿ ಬೆಳೆದವು ॥
ತೆಂಗು ವಾಲಾಡಿ ಬೆಳೆದ ಮಿಕ್ಕಿದ ನೀರು
ಬಾಳೆ ವಾಲಾಡಿ ಬಎಳೆದಾವು
ಬಾಳೆ ವಾಲಾಡಿ ಬೆಳೆದ ಮಿಕ್ಕಿದ ನೀರು
ನಿಂಬಿ ವಾಲಾಡಿ ಬೆಳೆದಾವು ॥
ನಿಂಬಿ ವಾಲಾಡಿ ಬೆಳೆದು ಮಿಕ್ಕಿದ ನೀರು
ಕುಂಬುಳ್ದ ಹೂವೇನೆ ಕುಂಬಳದ ಕಾಯೇನೆ
ಕುಂಬಾರ ಹುಡುಗ್ನೀಗೆ ಬಸರಲ್ಲೆ ॥
ಕುಂಬಾರ ಹುಡುಗ್ನೀಗೆ ಬಸರಲ್ಲೆ ರತ್ನಕ್ಕ
ನಿನ್ನ ಮನಿದೇವರ ಹೆಸರು ಕರಕೋಳೆ ॥
ಹಾಗಲದ ಹೊವೇನೆ ಹಾಗಲದ ಕಾಯೇನೆ
ಹಾರುವೋರುಡಗ್ನಿಗೆ ಬಸರಲ್ಲೆ ॥
ಹಾರುವೋರುಡಗ್ನಿಗೆ ಬಸುರಲ್ಲೆ ಜಾನಕಿ
ನಿನ್ನ ಮುನಿದೇವರೆಸರು ಕರಕೋಳೆ ॥
ಈರುಳ್ಳೆನೆ ಈರುಳ್ಳಿಕಾಯಿನೆ
ಈರುಳ್ಳಿ ಜೋತು ಒರಗ್ಯಾವೆ ॥
ಈರುಳ್ಳಿ ಜೋತು ಒರಗ್ಯಾವೆ ರತ್ನಕ್ಕ
ನಿಡುಗಣ್ಣೆ ನನ್ನ ಜರದವಳೆ
ಮದುವೆ ಬಂದಾವೇ ಮೆಂಟಲಿನಿಂದವೆ
ಅವ್ವ ನಿನ್ನ ಅಳಿಯ ಕುಂಟುಕಾಲ ॥
ಮದುವೆ ಬಂದಾವೇ ಓಣಿಲಿ ನಿಂದವೆ
ಅವ್ವ ನಿನ್ನ ಅಳಿಯ ನಿಜಗಣ್ಣ
ಸೋಬನ್ನಿರೆ ಸೋ.....ಬಾನ ಬನ್ನಿರೆ"

(**ಆಕರ**: ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ ಪು. ೬೦–೬೧; ಸಂ; ಎ.ಸಿ. ಲಲಿತ; ೧೯೯೩).

# ಮಜ್ಜಣ ಕುಣಿತ ಮತ್ತು ಹಾಡು

ಮೈಸೂರು ದಳವಾಯಿಗೂ ಪಿರಿಯಾಪಟ್ಟಣದ ವೀರರಾಜನಿಗೂ ಭಾರೀ ಯುದ್ಧ ನಡೆದು ಪಿರಿಯಾಪಟ್ಟಣ ಮೈಸೂರು ದೊರೆಯ ಕೈವಶವಾಗುತ್ತದೆ. ಈ ಯುದ್ಧದಲ್ಲಿ ಎರಡೂ ಕಡೆಯ ಅನೇಕ ವೀರರು ಅಪ್ರತಿಮ ಶೌರ್ಯದಿಂದ ಹೋರಾಡಿ ಮಡಿಯುತ್ತಾರೆ. ಅಂಥಾ ಸಾಹಸಿಗಳಲ್ಲಿ ಪಿರಿಯಾಪಟ್ಟಣದ ಮುಸ್ಲಿಂ ವೀರ ಪೈಗೂರ್ ಫಕೀರನೂ ಒಬ್ಬ. ಆತನ ಸಮಾಧಿ ಮೈಸೂರು–ಮಡಿಕೇರಿ ರಸ್ತೆಯ ಬಾಲಾಬಾಯಿ ತೋಪು ಎಂಬಲ್ಲಿ ಈಗಲೂ ಇದೆ. ಅಲ್ಲಿ ಈಗಲೂ ಉರುಸ್ ನಡೆಸುತ್ತಾರೆ. ಪಿರಿಯಾಪಟ್ಟಣದ ಉಪ್ಪಾರಗೌಡರ ದ್ಯಾವಪ್ಪನವರ ಮನೆತನದವರು ಆ ಉರುಸ್‌ನಲ್ಲಿ "ಮಜ್ಜಣ ಕುಣಿತ" ಎಂಬ ಹೆಸರಿನಲ್ಲಿ ಕುಣಿತ ಮಾಡುವ ಸಂಪ್ರದಾಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಕುರಿತು ಡಾ। ಪಿ.ಕೆ. ರಾಜಶೇಖರ ಅವರು ಹೇಳುವ ಪ್ರಕಾರ –

ಯುದ್ಧದಲ್ಲಿ ಪೈಗೂರ್ ಫಕೀರನು ಮಹಾ ಸಾಹಸದಿಂದ ಹೋರಾಡಿ ದುರಂತ ಮರಣವನ್ನಪ್ಪುತ್ತಾನೆ. ಮೈಸೂರು ಅರಸರು ಪಿರಿಯಾಪಟ್ಟಣ ವಶ ಮಾಡಿಕೊಂಡ ಮೇಲೆ, ಅರಸನ ಜೊತೆ ಬಂದಿದ್ದ ಅನೇಕರು ಪಿರಿಯಾಪಟ್ಟಣದಲ್ಲೇ ನೆಲೆಗೊಳ್ಳುತ್ತಾರೆ. ಅವರಲ್ಲಿ ಉಪ್ಪಾರಗೌಡರೂ ಇದ್ದರು.

ಫಕೀರನ ಸಾವಿನಿಂದಾಗಿ ಆತನ ಸೋದರಿ ಅನಾಥೆಯಾಗುತ್ತಾಳೆ. ಆಕೆ ಫಕೀರನ ಸಮಾಧಿ ಬಳಿ ನಿತ್ಯ ಶೋಕಿಸುವುದನ್ನು ಗಮನಿಸಿದ ಉಪ್ಪಾರಗೌಡನೊಬ್ಬ ಆಕೆಗೆ ಸಾಂತ್ವನ ಹೇಳುತ್ತಾನೆ. ಆ ಮೂಲಕ ಅವರಿಬ್ಬರೂ ಹತ್ತಿರವಾಗಿ, ದಂಪತಿಗಳೂ ಆಗುತ್ತಾರೆ. ಅದಾದ ಮೇಲೂ ಆಕೆ ತನ್ನ ಅಣ್ಣನ ಸ್ಮರಣೆಯಲ್ಲಿ ಪಂಜ ಇತ್ಯಾದಿಗಳನ್ನು ರಹಸ್ಯವಾಗಿ ಪೂಜಿಸುತ್ತಿರುತ್ತಾಳೆ. ಅವಳ ಸಾವಿನ ನಂತರ ಅವನ್ನು ಗಮನಿಸಿದ ಆಕೆಯ ಗಂಡ, ಮಕ್ಕಳು ಆ ವಸ್ತುಗಳನ್ನು ಬಾಬಯ್ಯನ ಗುಡಿಗೆ ಕೊಟ್ಟುಬಂದರೂ ಅವು ಮತ್ತೆ ಆ ಮನೆಗೇ ಬಂದು ಪೆಟ್ಟಿಗೆಯಲ್ಲಿ ಇರುತ್ತಿದ್ದುವು. ಕೊನೆಗೆ, ಈ ಉಪ್ಪಾರಗೌಡ ಫಕೀರನ ಹೆಸರಲ್ಲಿ ಉರುಸ್ ಮಾಡಲು ಪ್ರಾರಂಭಿಸಿದರು. ಅದರ ಅಂಗವಾಗಿ ಅವರಲ್ಲಿ ಒಬ್ಬಾತ ಮುಂದಾಳು ವೀರ ಫಕೀರನ ವೇಷವನ್ನು ಹಾಕುವುದು, ಇತರರು ಯುದ್ಧಕ್ಕೆ ಹೋಗುವ ವೀರರ ವೇಷ ಹಾಕಿ ಕುಣಿಯುವ ಒಂದು ಕುಣಿತ ಬಳಕೆಗೆ ತಂದರು. ಪೈಗೂರ ಫಕೀರನ ವೇಷದವ ಪಿರಿಯಾಪಟ್ಟಣದ ಕಾಳಗಕ್ಕೆ

ಸಂಬಂಧಿಸಿದ ಹಾಡುಗಳನ್ನು ಹಾಡುತ್ತಿರುತ್ತಾನೆ. "ಇದು ಹೆಚ್ಚು ಕಡಿಮೆ ವೀರಭದ್ರನ ಕುಣಿತದಲ್ಲಿ ವಚನವನ್ನು ಹೇಳುವ ರೀತಿಯಲ್ಲಿಯೇ ಇರುತ್ತದೆ. ನಿರೂಪಕ, ಕಥೆಯ ಒಂದು ಘಟ್ಟವನ್ನು ಮುಟ್ಟಿದ ಕೂಡಲೇ ಉಳಿದ ಸೈನಿಕ ವೇಷಧಾರಿಗಳ ತಂಡ ಕತ್ತಿಯನ್ನು ಝಳಪಿಸುತ್ತ (ಕತ್ತಿಗಳಿಗೆ ಬದಲಾಗಿ ಚಾವುಟಿಗಳ ಬಳಸುತ್ತಾರೆ) ಕುಣಿಯಲು ತೊಡಗುತ್ತಾರೆ. ಇದನ್ನು ಮಜ್ಜುಣ ಕುಣಿತವೆಂದು ಕರೆಯುತ್ತಾರೆ..... 'ಮೊಮದನ ಕುಣಿತ' ಎಂಬುದು ಜನರ ಬಾಯಲ್ಲಿ "ಮಜ್ಜುಣ ಕುಣಿತ"ವಾಗಿರಬಹುದೆಂದು ಕಾಣುತ್ತದೆ.

ಪಿರಿಯಾಪಟ್ಟಣದ ಕಾಳಗ ಜನಪದ ವೀರಮಹಾಕಾವ್ಯವಾಗಿ ಜನರಲ್ಲಿ ಪ್ರಸಿದ್ಧವಾಗಿದೆ. ಡಾ। ಪಿ.ಕೆ. ರಾಜಶೇಖರ ಸಂಪಾದಿಸಿರುವ ಆ ಕಾವ್ಯದಿಂದ ಮಜ್ಜುಣ ಕುಣಿತದ ಸಂದರ್ಭದಲ್ಲಿ ಹಾಡುವ ಭಾಗವನ್ನು ಇಲ್ಲಿ ಆಯ್ದುಕೊಟ್ಟಿದೆ.

**ಖಾನ ದೇನೆ ವಾಲೋಂಕು ಮೈ ನಹೀ ಭೂಲ್ ತಾ**

ತಂದನಾನ ತಂದಾನ ತಾನನಾ
ತಂದೇನಾನ
ತಂದನಾನ ತಂದಾನ ತಾನನಾ । ಸೊಲ್ಲು ।

[1]ಈರಾಜ ದೊರೆಗಳು ಹಿರಿದ ಕತ್ತಿಯ ಒರೆಗೆ ಹಾಕ್ಕೊಂಡು
ಮುರಿದು ಹಿಂದಕ್ಕೆ ಬರುವಾಗ
ಎಲ್ಲೆಲ್ಲು ಕಣ್ಣಿಗೆ ಬೀಳುವಂತ ರುಂಡ ಮುಂಡಗಳ ಕಂಡರು
ಹರಿದು ಹೋಗೋ ರಗ್ತುವನ್ನು ಕಂಡರು
ಕೊಳೆತು ನಾರುವಂತ ಹೆಣದ ರಾಶಿಗಳ ಕಂಡು
ಕುಟ್ಟಿಕೊಂಡರು ತಮ್ಮ ತಲೆಯ
ನನ್ನನ್ನ ಉಂಡವರು ನನ್ನ ಎಲಡಗೆ ಮೆಲಿದವರು
ಯಾರೂ ಇರ್ನಿಲ್ವಪ್ಪ ನನ್ನ ಪಟ್ಟಣದೊಳಗೆ ಅನುತ್ಥೇಳಿ
ಈರಾಜ ದೊರೆಗಳು ಕುಟ್ಟಿಕೊಂಡರು ತಮ್ಮ ಬಾಯಿಗಳ– ೭೪೨

ಅಯ್ಯ – ಈರಾಜದೊರೆಗಳ ಮಾತುಗಳನ್ನೆಲ್ಲ
ಫೈಗೂರ್ ಫಕೀರ
ಫಕೀರ್ನ ಮಠ್ದಲ್ಲಿ ಕೂತು ಕೇಳಿಕೊಂಡ । ೨೨೪೦

ನನ್ನ ದೊರೆಯ ತಲೆಯು ಹೋಗುವುದು
ಕಣ್ಣಿಂದ ನೋಡಿ
ನಾನುವೆ ಹಾಗೆಯೇ ಇರಬಾರದು । ೨೨೪೧

ವಾಲು ಮಸೀತೀಲಿ ಕೂತು ಕೇಳಿಕೊಂಡು
ಬಡಫಕೀರ
ಬರುವ ಈರಾಜ್ನ ಬಂದು ತಡುಕೊಂಡ । ೨೨೪೨

ಟೋಪಿ ಕಳ್ದು ಸಲಾಮು ಮಾಡಿದ
ಆ ಫಕೀರ್‌ಸಾಬಿ
ಈರಾತ್ನ ನೋಡಿ ಹೊಟ್ಟೆ ಉರುಕೊಂಡ । ೨೨೪೩

ಅಯ್ಯೋ ಪಾಪ ಎಂತೆ ಗತಿ ಬಂತು
ಅಯ್ಯೊ ದೇವ್ರೆ
ಎಂತೆಯವುರ್ಗೆ ಎಂತೆ ಸ್ಥಿತಿ ಬಂತು ! ೨೨೪೪

ಸುಮ್ಕನೆ ನಿಂತ ರಾಜರ ನೋಡುಬುಟ್ಟು
ಆ ಬಡಫಕೀರ
ಏನಂತ ಮಾರಾಜರ ಕೇಳಿದ । ೨೨೪೫

ಎತ್ತ ಕಡೆಗೆ ಓಡುತ ಹೋಗುತೀರಿ
ಈರಾಜದೊರೆಯೆ
ನೀವು ಹೋಗುವ ಸಂಗತಿ ಹೇಳಿರಯ್ಯ । ೨೨೪೬

ಆಪ್ ಕ್ಯೂಂ ಚುಪ್ ಖಡೇ ಹೈ ಮಾಹಾರ್
ಮೈ ಹೂಂ
ಆಪ್ ಸೋಚೊ ಮತ್ ಮಹಾರಾಜ್* । ೨೨೪೭

ನಿನ್ನ ಕಡೆಯ ಬಂಟ ನಾನಪ್ಪ
ಈರಾಜಭೂಪ
ನಿನ್ನ ಕಡೆಯ ವಜ್ಜುರ ನಾನಪ್ಪ । ೨೨೪೮

ನನ್ನ ಕಡೆಯ ವಜ್ಜುರನಾದ್ಮೇಲೆ
ಬಡ ಫಕೀರ್ಸಾಬಿ
ನನ್ನ ಪಟ್ಣ ಒಡಿಯಾಗೆಲ್ಲಿ ಹೋಗಿದ್ದೆ । ೨೨೪೯

ನನ್ನ ಕಡೆಯ ಬಂಟನಾಗಿದ್ರೆ
ಬಡ ಫಕೀರ್ಸಾಬಿ
ಅವ್ರು-ಕೊಳ್ಳಾಲ ಮಾಡಾಗೆಲ್ಲಿಗೋಗಿದ್ದೆ । ೨೨೫೦

* ತಾವು ಸುಮ್ಮನೆ ಯಾಕೆ ನಿಂತಿರಿ ಮಹಾರಾಜರೆ – ನಾನಿದ್ದೇನೆ ತಾವು ಚಿಂತಿಸಬೇಡಿ ಮಹಾರಾಜ

ನಿನ್ನ – ಭಾರಿ ಭಾರಿ ಮಜ್ಜುರರಿರುವಾಗ
ನಾ ಬಂದಿದ್ರೆ
ನನ್ನ ನೋಡಿ ನೆಗ್ತಾ ಇದ್ದರಪ್ಪ । ೨೨೫೧

*ನನ್ನ ಗುರ್ತು ನಿನ್ಗೆ ಸಿಕ್ಕಿಲ್ಲ ಕಾಣಪ್ಪ
ಮರ್ತಿದ್ರೆ ಕೇಳು
ನಾನು ಪೈಗೂರ್ ಫಕೀರ ಕಾಣಪ್ಪ । ೨೨೫೨

ನಮ್ಮ ತಂದೆ ತೀರೋದ ಕಾಲದಿಂದ
ನಿಮ್ಮಪ್ಪಾಜಿಯವ್ರುರು
ನನ್ಗೆ – ಹಿಟ್ಟು ಬಟ್ಟೆ ಕೊಟ್ಟು ಸಾಕಿದರು । ೨೨೫೩

ನಿನ್ನ – ಕುದುರೆ ಚಾಕ್ರೀಲಿ ಮೊದುಲೆ ಇದ್ನಲ್ಲೊ
ಈರಾಜದೊರೆಯೆ
ನೀನು – ಹೇಳೀಕೆ ಕೇಳೀಕೆ ಮಾತ ಕೇಳಿದೆ । ೨೨೫೪

ಹೇಳೀಕೆ ಕೇಳೀಕೆ ಮಾತ ಕೇಳುಕೊಂಡು
ಈರಾಜ ಅರಸೆ
ನನ್ನ ಸಂಬ್ಳದ ಬಾಯ್ಗೆ ಮಣ್ಣ ಹಾಕೀದೆ । ೨೨೫೫

ತುಮ್ನೆ ಗಲ್ತೀ ಕಿ ಹೈ ಎ ಸಚ್ ಹೈ
ಲೇಕಿನ್ ಮೈ
ಗಲ್ತೀ ನಹೀ ಕರೂಂಗ । ೨೨೫೬

ಚಹುಲಿ ಕೋರೋಂ ಕಿ ಬಾತ್ ಸುನ್‌ಕರ್
ಈರಾಜ್‌ಭೂಪ್
ಮುಝೆ ಕಾಂ ಸೆ ನಿಕಾಲ್ ದಿಯಾ ತುಮ್ನೆ । ೨೨೫೭

ತೆರಾ ನಮಕ್ ಮೈ ಖಾಯಾ ಹೂಂ
ಈರಾಜ್‌ಭೂಪ್
ಖಾನ ದೇನೆ ವಾಲೋಂಕು ಮೈ ನಹೀ ಬೂಲ್ ತಾ । ೨೨೫೮

---

* ನೀನು ತಪ್ಪಿ ನಡೆದಿದ್ದೀಯೆ ನಿಜ – ಆದರೆ ನಾನು
ತಪ್ಪಿ ನಡೆಯುವವನಲ್ಲ ।
ಚಾಡಿಕೋರರ ಮಾತನ್ನು ಕೇಳಿಕೊಂಡು – ಈರಾಜಭೂಪ
ನನ್ನನ್ನು ಕೆಲಸದಿಂದ ನೀನು ತೆಗೆದು ಹಾಕಿದ್ದೆ ।
ನಿನ್ನ ಉಪ್ಪಿನ ಋಣ ನನ್ನ ಮೇಲಿದೆ – ಈರಾಜಭೂಪ
ಅನ್ನ ಇಕ್ಕಿದವನನ್ನು ನಾನು ಮರೆಯುವವನಲ್ಲ ।

ನೀನು – ಧೀರರ್‍ಯಾರು ಅಂತ ಮನದಲ್ಲಿ ತಿಳಿನಿಲ್ಲ
ಈರಾಜದೊರೆಯೆ
ನಾನು ಧೀರ ಅನ್ನಾದ ಈಗ ನೋಡಪ್ಪ ।

ನಿನ್ನ – ಮಜ್ಜರನಾಗಿ ನಾನು ಇರುವಾಗ
ಈರಾಜದೊರೆಯೆ
ನೀನು ಇದ್ಯಕೆ ಹೋಗಾದು ಬ್ಯಾಡಯ್ಯ ।

ಪಾಲಿಸಯ್ಯ ಈಳ್ಯಾವ ನನಗೀಗ
ಆ ಮೈಸೂರೋರ
ನುಗ್ಗಿ ನುರಿಯ ಮಾಡಿ ಬರುತೀನಿ ।

ಸಂಬಳ ತಿಂದಿಲ್ಲ ಸಾರ್‍ಕೆ ತಿಂದಿಲ್ಲ
ಸರ್ದಾರ ನೀನು
ಸಾಯಬ್ಯಾಡ ತಣ್ಣಗೆ ಬದುಕಯ್ಯ

ಸಂಬಳ ತಿಂದೆನು ಸಾರ್‍ಕೆ ತಿಂದೆನಲ್ಲೊ
ನಿನ್ನ ಪಟ್ಣದಲಿ
ಪಡಿ ಪಡಿ ಹೊನ್ನ ಅಳವದು ಉಂಡೆನಲ್ಲ ।

ಪಡಿ – ಪಡಿ ಹೊನ್ನ ಅಳೆದು ಉಂಡೆನಲ್ಲ
ಮಾಸ್ವಾಮಿಯವರೆ
ಅದು – ನಿನ್ ಮನಿಯ ಉಪ್ಪಿನ ರುಣವಲ್ವ ।

ಉಪ್ಪಿನ ರುಣಕೆ ತಪ್ಪಿ ನಡೆದರೆ
ಕೈಲಾಸದೊಳಗೆ
ನನ್ನಲ್ಲಾ ಮೌಮದಿ ಒಪ್ಪದಿಲ್ಲವಲ್ಲೊ ।

ನನ್ನಲ್ಲ ಮೌಮದಿ ಒಪ್ಪದಿಲ್ಲವಲ್ಲ
ಕೈಲಾಸದೊಳಗೆ
ನನ್ನ ಸತಾಸಿವ ಮೆಚ್ಚದಿಲ್ಲವಲ್ಲ ।

ನನ್ನ ಸತಾಸಿವ ಮೆಚ್ಚದಿಲ್ಲವಲ್ಲ
ನನ್ನದೊರೆಯೆ
ಉಪಿನ ರುಣವ ತೀರಿಸಿ ಬುಡುತೀನಿ ।

ಮೂರು ತಿಂಗಳ ಚಾಕ್ರಿ ಮಾಡಿದ್ದಿ
ನನ್ನ ದೊರೆಯೇ
ಆರು ತಿಂಗಳ ಸಂಬಳ ತಿಂದಿದ್ದಿ । ೨೨೬೮

ನಿನ್ನ ಉಪ್ಪಿನ ರುಣ್ವ ತೀರುಸಬೇಕಪ್ಪ
ಈರಾಜದೊರೆಯೆ
ನೀವ್ ಮಾಡ ಜಗಳ ನಾನು ಮಾಡುತೀನಿ । ೨೨೬೯

ನಿಮ್ಮಡ್ದೀರ ಬುಟ್ಟು ನೀವ್ಯಾತುಕ್ಕೋಗುತೀರಿ
ಮೈಸೂರ್ ಜಿಲ್ಲಕೆ
ಹರಸಿ ಕೊಡಿ ನಿಮ್ ಕೈಯಿನ ಆಯ್ದುವ । ೨೨೭೦

ಮುಸುಲ್ಮಾನ್ರೋನ ಮಾತ ಕೇಳಿದರು
ಈರಾಜ ಆರಸು
ಎರ್ಡು – ಕಣ್ಣಿನೊಳಗು ನೀರ ತಗಿದರು । ೨೨೭೧

ಅವ್ನು – ಜಗ್ಳ ಮಾಡ್ದಿದ್ರೂ ಹಾಳಾಗಿ ಹೋಗಲಿ
ಮುಸಾಲ್ಮಾನ್ರೋನು
ಇಂತೆ – ಧೈರ್‍ಯದ ಮಾತ ನನಗೆ ಹೇಳಿದ । ೨೨೭೨

ನನ್ಗೆ – ಚಾಡಿ ಹೇಳಿದ ವಜ್ಜೀರ್ರ ನೋಡನಂದ್ರೆ
ಈವತ್ತುನ್ ಜೀವ್ವು
ಯಾವ ವಜ್ಜುರ್‍ರು ಉಳುದೆ ಇಲ್ಲುವಲ್ಲ । ೨೨೭೩

ಎಲ್ಲ ಧೀರುರ್‍ಗ್ಳ ಇವ್ನು ಭಾರಿ ಸರ್ದಾರ
ಅಯ್ಯಾ ಫಕೀರ
ಸತ್ಯದ ಜಾತಿ ನಿನ್ನ ಜಾತಿ ಅಂದರಂತೆ । ೨೨೭೪

ಸತ್ಯವಾಗ್ಲು ನೀ ಜಗಳ ಮಾಡಿಯಪ್ಪ
ಮೈಸೂರೋರ್ ಮ್ಯಾಲೆ
ನಿಜುವಾಗ್ಲು ನೀ ರಣಾಗ್ರ ಮಾಡಿಯಪ್ಪ ೨೨೭೫

ಮಾಡದ್ದು ಬಿಡದ್ದು ನಿನುಗೆಂಗೆ ತಿಳುದ್ದು
ಈರಾಜೆ ಅರಸೆ
ನೀನು – ಬಿಸುಲ್ ಮಾಗ್ಡಿ ಮ್ಯಾಲೆ ನಿಂತುಕೊಂಡು ೨೨೭೬

ಬಿಸುಲ್ ಮಾಗ್ಡಿ ಮ್ಯಾಲೆ ನಿಂತ್ಕೊಂಡು
ಈ ರಾಜದೊರೆಯೆ
ದುರ್ಬೀ ಕೊಳಾವ್ಯ ಕಣ್ಣೀಗಾಕೊಂಡು । ೨೨೭೭

ದುರ್ಬೀ ಕೋಳವ್ಯಾ ಕಣ್ಣೀಗಾಕೊಂಡು
ಈರಾಜದೊರೆಯೆ
ನಿಂತು ನೋಡಪ್ಪ ನನ್ನ ಜಗಳಾವ । ೨೨೭೮

ಅಪ್ಪಣೆ ಕೊಟ್ಟು ಜಗಳಕೆ ಕಳುಗಯ್ಯ
ಇಲ್ಲಾದಿದ್ದಾರೆ
ನಾಲಿಗೆ ಹಿರ್‍ಕೊಂಡು ಪ್ರಾಣ ಬುಡುತೀನ್ಯೊ ॥ ೨೨೭೯

ಅಂಗ್ಡಿ ಬೀದಿಯೊಳುಗಾಯ್ಕೊಂಡ್ ತಿನ್ನುವ
ಮುಸುಲ್ಮಾನ್ರ ಬಡಫಕೀರ
ಇಂತೆ ಸಾಮರ್ಥ್ಯದ ಮಾತ ನನ್ನ ಕರ್ನಕ್ಕೆ ಹೇಳಿದ ಮ್ಯಾಲೆ

ಇವುನೆ ಭಾರಿ ವಜ್ಜುರ ಎಂದು ನನಗರ್ಥವಾಗಿದೆ
ಹಿಡುಕೊಳಪ್ಪ ಒಂದು ಚೇಜ್ಯ
ಒಪ್ಪಿದ ಚೇಜಿ ಮ್ಯಾಲೆ ಕೂತುಕೊಂಡು
ಮಾತಿಗೆ ತಪ್ಪದೆ ಹೋಗಪ್ಪ ಮೈಸೂರು ರಾಜ್ಯಕೆ
ಅವುರಿನ್ನು ಸೇರಿಲ್ಲವೇನೊ ದಳವಾಯವ್ರ ದಂಡುಧಾಳಿ
ನೀನು ಸತ್ಯದ ವೋಮ್ಸುದವನಾದರೆ ಚಂಡಾಡು
ಮೈಸೂರೋರ ಸಿರಗಳ
ಅವುರ ಸಿರಗಳ ಚಂಡಾಡುದರೆ ನಿನ್ನ ಕೊಂಡಾಡುತೀನಿ ಎಂದು
ಹರಸಿಕೊಟ್ಟರು ರಣಾಗ್ರದ ಕತ್ಯಾ – ವ ೪೩

ಕತ್ತಿಯ ಕೈಲಿ ಹಿಡಿದುಕೊಂಡು
ಪೈಗೂರ್ ಫಕೀರ
ಕತ್ತಿ ಬಾಯಿ ಸವರಿ ನೋಡಿದನು । ೨೨೮೦

ಜಗ್ಗಕೆ ಕತ್ತಿ ಮೊಂಡ ಅಂದನಲ್ಲೊ
ಪೈಗೂರ್ ಫಕೀರ
ಸಾಣೇಕಲ್ಲಲಿ ಬೇಗನೆ ಮಸ್ತನೊ । ೨೨೮೧

ರಣಾಗ್ರದ ಕತ್ಯಾ ಕೈಯಲ್ಲಿ ಹಿಡಿದು
ಅವ ಸಾಕತಿದ್ದ ಜೇಜಿ ಹಿಡೀದ
ಜೇಜಿ ಎಂದರೆ ಬುಲ್‌ಬುಲ್ ಮೋತಿ ಎಂಬುವ ಕುದುರೆ
ಬುಲ್‌ಬುಲ್ ಮೋತಿ ಎಂಬುವ ಕುದುರೆ ಏರಿ ಬಡಫಕೀರ– ವ ೩೫

ಏಗದಲ್ಲಿ ಕುದುರೆ ಹಾರಿಸಿದ
ಪೈಗೂರ್ ಫಕೀರ
ಫಕೀರ್ನ ಮಠದ ಮುಂದೆ ನಿಲ್ಲಿಸಿದ । ೨೨೮೨

ಕುದ್ರೆಯಿಂದಿಳಿದು ಬ್ಯಾಗನೆ ಬಂದನಲ್ಲ
ಆ ಬಡಫಕೀರ
ಕೈಕಾಲು ಮೊಕುವ ತೊಳೆದು ಕೊಂಡನಲ್ಲ । ೨೨೮೩

ಗದ್ದುಗೆ ಮುಂದೆ ಕಣ್ಣ ಮುಚ್ಚುಕೊಂಡು
ಪೈಗೂರ್ ಫಕೀರ
ಮನಸುನಲ್ಲಿ ದೇವರ ನೆನುಕೊಂಡು । ೨೨೮೪

ಕೊರಳೆತ್ತಿ ನಮಾಜನ ಮಾಡಿದನು
ಪೈಗುರ್ ಫಕೀರ
ಕೈಗಳೆತ್ತಿ ಅಲ್ಲಾನ ಕರದನು । ೨೨೮೫

ಅದು ಅಲ್ಲಾ ಇದು ಅಲ್ಲಾ ಕಾಣಿರಪ್ಪ
ಈ ಜಗತ್ತಕೆ
ನಾನು ಅಲ್ಲಾ ನೀನು ಅಲ್ಲಾ ಕಾಣಿರಪ್ಪ । ೨೨೮೬

ಅವ್ನು ಅಲ್ಲಾ ಇವ್ನು ಅಲ್ಲಾ ಕಾಣಿರಪ್ಪ
ಈ ಲೋಕುಕೆಲ್ಲ
ಒಬ್ಬನೆ ಒಬ್ಬ ಅಲ್ಲಾ ಕಾಣಿರಪ್ಪ । ೨೨೮೭

ಸಕ್ಕರೆ ಓದಿಸಿ ನಮಾಜ ಮಾಡಿದ
ಪೈಗೂರ್ ಫಕೀರ
ಮಂಡಿ ಊರಿ ಸಲಾಮ ಮಾಡಿದ । ೨೨೮೮

ಮಠವ ಮೂರು ಬಳಸ ಬಂದನು
ಪೈಗೂರ್ ಫಕೀರ
ಕುದುರೆನೇರಿ ರಣಕೆ ಹೊರಟನು । ೨೨೮೯

ಹಾರುಸವುನೆ ಕುದುರ್‍ಯಾ ಸನ್ನೆಯಿಂದ ಏಗದಲ್ಲಿ
ಮುಗುಲು ಮಂಡಲಕೆ ಪಕ್ಷಿ ಹಾರುದಂಗೆ
ಆರ್ಭಟದಲಿ ಕುದುರೆ ಗಂಗರಾಜರ ಛತ್ರಕೆ ಬರುತ್ತೈತೆ
ಅಷ್ಟೊತ್ತುಗೆ ಅಲ್ಲಿಗೆ
ಧರ್ಮದ ದಳವಾಯಿ ಮಾಪ್ರಭು ಬಂದಿಳುದವುರೆ

ರಣಸೂರನ ರಾಜ್ಯ ಪಿರಿಯಾಪಟ್ಟಣ ಎಂಬುವ ದೇಸ
ಆದ ಜಯಿಸಿ ಕಾಸೆ ಕಟ್ಟಿ ಮೀಸೆ ಹೊತ್ತುಕೊಂಡು
ನಮ್ಮ ಧರ್ಮದ ಪ್ರಭು ಬರುತವುರೆ ಎಂದು ಕೇಳಿ
ಓಡೋಡಿ ಬಂದು ಮುತ್ತುಗೆ ಆಗವ್ರೆ ಮೈಸೂರ ಪ್ರಜೆಗಳೆಲ್ಲ
ಅವುರುಗೆತ್ತೆತ್ತಿ ಕೈಯ ಮುಗುದುರು ಆಸೆಯುಳ್ಳ ಜನರು
ಹೂವುನ ಮಾಲಿಕೆಯ ಅವುರ ಕೊರಳಿಗಿಟ್ಟು
ಕೊಂಡಾಡಿದರು ದಳವಾಯಿ ಸೊರಣೆಯ
ಕೊಡಗಿನ ರಾಜ್ಯ ಪಿರಿಯಾಪಟ್ಟಣ ಏಳೇಳು ತಲೆಯಿಂದ
ಯಾವ ಸೂರರಿಗೂ ಸಾಧ್ಯವಾಗಿರನಿಲ್ಲ
ದಳವಾಯಿಯವರ ದಿನದಲ್ಲಿ ಪಿರಿಯಾಪಟ್ಟಣ
ಮೈಸೂರಿಗಾಯಿತು ಎಂದು
ಮಾಜನಗಳೆಲ್ಲ ಕೊಂಡಾಡಿದರು
ಕೊಂಡಾಡಿ ದೊರೆಯವರ ಕೀರ್ತಿಭಾರಮಾಡಿ
ಅಪ್ಪಾರ ಆನಂದದಿಂದ ಹೊಗಳಿದರು ಮೈಸೂರು ಪ್ರಜೆಗಳು
ಅಷ್ಟೊತ್ತುಗೆ ಪಿರಿಯಾಪಟ್ಟಣದ ಬಡಫಕೀರನು
ಮೈಸೂರು ರಾಣ್ಯವ ಹರುಸುಕೊಡು
ಬಿರುಗಾಳಿ ಬಂದಂಗೆ ಬತ್ತವುನೆ
ಅಷ್ಟು ದೂರದಿಂದಲೆ ಅಬ್ಬರುಸುತವುನೆ
ಮೈಸೂರ್ ವಾಲೆ ಮೈ ಹೂಂ ಅಭೀ ಮೈಹೂಂ–* ವ ೪೫

ಟೆಹೆರೊ ಟೆಹೆರೊ ಕಹಾ ಜಾರಹೇಹೋ
ಮೈಸೂರ್ ವಾಲೆ
ಆಜು ತುಮೆ ಖಂತ ಕರ್‌ದೂಂಗಾ । ೨೨೯೦

ಮುಂಗಾರು ಮ್ವೋಡ ಮೊಲಗಿದಪ್ಪಂದ
ಆ ಬಡಫಕೀರ
ಮುಂಗಾರ ಮಿಂಚು ಹೊಳದುದಪ್ಪಂದ । ೨೨೯೧

ಸಿಡಿಲು ಬಂದು ಎರಗಿದಪ್ಪಂದ
ಆ ಬಡಫಕೀರ
ನಡುಗಿಸಿದ ಎಲ್ಲುರ‍್ನು ಗಳುಗೇಲಿ । ೨೨೯೨

---

* ಮೈಸೂರಿನವರೆ ನಾನಿದ್ದೇನೆ ಇನ್ನು ವಾನಿದ್ದೇನೆ
ನಿಲ್ಲಿ ನಿಲ್ಲಿರಿ ಎಲ್ಲಿಗೆ ಹೋಗುವಿರಿ–ಮೈಸೂರಿನವರೆ
ನೀವು ಹುಟ್ಟಿದ ದಿನವನ್ನು ಇಂದು ಕಾಣಿಸುತ್ತೇನೆ

ಕುರಿಗಳ ಹಿಂಡುಗೆ ಹೆಬ್ಬುಲಿ ಎರ್ಗಿದಂಗೆ
ಆ ಬಡಫಕೀರ
ಹರ್ವಾಡಿಕೊಂಡು ಸರದಾರ‍್ರ ಕಡಿದನು । ೨೨೯೩

ಕಬ್ಬಿನ ಗದ್ದೆಗೆ ಮದ್ದಾನೆ ನುಗ್ಗಿದಂಗೆ
ಆ ಬಡಫಕೀರ
ಅಬ್ಬುರ್ಸ್ ಅಬುರ್ಸ್ ಇಬ್ಬಿಬ್ರ ಕಡಿದಾನು । ೨೨೯೪

ಹರಿಯೋ ಹಾವಿಗೆ ಗರುಡ ಎರಗಿದಂಗೆ
ಪೈಗೂರ್ ಫಕೀರ
ಮುರುದು ಮುರುದು ನುಗ್ಗಿ ಕಡಿದಾನೊ।

ಅಂತರಕಾರಿ ಅಬ್ಬರ ಮಾಡಿಕೊಂಡು
ಪೈಗೂರ್ ಫಕೀರ
ನೂರು ನೂರು ತಲೆಯ ಕಡಿದನು । ೨೨೯೬

ಅಲ್ಲಿಗೆ ಹಾರುತ ಇಲ್ಲಿಗೆ ಮಿಂಚಿದನು
ಪೈಗೂರ್ ಫಕೀರ
ಅಲ್ಲಲ್ಲೆ ಹೆಣಗಳ ರಾಸಿ ಒಟ್ಟಿದನು । ೨೨೯೭

ಹಕ್ಕಿಯಂಗೆ ಹಾರುತ ಕಡಿದನು
ಪೈಗೂರ್ ಫಕೀರ
ಕಪ್ಪೆಯಂತೆ ಕುಪ್ಪಳ್ಸಿ ಕಡಿದನು । ೨೨೯೮

ಬಾಣದಿಂದ ಅನಕಲ್ಲುದ್ರೋಹಂಗೆ
ರಣಾಗ್ರದಲ್ಲಿ
ಮೈಸೂರೋರ ತಲೆಗಳುದುರಿದೋ । ೨೨೯೯

ಕಟ್ಟೇ ಮಳ್ವಾಡಿ ಪುಟ್ಟರಾಜರಸರ
ಕಂಡಾನು ವೀರ
ಅಟ್ಟಾಡಿಕೊಂಡು ಜುಟ್ಟು ಹಿಡಿಕೊಂಡು ೨೩೦೦

ಮಾದುರ್ ಚೋತ್ನ ಮುಂದಲೆ ಹಿಡಿದನು
ಪೈಗೂರ್ ಫಕೀರ
ನಮ್ಮಕ್ ಹರಾಮನ ಮೂಗನು ಕೂದಾನು । ೨೩೦೧

ಹೊಡೆದಾನಣ್ಣ ಒಂದೇ ಹೊಡತಕೆ
ಪೈಗೂರ್ ಫಕೀರ
ಕಡಿದಾನಣ್ಣ ಎರಡೇ ತುಂಡೀಗೆ । ೨೩೦೨

ಉಪ್ಪಿನ ರುಣಕೆ ತೆಪ್ಪಿದ ಪಾಪಿಯೆಂದು
ಮಟ್ರಾಜರ್ಸನ
ಸಿರುಸ್ವ-ಗಳಕೆ ಕಟ್ಟಿ ಆಕಾಸಕೇರಿಸಿದ ೨೩೦೩

ಕಂಡರಲ್ಲ ಮೈಸೂರ ವಜ್ಜುರರು
ಆ ವಜ್ಜುರರೆಲ್ಲ
ಜೀವ ಕೈಯಲ್ಲಿ ಹಿಡ್ಕೊಂಡು ನಿಂತರು । ೨೩೦೪

ಉಸುರಿಲ್ದಂಗೆ ನಿಂತಿದ್ದ ರಾಣ್ಯಾವ
ಪೈಗೂರ್ ಫಕೀರ
ಹುಬ್ಬ ಕುಣ್ಸುತ ಕ್ಯಾಕೆ ಹಾಕಿದ । ೨೩೦೫

ತುಂ ಬಡೇ ಬಹಾದ್ದೂರ್ ಹೋ ಕ್ಯಾ
ತಾಕತ್ ಹೋ ತೊ
ಮೆರೆ ಸಾಥ್ ಆಯ್ ಕೆ ಲಡಾಯ್ ಕರೋ* । ೨೩೦೬

ಅಬ್ಬರ ಮಾಡಿ ಮುಂದೆ ನುಗ್ಗಿದನು
ಪೈಗೂರ್ ಫಕೀರ
ಆಕಾಸ ಗುಡ್ಗೀತು ಭೂಮಿ ನಡುಗೀತು । ೨೩೦೭

ಬಲಕೆ ಒಂದು ಬೀಸ ಬೀಸಿದನು
ಪೈಗೂರ್ ಫಕೀರ
ಬಳೆಯ ಹೇರು ಬಿದ್ದು ರಬ್ಬಂದೊ । ೨೩೦೮

ಎಡಕೆ ಒಂದು ಬೀಸ ಬೀಸಿದನು
ಪೈಗೂರ್ ಫಕೀರ
ಅಡಕೆ ಹೇರು ಬಿದ್ದು ರಬ್ಬಂದೊ । ೨೩೦೯

ಫಕೀರ್ನ ಹೊಡ್ತ ತಡೆಯನಾರದೆ
ಮೈಸೂರು ರಾಣ್ಯ
ಹಿಂದಕ್ಕೊಂದು ವಜೀಲ್ ಬೀಗಿತು । ೨೩೧೦

---

* ನೀವೇ ಮಹಾವೀರರೇನ್ರೊ – ತಾಕತ್ತಿದ್ದರೆ
ಬನ್ನಿರೊ ನನ್ನ ಜೊತೆ ಹೋರಾಡಿ

ನಿಲ್ಲಿರೊ ಎಲ್ಲಿಗೆ ಹೋಗುತೀರಿ
ಮೈಸೂರೋರೆ
ನೀವು – ಹುಟ್ಟಿದ ದಿನವ ಈವತ್ತು ಕಾಣ್ಸುವೆ । ೨೩೧೧

ಮೈಸೂರ್‌ವಾಲೆ ಘರ್ ಮೆ ಬೋಲೆ ಕೆ ಆಯಾ ಕ್ಯಾ ?
ತಾಕ್ ಹೋತೋ ಆವೋ ಆವೋ ಮೆರೆ ಸಾಥ ಲಡಾಯಿ ಕರೋ
ಡರ್ ಕೆ ಕ್ಯೂಂ ಬಾಗ್ ರಹೇ ಹೋ ಮೈಸೂರ್ ವಾಲೆ
ತುಮ್ ಕ್ಯಾ ಮರ್ದೋಮೆ ಸೇ ಹೋ
ತುಮ್ ಖೇಳ್ ಖೇಲ್ನೆ ಆಯೇ ಹೋ ಹ್ಹಹ್ಹಹ್ಹಾ*– ವ ೪೬

ಕಳ್ಳ ಜಗಳ ಮಾಡ ಬ್ಯಾಡಿರೊ
ಮೈಸೂರಿನೋರೆ
ಎದುರ್ಗೆ ಬಂದು ಜಗಳ ಮಾಡಿರೊ । ೨೩೧೨

ನೀವು ಕಳ್ಳ ಜಗಳ ಮಾಡಿದರೆ
ಮೈಸೂರಿನೋರೆ
ನಿಮ್ಮ–ಚಿತ್ರಾ ಕಡಿತಾವ ಕಡಿಯುವೆ । ೨೩೧೩

ಮದ್ದಿನ ಮನೆ ಸಿದ್ದನಾಯಕನ
ಆ ಮುಸುಲ್ಮಾನ್ರೋನು
ಕಡಿದಾನಣ್ಣ ಎರಡೇ ತುಂಡಿಗೆ । ೨೩೧೪

ಒಕ್ಕಲಗೇರಿ ಲಕ್ಷ್ಮಯ್ಯಗೌಡರ
ಆ ಮುಸುಲ್ಮಾನ್ರೋನು
ಒಂದೆ ಹೊಡ್ತಕೆ ಕತ್ತರಿಸೆಸೆದನು । ೨೩೧೫

ಬನ್ನೂರಿಗೆಚ್ಚೀನ ಹೊನ್ನೇಯಗೌಡರ
ಆ ಧೀರನಾದರೆ
ಜನಿವಾರದ ಕಡಿತ ಕಡಿದನು । ೨೩೧೬

* ಮೈಸೂರಿನವರೆ ಮನೆಯಲ್ಲಿ ಹೇಳಿ ಬಂದಿದ್ದೀರಿ ತಾನೆ ?
ತಾಕತ್ತಿದ್ದರೆ ಬನ್ನಿ ಬನ್ನಿ ನನ್ನ ಜೊತೆ ಯುದ್ಧ ಮಾಡಿ
ಹೆದರಿಕೊಂಡು ಯಾಕೆ ಓಡುತ್ತಿರುವಿರಿ ? ಮೈಸೂರಿನವರೆ
ನೀವು ಗಂಡಸರ ಕುಲವೇನಿರೋ ?
ನೀವು ಹುಡುಗಾಟ ಆಡಕೆ ಬಂದಿದ್ದೀರಾ ? ಹ್ಹಹ್ಹಹ್ಹಾ–

ಮಳವಳ್ಳಿ ದೇಪರ್ಸರ ಹಿಡಿದನು
ಆ ಮುಸುಲ್ಮಾನ್ರೋನು
ಜುಟ್ಟು ಹಿಡಿದು ಕತ್ತ ಕಡಿದನು । ೨೩೧೭

ರಮ್ಮನಳ್ಳಿಯ ಪರಿವಾರದುಡುಗರ
ಆ ಮುಸುಲ್ಮಾನ್ರೋನು
ದಮ್ಮಯ್ಯ ಅಂದರು ಬಿಡದೆ ಕಡಿದನು । ೨೩೧೮

ಬಂಡೀಪಾಳ್ಯದ ಗಂಡುಗಲಿಗಳ
ಆ ಮುಸುಲ್ಮಾನ್ರೋನು
ಕಂಡಕಂಡಲ್ಲೆ ಕಡಿದು ಎಸೆದನು । ೨೩೧೯

ನಾಡನಳ್ಳಿ ಗೌಡರ ಮಕ್ಕಳ
ಆ ಧೀರನಾದರೆ
ಆಡಿಸಿ ಆಡಿಸಿ ಕೊರಳ ಕುಯ್ದನು । ೨೩೨೦

ಈರನಗೆರೆಯ ವೀರ ಮಕ್ಕಳ
ಆ ಮುಸುಲ್ಮಾನ್ರೋನು
ಹಾರಿ ಹಾರಿ ಸಿರುವ ಕಡಿದನು । ೨೩೨೧

ತುಮ್ನೇರಲೆ ವೀರ ಮಕ್ಕಳ
ಆ ಮುಸುಲ್ಮಾನ್ರೋನು
ದೊಮ್ಮೆ ದೊಮ್ಮೆ ಬಗೆದು ಕೆಡುಗಿದ । ೨೩೨೨

ಬದನಾಡೀನ ಭೀಮಪ್ಪನಾಯ್ಕಾನ
ಆ ಧೀರನಾದರೆ
ಒದುಗಾಡ್ಕೊಂಡು ಕತ್ತ ಕೂದನು । ೨೩೨೩

ಹುಲ್ಲಳ್ಳಿಯ ಗೊಲ್ಲಗೌಡರ
ಆ ಮುಸುಲ್ಮಾನ್ರೋನು
ಮೆಟ್ಟಿ ಮೆಟ್ಟಿ ಕೊರಳ ಕೂದನು । ೨೩೨೪

ಆಲಂಬಾಡಿ ಬೇಡರ ಹುಡುಗಾರ
ಆ ಧೀರನಾದರೆ
ಅಟ್ಟಾಡಿ ಕೊರಲ ಕೂದನು । ೨೩೨೫

ಬೀರನುಂಡಿ ವೀರರ ಅಟ್ಟಾಡಿ
ಕತ್ತುರ್ಲುವಾಗ
ಹರಳುದಂಟ ನುಗ್ಗಿದಪ್ಪಂದ । ೨೩೨೬

ಬಲಕೆ ಮೂರು ಜೋಲಿ ಹೊಡೆದಾಗ
ಮೈಸೋರೊರ
ಹೆಣಗಳ ಮ್ಯಾಲೆ ಹೆಣಗಳು ಬೀಳುತಾವೆ । ೨೩೨೭

ಎಡಕೆ ಮೂರು ಜೋಲಿ ಹೊಡೆದಾಗ
ಮೈಸೂರವರ
ತಲೆಗಳೆಲ್ಲ ಹಾರಾಡಿ ಬೀಳುತಾವೆ । ೨೩೨೮

ಪಕ್ಷಿ ಹಾರೋಂಗೆ ಹಾರಿ ಹೊಡಿತಾನೆ
ಆ ಬಡಫಕೀರ
ಹಿಡಿಯಕೋದರೆ ಕೈಯಿಗೆ ಸಿಕ್ಕನಂತೆ । ೨೩೨೯

ಗುಂಡ ತಕ್ಕಂಡು ಬಾರ ಮಾಡವ್ರೆ
ಮೈಸೂರಿನವರು
ಗುಂಡಿನೇಟಿಗು ಫಕೀರ ಸಿಕನಿಲ್ಲ । ೨೩೩೦

ಒಬ್ಬರಿಬ್ಬರ ಮರಣ ಮಾಡಿಲ್ಲ
ಆ ಬಡಫಕೀರ
ಮೂವತ್ತು ಸಾವುರ ರಾಣ್ಯ ಕಡುದವ್ನೆ । ೨೩೩೧

ಕೆಂಪೀನ ಛತ್ರಿ ನೆಳ್ಳಲ್ಲಿ ನಿಂತುಕೊಂಡು
ದಳವಾಯಿಯವರು
ಎರಡು ಕಣ್ಣಲ್ಲು ನೀರ ಕೆಡ್ಗಿದರು । ೨೩೩೨

ಮೈಸೂರ ದಳವಾಯಿ ಮುಸಲ್ಮಾನ್ಯವನ ಜಗಳವ
ಆನೆ ಮ್ಯಾಲೆ ಅಂಬಾರಿ ಒಳುಗೆ ಕೂತು ನೋಡಿದನಲ್ಲ
ಫಳಫಳನೆ ಕಣ್ಣೀರ ಕೆಡಗಿದನು
ಪಿರಿಯಾಪಟ್ಣಾ ನನ್ವಾಸ ಆಗಿತ್ತಲ್ಲ ಚಾಮುಂಡಮ್ಮ
ಈ ಒಬ್ಬ ಮುಸುಲ್ಮಾನ್ಯನಿಂದ
ಬುಟ್ಟೋಡಬೇಕು ಪಿರಿಯಾಪಟ್ಣಾವ– ವ. ೪೭

ನನ್ನ ರಾಣ್ಯಾವು ಚದುರಿ ಹೋಯಿತು
ಇಂತೆ ಮೊನುಗಾರ
ಇನ್ನು ನನ್ನ ಏನೇನ ಮಾಡೀನೋ । ೨೩೩೩

ಮಳ್ವಳ್ಳಿದೇಪರ್ಸು ಮಾದುಗರಂಪಣ್ಣ
ಕರಳೆ ತಿಮ್ ನಾಯ್ಕ
ಈರನಗೆರೆಯ ವಲ್ಲೀಸೈದೂವ । ೨೩೩೪

ಈ ಸೂರರಿಗೆಲ್ಲ ಸವಾಲೆ ಆದನಲ್ಲ
ಈ ಮೊನುಗಾರ್ನ
ಎದುರಿಗೆ ನಿಲ್ಲುವ ಸೂರಾರೆ ಇಲ್ಲುವಲ್ಲ । ೨೩೩೫

ಎಷ್ಟೊಂದು ವೀರರ ಸಾಕಿ ಫಲುವೇನು
ನನ್ನ ಮೈಸೂರೊಳ್ಗೆ
ಇಂತೆ ವಜ್ಜುರ ಒಬ್ಬಾನು ಇಲ್ಲವಲ್ಲ । ೨೩೩೬

ಈ ಮುಸುಲ್ಮಾನ್ರಂತೇವ್ನ ಒಬ್ಬಾನ ಸಾಕಿದ್ರೆ
ನನ್ನ ಮೈಸೂರ
ತಂಟೆಗೆ  ಯಾರೂ ಬತ್ತಾ ಇರುನಿಲ್ಲ । ೨೩೩೭

ನನ್ನ ಮೈಸೂರಿಗೆ ಕೊರ್ತೆ ಇರುನಿಲ್ಲ
ಇಂತೆ ವಜ್ಜುರ
ಒಬ್ಬನೆ ಒಬ್ಬ ಇದ್ದರೆ ಸಾಕಿತ್ತು । ೨೩೩೮

ಅರ್ಜುನನೆಸ್ರ ಕೇಳಿದ್ಸೊ ಕಾಣ್ರಪ್ಪ
ಇಂದುನ ದಿವ್ಸ
ಸಾಕ್ಷಾದವನ ಕಂಡೆವು ಕಾಣ್ರಪ್ಪ । ೨೩೩೯

ಇವನು ಹೀಂಗೆ ಜಗಳ ಮಾಡಿದರೆ
ನನ್ ಮೈಸೂರೋರ
ಹುಟ್ಟಿಗೊಬ್ಬರ ಬುಡದೆ ಕೊಲ್ಲುತಾನೆ । ೨೩೪೦

ಕೋಟಿಗೊಬ್ಬರ ಇಂತೆ ವೀರರು
ಈ ಜಗತ್ತದಲಿ
ಸಿಕ್ತಾರಂತ ಹೇಳಕಾಗದು । ೨೩೪೧

ಇಂತೆ ವೀರನ ಕೊಲ್ಲ ಬ್ಯಾಡಿರಪ್ಪ
ನನ್ ಮೈಸೂರೋರೆ
ಜೀಮ್ ಸೈತ ಹಿಡ್ದು ತನ್ನಿರಯ್ಯ । ೨೩೪೨

ಜೇಮ ಸೈತ ಹಿಡಿದು ತಂದೋನ್ಗೆ
ನನ್ ಮೈಸೂರೋರೆ
ಬಂಗಾರದ ಕಪ್ಪವ ತೊಡಿಸುವೆ । ೨೩೪೩

ಇಗುತಿವಂತ ಬಾಳೆ ಅರಸ್ನೋರು
ಯೋಚಣೆ ಮಾಡಿ
ಇಗುತಿ ಕೆಲ್ಸ ಮಾಡಲೆ ಬೇಕಂದ್ರು । ೨೩೪೪

ಇಗುತಿ ಕೆಲ್ಸ ಮಾಡದೆ ಹೋದರೆ
ಈ ಬಡಫಕೀರ
ಮೈಸೂರು ರಾಜ್ಯವ ಮಟ್ಟ ಹಾಕ್ತಾನೆ । ೨೩೪೫

ಹಂಗಂತ ಹೇಳಿ ಬಾಳೆ ಅರಸ್ನೋರು
ಬೇಗುದಲ್ಲಿ
ಕಾಕಿ ಟೋಪೀರ ಬಳುಗೆ ಬಂದರಂತೆ । ೨೩೪೬

ಒಬ್ಬಾನೊಬ್ಬುನ್ಗೆ ಹೆದುರಿ ಬಂದ್ರ್ಯಪ್ಪ
ಕಾಕಿ ಟೋಪೀರೆ
ಅವ್ನ-ಕಾಕ ಹಾಕೊಂಡು ಸಿರ್ಗಳ ಕಡಿವನು । ೨೩೪೭

ಅಬ್ಬುರ್ಸುಕೊಂಡು ಅಟ್ಟಾಡುತಾನಲ್ಲ
ಆ ಬಡಫಕೀರ
ತಬಿಬ್ಬು ಮಾಡಿ ತಲೆಗಳ ಕಡುದವುನೆ । ೨೩೪೮

ಇಲ್ಲಿ ಮಿಂಚುತ ಅಲ್ಲಿ ಗುಡುಗುವನು
ಆ ಮುಸುಲ್ಮಾನ್ರೋವ್ನು
ಇಲ್ಲಿ ಇದ್ದರೆ ಅಲ್ಲಿಗೆ ಹಾರುವನು । ೨೩೪೯

ಅಲ್ಲಿ ಇದ್ದರೆ ಇಲ್ಲಿಗೆ ಹಾರುವನು
ಆ ಮುಸುಲ್ಮಾನ್ರೋವ್ನು
ಚಿಗುಟದಂತ ಮನಸ ಕಾಣ್ರಪ್ಪ । ೨೩೫೦

ಇವುನ ನಾವು ಕೊಲ್ಲಬೇಕಾದ್ರೆ
ಕಾಕಿ ಟೋಪೀರೆ
ಆ ಒಡ್ಡರುಗ್ವಾಡೆ ಮೊಗುಡೀಗೆ ನಡೀರಪ್ಪ । ೨೩೫೧

ಆ ಗ್ವಾಡೆ ಒಡುದು ತೂತ ಮಾಡುಕೊಳ್ಳಿ
ಕಾಕಿ ಟೋಪೀರೆ
ಆ ತೂತುನೊಳುಗೆ ಗುಂಡ ಇಟುಕೊಳ್ಳಿ । ೨೩೫೨

ಗುಂಡು ಫಿರಂಗ್ಯ ತೂತಲ್ಲಿ ಇಟ್ಟುಕೊಂಡು
ಅವ ಹಾರುತ ಬರ್‍ವಾಗ
ಆಯ ನೋಡಿ ಗುಂಡ ಹೊಡೀರಪ್ಪ । ೨೩೫೩

ಅವ್ರು-ವಡ್ಡಾರ ಗ್ವಾಡೆ ಮೊಗುಡೀಗೆ ಹೋಗವುರೆ
ಕಾಕಿ ಟೋಪೀರು
ಗ್ವಾಡೆ ಒಡುದು ತೂತ ಮಾಡವುರೆ । ೨೩೫೪

ಅಲ್ಲಿ-ಜೋಡುಳಿಯ ಬಂದೂಕು ಇಟುಕೊಂಡ್ರು
ಮೈಸೂರಿನೋರು
ಫಿರಂಗಿ ತಂದು ಆ ತೂತಲ್ಲಿಟುಕೊಂಡ್ರು । ೨೩೫೫

ಈ ಧೀರನ ಮುಂದೆ ನಿಲ್ಲೋರೆ ಇಲ್ಲುವಲ್ಲ
ಮೈಸೂರ್ ಸೈನ್ಯವ
ಅವ-ರೇಗುತ ಹುಡುಕಿಕೊಂಡು ಬತ್ತವುನೆ । ೨೩೫೬

ಹುಡುಕೀಕೊಂಡು-ಇವ-ರೇಗುತ ಬರುವಾಗ
ಮೈಸೂರಿನೋರು
ಜೋಡುಳಿಯ ಬಂದೂಕು ಹೊಡೆದರು । ೨೩೫೭

ಜಾಲ ಫಿರಂಗಿ ಜಂಜಾಲ ಫಿರಂಗಿ
ಮುಸಲ್ಮಾನ್ಯನಿಗೆ
ಶಿವ್ನೆ-ಫಿರಂಗೀಯ ಎದೆಗೆ ಬುಟ್ಟರಲ್ಲ । ೨೭೫೮

ಬುಟ್ಟು ಗುಂಡು ಆಚೆಗೆ ಕಡಿನಿಲ್ಲ
ಮುಸಲ್ಮಾನ್ಯನ
ಹೊಟ್ಟೆ ಒಳುಗೆ ಗುಂಡು ನಿಂತಿತು । ೨೩೫೯

ಹಗೇವನೇಟ ಮೈಮ್ಯಾಲೆ ತಕ್ಕಂಡು
ಮುಸುಲ್ಮಾನ್ರೋನು
ತೊಡೆಯ ತಟ್ಟಿ ಕಾಕ ಹಾಕಿದ । ೨೩೬೦

ಹಲ್ಲಾ ಹಲ್ಲಾ ಎಂದು ನುಗ್ಗಿದ
ಮುಸುಲ್ಮಾನ್ರೋನು
ಆರು ಸಾವಿರ ರಾಣ್ಯ ಮುಗಿಸಿದ । ೨೩೬೧

ವೀರನ ಕಾರ್ಯವ ದಳವಾಯಿ ನೋಡಿದರು
ಸಾಬಾಸ್ ಅಚ್ಚಾ
ಎಂದು ಹೇಳಿ ಕೈ ಚಪ್ಪಾಳೆ ಹೊಡೆದರು । ೨೩೬೨

ದಳವಾಯೋರ ಮಾತ ಕೇಳೀದ
ಬಾಳೆ ಅರಸ್ನೋರು
ರ್‍ವಾಸದಿಂದ ಫಿರಂಗಿ ಹೊಡ್ಸಿದರು । ೨೩೬೩

ಎಡದ ಅಳ್ಳೆಗೆ ಗುಂಡು ಬಿದ್ದಿತು
ಮುಸುಲ್ಮಾನ್ರೋನು
ದಟ್ಟಿ ತಗುದು ಅಳ್ಳೆಗೆ ಬಿಕ್ಕೊಂಡ । ೨೩೬೪

ಹಳೆಯ ದಟ್ಟಿ ಅಳ್ಳೆಗೆ ಬಿಕ್ಕೊಂಡು
ಮುಸುಲ್ಮಾನ್ರೋನು
ಇನ್ನೊಂದು ಸಾವ್ರ ತಲೆಗಳ ಹೊಡೆದಾನು । ೨೩೬೫

ಎಂಥಾ ಶೂರನೊ ಫಕೀರ ಎನುತ್ಹೇಳಿ
ಮೈಸೂರಿನೋರು
ಚೆಂಚಿನಿಂದ ಗುಂಡ ಹೊಡಿದರು । ೨೩೬೬

ಅಲ್ಲಾ ಎಂದು ಎದೆಯ ಹಿಡುದಾಗ
ಮೈಸೂರಿನೋರು
ಬಲದ ಅಳ್ಳೆಗೆ ಗುಂಡ ಹೊಡೆದರು । ೨೩೬೭

ಕಳ್ಳು ಕಡ್ಕೊತು ನ್ಯಾಣ ಒದ್ದುಕೋತು
ಮುಸುಲ್ಮಾನ್ರೋನು
ದಟ್ಟಿಯ ಕಟ್ಟಿ ಬಿಗಿಯ ಮಾಡುಕೊಂಡ । ೨೩೬೮

ಓ ಖುದಾ ಓ ಖುದಾ ಕೈಸಾ ಕಾಂ ಹೋಗಯಾ
ಮುಜ್ ಪರ್ ಹಿ ಜೋ ಭರವಸಾಕಿಯಾ
ವೀರಾಜ್ ಭೂಪ್ ಆಜ್ ಪರ್ದೇಶಿ ಹೋಗಯಾ–* ವ ೪೮

* ಓ ದೇವರೆ ಓ ದೇವರೆ ಎಂಥಾ ಕೆಲಸ ಆಯಿತು
ನನ್ನನ್ನೇ ನಂಬಿಕೊಂಡಿದ್ದನು
ವೀರಾಜಭೂಪನು ಈಗ ಪರದೇಶಿಯಾದನು –

ಅಲ್ಲಾ ಅಲ್ಲಾ ಅಲ್ಲಾ ಎನ್ನುತ
ಆ ಫಕೀರಸಾಬಿ
ತಾನು ತಂದಿದ್ದ ಚೇಜಿ ಹತ್ತುಕೊಂಡ । ೨೩೬೯

ಅಲ್ಲಾ ಆರೆ ಅಲ್ಲಾ
ಮೈಸೂರು ರಾಜ್ಯದಲ್ಲಿ ನನ್ನ ವಸ್ತು ಕಳೆದರೆ
ದಳವಾಯಿಗೆ ಮಗನಾದಂಗಾಗುತ್ತೈತೆ
ಉಪ್ಪಿನ ರುಣವ ಕೊಟ್ಟು ಸಾಕವುನೆ ಈರಾಜಭೂಪ
ಆ ಪಿರಿಯಾಪಟ್ಣದ ಒಳುಗೆ ನನ್ನ ಹಾಳುಜಲ್ಮ ಕಳೀಲಿ
ಈರಾಜದೊರೆಯ ಉಪ್ಪಿನ ರುಣಕೆ ತಪ್ಪಿದರೆ
ನಾನು ಅಲ್ಲಾನ ಮಗನಲ್ಲ
ನಾನು ಸತ್ಯಾದ ಮುಸುಲ್ಮಾನ್ರು ಜಾತಿಯವನಾಗಕಿಲ್ಲ
ಆದರಂದ ಅವುನ ಉಪ್ಪಿನ ರುಣ ತೀರುಸಬೇಕು
ಪಿರಿಯಾಪಟ್ಣದತನಕ ನನ್ನ ಮಾಯ್ದಲ್ಲಿ
ಕರ್‍ಕೊಂಡೋಗು ನನ್ನ ಚೇಜಿ ಎನುತ್ತೇಳೆ

ನಾನು ಎಡದಾರಿಯಲ್ಲಿ ಸತ್ತರೆ
ನಿನಗೆ ಅವಿಮಾನವಾಗುತದೆಯಲ್ಲ
ಅಲ್ಲಾ ನನ್ನ ಕಾಪಾಡು ಎಂದು ಶಿವುನ ಗ್ಯಾನ ಮಾಡುತ
ಬಲಗೈಲಿ ಕುದುರೆ ಹಿಡುದವುನೆ
ಎಡಗೈಲಿ ಎದೆಯ ಮುಂಚ್ಕೊಂಡವುನೆ
ಗುಂಡು ಹೊಡೆದ ಜಾಗದಲ್ಲೆಲ್ಲ ಹರಿಯುತಿದೆ ರಕ್ತ
ಅಲ್ಲಾನ ದಯದಿಂದ ಸೇರವುನೆ ಎಲ್ಲೆ ಪಿರಿಯಾಪಟ್ಣಾದ
ಪ್ಯಾಟೆ ಒಳಗ ಬಂದು ಕ್ವಾಟೆ ಸೇರುನಿಲ್ಲ
ಪ್ಯಾಟೆ ಕೆರೆಯ ಏರಿಯ ಮ್ಯಾಲೆ– ವ. ೪೯

ಈರಾಜ ದೊರೆಗಳ ಕೂಗಿ ಕರೆದಾನು
ಆ ಬಡಫಕೀರ
ಕೆರೆಯ ಏರಿ ಮ್ಯಾಲೆ ಬಿದ್ದಾನು । ೨೩೭೦

ಉಪ್ಪಿನ ರುಣವು ಇಲ್ಲೀಗೆ ತೀರೀತು
ಈರಾಜ ದೊರೆಯೆ
ಇಂದೀಗೆ ನಿನ್ನ ರುಣವು ತೀರೀತು । ೨೩೭೧

ಸತಾಸಿವನ ಸೊರಣೆ ಮಾಡಿದನು
ಮುಸುಲ್ಮಾನ್ರೋನು
ಹತ್ತು-ದಿಕ್ಕೀಗು ಎತ್ತಿ ಕೈಯ ಮುಗಿದಾನು । ೨೩೭೨

ನುಂಗಿದ ಬಾಯ ತಂಬುಲ ಉಗಿದನು
ಮುಸುಲ್ಮಾನ್ರೋನುಂ
ಮ್ಯಾಲೆ ಹಾರಿ ಕೆಳಗೆ ಬಿದ್ದಾನು ।

ವೀರಾಜನು ಕೋಟೆ ಗೋಡೆಯ ಮೇಲೆ ನಿಂತು ಫಕೀರನ ಸಾಹಸವನ್ನು ಬೆರಗಿನಿಂದ ವೀಕ್ಷಿಸುತ್ತಿದ್ದನು. ಫಕೀರ, ಮೈಸೂರು ಸೈನ್ಯವನ್ನು ಅಟ್ಟಿಸಿಕೊಂಡು ಕಣ್ಣಿಗೆ ಬೀಳದಷ್ಟು ದೂರ ಹೋಗಿ ಮರೆಯಾದನು.

ದಿಟ್ಟಿಸುತ್ತ ನಿಂತಿದ್ದ ವೀರಾಜನು ಚನ್ನಿಗರಾಯನ ಗುಡಿಗೆ ಬಂದು, ತುಂಬಿದ ಭಕ್ತಿಯಲ್ಲಿ ಧೂಪದೀಪಗಳಿಂದ ಪೂಜಿಸಿ :

"ಸ್ವಾಮಿ ಚನ್ನಗರಾಯ, ಎಲ್ಲ ದೇವರುಗಳೂ ನನ್ನ ಕೈ ಬಿಟ್ಟವು; ನೀನಾದರೂ ನನ್ನ ಕೈ ಬಿಡದೆ ಕಾಪಾಡು ತಂದೆ; ಯುದ್ಧಕ್ಕೆ ಹೋಗಿರುವ ನನ್ನ ವೀರ ಫಕೀರ, ಗೆದ್ದು ಬರುವಂತೆ ಮಾಡು ತಂದೆ; ನನಗೆ ಜಯವನ್ನು ಕರುಣಿಸು ಪ್ರಭುವೆ !" ಎಂದು ಪ್ರಾರ್ಥಿಸುತ್ತಿದ್ದ ಹೊತ್ತಿಗೆ ಸರಿಯಾಗಿ ದೂತನೊಬ್ಬ ಬಂದು :

"ಸ್ವಾಮಿ, ಮೈಸೂರಿನವರು ಮೂಗು ಕುಯ್ಯುವ ಚೂರಿಯಿಂದ ಫಕೀರನ ಮೂಗನ್ನು ಕುಯ್ದುದಲ್ಲದೆ ಗುಂಡುನಲ್ಲಿ ಹೊಡೆದರು" ಎಂದು ತಿಳಿಸಿದನು.

ದೂತನ ಮಾತನ್ನು ಕೇಳಿದ ವೀರಾಜ ಕಟಕಟನೆ ಹಲ್ಲು ಕಡಿದನು. ಕಣ್ಣುಗಳಲ್ಲಿ ಕಿಡಿ ಹಾರುತ್ತ ಚನ್ನಿಗರಾಯನನ್ನು ದಿಟ್ಟಿಸಿದರು,

"ಚನ್ನಿಗರಾಯಾ, ಚನ್ನಿಗರಾಯಾ ! ಇಲ್ಲ, ನೀನಿಲ್ಲ. ನಂಬಿದವರ ಕಷ್ಟನಷ್ಟಗಳಿಗೆ ಒದಗದೇ ಇದ್ದ ಮೇಲೆ ದೇವರುಗಳೇ ಇಲ್ಲವೆಂದಾಯ್ತು ! ಈ ಕಲ್ಲುಗೊಂಬೆಗಳನ್ನು ನಂಬಿ ಮೋಸಹೋದೆವು ! ಇವು ದೇವರುಗಳೇ ? ಅಲ್ಲ ಅಲ್ಲ ?" ಎಂದು ಅಬ್ಬರಿಸುತ್ತ ಬಳಿಯಲ್ಲೇ ಉರಿಯುತ್ತಿದ್ದ ದೀಪದ ಕಂಬವನ್ನು ಕೈಗೆತ್ತಿಕೊಂಡು ರೋಷದಿಂದ ಚನ್ನಗರಾಯನ ಮೂಗಿಗೆ ಬೀಸಿ ಎಸೆದ, ಸ್ವಾಮಿಯ ಮೂಗು ಕೊಚ್ಚಿಹೋಯಿತು.

(ಮೂಗು ಮುರಿದು ಭಿನ್ನವಾಗಿರುವ ಚನ್ನಿಗರಾಯನ ವಿಗ್ರಹಕ್ಕೆ ಅಂದಿನಿಂದಲೂ ಪೂಜೆ ಪುರಸ್ಕಾರಗಳೊಂದೂ ನಡೆಯುತ್ತಿಲ್ಲ)*

---

* ವಕ್ತೃ : ಹುಣಸೇಕುಪ್ಪೆ. ಎಸ್. ನಾಗಣ್ಣ, ಹೆಚ್.ಕೆ. ಸುಬ್ಬೇಗೌಡ ಮತ್ತು ಸಾವಿತ್ರಮ್ಮನವರ ಮಕ್ಕಳು. 25 ವರ್ಷ, ಒಕ್ಕಲಿಗರು, ಹುಣಸೇಕುಪ್ಪೆ ಪಿರಿಯಾಪಟ್ಟಣ ತಾಲ್ಲೂಕು. ಹಿರಿಯರಿಂದ ಕೇಳಿ ನೆನಪಿನಲ್ಲಿದ್ದು.

ಪ್ಯಾಟೆ ಬೀದೀಲಿ ಕಂಡವರು
'ಬಂದವುನೆ ಮಾಸ್ವಾಮಿ ಮುಸುಲ್ಮಾನ್ರ ಫಕೀರ
ಕೆರೆಯ ಏರಿಯ ಮ್ಯಾಲೆ ಹೊರಳಾಡುತವುನೆ'
'ಉಸುರಿದ್ದದೊ, ಹೊರಟೋಯ್ತೊ ವಸ್ತು ?'
'ಉಸುರು ಹೋಗಿಲ್ಲ ಹೋರಳಾಡುತ್ತವುನೆ ಬುಧ್ಧಿ'
'ಸತ್ಯದ ಮುಸಲಮಾನ್ನೇನಾದರೆ
ನಡೆದ ಸಂಗ್ತಿ ಹೇಳಿ ಮರಣವಾಗಲಿ ರಾಜ್ಯದಲ್ಲಿ'
ಹಾಗೆಂದು ಈರಾಜ ದೊರೆ ತನ್ನ ಕುದುರೆ ಮ್ಯಾಲೇ
ಕುಳಿತು ಬಂದು ನೊಡಿದ
'ಆನೆ ಸಮಂದವಾದ ಮನಸ ನೀನು
ಹೊಟ್ಟೆಗಿಲ್ಲದ ಬಡಫಕೀರ ಅನುತಿದ್ದಿ
ಮೂರು ಗುಂಡುನೇಟ ಹಂಗೆ ತಡುಕೊಂಡು ಬಂದ್ಯಪ್ಪ,
ಮೈಸೂರಿನಲ್ಲಿ ಏನೇನು ರಣಾಗ್ರ ಮಾಡಿದ್ಯೆ ನನಗ್ಹೇಳು'
'ಮೂವತ್ತು ಸಾವುರ ಸೈನ್ಯ ಕಡುದಾಕಿ ಬಂದಿವ್ನಿ
ಮೂರು ಗುಂಡುನೇಟ ಹೊಡುದವುರೆ ಮೈಸೂರಿನೋರು
ನಿನ್ನ ಉಪ್ಪಿನ ರುಣವ ಕಳೆಯಬೇಕೆಂದು
ಗುಂಡುನೇಟ ತಡುಕೊಂಡು ಬಂದೆ ನಿನ್ನ ಎಲ್ಲೆಗೆ
ತೀರೋಯ್ತಪ್ಪ ನಿನ್ನ ಉಪ್ಪುನೆ ರುಣ
ಬುಡುತೀನೀಗ ನನ್ನ ಪ್ರಾಣಗಳ
ಸತ್ಯದ ಮುಸುಲ್ಮಾನ್ರವ ಎಂಬುವ ಮಮತೆ
ನಿನ್ನ ಮನ್ಸಲ್ಲಿ ಇದ್ದರೆ
ನಿನ್ನ ಪಟ್ಟದಲ್ಲಿ ಒಂದು ಗೋರಿ ಗೇಯ್ಸಪ್ಪ'- ವ. ೫೦

ಮಾರಾಜ್ – ಮೈ ಮರ್ಗಯಾ ಮೈ ಮರ್ಗಯಾ
ಓ ಖುದಾ ಓ ಖುದಾ
ಹಾ ಭಗವಾನ್ ಸಬ್ ಕಿ ಭಲಾಯಿ ಕಿರ್ ।* ೨೩೭೪

ಅವ್ನ – ತಲೆಯ ತಗ್ಗು ತೊಡೆಮ್ಯಾಲಿಟ್ಟುಕೊಂಡು
ಈರಾಜ ದೊರ್‍ಗಲೂ
ಗಂಗೋದುಕವ ಬಾಯಿಗೆ ಬುಟ್ಟರು । ೨೩೭೫

---

* ಮಹಾರಾಜ ನಾ ಸತ್ತೆ ಸತ್ತೆ – ಓ ದೇವರೆ ಓ ದೇವರೆ
ಹಾ ಭಗವಂತ ಎಲ್ಲರಿಗೂ ಒಳ್ಳೆಯದನ್ನು ಮಾಡು

ಗಂಗೋದುಕವ ಬಾಯಿಗೆ ಬುಡುವಾಗ
ಪೈಗೂರ್ ಫಕೀರ
ಫಕ್ಕಾನೆ ಪ್ರಾಣಾವ ಬುಟ್ಟು ಬುಟ್ಟ । ೨೩೭೬

ಪ್ರಾಣವನ್ನು ಬುಟ್ಟಂತ ಮುಸುಲ್ಮಾನ್ರೋನ ಎದೆಮ್ಯಾಲೆ
ಬಿದ್ದು ಈರಾಜ ದೊರೆಗಳು
ಗುಳುಗುಳುನೆ ಕಣ್ಣೀರ ಸುರುಸುತ
ಬಿದ್ದು ಹೊರಳಾಡಿದರೂ
ನೂರೊಂದು ಜನ ವಜ್ಜುರರ ಸಾಕೋದ್ಕೆ ಬದಲಾಗಿ
ನಿನ್ನಂಥ ಒಬ್ಬ ವಜ್ಜುರನ ಸಾಕಿದ್ರೆ –

ನನ್ನ – ಮಡದಿ ಮಕ್ಕಳ ಪ್ರಾಣ ಉಳಿಯೋದು
ಅಯ್ಯಾ ಫಕೀರ
ನನ್ನ ದೇಶಕೋಶ ಎಲ್ಲಾ ಉಳಿಯೋದು । ೨೩೭೭

ನೀನು ನನಗೆ ಅನ್ಯೋನು ಅಲ್ಲವಪ್ಪ
ಅಯ್ಯಾ ಫಕೀರ
ನನ್ನ – ಬೆನ್ನಿಂದೆ ಬಂದ ತಮ್ಮ ನೀನಪ್ಪ । ೨೩೭೮

ಒಂದುಗುಟ್ಟುದ ತಮ್ಮಾ ನೀನೆಂದು
ಈರಾಜ ಭೂಪ
ಬಾಳ ದುಕ್ಕಾ ಮಾಡುತವುನಲ್ಲ । ೨೩೭೯

ಅಯ್ಯಾ ಫಕೀರ
ನೀನೊಬ್ಬ ನನ್ನ ಪಟ್ಟಣವನ್ನು ಉಳಿಸಿಕೊಡ್ತಿಯೆ
ಅಂತ ಭಾವುಸಿದ್ನಲ್ಲ
ನೀನು ನನ್ನ ಕೈ ಬಿಟ್ಟು ಹೊದೇನಪ್ಪ ಎನುತ್ತೇಳಿ
ಈರಾಜ ದೊರೆ ಮುಸುಲ್ಮಾನ್ನನ ಎದೆಮ್ಯಾಲೆ ಬಿದ್ದು
ಹೊರಳಾಡಿದರೂ– ವ. ೫೨

ಮೂರು ಜೋಳಿಗೆ ಹೊನ್ನ ತರ್ಸಿದರು
ಈ ರಾಜ ದೊರೆ
ಮೂರು ಮಣ ಗಂಧುಡಿಯ ತರ್ಸಿದರು । ೨೩೮೦

ಹಸರು ದೋಲಿಯ ತರ್ಸಿದರು
ಮಾಸ್ವಾಮಿ ದೊರ್ಗಳು
ದೋಲೀಲಿ ಫಕೀರ್ನ ಮನುಗ್ಸಿದರು । ೨೩೮೧

ಬಾಲಬಾಯಿನ ತೋಪಿಗೆ ತಂದರು
ಫೈಗೂರ್ ಫಕೀರ್ನ
ಎತ್ತೀ ಗೋರೀಗೆ ಇಳ್ಸಿದರು । ೨೩೮೨

ಎತ್ತಿ ಗೋರೀಗೆ ಮನುಗಿಸಿ
ಫಕೀರುಂಗೆ
ದೊರೆಗಳು ಏನೆಂದು ನುಡಿದರು । ೨೩೮೩

ಅಯ್ಯಾ ಫಕೀರ
ಈ ರಾಜ ದೊರೆಗಳು ನನ್ನ ಪರಮಾತ್ಮನ ಕೊಲ್ಸಿದರು
ತಮ್ಮ ಪರಮಾತ್ಮನ ಉಳ್ಸಿಕೊಂಡ್ರು ಅಂತ
ಚಿಂತೆ ಬ್ಯಾಡಪ್ಪ ನಿನ್ನ ಮನದಲ್ಲಿ
ನಾನು ನನ್ನ ಮಡದಿ ಮಕ್ಕಳ ಕೊಂದುಬುಟ್ಟು
ನಾನು ಬತ್ತೀನಪ್ಪ
ಕಾದಿರಪ್ಪ ಕೈಲಾಸದ ಕಡೇ ಬಾಕ್ಲಲ್ಲಿ
ನಾನೂ ಬತ್ತೀನಪ್ಪ ಜೊತೇಲಿ ಹೋಗನ ಕೈಲಾಸಕ್ಕೆ- ವ. ೫೩

ಅಯ್ಯಾ – ಉದ್ದ ಉದ್ದಕ್ಕೆ ಗೋರಿ ಗೇಯ್ಸಿದರು
ಈರಾಜದೊರ್ಗಳು
ಗೋರಿ ಒಳುಕ್ಕೆ ಹೊನ್ನ ಹುಯ್ಸಿದರು । ೨೩೮೪

ಹೊನ್ನ ಹಾಸಿ ಮ್ಯಾಲೆ ಮನುಗ್ಸಿದರು
ಫಕೀರಸಾಬೀಯ
ಮ್ಯಾಲೆ ಹೊನ್ನಿನ ರಾಸಿ ಹರ್ಸಿದರು । ೨೩೮೫

ಉದ್ದ ಉದ್ದಕ್ಕೆ ಗೋರಿ ಗೇಯ್ಸಿನ್ನು
ಈರಾಜದೊರ್ಗಳು
ಹೆಸರು ಗೋರಿಗುಪ್ಪಾವ ತರ್ಸಿದರು । ೨೩೮೬

ಮುತ್ತಿನೆಣಗೇಯ ಗೋರಿಗುಪ್ಪಾವ
ಈರಾಜದೊರ್ಗಳು
ಫಕೀರನ ಗೋರಿಗೆ ಹೊದ್ಸಿದರು । ೨೩೮೭

ಸತ್ಯದವುನ್ಗೆ ಗೋರಿ ಗೇಯ್ಸೀದ
ಈರಾಜದೊರೆ
ಎರಡು ತೋಳಲ್ಲು ಗೋರಿ ತಬ್ಬೀದ । ೨೩೮೮

ಎರ್ಡು ತೋಳಲ್ಲು ಗೋರಿ ತಬ್ಬುಕೊಂಡು
ಈರಾಜದೊರೆ
ಗೋಳುಗೋಳಂತ ಕಣ್ಣೀರ ಸುರಿಸಿದ । ೨೩೮೯

ನೀನು – ಅಲ್ಲುನ್ಗೆ ಸಮನಾದ ಮನುಸನು
ನನ್ನ ಮೊನುಗಾರ
ನಿನ್ನ – ದೇವ್ರು ಅಂತ ನಿನ್ನೋರು ಪೂಜಾಲಿ । ೨೩೯೦

ನಿನ್ನ – ದೇವ್ರು ಅಂತ ನಿನ್ನೋರು ಪೂಜಾಲಿ
ನನ್ನ ಮೊನುಗಾರ
ನೀನು – ಪೀಡಿ ಪಿಚಾತಿಗೆ ವೈರಿಯಾಗಪ್ಪ । ೨೩೯೧

ಹತ್ತು ಜನ ಫಕೀರರ ಕರಸಿದ
ಈರಾಜದೊರೆ
ಸಕ್ಕರೆ ಪಾದ್ಯಾವ ಮಾಡಿಸಿದ । ೨೩೯೨

ಇಂತೆ – ವೀರನ ಕೀರ್ತಿ ಮೆರೆಯಲಿ ಅಂತ್ಹೇಳಿ
ಈರಾಜದೊರೆ
ದಂಡಿನಲ್ಲಿ ಭೇರಿ ಹೊಡಿಸಿದ । ೨೩೯೩

ಫಕೀರಪ್ಪ – ನಿನ್ನ ಜಗಳ ತೀರಿ ಬಂದೋಯ್ತು
ಮೈಸೂರಿಗೋಗಿ
ನನ್ನ ಜಗಳ ನಾ ಮಾಡಿ ಬರಬೇಕು । ೨೩೯೪

ನನ್ನ ಶಕ್ತ್ಯೇನು ತೋರಿ ಬರುತೀನಿ
ಹಾಂಗಂತ ಹೇಳಿ
ಪ್ಯಾಟೆ ಬುಟ್ಟು ಕ್ವಾಟೆಗೆ ಬಂದವುನೆ । ೨೩೯೫

(ಆಕರ : ಪಿರಿಯಾಪಟ್ಟಣದ ಕಾಳಗ : ಡಾ। ಪಿ.ಕೆ. ರಾಜಶೇಖರ: ಮೈಸೂರು; ೧೯೯೦)

# ಉತ್ತರ ಕರ್ನಾಟಕದ ಕುಣಿತದ ಹಾಡುಗಳು

ತುಂಗಭದ್ರ ನದಿಯನ್ನು ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ನಡುವಿನ ಗಡಿರೇಖೆ ಎಂದು ಪರಿಗಣಿಸಲಾಗಿದೆ. ಅದನ್ನನುಸರಿಸಿಯೇ ಅಲ್ಲಲ್ಲಿನ ಸಾಂಸ್ಕೃತಿಕ ಸಂಗತಿಗಳು ಬದಲಾಗಿವೆ. ಈ ಸಂಪುಟದ ಮೊದಲ ಭಾಗದಲ್ಲಿ ದಕ್ಷಿಣ ಕರ್ನಾಟಕದ ವಿವಿಧ ಜಿಲ್ಲೆಗಳ ಹಾಡ್ಗುಣಿತಗಳನ್ನು ಸೇರಿಸಿದ್ದು, ಈ ಎರಡನೇ ಅಧ್ಯಾಯದಲ್ಲಿ ಉತ್ತರ ಕರ್ನಾಟಕ ವ್ಯಾಪ್ತಿಯ ಧಾರವಾಡ, ಬಳ್ಳಾರಿ, ಗುಲಬರ್ಗಾ, ಬೆಳಗಾವಿ ಮತ್ತಿತರ ಜಿಲ್ಲಾ ಭಾಗಗಳಲ್ಲಿನ ಹಾಡ್ಗುಣಿತಗಳನ್ನು ವಿವಿಧ ಮೂಲಗಳಿಂದ ಸಂಕಲಿಸಿ ಕೊಟ್ಟಿದೆ.

ಇವಲ್ಲದೆ, ಇನ್ನೂ ಕೆಲವು ಹಾಡ್ಗುಣಿತಗಳೂ ಆ ಭಾಗದಲ್ಲಿವೆ. ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಉದಾ.ಗೆ ಮುಳ್ಳು ಹೆಜ್ಜೆ ಕುಣಿತ. ಇದೊಂದು ಬಹು ಕ್ಲಿಷ್ಟಕರವಾದ, ಅಪರೂಪದ ಸಾಹಸ ಕ್ರೀಡಾತ್ಮಕ ಕುಣಿತ ಕಲೆ. ಅದು ಆ ಭಾಗದ ಒಂದೆರಡು ಊರುಗಳಲ್ಲಿ ಮಾತ್ರ ಇದೆ. ಇದರ ಬಗೆಗೆ ಒಂದೆರಡು ಪರಿಚಯಾತ್ಮಕ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆಯಷ್ಟೇ ಹೊರತು ಆ ಸಂದರ್ಭದಲ್ಲಿ ಬಳಕೆಯಾಗುವ ಹಾಡುಗಳ ಸಂಗ್ರಹವಾಗಿಲ್ಲ. ಆ ಭಾಗದ ಕೆಲವರನ್ನು ವಿಚಾರಿಸಿದಾಗ, ಅದಕ್ಕೆ ನಿರ್ದಿಷ್ಟ ಪದಗಳಿಲ್ಲವೆಂದೂ, ಹೆಜ್ಜೆ ಕುಣಿತದ ಪದಗಳನ್ನೇ ಬಳಸಿಕೊಳ್ಳುತ್ತಾರೆಂದೂ ಮಾಹಿತಿ ನೀಡಿದ್ದಾರೆ. ತುಮಕೂರು, ಮಂಡ್ಯ ಭಾಗಗಳಲ್ಲಿ ರಂಗದ ಕುಣಿತ ಮಾಡುವಾಗ ಹಾಡುವ ಪದಗಳನ್ನೇ ಸ್ವಲ್ಪ ಬದಲಾವಣೆಯೊಂದಿಗೆ ಸೋಮನ ಕುಣಿತದಂತಹ ದೇವರ ಮೇಲೂ, ಪಟದ ಕುಣಿತದಲ್ಲೂ ಬಳಸಿಕೊಳ್ಳಬಹುದಲ್ಲ; ಹಾಗೇ, ಮುಳ್ಳು ಹೆಜ್ಜೆ ಕುಣಿತದಲ್ಲೂ ಆಗಬಹುದು. ಸಾಂದರ್ಭಿಕವಾಗಿ ಪರಸ್ಪರ ಅನುಕರಣೆಯಿಂದ ಹುಟ್ಟಿಕೊಂಡ ಕುಣಿತಗಳಲ್ಲಿ ಕೆಲವೊಮ್ಮೆ ಹೆಸರು, ವೇಷ–ಭೂಷಣ, ಬೇರೆಯಾದರೂ ಹಾಡುಗಾರಿಕೆ–ಕುಣಿತದ ಕ್ರಮಗಳಲ್ಲಿ ಸಾಮ್ಯತೆ ಇರುವುದನ್ನು ಈ ದೃಷ್ಟಿಯಿಂದ ಅರ್ಥೈಸಿಕೊಳ್ಳಬಹುದು.

ಹಾಗೆಯೇ, ಹಿಂದೆ, ಡೊಳ್ಳಿನ ಹಾಡು–ಕುಣಿತ ಎರಡನ್ನೂ ಜೊತೆ ಜೊತೆ ಪ್ರದರ್ಶಿಸುತ್ತಿದ್ದುಂಟು ಎಂದು ಕೆಲವರು ಹೇಳುತ್ತಾರಾದರೂ, ಅದರ ವಿವರಗಳನ್ನು ಯಾರೂ ಸವಿವರವಾಗಿ ದಾಖಲಿಸಿಲ್ಲ. ಈಗಂತೂ ಹಾಡಿಗಿಂತ ಕುಣಿತ ಪ್ರದರ್ಶನವೇ ಹೆಚ್ಚಾಗಿದೆ, ಪ್ರಧಾನವಾಗಿದೆ. ಕೆಲವು ಕಲೆಗಳ ರೂಪ ಮತ್ತು ಪ್ರದರ್ಶನದ ಕ್ರಮಗಳೇ ಬದಲಾಗಿವೆ, ಪ್ರತ್ಯೇಕವಾಗಿ ಪ್ರಕಟವಾಗಿರುವ ಡೊಳ್ಳು ಕಾವ್ಯ–ಗೀತೆಗಳನ್ನು ಈ ಕಾರಣಕ್ಕಾಗಿಯೇ ಇಲ್ಲಿ ಸೇರಿಸಿಲ್ಲ. ಇದೇ ಸ್ಥಿತಿ ಕಂಸಾಳೆಗೂ ಉಂಟಾಗಿದೆ. ಮುಂದೆ ಇವೆಲ್ಲಾ ಕೇವಲ ಕುಣಿತ ಕಲೆಗಳಾಗಿ ಉಳಿಯುವ ಸಾಧ್ಯತೆಯೇ ಹೆಚ್ಚಾಗಿದೆ.

# ದಟ್ಟಿ ಕುಣಿತ

ಉತ್ತರ ಕರ್ನಾಟಕದ ಜನಪ್ರಿಯ ಪ್ರದರ್ಶಕ ಕಲೆಗಳಲ್ಲಿ ದಟ್ಟಿ ಕುಣಿತವೂ ಒಂದು. ಸಂಗೀತ, ತಾಳಗಳೊಂದಿಗೆ ಲಾಲಿತ್ಯವೂ, ಕಸರತ್ತೂ ಮೇಳೈಸಿದ ಈ ಸಾಹಸದ ಕಲೆ, ಕೈಲಿ ದಟ್ಟಿ (ಕೆಂಪು ವಸ್ತ್ರ) ಹಿಡಿದು ಕುಣಿಯುವುದರಿಂದ ದಟ್ಟಿ ಕುಣಿತವೆಂದು ಹೆಸರಾಗಿದೆ. ಈ ಕಲೆಯನ್ನು ಹತ್ತಿರದಿಂದ ಬಲ್ಲ ಡಾ। ನಿಂಗಣ್ಣ ಸಣ್ಣಕ್ಕಿ ಅವರ ಪ್ರಕಾರ ಇದು ಗೋಕಾವಿ (ಗೋಕಾಕ) ಮೂಲದ ಕಲೆ. ಗೋಕಾಕ್ ತಾಲೂಕಿನ ಸಜ್ಜೆಹಾಳ, ಒಡೆಯರಹಟ್ಟಿ, ಉದಗಟ್ಟಿ, ತಳಕಟ್ನಾಳ, ನಾಗನೂರ, ತಳನಟ್ಟಿ, ಗುಜನಟ್ಟಿ, ಧರ್ಮಟ್ಟಿ ಗ್ರಾಮಗಳಲ್ಲಿ ಈ ಕಲೆಯ ಮೇಳಗಳಿವೆ. ಚಿಕ್ಕೋಡಿ ತಾಲೂಕಿನ ಕಬ್ಬೂರ, ರಾಯಭಾಗ ತಾಲೂಕಿನ ಯಲ್ಪಾರಟ್ಟಿ, ಅಥಣಿ ತಾಲೂಕಿನ ಮುರಗುಂಡಿ ಮೊದಲಾದೆಡೆಯೂ ಮೇಳಗಳಿವೆ. ಬಿಜಾಪುರ, ರಾಯಚೂರು, ಗುಲಬರ್ಗಾ ಮತ್ತಿತರೆಡೆಯಿಂದ ಬಂದು, ಈ ಮೇಳಗಳಲ್ಲಿ ಕಲಿತು ಹೋದವರೂ ಇದ್ದಾರೆ. ಕೆಲವು ತಂಡಗಳು ಮೈಸೂರು ದಸರಾ, ದೆಹಲಿ ಉತ್ಸವ, ಕಣ್ಣಾನೂರ ಉತ್ಸವ, ಬೆಂಗಳೂರು ಮೊದಲಾದೆಡೆ ಪ್ರದರ್ಶನಗಳನ್ನು ನೀಡಿ ಹೆಸರಾಗಿವೆ.

ನಮ್ಮ ಎಷ್ಟೋ ಜನಪದ ಕಲೆಗಳಿಗಿರುವಂತೆ ದಟ್ಟಿ ಕುಣಿತಕ್ಕೂ ಪೌರಾಣಿಕ ಹಿನ್ನೆಲೆ ಇದೆ. ಅದರ ಪ್ರಕಾರ ದೇವಿಯು ಉದಗಟ್ಟಿ ಉದ್ದಮ್ಮನ ಅವತಾರದಲ್ಲಿ ಹುಟ್ಟಿ, ದೈತ್ಯರ ಸಂಹಾರ ಮಾಡಿದ ಬಳಿಕ ವೀರಾವೇಶ ಬಂದು ಮತ್ತೆ ಸಂಹಾರಕ್ಕೆ ಹುಡುಕುತ್ತಿದ್ದಾಗ, ಶಾಂತಿಗಾಗಿ ಭಕ್ತರು ಆಕೆಯದೇ ವೇಷತೊಟ್ಟು ಕುಣಿತ ಮಾಡಿದರು. ಅದನ್ನು ಕಂಡ ದೇವಿ ಶಾಂತಳಾದಳು. ಅದೇ ದಟ್ಟಿ ಕುಣಿತ. ಹಾಲು ಮತದವರಲ್ಲಿ ಇದ್ದ ಒಂದು ಕುಣಿತ ಪ್ರಕಾರವೇ ಮುಂದೆ ಈ ಕತೆಯ ಹಿನ್ನೆಲೆ ಪಡೆಯಿತು ಎಂಬ ಅಭಿಪ್ರಾಯವೂ ಇದೆ. ಈ ಆಟಕ್ಕೆ "ಮಳೆ ಕರೆಯಿಸುವ ಆಟ" ಎಂಬ ಹೆಸರೂ ಇರುವುದು ಗಮನಾರ್ಹ. ಜಾತ್ರೆ, ಉತ್ಸವ, ಹಬ್ಬ-ಹರಿದಿನ, ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಈ ಕಲೆಯ ಪ್ರದರ್ಶನ ಮಾಡುವುದು ಪದ್ಧತಿಯಾಗಿದೆ. ಬಹುಬಗೆಯ ಹೆಜ್ಜೆ-ಕುಣಿತಗಳು, ಕಸರತ್ತುಗಳು ನೋಡುಗರನ್ನು ಸುಲಭವಾಗಿ ಮುದಗೊಳಿಸುವ ಶಕ್ತಿ ಪಡೆದಿರುವುದು ಈ ಕಲೆಯ ವಿಶೇಷ ಗುಣವಾಗಿದೆ.

"ದಟ್ಟಿ ಕುಣಿತವನ್ನು ಮೊದಲು ಆಳಮಕ್ಕಳ ಕುಣಿತವೆಂದು ಕರೆಯುತ್ತಿದ್ದರು. ಆಳ ಮಕ್ಕಳು ದೇವರ ಸೇವಾ ಕುಣಿತವೆಂದು ಕರೆದುಕೊಂಡರು. ಗುಡಿಯ ಮುಂದೆ,

ಗುಡಿಯ ಸುತ್ತಲೂ ಕುಣಿಯುವ ಈ ಆಳು ಮಕ್ಕಳ ಕುಣಿತವೂ ಆರಾಧನಾ ಮೂಲದಿಂದಲೇ ಶುರವಾದದ್ದು" ಎನ್ನುವ ಡಾ। ನಿಂಗಣ್ಣ ಸಣ್ಣಕ್ಕಿ ಅವರು, ಮುಂದುವರೆದು, 'ಡಾ। ಬೆಟಗೇರಿ ಕೃಷ್ಣಶರ್ಮ ಹಾಗೂ ಯಲ್ಲಪ್ಪ ಗೋಡೇರ ಎಂಬ ದಟ್ಟಿ ಕುಣಿತದ ಹಿರಿಯ ಕಲಾವಿದರು ತಿಳಿಸಿದ ತಮ್ಮ ಅನುಭವದ ಮಾತುಗಳನ್ನು ಆಧರಿಸಿ 'ಈ ಕಲೆಗೆ ದಟ್ಟಿ ಆಟ' ಅಥವಾ ಆಳಮಕ್ಕಳ ಕುಣಿತ ಎಂಬ ಹೆಸರೇ ಕಲಾವಿದರಲ್ಲಿ ಪ್ರಚಲಿತದಲ್ಲಿದ್ದಿತು. ಈ ತಂಡದ ಕಲಾವಿದರು ಸಾಮಾನ್ಯವಾಗಿ ಒಂದಿಲ್ಲೊಂದು ಗ್ರಾಮದೇವತೆಯ ಭಕ್ತರು, ಪೂಜಾರಿಗಳು ಆಗಿರುವರು.... ಕಲೆಯನ್ನು ಕಲಿಸಲು ಪ್ರಾರಂಭಿಸುವಾಗ ಮೊದಲು ಗುಡಿಯ ಪೌಳಿಯಲ್ಲಿ ಕಲಿಯುವಿಕೆ ಪ್ರಾರಂಭವಾಗಿ, ಕಲಿತ ಬಳಿಕ ಗ್ರಾಮದೇವತೆಯ ಮುಂದೆ ಮೊದಲು ಪ್ರದರ್ಶನ ನೀಡಿ ಬೇರೆಡೆಗೆ ಹೊರಡುವುದುಂಟು. ಮೂಲತಃ ಈ ಕುಣಿತವನ್ನು ಹಾಲುಮತದವರೇ ಕುಣಿಯುತ್ತಿದ್ದರು, ಬಾರಿಸುತ್ತಿದ್ದರು, ಜಿಗಿಯುತ್ತಿದ್ದರು, ಹಾರಿಕೆ ಹಾರುತ್ತಿದ್ದರು. ಬರುಬರುತ್ತ ಜನಪದ ಕಲೆಗಳಿಗೆ ಜಾತಿಗಳೇ ಇಲ್ಲ.... ಎಂದು ತಿಳಿದಾಗ ಇತರರೂ ಇಂತಹ ಕಲೆಗಳ ಪ್ರದರ್ಶನಕ್ಕೆ ಮನಸ್ಸು ಮಾಡಿದರು' ಎಂದು ಹೇಳಿರುವ ಅಂಶಗಳೂ ಅಗತ್ಯವಾಗಿ ಗಮನಿಸುವಂತಿವೆ (ಜಾನಪದ ತರಂಗಗಳು, ಪು. ೬೬-೬೭).

ದಟ್ಟಿಕುಣಿತ ಕಲೆಯ ಕಲಿಕೆಯ ಸಾಂಪ್ರದಾಯಕ ಕ್ರಮ ಹಾಗೂ ಪ್ರದರ್ಶನದ ರೀತಿಗಳ ಬಗೆಗೂ ಡಾ. ಸಣ್ಣಕ್ಕಿ ಅವರು ದಾಖಲಿಸಿರುವ ಮಾಹಿತಿ ಹೆಚ್ಚು ವಿಶ್ವಾಸನೀಯವೂ, ಇತರರಿಗೆ ಮಾಹಿತಿಪೂರ್ಣವೂ ಆಗಿರುವುದರಿಂದ, ಅವರು ನೀಡಿದ ಅಂಶಗಳನ್ನೇ ಇಲ್ಲಿ ಸಂಗ್ರಹರೂಪದಲ್ಲಿ ನೀಡಲಾಗಿದೆ:

**ಕಲಿಕಾ ಕ್ರಮ** : ದಟ್ಟಿ ಆಟವನ್ನು ಚಿಕ್ಕ ಹುಡುಗರಾಗಲೀ, ತರುಣರಾಗಲೀ ಕಲಿಯಲು ಪ್ರಾರಂಭಿಸಬಹುದು. ಹಾಗೆ ಈ ಆಟ ಕಲಿಯಲು ಅಪೇಕ್ಷಿಸಿದವರು ಮೊದಲು ತಮ್ಮ ಮನೆಯವರಿಗೆ ತಿಳಿಸಿ, ಬಳಿಕ ಊರ ಹಿರಿಯನೊಬ್ಬನಿಗೆ ತನ್ನ ಅಪೇಕ್ಷೆ ತಿಳಿಸಬೇಕು. ಆನಂತರ, ಆ ಹಿರಿಯ ಆತನನ್ನು ಗುಡಿಯ ಪೂಜಾರಿ ಅಥವ ತಂಡದ ಹಿರಿಯನಿಗೆ ಒಪ್ಪಿಸುತ್ತಾನೆ. ಹೀಗೆ, ಶಿಷ್ಯತ್ವಕ್ಕೆ ಒಪ್ಪಿಗೆಯಾದ ಹುಡುಗ/ತರುಣ ಶನಿವಾರವನ್ನು ಹೊರತುಪಡಿಸಿ ಮಿಕ್ಕ ಯಾವುದೇ ದಿನ ಮುಂಜಾವು ಅಥವಾ ಸಂಜೆ ಒಂದು ತೆಂಗಿನಕಾಯಿ, ಐದು ಕಾರಿಕ ಅಥವಾ ಉತ್ತತ್ತಿ (ಒಣಖರ್ಜೂರ) ಹಾಗೂ ಭಂಡಾರದೊಂದಿಗೆ ಗುಡಿಗೆ ಬರುತ್ತಾನೆ. ಅಲ್ಲಿ ಕಾಯಿ ಒಡೆದು, ದೇವರಿಗೆ ನಮಸ್ಕರಿಸಿ, ತನ್ನ ಗುರುವಿಗೆ ವಂದಿಸಿ, ಕೊಬ್ಬರಿ ಹಂಚುವ ಮೂಲಕ ತಂಡಕ್ಕೆ ಸೇರಿದಂತಾಗುತ್ತದೆ. ಅಂದು ಆತ ಅಲ್ಲಿ ಐದು ಹೆಜ್ಜೆ ತಾಳಿನೊಂದಿಗೆ ಕುಣಿಯುವ ಮೂಲಕ ಕುಣಿತದ ಓನಾಮವೂ ಪ್ರಾರಂಭವಾದಂತಾಗುತ್ತದೆ. ಆನಂತರದ ದಿನಗಳಲ್ಲಿ ನದಿ ದಂಡೆಯಲ್ಲಾಗಲೀ, ಹಳ್ಳದ ದಂಡೆಯಲ್ಲಾಗಲೀ, ನೀರಿನ ಬದಿಯಲ್ಲಾಗಲೀ ಆತನಿಗೆ ಜಿಗಿತ, ಈಜು, ಇತ್ಯಾದಿ ಕಲಿಸುತ್ತಾರೆ. ಯಾವ ಅಡೆತಡೆಯೂ ಇಲ್ಲದೆ ಹೆಜ್ಜೆ ಹಾಕುವುದು, ಜಿಗಿಯುವುದು, ಕುಣಿಯುವುದು ಕಲಿತ ಮೇಲೆ ನೀರಿನಲ್ಲಿ ಲಾಗ ಹಾಕುವ ಸಾಧನೆ ಮಾಡಿಸುತ್ತಾರೆ. ನಿಂತಲ್ಲೇ ಮುಂದಕ್ಕೆ ಲಾಗ ಹಾಕುವುದು

(ಮುಂಗಾನಿ), ಹಿಂದಕ್ಕೆ ಲಾಗ ಹಾಕುವುದು (ಹಿಂಗಾನಿ) ವರಸೆಗಳನ್ನು ಕಲಿತ ಮೇಲೆ ಅಡ್ಡಡ್ಡ ಜಿಗಿಯುವುದು, ಎತ್ತರಕ್ಕೆ ಜಿಗಿಯುವುದು ಕಲಿಸುತ್ತಾರೆ. ದುಂಡಾಗಿ ಸುತ್ತುಸುತ್ತು ಬಳಿಸುತ್ತ ತಿರುಗುವುದಕ್ಕೆ ಬಿರಕಿ ಸಾಗುತ್ತದೆ. ಬಗೆಬಗೆಯ ಗತ್ತಿನೊಂದಿಗೆ ಮೇಳದ ಮುಖ್ಯಸ್ಥರು ಹೇಳಿದಂತೆ ನಾದಕ್ಕೆ, ತಾಳಕ್ಕೆ ತಕ್ಕಂತೆ ಆತ ಕುಣಿಯಬೇಕಾಗುತ್ತದೆ. ಹೀಗೆ ಮೂರು-ನಾಲ್ಕು ತಿಂಗಳು ಈ ತಂತ್ರಗಳನ್ನೆಲ್ಲಾ ಕಲಿತಮೇಲೆ ಆತ ಕುಣಿತದ ಗುಂಪಿಗೆ ಸೇರುತ್ತಾನೆ.

**ಕಲಾವಿದರ ವೇಷ-ಭೂಷಣ** : ದಟ್ಟಿ ಕುಣಿಯುವ ಕಲಾವಿದರು ಕೆಂಪು ಬಣ್ಣದ ವೀರಚೊಣ್ಣ ತೊಡುವುದು ಸಂಪ್ರದಾಯ. ಸೊಂಟದವರೆಗೆ ಉದ್ದವಾದ ವೀರಚೊಣ್ಣವನ್ನು ಹಿಂದಿನ ತಲೆಮಾರಿನ ಕಲಾವಿದರು ಸ್ವತಃ ಉಟ್ಟುಕೊಳ್ಳುತ್ತಿದ್ದರು, ಈಗಿನವರು ಕುತಣಿ ಅರಿವೆಯಿಂದ ಹೊಲಿಸಿದ ಸಿದ್ಧ ಉಡುಪನ್ನು ಪ್ರದರ್ಶನದ ಸಂದರ್ಭದಲ್ಲಿ ತೊಟ್ಟು ಕೊಳ್ಳುವ ಅಭ್ಯಾಸ ಬೆಳೆದಿದೆ. ಮೈಗೆ ಅದೇ ಕೆಂಬಣ್ಣದ ಅಂಗಿಯನ್ನು ಸಡಿಲವಾಗಿರುವಂತೆ ಹೊಲಿಸಿ ಧರಿಸುತ್ತಾರೆ. ತಲೆಗೆ ಭಂಡಾರ ಬಣ್ಣದ ಪಟಕಾ (ರುಮಾಲು) ಸುತ್ತಿಕೊಳ್ಳುತ್ತಾರೆ. ಹೆಚ್ಚಿನ ಆಕರ್ಷಣೆಗಾಗಿ ಕೆಲವರು ರುಮಾಲಿನೊಂದಿಗೆ ನವಿಲುಗರಿ ಸಿಕ್ಕಿಸಿಕೊಳ್ಳುತ್ತಾರೆ; ಕೊರಳಿಗೆ ಮುತ್ತಿನ ಸರ ಹಾಕಿ, ಹಣೆಗೆ ಭಂಡಾರ ಇಟ್ಟುಕೊಳ್ಳುವುದು, ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳುವುದು, ನಡುವಿಗೆ ಕೆಂಪು ಅಥವಾ ಹಸುರು ದಟ್ಟಿ ಸುತ್ತಿಕೊಳ್ಳುವುದು ಸಾಮಾನ್ಯ. ದಟ್ಟಿ ಎಂದರೆ ಸಣ್ಣ ಸೀರೆ. ಇದನ್ನು ಸೊಂಟಕ್ಕೆ ಭದ್ರವಾಗಿ ಕಟ್ಟಿಕೊಳ್ಳುತ್ತಾರೆ. ಕೊರಳಿನಿಂದ ಎಡ-ಬಲ ಬದಿಗೆ ಬರುವ ಹಾಗೆ ದಡಿಧೋತರವನ್ನು ಸಿಕ್ಕಿಸಿಕೊಂಡು, ಎರಡೂ ಕೈಗಳಲ್ಲಿ ಕೆಂಪು ವಸ್ತ್ರಗಳನ್ನು ಹಿಡಿಯಲು ಸಿದ್ಧರಾದಾಗ, ತಂಡದ ಹಿರಿಯನೇ ಆ ವಸ್ತ್ರಗಳನ್ನು ಕುಣಿಯುವವರ ಕೈಗೆ ಕೊಟ್ಟು, ಹಣೆಗೆ ಭಂಡಾರ ಹಚ್ಚುತ್ತಾನೆ. ಅವರು ಆತನಿಗೆ ಶಿರಬಾಗಿ ನಮಸ್ಕರಿಸುತ್ತಾರೆ. ಕುಣಿತಕ್ಕೆ ಸಾಥ ನೀಡುವ (ಹಿಮ್ಮೇಳ) ಕೈಪಟ್ಟಿ, ತಾಳ, ಸನಾದಿ, ಕೊಳಲು ವಾದಕರೂ ಇದೇ ರೀತಿಯ ಸಾಂಪ್ರದಾಯಿಕ ವೇಷಭೂಷಣ ತೊಡುತ್ತಾರೆ. ಆದರೆ, ಕೈಲಿ ಕೆಂಪು ವಸ್ತ್ರ ಹಿಡಿಯುವುದಿಲ್ಲ. ಹೀಗೆ ಸಿದ್ಧವಾದವರು ಮೊದಲು ಒಂದು ನಿಮಿಷ ಆದಿಗತ್ತು ಬಾರಿಸಿ ಬಳಿಕ ಪ್ರದರ್ಶನಕ್ಕೆ ಸಾಲಾಗಿ ಹೊರಡುವುದು ಪದ್ಧತಿ.

## ಪ್ರದರ್ಶನ

ದಟ್ಟಿ ಕುಣಿತವನ್ನು ಸಾಮಾನ್ಯವಾಗಿ ನೆಲದ ಮೇಲೆ ಪ್ರದರ್ಶಿಸುತ್ತಾರೆ. ಕೆಲವೊಮ್ಮೆ ಅಡ್ಡೆಯ ಮೇಲೆ ಪ್ರದರ್ಶಿಸುವಾಗ ಇಡೀ ಅಡ್ಡೆ ಬಯಲು ರಂಗಭೂಮಿಯ ಮೂರು ನಾಲ್ಕುಪಟ್ಟು ವಿಸ್ತಾರವಾಗಿ ನಿರ್ಮಾಣವಾಗಬೇಕಾಗುತ್ತದೆ. ಅದು ದೊಡ್ಡದಿದ್ದಷ್ಟು ಕಲಾವಿದರಿಗೆ ಹೆಚ್ಚು ಸ್ಫೂರ್ತಿದಾಯಕವೆನಿಸುತ್ತದೆ. ವಾದ್ಯದಲ್ಲಿ ಪ್ರಧಾನವಾದುದು ದಿಮ್ಮು (ಸಣ್ಣಡೊಳ್ಳು). ತಾಳು, ಸುತಿ-ಸನಾದಿ, ಕೊಳಲು ಇವೆಲ್ಲವೂ ಪಕ್ಕವಾದ್ಯಗಳಾಗಿರುತ್ತವೆ.

ದಿಮ್ಮುವಿನ ಗತ್ತಿನೊಂದಿಗೆ ಇತರ ವಾದ್ಯಕಾರರು ವಾದ್ಯಗಳನ್ನು ನುಡಿಸುತ್ತಾರೆ. ಆದಿಗತ್ತು ಪ್ರಾರಂಭದ ಆಕರ್ಷಣೆ. ಬಲಗೈಯಿಂದ ಕೈ ಪಟ್ಟು (ದಿಮ್ಮು) ಬಾರಿಸುತ್ತ, ಎಡಗೈ ಬಿರುಸು ಕಡ್ಡಿಯಿಂದ ನುಡಿತ ಚಲಾಯಿಸುವುದು :

**ಆದಿಗತ್ತು : ಕಡ ಕಡs ಕಡs ಕಡ ಕಡ ಕಡ**
**ಧಿಂ ಧಿಂ ಧಿಂ**
**ಕಡ ಕಡs ಕಡs ಕಡ ಕಡ ಕಡs**
**ಧಿಂ ಧಿಂ ಧಿಂ**
**ದಾದಿಮ್ ದಾದಿಮ್**

ಹೀಗೆ, ದಿಮ್ ದಿಮ್ ದಿಮ್ ನಾದಿನ ಜೊತೆ ತಾಳ, ಸನಾದಿ, ಸುತಿ, ಕೊಳಲು ನುಡಿಸುತ್ತಾರೆ. ಕುಣಿತಕಾರರು ಒಂದೇ ಸಾಲಿನಲ್ಲಿ ಪ್ರೇಕ್ಷಕರ ಎದುರಾಗುತ್ತಾರೆ. ಈಗ ಬಯಲು ಗತ್ತು ಶುರುವಾಗುತ್ತದೆ.

**ಎಡಗೈ ಕಡ್ಡಿಯಿಂದ ಗಿತ್‌ತ್ ಗಿತ್ತ ತಾಕಡ್.....**

ಹೀಗೆ ೫-೬ ಸಲ ನರ್ತನದಿಂದ ಒಂದೇ ಮೇಳವಾಗಿ ನರ್ತನ ನಡೆಯುವುದು. ಒಮ್ಮೊಮ್ಮೆ ೧೦-೧೧ ಸಲ ನರ್ತನ ಮಾಡುವುದುಂಟು. ಕುಣಿತಗಾರರೆಲ್ಲರ ಹೆಜ್ಜೆಗಳು ಸಮನಾಗಿ ಏಕಕಾಲದಲ್ಲಿ ಅಭಿನಯಕ್ಕೆ ಕೈಗಳು ಚಲಾವಣೆಗೊಳ್ಳುತ್ತವೆ. ಕೈಯಲ್ಲಿಯ ಕೆಂಪು ವಸ್ತ್ರ ಆಕರ್ಷಕವಾಗಿರುತ್ತದೆ. ಕುಣಿತಗಾರರು ಕುಂತು ಏಳುವಾಗ ಡುಂ ಡುಂ ಡುಂ; ಡುಂ, ಡುಂ, ಡುಂ, ಡುಂ

**ಡುಂ ಡುಂ ಡುಂ: ಡುಂ, ಡುಂ, ಡುಂ, ಡುಂ,**

ಲಾಗಗಳು ಅಂದರೆ ಹಿಂಗಾನಿ ಮತ್ತು ಮುಂಗಾನಿ ದಿಂಗ್ ದಿಂಗ್, ದಾಂಗ್ ದಿಂಗ ದಾಂ ದಿಂಗಾಂಗ್ ದಿನ್ ಹೀಗೆ ನಾಲ್ಕು ಮಾತ್ರೆಯ ಸಂಗೀತ ಸಾಗುತ್ತಲೇ ಕುಣಿತಕಾರರು ಒಮ್ಮೆಲೇ ಹಾರಿಕೆಯಿಂದ ಹಿಂದೆ ಅಂತರಲಾಗ ಹಾಕುವರು. ನಾಲ್ಕು ಮಾತ್ರೆಯ ಸಂಗೀತವು ಎಂಟು ಮಾತ್ರೆಯವರೆಗೆ, ಹನ್ನೆರಡು ಮಾತ್ರೆಯವರೆಗೆ ಸಾಗುತ್ತದೆ. ಈ ಲಾಗಗಳು ಹಿಂದೆ ಮುಂದೆ ಹಾರಿಕೆಯಲ್ಲಿ ನಡೆದಾಗ ಕಲಾವಿದರು ಧರಿಸಿದ ಬಟ್ಟೆಗಳು ಮನಮೋಹಕವಾಗುತ್ತವೆ. ಕುಣಿತ ರಸ ತುಂಬುತ್ತದೆ. ರಸಭರಿತವಾಗುತ್ತದೆ. ದಿನ್ ದಿನ್ ತಿಟಕ್ ತಿಟಕ್ ದಿನ್ ನುಡಿತದೊಂದಿಗೆ ಮುಕ್ತಾಯಕ್ಕೆ ಬರುತ್ತಾರೆ.

ಮುಂಗಾನಿ ಹಾಕುವಾಗ ಕೊನೆಯ ಇಬ್ಬರ ನಂತರ ಆಚೆ-ಈಚೆ ಮತ್ತು ಸಾಲಿನ ಮಧ್ಯದಲ್ಲಿರುವ ನರ್ತಕರು ಲಾಗ ಹಾಕುತ್ತಾರೆ. ಎರಡು ಸಲ, ಮೂರು ಸಲ ಹೀಗೆ ನುಡಿತಕ್ಕೆ ತಕ್ಕಂತೆ ನರ್ತಿಸುವರು.

**ಬಿರಿಕೆಯು ವೀರ, ರೌದ್ರ, ರಸಗಳ ಪರಾಕ್ರಮ ತೋರಿಸುವ ದೃಶ್ಯ**
**ಕೈ ಪಟ್ಟು : ದಿಂಗ್ ದಾಂಗ್, ದಾಂಗ್ ದಿನ್**
**ದಾಂಗ್ ದಿಂಗ್ ದಿನ್ ದಾಂಗ್**
**ದಿನ್ ದದಿನ್ ದಿನ್**

ಒಬ್ಬೊಬ್ಬರಂತೆ ಬಿರಿಕೆ ತಿರುವುತಾರೆ. ಸಾಲಿಗೆ ಬರುತ್ತಾರೆ. ಬಗರಿ ತಿರುಗುವಂತೆ ಹಾರಿಕೆ ಮಾಡಿ ತಿರುಗುವುದೇ ಬಿರಕಿ ಎಂದೆನಿಸಿದೆ. ಒಬ್ಬರಂತೆ, ಇಬ್ಬರಂತೆ ತಿರಗುತ್ತಾರೆ. ದುಂಡಾಗಿ ಕುಣಿಯುತ್ತ ಬಿರಕಿ ಒಬ್ಬನು ತಿರುಗಿದರೆ, ಸಾಲಿನಲ್ಲಿ ಬಿಟ್ಟು ಇಬ್ಬರು ತಿರುಗುತ್ತಾರೆ.

ದುಂಡ ಗುಣಿತದ ಮಧ್ಯದಲ್ಲಿ ಬಂದು ಬಿರಕಿ ಲಾಗಗಳು ನಡೆಯುತ್ತವೆ. ಪಕ್ಕವಾದ್ಯ, ತಾಳು ಕೈಪಟ್ಟ ಜೊತೆ ನುಡಿಸುತ್ತಾರೆ. ಮತ್ತೆ ಸಾಲಿಗೆ ಬರುತ್ತಾರೆ. ಬಲಗೈಯಲ್ಲಿ ಕೈ ಬೀಸಿ ಎಡಗೈಯನ್ನು ಟೊಂಕದ ಮೇಲೆ ಇಟ್ಟುಕೊಂಡು ತಿರುಗುತ್ತಾರೆ.

ಈ ವೇಳೆಯಲ್ಲಿ ಹಿಮ್ಮೇಳವಾಗಿ ಶಕ್ತಿದೇವಿಯ ಹಾಡುಗಳನ್ನು ಹಾಡುತ್ತಾರೆ; ತಮ್ಮ ಇಷ್ಟ ದೇವತೆಗಳನ್ನು ಕುರಿತು ಹಾಡ ಹಾಡುತ್ತಾರೆ. ಕುಣಿತ ಬಹುರಭಸಕ್ಕೇರುತ್ತದೆ. ರೌದ್ರಕ್ಕೆ ಕುಣಿತ ತಿರುಗುತ್ತದೆ.

**ಬಂಕ ಕಟ್ಟುವುದು** : ಕೈಪಟ್ಟುಮುಕ್ತಾಯವಾಗುತ್ತಿದ್ದಂತೆ, ಮಧ್ಯದ ಕಲಾವಿದರೊಬ್ಬರು ಹಿಂದೆ ಸರಿದು, ಮೂಲ ದಟ್ಟಿವೇಷವನ್ನು ತೆಗೆದಿರಿಸಿ, ಕೆಂಪು ಹೆಜ್ಜೆ ಚಡ್ಡಿಯನ್ನು ಧರಿಸಿಕೊಂಡು, ಒಳ ಅಂಗಿಯನ್ನು ತೊಟ್ಟು ಐದು ಬಳೆಗಳುಳ್ಳ ಬಂಕವನ್ನು ತನ್ನೆದುರಿಗೆ ಹಿಡಿದು, ಲಾಗ ಹಾಕಿ ಎರಡು ಕಾಲು, ಕೈಗಳು ತಲೆ ಈ ಬಳೆಯಲ್ಲಿ ಬರುವಂತೆ ಜಿಗಿದು ನಿಲ್ಲುತ್ತಾನೆ.

ದಿಂಗ್, ದಿಂಗ್, ದಿಂಗ್, ದಿಂಗದಾಂಗ, ದಿಂಗ್ ನುಡಿಯುತ್ತದೆ. ಸುತಿ–ಸುನಾದಿಗಳು ಎತ್ತರ ದನಿ ಬೀರುತ್ತವೆ. ಬಂಶ್ ಹಾಕಲು ಜಿಗಿತ ಒಂದು ಕಡೆಯಾದರೆ ಸಾಲು ಗುಣಿತ ಹಿಂದೆ ನಡದೇ ಇರುತ್ತದೆ. ಕೊಳಲು ಇಂಪಾದ ದನಿ ಬೀರುತ್ತದೆ.

ಹೀಗೆ ಕುಣಿತ ಕ್ರೀಡೆಯುಕ್ತ ಕಲೆಯಾಗುತ್ತದೆ. ಕ್ರೀಡೆ ಕುಣಿತದ ಕಲೆಯಾಗುತ್ತದೆ. ಹೀಗಾಗಿ ಬಿರುಸಿನ ಈ ಚಮತ್ಕಾರಕ ಕುಣಿತ – ಕ್ರೀಡೆಗಳು ಜನಪದ ಬ್ಯಾಲೆಯನ್ನು ಪ್ರದರ್ಶಿಸುತ್ತವೆ.

ಕೈಪಟ್ಟಿನ ತಾಳಿನ ಸನಾದಿ, ಕೊಳಲು ವಾದ್ಯಗಳು ೫ ರಿಂದ ೧೫ ಮಾತ್ರೆಗಳ ವಾದನ ಮಧ್ಯದಲ್ಲಿ ಪಟ್ಟು, ಬೋಲ್ ಬಾರಿಸುವ ಕಸರತ್ತು ಕಲೆಯಾಗುವುದು.

ವೇಗದ ಕುಣಿತ ಪ್ರೇಕ್ಷಕರ ಚಿತ್ತಾಕರ್ಷಕತೆಯನ್ನು ಹೆಚ್ಚಿಸುತ್ತದೆ.

ಅಡ್ಡ ಹಾರಿಕೆಗಳು, ಉದ್ದಹಾರಿಕೆಗಳು, ಎತ್ತರ ಹಾರಿಕೆಗಳು, ಕುಣಿತದವರಿಂದ ಸಾಗುತ್ತವೆ. ಹಾಡಬೇಕಾದಲ್ಲಿ ಹಾಡುತ್ತಾರೆ. ಮುಕ್ತಾಯ ಬೇಕಾದಲ್ಲಿ

**'ಹಿಂದು ದೈತ್ಯರನೆಲ್ಲ**
**ಬಂಡ ಮಾಡಿದಂತಹ**
**ಪ್ರಚಂಡ ಮೂರತಿಗೆ**

ನಮ್ಮನಮನ' ಎಂದು ಸಾಲು ಗುಣಿತದಲ್ಲಿ ಹೆಜ್ಜೆ ಹಾಕಿ ಕುಣಿತ ನಿಲ್ಲಿಸುತ್ತಾರೆ. ಕುಣಿತವನ್ನು ಹಿಗ್ಗಿಸಬೇಕಾದಲ್ಲಿ ಕುದುರೆ ಕುಣಿತ, ನವಿಲು ಕುಣಿತ, ಮಂಡೆ ಕುಣಿತ ಇತ್ಯಾದಿಗಳನ್ನು ಪ್ರದರ್ಶಿಸುತ್ತಾರೆ.

**ದೀಪನೃತ್ಯ**: ದಟ್ಟಿಕುಣಿತದಲ್ಲಿ ತಲೆಯ ಮೇಲೆ ಸಮೆ (ಉದ್ದವಾದ ದೀಪ) ಹೊತ್ತು ಕೆಲವು ತಂಡದವರು ಸಾಲಾಗಿ ನರ್ತಿಸುತ್ತಾರೆ. ಆದಿಗತ್ತು, ಬಯಲುಗತ್ತುಗಳಲ್ಲಿ ಈ ನರ್ತನ ನಡೆಯುತ್ತದೆ. ಈಗ ಇಪ್ಪತ್ತು ವರುಷಗಳಲ್ಲಿ ಈ ದೀಪ ನೃತ್ಯವು ದಟ್ಟಿ ನೃತ್ಯದಷ್ಟೇ ಆಕರ್ಷಕ ಕಲೆಯಾಗಿ ಬೆಳೆಯುತ್ತಿದೆ. ದೀಪ ನೃತ್ಯವು ದಟ್ಟಿನೃತ್ಯದ ಒಂದಂಗವಾಗಿದೆ. ದಟ್ಟಿ ಕುಣಿತದ ಮುಕ್ತಾಯ ಅಥವಾ ಮಂಗಳದ ವೇಳೆಯಲ್ಲಿ ದಟ್ಟಿ ವೇಷ – ಭೂಷಣಗಳಿದ್ದು, ಬರೆದೆಲೆಯ ಮೇಲೆ ಸಮೆ (ಉರಿಯುತ್ತಿರುವ ಸಮೆ)ಯನ್ನು ಇಟ್ಟುಕೊಂಡು ಕುಣಿತ ಮಾಡುತ್ತಾರೆ.

ದಟ್ಟಿ ಕುಣಿತದಲ್ಲಿ ವೀರ, ರೌದ್ರ ರಸಗಳಲ್ಲಿ ಉತ್ಸಾಹ ಕುಣಿತದವರ ಪರಾಕ್ರಮ ತೋರಿಸುವ ಕೈಪಟ್ಟು ಈ ವಾದ್ಯ ದೀಪ ಕುಣಿತ(ನೃತ್ಯ)ಕ್ಕೂ ಪ್ರಮುಖ ವಾದ್ಯವಾಗಿದೆ. ಈ ಕುಣಿತಕ್ಕೆ ಪಕ್ಕ ವಾದ್ಯಗಳೆಂದರೆ ಕೈ ತಾಳುಗಳು, ಸನಾದಿ ಮತ್ತು ಕೊಳಲು, ಇತ್ತೀಚೆಗೆ ಚರ್ಮವಾದ್ಯವಾದ ಡಗ್ಗಾ(ತಬಲಾ) ಉಪಯೋಗಿಸುವುದು ಕಂಡು ಬಂದಿದೆ.

ಮಂಗಲಮಯ ಕುಣಿತವಾಗಿರುವ ದೀಪದ ಕುಣಿತದಲ್ಲೂ, ವಾದ್ಯಮೇಳದವರು ಅಡ್ಡೆ ಏರುವಾಗ ಮುಂದಾಗಿ ಬಲಭಾಗ ಅಥವಾ ಉತ್ತರ ಭಾಗದಿಂದ ಮುಂದಾಗುತ್ತಾರೆ. ಹಿಂದಿನಿಂದ ಉರಿಯುವ ಸಮೆ ಹೊತ್ತ ೫, ೭, ೯, ೧೧ ಹೀಗೆ ಕಲಾವಿದರು ಎರಡೂ ಕೈಗಳಲ್ಲಿ ಕೆಂಪು ವಸ್ತ್ರ ಬೀಸುತ್ತ ಕುಣಿತದ ಅಭಿನಯ ತೋರುತ್ತ ಪ್ರೇಕ್ಷಕರಿಗೆ ಎದುರಾಗುತ್ತಾರೆ.

**ಕೈ ಪಟ್ಟಿನ ಸಂಗೀತವು :**

**ಕಡs ಕಡs ಕಡs ಕಡs ಕಡs ಕಡs ಕಡಕಡs**
**ದಾದಿಮ್ ದಾದಿಮ್ ದಾದಿಮ್ ದಾದಿಮ್ ದಾದಿಮ್**

ಹೀಗೆ ನುಡಿಯುತ್ತಿರುತ್ತದೆ. ಪಕ್ಕ ವಾದ್ಯದವರು ಇದೇ ರೀತಿ ವಾದ್ಯಗಳನ್ನು ನುಡಿಸುತ್ತಿರುತ್ತಾರೆ.

ಸಾಲುಗುಣಿತ, ದುಂಡುಗುಣಿತ, ನವಿಲುಗುಣಿತಗಳನ್ನು ಕುಣಿದು, ಪಕ್ಕಕ್ಕೆ ಸರಿದು ಸಾಲಾಗುತ್ತಾರೆ.

ಗತ್ತಿನೊಂದಿಗೆ ಕಾಲು ಮೇಲೆ ಕುಕ್ಕುಟಾಸನದಲ್ಲಿ ಕುಳಿತು, ಸಮೆಯನ್ನು ತಲೆಯಲ್ಲಿಯೇ ಸರಿಸುತ್ತ, ಎರಡೂ ಕಾಲುಗಳಲ್ಲಿ ತೂಕದಿಂದ ಮುಂಗೈ ನೆಲಕ್ಕುರುಳಿ (ಉರುಗಾಸನವಂತೆ) ಸಮೆಯನ್ನು ಹಿಂದೆಲೆಗೆ ಸರಿಸಿ, ಕೈಗಳನ್ನು ಹಿಂದೆ ಕಟ್ಟುತ್ತಾರೆ. ಒಂದೇ ಸಾಲಿನಲ್ಲಿ ಸಮೆಗಳು ತಲೆಯ ಮೇಲೆ (ಗುಂಡುಗಲ್ಲಿನಲ್ಲಿ ಸಾಲಾಗಿ ಸಮೆ ಉರಿಯುವ ದೃಶ್ಯ) ಶೃಂಗಾರ ರಸವನ್ನು ಸೂಚಿಸುತ್ತವೆ. ಅಷ್ಟರಲ್ಲಿ ಅವರೆದುರು ನೋಟುಗಳನ್ನು ಇಡುತ್ತಾರೆ. ಕುಣಿತದವರು ನಾಲಿಗೆಗಳಿಂದ ತಮ್ಮೆದುರು ಇರುವ ನೋಟನ್ನು ತೆಗೆದುಕೊಳ್ಳುತ್ತಾರೆ. ಸಾವಕಾಶವಾಗಿ ಮೇಲೇಳುತ್ತಾರೆ. ಸಮೆಗಳು ನೆತ್ತಿಯ ಮೇಲೆ ಸರಿಯಾಗಿ ಕೂಡುತ್ತವೆ. ಈ ದೃಶ್ಯವು ಬಹು ಆಕರ್ಷಣೀಯವಾಗಿ ತೋರುತ್ತದೆ ಹೀಗೆ ಕುಣಿತ ಮತ್ತೆ ಸಾಕಿ, ಹಿಂದಕ್ಕೆ ಮುಂದಕ್ಕೆ ಸಾಗುತ್ತದೆ. ಕಲಾವಿದರ ಕೈಗಳಿಗೆ ಹಣತಿ ದೀಪಗಳನ್ನು ನೀಡುತ್ತಾರೆ. ಕೈಗಳನ್ನು ಆಚೆ ಈಚೆ ಮಾಡುತ್ತ ಕುಣಿಯುತ್ತಾರೆ. ಹೀಗೆ ಕುಣಿದು ಸಾಲಾಗಿ ನಿಂತು, ದೀಪಗಳನ್ನೆಲ್ಲ ನೆಲಕಿಟ್ಟು (ರಂಗ ಮಂದಿರದ ತುದಿಗೆ) ಕೈ ಮುಗಿದು ಕುಣಿತ ಕೊನೆಗೊಳಿಸುತ್ತಾರೆ. ಇತ್ತೀಚೆಗೆ ಶಾಲಾ ವಿದ್ಯಾರ್ಥಿಗಳ ತಂಡಗಳು ಈ ನೃತ್ಯ ತೋರುತ್ತಾರೆ. ದಟ್ಟಿಕುಣಿತ, ದೀಪ ಕುಣಿತ ಪ್ರತ್ಯೇಕವಾಗಿ ಕಂಡರೂ ಅವೆರಡು ಆರಾಧನಾ ಕಲೆಯ ದಟ್ಟಿಕುಣಿತವೇ ಸರಿ.

**ಆಕರ** : ಡಾ। ನಿಂಗಣ್ಣ ಸಣ್ಣಕ್ಕಿ : ಜಾನಪದ ತರಂಗಗಳು-

(ನಾಲ್ಕೈದು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಕಾರ್ಯಕ್ರಮ ನೀಡಿದ ಗೋಕಾಕ್ ತಾಲೂಕಿನ ಹಡಗಿನಾಳ ಗ್ರಾಮದ ತಂಡದವರ ಪ್ರದರ್ಶನವು ಡಾ। ಸಣ್ಣಕ್ಕಿ ಅವರು ಮೇಲೆ ನೀಡಿದ ವಿವರಗಳನ್ನೇ ಬಹುಮಟ್ಟಿಗೆ ಅಳವಡಿಸಿಕೊಂಡಿದ್ದು, ಅದ್ಭುತ ಪ್ರದರ್ಶನ ನೀಡಿತು. ಅವರ ಹೆಜ್ಜೆ-ಲಯದಲ್ಲಿ ಲಾಲಿತ್ಯವಿತ್ತು; ಬಾಗು-ಬಳುಕಿನಲ್ಲಿ ವಯ್ಯಾರವಿತ್ತು. ಹಿಂಗಣ್ಣು-ಮುಂಗಣ್ಣು ಹೊಡೆಯುವುದರಲ್ಲಿ ಪೌರುಷವಿತ್ತು. ವೀರಭದ್ರನ ಕುಣಿತದಲ್ಲಿನ ಒಡಪಿನಂತಹ ಹಿಮ್ಮೇಳದ ವಚನಕ್ಕೆ ಕುಣಿತ ಮಾಡುತ್ತಲೇ ಕಬ್ಬಿಣದ ಬಳೆಯಲ್ಲಿ ಅಂಗಾಂಗ ನುಗ್ಗಿಸುವ ಚಮತ್ಕಾರಗಳನ್ನೂ ಅವರು ತೋರಿಸಿದರು – ಟಿ.ಗೋ.)

# ದುರಗಮುರಗಿಯರ ಹಾಡ್ಗುಣಿತಗಳು

ದೇವರ ಹೆಸರಲ್ಲಿ ಭಿಕ್ಷೆ ಬೇಡಿ ಜೀವನ ಮಾಡುವುದನ್ನೇ ವೃತ್ತಿಯಾಗಿ ಅವಲಂಬಿಸಿದ ದುರಗಮುರಗಿ ಸಮುದಾಯದವರು ನಾಡಿನ ಗ್ರಾಮೀಣ ಭಾಗದಲ್ಲಿ ವಿಶೇಷವಾಗಿಯೂ ಪಟ್ಟಣಗಳಲ್ಲಿ ಅಪರೂಪವಾಗಿಯೂ ಕಂಡುಬರುತ್ತಾರೆ. ಊರ ಅಂಚುಗಳಲ್ಲಿಯೋ, ರಸ್ತೆ ಬದಿಗಳಲ್ಲಿಯೋ (ಪಾಳುಬಿದ್ದ ಕಟ್ಟಡಗಳಲ್ಲೂ) ತಾತ್ಕಾಲಿಕ ಸಣ್ಣ ಡೇರಾ ಹಾಕಿಕೊಂಡು ರಾತ್ರಿ ಕಳೆಯುವ ಇವರು ಹಗಲಿನಲ್ಲಿ ದೇವರು ಹೊತ್ತು ಬೀದಿ ಬೀದಿಗಳಲ್ಲಿ ದೇವರು ಮೆರೆಸಿ, ಭಿಕ್ಷೆ ಬೇಡುತ್ತಾರೆ. ಇದರ ಅಂಗವಾಗಿ ಜನಾಕರ್ಷಣೆಗಾಗಿ ದೇವತೆಯ ಮಹಿಮೆಯನ್ನು ಲಯಬದ್ಧವಾದ ನುಡಿಗಟ್ಟುಗಳಿಂದ ಒಂದು ರೀತಿ ಹಾಡೂ ಅಲ್ಲದ, ಸಾಮಾನ್ಯ ಮಾತೂ ಅಲ್ಲದ ರೀತಿ ರಾಗವಾಗಿ ಎಳೆದು ಹೇಳುತ್ತಾ, ಕೊಂಡಾಡುತ್ತಾ, ಲಘುವಾಗಿ ಕುಣಿತವನ್ನು ಮಾಡುತ್ತಾರೆ. ಹಾಡು-ಕುಣಿತದ ಭಿನ್ನ ಮಾದರಿಯ ದೃಷ್ಟಿಯಿಂದ ಈ ಪ್ರಕಾರವನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅಂತೆಯೇ, ಆ ಬಗೆಗಿನ ವಿವರವನ್ನು ಇಲ್ಲಿ ಆಯ್ದು ಕೊಡಲಾಗಿದೆ:

- **ವೇಷಕಟ್ಟಿ ಕುಣಿತ**

ಮರಗವ್ವ ದೇವತೆಯ ಹೆಸರಿನ ಮೇಲೆ ಪೋತುರಾಜನ ವೇಷಕಟ್ಟಿ ಈ ಗಂಡಸರು ಮನೆ ಮನೆ ತಿರುಗುತ್ತ ಕುಣಿಯುತ್ತಾರೆ. ಟೊಂಕದಿಂದ ಮೇಲಕ್ಕೆ ಬೆತ್ತಲೆ ಮೈಗೆ ಲಡ್ಡು ಹೊಡೆದುಕೊಳ್ಳುತ್ತ ಆರ್ಭಟಿಸುತ್ತ ಆ ಹಾ ಹಾ ಹಾ ಹ್ಹಾ ಹ್ಹಾ ಎನ್ನುತ್ತ ಕುಣಿಯುತ್ತಾರೆ. ಹೆಂಗಸು ಬುರುಬುರು ವಾದ್ಯ ಬಾರಿಸುತ್ತಿರುತ್ತಾಳೆ.

ಮೊದಲೆಲ್ಲ ಊರುಗಳಿಗಿಂತ ಹೆಚ್ಚಾಗಿ ಅಡವಿಯಲ್ಲಿಯೇ ಠಿಕಾಣಿ ಹಾಕುತ್ತಿದ್ದ ಈ ಜನರಿಗೆ ಕಾಡಲ್ಲಿಯ ಕಟ್ಟಿಗೆಯ ಗೊಂಬೆಯೇ ಮರಗವ್ವ ದೇವತೆಯಾಗಿತ್ತು.

ಕ್ರಮೇಣ ಕಾಡಿನಿಂದ ದೂರಾಗಿ ಊರಿಗೆ ಹತ್ತಿರವಾದರು. ಮರಗಮ್ಮ ಎಂದರೆ ಮೃತ್ಯುದೇವತೆ, ಸಾವಿನ ಹೆದರಿಕೆಯಿಂದಲೇ ಮರಗಮ್ಮ ದೇವಿ ಹುಟ್ಟಿದ್ದಿರಬಹುದು. ಮುಖ್ಯವಾಗಿ ಪ್ಲೇಗು, ದೇವಿಗಳಂತಹ ಭಯಂಕರ ಬೇನೆಗಳು (ರೋಗ) ಬಂದಾಗ ಈ ದೇವತೆಗೆ ನೀರು ನೀಡಿ, ಮೊಸರು ತನುಂಡಿ ನೀಡಿ ದೇವಿಯ ಹೊಟ್ಟೆಯನ್ನು ತಂಪು ಮಾಡುತ್ತಾರೆ. ಅವಳ ಹೊಟ್ಟೆ ತಣ್ಣಗಾದರೆ ತಮ್ಮ ಹೊಟ್ಟೆಗಳನ್ನೂ ತಣ್ಣಗಿಟ್ಟು

ಜೀವ ತಿನ್ನುವ ಭಯಂಕರ ರೋಗಗಳನ್ನು ಬಾರದಂತೆ ಕಾಪಾಡುತ್ತಾಳೆ ಎಂದವರು ನಂಬುತ್ತಾರೆ.

ಸಣ್ಣ ಕಪಾಟಿನಷ್ಟು ಎತ್ತರದ ಗುಡಿಯಲ್ಲಿ ಈ ದೇವತೆಯ ಕಟ್ಟಿಗೆಯ 'ಮಕ'ವನ್ನು ಕೂಡಿಸಿರುತ್ತಾರೆ. ಈಗೀಗ ಗುಡಿಗಳನ್ನು ತಲೆಯ ಮೇಲೆ ಹೊತ್ತುಕೊಂಡು ಬರುವ ಪರಿಪಾಠ ತಪ್ಪಿದೆ. ಭಾರವಾದ ಕಟ್ಟಿಗೆಯ ದೊಡ್ಡ ಗುಡಿಗಳಿಗೆ ಬದಲಾಗಿ ಈಗ ಸಣ್ಣ ಸಣ್ಣ ಗುಡಿ ತರಹದ ಪೆಟ್ಟಿಗೆಗಳು ಬಂದಿವೆ. ಹಗುರವಾಗಿರುವ ಇವುಗಳನ್ನು ತಲೆಯ ಮೇಲೆ ಹೊರುವ ಅವಶ್ಯಕತೆಯೇ ಇಲ್ಲ. ಕೈಯಲ್ಲಿ ಹಿಡಿದುಕೊಂಡೆ ಬರುತ್ತಾರೆ. ಪೋತುರಾಜನಾದರೆ (ಗಂಡಸು) ಎಡಗೈಯಲ್ಲಿ ಗುಡಿ, ಬಲಗೈಯಲ್ಲಿ ಲಡ್ಡು ಹಿಡಿದುಕೊಂಡು ಬರುತ್ತಾನೆ. ಪೋಚಮ್ಮ (ಹೆಂಗಸು)ನಾದರೆ ಕೈಯಲ್ಲಿ ಗುಡಿ, ಟೊಂಕಕ್ಕೆ ಬುರುಬುರು ವಾದ್ಯವಿರುತ್ತದೆ.

ಆದರೆ ಮೊದಲು ಹೀಗಿರುತ್ತಿರಲಿಲ್ಲ. ಕಟ್ಟಿಗೆಯ ದೊಡ್ಡ ಗುಡಿಯನ್ನು ಗಂಡಸೇ ತಲೆಯ ಮೇಲೆ ಹೊತ್ತು ತರುತ್ತಿದ್ದ. ಅವನ ಜೋಡಿ, ಸಾಧಾರಣವಾಗಿ ಅವನ ಹೆಂಡತಿ ಬುರುಬುರು ವಾದ್ಯದೊಂದಿಗೆ ಬರುತ್ತಾಳೆ. ಹೀಗೆ ಇಬ್ಬರೂ ಊರಲ್ಲಿ ಒಂದು ಪ್ರಮುಖ ಬೀದಿಯಲ್ಲಿ ಗುಡಿಯನ್ನು ಇಳಿಸುತ್ತಾರೆ. ಆ ಜಾಗ ಚೌರಾಸ್ತಾ ಆದರೂ ಆಗಿರಬೇಕು ಅಥವಾ ಸರ್ಕಲ್ ಆದರೂ ಆಗಿರಬೇಕು. ಕಾರಣ ಊರ ಜನರೆಲ್ಲ ಆ ಸ್ಥಳದಿಂದ ತಿರುಗಾಡುವಂತಿರಬೇಕು. ಗುಡಿಯಲ್ಲಿ ಇಳಿಸಿ ಪೋತುರಾಜನು ಆಟಕಟ್ಟುವನು. ಅದಕ್ಕಿಂತ ಮೊದಲೇ ಪೋಚಮ್ಮ ತನ್ನ ಬುರುಬುರು ವಾದ್ಯವನ್ನು ಬಾರಿಸುತ್ತ ಮನೆಮನೆಗೆ ಹೋಗುತ್ತ "ತಾಯಿ ಬಂದಾಳ ಬರ್ರೇ..... ಮರಗವ್ವ ಬಂದಾಳ ಬರ್ರೇ ನಮ್ಮವ್ವಾ...." ಎಂದು ಹಾಡುತ್ತ ಒಂದು ಸುತ್ತು ಸುತ್ತಿ ಬರುತ್ತಾಳೆ. ಆ ಬುರುಬುರು ವಾದ್ಯದ ಸದ್ದು ಎಷ್ಟು ತೀಕ್ಷ್ಣವಾಗಿರುತ್ತದೆಯೆಂದರೆ ಹಳ್ಳಿಯ ಮೂಲೆ ಮೂಲೆಯ ಪ್ರತಿಯೊಂದು ಮನೆಗೂ ಕೇಳಿಸಿ ಆ ಮನೆಯವರನ್ನು ಎಳೆದು ತರುತ್ತದೆ. ಮರಗಮ್ಮ ದೇವತೆ ಎಂದರೆ ಯಾರೂ ಆಸಡ್ಡೆ ಮಾಡುವ ಹಾಗಿಲ್ಲ. ಅವಳು ಹೇಳಿ ಕೇಳಿ ಮೃತ್ಯುದೇವತೆ. ಸಾವಿನ ಸ್ವಾಮಿನಿ. ಅವಳಿಗೆ ಅಲಕ್ಷ್ಯ ಮಾಡಿದರೆ ತಮ್ಮ ಮಕ್ಕಳು ಮರಿಗಳು ರಕ್ತಕಾರಿ ಸತ್ತಾವು ಎಂದು ಊರ ಜನ ಭಯಪಡುತ್ತಾರೆ. ಭಯ ಭಕ್ತಿಗಳೆರಡನ್ನೂ ಏಕಕಾಲಕ್ಕೆ ತಮ್ಮ ದೇವತೆಯ ಬಗ್ಗೆ; ಜನರ ಮನಸ್ಸಿನಲ್ಲಿ ಹುಟ್ಟು ಹಾಕುವ ಹುನ್ನಾರು ಈ ದುರಗ ಮುರಗಿಯ ಮಂದಿಗೆ ಸಾಧಿಸಿದೆ.

ಕೇರಿಯಲ್ಲಿ ಮರಗವ್ವ ದೇವಿಯ ಗುಡಿ ಬಂದ ಸುದ್ದಿ ಬಲು ಬೇಗ ಹಳ್ಳಿತುಂಬೆಲ್ಲ ಹಬ್ಬುತ್ತದೆ. ಎಲ್ಲ ಮನೆಯವರು ಎರಡು ತಂಬಿಗೆ ತುಂಬ ನೀರು ಮತ್ತು ಮೊರದಲ್ಲಿ ಜೋಳ ಮೊದಲಾದ ದವಸ ಧಾನ್ಯಗಳನ್ನು ತೆಗೆದುಕೊಂಡು ಬರುತ್ತಾರೆ. ವೇಷ ಕಟ್ಟಿದ ಪೋತುರಾಜ ಟೊಂಕಕ್ಕೆ ಗೆಜ್ಜೆ ಸಣ್ಣ ಸಣ್ಣ ಗಂಟೆಗಳ ಸರ ಕಿಣಿ ಕಿಣಿಸುತ್ತ; ಕಾಲಲ್ಲಿಯ ಗೆಜ್ಜೆಗಳು ಘಿಲ್ ಘಿಲಿಸುತ್ತ ಮಾರಿಗೆ ಮರಗವ್ವನ ರೌದ್ರರೂಪದ 'ಮಕ'

ಹಾಕಿಕೊಂಡು ಕುಣಿಯುತ್ತ ಹಾ ಹಾ ಹಾ ಹಾ ಹ್ಹಾ ಹ್ಹಾ ಹ್ಹಾ ಎಂದು ಆರ್ಭಟಿಸುತ್ತ ಮೈಗೆ ಲಡ್ಡು ಹೊಡೆದುಕೊಳ್ಳುತ್ತಿರುತ್ತಾನೆ. ಕೆಳಗಿನಂತೆ ರಾಗವಾಗಿ ಹಾಡುತ್ತಲೂ ಇರುತ್ತಾನೆ. ಹೆಂಡತಿ ಬಾರಿಸುವ ಬುರುಬುರು ವಾದ್ಯದ ಗತಿಗೆ ಹೆಜ್ಜೆ ಕೂಡಿಸುತ್ತ ಕುಣಿಯುತ್ತಿರುತ್ತಾನೆ, ಎಲ್ಲ ಜನರು ಬರುವವರೆಗೂ.

ಬರ್ರೆಮ್ಮಾ.... ಬರ್ರೆವ್ವಾ... ಬರ್ರೆವಾ....
ನಿಮ್ ಕೇರಿಗೆ ಸುಕಾ.... ಊರಿಗೆ ಸುಕಾ....
ಆಡಾ ಮಕ್ಕಳಿಗಿ ಸುಕಾ.... ತೂಗಾ ತೊಟ್ಟಲಿಗಿ ಸುಕಾ....
ಓಣಿಯೊಳಗ ತಾಯಿ ಬಂದಾಳ.... ಮರಗವ್ವ ಬಂದಾಳ
ಆಡೂ ಮಕ್ಕಳ ತೂಗಾ ತೊಟ್ಟಿಲ ಸುಕಾ ಆಗಲಿ ಬರ್ರೀ.... ಬರ್ರೀ....
ಹಾಹಾಹಾಹಾಹ್ಹಾಹ್ಹಾಹ್ಹಾ.... ಹಾಹಾಹಾಹಾಹ್ಹಾಹ್ಹಾಹ್ಹಾ....

ಎನ್ನುತ ಖಡಲ್.... ಖಡಲ್ ಎನ್ನುವ ಸದ್ದಾಗುವಂತೆ ಮೈಗೆ ಲಡ್ಡು ಹೊಡೆದು ಕೊಳ್ಳುತ್ತಿರುತ್ತಾನೆ.

ಅವನು ಸ್ವಲ್ಪ ಸುಧಾರಿಸಿಕೊಳ್ಳಲು ತಡೆದರೆ ಅವನ ಹೆಂಡತಿಯಾದ ಪೋಚಮ್ಮ ಬುರು ಬುರು ವಾದ್ಯಬಾರಿಸುತ್ತ ತಾನು ರಾಗವಾಗಿ ಹಾಡುವಂತೆ ಹೇಳತೊಡಗುತ್ತಾಳೆ ಕೆಳಗಿನಂತೆ.

ಕೊಡದಾಗ ನೀರ ತಗೊಂಡು ಬರ್ರೆವ್ವಾ....
ತಾಯಿಗಿ ಕೈಕಾಲ ಮಾರೀಗಿ ತರ್ರೆವ್ವಾ....
ಪೂಜಾಕ ಸಾಮಾನ ತರ್ರೆವ್ವಾ ತಾಯಿಬಂದಾಳ ಬರ್ರೀ....
ಮರದಾಗ ಜ್ವಾಳಾ ತರ್ರೆವಾ.... ಉಡ್ಯಾಗ ಅನ್ನಾ ತರ್ರೀ....
ಬರ್ರೆವ್ವೊ ತಲ್ಲೀ.... ನಮ್ಮವ್ವಾರೆ.... ಬರ್ರಿ.... ಬರ್ರೀ....

ಇಷ್ಟೆಲ್ಲ ಆಗುವಷ್ಟರಲ್ಲಿ ಊರ ಮಂದಿಯೆಲ್ಲ ಮೊರದಲ್ಲಿ ಜೋಳ, ಜೋಡು ತಂಬಿಗೆಯಲ್ಲಿ ನೀರು, ಊದು, ಅರಿಶಿಣ, ಕುಂಕುಮ ತಂದು ಗುಡಿಯ ಮುಂದಿಡುತ್ತಾರೆ. ಗುಡಿಯ ಮುಂದಿನ ವಿಶಾಲ ಬಯಲಿನಲ್ಲಿ ಸುತ್ತಲೂ ಜನ ನೋಡುತ್ತ ನಿಲ್ಲುತ್ತಾರೆ. ನಡುವೆ ಪೋತುರಾಜ ಕುಣಿಯುವುದಕ್ಕೆ ಸಾಕಷ್ಟು ಜಾಗವಿರುತ್ತದೆ. ಅವನು ತನ್ನ ಎದೆ, ಬೆನ್ನಿಗೆ ಹೊಡೆದುಕೊಳ್ಳುವ ಲಡ್ಡಿನ ಪೆಟ್ಟು ತಮಗೆ ತಗಲೀತೆಂದು ಅಂಜಿ ಯಾರು ಅವನ ಹತ್ತಿರ ನಿಲ್ಲುವುದಿಲ್ಲ. ಬಹಳ ಹಿಂದೆ ಹಳ್ಳಿಗಳಲ್ಲಿ ಗೌಡ, ಕುಲಕರ್ಣಿಯವರ ಮನೆಯ ಮುಂದೆಯೇ ಗುಡಿ ಇಳಿಸುತ್ತಿದ್ದರಂತೆ. ಆಗೆಲ್ಲ ಅವರ ಪರಿವಾರದವರು ಹೊರಗೆ ಬಂದು ತಮ್ಮ ಮನೆಮುಂದಿನ ಕಟ್ಟೆಯ ಮೇಲೆ ಕುಂತು ಆದ ನೋಡಿ, ಖುಷಿ ಅಂತ ಬಹುಮಾನವಾಗಿ ಹಳೆಬಟ್ಟೆಯೋ, ಚಿಲ್ಲರೆ ಹಣವೋ ಕೊಡುತ್ತಿದ್ದರಂತೆ.

ಊರ ಮನೆಯವರೆಲ್ಲರಿಂದ ನೀರು, ಜೋಳ, ಪೂಜೆಯ ಸಾಮಗ್ರಿ ಬಂದಿದೆ ಅಂತ ಖಾತರಿಮಾಡಿಕೊಂಡ ನಂತರ ಪೋತುರಾಜ ತನ್ನ ಕುಣಿತವನ್ನು ನಿಲ್ಲಿಸಿ ಗುಡಿಯ ಬಾಗಿಲು ತೆರೆದು ಮರಗವ್ವನ ಪೂಜೆ ಮಾಡಲು ಸಿದ್ಧನಾಗುತ್ತಾನೆ. ಜನರು ತಂದಿಟ್ಟಿದ್ದ ತಂಬಿಗೆಗಳಲ್ಲಿಯ ನೀರೆಲ್ಲ ಗುಡಿಯ ಮುಂದೆ ಚೆಲ್ಲುತ್ತಾನೆ.... ದೇವಿಯ ಪಾದ ತೊಳೆದಂತೆ, ಕೆಳಗೆ ಕುಂತು ಪೂಜೆಗೆ ತೊಡಗುತ್ತಾನೆ. ದೇವಿಯ ಮೈಮೇಲಿದ್ದ ಸಾಮಾನುಗಳನ್ನು ಒಂದೊಂದಾಗಿ ತೆಗೆದು ಮಂದಿಗೆ ತೋರಿಸುತ್ತ ಕೆಳಗಿನಂತೆ ರಾಗವಾಗಿ ಹಾಡುತ್ತಾ ಹೋಗುತ್ತಾನೆ. ಬುರುಬುರು ವಾದ್ಯದ ಗತಿ ಈಗ ತೀರ ಮಂದವಾಗಿರುತ್ತದೆ.

ಗುಡಿಯೊಳಗಿಂದ ಪುಟ್ಟ ಬಟ್ಟಲನ್ನು ಹೊರತೆಗೆದು ಜನರಿಗೆ ತೋರಿಸುತ್ತ:

ಪೋತುರಾಜ : "ಇದು ಗೌಡ್ರ ಮಲ್ಲವ್ವ ಮಾಡಿಸಿಕೊಟ್ಟಾಳ ಬೆಳ್ಳಿ ಬಟ್ಟಾಲ.... ಎನ್ನುತ್ತಾನೆ. ತಕ್ಷಣ ಅವನ ನುಡಿ ಮುಗಿಯುವಾಗ ಬುರುಬುರು ವಾದ್ಯ ಬಾರಿಸುವವಳು ಅದೇ ಧಾಟಿಯಲ್ಲಿ ಹಾಡುತ್ತಾಳೆ.

ಬುರುಬುರು ಪೋಚಮ್ಮ : ತಾನೇ ತಂದಾನ.... ತಾನೇ.... ಅವನು ಮತ್ತೊಂದು ನುಡಿ ಎತ್ತಿಕೊಳ್ಳುತ್ತಾನೆ. ಆಗಲೂ ಅವಳು ಹೀಗೆಯೇ ಹಾಡುತ್ತಾಳೆ. ಹಾಡು ಕೆಳಗಿನಂತೆ ಮುಂದುವರೆಯುತ್ತದೆ.

ಪೋತುರಾಜ : ಇದು ಲಕ್ಕವ್ವ ಕೊಟ್ಟಾಳ ಬೆಳ್ಳಿ ಛತ್ರಿಕೀ....

ಪೋಚವ್ವ : ತಾನೇ ತಂದಾನ.... ತಂದಾನ ತಾನೇ....

ಪೋತುರಾಜ : ಇದು ಗಂಗಾಬಾಯಿ ಕೊಟ್ಟಾಳ ಬೆಳ್ಳಿ ಕಣ್‌ಬಟ್ಟಲಾ...."

ಪೋಚವ್ವ : ತಾನೇ ತಂದಾನ.... ತಂದಾನ ತಾನೇ....

ಪೋತುರಾಜ : ಇದು ಗೌರವ್ವ ಮಾಡ್ಸಿ ಕೊಟ್ಟಾಳ ಬೆಳ್ಳಿ ನತ್ತೂ....

ಪೋಚವ್ವ : ತಾನೇ ತಂದಾನ.... ತಂದಾನ ತಾನೇ....

ಪೋತುರಾಜ : ಇದು ಸಾಬವ್ವ ಮಾಡ್ಸಿ ಕೊಟ್ಟಾಳ ಬೆಳ್ಳಿ ಪಾದಾ....

ಪೋಚವ್ವ : ತಾನೇ ತಂದಾನ.... ತಂದಾನ ತಾನೇ....

ಹಾಡು ಹೀಗೆಯೇ ಬೆಳೆಯುತ್ತ ಹೋಗುತ್ತದೆ. ಎಲ್ಲ ಆಭರಣಗಳನ್ನು ಹೆಸರಿಸುತ್ತ ಅವರ ರಾಗ ರೂಪದ ಸಂಭಾಷಣೆ ಮುಂದುವರೆಯುತ್ತದೆ. ಬೆಳ್ಳಿಯ ಬಟ್ಟಲು, ಬೆಳ್ಳಿ ತೊಟ್ಟಿಲು, ಬೆಳ್ಳಿ ಛತ್ರಿಕೆ, ಮುತ್ತಿನ ನತ್ತು ಮೊದಲಾದವುಗಳನ್ನು ಯಾವ ಗೌಡ್ತಿಯೂ

ಮಾಡ್ತಿಯೂ ಮಾಡಿಸಿಕೊಡುವುದು ಸಾಧ್ಯವಾಗದ ಮಾತು. ಅದು ಬೆಳ್ಳಿಯದ್ದು ಇರಲಿಕ್ಕೂ ಇಲ್ಲ. ಪೋತುರಾಜ ಸುಳ್ಳು ಹೇಳುತ್ತಿದ್ದಾನೆ ಎನ್ನುವ ಸಂಶಯ ಸುತ್ತಲಿನ ಜನಕ್ಕೆ ಬರುತ್ತಿರುವಾಗಲೇ ಪೋಚಮ್ಮನ "ತಾನೇ ತಂದಾನ.... ತಂದಾನ ತಾನೇ...." ಎನ್ನುವ ನುಡಿಕೇಳಿ ಎಲ್ಲರೂ ಗೊಳ್ ಎಂದು ನಕ್ಕುಬಿಡುತ್ತಾರೆ. ಆ ಬೆಳ್ಳಿ ಬಟ್ಟಲು, ಬೆಳ್ಳಿ ತೊಟ್ಟಿಲು, ನತ್ತು, ಕಾಲುಂಗುರುಗಳನ್ನು ಯಾವ ಗೌಡ್ತಿಯೂ ಮಾಡಿಸಿಕೊಟ್ಟಿಲ್ಲ. ಈ ಪೋತುರಾಜ ತಾನೇ ತಂದಿದ್ದಾನೆ. ಸುಮ್ಮನೆ ಅವರಿವರ ಹೆಸರು ಹೇಳುತ್ತಾನೆ ಎನ್ನುವ ಅರ್ಥವನ್ನು ಅವಳ ನುಡಿಯಲ್ಲಿ ಜನರು ಕಂಡುಕೊಳ್ಳುತ್ತಾರೆ. ಅದು ಪ್ರಾಸಬದ್ಧವಾಗಿ ಕೂಡಿಸುವ ಸಂಗೀತದ ಒಂದು ಎಸಳು ಅನ್ನುವ ಗುಟ್ಟು ಬಹುಶಃ ಆ ಪೋತುರಾಜ ಮತ್ತು ಪೋಚಮ್ಮರಿಗೂ ಗೊತ್ತಿರಲಿಕ್ಕಿಲ್ಲ.

ಹೀಗೆ ಹಾಡುತ್ತಾ ಎಲ್ಲ ಆಭರಣಗಳನ್ನು ಹೊರತೆಗೆದು ಎತ್ತಿ ಸುತ್ತಲಿನ ಜನಕ್ಕೆ ತೋರಿಸಿ ಮತ್ತೆ ಒಳಗಿಡುತ್ತ ನಿಧಾನವಾಗಿ ದೇವಿಯ ಪೂಜೆ ಮಾಡುತ್ತಾನೆ. ಗಂಟೆ ಬಾರಿಸುತ್ತಾನೆ. ಜನರು ತಂದಿಟ್ಟಿದ್ದ ಅರಿಶಿನ, ಕುಂಕುಮ, ಹೂವು, ಊದುಬತ್ತಿಗಳನ್ನು ಗುಡಿಯಲ್ಲಿಡುತ್ತಾನೆ. ಒಂದಿಷ್ಟು ದೇವತೆಗೆ ಏರಿಸುತ್ತಾನೆ.

ನಂತರ ಎದ್ದು ನಿಂತು ಕುಣಿಯಲು ಸಿದ್ಧನಾಗುತ್ತಾನೆ.

ತಾಯಿ ಮೆರಗವ್ವೊ...... ಹಾಹಾಹಾಹಾಹಾ....... ಎಂದು ಒಮ್ಮೆ ಹಕಾರಿ ಹೊಡೆದು, ಮೊರದಲ್ಲಿಯ ಜೋಳ ಸಮೇತ ಮೊರದ ಮುಖವನ್ನು ಕೆಳಗೆ ಬಗ್ಗಿಸಿ ಹಿಡಿದು ಗರ್ರನೆ ಸುತ್ತಮುತ್ತ ತಿರುಗುತ್ತಾನೆ. ಹಾಗೆ ಗರಗರನೆ ಸುತ್ತಮುತ್ತ ಸ್ಪೀಡಾಗಿ ತಿರುಗುತ್ತಿದ್ದರೂ ಮೊರದಿಂದ ಒಂದು ದಾಣಿಯೂ (ಕಾಳು) ಜೋಳ ಕೆಳಗೆ ಜಾರಿ ಬೀಳುವುದಿಲ್ಲ. ಇದು ನೋಡುತ್ತಾ ನಿಂತಿರುವ ಜನರಿಗೆ ಮಂತ್ರದ ಚಮತ್ಕಾರದಂತೆ ಕಂಡು, ದೇವಿಯ ಪವಾಡದಂತೆ ಅನ್ನಿಸಿ ಭಯ ಭಕ್ತಿಯಿಂದ ಗಲ್ಲ ಗಲ್ಲ ಬಡಿದುಕೊಳ್ಳುತ್ತ ಮನದಲ್ಲೇ ಅವಳ ಮಹಿಮೆ ಕೊಂಡಾಡುತ್ತಾರೆ.

ಪೋತುರಾಜ ನಂತರ ಮೊರವನ್ನು ಕೆಳಗಿಟ್ಟು ಹಾಹಾಹಾಹಾ ಎಂದು ಆರ್ಭಟಿಸುತ್ತ ಕುಣಿತದ ಗತಿಯನ್ನು ಹೆಚ್ಚಿಸುತ್ತಾನೆ.

ಹಾಹಾಹಾಹಾ ತಾಯಿ ಮರಗವ್ವಾ
ಕೀಣಗಿ ಮರಗವ್ವಾ ಗೋಳೆದ ಲಕ್ಕವ್ವಾ
ಕಂವಟಗಿ ಮರಗವ್ವ, ಅಲೂರ ದುರ್ಗವ್ವಾ
ತಾಯಿ ಬಂದಾಳ್ರೇ ಯವ್ವೋ........ ಆಹಾಹಾಹ್ಹಾಹ್ಹಾಹ್ಹಾ

ಆವೇಶದಿಂದ ಆರ್ಭಟಿಸುತ್ತ ಆಕರಾಳ ವಿಕರಾಳ ವೇಷ, ಹಾವಭಾವ ಭಂಗಿಗಳಿಂದ, ಕುಣಿತದಿಂದ ಮತ್ತು ಎದೆ ಬೆನ್ನಿಗೆ ಲಡ್ಡು ಹೊಡೆದುಕೊಳ್ಳುವ ಗತ್ತಿನಿಂದಾಗಿ ಸುತ್ತಲಿನ ಜನರ ಎಡೆಯಲ್ಲಿ ಭಯ ಬಿತ್ತುತ್ತಾನೆ. ಖಿಲ್..... ಖಡಲ್.....

ಖಡಲ್..... ಖಡಲ್..... ಎನ್ನುವ ಲಡ್ಡಿನ ಏಟುಗಳಿಂದ ಅವನ ಎದೆ ಬೆನ್ನುಗಳ ತುಂಬ ರಕ್ತದ ಧಾರೆಗಳು ಕೆಂಪಗೆ ಹರಿಯುತ್ತ ಹಚ್ಚಿದ ಹಳದ ಬಣ್ಣದಲ್ಲಿ ಬೆರೆಯುತ್ತಿರುತ್ತವೆ. ರಕ್ತ, ಬಣ್ಣ ಮತ್ತು ಬೆವರುಗಳಿಂದ ಅವನ ಮೈ ವಿಚಿತ್ರ ಭಯಂಕರವಾಗಿ ಹೆದರಿಕೆ ಹುಟ್ಟಿಸುತ್ತ, ಜಿಗುಪ್ಸೆಯೆನ್ನಿಸುತ್ತದೆ.

ಮುಖಕ್ಕೆ ಮಕ ಹಾಕಿಕೊಂಡಿದ್ದರಂತೂ ಮುಗಿಯಿತು. ಆ ಮಕದ ರುದ್ರಭಯಂಕರತೆ ಮತ್ತೊಂದು ಕಡೆ. ಬುರುಬುರು ವಾದ್ಯದ ಕಿವಿ ಗಡಚಿಕ್ಕುವ ಸದ್ದು ಇನ್ನೊಂದೆಡೆ ಪೋತುರಾಜನ ಆವೇಶದ ನುಡಿಗಳೊಂದಿಗೆ ಆರ್ಭಟಗಳೆಲ್ಲ ಕೂಡಿ ಆಸ್ಥಳದಲ್ಲಿ ವಿಚಿತ್ರವಾದ ವರ್ಣಿಸಲಸಾಧ್ಯವಾದ ಭಯಂಕರ ಕ್ರೌರ್ಯವನ್ನು ಹುಟ್ಟುಹಾಕುತ್ತವೆ. ಲಡ್ಡು ಹೊಡೆದುಕೊಂಡಲೆಲ್ಲ ಪುಟಿಯುವ ರಕ್ತ. ರಟ್ಟೆಯಲ್ಲಿಯ ಲೋಹದ ಕಡೆ(ಕಡಗ)ಗಳನ್ನು ಮೇಲೇರಿಸಿಕೊಂಡು, ತಕ್ಷಣ ಜಿಲ್ಲನೆ ಪುಟಿಯುವ ರಕ್ತವನ್ನು ಜನರಿಗೆ ತೋರಿಸುತ್ತ ಹಾಹಾಹಾಹ್ಹಾ ಎಂದು ಆರ್ಭಟಿಸುವ ಪೋತುರಾಜನನ್ನು ಕಂಡು ಬಸುರಿ ಹೆಂಗಸರು ಹೆದರಿ, ಗರ್ಭಪಾತವಾದ ಉದಾಹರಣೆಗಳೂ ಇವೆ.

ಅರ್ಧ ಮುಕ್ಕಾಲು ತಾಸಿನ ನಂತರ ಕುಣಿತ ನಿಲ್ಲುತ್ತದೆ. ಪೋತ್ಯಾ ಸುಸ್ತಾಗಿರುತ್ತಾನೆ. ಪೋಚಮ್ಮ ಎಲ್ಲರ ಮೊರಗಳಿಂದ ದವಸ ಧಾನ್ಯಗಳನ್ನು ತನ್ನ ಬಟ್ಟೆಯಲ್ಲಿ ಹಾಕಿ ಕಟ್ಟುತ್ತಾಳೆ. ರೊಟ್ಟಿಯನ್ನು ಜೋಳಿಗೆಯಲ್ಲಿ ಹಾಕಿಕೊಳ್ಳುತ್ತಾಳೆ. ಪೋತ್ಯಾ ತನ್ನ ಮೂರು ಬೆರಳಿಗೆ ಬರುವಷ್ಟು ಜೋಳವನ್ನು ಜೋಳಿಗೆಯಿಂದ ತೆಗೆದು ಹೊಳ್ಳಿ ಅವರ ಮರ(ಮೊರ)ಗಳಿಗೆ ಹಾಕುತ್ತಾನೆ....

ಪೋತುರಾಜನ ಕುಣಿತದಲ್ಲಿ ಎರಡು ಬಗೆಗಳಿವೆ.

೧. ದೇವಿಯ ಗುಡಿಯ ಮುಂದೆ ವರ್ತುಳಾಕಾರವಾಗಿ ಕುಣಿಯುತ್ತ ಹೋಗುತ್ತಾನೆ.

೨. ಉದ್ದಕ್ಕೆ ಮುಂದೆ ಹೋಗಿ ಹಿಂದಕ್ಕೆ ಬರತಕ್ಕಂಥ ಕುಣಿತವೂ ಇದೆ.

ಕೆಲವು ಸಲ ಗುಡಿಯಿಲ್ಲದೆ ಒಬ್ಬನೇ ಊರಲ್ಲಿ ಬಂದಾಗ ಭಿಕ್ಷೆಬೇಡುತ್ತಲೇ ಕುಣಿಯುತ್ತಿರುತ್ತಾನೆ. ಇದು ದುಂಡಗೂ ಅಲ್ಲ, ಉದ್ದಕ್ಕೂ ಅಲ್ಲ. ಎರಡನ್ನೂ ಹೊಂದಿದ ವಿಚಿತ್ರ ರೀತಿಯ ಕುಣಿತವಾಗಿರುತ್ತದೆ.

(ಆಕರ : ದುರಗಮುರಗಿಯರ ಸಂಸ್ಕೃತಿ: ಗೀತಾ ನಾಗಭೂಷಣ ೧೯೯೩)

# ದುರಗ ಮುರಗಿ ಹಾಡುಗಳು

ಜನಪದದಲ್ಲಿ ವಿವಿಧ ನಮೂನೆಯ ಹಾಡುಗಳು ಬರುತ್ತವೆ. ಅವುಗಳಲ್ಲಿ ದುರಗಮ್ಮನ ಹಾಡುಗಳದ್ದು ಒಂದು ವಿಶಿಷ್ಟ ಗುಂಪು. ಈ ಹಾಡುಗಳನ್ನು ದುರ್ಗಮ್ಮನ ಪೂಜಾರಿ ಹಾಡುವನು. ಇಂಥವರನ್ನು ಜನತೆಗೆ ದುರ್ಗಮುರಗಿ ಎಂದು ಕರೆಯುತ್ತಾರೆ. ದುರ್ಗಮುರಗಿ ಸಾಮಾನ್ಯವಾಗಿ ಮದುವೆ ಆಗಿರುತ್ತಾನೆ. ಅವನ ಹೆಂಡತಿ ದುರ್ಗಿಯ ಗುಡಿಯನ್ನು ಹೊತ್ತುಕೊಂಡು ಬರುತ್ತಾಳೆ. ಆಕೆಯ ಗಂಡನು ದೊಡ್ಡದಾದ ಬಾರುಕೋಲನ್ನು ಹೆಗಲಮೇಲೆ ಇಟ್ಟುಕೊಂಡು ಬರುತ್ತಾನೆ. ಗ್ರಾಮದ ಒಂದು ರಸ್ತೆಯ ಮೇಲೆ ಕಟ್ಟಿಗೆಯ ಗುಡಿಯನ್ನು ಇಟ್ಟು ದುರ್ಗಮ್ಮನ ಪೂಜೆಯನ್ನು ಪ್ರಾರಂಭಿಸುತ್ತಾನೆ. ಅವನ ಹೆಂಡತಿ ಡೋಲು ಬಾರಿಸಿ ಜನರನ್ನು ಕೂಡಿಸುತ್ತಾಳೆ. ಜನ ಸೇರಿದ ಮೇಲೆ ಗಂಡ ಹಾಡು ಹೇಳಲು ಪ್ರಾರಂಭಿಸುವನು. ಆ ಹಾಡು ಹೀಗಿರುವುದು :

**ದುರಗಮ್ಮನ ಹಾಡು**

ಹೊರಗೆ ಬಾರಮ್ಮ ದುರಗಮ್ಮ
ಈಕಿ ಆಳಕೀ ಕೇಳ್ಕೊರ್‍ರ್ರಿ
ದುರಗವ್ವ ಅಂತ ಹಾಡತಾರಿ
ದುರಗವ್ವ ಅಲ್ಲ ಮರಗವ್ವ
ಒಳಗಿನ ಮಂದಿ ನುಂಗಾಕೀ
ಹೊರಗಿನ ಮಂದಿ ಹೊರುವಾಕಿ
ಕಟಗಿ ದುರಗವ್ವ ಅಂತಾರ
ಕಟಗಿ ದುರಗವ್ವ ಈಕೆಲ್ಲ
ಕಟಗಿ ಮ್ಯಾಲ ಹೆಣಗಳುರುಸಾಕೀ
ದುರಗಮ್ಮ ಅಂದರ ಮಾರಮ್ಮ
ದುರಗಿ ಬ್ಯಾನಿ ತರುವಾಕೀ
ಮಂದಿನೆಲ್ಲ ಒಯ್ಯಕೀ
ದುರಗಮ್ಮ ಮಾರೆಮ್ಮ್ಯಾಗ್ಯಾಳ
ಮಾರೆಮ್ಮಗುದ್ದಮ್ಮಾಗ್ಯಾಳ

ಗುದ್ದಮ್ಮ ಒದರಮ್ಮಾಗ್ಯಾಳ
ಈಕೆಯ ಕಂಟಕ ತಿಳಿದಿಲ್ಲ
ಮೋಟ ಜನರಿಗೆ ಬುದ್ಧಿಲ್ಲ
ಕುಂತರ ಸಣ್ಣಾಕಿ ದುರಗವ್ವ
ನಿಂತರ ಮುಗಲ ಮುಟ್ಟಾಕೀ
ಎದ್ದರ ಗಾಳಿ ಅನಿಸ್ಯಾಳ
ಬ್ಯಾಡ ಬ್ಯಾಡಂದ್ರ ಕೇಳದಲೆ
ಬ್ಯಾಡರ ಬೆನ್ನಿಗೆ ಬಿದ್ದಾಳ
ಮಾಯಕಾರತಿ ಮರಗಮ್ಮ

**ಮೈಲವ್ವನ ಹಾಡು**

ಈಕ ನೋಡ್ರಿ ಮೈಲವ್ವ
ತೆಳಗಡೆ ನಾಡಾಗ ಹುಟ್ಯಾಳ್ರೀ
ಐದು ಮಂದಿ ಅಕತಂಗೇರು
ಮೈಲವ್ವ ದ್ಯಾಮವ್ವ ದುರಗವ್ವ
ಗುದ್ದವ್ವ ಒದರವ್ವ ಎಂಬವರು
ಮೈಲವ್ವ ದ್ಯಾಮವ್ವ ಜೂಜಾಡಿ
ಮೈಲವ್ವಜಗಳಕ ಇಳದಾಳ್ರಿ
ಮಾಯಕಾರ್ತಿ ಮೈಲವ್ವ
ಅಕ್ಕನ ಮಕ್ಕಳ ಕೊಂದಾಳ್ರಿ
ಅಕ್ಕನ ನಡಾನ ಮುರದಾಳ್ರಿ
ಬ್ಯಾನಿ ಬ್ಯಾಸರಕಿ ಹಾಕಾಕೀ
ಕೇಸರ ಬಾಸರ ಹಿಡಿಸಾಕಿ
ಭಕ್ತಿಯಿಂದ ಬೇಡಕೊಂಡ್ರ
ಚಿತ್ತಕೊಟ್ಟು ನಡಕೊಂಡ್ರ
ಹರಕಿ ಆಕಿ ಕೊಡತಾಳ್ರೀ
ನಂಬಿದ ಭಕುತರ ಕಾಯಾಕ್ರೀ
ಓಡಿಗೆ ತನುವ ಕೊಡವಾಕ್ರೀ
ಮಾಯಕಾರ್ತಿ ಮರಗಮ್ಮ
ಧರುಮ ಎಲ್ಲೀ ದಿನದಾಗ
ಕರಮವು ನಿತ್ಯ ನಡೆದೈತೀ

ಕರಮ ಬಿಟ್ಟು ನಡೆಯಿರಿ
ನಿಂತ ಜನರು ಕೇಳ್ರವ್ವ
ಈಕೆಯ ಜಗಳವ ಕೇಳ್ರವ್ವ
ಸಿಯಾನಮ್ಯಾಲ ಕೂಡ್ರಸ್ಯಾಳ್ರೀ
ಮಾದೇವ್ರಂತೇಲಿ ಹೋಗ್ಯಾಳ್ರೀ
ವರವ ಬೇಡಿ ಬಂದಾಳ್ರೀ
ಭಕ್ತರನ್ನೆಲ್ಲ ಸಲುವಾಕೀ
ಓಡಿಗೆ ತನುವ ಕೊಡುವಾಕೀ
ಮಾಯಕಾರುತಿ ಮೈಲವ್ವ

ದುರಗಮ್ಮನ ಹಾಡಿನಲ್ಲಿ ಆಕೆಯ ಬಗ್ಗೆ ಭೀತಿ ಹುಟ್ಟಿಸುವಂಥ ಮಾತುಗಳನ್ನು ಬಳಸಿದ್ದಾರೆ. ಆಕೆ ನಮ್ಮನ್ನೆಲ್ಲ ಆಳುವಾಕೆ, ಆಕೆಗೆ ಭಕ್ತಿ ಮುಟ್ಟದಿದ್ದರೆ ನಿಮ್ಮನ್ನು ಅವಳು ನುಂಗಬಹುದು ಇಲ್ಲವೆ ಹೊರಿಸಿಕೊಂಡು ಹೋಗುವಾಕೆ. ಅದೇನು ? ಅದೊಂದು ಕಟ್ಟಿಗೆಯ ಗೊಂಬೆ ಎಂದು ಯಾರಾದರೂ ಕೀಳಾಗಿ ನುಡಿದರೆ ನಿಮಗೆ ಶಾಪ ತಟ್ಟಿ, ಹೆಣಗಳನ್ನು ಒಟ್ಟಿದ ಕಟ್ಟಿಗೆಯ ಮೇಲೆ ಹಾಕಿಸಿ ಸುಟ್ಟು ಬಿಡುವ ಶಕ್ತಿ ಹೊಂದಿದಾಕೆ.

(**ಆಕರ** : ಉತ್ತರ ಕರ್ನಾಟಕದಲ್ಲಿ ಪ್ರಾಣಿಬಲಿ : ಡಾ। ಸ.ಜ. ನಾಗಲೋಟಿಮಠ; ಪ್ರಸಾರಾಂಗ, ಕವಿವಿ, ಹಂಪಿ, ಪ್ರಮು. ೨೦೦೧).

# ಕರ್ಬಲ ಹಾಡ್ಕುಣಿತ

ಈ ನಾಡಿನ ಹಿಂದೂ ಮತ್ತು ಮುಸ್ಲಿಮರ ಸಹಬಾಳ್ವೆಯಿಂದ ಹುಟ್ಟಿದ ಒಂದು ವಿಶೇಷ ಜನಪದ ಕಲಾಪ್ರಕಾರ – ಕರ್ಬಲ ಹಾಡು ಮತ್ತು ಕುಣಿತ. ಮೊಹರಂ ಆಚರಣೆಯ ಅಂಗವಾಗಿ ನಡೆಸುವ ಅಲಾವಿ ಕುಣಿತದಲ್ಲಿ ಹಾಡುಗ ಗೀತೆಗಳಿಗೆ ರಿವಾಯತ ಪದಗಳೆಂಬ ಹೆಸರಿದೆ. ಈ ರಿವಾಯತ ಹಾಡು–ಕುಣಿತಗಳಿರುವ ಇನ್ನೊಂದು ಹೆಸರೇ ಕರ್ಬಲ ಹಾಡು–ಕುಣಿತ. ಹೆಜ್ಜೆ ಹಾಡು–ಕುಣಿತ ಎಂಬ ಇನ್ನೊಂದು ಹೆಸರೂ ಇದೆ.

ಮೊಹರಂ ಒಂದು ಶೋಕಾಚರಣೆ. ಧರ್ಮಯುದ್ಧದಲ್ಲಿ ಮಡಿದ ವೀರರ ಸ್ಮಾರಣಾರ್ಥ ನಡೆಸುವ ಈ ಶೋಕಾಚರಣೆಯಲ್ಲಿ ಮಾತ್ರ ಕರ್ಬಲ ಹಾಡು–ಕುಣಿತಗಳ ಪ್ರದರ್ಶನ ಮಾಡಲಾಗುತ್ತದೆ. ಬೇರೆ ಸಂದರ್ಭದಲ್ಲಿ ಪ್ರದರ್ಶಿಸುವುದು ಅಶುಭ ಎಂಬ ನಂಬಿಕೆಯೂ ಇದೆ. ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಅಂಕಲಿ ಗ್ರಾಮದ ದಾವಲನದಾಫ್ ಎಂಬ ಪಿಂಜಾರ ಸಮುದಾಯದ ಕವಿ ಈ ಹಾಡುಗಳನ್ನು ರಚಿಸಿದನೆಂದು ಗುರುತಿಸಲಾಗಿದೆ. ಬೆಳಗಾವಿ ಜಿಲ್ಲೆಯ ಗೋಕಾಕ್, ಚಿಕ್ಕೋಡಿ, ಹುಕ್ಕೇರಿ, ರಾಯಭಾಗ, ರಾಮದುರ್ಗ, ಅಥಣಿ ಮತ್ತು ಸೌಂದತ್ತಿ ತಾಲೂಕು ಪರಿಸರದಲ್ಲಿ ಈ ಹಾಡು–ಕುಣಿತದ ಕಲಾವಿದರು ವಿಶೇಷವಾಗಿದ್ದಾರೆ.

ಕರ್ಬಲ ಕುಣಿತದ ಕಲಾವಿದರು ಸಾಮಾನ್ಯವಾಗಿ ನಸುಗೆಂಪು ಬಣ್ಣದ ಧೋತರವನ್ನು ಗಂಡುಗಚ್ಚೆ ಹಾಕಿ, ರಕ್ತಗೆಂಪಿನ ನಿಲುವಂಗಿ ತೊಟ್ಟು, ತಲೆಗೆ ತುರಾಯಿ ಸಿಕ್ಕಿಸಿದ ರುಮಾಲು ಕಟ್ಟಿರುತ್ತಾರೆ. ಕೊರಳಲ್ಲಿ ಮಣಿಸರಗಳು, ಕಿವಿಗೆ ಓಲೆ, ಕಾಲಲ್ಲಿ ಗೆಜ್ಜೆಕಟ್ಟಿದ್ದು, ಬಲಗೈಲಿ ಉದ್ದನೆ ವಸ್ತ್ರ, ಎಡಗೈಲಿ ಆಳೆತ್ತರದ ಬಲ್ಲೆ (ಆಯುಧ) ಹಿಡಿದಿರುತ್ತಾರೆ. ಕರ್ಬಲ ಯುದ್ಧಕ್ಕೆ ಹೊರಟ ವೀರಯೋಧರಂತೆ ಅವರ ಉಡುಪು, ಕುಣಿತ, ಅಭಿನಯ ಇರುತ್ತದೆ. ಸುಮಾರು ೧೬ ಜನಗಳ ತಂಡವು ಎರಡು ಭಾಗವಾಗಿ ಹಾಡು–ಹೆಜ್ಜೆಗತ್ತಿಗೆ ತಕ್ಕಂತೆ ಭಲ್ಲೆಯನ್ನು ಕುಟ್ಟುತ್ತ ಕುಣಿಸುತ್ತ, ಬಲಗೈ ವಸ್ತ್ರ ಬೀಸುತ್ತ, ಓಟದ ನಡಿಗೆಯಲ್ಲಿ ಹಾಡುತ್ತ–ಕುಣಿಯುತ್ತಾರೆ. ಹಾಗೆ ಮಾಡುವಾಗ ಕ್ರಮ ಅನುಸರಿಸಿ ಸಾಲಿನಲ್ಲಿ ಭಾಗವಾಗುತ್ತಾ, ಎರಡು ಸಾಲು–ನಾಲ್ಕಾಗುವುದು, ನಾಲ್ಕು–ಎಂಟಾಗುವುದು, ಹಾಗೇ ಸಾಲು ಕಳೆದು ವೃತ್ತಾಕಾರವಾಗುವುದು, ಕೂತು–ನಿಂತು, ಬಾಗಿ–ಬಳುಕಿ, ಗಕ್ಕನೆ ನೆಗೆದು ಭಲ್ಲೆಕುಟ್ಟಿ ವೀರಾವೇಶ ಮಾಡುತ್ತಾ, ವಿವಿಧ ಭಾವ–ಭಂಗಿಗಳಲ್ಲಿ ಪ್ರದರ್ಶನ ನೀಡುತ್ತಾರೆ. ಕೈಪಟ (ಸಣ್ಣಡೊಳ್ಳು), ರುಮುಕಿ, ರಣಹಲಗೆ, ಶ್ರುತಿ, ಸನಾದಿಯಂತಹ ವಾದ್ಯಗಳು ಈ ಹಾಡು–ಕುಣಿತಕ್ಕೆ ಹಿನ್ನೆಲೆ ವಾದ್ಯ ಒದಗಿಸುತ್ತವೆ. ಕರ್ಬಲ ಕುಣಿತದ ಕೆಲವು ಹಾಡುಗಳನ್ನು ಈ ಮುಂದೆ ನೀಡಿದೆ :

ಹೆಜ್ಜೆಯ ಪದ-೧

# ಸಲಾಮ

ಸಲಾಮ ಸಲಾಮ ನಮ್ಮ ನಿಮ್ಮದು ಸಲಾಮ
ಪೈಲೆ ಶಿವನ ಸದರಿಗೂ ಸಲಾಮ

ಒಂಬತ್ತು ತಿಂಗಳು ಹೊತ್ತು ಹಡೆದಂತಾ
ತಾಯಿ ತಂದೆಗೂ ನಮ್ಮ ಸಲಾಮ
ಮತ್ತೆ ಮಾಡೇವರಿಗೆ ಗುರುವಿಗೂ ಸಲಾಮ
ಸಲಾಮ ಸಲಾಮ ನಮ್ಮ ನಿಮ್ಮದು ಸಲಾಮ

ಸಾಕಿ ಸಲುಹಿದಂತಾ ಪ್ರೀತಿಲೇ
ಜ್ವಾಕಿ ಮಾಡಿದಂತಾ
ಚೆನ್ನಬಸವೇಶ್ವರನಿಗೂ ನಮ್ಮ ಸಲಾಮ
ಸಲಾಮ ಸಲಾಮ ನಮ್ಮ ನಿಮ್ಮದು ಸಲಾಮ

ಭೂಮಿ ಪಾಲಕಾ ಭೂಮಿ ಮಾಲಕಾ
ಪ್ರೇಮದ ರೈತಗೊಂದು ನಮ್ಮ ಸಲಾಮ
ಕಡದಾಡಿ ಬಡದಾಡಿ ಕಟ್ಟಿಗ್ಹೋದ ಮ್ಯಾಲ
ಗೌಡ ಕುಲಕರ್ಣಿಗೂ ನಮ್ಮ ಸಲಾಮ

ಸಲಾಮ ಸಲಾಮ ನಮ್ಮ ನಿಮ್ಮದು ಸಲಾಮ
ಪೈಲೆ ಶಿವನ ಸದರಿಗೂ ಸಲಾಮ

---

ಸಲಾಮ – ವಂದನೆ, ನಮಸ್ಕಾರ; ಸದರಿಗೆ – ಸನ್ನಿಧಿಗೆ; ಪೈಲೆ – ಮೊದಲಿಗೆ

# ಸಲಾಮ ಹೆಜ್ಜೆ

ಹೇ ಸಲಾಮ ಲೇತುಮ ಸಬ್ ಜಮಾತಕು ।
ಲೇನಾಜಿ ಸಬತುಮ ॥
ವೋಚೋಡತ ಬರೋದು ಆತ್ಮಾನಂದಕಿ
ಡಂಕೆ ಬಾಳದಿನತ
ಅದರ ಪರಿಣಾಮ ಎಮನ್ ಕೇ ಷುನಕಾ
ದೋಸ್ತ ಕುದರತರಾ
ಸಲಾಮ ಲೇ ತುಮ್ ಸಭ್ ಜಮಾತಕು
ಲೇನಾಜಿ ಸಬತುಮ್ ।

ಹೆ ಬುದಾ ಹುಕುಮತಕೆ ಕಲ್ಮಾಕೆ ನಾಮತೇರಿ
ಮಮ್ಮದಕಾ
ಹೆಮೇರಿ ಮಾರಮತಪೈಜ ಕ್ಯಾಹೈ
ಮಹಾಲಜನ್ನತಕಾ
ಕಲ್ಮ ಷಟಗಯಾ ಜಾಸುದಕಾ ಕಲ್ಮ
ಸಾಹೇರ ಕೆ ಉನಕಾ

ಹೇ ಸಲಾಮ ಲೇ ತುಮ ಸಭ ಜಷಕರು
ಲೇನಾಜಿ ಸಬ್ಬತುಮ
ಏ ಸದಾ ಕ್ಲಮಕೆ ಯಾದ ಮರಹಿನ
ಇಹ ನಾಮ ಮುಸಲ್ಮಾಂಕಾ

ಏ ಪಂಜಾಭಕ್ತಿನೆ ನಮಾಜ ಕರನಾ
ರೋಜ ರಹಮತಕಾ
ಕಮಾಲೆ ತೂಸೆ ಆಕೀರ ಕ್ಯಾ ಬಯಾನ
ಬಸ ಇಮಾಮ ಕಬರಕಾ
ಹೇ ಸಲಾಮ ಲೇ ತುಮ ಸಭಿ ಜಮಾತಕು ।
ಲೇನಾಜಿ ಸಬತುಮ

ಹೆಜ್ಜೆಯ ಪದ-೩

## ಕೇಳಿರಿ ಶಿಸ್ತ - ಶರಣರ ಕ್ರಾಂತಿ !

ಕೇಳಿರಿ ಶಿಸ್ತ, ಶರಣರ ಕ್ರಾಂತಿ ನೀವು ಇನ್ನಾ
ಕರ್ಬಲ ಎಂಬುದಿತ್ರಿ ದುಷ್ಟರ ಬಣ

ಬಿಟ್ಟಿ ನಡದಾತೋ ತಮ್ಮ ವಚನಾ ಸಾಹೇಬ ಹುಸೇನಾ
ಬಂಧು ಬಳಗ ಸಂಗಾಟ ತಗೊಂಡು ನಡದಾರೋ ಇನ್ನು
ಕೇಳಿರಿ... ಶಿಸ್ತ ಶರಣರ ಕ್ರಾಂತಿ ನೀವು ಇನ್ನಾ
ಕರ್ಬಲ ಎಂಬುದಿತ್ರಿ ದುಷ್ಟರ ಬಣ

ಬಿಟ್ಟ ಮನೆ ಮಾರು ದಾರಿಯ ನಡದಾರು ಶರಣರು ಹತ್ತದಿನಾ
ಕರ್ಬಲಕ ಹೋಗಿ ಅವರು ಹೊಡದಾರು ಠಾಣಾ
ಸುತ್ತ ಮುತ್ತ ಮಂದಿಲ್ಲಾ ಉಸುಬು ಮರದಾನ
ಕೆರೆದಂಡೆಯ ಮೇಲೆ ಹೋಗಿ ಹೊಡದಾರು ಠಾಣಾ

ಶರಣರ ಮಂದಿಗೆ ನೀರ ಇದ್ದಿದ್ದಿಲ್ಲ ಅಗದಿ ಕೂನ ।
ಶಿವಭದ್ರಗಪತ್ರ ಬರೆದ ಸಾಹೇಬ ಹುಸೇನಾ ॥
ಸಿಟ್ಟಿಗೆದ್ದ ಕ್ಯಾರಿಂದ ಹಿಂಗ ಅಂತಾನೋ ನೀರ ಕೊಡಾಕೋ ನೀನಾ
ಮಂದಿನ ಕರೆದ ಕೇಳ್ಯಾನು ಸಾಹೇಬ ಹುಸೇನಾ
ಪ್ರಪಂಚದ ಆಸೆ ಇದ್ದರೆ ಹೋಗಿರಿ ಸುಮ್ಮನು
ಏ ನಮ್ಮದು ಇಲ್ಲೇ ಲಡಾಯಿ ಆಗಿ ಹೋಗುವದು ಪ್ರಾಣಾ

ಹೆಜ್ಜೆಯ ಪದ–೪

## ಮಮ್ಮದ ನಿಶಾನ

ಮಮ್ಮದ ನಿಶಾನ ಕುದುರಿಗೆ ದಣಿವಿಲ್ಲಾ ।
ಹನ್ನೆರಡ ಗಾವು ಮ್ಯಾಲ ಹಾರಿತಲ್ಲಾ ।
ಆ ಕುದುರಿಗೆ ಸಮಾನರ‍್ಯಾರಿಲ್ಲಾ ॥
ಮಮ್ಮದಿನಿಶಾನ ಕುದುರಿಗೆ ದಣಿವಿಲ್ಲಾ.... ॥ ೧ ॥

ಬೆಳ್ಳಿ ಬಂಗಾರದ ಹಾರಿ ಜಡಿನ್ಯಾರಲ್ಲಾ
ಆ ಕುದುರಿ ಕುಣಿತಿತ್ರಿ ಎದುರಿಲ್ಲಾ
ರಣದಮ್ಯಾಲ ಹೋಗುದ ಇಟ್ಟಿತ ಬಯಾಲಾ
ಮಮ್ಮದ ನಿಶಾನ ಕುದುರಿಗೆ ದಣಿವಿಲ್ಲಾ.... ॥ ೨ ॥

ಆ ಕುದುರಿಗೆ ಲಗಮ ಯಾತರದಣ್ಣಾ
ಬಂದು ನಿಂತು ಸಭೆದಾಗ ಹೇಳಣ್ಣಾ
ಶೇಖ ಇಮಾಮ ಸಾಬಕೇಳ್ಯಾನಲ್ಲಾ
ಮಮ್ಮದಿನಿಶಾನ ಕುದುರಿಗೆ ದಣಿವಿಲ್ಲಾ.... ॥ ೩ ॥

ಹೆಜ್ಜೆಯ ಪದ-೫

# ಮೆಕ್ಕಾ-ಮದಿನಾ

ಮಕ್ಕಾಮದಿನಾ ಗಾದಿ ಠಿಕಾಣಾ
ಹುಸೇನ ಸಾಹೇಬನಾ ದೊಸ್ತರಹೋದಿನ್
ಬ್ರಹ್ಮ ಬರೆದ ಬರಿ ಯಾರಿಗಿ ತಪ್ಪಿಲ್ಲ
ಅವರಿಗೂ ಬಂದಿತು ತನವೇಸಾ

ದಂಡ ತಯಾರಾಗಿ ಹೊಂಟ್ತೂ ಲಡಾಯಿಗಿ
ದೃಷ್ಟಿ ಆದೀತೋ ಆ ದಿವಸಾ ॥
ಕರಬಲೆಂಬುದು ಅಡಿವ್ಯಾಗಿಳದಾರ
ಬೇಜಿದ ಮಾಡಿದಲ್ಲಾ ಮೋಸ ॥

ನೀರಹಾದಿಮ್ಯಾಲ ಪಾರ ಇಟ್ಟಿದಾರ್ರೀ
ಬಂಧೋಬಸ್ತ ಆದೀತು ಮೋಸಾ ।
ಮೂರದಿವಸ ಆತು ನೀರ ಕಾಣಲಿಲ್ಲ
ಸ್ವಾಮಿ ಜನ ಎಲ್ಲರೂ ಉಪವಾಸ ॥

ನೀರ ನೀರ ಅಂತ ಹೊರಳಾಡಿ
ಅಳತೈತಿ ಅಸ್ಗರಲಿ ಸಂಣಕೂಸ ।
ನೀರ ಕೊಡಲಿಲ್ಲ ತೀರ ಒಗದಾರ
ಹೊರಳಿಬಿತ್ತ ಅಸ್ಗರಲಿ ಕೂಸ ॥

ಬಾನು ಸಕೀನಾ ದುಃಖ ಮಾಡತಾಳ
ನೋಡಿ ನಡಗತೈಸಿ ಕೈಲಾಸ
ಅದರ ಸಂಕಟ ಹೇಳಲಿ ಎಷ್ಟಾ ?
ದಾವಲ ಮುಗಿಸಿದ ಕವಿಶ್ರೇಷ್ಟಾ ?

# ಸ್ವೈರ ಯಮನ

ಸ್ವೈರಯಮನ ದಾತ್ತರಾ
ಬಿಟ್ಟನಡೆದೋ ಗಾದಿವತನಾ
ದಂಡ ತಗೊಂಡು ಅರ್ಬಟಾ
ನುಡಿಸಧಾತ ಜನನ – ಜನನ....

ಕರವ ಮುಗಿದು ಕೇಳಿರೋ
ಅಪ್ಪಣೆ ಕೊಡರಿ ಬೇಗ ನಮಗ
ಪಿತೂರದಿಂದ ಕೊಯ್ದೆ ಹಸನನ
ಹಂತವೇಜಿದ ನೋಡೋ ಅವನ
ಪೂರ್ವದಲ್ಲಿ ನೌಕರಾ
ಮರೆತು ಕುಂತ್ರೋ ಈಗ ನಮ್ಮನ
ಸ್ವೈರಯಮನ ದಾತ್ತರಾ....

ಡಂತೆ ಹೊಡೆದೋಬಾದುರಾ
ಬಂದ ನಿಂತರೊ ಬೆಳೆತೋ ಕದನ
ಸೈ ಪಟುಗೊಂಡು ದುಂಧುರಾ
ಢಾಲವೆರಿಸಿದಾರೊ ವಜನ
ಜಿಗಿಸಿ ಕುದರಿ ಕಡಿದೊ ಮಂದಿನ
ಬಾಣ ಸುರಿಸಿ ಒಂದ ಸವನ
ಕೀಪ್ರ ಹಿಡಿಸಿದಾರೊ ಗನನ
ಧೂಳ ಹಾರಿ ಮುಚ್ಚೈತೋಗಗನ
ಅಡಗಿ ಹೋದ್ಯೋ ಬಾಸ್ಕರಾ
ಅಂಜಿ ವೇಜಿದ ಕುಂತೋ ಸುಮನ

ಸ್ವೈರಯಮನ ದಾತ್ವರಾ.....

ಪೂರ್ವದಲ್ಲಿ ನೌಕರಾ
ಮರೆತುಕುಂತ್ರೊ ಈಗ ನಮ್ಮನ
ದಂಡ ಕಡಿದು ಅರ್ಬಟಾ
ಮಡಿದು ಬಿದ್ದೋ ಭೂಪರಾ
ರಕ್ತದ ಹೊಳಿ ಹರಸಿ ಭುವನ
ರುಂಡ-ದಢಾ ಕಡಿದ ಚೆಲ್ಲ್ಯಾರ
ಖಾಸ ಮೇಜಿದ ದಂಡಿಗಿ ಮರಣ
ವೈರಿ ಗರ್ವ ಮಾಡಿದೊ ಹರಣ
ಕೀರ್ತಿ ಬೆಳಿಸಿದಾರೋ ಶರಣ
ಪೂರ್ವದಲ್ಲಿ ನೌಕರಾ
ಮರೆತುಕುಂತ್ರೋ ಈಗ ನಮನಾ..
ಸ್ವೈರಯಮನ ದಾತ್ವರಾ....
ಬಿಟ್ಟ ನಡೆದೋ ಗಾದಿವತನಾ....

# ಮಮ್ಮದ ಹನಿಪನ ಶೌರ್ಯ

ಮಹಮ್ಮದ ಹನಿಪ ಶಾಹಾಮರ್ದಾನ
ಮಾಡ್ಯಾರೋ ಕುದುರಿಗೆ ಸಾಮಾನ
ಹೊಂಟಾರೋ ರಣದಲಿ ಪೂರಮಾನ
ನುಡಿಶ್ಯಾರೋ ನೌಬತ ಜನನನನ ॥ ೧ ॥

ಹಿಮ್ಮೇಳ - ಮಮ್ಮದಹನಿಪ ಶಾಹಾಮರ್ಧಾನ
ದುಮಾಸ್ಕರ ಹೊಂಟಾರೊ ಪುರಮಾನ
ನೋಡ್ಯಾರೋ ವೇಜಿದ ಮಾರವಾನ
ಹುಡ್ಯಾರೋ ರಣದಲಿ ನಿಶಿಯಾನ
ನುಡಿಶ್ಯಾರೋ ನೌಬತ ಜನನನನ ॥ ೨ ॥

ಹಿಮ್ಮೇಳ - ಮಹಮ್ಮದನಿಪ ಶಾಹಾಮರ್ಧಾನಾ......
ಮುಟ್ಯಾರೋ ಶಹರ ಮದ್ಯಾನ
ಸಂಗ್ರಾಮಮಾಡ್ಯಾರೊ ಆದಿನ
ಎಬ್ಬಿಸ್ಯಾರೋ ಕಾಳಗ ದುಮಸ್ಯಾನ
ನುಡಿಶ್ಯಾರೋ ನೌಬತ ಜನನನನ ॥ ೩ ॥

ಹಿಮ್ಮೇಳ - ಮಮ್ಮದಹನಿಪ ಶಹಾಮರ್ಧಾನಾ.....
ಹಚ್ಚಾರೋ ಜರದ ನಿಶಿಯಾನ
ಹನೀಪ ಮಾಡಲಿಲ್ಲ ಅನುಮಾನ
ಹೊಕ್ಕಾರೋ ರಣದಲಿ ಪುರಮಾನ
ನುಡಿಶ್ಯಾರೋ ನೌಬತ ಜನನನನ ॥ ೪ ॥

ಹಿಮ್ಮೇಳ - ಮಹಮ್ಮದನಿಪ ಶಾಹಾಮರ್ದಾನ...
ಕಾಳಗ ಗವಿದಿತೋ ಮೈದಾನ
ನೋಡ್ಯಾರೋ ವೇಜಿದ ದುಶ್ಮನ
ಕೊಂದಾರೋ ವೈರಿ ಉತ್ಪನ್ನ
ನುಡಿಶ್ಯಾರೋ ನೌಬತ ಜನನನನ ॥ ೫ ॥

ಹಿಮ್ಮೇಳ – ಮಮ್ಮದನಿಪ ಶಾಹಾಮರ್ದಾನ.....
ಓಡ್ಯಾರೋ ವೇಜಿದ ದುಶಮನ
ಸೇರ್‍ಯಾರೋ ಅಡವಿ ಆರ್‍ಯಾಣ
ದಾವಲನ ಡಂಕ ಢಣನನನ
ನುಡಿಶ್ಯಾರೋ ನೌಬತ ಜನನನನ ॥ ೬ ॥

ಹಿಮ್ಮೇಳ – ಮಮ್ಮದಹನಿಪ ಶಾಹಾಮರ್ದನ
ನಂತರ ಮುಮ್ಮೇಳ

---

ಶಾಹಾಮರ್ದಾನ – ಶೂರಪುರುಷ; ನೌಬತ – ರಣಕಹಳೆ; ದುಮಶ್ಯಾನ – ಭಾರೀಜೋರಾಗಿ
ಮರಮಾನ – ಮುದ್ದಾಂ; ಮಾರವಾನ – ಮರಭೂಮಿ; ದಾವಲ – ದಾವಲ ನದಾಪ ಕವಿ
ಡಂಕ – ಡಂಗುರ/ಘಂಟೆ

**ಹೆಜ್ಜೆಯ ಪದ-೮**

# ಅಸ್ಕರಲಿ

ಅಸ್ಕರಲಿಯ । ಅಸ್ಕರಲಿಯ ।
ಎಂತು ಮರೆಯಲಿ ಇನ್ನಾ । ಸಂಣಬಾಲಕನಾ ।
ವೇಜಿದ ದುರುಳಾ ಮಾಡಿದೋ ಘಾತವನ್ನಾ
ಕೊಯ್ದಾರವನ ಶಿರವನ್ನಾ ಅಯ್ಯೋ ತೂಗಲಿ ಇನ್ನು ಯಾರನ್ನಾ ॥ ೧ ॥

ತರುಳಾ ನಿನ್ನ । ತರುಳಾ ನಿನ್ನ ।
ಹಡೆದೆನೆ ನಾನಾ । ಮರೆಯಲೆಂಗಿನ್ನಾ ॥
ಪೂರ್ವದಲಿ ಬೇಡಿ ಬಂದಿನೋ ನಿನ್ನ ।
ಇಂತಾದ್ದು ಇತ್ತೇನೊ ಮರಣ ಮರಿಗ್ಯಾಯ್ತೋ ತಾನಾ ॥ ೨ ॥

ಮಲಿಯ ಹಾಲನ್ನ । ಮಲಿಯ ಹಾಲನ್ನ ।
ಯಾರಿಗೆ ಕುಡಿಸಲಿ ನಾನಾ । ತರುಣ ಇಲ್ಲೇನೋ ಭಗವಾನ ।
ಒಯ್ದೆಯಲ್ಲೋ ಕರುಣೆಯಿಲ್ಲದ ಸಂಣ ತರಳನ್ನಾ ।
ದುಃಖ ಮಾಡುತ ಬಿದ್ದಾಳು ಬಾನುಸಕೀನಾ ॥ ೩ ॥

ಅಸ್ಕರಲಿಯ । ಅಸ್ಕರಲಿಯ ।
ಹೇಳತಿಷ್ಟು ತಾರಿಪನಾ । ಹೋಯಿತು ನನ್ನ ರತ್ನ ॥
ಎಷ್ಟಂತ ಹೇಳಲಿ ಆ ತಾಯಿ ದುಃಖವನ್ನಾ ।
ದಮ್ಮ ಇದ್ದರ ತೋಡಿಗೆ ತೊಡಿ ಕೊಡ ಬೇಕರಿನ್ನಾ ॥

ಹೆಜ್ಜೆಯ ಪದ–೯

# ಬಾನುಹರಿ

(ಕನ್ನಡ–ಮರಾಠಿ ದ್ವಿಭಾಷಾ ಪದ)

ಬಾನುಹರಿ । ಕಸ ಕೋಪೆ ಹರಿ ।
ಪ್ರಾಣ ತಳಮಳ ರಾಯನಾ
ತುಜಾ ಹುಜೂರ ದುಃಖ ಮಾಯನಾ

ಮಣಿ ಸಖಿನಾ ನಂದನಾ
ಪ್ರಾಣ ಸಖಿನಾ ತಂದಿನಾ
ಹೋಗೂಣು ತಳಮಳ ರಂಗನಾ
ಜಾಲ ಸಮುದ್ರ ದಾಟಿ ಬಂದನಾ
ದುಃಖ ತುಜಾ ಹಾಪಾವಣಾ ॥

ಬಾನಮಂಡಲ ಇದು ಜಾಣ
ಹೋಗೂಣು ಈಗಲೇ ಬೇಗನಾ
ಸೂರ್ಯಕಿರಣ ಸಮ ಬಾದನಾ
ಪಾಪ–ಪುಣ್ಯೆ ಯಾಸ ಪರಿದುನಾ
ಆತ್ಮಾರಾಟದಲಿ ರಾಯನಾ ॥

ಬಾಳ ತುಲಾಹಿ ನೋಡಿದನಾ
ಬಳಜಿಬಳ ಅಲ್ಲಿ ಯಾರನ್ನಾ
ದುಷ್ಟ ವೇಜಿದ ಮಹಾದುರ್ಜನಾ
ಬಾನುಸುತ ಜರಾ ತೇಜನಾ
ರಜಾ ಕೇಲಾ ಹಾಶೂರಾಣಾ ॥

ಜಾಲದುಃಖ ನೀ ಭುವನಾ
ಕೇಶರ ಭೂಶಿರ ಶಿವನಾ
ಯಾಕ್ಷಿತಿ ಮಾಯಾ ಮೋಹನಾ
ಕಾಯವ ನಂಬಿದವನಾ
ದಾವಲಮಜಕೂರ ಹೋ ಮನಾ ॥

ಹೆಜ್ಜೆಯ ಪದ–೧೦

# ಕ್ರೂ ಯೆಮನ್

ಕ್ರೂರ ಯೆಮನ್ ಸರಕಾರ ।
ಕೊರದಾನ ಕುತಗಿ ಕರಕರಾ ॥
ಕೊರದಾನ ಕುತಗಿ ಕರಕರಾ ।
ಅಂಜಿ ವೈರಿ ಥರರರಾ ॥

ಬಾಣ ಬಿಟ್ವಾನ ಬರರ । ಕೊರದಾನ ಕುತಗಿ ಕರಕರಾ ॥
ದುಷ್ಟ ವೇಜಿದ ಕಿರಿಕಿರ । ನಡಿಸ್ಯಾನ ವಾದ ತಕರಾರಾ ॥
ನಡಿಸ್ಯಾನವಾದ ತಕರಾರಾ । ಹೊಡೆದಹುಲಿಯಗದ್ದರಾ ॥
ಹಿಡದ ಎಳೆದ ದರರರಾ । ಕೊರದಾನ ಕುತಗಿ ಕರಕರಾ ॥

ಹತ್ತಿತ ಲಡಾಯಿ ಘನಘೋರ । ಹಾರೀತಧೂಳ ದುಂಧಕರಾ ॥
ಹಾರಿತಧೂಳ ದುಂಧಕರಾ । ಮುಚ್ಚಿ ಹೋದಿತೋ ದಿನಕರಾ ॥
ಚಕ್ರತಿರಿವ್ಯಾನೋ ಗರಗರಾ । ಕೊರದಾನೋ ಕುತಗಿ ಕರಕರಾ ॥
ಕೇಳ ಕವಿಯ ಮಾಧುರಾ । ಇಳಿದ ವೈರಿ ಜರರಾ ॥

ಕೊರದಾನೋ ಕುತಗಿ ಕರಕರಾ । ಪುಂಡ ಹನಿಪ ಬಾಧುರಾ ॥
ತಂದಾನೋ ವ್ಯಾಳೆ ದುಂಧರಾ । ಕೇಳಿ ಹನಿಪ ಸರದಾರಾ ॥
ಸೈಪ ಹಿರದಾನೊ ಸರರರಾ । ಕ್ರೂರ ಯೆಮನ ಸರಕಾರಾ ॥
ಕೊಂದಾನೋ ಕುತಗಿ ಕರಕರಾ । ಅಂಜಿ ವೈರಿ ಥರರರಾ ॥

ಕೇಳಲಡಾಯಿ ಮಜಕೂರಾ । ಅಂದಾನೋದಾವಲ ಚಾತುರಾ ॥
ಅಂದಾನೋದಾವಲ ಚಾತುರಾ । ಕೇಳಕವಿಯ ಮಾಧುರಾ ॥
ಇಳದಾನೋ ವೈರಿ ಜರರರಾ । ಕ್ರೂರ ಯೆಮನ ಸರಕಾರ ॥
ಕೊರದಾನೋ ಕುತಗಿ ಕರಕರಾ । ಅಂಜಿ ವೈರಿ ಥರರರಾ ॥

ಹೆಜ್ಜೆಯ ಪದ-೧೧

# ಪತ್ರದ ಮಜಕೂರ

ಪತ್ರ ಬಂದಿತೋ ಯಮನಕ
ಮಹಮ್ಮದನಿಪಗ ಕದನಕ
ದಂಡ ತಗೊಂಡು ಮದ್ದುಗುಂಡ
ಬಂದ ಮುಟ್ಟಿರೋ ಮದ್ದಿನಕ

ಡಂಕೆ-ಹೊಡೆದೋ ಮೊದಲಕ
ಬಿದ್ದೋ ವೇಜಿದ ಗದ್ದಲಕ
ಕಡದ ಬಡದ ಹೊಡದ
ನಡದರು ಮುಂದ ರಮಸೆಕ

ಹತ್ತಿದ ಹನಿಪ ಜಡಿಲಾಕ
ಸುತ್ತಿನ ಮಂದಿನ ಕಡಿಲಾಕ
ಕುತ್ತಿಗಿ ಒತ್ತಿದ ಮಸಕ ಹಾಕಿದ
ಹತ್ತಿದೊ ನೆಗವಿ ಜಡಿಲಾಕ

ಹಿಮ್ಮೇಳ : ಪತ್ರ ಬಂದಿತೊ ಯಮನಕ....

ವಲಿದ ಬಲಿದ ಕದನಕ
ಬಂದ ನಿತ್ರೋಮದ್ದಿವಕ
ಹೆದರಿಬೆದರಿ ಕೆದರಿಒದರಿ
ಕೋಣ ಬಿದ್ದಂಗ ಹುದಲಕ

ಜಬರ ತೆಬರ ಜಕ ಜಕ
ಹತ್ತ್ಯಾವೋಹತ್ಯಾರ ಮಿಂಚಲಾರ
ಬಂಜರ-ಕಂಜರ-ಹಮರೆ ತುಮಾರೆ
ಬರ್ಚಿಬಾಲೆ ಚಿಲಕತ

ಪಡೆದ ಜಯಾ ಜಕನಕ
ನಡೆದ ಹನಿಪ ಮದಿನಕ
ದಾವಲ ಮೊದಲ ಹೇಳಿದ
ಅಂವ ಮೊದಲು ಬ್ಯಾಡೋ ಗದ್ದಲ ಹಾಕಲಾಕ

ಹಿಮ್ಮೇಳ : ಪತ್ರ ಬಂದಿತೋ-ಯಮನಕ

---

ಮದ್ದಿನಕ - ಮದ್ಯಾಹ್ನದ ಹೊತ್ತಿಗೆ

ಹೆಜ್ಜೆಯ ಪದ-೧೨

# ಬಂಡ ಮತದ

ಬಂಡ ಮತದ ಹಿಂಡಮಂದ್ಯಾಗ । ಕಂಡಿ ಹೇಳೂದು ಚೆಂದನಾ ।
ಮೌಲಾಲಿ ಮಕ್ಕಳಿಬ್ಬರೂ ಪಠಾಣ । ಹಸನ-ಹುಸೇನಾ ॥
ಮೌಲಾಕರಕೊಂಡು ನಡೆದನಾ । ಕೇಳಿರಿ ಶಿಕಾರಿ ನಂದನಾ ॥ ॥ ೧ ॥

ಮಕ್ಕಾದೊಳಗೆ ಒಂದ ಗಿಳಿಯು । ಇತ್ತು ರತನ ಸಮಾನಾ ॥
ಬಂಗಾರದ ಪಂಜರ ದೊಳಗೆ । ಹಾಕಿ ಇಟ್ಟಿದಾರೊ ಆದನಾ ॥
ತಗೊಂಡು ನಡೆದಾರೊ ಗಿಣಿ ರಾಮನಾ । ಬ್ಯಾಟಿ ಆಡುತ ದಿನ್-ದಿನಾ ॥ ೨ ॥

ಮೌಲಲಾಲಿ ದಂಡ ತಗೊಂಡು । ಏರಿದೊ ಗಂಡ ತೇಜಿನಾ ॥
ಹಸನ ಹುಸೇನ ಮೇಣೆದೊಳಗ । ಮುಂದ ಡಂಕೆ ನಿಶಿಯಾನಾ ॥
ಗುಡ್ಡ ಗಂವರ ಇಂಜನಾ । ಅನ್ನುತ ನಡದಾರೋ ದಿನ್ । ದಿನಾ ॥ ೩ ॥

ಒಂದ ಆಲದ ಮರದ ಬುಡಕ್ಕ । ಕುಂತ ಮಾಡಾರ್‍ಯೊ ಚಿಂತಿನಾ ॥
ಗಿಡದ ಹಾಂಟಿ ಒಳಗ । ಸರ್ಪ ಬಂದು ಕೇಳ್ರಿನ್ನಾ ॥
ಸತ್ತ ಆಗಿತ್ರಿ ಮೂರದಿನಾ । ಬಸಿಯುತಿತ್ತರಿ ಒಂದಸವನಾ ॥ ೪ ॥

ನೀರಅಂತ ವಿಷಾ । ಗಿಂಡಿ ಒಳಗ ತಂಗೊದ್ರಣ್ಣಾ ॥
ಹಸನ ಹುಸೇನ । ಮಕ್ಕಳಿಬ್ಬರೂ । ತಗೊಂಡ ನಡದಾರೊ ಆಕ್ಷಣ ॥
ತಿಳಿದು ಗಿಳಿಯು ಕೈಯಾನಾ । ಹಾರಿಬಡಿತೋ ಗಿಂಡಿನಾ ॥ ೫ ॥

ಮೌಲಾಲಿ ಸಿಟ್ಟಿಗೇರಿ । ಬಿಟ್ರೋ ತಮ್ಮ ದಂಡನಾ ।
ಕರುಣ ಇಲ್ಲದ ಹೋಗಿ ಹಿಡಿದರೋ । ದೇವಲೋಕದ ಗಣಿರಾಮನಾ ।
ಕಿತ್ರೋ ಎರಡೂ ರೆಕ್ಕೆನಾ । ಬಾಯಿ ಇಲ್ಲದ ಕಂದನಾ ॥ ೬ ॥

ಪಂಚರಾಮ ಹಿಂಗ ಹೇಳಿದ ಇಲ್ಲಿಗೆ ಮುಗಿತ್ರಿ ಬಯಾನ ।
ಬಂಡಮತದ ಹಿಂಡಮಂದ್ಯಾಗ । ಕಂಡ ಹೇಳೂದು ಚೆಂದನಾ ॥
ಆಗೋ ಮುಕ್ತಿ ಸ್ವಾಧಿನಾ । ಬಿಟ್ಟು ಬಿಡೋ ಅಜ್ಞಾನಾ ॥

ಹೆಜ್ಜೆಯ ಪದ–೧೩

# ಖಡಕ ರಿವಾಯತ

ಏ ಖಡಕ ರಿವಾಯತ–
ಹುಡುಕೋ ಶಾಹಿರಾ ।
ಕೇಳತೆನ ನಾಯಿನ್ನಾ ॥
ಏ ನವಾಜ ಬಾಬಾ ಸಾಡಿ ಹೇಳಲಿಕ್ಕ
ಶಾಹಿರಲ್ಲೋ ನೀನಾ
ಕಲಕಟ ಆಡಿಹೋಗು ಸುಮ್ಮನ
ಹೌದೌದು ಅನಬೇಕು ಕುಂತ ಜನಾ

ಮೇಳ : ಏ ಖಡಕ ರಿವಾಯಿತ
ಹುಡುಕೂ ಶಾಹಿರಾ ॥

ಏ ಮಾಯಾರೂಪದಿಂದ ಮಣ್ಣ
ತಂದ ಕ್ಯಾರಿ ಕಿಲ್ಲೆ ಕಟ್ಯಾರಣ್ಣ
ಏ ನಾಲ್ಕೂ ಮೂಲಿಗೆ ನಾಲ್ಕು ಕಾನೆ
ಸುಧಾರಿಸಿ ಕಮಾನ ತೆಗೆದರಣ್ಣ
ಒಳಗ ಶೋಭೆ ಆಸಮಾನ
ಆಗ ಮಾಡ್ಯಾರೋ ಕೂನ

ಮೇಳ : ಏ ಖಡಕ ರಿವಾಯಿತ
ಹುಡುಕೋ ಶಾಹಿರಾ ॥.........

ಏ ಕಿಲ್ಲೇ ಕಟ್ಟಿಕ್ಯಾರಿ ಕಾವಲಕ್ಕಂತ
ಇಟ್ಯಾರೋ ಸನದಿ ಹಳಬರನ್ನಾ
ಏತಮ್ಮಾ ಹಮ್ಮ ಮಾಡಬ್ಯಾಡ
ತಮ್ಮಾ ಸರತಿ ಮೂರುದಿನ
ಯಾವಾರ ಹಿಡದ ಮಾಡು ಕೂನ
ಕಿಲ್ಲೇಕ ಯಮನ ಬಂದಿತಣ್ಣ

ಮೇಳ : ಏ ಖಡಕ ರಿವಾಯಿತ
ಹುಡುಕೋ ಶಾಹಿರಾ ।

---

ಕಿಲೆ–ಕೋಟೆ; ಹಮ್ಮ–ಅಹಂ; ಯಾವಾರ–ವ್ಯವಹಾರ; ಯಮನ–ಕೊನೆ.

ಹೆಜ್ಜೆಯ ಪದ-೧೪

# ಗೋಪೇದ ಕಡಿ – ಹೋಗೋಣ ನಡಿ

ಹಾಕ್ಯಾನೊ ಹನಿಪ ಕುದುರಿ ತಡಿ
ಸಿಟ್ಟಾಗಿ ಲಾಲಮುಂದ ಬೆಂಕಿ ಕಿಡಿ !
ಹಿಮ್ಮೇಳ : ಹಾಕ್ಯಾನೋ ಹನಿಪ ಕುದುರಿಗಿ ತಡಿ
ಸಿಟ್ಟಾಗಿ ಲಾಲಮಿಂದ ಬೆಂಕಿ-ಕಿಡಿ !

ಬೇಜರ್ಪ ಬೆನ್ನಮೇಲೆ ಬಿಟ್ಟೋ ಜಡಿ
ಆ ಬಿಟ್ಟ ಬಂದ ಗಡಾನ ನಡಿ
ಹೋಗಿ ದಮಸೆ ಮುಂದ ನಿಂತೋ ಬಡಾಕಡಿ
ವೇಜಿದ ಗಾಬರ್ಯಾಗಿ ಹೊರಗನಡಿ
ಗೋಪೇದ ಕಡಿ ಹೋಗೋಣು ನಡಿ ॥ ೧ ॥

ಹಿಮ್ಮೇಳ : ಹಾಕ್ಯಾನೋ ಹನಿಪ ಕುದುರಿಗಿ ತಡಿ....
ದುಮಸ್ಯಾನ ಎಬ್ಬಿಸಿದನಪ ಕಡೀಬಡಿ
ಆಸ್ಮಾನ ಮುಚ್ಚಿತಪ್ಪಾ ಧೂಳಹುಡಿ
ಕೈಕಾಲ ಗೀಸಿದಂಗ ನಾರಪಡಿ
ದೊಡ್ಡ ದೊಡ್ಡ ಪೈಲಮನ ಕುಸ್ತಿಗಡಿ
ಗೋಪೇದ ಕಡಿ.. ಹೋಗೋಣು ನಡಿ ॥ ೨ ॥

ಹಿಮ್ಮೇಳ : ಹಾಕ್ಯಾ ನೋ ಹನಿಪ ಕುದುರಿಗಿ ತಡಿ....

ಕಾಲ ಹಿಡಿದ ಬಡ್ಯಾಂವನೋಡಿ ಕಲ್ಲಪಡಿ
ಅಂಜಿಸರದೊ ವೇಜಿದ ಹಿಂತಾ ಬಡತಾ ನೋಡಿ
ಹೋಗಿ ಗುಡ್ಡಾ ಸೇರಿದಾನ ತರ್ಕ ಹಿಡಿ
ಸುರದಂಗ ಮುತ್ತ ದಾವಲನನುಡಿ
ಗೋಪೇದಕಡೆ – ಹೋಗೋಣು ನಡಿ ॥ ೩ ॥

ಹಿಮ್ಮೇಳ : ಹಾಕ್ಯಾನೋ ಹನಿಪ ಕುದುರಿಗಿ ತಡಿ....

---

ಆಸ್ಮಾನ – ಆಕಾಶ

ಹೆಜ್ಜೆಯ ಪದ-೧೫

# ಸ್ವರ್ಗದ ದಾರಿ

ನಬಿ ಸಾಹೇಬ ಸ್ವರ್ಗಕ ಹೋಗುವ ದಾರ್‍ಯಾಗ ।
ಐವತ್ತಲಕ್ಷ ಒಂಟೆಗಳ ಕಂಡೆವು ಈಗ ॥

ಒಂದ ಒಂಟಿ ತರುಬ್ಯಾರ ನಡುವ ದಾರ್‍ಯಾಗ ।
ಒಂಟಿಯ ಮೇಲೆ ಹೇರ್‍ಯಾರ ದೊಡ್ಡ ದೊಡ್ಡ ಸಂದಕ ॥
ಆ ಸಂದಕ ಇಳಿಸಿ ನೋಡೂವದರೊಳಗ ।
ಕೀಲಿ ಹಾಕಿ ಬಿಟ್ಟಾರೋ ಸಂದಕದ ಬಾಯಿಯೊಳಗ ॥

ಆ ಸಂದಕ ತೆಗೆದ ನೋಡುರೊಳಗ ।
ಸಿಕ್ಕ ಇಲ್ಲದ ತತ್ತಿಗೊಳು ಸಮದಕದೊಳಗ ॥
ಒಂದ ತತ್ತಿ ಒಡೆದ ನೋಡೂದರೊಳಗ ।
ಕಸಕಸಿ ಇದ್ದಾವ ಆ ತತ್ತಿಯೊಳಗ ॥
ಒಂದ ರಸಕಸಿ ಕೊಯ್ದ ನೋಡುದರೊಳಗ ।
ಮೂರು ಸಾವಿರ ಲೋಕ ಜನ ಅದರೊಳಗ ॥

ಮೂರು ತಿಂಗಳು ಮುದ್ದತ ಕೊಡ್ತೇವಿ ನಿಮಗ ।
ಸತ್ತ ಹುಟ್ಟಿ ಬಂದ ಹೇಳಬೇಕು ನೀವು ನಮಗ ॥

ಹೆಜ್ಜೆಯ ಪದ-೧೬

# ಅಲಾವಿ ಆಡೇವ್ರೀ....

ಕಲೆಯ ಕೇಳರಿ ನೀವಿನ್ನಾ
ಹಿರಿಯರು ಕುಂತಿರಿ ಸರ್ವಜನಾ ।
ಸ್ವಾಮಿ ಹಸನ-ಹುಸೇನ
ತುಂಬಿ ಬಂದಿತ್ರಿ ನಮ್ಮನಾ ॥ ೧ ॥

ಮೊದಲಿಗಾದ ಸಂಚನಾ
ಎಜಿದು ನಿಮ್ಮದು ಗೆಳೆತನಾ ।
ಕೂಡಿ ಬ್ಯಾಟಿ ಆಡುರಣ್ಣಾ
ರಥದ ಒಳಗ ಕುಂತರಣ್ಣಾ ॥ ೨ ॥

ಆಡವಿ ಆರ್ಯಾಣ ಮಂಜನಾ ।
ಹೆಣ್ಣ ಕಂಡಾರ ರತನಾ
ಗಂಧ ಪರಿಮಳ ಭೂಷಣ
ಆಕೆಯ ಮೈಯಲಿ ವಾಸನಾ ॥ ೩ ॥

ಕಂಡ ವೇಜಿದ ಬೈ ಮಾನಾ
ಮನಸ್ಸಿನೊಳಗ ಹರುಷಣಾ ।
ವಿಷಾ ಹಾಕ್ಯಾರೋ ಆ ದಿನ
ಕುಡದ ಮಲಗ್ಯಾರೋ ಹಸನ ॥ ೪ ॥

ನಮಾಜ ಕುಂತ್ರೋ ಶರಣನಾ
ಕೊಂದ್ರೋ ಹುಸೇನ ಸಾಹೇಬನಾ ।
ಮೋಕ್ಷ ಹೊಂದ್ಯಾರೋ ಸೋಮಾರದಿನಾ
ಸೊಲಾ ತಾರೀಖು ಆ ದಿನಾ ॥ ೫ ॥

ಶೇಖಮಮ್ಮದ ಚೌಗನಾ
ಗುರುಹುಸೇನ ಸಾಹೇಬನಾ ।
ಅಲಾವಿ ಆಡೇವ್ರಿ ನೀವಿನ್ನಾ
ಹತ್ತುದಿನಾ ದಿನ್.... ದಿನ್ನಾ.... ॥ ೬ ॥

ಹೆಜ್ಜೆಯ ಪದ-೧೭

# ಹೇಳತೇವ್ರಿ ನಾವ

ಮುಮ್ಮೇಳ : ಹೇಳತೇವ್ರಿ ನಾವಾ । ಕೇಳರಿ ನೀವಾ
ಮಮ್ಮದ ಹನಿಪ ಮಾಡಿದ ಕದನಾ ॥
ಹಿಡಿದಾರ ದಾರಿ ನಡದಾರ ನೀವು
ಕುಂತ ಕೇಳರಿ ಸರ್ವಜನಾ ॥

ಹಿಮ್ಮೇಳ : ಹಿಡದಾರ ದಾರಿ ನಡದಾರ ನೀವು
ಕುಂತ ಕೇಳರಿ ಸರ್ವಜನಾ ॥

ಮುಮ್ಮೇಳ : ಹಸನ ಹುಸೇನಗ ಮಮ್ಮಹನಿಪಗ
ಬೇಬಿ ಪಾತಿಮಾ ।
ನೀ ಕಣಕ ಹೊಗಬ್ಯಾಡೋ ಸಂಣ ನನ್ನಮಗನ
ವೈಚಿತ್ರ ಕಟ್ಟಿಸುವೆ ನಾ ನಿನಗ ॥

ಹಿಮ್ಮೇಳ : ಹೇಳತೇವ್ರಿ ನಾವಾ । ಕೇಳರಿ ನೀವಾ....

ಮುಮ್ಮೇಳ : ಏ ತಮ್ಮ ತಾಯಿಗೆ ಶರಣು ಮಾಡಿತ್ಯಾರಿ
ಕರ್ಬಲ ದಾರಿ ಹಿಡಿದಾರಣ್ಣಾ ।
ಪಂಚ ಹತ್ಯಾರ ಹೊಳಿತಾವ ಲಕಲಕ ಜನನವ
ಡಂಕೆಯ ನುಡಿಸ್ಯಾರೋ ಒಂದ ಸವನ ॥

ಹಿಮ್ಮೇಳ : ಪಂಚಹತ್ಯಾರ ಹೊಳಿತಾವ ಲಕಲಕ ಜವದವ
ಡಂಕೆಯ ನುಡಿಸ್ಯಾರೋ ಒಂದ ಸವನ
ಹೇಳತೇವ್ರಿ ನಾವಾ । ಕೇಳರಿ ನೀವಾ....

ಮುಮ್ಮೇಳ : ಏ ದಮಾಸ್ಕದ ಸುತ್ತಮುತ್ತ ದಂಡ ಇಳಿದಿತೋ
ಲೆಕ್ಕವಿಲ್ಲದ ವೇಜಿದಸೈನ್ಯಾ ।
ಅವರು ಆವಾಜ ಮಾಡ್ಯಾರೋ ಗಣಗಣ-ಗಣಾ....
ಕತಲ ಗವಿದಿತೋ ಮಂಜಾನು...... ॥

ಹಿಮ್ಮೇಳ : ಅವರು ಆವಾಜ ಮಾಡ್ಯಾರೋ ಗಣಗಣಗಣ....
ಕತ್ತಲು ಗವಿದಿತೋ ಮಂಜಾನಾ......
ಹೇಳತೇವ್ರಿನಾವಾ । ಕೇಳರಿ ನೀವಾ......

ಮುಮ್ಮೇಳ : ಏ ಹೊಕ್ಕ ದಂಡಿನ ಒಳಗ ಹೊಡೆದ ಕೆಡಿವ್ಯಾರೋ
ಲೆಕ್ಕವಿಲ್ಲದ ವೇಜಿದ ಸೈನ್ಯಾ ।
ದಿಕ್ಕತಪ್ಪಿತೋ ಒಬ್ಬರದೊಬ್ಬರಿಗೆ ಹತ್ತವತ್ತಕೂನಾ
ನೆತ್ತರ ಸುರಿಸ್ಯಾರೋ ಬಂಧ್ಯಸವನ ॥

ಹಿಮ್ಮೇಳ : ದಿಕ್ಕ ತಪ್ಪಿತೋ ಒಬ್ಬರದೊಬ್ಬರಿಗೆ ಹತ್ತಮತ್ತ ಕೂನಾ
ನೆತ್ತರ ಸುರಿಸ್ಯಾರೋ ಒಂದಸವದ
ಏ ಹೇಳತೇವ್ರಿ ನಾವಾ । ಕೇಳರಿ ನೀವಾ.....

ಮುಮ್ಮೇಳ : ದಮಸ್ಕದ ಒಳಗ ತುಸುದಂಡ ಉಳಿದಿತೋ
ಓಡಿ ಹೋಯಿತೋ ವೇಜಿದ ಸೈನ್ಯಾ ।
ಕಿಲ್ಲೇದಾಗ ಏರಿದೋ ಹನಿಪ ಸರ್ಧಾರ ತಾನಾ
ಹಚ್ಚ್ಯಾರೋ ಹಸರ್ಗಂಭ ನಿಶಿಯಾನ ॥

ಹಿಮ್ಮೇಳ : ಕಿಲ್ಲೇದಾಗ ಏರಿದೋ ಹನಿಪ ಸರ್ದಾರ ತಾನಾ
ಹಚ್ಚ್ಯಾರೋ ಹಸರ್ಗಂಭ ನಿಶಿಯಾನ
ಏ ಹೇಳತೇವ್ರಿ ನಾವಾ । ಕೇಳರಿನೀವಾ....
ಮಮ್ಮದನಿಪ ಮಾಡಿದ ಕದನಾ ।
ಹಿಡದಾರ ದಾರಿ ನಡದಾರ ನೀವು
ಕುಂತಕೇಳರಿ ಸರ್ವಜನಾ

(**ಈ ಸಂಪುಟಕ್ಕಾಗಿ ತಮ್ಮಲ್ಲಿನ ಈ ಹಾಡುಗಳನ್ನು ಕೊಟ್ಟವರು** : ಮಹಾಲಿಂಗ ಮಂಗಿ, ಗೋಕಾಕ್-೫೯೧೩೦೭; ಬೆಳಗಾವಿ ಜಿಲ್ಲೆ.

---

ಡಂಕೆ-ಯುದ್ಧವಾದ್ಯ; ದಮಸ್ಕ = ವೇಜಿದ - ಪಟ್ಟಣ ಹೆಸರು; ಆವಾಜಿ-ಧ್ವನಿ; ಕೂರ್ನಾ-ಗುರ್ತು; ನಿಶಿಯಾನ = ಧ್ವಜ-ಪತಾಕೆ.

# ಲಂಬಾಣಿಗಳ ಹಾಡ್ಕುಣಿತಗಳು

ಮೂಲತಃ ಉತ್ತರ ಭಾರತದವರಾದ ಲಂಬಾಣಿಗಳು ಅಲೆಮಾರಿಗಳಾಗಿ ಬಂದು, ಕಾಲಾಂತರದಲ್ಲಿ ಕರ್ನಾಟಕದಲ್ಲಿ ನೆಲೆಗೊಂಡಿದ್ದಾರೆ. ಈಚೆಗೆ ನಾಡಿನ ವಿವಿಧ ಜಿಲ್ಲೆಗಳಲ್ಲಿ ಅವರು ಕಾಣಿಸಿಕೊಂಡಿದ್ದರೂ ಬಹುಮಟ್ಟಿಗೆ ಗುಡ್ಡಗಾಡಿನ ಪರಿಸರದಲ್ಲಿಯೇ ಅವರು ಹೆಚ್ಚಾಗಿದ್ದಾರೆ. ನಗರ ಜೀವನಕ್ಕೆ ಒಗ್ಗಿದವರನ್ನು ಹೊರತು ಪಡಿಸಿದರೆ, ಸ್ವಭಾವತಃ ಹಳ್ಳಿಗಳಿಂದ ಹೊರಗೆ, ಇತರ ಸಮುದಾಯಗಳಿಂದ ಪ್ರತ್ಯೇಕವಾಗಿ ತಮ್ಮದೇ ತಾಂಡಾಗಳಲ್ಲಿ ಅವರು ವಾಸಿಸುವ ಪ್ರವೃತ್ತಿ ಹೊಂದಿದ್ದಾರೆ. ಇದು ಅವರ ಭಾಷೆ, ಕಲೆ, ಸಂಪ್ರದಾಯಾದಿಗಳು ಇನ್ನೂ ಇತರರಿಗಿಂತ ಭಿನ್ನವಾಗಿ ಉಳಿಯಲೂ ಕಾರಣವಾಗಿದೆ. ಲಂಬಾಣಿಗಳ ವೇಷ ಭೂಷಣದಂತೆ ಅವರ ಹಾಡು–ಕುಣಿತಗಳೂ ಅನನ್ಯತೆಯಿಂದ ಕೂಡಿವೆ. ಅವರ ಕಲೆ–ಸಾಹಿತ್ಯಾದಿಗಳನ್ನು ಕುರಿತು ಕೆಲವರು ಈಗಾಗಲೇ ಅಧ್ಯಯನ ಮಾಡಿ, ಪುಸ್ತಕವನ್ನು ಪ್ರಕಟಿಸಿದ್ದಾರೆ. ಲಂಬಾಣಿಗಳ ಗೀತ–ನೃತ್ಯಗಳು ಹೇಗೆ ಆಕರ್ಷಕವೂ, ಅರ್ಥಪೂರ್ಣವೂ ಆಗಿವೆ ಎಂಬುದಕ್ಕೆ ಮಾದರಿಯಾಗಿ ಡಾ॥ ಸಣ್ಣರಾಮ ಅವರ ಕೃತಿಯಿಂದಾಯ್ದ ಭಾಗಗಳನ್ನು ಇಲ್ಲಿ ಉದ್ಧರಿಸಿದೆ. ಹೋಳಿ ಹಬ್ಬದ ಸಂದರ್ಭದಲ್ಲಿ ಅವರು ನಡೆಸುವ ನೃತ್ಯಗಳು ಹಾಗೂ ಗೀತ ಭಾಗಗಳನ್ನು ಇಲ್ಲಿ ಮುಖ್ಯವಾಗಿ ಪರಿಚಯಿಸಲಾಗಿದೆ.

"ಹೋಳಿ ಹುಣ್ಣಿಮೆ ಆರಂಭವಾಗಿತ್ತಿದ್ದಂತೆಯೇ ತಾಂಡದ ಎಲ್ಲ ಹಿರಿಯರುಸಭೆ ಸೇರುತ್ತಾರೆ. ಹಬ್ಬವವನ್ನು ಆಚರಿಸಲು ನಿರ್ಣಯಿಸುತ್ತಾರೆ. ಅಂದು ಸಾಮಾನ್ಯವಾಗಿ ಸೇವಾಲಾಲರ ಗುಡಿಯಲ್ಲಿರುವ ನಗಾರಿಯನ್ನು ಹೊರಗಡೆ ತೆಗೆಯುತ್ತಾರೆ. ಇದನ್ನು 'ನಂಗಾರ ಬಾರ್‌ಕಾಡೇರೊ' (ನಗಾರಿಯನ್ನು ಹೊರತೆಗೆಯುವುದು) ಎಂದು ಕರೆಯುತ್ತಾರೆ ಹೀಗೆ ಹೊರತೆಗೆದ ನಗಾರಿಯನ್ನು ತಾಂಡದ ನಾಯಕನು ಮೊದಲಿಗೆ ಬಾರಿಸುತ್ತಾನೆ ನಂತರ ತಾಂಡದ ಹಿರಿಯರು ಸರದಿಯ ಪ್ರಕಾರ ನಗಾರಿಯನ್ನು ಬಾರಿಸುತ್ತಾರೆ. ನಗಾರಿಯ ಶಬ್ದವು ಹೋಳಿ ಹಬ್ಬವನ್ನು ಆಚರಿಸಲು ತಾಂಡದವರು ತೆಗೆದುಕೊಂಡ ನಿರ್ಣಯವನ್ನು ಸೂಚಿಸುತ್ತದೆ.

ನಗಾರಿಯನ್ನು ಹೊರತೆಗೆದ ದಿನ ಅದನ್ನು ಎತ್ತಿಕೊಂಡು ಬಾರಿಸುತ್ತ ಸುತ್ತುತ್ತಾರೆ. ಆ ವರ್ಷದಲ್ಲಿ ಅಂದರೆ ಹಿಂದೆ ಆಚರಿಸಿದ ಹೋಳಿಯಿಂದ ಅಂದು ಆಚರಿಸುತ್ತಿರುವ ಹೋಳಿಯ ಮಧ್ಯದಲ್ಲಿ ಮರಣಿಸಿದವರ ಮನೆಗೆ ನಗಾರಿಯನ್ನು ಒಯ್ಯುತ್ತಾರೆ. ಆ

ಮನೆಯವರು ತಮ್ಮ ಮನೆಯ ಬಾಗಿಲಿಗೆ ಬಂದ ನಗಾರಿಯನ್ನು ಪೂಜಿಸುತ್ತಾರೆ. ನಗಾರಿಯೊಂದಿಗೆ ಹೋಗಿದ್ದ ತಾಂಡದ ಹಿರಿಯರು ಆ ಮನೆಯರನ್ನು ಸಂತೈಸುತ್ತಾರೆ. 'ಹಿಂದಿನ ಹೋಳಿ ಹಬ್ಬದಲ್ಲಿ ನಮ್ಮೊಂದಿಗೆ ಮೆರೆದವನು, ಈ ಹೋಳಿ ಹಬ್ಬದಲ್ಲಿ ಇಲ್ಲವಾಗಿದ್ದಾನೆ. ಅದಕ್ಕಾಗಿ ದುಃಖಿಸುವುದು ಬೇಡ, ಇಲ್ಲಿ ಯಾರೂ ಶಾಶ್ವತರಲ್ಲ. ಬದುಕಿರುವ ನಾವೆಲ್ಲರೂ ಸೇರಿ ಒಂದಾಗಿ ಹೋಳಿಯನ್ನು ಆಚರಿಸೋಣ'ಮುಂತಾಗಿ ಹಿತ ನುಡಿಯುತ್ತಾರೆ.

ಮಾರನೆಯ ದಿನದಿಂದ ತಾಂಡಾದ ಗಂಡಸರು, ಹೆಂಗಸರು ಪ್ರತ್ಯೇಕ ಗುಂಪುಗಳಾಗಿ ಸುತ್ತಮುತ್ತಲ ಗ್ರಾಮಗಳಿಗೆ ಹೋಗುತ್ತಾರೆ. ಹೆಂಗಸರು ಹೊಸ ಹೊಸ ರಂಗುರಂಗಿನ ಬಟ್ಟೆಗಳನ್ನು ಧರಿಸಿಕೊಂಡು ತಮ್ಮ ಸಾಂಪ್ರಾದಾಯಿಕ ನೃತ್ಯವನ್ನು ಪ್ರದರ್ಶಿಸುತ್ತಾರೆ. ಗಂಡಸರು ಹುಲಿವೇಷ, ಕೋಲಾಟ, ಕರಡಿಕುಣಿತ, ಹಲವಾರು ಬಗೆಯ ನೃತ್ಯಗಳನ್ನು ಪ್ರದರ್ಶಿಸುತ್ತಾರೆ. ಅದಕ್ಕೆ ಪ್ರತಿಯಾಗಿ ಗ್ರಾಮಸ್ಥರಿಂದ ಹಣವನ್ನು ಕಾಳು ಕಡಿಯನ್ನು ಪಡೆಯುತ್ತಾರೆ. ಸಂಗ್ರಹಿಸಿದ ಹಣವನ್ನು, ದವಸ ಧಾನ್ಯವನ್ನು ಹೋಳಿ ಹಬ್ಬದ ಆಚರಣೆಗೆಂದು ಮೀಸಲಿಡುತ್ತಾರೆ. ಗಂಡಸರು ಹೆಂಗಸರು ಪ್ರತಿದಿನವೂ ನೃತ್ಯ ಪ್ರದರ್ಶನಕ್ಕೆ ಹೋಗುವ ಪೂರ್ವದಲ್ಲಿ ಸೇವಾಭಾಯ ಮತ್ತು ಮರಿಯಾಮಾರ ಗುಡಿಗಳ ಮುಂದೆ ನೃತ್ಯವನ್ನು ಪ್ರದರ್ಶಿಸಿ, ಹೆಚ್ಚು ಫಲ ಕೊಡುವಂತೆ ಪ್ರಾರ್ಥಿಸುತ್ತಾರೆ. ಸಂಜೆಯೂ ಹಿರಿಯರ ಸಮ್ಮುಖದಲ್ಲಿ ವಿವಿಧ ಬಗೆಯ ನೃತ್ಯಗಳನ್ನು ಪ್ರದರ್ಶಿಸುತ್ತಾರೆ.

ಹೋಳಿ ಹಬ್ಬದ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಡುವ ಮುಖ್ಯಸ್ಥನನ್ನು 'ಗೆರ್‍ಯಾ' ಎಂದು ನಿಯಮಿಸುತ್ತಾರೆ. ಅವನ ಹೆಂಡತಿಯನ್ನು 'ಗೆರಣಿ' ಎಂದು ನಿಯಮಿಸುತ್ತಾರೆ. ಇವರ ಹಾಡುಗಳನ್ನು 'ಲೇಂಗಿ' ಎಂದು ಕರೆಯುತ್ತಾರೆ. ಹಬ್ಬ ಆರಂಭದ ದಿನದಿಂದ ಮುಗಿಯುವವರೆಗೂ ಪ್ರತಿದಿನವೂ ಗೆರ್‍ಯಾ–ಗೆರಣಿಯರ ನೇತೃತ್ವದಲ್ಲಿ ತಾಂಡದ ಹೆಂಗಸರು, ಗಂಡಸರು ಒಂದು ಕಡೆ ಸೇರಿ ಲೇಂಗಿ ಹಾಡುತ್ತ ಆನಂದ ಪಡುತ್ತಾರೆ. ಹೋಳಿ ಹಬ್ಬದಲ್ಲಿ ಗೆರ್‍ಯಾ – ಗೆರಣಿಯರು ಪರಸ್ಪರ ಲೈಂಗಿಕ ಗೀತೆಗಳನ್ನು ಎಷ್ಟಾದರೂ ಕಟ್ಟಿ ಹಾಡಬಹುದು. ಯಾರೂ ಅವುಗಳನ್ನು ಅಪಾರ್ಥ ಮಾಡಿಕೊಳ್ಳುವಂತಿಲ್ಲ. ಈ ಹಾಡುಗಳಲ್ಲಿ ಅವರ ಬುದ್ಧಿವಂತಿಕೆ, ಸಮಯಸ್ಫೂರ್ತಿ, ಹಾಸ್ಯ ಪ್ರವೃತ್ತಿಗಳು ಪ್ರಧಾನವಾಗಿ ಕಂಡುಬರುತ್ತವೆ. ಹೋಳಿ ಹಬ್ಬದ ಲೇಂಗಿಯ ಹಾಡುಗಳು ಲೈಂಗಿಕವಾಗಿದ್ದರೂ ಕಾವ್ಯಾತ್ಮಕವಾಗಿ ರಸವತ್ತಾಗಿರುತ್ತವೆ.

ಅಬದು ಅಬದು ಕಾಯಿರ ಗೊಪಾಳಿಯ
ಅಬದು ಅಬದು ಕಾಯಿರ
　　ನಾಕಾಸು ಪಾಣಿ ಪೀವ ಕಾಯಿರ ಗೊಪಾಳಿಯ
　　ನಾಕಾಸು ಪಾಣಿ ಪೀವ ಕಾಯಿರ
ಕೊನಿ ನಾ ಕಾಸುಪಾಣಿ ಪೀವ ಹಾತಿರ ಗೊಪಾಳಿಯ
ನಾಕಾಸುಪಾಣಿ ಪೀವ ಹಾತಿರ

ಹಾತಿ ಥಾಂಯಿರೊ ಕಾಯಿರ ಗೊಪಾಳಿಯ
ಹಾತಿಥಾಂಯಿರೊ ಕಾಯಿರ
ಹಾತಿ ಥಾಂಯಿರೊ ಸುಂಡರ ಗೊಪಾಳಿಯ
ಹಾತಿ ಥಾಂಯಿರೊ ಸುಂಡರ
ಸುಂಡೆ ಥಾಂಯಿರೊ ಕಾಯಿರ ಗೊಪಾಳಿಯ
ಸುಂಡೆ ಥಾಂಯಿರೊ ಕಾಯಿರ
ಸುಂಡೆ ಥಾಂಯಿರೊ ದಾಂತರ ಗೊಪಾಳಿಯ
ಸುಂಡೆ ಥಾಂಯಿರೊ ದಾಂತರ
ದಾಂತಕಜಕೊ ಕಾಯಿರ ಗೊಪಾಳಿಯ
ದಾಂತಕಜಕೊ ಕಾಯಿರ
ದಾಂತಕಜಕೊ ಚೂಡಲೊರ ಗೊಪಾಳಿಯ
ದಾಂತ ಕಜಕೊ ಚೂಡಲೊರ
ಚೂಡಲೊ ಕಜಕೊ ಕಾಯಿರ ಗೊಪಾಳಿಯ
ಚೂಡಲೊ ಕಜಕೊ ಕಾಯಿರ
ಚೂಡಲೊ ಕಜಕೊ ತಾಂಡ್ರಿರ ಗೊಪಾಳಿಯ
ಚೂಡಲೊ ಕಜಕೊ ತಾಂಡ್ರಿರ

ಕನ್ನಡ: ಮೂಗಿನಿಂದ ನೀರು ಕುಡಿಯುವುದೇನು ಗೊಪಾಳಿಯ, ಮೂಗಿನಿಂದ ನೀರು ಕುಡಿಯುವುದು ಆನೆ, ಆನೆಯ ಹತ್ತಿರಿರುವುದು ಏನು? ಆನೆಯ ಹತ್ತಿರಿರುವುದು ಸೊಂಡಿಲು, ಸೊಂಡಿಲ ಹತ್ತಿರಿರುವುದು ಏನು? ಸೊಂಡಿಲ ಹತ್ತಿರಿರುವುದು ದಂತ, ದಂತ ಅಂದ್ರೇನು, ದಂತ ಅಂದ್ರೆ ಚೂಡೊ. ಚೂಡೋ ಅಂದ್ರೆ ಹೆಂಗಸು.

ಈ ಗೀತೆ ಆನೆಯ ಅಂಗಾಂಗಗಳನ್ನು ಪ್ರಶ್ನಿಸುತ್ತ ಪ್ರಾರಂಭವಾಗುತ್ತದೆ. ಪ್ರಶ್ನೆಗಳಿಗೆ ಉತ್ತರಿಸುವುದರರ ಮೂಲಕ ಬೆಳೆಯುತ್ತ ಹೋಗುತ್ತದೆ. ಗೀತೆಯ ನಿರೂಪಣೆ ಕಲಾತ್ಮಕವಾಗಿದೆ. ಗೀತೆಯಲ್ಲಿ ಬರುವ 'ದಂತ ಅಂದರೇನು?'ಚೂಡೋ ಅಂದ್ರೆ ಹೆಂಗಸಲ್ಲವೆ? ಎಂಬ ಸಾಲುಗಳಲ್ಲಿ ಧ್ವನಿಯಿದೆ. ಹಿಂದೂ ಮಹಿಳೆಯರ ತಾಳಿಯಷ್ಟೇ ಲಂಬಾಣಿ ಮಹಿಳೆಯರು ತಮ್ಮ ತೋಳು ಬಳೆಗಳು ಪೂಜ್ಯವೆಂದು ಭಾವಿಸುತ್ತಾರೆ. ಅವುಗಳನ್ನು ಆನೆ ದಂತದಿಂದ ಮಾಡಿರುತ್ತಾರೆ. ಗೀತೆಯಲ್ಲಿ ಬರುವ 'ಆನೆ ದಂತ' ಮತ್ತು 'ಚೂಡೋ' ಪದಗಳು ಲಂಬಾಣಿ ಮಹಿಳೆಯರು ಬಳಸುವ ವಸ್ತುಗಳನ್ನೂ, ಅವುಗಳಿಗೆ ಸಂಬಂಧಿಸಿದ ಆಚರಣೆಗಳನ್ನು ಧ್ವನಿಸುತ್ತವೆ. ಹೀಗೆ ಹೋಳಿ ಹಬ್ಬದಲ್ಲಿನ ಗೆರ್ಯಾ ಮತ್ತು ಗೆರಣಿಯರು ಅನೇಕ ಲೈಂಗಿಕ ಹಾಡುಗಳನ್ನು ಕಟ್ಟಿ ಹಾಡುತ್ತಾರೆ. ತಾಂಡದವರಿಗೆ ಮನರಂಜನೆಯನ್ನು ಕೊಡುತ್ತಾರೆ.

ಹೋಳಿ ಹುಣ್ಣಿಮೆಯ ಹಿಂದಿನ ರಾತ್ರಿ ಅಂದರೆ ಕಾಮದಹನದ ಮೊದಲ ರಾತ್ರಿ ಅವರ ಉತ್ಸಾಹದ ದಿನ. ಕಾಮದಹನಕ್ಕೆ ಸಿದ್ಧತೆ ಮಾಡಿ ನಂತರ ತಾಂಡದ

ಗೆರಿಯಾ ಮತ್ತು ಗೆರಣಿಯರು ದೇವರ ಗುಡಿಯ ಮುಂದೆ ಬಂದು ಸೇರುತ್ತಾರೆ. ಒಂದು ಕಡೆ ಪುರುಷರು ಕೋಲಾಟವಾಡುತ್ತ ನರ್ತಿಸುತ್ತಿದ್ದರೆ, ಮತ್ತೊಂದು ಕಡೆ ಮಹಿಳೆಯರು ನರ್ತಿಸುತ್ತಿರುತ್ತಾರೆ. ಸ್ತ್ರೀ-ಪುರುಷರು ನರ್ತಿಸುತ್ತ, 'ಧೂಂಡ್' ಶಾಸ್ತ್ರವಿರುವ ಮನೆಗಳಿಗೆ ಹೋಗುತ್ತಾರೆ. ಧೂಂಡ್ ಎಂದರೆ ಹುಡುಕುವುದು ಎಂದರ್ಥ. ಹೋಳಿ ಹಬ್ಬದಲ್ಲಿ ನಡೆಯುವ ಈ ಆಚರಣೆಗೆ ವಿಶೇಷ ಅರ್ಥವಿದೆ. ಗಂಡು ಮಗುವೊಂದನ್ನು ಸಂಭ್ರಮ ಸಡಗರದಿಂದ ಸಮಾಜದೊಳಗೆ ಸ್ವೀಕರಿಸುವ ಮತ್ತು ಆ ಮಗುವಿಗೆ ಕಾಯಿಲೆ ಕಷಾಲೆಗಳು ಅಂಟದಂತೆ ದೇವರನ್ನು ಪ್ರಾರ್ಥಿಸುವ, ಶುಭ ಕೋರುವ ಈ ಎಲ್ಲಾ ಅರ್ಥಗಳನ್ನು ಹೊಂದಿರುವ ಆಚರಣೆಯಾಗಿದೆ. ಮೊದಲಿಗೆ ಮಹಿಳೆಯರು ಪ್ರತ್ಯೇಕವಾಗಿ ಧೂಂಡ್ ಮನೆಗಳಿಗೆ ಹೋಗುತ್ತಾರೆ. ಆಗ ಅವರು ಹಾಡುವ ಗೀತೆಗಳು ಅರ್ಥಗರ್ಭಿತವಾಗಿರುತ್ತವೆ.

ಪೇಲಿತೊ ಬಾಣ ಲಗೀರ ಸೇವಾ ತೋಪರ
ಸೇವಾ ಡಗರ ಜೋನಿರೇ ಬಾಣ ಧೋಕೇನ.
ಪೇಲಿತೊ ಬಾಣಲಗೀರ ದೂಡಾತೋಪರ
ದೂಡಾ ಡಗರ ಜೋನಿರೇ ಬಾಣಧೋಕೇನ
ಪೇಲಿತೊ ಬಾಣ ಲಗೀರ ಈಶತೋಪರ
ಈಶಡಗರ ಜೋನಿರ್ ಕಾಶಿಧೋಕೇನ
ಪೇಲಿತೋ ಬಾಣ ಲಗೀರ ಮರಿಯಾ ತೋಪರ
ಮರಿಯಾ ಡಗರ ಜೋನಿಯ ಲಸಾನಧೋಕೇನ

ಕನ್ನಡ: ಮೊದಲನೆಯ ಬಾಣ ಸೇವಾಬಾಯ ನಿನ್ನ ಮೇಲೆ ಬಿದ್ದಿದೆ. ಸೇವಾ ಪೂಜಿಸಲು ಹೋಗಿ ಬಾ. ಮೊದಲ ಬಾಣ ದೂಡಾ ನಿನ್ನ ಮೇಲೆ ಬಿದ್ದಿದೆ. ದೂಡಾ ಬಾಣ ಪೂಜಿಸಲು ಹೋಗಿ ಬಾ ಮೊದಲ ಈಶ್ವರ ನಿನ್ನ ಮೇಲೆ ಬಿದ್ದಿದೆ. ಈಶ್ವರ ಕಾಶಿಗೆ ಪೂಜಿಸಲು ಹೋಗಿ ಬಾ. ಮೊದಲ ಬಾಣ ಮರಿಯಾ ನಿನ್ನ ಮೇಲೆ ಬಿದ್ದಿದೆ. ದೇವರನ್ನು ಪ್ರಾರ್ಥಿಸಲು ಹೋಗಿ ಬಾ.

ಈ ಗೀತೆಯಲ್ಲಿ ಬರುವ ಬಾಣವು ಮನ್ಮಥನ ಸಂಕೇತಿಸುತ್ತದೆ. ಮನ್ಮಥನ ಬಾಣವುಮೇಲೆ ಬಿದ್ದರೆ ಅಂತವರು ಕಾಮ ಪ್ರಚೋದನೆಗೆ ಒಳಗಾಗುತ್ತಾರೆ. ಅತಿಕಾಮ, ಪ್ರಚೋದನಾ ಕಾಮ ಹಾನಿಕಾರಕ. ಅದನ್ನು ನಿಯಂತ್ರಿಸಿಕೊಳ್ಳಲು ಮನ್ಮಥನನ್ನು ಪೂಜಿಸಬೇಕು. ದೇವರ ಧ್ಯಾನವು ಅತಿಕಾಮವನ್ನು ನಿಯಂತ್ರಿಸುವ ಪ್ರಮುಖವಾದ ಅಸ್ತ್ರ. ಹೀಗೆ ಈ ಗೀತೆಯ ಅರ್ಥ ಬಿಚ್ಚಿಕೊಳ್ಳುತ್ತದೆ. ಧೂಂಡ್ ಸಮಾರಂಭಕ್ಕೆ ಬಂದ ಗೆರಣಿಯರಿಗೆ ಮಗುವಿನ ತಂದೆಯು ಯಥೋಚಿತವಾಗಿ ಸರಾಯಿ ಸಮರ್ಪಣೆಯ ಮೂಲಕ ಆರೋಗಿಸುತ್ತಾನೆ. ಆ ಮನೆಯಲ್ಲಿ ಸ್ವಲ್ಪ ಹೊತ್ತು ಹಾಡುಗಳನ್ನು ಹಾಡುವ ಮಹಿಳೆಯರು ಮುಂದಿನ ಮನೆಗೆ ಹೋಗುತ್ತಾರೆ.

ಮಹಿಳೆಯರ ನಂತರದಲ್ಲಿ ಪುರುಷರು ಧೂಂಡ್ ಮನೆಗಳಿಗೆ ಲೇಂಗಿ ಗೀತೆಗಳನ್ನು ಹಾಡುತ್ತಾ ಹೋಗುತ್ತಾರೆ. ಪುರುಷರ ಲೇಂಗಿ ಸಹ ಅರ್ಥಪೂರ್ಣ ವಾಗಿರುತ್ತವೆ. ಕೆಲವು ವೇಳೆ ಅತಿ ಲೈಂಗಿಕವೆನಿಸಿದರೂ ಕಾವ್ಯಗುಣಗಳಿಂದಲೂ, ಗೀತಾಂಶಗಳಿಂದಲೂ ಕೂಡಿ ಕೇಳಲು ಇಂಪಾಗಿರುತ್ತವೆ.

ಬಾವಾ ಪೇನಾ ಹಿಂಡೆ ಢೂಂಗರ ಝೋಳಾ
ಲಗಾಡ ಗೇ ಭರಭೂತರ
ಬಾವಾ ನಾಗಪರೆರೊ ನಾಗಾಸಾಮಿ
ಸಾಮಿ ಛ ಅಬಧೂತರ
ಬಾವಾ ಅಭಿಯಾಯೇ ನಾಯಕೆರೆ ತಾಂಡೆ
ಲಗಾಡಗೇ ಭರಭೂತರ
ಬಾವಾ ಅಭಿಯಾಯೇ ನಾಯಕೆರೆ ತಾಂಡೆ
ಪರಾನ ಪಡಗಿ ಛೀಟರ
ಬಾವಾ ಓ ಸಾಮಿನ ವರಬಲಾಲ
ಅತಕತ ಛ ಛೀಟರ್
ಬಾವಾ ನಾಗಪರೆರೋ ನಾಗಾಸಾಮಿ
ಸಾಮಿ ಚ ಅಬಧೋತರ
ಬಾವಾ ಅಭಿಯಾಯೇ ನಾಯಕರ ತಾಂಡೆ
ಪರಗಣಲಾಗಿ ಚೂತರ
ಬಾವಾ ಓ ಸಾಮಿನ ವರ ಬಲಾಲ
ಅತಕತ ಛ ಚೂತರ.
ಬಾವಾ ನಾಗಪರೆರೊ ನಾಗಾಸಾಮಿ
ಸಾಮಿ ಛ ಅಬಧೂತರ
ಬಾವಾ ಓ ಜೋಗಿನ ವರ ಬಲಾಲ
ಛಾದಲಿಸಿ ಚೂತರ
ಬಾವಾ ಓಸಾಮಿನ ವರ ಬಲಾಲ
ಕೋಳಾ ಸರಿಕಿ ಪೂಂದರ
ಬಾವಾ ಪೇನಾ ಹಿಂಡೆ ಢೊಂಗರ ಘೋಳಾ
ಪರಾನ ಪಡಗಿ ಛೀಟರ
ಬಾವಾ ನಾಗಪರೆರೋ ನಾಗಾಸಾಮಿ
ಸಾಮಿ ಛ ಅಭದೂತರ

ಕನ್ನಡ: ಹಿಂದೆ ನಾಡು – ನಾಡು ಸಂಚರಿಸುತ್ತಿದ್ದೆವು. ಆಗ ರಂಗನ್ನು ಹಂಚಿಹೋದರು. ನಾಗಪುರದ ನಾಗಾಸ್ವಾಮಿ ಎಂಬುವನು. ಸ್ವಾಮಿ ಮಜಭೂತಾಗಿದ್ದಾನೆ. ಈಗ ನಾಯಕರ ತಾಂಡಾಕ್ಕೆ ಬಂದು ರಂಗು ಹಚ್ಚಿ ಹೋದರು. ಈ ನಾಯಕರ ತಾಂಡಕ್ಕೆ ಬಂದಾಗ ಹೆಣ್ಣು ಮೋಹಿತಳಾದಳು. ಆ ಜೋಗಿಯನ್ನು ಇತ್ತ ಕರೆದುಕೊಳ್ಳಿರಿ. ಇಲ್ಲಿ ಹೆಂಗಸರಿಲ್ಲ. ನಾಗಪುರದ ನಾಗಾಸ್ವಾಮಿ, ಮಜಭೂತಾಗಿದ್ದಾನೆ. ನಾಯಕರ ತಾಂಡಕ್ಕೆ ಬಂದಾಗ ದಪ್ಪ ದಪ್ಪ ಹೆಂಗಸರು ಮೋಹಿತರಾದರು.

ಗೀತೆಯ ಮೊದಲ ಎರಡು ಸಾಲುಗಳು ಹೋಳಿ ಹಬ್ಬವು ಲಂಬಾಣಿ ಜನಾಂಗದಲ್ಲಿ ಪ್ರವೇಶಿಸಿರುವುದನ್ನು ಸೂಚಿಸುತ್ತವೆ. ಅಲೆಮಾರಿ ಜನಾಂಗ ಅವರು ಪೂರ್ವದಲ್ಲಿ ನಾಡು-ನಾಡು ತಿರುಗುತ್ತಲಿರುವಾಗ ಕಾಮನ ಹಬ್ಬದ ರಂಗನ್ನು ಹಚ್ಚಿದರು. ಆದ್ದರಿಂದ ಹೋಳಿ ಹಬ್ಬವನ್ನು ಆಚರಿಸಲಾಗುತ್ತಿದೆ ಎಂಬ ವಿಷಯ ಈ ಗೀತೆಯಿಂದ ತಿಳಿದು ಬರುತ್ತದೆ. ಈ ಗೀತೆಯಲ್ಲಿ ನಾಗಪುರದ ನಾಗಾಸಾನಿ ಎಂಬುವ ಜೋಗಿಯು ತಾಂಡವನ್ನು ಪ್ರವೇಶಿಸುತ್ತಾನೆ. ಅಲ್ಲಿ ಅವನಿಗೆ ಹಲವಾರು ಹೆಂಗಸರು ಮೋಹಿತರಾಗುತ್ತರೆಂಬುದನ್ನು ಸುಂದರವಾಗಿ ವರ್ಣಿಸಲಾಗಿದೆ. ಹೋಳಿಯು ಕಾಮನಹಬ್ಬ. ಆದುದರಿಂದ ಲಂಬಾಣಿಗಳು ಈ ಹಬ್ಬದ ಗೀತೆಗಳಲ್ಲಿ ಯಾವ ಮುಜುಗರವೂ ಇಲ್ಲದಂತೆ ಲೈಂಗಿಕ ಪದಗಳನ್ನು ಬಳಸುತ್ತಾರೆ. ಈ ಗೀತೆಯಲ್ಲಿ ಸಂದರ್ಭೋಚಿತವಾಗಿ ಒಂದೆರಡು ಅಶ್ಲೀಲ ಪದಗಳು ಬಂದಿವೆ. ಲೈಂಗಿಕ ಪದಗಳು ಸಹ ಕಲಾತ್ಮಕವಾಗಿ ನಗುವನ್ನು ಉಕ್ಕಿಸುವಂತೆ ಬಳಕೆಯಾಗಿರುವುದೇ ಇಲ್ಲಿಯ ವೈಶಿಷ್ಟ್ಯವಾಗಿದೆ.

ಗೆರ್ಯಾರು ಬಂದು ಲೇಂಗಿ ಹಾಕುತ್ತಾರೆ. ಕೋಲಾಟ ಹಾಕುತ್ತ ಕುಣಿದು ಕುಪ್ಪಳಿಸುತ್ತಾರೆ. ಅವರ ಹಾಡು ನೃತ್ಯಗಳಿಂದ ಸಂತೋಷಪಟ್ಟ ಮನೆಯವರು ಯತಾರ್ಥ ಸರಾಯಿ, ವೀಳ್ಯದ ಸೇವೆಯನ್ನು ಮಾಡುತ್ತಾರೆ. ಹೋಳಿಯಲ್ಲಿ ಹೀಗೆ ಮಕ್ಕಳ ಧೂಂಡ್ ಶಾಸ್ತ್ರ ಮಾಡಿಸುವ ಕುಟುಂಬಗಳು ತಾಂಡದಲ್ಲಿ ಹಲವಾರು ಇರುತ್ತವೆ. ಆದುದರಿಂದ ಗೆರ್ಯಾ ಮತ್ತು ಗೆರಣಿಯರು ಇಡೀ ರಾತ್ರಿ ಲೇಂಗಿ ಹಾಕುತ್ತ ತಾಂಡದ ತುಂಬಾ ಓಡಾಡುತ್ತಾರೆ.

ಧೂಂಡ್ ಶಾಸ್ತ್ರದ ಮನೆಗಳೆಲ್ಲ ಸುತ್ತಿದ ಮೇಲೆ ಸೂರ್ಯೋದಯಕ್ಕೆ ಮೊದಲು ಕಾಮದಹನಕ್ಕೆ ಸಿದ್ಧತೆಗಳು ನಡೆಯುತ್ತವೆ. ತಾಂಡಾದ ನಾಯಕನು ಗೆರ್ಯಾರುಗಳ ಮುಖಂಡನನ್ನು ಕರೆದು ವೀಳ್ಯದೆಲೆಯಲ್ಲಿ ಒಂದು ರೂಪಾಯಿ ನಾಣ್ಯವನ್ನು ಹಾಕಿ ಕೊಡುತ್ತಾನೆ. ಗೇರ್ಯಾರುಗಳ ಮುಖಂಡನು ಉಳಿದ ತನ್ನ ಜೊತೆಗಾರರೊಡನೆ ತಾಂಡಾದನಾಯಕನಿಗೂ ತಾಂಡಾಕ್ಕೂ ಒಳ್ಳೆಯದನ್ನು ಹಾರೈಸುತ್ತಾನೆ. ಆಮೇಲೆ ತಾಂಡಾದ ಹಿರಿಯರು ಗೆರ್ಯಾರುಗಳು ಹಾಡುತ್ತ ಕುಣಿಯುತ್ತ ನಗಾರಿಯನ್ನು ಬಾರಿಸುತ್ತ ಕಾಮದಹನಕ್ಕೆ ಸಿದ್ಧಪಡಿಸಿದ ಸ್ಥಳಕ್ಕೆ ಬರುತ್ತಾರೆ.

ಬೆಂಕಿ ಉರಿಯುತ್ತಿದ್ದಂತೆ ಅದರ ಸುತ್ತಲು ಗೆರ್ರ್ಯಾರುಗಳ ಉತ್ಸಹದಿಂದ ಕುಣಿಯುತ್ತಾರೆ. ಬೆಂಕಿ ಹಾಕಿದಾಗ ಗುಡ್ಡೆಗಳು ಉರಿಯುತ್ತ ಪೂರ್ವಕ್ಕೆ ಬಿದ್ದರೆ ತಾಂಡಾಕ್ಕೆ ಒಳ್ಳೆಯದಾಗುತ್ತದೆ ಎಂದೂ, ಉತ್ತರ ಅಥವಾ ದಕ್ಷಿಣಕ್ಕೆ ಬಿದ್ದರೆ ಕೇಡುಗಾಲವಿದೆ ಎಂದೂ ತಾಂಡವಿರುವ ದಿಕ್ಕಿನ ಕಡೆಗೆ ಬಿದ್ದರೆ ಹೋಳಿಯು ಸಾರ್ಥಕವಾಗಿಲ್ಲ ಮತ್ತೆ ಆಚರಿಸಬೇಕೆಂದೂ ಅಭಿಪ್ರಾಯಪಡುತ್ತಾರೆ. ಬೆಂಕಿ ಉರಿದು ತಣಿಯುವವರಗೆ ಎಲ್ಲರೂ ಹಾಡಿ ಕುಣಿದು ಆನಂದಿಸುತ್ತಾರೆ. ಬೆಂಕಿ ತಣಿದ ಮೇಲೆ ಮೊದಲು ಬೆಂಕಿ ಕೊಟ್ಟ ಯುವಕರು ಗುಡ್ಡೆ ಒಳಗಿನ ಭಸ್ಮ ತೆಗೆದು ಅಲ್ಲಿ ಸೇರಿದ್ದಹಿರಿಯರಿಗೆ ಕೊಟ್ಟು ಪಾದಕ್ಕೆ ಬಿದ್ದು ನಮಸ್ಕರಿಸುತ್ತಾರೆ. ಎಲ್ಲರೂ ಭಸ್ಮವನ್ನು ತೆಗೆದು ಕೊಂಡು ಮನೆಗೆ ಒಯ್ಯುತ್ತಾರೆ. ಮತ್ತೆ ಬಂದ ಹಾಗೆಯೇ ನಗಾರಿಯನ್ನು ಬಾರಿಸುತ್ತ ಕುಣಿಯುತ್ತ ತಾಂಡಾಕ್ಕೆ ಹಿಂದಿರುಗುತ್ತಾರೆ.

**ದಂಡೆ ತೇಲಿಬಿಡುವುದು** : ಓಕುಳಿಯಾಡಿದ ಸಂಜೆ ಪುರುಷರು ತಾವು ಕೋಲಾಟಕ್ಕೆ ಬಳಸಿದ ದಂಡಗಳನ್ನು ಶಾಸ್ತ್ರೋಕ್ತವಾಗಿ ನೀರಿನಲ್ಲಿ ತೇಲಿಬಿಡುತ್ತಾರೆ. ಗೆರ್ರ್ಯಾರುಗಳ ಹತ್ತಾರು ದಿನಗಳ ಸಂಭ್ರಮಕ್ಕೆ ಅಂದು ಕೊನೆ. ತಮ್ಮ ಕುಣಿತಕ್ಕೆ, ಹಾಡಿಗೆ ಅಂದು ಕೊನೆ ಎಂಬುದನ್ನು ಅರಿತ ಗೆರ್ರ್ಯಾರುಗಳು ಆದಿನ ಮಧ್ಯರಾತ್ರಿಯವರೆಗೂ ಕುಣಿಯುವುದರಲ್ಲಿ ತಲ್ಲೀನರಾಗಿರುತ್ತಾರೆ. ಅಷ್ಟು ದಿನ ತಮ್ಮೊಡನೆ ತಮ್ಮ ಕುಣಿತಕ್ಕೆ ಸಹಕರಿಸಿದ ಕೋಲುಗಳೊಂದಿಗೆ ಅವರಿಗೆ ಭಾವನಾತ್ಮಕ ಸಂಬಂಧ ಬೆಳೆದಿರುತ್ತದೆ. ಅವುಗಳನ್ನು ತೇಲಿಬಿಡುವಾಗ ಗೆರ್ರ್ಯಾರುಗಳು ಅತಿಯಾಗಿ ದುಃಖಿಸುತ್ತಾರೆ. ತಮ್ಮ ಮೋಜಿನ ಪ್ರತೀಕವಾದ ಕೋಲುಗಳನ್ನು ತೇಲಿಬಿಡಲು ಮನಸ್ಸು ಒಪ್ಪದಿದ್ದರೂ, ಅನಿವಾರ್ಯವಾದುದರಿಂದ ಅವರು ಕುಣಿಯುತ್ತಲೆ ತಾಂಡಾದ ಸಮೀಪವಿರುವ ಹೊಳೆ, ಹಳ್ಳ, ಕೆರೆಗಳ ಕಡೆಗೆ ನಡೆಯುತ್ತಾರೆ. ಅವರನ್ನು ಗೆರಣಿಯರು ಆತ್ಮೀಯ ವಸ್ತುವೊಂದನ್ನು ಕಳೆದುಕೊಂಡವರಂತೆ ಸಂಕಟದಿಂದ ಕೋಲನ್ನಪ್ಪಿಕೊಂಡು ಕಣ್ಣೀರುಗರೆಯುತ್ತಾರೆ. ಆ ಸಂದರ್ಭದಲ್ಲಿ ಗೆರ್ರ್ಯಾರುಗಳ ಹಾಡು ಕ್ಷಮೆ ಯಾಚನೆಯಿಂದ ಕೂಡಿದ್ದು ಸಂದರ್ಭೋಚಿತವಾಗಿರುತ್ತದೆ.

ಮಾಯೆ ಬಾಪೆ ರಿಸಮತ ಕರಲೊ
ಹಮ ಖೆಲೆಚಾ ಹೋಳಿರಾ......
ಹೋಳೀಯೇ ಮಾರಿ ಬಂಬರ ಹೋಳಿ
ಘರಬಾಳಾರಿ ಝೋಳಿಯೆ..........
ಸೇವಾ ಸೂಕ ರಿಸಮತ ಕರಲೊ
ಹಮ ಖೆಲೆಚಾ ಹೋಳಿರ......
ಹೋಳಿಯೆ ಮ್ಹಾರಿ ಬಂಬರ ಹೋಳೀ
ಏ ಗೆರಿಯಾರಿ ಠೋಳೀರ

**ಕನ್ನಡ** : ತಂದೆ ತಾಯಿ ಸಿಟ್ಟಾಗದಿರಿ, ನಾವು ಆಡಿದ್ದು ಹೋಳಿ, ಹೋಳಿಯೇ ನನ್ನ ಪ್ರೀತಿಯ ಹೋಳಿ ಮನೆ ಮಗುವಿನ ತೊಟ್ಟಿಲು. ಸೇವಾ ಸೂಕ ಸಿಟ್ಟಾಗದಿರಿ ನಾವು ಆಡಿದ್ದು ಹೋಳಿ, ಹೋಳಿಯೇ ನನ್ನ ಪ್ರೀತಿಯ ಹೋಳಿ, ಗೆರ್ರ್ಯಾರು ಹಿಡಿದಿರುವ ಕೈಕೋಲು.

ಹೋಳಿ ಉತ್ಸವದ ಆವೇಶದಲ್ಲಿ ಗೆರ್ರ್ಯಾರುಗಳು ಸ್ವಲ್ಪ ಅತಿಯೆನ್ನುವಷ್ಟು ಅಶ್ಲೀಲವಾದ ಪದಗಳನ್ನು ಬಳಸಿರುತ್ತಾರೆ. ದಂಡಗಳನ್ನು ತೇಲಿಬಿಡುವ ಸಂದರ್ಭದಲ್ಲಿ ಅವರಿಗೆ ತಮ್ಮ ತಪ್ಪಿನ ಅರಿವು ಮೂಡುತ್ತದೆ. ಆಗ ಅವರು ಹಾಡುವ ಈ ಕ್ಷಮೆಯಾಚನೆಯ ಗೀತೆ ಸಂದರ್ಭೋಚಿತವಾಗಿದೆ. ಹೋಳಿಯ ಸಂದರ್ಭದಲ್ಲಿ ಮಾತ್ರ ನಾವು ಹೀಗಾಡಿದ್ದೇವೆ. ಇದು ನಿತ್ಯದ ಬದುಕಲ್ಲ. ಹೋಳಿ ಎಂಬುದು ಗೆರ್ರ್ಯಾರುಗಳ ಕೈಕೋಲುಗಳಿದ್ದಂತೆ ಅಲ್ಲಿ ಸಣ್ಣ ಮಟ್ಟ ತಪ್ಪುಗಳಾಗುವುದು ಸಹಜವೆಂದು ತಮ್ಮ ಹಾಡಿನ ಮೂಲಕ ತಾಂಡದ ಜನತೆಯಲ್ಲಿ ಕ್ಷಮೆ, ಯಾಚಿಸುತ್ತಾರೆ. ಗೆರ್ರ್ಯಾರುಗಳು ಗೀತೆಯ ಮೂಲಕ ಕ್ಷಮೆಯಾಚಿಸುವ ವಿಧಾನವು ವಿನೂತನವೂ ವಿಶಿಷ್ಟವೂ ಆಗಿದೆ. ಯಾವುದೇ ಆರಂಭಕ್ಕೆ ಅಂತ್ಯವೊಂದಿದ್ದೇ ಇರುತ್ತದೆ. ಉತ್ಸಾಹ ಆವೇಶದಿಂದ ಪ್ರಾರಂಭವಾದ ಹೋಳಿ, ವೇದನೆ, ನೋವು ಆತ್ಮ ವೀಕ್ಷಣೆಯಲ್ಲಿ ಪರ್ಯಾವಸಾನವಾಗುತ್ತದೆ. ಹೋಳಿ ಹಬ್ಬದಲ್ಲಿ ನಡೆಯುವ ಕ್ರಿಯೆಗಳು ಒಟ್ಟು ಮಾನವನ ಬದುಕನ್ನು ಪ್ರತಿಬಿಂಬಿಸುವಂತಿರುವುದು ಲಂಬಾಣೀಗಳ ಹೋಳಿಯ ವೈಶಿಷ್ಟ್ಯವಾಗಿದೆ.

ಗೆರ್ರ್ಯಾರುಗಳು ತಮ್ಮ ದಂಡಗಳನ್ನು ನೀರಿನಲ್ಲಿ ತೇಲಿಬಿಡುವ ಕೊನೆಯ ಕ್ಷಣದಲ್ಲಿ ತಮ್ಮ ದೇವರುಗಳಿಗೆ ಮಂಗಳಾರತಿಯನ್ನು ಕೋರುತ್ತಾರೆ.

ಮಾಯೆ ಬಾಪೇನ ಆರತ ಆವೆ
ದೂದಭರೋ ಹಿರಾ ದೂದ ಭರೋ ಡಪವಾಜೊಕನಯ್ಯ
ಗಾಡ ಭರೋ ಡಪವಾಜೋರ
ಸೇವಾ ಸೂಕಾನ ಆರತ ಆವೆ
ದೂದ ಭರೋ ಹಿರಾ ದೂಭರೋ ಡಪವಾಜೊಕನಯ್ಯ
ಗಾಡ ಭರೋ ಡಪವಾಜೋರ
ಚಾಂದ ಸರತೇನ ಆರತ ಆವೆ
ದೂದ ಭರೋ ಹಿರಾ ದೂಭರೋ ಡಪವಾಜೊಕನಯ್ಯ
ಗಾಡ ಭರೋ ಡಪವಾಜೋರ
ಬಸವರಾಧೆನ ಆರತ ಆವೆ
ದೂದ ಭರೋ ಹಿರಾ ದೂಭರೋ ಡಪವಾಜೊಕನಯ್ಯ
ಗಾಡ ಭರೋ ಡಪವಾಜೋರ

ಧರತಿ ಮಾತಾನ ಆರತ ಆವೆ.
ದೂದ ಭರೋ ಹಿರಾ ದೂಭರೋ ಡಪವಾಜೊಕನಯ್ಯ
ಗಾಡ ಭರೋ ಡಪವಾಜೋರ

**ಕನ್ನಡ** : ತಂದೆ ತಾಯಿಯರಿಗೆ ಮಂಗಳಾರತಿ, ಹಾಲು ತುಂಬಿದತಮಟೆಯ ಶಬ್ದದಂತೆ ಬಸವಾರಾಧ್ಯ, ಸೇವಾಭಾಯ, ಭೂಮಿತಾಯಿಯರಿಗೆ ಮಂಗಳಾರತಿ.

ಮಂಗಳಾರತಿಯಾದ ಮೇಲೆ ಕೋಲುಗಳನ್ನು ತೇಲಿಬಿಡುತ್ತಾರೆ. ಗೆರ್ಯಾರುಗಳು ತಮ್ಮ ಉತ್ಸಾಹದ ಪ್ರತೀಕವಾದ ದಂಡಗಳನ್ನು ತೇಲಿಬಿಟ್ಟು ದುಃಖದಿಂದ ಕಣ್ಣೀರು ಸುರಿಸುತ್ತಿದ್ದರೆ ಅವರನ್ನು ಹಿಂಬಾಲಿಸಿಕೊಂಡು ಬಂದ ಗೆರಣಿಯರು ಅವರನ್ನು ಛೇಡಿಸುತ್ತಾರೆ. ಹೋಳಿ ಹುಣ್ಣಿಮೆ ಪ್ರಾರಂಭವಾದ ದಿನದಿಂದ ಕೋಲು ಹಿಡಿದು ಕುಣಿಯುತ್ತ, ಹೊಸ ಹೊಸ ವರಸೆಗಳನ್ನು ಹಾಕುತ್ತ, ಹಾಡುಗಳನ್ನು ಕಟ್ಟಿ ಹಾಡುತ್ತ, ಉತ್ಸಾಹದಿಂದ ಮೆರೆಯುತ್ತಿದ್ದ ಗೆರ್ಯಾರುಗಳು ದಂಡವನ್ನುತೇಲಿಬಿಟ್ಟು ಅಸಹಾಯಕರಂತೆ ಕಣ್ಣೀರು ಹಾಕುವುದನ್ನು ಕಂಡು ಅವರು ಅತ್ಯಂತ ಮಾರ್ಮಿಕವಾಗಿ ಹಾಡುತ್ತಾರೆ. ಉದ್ವೇಗ ಇಳಿದ ಮೇಲೆ ಪುರುಷ ಸ್ಥಿತಿಯೂ ಹೀಗೆಯೇ ಎಂಬ ಧ್ವನಿ ಈ ಗೀತೆಯಲ್ಲಿ ಅಡಗಿದೆ.

ಲಚಿಯಾ ಬಾನಿ ಉತರಗ್ಯೆರೆ
ಗೆರಿಯಾರಿ ಬಾನಿ ಉತರಗ್ಯೆರೆ
ಲಚಿಯಾ ಜಾನಿ ಉತರಗ್ಯೆರೆ
ಗೆರಣಿರಿ ಜಾನಿ ಚಡತಗ್ಯೆರೆಹ

**ಕನ್ನಡ** : ಲಚಿಯಾನ ಮೋಜು ಇಳಿದು ಹೋಯಿತು. ಗೆರ್ಯಾನ ಸೊಕ್ಕು ಇಳಿದು ಹೋಯಿತು. ಗೆರಣಿಯರ ಕೈ ಮೇಲಾಯಿತು.

ಮುಂದುವರಿದು ಮಹಿಳೆಯರು ತಣಿದು ಹೋದ ಗೆರ್ಯಾರುಗಳ ಸ್ಥಿತಿಯನ್ನು, ಎಂದೂ ತಣಿಯದಿರುವ ತಮ್ಮ ದಾಹವನ್ನು ಈ ಗೀತೆಯ ಮೂಲಕ ಅಭಿವ್ಯಕ್ತಿಸುತ್ತಾರೆ. ಅಲ್ಲದೆ ತಾಂಡದ ನಾಯಕನನ್ನು ಕುರಿತು ಲತ್ತು ಹೋಳಿ ಹಬ್ಬ ಆಚರಿಸಲು ಗೀತೆಯ ಮೂಲಕ ಒತ್ತಾಯಿಸುತ್ತಾರೆ.

ಕಾಂಯಿರಮು ಕಾಂಯಿರಮುರೇ
ತಾಂಡೇರ ನಾಯಕ ಕತ ರಮುರೇ
ತಾರೆ ಗೆರಣಿನ ಜಾಗವತಾನ್
ನಾಯಕ ಕತರಮುರೆ

ತಲ ಕಾಂಯಿರಮು ಕಾಂಯಿರಮುರೇ
ತಾಂಡೇರೊ ಗೆರಿಯಾ ಕಾಂಯಿರಮುರೇ
ತಾರೇ ಗೆರಣಿನ ಜಾಗವತಾನ್
ಗೆರಿಯಾ ಕತ ರಮುರ

**ಕನ್ನಡ** : ಏನಂತ ನರ್ತಿಸಲಿ, ಏನಂತ ಆಡಲಿ, ನಾಯಕರೇ ನರ್ತಿಸಲು ಜಾಗವನ್ನು ತೋರಿಸು, ಅವಕಾಶ ಮಾಡಕೊಡು.

ಹೋಳಿ ಹುಣ್ಣಿಮೆ ಪ್ರಾರಂಭವಾದ ದಿನದಿಂದ ಗೆರಿಯಾರುಗಳ ಸರಿಸಾಟಿಯಾಗಿ ನರ್ತಿಸಿ ಅಷ್ಟೇ ಉತ್ಸಾಹದಿಂದ ಮೆರೆದ ಮಹಿಳೆಯರ ಉತ್ಸಾಹ ಇನ್ನೂ ಕುಗ್ಗಿರುವುದಿಲ್ಲ. ಕೋಲುಗಳನ್ನು ನೀರಿನಲ್ಲಿ ತೇಲಿಬಿಟ್ಟು ನಿರುತ್ಸಾಹಿಗಳಾದ ತಾಂಡದ ನಾಯಕ ಮತ್ತು ಗೆರ್‍ಯಾರುಗಳಿಗೆ ತಾವು ನರ್ತಿಸುವ ಸಮಯ ಸಂದರ್ಭಗಳನ್ನು ತೋರಿಸೆಂದು ಒತ್ತಾಯಿಸುತ್ತ ನರ್ತಿಸುವ ಆಸೆ ತಮ್ಮಲ್ಲಿ ಇನ್ನೂ ಜೀವಂತವಾಗಿದೆ ಎಂಬುದನ್ನು ಸೂಚಿಸುತ್ತಾರೆ. ಬದುಕಿನಲ್ಲಿ ಸಂಭ್ರಮ ಒಂದು ಕ್ಷಣದ್ದಾಗಿರಬಾರದು. ಅದು ಜೀವನಪರ್ಯಂತವಿರಬೇಕೆಂಬ ಬಯಕೆ ಅವರದು. ಲಂಬಾಣಿ ಮಹಿಳೆಯರ ಕುಗ್ಗದ ಉತ್ಸಾಹದ ಮನೋಸ್ಥಿತಿಯನ್ನು ಈ ಗೀತೆ ಅಭಿವ್ಯಕ್ತಪಡಿಸುತ್ತದೆ. ಕೊನೆಗೂ ತಾಂಡದ ನಾಯಕ ಹೋಳಿಯನ್ನು ಅಂದು ನಿಲ್ಲಿಸಲು ನಿರ್ಧರಿಸುತ್ತಾನೆ. ಕಾಮದಹನವಾದ ಮೇಲೆ ಪರಿಭ್ರಮಣಕ್ಕೆ ಕೊನೆಯಾಯಿತೆಂಬುದನ್ನು ಮಹಿಳೆಯರು ಒಪ್ಪಿಕೊಳ್ಳಬೇಕಾಗುತ್ತದೆ. ಆಗ ಅವರು ಹಾಡುವ ಹಾಡು ಹೀಗಿದೆ :

ಜೀವತಡ ರೀಯತೊ
ಪೇರ ಹೋಳಿ ರಮಿಯಾ
ಮಾಯೇನ ದೊಟಚ ವಾಲೋಹೆ
ಹೋಳಿದಸಮಣ
ಹೋಳಿ ದಸಮಣ ದಸದಾಡ ಕಾನಿರೇರಿಗಿರೆ
ಹೋಳಿ ದಸಮಣ

**ಕನ್ನಡ** : ಜೀವಂತವಿದ್ದರೆ ಮತ್ತೊಮ್ಮೆ ಮುಂದಿನ ವರ್ಷಕ್ಕೆ ಹೋಳಿಯಾಡಬಹುದು. ಆದರೆ ತಾಯಿ-ತಂದೆಯಷ್ಟು ವ್ಯಾಮೋಹವನ್ನುಂಟು ಮಾಡುವ ಹೋಳಿ ಇನ್ನೂ ಹತ್ತಾರು ದಿನಗಳಾದರೂ ಇರಬೇಕಾಗಿತ್ತು.

ಲಂಬಾಣಿ ಬುಡಕಟ್ಟಿನಲ್ಲಿ ಹೋಳಿ ಹಬ್ಬದ ಆಚರಣೆ ಕಣ್ಮರೆಯಾಗುತ್ತಿದೆ. ನಾಗರಿಕತೆ ಬೆಳೆದಂತೆ ಲೈಂಗಿಕ ಗೀತೆಗಳ ಬಳಕೆಗೆ ಅಸಹ್ಯಪಡುವ ಯುವಕರು, ಹೋಳಿಹಬ್ಬದ ಆಚರಣೆಯನ್ನು ವಿರೋಧಿಸುತ್ತಾರೆ. ಹದಿನಾರು ಧಿನಗಳ ವಿಸ್ತಾರದ ಅವಧಿ, ಲಂಬಾಣೇತರರ ಗ್ರಾಮಗಳಲ್ಲಿ ಆಹಾರ ಧಾನ್ಯ ಮತ್ತು ದುಡ್ಡಿಗಾಗಿ ನರ್ತನ

ಪ್ರದರ್ಶಿಸುವುದು, ಇವೇ ಮೊದಲಾದವು ಹೋಳಿ ಹಬ್ಬ ಕಣ್ಮರೆಯಾಗಲು ಇತರ ಕಾರಣಗಳು. ಹೋಳಿಹಬ್ಬ ಕಣ್ಮರೆಯಾದರೆ ಅದರೊಂದಿಗೆ ಲಂಬಾಣಿ ಬುಡಕಟ್ಟಿನ ಅಪರೂಪದ ಆಚರಣೆಗಳು, ಸದಾಶಯಗಳು ಮರೆಯಾಗುತ್ತವೆ.

ಹಲವಾರು ಸಂಪ್ರದಾಯ ಆಚರಣೆಗಳಲ್ಲಿ ಇತರ ಹಿಂದೂ ಜನರಿಂದ ಭಿನ್ನರಾಗಿ ನಿಲ್ಲುವ ಲಂಬಾಣಿಗಳು ನೃತ್ಯ ವಿಧಾನದಲ್ಲಿಯೂ ತಮ್ಮದೇ ಆದ ಭಿನ್ನ ಕ್ರಮವನ್ನು ಮೆರೆದಿದ್ದಾರೆ. ಸಂಪ್ರದಾಯ ನಿಷ್ಠರೂ, ರಸಿಕ ಪ್ರವೃತಿಯವರೂ ಆದ ಲಂಬಾಣಿ ಜನರ ನೃತ್ಯ, ಆಕರ್ಷಣೀಯವೂ, ವೈಶಿಷ್ಟ್ಯಪೂರ್ಣವೂ ಆಗಿದೆ.

ಲಂಬಾಣಿಗಳಲ್ಲಿ ಸ್ತ್ರಿ-ಪುರುಷರು ಪ್ರತ್ಯೇಕ ಗುಂಪುಗಳಾಗಿ ನರ್ತಿಸುವ ಪದ್ಧತಿಯಿದೆ. ಬಹುಪಾಲು ಗುಡ್ಡಗಾಡು ಜನರಲ್ಲಿ ಸ್ತ್ರೀ-ಪುರುಷರು ಒಟ್ಟಿಗೆ ಕಲೆತು ನರ್ತಿಸುತ್ತಾರೆ. ಅಸ್ಸಾಮಿನಾರೋ ಗುಡ್ಡಗಾಡು ಜನರ ನೃತ್ಯ, ಹಿಮಾಚಲದ ಬುರಾಜ್ ನೃತ್ಯ, ಬಿಹಾರಿನ ಚೌನೃತ್ಯ ಇದಕ್ಕೆ ಉತ್ತಮ ನಿದರ್ಶನ. ಲಂಬಾಣಿಗಳಲ್ಲಿ ಸ್ತ್ರೀ ಪುರುಷರು ಒಟ್ಟಿಗೆ ಕಲೆತು ನರ್ತಿಸುವ ವಿಧಾನಗಳು ಏಕೆ ರೂಢಿಯಲ್ಲಿ ಬರಲಿಲ್ಲವೋ ತಿಳಿದು ಬರುವುದಿಲ್ಲ. ಲೈಂಗಿಕ ಅಪರಾಧಗಳನ್ನು ಅತ್ಯಂತ ತೀವ್ರವಾಗಿ ಪರಿಗಣಿಸುವ ಅವರು ಸ್ತ್ರೀ-ಪುರುಷರೊಟ್ಟಿಗೆ ಕಲೆತು ನರ್ತಿಸುವುದು ಲೈಂಗಿಕ ಅಪರಾಧಗಳಿಗೆ ಅವಕಾಶ ಮಾಡಿಕೊಡಬಹುದೆಂದು ಭಾವಿಸಿ, ಈ ಬಗೆಯ ನೃತ್ಯಗಳಿಗೆ ಅವಕಾಶ ಮಾಡದಿರಬಹುದು. ಲಂಬಾಣಿ ಪುರುಷರಿಗೆ ಬಿಡುವಿಲ್ಲದ ದುಡಿಮೆಯೂ ಕಾರಣವಾಗಿರಬಹುದು. ಲಂಬಾಣಿ ಸ್ತ್ರೀ-ಪುರುಷರು ಪ್ರತ್ಯೇಕ ಗುಂಪುಗಳಾಗಿ ನರ್ತಿಸುವುದರಿಂದ ಪ್ರತ್ಯೇಕವಾಗಿಯೇ ಅವುಗಳ ಅಧ್ಯಯನ ಮಾಡುವುದು ಉಚಿತ.

**ಸ್ತ್ರೀಯರ ನೃತ್ಯಗಳು** : ಲಂಬಾಣಿ ಸ್ತ್ರೀಯರು ಮುಖ್ಯವಾಗಿ ಎರಡು ವಿಧಗಳಲ್ಲಿ ನರ್ತಿಸುತ್ತಾರೆ. ಅವರ ನರ್ತನದ ರೀತಿಯನ್ನು ಅನುಸರಿಸಿ 'ಸಾಂಪ್ರದಾಯಿಕ ನೃತ್ಯ' 'ಮನರಂಜನೆಯ ನೃತ್ಯ'ವೆಂದು ವಿಂಗಡಿಸಿಕೊಳ್ಳಬಹುದು.

**ಸಾಂಪ್ರದಾಯಿಕ ನೃತ್ಯ** : ಲಂಬಾಣಿಗಳು ಸಂಪ್ರದಾಯ ನಿಷ್ಠರು. ದೇವರು, ಧರ್ಮದ ಬಗೆಗೆ ಅಪಾರ ನಂಬಿಕೆಯುಳ್ಳವರು. ಹಬ್ಬ-ಹರಿದಿನಗಳಲ್ಲಿ ದೇವಸ್ಥಾನದ ಮುಂದೆ ಕಲೆತು ತಮ್ಮ ದೈವದ ಪ್ರೀತ್ಯರ್ಥ ನರ್ತಿಸುತ್ತಾರೆ. ಜನಪದ ನೃತ್ಯದ ಉಗಮಕ್ಕೆ ಧಾರ್ಮಿಕ ಆಚರಣೆಯ ಹಿನ್ನೆಲೆಯೂ ಒಂದಾಗಿದೆ. ಧಾರ್ಮಿಕ ಉದ್ದೇಶಕ್ಕಾಗಿರುವ ನೃತ್ಯಗಳನ್ನು 'ಸಾಂಪ್ರದಾಯಿಕ ನೃತ್ಯ'ಗಳೆಂದು ಕರೆಯಬಹುದು. ಸಂಪ್ರದಾಯದ ನೃತ್ಯಗಳು ಕಲಾತ್ಮಕ ನೃತ್ಯಗಳಾಗಿದ್ದು, ಅವುಗಳ ತಂತ್ರ ಮತ್ತು ವಿಧಾನಗಳು ಆಯಾ ಪ್ರದೇಶದ ಅನಿವಾರ್ಯತೆಯಿಂದ ಮೂಡಿ ಬಂದಿರುತ್ತವೆ. ಜಪಾನ್, ಅಂಡಾಲೂಸಿಯ ಮತ್ತು ಭಾರತದಲ್ಲಿ ಈ ಬಗೆಯ ಸಂಪ್ರದಾಯಿಕ ನೃತ್ಯಗಳನ್ನು ಕಾಣಬಹುದು. ಕನ್ನಡ ನಾಡಿನ ಬೀಸುಕಂಸಾಳೆ, ಕರಡಿ ಕುಣಿತ, ವೀರಗಾಸೆ, ಲಿಂಗದ ಬೀರರ ನೃತ್ಯ, ಗೊರವರ ಕುಣಿತ ಹೀಗೆ ಹಲವಾರು ನೃತ್ಯಗಳು ಸಂಪ್ರದಾಯದ ಹಿನ್ನೆಲೆಯಲ್ಲಿ ವಿಕಾಸಗೊಂಡಿವೆ.

ಲಂಬಾಣಿ ಮಹಿಳೆಯರ ಸಂಪ್ರದಾಯದ ನೃತ್ಯ ಪ್ರಕಾರವು ಸರಳವಾದರೂ ಆಕರ್ಷಣೀಯವಾಗಿದೆ. ಹತ್ತಾರು ಸ್ತ್ರೀಯರು ಕೈ ಕೈ ಹಿಡಿದುಕೊಂಡು ತಮ್ಮಲ್ಲಿಯೇ ಒಂದು ವರ್ತುಲವನ್ನು ರಚಿಸಿಕೊಂಡು ನರ್ತನವನ್ನಾರಂಭಿಸುತ್ತಾರೆ. ಮಂದಗತಿಯಲ್ಲಿ ಒಂದೊಂದೆ ಹೆಜ್ಜೆಯನ್ನಿಟ್ಟು ವೃತ್ತಾಕಾರವಾಗಿ ಸುತ್ತುತ್ತಾ, ನೆಲದವರೆಗೂ ಬಗ್ಗಿ, ಎದ್ದು, ಎರಡೂ ಕೈಗಳನ್ನು ಮೇಲಕ್ಕೆತ್ತಿ ಕಲಾತ್ಮಕವಾಗಿ ತಿರುಗಿಸುತ್ತಾರೆ. ಹೆಜ್ಜೆಯ ಚಲನಗತಿಯು ನಿಧಾನವಾಗಿರುವುದರಿಂದ ಹೀಗೆ ದಿನವಿಡೀ ನರ್ತಿಸಿದರೂ ಆಯಾಸಗೊಳ್ಳುವುದಿಲ್ಲ. ಆದರೆ ಈ ಬಗೆಯ ನೃತ್ಯದಲ್ಲಿ ಮಹಿಳೆಯರ ಕೈ-ಕಾಲು, ಸೊಂಟಗಳಿಗೆ ಹೆಚ್ಚಿನ ವ್ಯಾಯಾಮವಾಗುತ್ತದೆ. ಶರೀರದ ಬೆಳವಣಿಗೆಗೆ ಈ ಬಗೆಯ ನೃತ್ಯದಿಂದ ಹೆಚ್ಚು ಪ್ರಯೋಜನವಾಗುತ್ತದೆ.

ಲಂಬಾಣಿ ಮಹಿಳೆಯರು ವೃತ್ತಾಕಾರವಾಗಿ ನಿಂತು ನರ್ತಿಸುವುದಕ್ಕೆ ಮೂಲ ಕಾರಣಗಳು ತಿಳಿದು ಬರುವುದಿಲ್ಲ. 'ಅಬ್ಬೆದುಬೇಯಿಸ್' ಎಂಬ ವಿದ್ವಾಂಸರು "ಅವರು ಮೊದಲು ನೋಡಿದ ವ್ಯಕ್ತಿಯನ್ನು ಅಪಹರಿಸುತ್ತಾರೆ. ಏಕಾಂತಕ್ಕೆ ಆ ವ್ಯಕ್ತಿಯನ್ನು ಕೊಂಡೊಯ್ಯುತ್ತಾರೆ. ಆಳವಾದ ಗುಂಡಿಯನ್ನು ತೋಡಿ ಅವನು ಜೀವಂತವಿರುವಾಗಲೇ ಅವನನ್ನು ಕುತ್ತಿಗೆವರೆಗೆ ಹೂಳುತ್ತಾರೆ. ಹಿಟ್ಟಿನಿಂದ ಮಾಡಿದ ದೀಪವೊಂದನ್ನು ಅವನ ತಲೆಯ ಮೇಲಿಡುತ್ತಾರೆ. ಆನಂತರದಲ್ಲಿ ಹೆಣ್ಣು-ಗಂಡು ಕೈ ಕೈ ಹಿಡಿದುಕೊಂಡು ವರ್ತುಲವನ್ನು ನಿರ್ಮಾಣ ಮಾಡಿ, ಹೂಳಿದ ವ್ಯಕ್ತಿಯ ಸುತ್ತ ನರ್ತಿಸುತ್ತಾರೆ. ಹೂಳಿದ ವ್ಯಕ್ತಿಯು ಮರಣಿಸುವವರೆಗೆ ಅವರ ನೃತ್ಯವು ಮುಂದುವರೆಯುತ್ತದೆ."* ಬಲಿ ಅರ್ಪಣೆಯ ಸಂದರ್ಭದಲ್ಲಿ ನಡೆಯುತ್ತಿದ್ದ ನರ್ತನದ ವಿಕಾಸ ರೂಪವೇ ಈಗಿನ ವರ್ತುಲಾಕಾರದ ನೃತ್ಯವೆ? ಎಂಬ ಸಂಶಯ ಸಹಜವಾಗಿಯೇ ಬರುತ್ತದೆ. ಆದರೆ ಲಂಬಾಣಿಗಳಲ್ಲಿ ನರಬಲಿ ಕೊಡುವ ಪದ್ಧತಿ ಇದ್ದಿದ್ದರೇ ಅವರ ಸಾಂಸ್ಕೃತಿಕ ನಡವಳಿಕೆಗಳಲ್ಲಿ ಅದರ ಪಳಿಯುಳಿಕೆ ದೊರೆಯಲೇಬೇಕಿತ್ತು. ಈ ಜನಾಂಗದ ಹಿರಿಯರೂ ಸಹ ಈ ಪದ್ಧತಿ ಇತ್ತೆಂಬುದನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತಾರೆ. ಆದ್ದರಿಂದ ಲಂಬಾಣಿಗಳಲ್ಲಿ ನರಬಲಿ ಕೊಡುವ ಪದ್ಧತಿ ಇರಲಿಲ್ಲವೆಂಬುದನ್ನು ಖಚಿತವಾಗಿ ಹೇಳಬಹುದು. ವಿದ್ವಾಂಸರ ಹೇಳಿಕೆ ತಪ್ಪು ಕಲ್ಪನೆಯಿಂದಾದುದೆನ್ನದೇ ಗತ್ಯಂತರವಿಲ್ಲ.

ನರಬಲಿ ಸಂದರ್ಭದಲ್ಲಿ ಹೆಂಗಸರು – ಗಂಡಸರು ಕೈ-ಕೈ ಹಿಡಿದು ಜೊತೆಯಾಗಿ ನರ್ತಿಸುತ್ತಾರೆಂದು ವಿದ್ವಾಂಸರು ವಿವರಿಸಿದ್ದಾರೆ. ಲಂಬಾಣಿ ಬುಡಕಟ್ಟಿನಲ್ಲಿ ಹೆಂಗಸರು ಗಂಡಸರು ಪರಸ್ಪರ ಕೈಹಿಡಿದು ನರ್ತನ ಮಾಡುವ ಯಾವ ವಿಧಾನಗಳೂ ಇಲ್ಲ. ಈ ಅಂಶಗಳನ್ನು ಗಮನಿಸಿದರೆ ನರಬಲಿ ಅರ್ಪಣೆಯ ಸಂದರ್ಭದಲ್ಲಿನ ಆಚರಣೆಯಿಂದ ಲಂಬಾಣಿ ಮಹಿಳೆಯರ ವೃತ್ತಾಕಾರದ ನೃತ್ಯ ರೂಪಗೊಂಡಿರಲಾರದೆಂದು ಸ್ಪಷ್ಟವಾಗಿ ಹೇಳಬಹುದು.

* Abbe Dubois : Hindu manners and customs and Ceremonies, P-70

ವರ್ತುಲಾಕಾರದಲ್ಲಿ ನಿಂತು ಕುಣಿಯುವ ಪದ್ಧತಿ ಇತರ ರಾಷ್ಟ್ರಗಳಲ್ಲಿಯೂ ಇದೆ. ಈ ಬಗೆಯ ನರ್ತನಕ್ಕೆ ಕೆಲವು ವಿಶೇಷ ಕಾರಣಗಳನ್ನು ವಿದ್ವಾಂಸರು ಹೀಗೆ ಗುರುತಿಸಿದ್ದಾರೆ : "Rural celebrations of planting and of harvets feature communal round dances, such as the kolo of yugoslavia, the horo of Bulgaria, the hora of Romania, and a variety of Greek chain danes. The celebrations include vestiges of Ancient vegetation festivals, impresonations of fertility deities, and 'rain Magic' the same rounds, however, appeared also at weddings and other secular or semisecular gatherings. Such rounds survive in the mountains of mexico as mitotes"* ಈ ಹಿನ್ನೆಲೆಯಲ್ಲಿ ಲಂಬಾಣಿ ಮಹಿಳೆಯರ ವೃತ್ತ ನರ್ತನವನ್ನು ಅರ್ಥೈಸುವುದು ಹೆಚ್ಚು ಸೂಕ್ತ. ಏಕೆಂದರೆ ವರ್ತುಲ ನರ್ತನ ಆಚರಣೆಯಲ್ಲಿ ಮಳೆಯ ಮಂತ್ರೋಚ್ಚಾರಣೆ ಫಲವತ್ತತೆಯ ವೃದ್ಧಿಗಾಗಿ ಪ್ರಾರ್ಥನೆ ಪ್ರಮುಖವಾಗುತ್ತವೆ. ಲಂಬಾಣಿಗಳು ಮೂಲತಃ ಕೃಷಿಕರಲ್ಲದ ಪ್ರಯುಕ್ತ ಮಳೆಯ ಮಂತ್ರೋಚ್ಚಾರಣೆ ಪ್ರಧಾನ ಕಾರಣವಾಗಲಾರದು. ಲಂಬಾಣಿ ಮಹಿಳೆಯರ ನರ್ತನದ ವಿಧಾನವನ್ನು ನೋಡಿದಾಗ ನಡು, ಕೈ-ಕಾಲುಗಳು ವ್ಯವಸ್ಥಿತವಾದ ರೀತಿಯಲ್ಲಿ ನಿಯಂತ್ರಿಸುವುದು ಕಂಡುಬರುತ್ತದೆ. ಆದುದರಿಂದ ಈ ಮೇಲೆ ವಿದ್ವಾಂಸರು ಅಭಿಪ್ರಾಯಪಡುವಂತೆ ಫಲವತ್ತತೆಯನ್ನು ವೃದ್ಧಿಸಿಕೊಳ್ಳುವುದಕ್ಕಾಗಿ ಈ ಬಗೆಯ ನೃತ್ಯ ರೂಢಿಯಲ್ಲಿ ಬಂದಿರಬೇಕು.

ಲಂಬಾಣಿಗಳು ಮೂಲತಃ ವಲಸೆ ಪ್ರವೃತ್ತಿಯ ಜನರು. ವೃತ್ತಾಕಾರವಾಗಿ ಮಂದಗತಿಯಲ್ಲಿ ನರ್ತಿಸುವ ವಿಧಾನದ ಉಗಮಕ್ಕೆ ಅವರ ಪ್ರವೃತ್ತಿಯು ಪ್ರಧಾನವಾದ ಪಾತ್ರ ವಹಿಸಿದೆ. ಅಲೆಮಾರಿಗಳಾದ ಅವರು ವ್ಯಾಪಾರಕ್ಕಾಗಿ ಊರಿಂದೂರಿಗೆ ಅಲೆದಾಡಬೇಕಾಗಿತ್ತು. ಆ ದಿನಗಳಲ್ಲಿ ಗ್ರಾಮಗಳ ಹೊರವಲಯದಲ್ಲಿ ಕಾಡಿನ ಅಂಚಿನಲ್ಲಿ ತಾತ್ಕಾಲಿಕ ಬಿಡಾರಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ತಾವು ಬೀಡು ಬಿಟ್ಟ ಗುಡ್ಡಗಾಡು ಪ್ರದೇಶಗಳಲ್ಲಿ ನೃತ್ಯಕ್ಕೆ ಪ್ರತ್ಯೇಕ ರಂಗಸಜ್ಜಿಕೆಗಳನ್ನು ಸಿದ್ಧಪಡಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಕಲ್ಲುಮುಳ್ಳಿಂದಾವೃತ್ತವಾದ ಸ್ಥಳದಲ್ಲಿ ನರ್ತಿಸುವುದು ಅನಿವಾರ್ಯವಿತ್ತು. ಅಂತಹ ಸಂದರ್ಭದಲ್ಲಿ ವೃತ್ತಾಕಾರವಾಗಿ ಮಂದಗತಿಯಲ್ಲಿ ನರ್ತಿಸುವ ವಿಧಾನ ಸುರಕ್ಷಿತ ವಾಗಿರುವುದರಿಂದ ಈ ವಿಧಾನಗಳನ್ನು ಅಳವಡಿಸಿಕೊಂಡಿರಬೇಕು. ಜನಪದ ನೃತ್ಯಗಳ ಹೆಜ್ಜೆಗತಿಗಳು, ಜನಪದ ನೃತ್ಯದ ಉದ್ದೇಶ, ಸನ್ನಿವೇಶ, ನರ್ತಿಸುವ ಜನರ ವಯಸ್ಸು, ಸ್ಥಳ ನಿರ್ಮಾಣಗಳನ್ನು ಅಲಂಬಿಸಿರುತ್ತದೆ ಎಂಬುದಾಗಿ ಹಲವಾರು ಜಾನಪದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವೃದ್ಧ ಮಹಿಳೆಯರು, ಚಿಕ್ಕ ಪ್ರಾಯದ ಹುಡುಗಿಯರು ಯುವತಿಯರು ಒಟ್ಟಿಗೆ ಕಲೆತು ಗುಡ್ಡಗಾಡು ಪ್ರದೇಶಗಳಲ್ಲಿ ನರ್ತಿಸುತ್ತಿದ್ದ ಕಾರಣದಿಂದಲೂ ಲಂಬಾಣಿ ಮಹಿಳೆಯರಲ್ಲಿ ಈ ಮಾದರಿಯ ನೃತ್ಯ ಬಂದಿರಬಹುದು.

* The New Encyclopaedia Britanica, V-7, P-450

ಮಹಿಳೆಯರ ಸಂಪ್ರದಾಯ ನೃತ್ಯವು ಹಬ್ಬ ಹರಿದಿನಗಳಲ್ಲಿ ನಡೆಯುತ್ತದೆ. ಬೇರೆ ಬೇರೆ ತಾಂಡದಿಂದ ಹಬ್ಬದಲ್ಲಿ ಪಾಲ್ಗೊಳ್ಳಲು ಬಂದವರನ್ನು ಸ್ಥಳೀಯ ಹೆಂಗಸರು ನೃತ್ಯಕ್ಕೆ ಆಹ್ವಾನಿಸುತ್ತಾರೆ. ಸ್ಥಳೀಯರು ತಮ್ಮ ಅತಿಥಿ-ಅಭ್ಯಾಗತ ಮಹಿಳೆಯರೊಂದಿಗೆ ಕಲೆತು ಬೆರೆತು ಪರಸ್ಪರರು ಕೈ ಕೈ ಹಿಡಿದುಕೊಂಡು ನೃತ್ಯವನ್ನು ಆರಂಭಿಸುವ ಈ ವಿಧಾನವು ಹೊಸಬರಿಗೆ ಉತ್ಸಾಹವನ್ನು, ಹುರುಪನ್ನು ಮೂಡಿಸಿ ನರ್ತನದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಹೀಗೆ ಹೊಸಬರಿಗೆ ಆತ್ಮೀಯತೆಯನ್ನು ಮೂಡಿಸಲು, ಕಿರಿಯರಿಗೆ ಉತ್ಸಾಹ ತುಂಬುವ ದೃಷ್ಟಿಯು ಈ ನೃತ್ಯದ ಹಿನ್ನೆಲೆಯಲ್ಲಿ ಮುಖ್ಯವಾಗುತ್ತದೆ. ಒಟ್ಟಾರೆ ಆತ್ಮೀಯ ವಾತಾವರಣದಲ್ಲಿ ಮಹಿಳೆಯರ ನೃತ್ಯವು ಪ್ರಾರಂಭವಾಗುವುದರಿಂದ ಅದು ಅತ್ಯಂತ ಆಕರ್ಷಣೀಯವೂ, ಉತ್ಸಾಹಭರಿತವೂ ಆಗಿರುತ್ತದೆ.

ಸಾಂಪ್ರದಾಯಿಕ ನೃತ್ಯದ ಹಾಡುಗಳು ತಮ್ಮ ದೈವೀಪುರುಷ ಸೇವಾಭಾಯಾರ ಪವಾಡಗಳ ವರ್ಣನೆ, ಮರಿಯಮ್ಮಾಳ ಗುಣಗಾನ, ಅಲ್ಲದೆ ಒಗಟು-ಸವಾಲುಗಳಿಂದ ಕೂಡಿರುತ್ತವೆ. ಒಂದೊಂದು ಸಾಲುಗಳು ೫ ರಿಂದ ೬ ಬಾರಿವರೆಗೆ ಪುನರಾವರ್ತನೆ ಯಾಗುತ್ತವೆ. ಲಯವು ಅತ್ಯಂತ ಮಂದಗತಿಯಿಂದ ಕೂಡಿ ದೇಹದ ಲಯಬದ್ಧ ಚಲನೆಗೆ ಉತ್ತೇಜನವನ್ನು ಕೊಡುತ್ತದೆ. ಅಲ್ಲದೆ ಸವಾಲು-ಜವಾಬುಗಳ ಗೀತೆಗಳನ್ನು ಸಹ ಈ ಸಂಪ್ರದಾಯಿಕ ನೃತ್ಯಗಳಲ್ಲಿ ಹಾಡುತ್ತಾರೆ. ಪುನರಾವರ್ತನೆಯಿರುವ ಈ ಹಾಡುಗಳು ಸಂಗೀತದ ಸಾಚರ್ಯವನ್ನು ಪಡೆದಿರುವುದರಿಂದ ಕೇಳುಗರ ಕಿವಿಯಲ್ಲಿ ಅನುರಣನಗೊಳ್ಳುತ್ತಿರುತ್ತವೆ.

ಒಟ್ಟಾರೆಯಾಗಿ ಲಂಬಾಣಿ ಮಹಿಳೆಯರ ಸಂಪ್ರದಾಯದ ನೃತ್ಯವು ಅವರ ಒಗ್ಗಟ್ಟಿಗೆ ಫಲವಂತಿಕೆಗೆ, ಆರೋಗ್ಯವರ್ಧನೆಗೆ, ಹಿರಿಯ ಕಿರಿಯರಿಗೆ ಪ್ರೋತ್ಸಾಹ ನೀಡುವ ಮತ್ತು ಮನರಂಜನೆಯನ್ನು ಕೊಡುವ ನೆಲೆಯಲ್ಲಿ ಮಹತ್ವಪೂರ್ಣವೆನಿಸುತ್ತವೆ.

**ಮನರಂಜನೆಯ ನೃತ್ಯ**: ಸಾಂಪ್ರದಾಯಿಕ ನೃತ್ಯದ ಮಂದವಾದ ಗತಿಗೆ ತದ್ವಿರುದ್ಧವಾಗಿ ವೇಗದ ಚಲನೆಯ ನೃತ್ಯವೂ ಲಂಬಾಣಿ ಮಹಿಳೆಯರಲ್ಲಿ ಪ್ರಚಲಿತವಿದೆ. ಮನರಂಜನೆಯು ಈ ಬಗೆಯ ನೃತ್ಯದ ಪ್ರಧಾನ ಉದ್ದೇಶವಾಗಿದೆ. ಈ ವೇಗದ ಗತಿಯ ನೃತ್ಯವನ್ನು ತಮ್ಮ ಭಾಷೆಯಲ್ಲಿ 'ಘುಮರ' ಎಂದು ಕರೆದುಕೊಳ್ಳುತ್ತಾರೆ. ಲಂಬಾಣಿ ಮಹಿಳೆಯರ ಘುಮರ ನೃತ್ಯಕ್ಕೆ ಪ್ರೇರಣೆಯಾದ ನೃತ್ಯ ಯಾವುದೆಂದು ಖಚಿತವಾಗಿ ಹೇಳಲು ಆಗುವುದಿಲ್ಲ. 'ಘುಮರ' ಎಂಬ ಹೆಸರಿನ ನೃತ್ಯ ರಾಜಸ್ಥಾನದ ಭಿಲ್ಲರಲ್ಲಿ ಪ್ರಚಲಿತವಿದ್ದು ಆ ಜನಾಂಗದ ಸಂಸ್ಕೃತಿಯ ಜೀವಾಳವಾಗಿದೆ. ಈ ಘುಮರ್ ನೃತ್ಯವು ವೀರರಸ ಪ್ರಧಾನವಾಗಿದ್ದು ಪ್ರಣಯ, ವಿಜಯ, ದುರಂತ ಗೀತೆಗಳ ಹಿನ್ನೆಲೆಯಲ್ಲಿ ನರ್ತಿಸಲ್ಪಡುತ್ತದೆ. ಆಜ್ಮೇರದ ಸಾನ್ಸಿಗಿರಿ ಜನರಲ್ಲಿ 'ಘುಮರ್' ಎಂಬ ಹೆಸರಿನ ನೃತ್ಯ ಪ್ರಕಾರವು ಪ್ರಚಲಿತವಿದ್ದು ಅದು ನರ್ತಿಸಲ್ಪಡುವ ವಿಧಾನವು ಹೀಗಿದೆ: "ಸ್ತ್ರೀಪುರುಷರು ಪ್ರತ್ಯೇಕವಾಗಿ ಸಾಲಾಗಿ ನಿಂತು ನಿಧಾನವಾಗಿ ನೃತ್ಯ ಪ್ರಾರಂಭಿಸಿ, ನಂತರದಲ್ಲಿ ಒಂದೇ ಗೋಲಾಕಾರವಾಗಿ ಸೇರಿಕೊಳ್ಳುತ್ತಾ ನಲಿಯುತ್ತಾರೆ. ತೀವ್ರತೆ

ಬೆಳೆದಂತೆ ನರ್ತಕರು ಗೋಲಕೇಂದ್ರಕ್ಕೆ ನಡೆದು ಬಂದು ಬುಗುರಿಯಂತೆ ತಿರುಗಿ ತಮ್ಮ ಸಾಮರ್ಥ್ಯ ವೈಶಿಷ್ಟ್ಯ ಪ್ರದರ್ಶಿಸುತ್ತಾರೆ."* ಹೆಣ್ಣು-ಗಂಡು ಒಟ್ಟಿಗೆ ಸೇರಿ ಕುಣಿಯುವುದನ್ನು ಬಿಟ್ಟರೆ ಲಂಬಾಣಿ ಸ್ತ್ರೀಯರ ಘುಮರ್ ನೃತ್ಯವು-ಸಾನ್ಸಿ ಗಿರಿಜನರ ಘುಮರ್ ನೃತ್ಯವನ್ನು ಹೋಲುತ್ತದೆ.

ರಾಜಸ್ಥಾನದ ರಾಜಮನೆತನಗಳಲ್ಲಿ 'ರಾಸ' ಮತ್ತು 'ಘುಮರ್' ಎಂಬ ಹೆಸರಿನ ನೃತ್ಯಗಳು ಜನಪ್ರಿಯವಾಗಿವೆ. ಅನೇಕ ಸಮಾರಂಭಗಳಲ್ಲಿ ಮಹಾರಾಣಿಯರ ಸೇವಕಿಯರು 'ಘುಮರ' ನೃತ್ಯ ಮಾಡುತ್ತಿದ್ದರು. ಇದರ ನರ್ತನದ ರೀತಿಯು ಸರಳವಾಗಿದ್ದು ನರ್ತಕರು ಗೋಳಾಕಾರವಾಗಿ ತಾಳಬದ್ಧವಾಗಿ ತಿರುಗುತ್ತಾರೆ. ರಾಜಮನೆತನದಲ್ಲಿ ಮನೋರಂಜನೆಯ ಉದ್ದೇಶದಿಂದ ಈ ಪ್ರಕಾರದ ನೃತ್ಯ ಹುಟ್ಟಿಕೊಂಡಿದೆ.

ಲಂಬಾಣಿ ಹೆಂಗಸರ ಘುಮರ್ ನೃತ್ಯದಲ್ಲಿ ೧೦ ರಿಂದ ೧೨ ಜನ ಯೌವ್ವನಸ್ಥ ಸ್ತ್ರೀಯರು ಪಾಲ್ಗೊಳ್ಳುತ್ತಾರೆ. ಮೊದಲಿಗೆ ಕೈ ಕೈ ಹಿಡಿದು ವೃತ್ತಾಕಾರವಾಗಿ ನಿಂತುಕೊಂಡು ನರ್ತನವನ್ನಾರಂಭಿಸುತ್ತಾರೆ. ಅರ್ಧ ವೃತ್ತಾಕಾರವಾಗಿ ತಿರುಗುತ್ತ ಗೋಳದ ಕೇಂದ್ರಕ್ಕೆ ಧುಮ್ಮಿಕ್ಕಿ ಕೈಗಳು ನೆಲಕ್ಕೆ ಮುಟ್ಟುವಂತೆ ಬಗ್ಗಿ ಮತ್ತೆ ಮೇಲೆದ್ದು ಹಿಂದಕ್ಕೆ ಸರಿಯುತ್ತಾರೆ. ಹೀಗೆ ನರ್ತಿಸುವಾಗ ಹೆಜ್ಜೆಯ ಗತಿಯು ವೇಗವಾಗಿರುವುದರಿಂದ ದೈಹಿಕವಾಗಿ ತೀವ್ರ ಆಯಾಸಗೊಳ್ಳುತ್ತಾರೆ. ಆದ್ದರಿಂದ ಹೆಚ್ಚು ಹೊತ್ತು ನರ್ತಿಸಲಾಗುವುದಿಲ್ಲ. ಈ ಕಾರಣದಿಂದಲೇ ವೃದ್ಧೆಯರು ಘುಮರ್ ನೃತ್ಯದಲ್ಲಿ ಭಾಗವಹಿಸುವುದಿಲ್ಲ. ಘುಮರ್ ನೃತ್ಯದಲ್ಲಿನ ಹಾಡುಗಳು ವೇಗದ ಗತಿಗೆ ಸರಿ ಹೊಂದುವಂತಿರುತ್ತವೆ. ಪುನರಾವರ್ತನೆಯಿರುವುದಿಲ್ಲ. ಬಿಟ್ಟ ಬಾಣದಂತೆ ವೇಗವಾಗಿ ಗುರಿಯತ್ತ ಧಾವಿಸಿ ಅಂತ್ಯಗೊಳ್ಳುತ್ತವೆ.

ರಾಜಸ್ಥಾನದ ಭಿಲ್ಲರ ಘುಮರ್ – 'ಸಾನ್ಸಿ' ಗಿರಿಜನರ 'ಗೇರ್ ಘುಮರ್' ರಾಜಸ್ಥಾನದ ರಾಜಮನೆತನದ ಪ್ರಸಿದ್ಧ 'ಘುಮರ್' ಮತ್ತು ಲಂಬಾಣಿ ಸ್ತ್ರೀಯರು ನರ್ತಿಸುವ ಘುಮರ್ ನೃತ್ಯಗಳಲ್ಲಿ ಹಲವಾರು ಸಮಾನ ಲಕ್ಷಣಗಳಿವೆ. ರಾಜಸ್ಥಾನದ ರಾಜಮನೆತನದ ಘುಮರ್ ಮತ್ತು ಲಂಬಾಣಿ ಘುಮರ್‌ಗಳಲ್ಲಿ ಸ್ತ್ರೀಯರು ಮಾತ್ರ ಭಾಗವಹಿಸುತ್ತಾರೆ. ಈ ಎಲ್ಲಾ ನೃತ್ಯಗಳ ಚಲನಾಗತಿಯು ವೇಗವಾಗಿರುತ್ತದೆ. ವೃತ್ತಾಕಾರದ ನೃತ್ಯ ಪ್ರಕಾರಗಳಾಗಿವೆ. ಆದ್ದರಿಂದ ಈ ನೃತ್ಯಗಳು ಪರಸ್ಪರ ಪ್ರೇರಣ ಪ್ರಭಾವಗೊಳಪಟ್ಟಿವೆ. ಆದರೆ ಯಾವುದು ಮೂಲ ಪ್ರಕಾರ, ಯಾವುದರ ಮೇಲೆ ಯಾವುದರ ಪ್ರಭಾವವಾಗಿದೆ ಎಂಬುದನ್ನು ಹೇಳಲಾಗುವುದಿಲ್ಲ. ಲಂಬಾಣಿ ಘುಮರ್ ನೃತ್ಯದ ಹುಟ್ಟಿಗೆ ಇದೇ ಮೂಲವೆಂದು ಖಚಿತವಾಗಿ ಹೇಳಲಾಗುವುದಿಲ್ಲ.

ಲಂಬಾಣಿ ಮಹಿಳೆಯರ ನೃತ್ಯಗಳಲ್ಲಿ ವಾದ್ಯಗಳ ಬಳಕೆಯಿಲ್ಲ. ಆದರೆ ಇವರು ಮೈತುಂಬ ಧರಿಸಿಕೊಂಡಿರುವ ಆಭರಣಗಳೇ ನೂರಾರು ವಾದ್ಯಗಳಂತೆ

* ಕಪಿಲಾವಾತ್ಸಾಯನ, ಶ್ರೀ ಸಚ್ಚಿದಾನಂದ ವಾತ್ಸಾಯನ, (ಅನು) ಎಂ. ರಾಮನ್ : ಭಾರತೀಯ ಜಾನಪದ ನೃತ್ಯಗಳು.

ಮಂಜುಳನಾದವನ್ನು ಹೊಮ್ಮಿಸುತ್ತವೆ. ಲಂಬಾಣಿ ನೃತ್ಯಗಳು ತುಂಬಾ ಸರಳವಾಗಿವೆ. ಆದರೆ ಆಕರ್ಷಣೀಯವಾಗಿರುತ್ತವೆ. ಬೆಳೆಕೊಯ್ಯುವ, ಸಸಿ ನೆಡುವ, ಬಿತ್ತುವ, ದಿನನಿತ್ಯದ ಕೆಲಸಗಳ ಚಲನೆಯಿಂದ ಸ್ಫೂರ್ತಿಯನ್ನು ಪಡೆದಿರುತ್ತವೆ. ಕನ್ನಡಿಗಳು, ಮಣಿಗಳು ಮತ್ತು ಹೊಳಪುಳ್ಳ ಆಭರಣಗಳ ಕಸೂತಿಯ ಬಟ್ಟೆಗಳು, ತೋಳ್ಬಂದಿಗಳು, ನೇತಾಡುವ ಚೌಲಿ ಗೊಂಚಲುಗಳು ಮತ್ತು ಮುಂಗೈಯಿಂದ ಮೊಳಕೈವರೆಗೆ ಧರಿಸಿದ ದಂತದ ಬಳೆಗಳು ಕುಣಿತಕ್ಕೆ ಸಹಜವಾದ ನಾದವನ್ನು ಒದಗಿಸಿಕೊಡುತ್ತವೆ. ಅಪಾರ ಸೌಂದರ್ಯ ಪ್ರಜ್ಞೆಯ ಲಂಬಾಣಿ ಸ್ತ್ರೀಯರು ಮೈತುಂಬಾ ಬಗೆ ಬಗೆಯ ಆಭರಣಗಳನ್ನು ಧರಿಸಿಕೊಂಡಿರುತ್ತಾರೆ. ನೃತ್ಯದ ಸಮಯದಲ್ಲಿ ಅವರು ಧರಿಸಿಕೊಂಡಿರುವ ಆಭರಣಗಳು ತಣ್ಣನೆಯ ನಾದವನ್ನು ಹೊಮ್ಮಿಸಿ ನೃತ್ಯಕ್ಕೆ ಒಂದು ಬಗೆಯ ಕಳೆಯನ್ನು ತಂದುಕೊಡುತ್ತವೆ.

**ಇತರ ನೃತ್ಯಗಳು** : ಆಂಧ್ರ ಪ್ರದೇಶದ ಹೈದ್ರಾಬಾದ್ ಪ್ರಾಂತ್ಯದಲ್ಲಿ ಲಂಬಾಣಿ ಸ್ತ್ರೀಯರು ತಲೆಯ ಮೇಲೆ ಹಿತ್ತಾಳೆಯ ಕೊಡವನ್ನು ಹೊತ್ತುಕೊಂಡು ಸಾಲಾಗಿ ನಿಂತು ನರ್ತಿಸುತ್ತಾರೆ. ಈ ನೃತ್ಯವನ್ನು ಕುರಿತು ಕೆಲವು ವಿದ್ವಾಂಸರು ಹೀಗೆ ಅಭಿಪ್ರಾಯಪಡುತ್ತಾರೆ. "ಇವರ ದಿನನಿತ್ಯದ ಕ್ರಮಗಳಾದ ಕೊಯಿಲು ಬಿತ್ತನೆ–ಬೇಸಾಯ ಮುಂತಾದ ಕಾರ್ಯಗಳಿಂದಲೇ ಈ ನೃತ್ಯಗಳಿಗೆ ಸ್ಫೂರ್ತಿ ಲಭಿಸುತ್ತದೆ. ಸ್ತ್ರೀಯರ ನೃತ್ಯಗಳಲ್ಲಿ ಹೊಳೆಯುವ ಹಿತ್ತಾಳೆಯ ಕೊಡಗಳನ್ನು ತಲೆಯ ಮೇಲಿಟ್ಟುಕೊಂಡು ಊರಿನ ಬಾವಿಗೆ ನೀರು ತರಲು ಹೋಗುವುದನ್ನು ಚಿತ್ರಿಸಲಾಗಿದೆ". ಲಂಬಾಣಿ ಸ್ತ್ರೀಯರು ತಲೆಯ ಮೇಲೆ ಕೊಡ ಹೊತ್ತು ನರ್ತಿಸುವ ಪದ್ಧತಿ ಇತರೆ ರಾಜ್ಯಗಳಲ್ಲಿ ಕಂಡುಬರುವುದಿಲ್ಲ. ಹೈದಾರಾಬಾದ್ ಪ್ರಾಂತ್ಯದಲ್ಲಿ ಈ ನೃತ್ಯವೂ ವ್ಯವಸಾಯದಿಂದ ಸ್ಫೂರ್ತಿ ಪಡೆದಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಲಂಬಾಣಿಗಳು ಕೃಷಿ ಕ್ಷೇತ್ರಕ್ಕೆ ಪ್ರವೇಶಿಸಿರುವುದು ತೀರಾ ಈಚಿನ ದಿನಗಳಲ್ಲಿ. ಆದ್ದರಿಂದ ಈ ನೃತ್ಯವೂ ಈ ಜನಗಳಲ್ಲಿ ತೀರಾ ಈಚೆಗೆ ಪ್ರವೇಶಿಸಿರಬೇಕು ಅಥವಾ ಆ ಪ್ರಾಂತ್ಯದಲ್ಲಿನ ಇತರ ಜನಾಂಗದ ನೃತ್ಯ ಪದ್ಧತಿಯ ಪ್ರಭಾವದಿಂದ ಬಂದಿರಬೇಕೆಂಬುದು ನಿರ್ವಿವಾದ.

ಈಚಿನ ದಿನಗಳಲ್ಲಿ ಇತರ ಹಿಂದೂ ಜನಾಂಗಗಳ ನೃತ್ಯಗಳ ಪ್ರೇರಣೆ, ಪ್ರಭಾವಗಳಿಂದ ಲಂಬಾಣಿಗಳು ವಿವಿಧ ರೀತಿಯಲ್ಲಿ ನರ್ತಿಸುವುದನ್ನು ಕಲಿತಿದ್ದಾರೆ. ಘಟ, ತಾಳ, ಗೆಜ್ಜೆ, ತಮ್ಮಟೆ ಈ ಮೊದಲಾದ ವಾದ್ಯಗಳನ್ನು ಬಳಸಿ ಬೇರೆ ಬೇರೆ ರೀತಿಯಲ್ಲಿ ನರ್ತಿಸುವ ವಿಧಾನವನ್ನು ಅರಿತಿದ್ದಾರೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಲಂಬಾಣಿ ಮಹಿಳೆಯರು ಕೋಲು ಹಿಡಿದು ನರ್ತಿಸುವ ವಿಧಾನ ಪ್ರಚಲಿತವಿದೆ. ಶಿವಮೊಗ್ಗ ಜಿಲ್ಲೆಯ ಕುಂಚೇನಹಳ್ಳಿ ತಾಂಡ, ಹಾರೋಬೆನವಳ್ಳಿ ತಾಂಡ ಮೊದಲಾದವುಗಳು. ಸಮಯ ಸ್ಫೂರ್ತಿಯಿಂದ ಲಂಬಾಣಿ ಹೆಂಗಸರು ಹಾಡುಗಳನ್ನು ಕಟ್ಟಿ ನರ್ತಿಸುವುದರಲ್ಲಿ ನಿಪುಣರು. ಹುಟ್ಟು ಕಲಾವಿದರಾದ ಲಂಬಾಣಿ ಮಹಿಳೆಯರ ಪ್ರತಿಭೆ ಬೇರೆ ಬೇರೆ ರೂಪದ ನೃತ್ಯದ ಮೂಲಕ ವಿಕಾಸ ಹೊಂದಿದೆ.

**ಪುರುಷರ ನೃತ್ಯ** : ಲಂಬಾಣಿಗಳಲ್ಲಿ ಮೂಲತಃ ಪುರುಷರು ನರ್ತಿಸುವುದು ಬಹಳ ಕಡಿಮೆ. ಲಂಬಾಣಿಗಳ ಅತ್ಯಂತ ಮೋಜಿನ ಹೋಳಿ ಹಬ್ಬದಲ್ಲಿ ಮಾತ್ರ ಕೋಲಾಟ ಆಡುವುದು ರೂಢಿಯಲ್ಲಿದೆ. ಭಾರತದಾದ್ಯಂತ ಪ್ರಚಲಿತವಿರುವ ಈ

ಗಂಡುಕಲೆ ಲಂಬಾಣಿಗಳಲ್ಲಿ ಬಹು ಪೂರ್ವದಿಂದಲೂ ಇದೆ. ಹೋಳಿ ಹಬ್ಬದಲ್ಲಾಡುವ ಕೋಲಾಟದಲ್ಲಿ ಅಶ್ಲೀಲ ಹಾಡುಗಳು ಹೆಚ್ಚಾಗಿರುತ್ತವೆ. ಹೋಳಿ ಹಬ್ಬದ ಕೋಲಾಟದಲ್ಲಿ ನವೀನ ಚಮತ್ಕಾರಗಳೇನು ಪ್ರದರ್ಶಿಸುವುದಿಲ್ಲ. ಸರಳವಾಗಿ ಒಂದೇ ಮಾದರಿಯಲ್ಲಿ ಕೋಲುಗಳನ್ನು ಹಾಕುತ್ತಾರೆ.

ಲಂಬಾಣಿಗಳ ಸಾಂಪ್ರದಾಯಿಕ ಕೋಲಾಟವು ಇಂದು ಅದ್ಭುತ ಚಮತ್ಕಾರಗಳಿಂದ ಪ್ರದರ್ಶನಗೊಳ್ಳುತ್ತಿದೆ. ತೇರುಕೋಲು, ಚೆಂಡಾಡುವ ಕೋಲು, ಕಾದಲಗೋಡು ಕೋಲು, ಕುಕ್ಕರಗಾಲು ಕೋಲು, ಪತ್ರಿಕೋಲು, ಅಂಗಡಿಕೋಲು, ಜಡೆಕೋಲು, ಬೆನ್ನಾಳಿಕೋಲು ಹೀಗೆ ಹತ್ತಾರು ವಿಭಿನ್ನ ಬಗೆಯ ಕೋಲಾಟಗಳನ್ನು ಕಲಿತು ಜಾಣ್ಮೆಯಿಂದ ಪ್ರದರ್ಶನ ಮಾಡುತ್ತಾರೆ. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕೆಲವು ತಾಂಡಗಳು ಕೋಲಾಟದ ಮೇಳಗಳಿಗೆ ಪ್ರಸಿದ್ಧಿ ಪಡೆದಿವೆ. ಇಂದು ಲಂಬಾಣಿ ಪುರುಷರ ಕೋಲಾಟ ಕೇವಲ ತಾಂಡದವರ ಮನರಂಜನೆಗೆ ಮೀಸಲಾಗದೆ ನಗರಗಳಲ್ಲಿಯೂ ಪ್ರದರ್ಶನಗೊಂಡು ಮೆಚ್ಚಿಗೆ ಪಡೆಯುತ್ತಿದೆ. ಇವರ ಕೋಲಾಟದ ಹಾಡುಗಳು ಕನ್ನಡ ಭಾಷೆಯಲ್ಲಿದ್ದು, ತಾಂಡದಲ್ಲಿ ಪ್ರದರ್ಶನವಾಗುವಾಗ ವಿರಳವಾಗಿ ಲಂಬಾಣಿ ಭಾಷೆಯಲ್ಲಿರುತ್ತವೆ. ಈಚಿನ ದಿನಗಳಲಿ ಕೋಲಾಟ ಲಂಬಾಣಿ ತಾಂಡಗಳಲ್ಲಿ ಹೆಚ್ಚು ಹೆಚ್ಚು ಜನಪ್ರಿಯಗೊಳ್ಳುತ್ತಿದೆ. ಲಂಬಾಣಿ ನೃತ್ಯಗಳು ಅವರ ಬದುಕಿನೊಡನೆ ನಿಟಕವಾಗಿ ಬೆಸೆದುಕೊಂಡಿದೆ. ಅವುಗಳ ಮೂಲ ಸ್ಫೂರ್ತಿ ಅವರ ಸಂಸ್ಕೃತಿಯೇ ಆಗಿದೆ. ಅವರು ಬಾಳಿನಲ್ಲಿ ಆನಂದೋತ್ಸಾಹಗಳನ್ನು ವ್ಯಕ್ತಪಡಿಸಿದ ರೀತಿ, ಪ್ರಕೃತಿಯ ವಿಕೋಪಗಳಿಗೆ ಭಯಪಟ್ಟ ಮಾದರಿ, ದುಡಿಮೆಯ ಫಲಕ್ಕೆ ಸಂತೋಷಿಸಿದ ವಿಧಾನ, ಬದುಕಿನ ಮಧುರ ಭಾವನೆಗಳಿಗೆ ಸ್ಪಂದಿಸಿದ ಬಗೆಗಳೆಲ್ಲವೂ ಮಿಳಿತಗೊಂಡು ನೃತ್ಯದ ರೂಪು ಪಡೆದಿದೆ.

ಈಚಿನ ದಿನಗಳಲ್ಲಿ ಲಂಬಾಣಿಗಳು ಹಲವಾರು ವಾದ್ಯಗಳನ್ನು ಬಳಸಿಕೊಡು ಲಾವಣಿಗಳನ್ನು ಹಾಡುತ್ತಾರೆ. ಡಪ್ಪು, ಡುಮುಕಿ, ಘಟ, ಗೆಜ್ಜೆಸರ, ತಬಲ, ಕಂಜರ, ತಾಳ ಮೊದಲಾದವು. ಈ ನವೀನ ವಾದ್ಯಗಳನ್ನು ಬಳಸಿ ಹಾಡುವ, ನರ್ತಿಸುವ ಹಲವಾರು ಮೇಳಗಳು ಈಗ ಲಂಬಾಣಿ ತಾಂಡಗಳಲ್ಲಿ ತಲೆ ಎತ್ತಿವೆ. ಜನರು ಮದುವೆ, ಹಬ್ಬ ಹರಿದಿನಗಳಲ್ಲಿ ಇಂತಹ ನೃತ್ಯ ಮೇಳಗಳನ್ನು ಕರೆಸಿ ಅವರ ಹಾಡು ನರ್ತನಗಳನ್ನು ಕಂಡು ಕೇಳಿ ಆನಂದಪಡುತ್ತಾರೆ. ಕಾಲ ಕಾಲಕ್ಕೆ ಬದಲಾವಣೆಯನ್ನು ಒಪ್ಪಿಕೊಂಡು ಅನುಕರಿಸುವುದು ಲಂಬಾಣಿಗಳ ಜಾಯಮಾನ. ಹೊಸ ಹೊಸ ವಾದ್ಯ ಪರಿಕರಗಳನ್ನು ಬಳಸಿಕೊಂಡು ಅವುಗಳಿಗನುಗುಣವಾಗಿ ಹಾಡಿ ಕುಣಿಯುವುದು ಈ ಜನರಲ್ಲಿ ಆಗುತ್ತಿರುವ ಬದಲಾವಣೆಯನ್ನು ಸೂಚಿಸುತ್ತದೆ. ಈ ನವ ಹಾಡುಗಾರರಲ್ಲಿ ಟಿ.ವಿ., ರೇಡಿಯೋ, ಸಿನಿಮಾ ಹಾಡುಗಳ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ಅಷ್ಟೆಲ್ಲ ಇದ್ದರೂ ಕಂಚಿನ ಗಂಗಾಳ, ನಗಾರಿ ಸಾಂಪ್ರದಾಯಿಕ ಮೇಳಗಳು ಇನ್ನೂ ಜನಪ್ರಿಯತೆಯನ್ನು ಉಳಿಸಿಕೊಂಡಿರುವುದು ಜಾನಪದವು ಜೀವಂತ ಪಳಿಯುಳಿಕೆ ಎಂಬ ಮಾತಿಗೆ ನಿದರ್ಶನವಾಗಿದೆ. (ಆಕರ : ಲಂಬಾಣಿ ಸಂಸ್ಕೃತಿ : ಡಾ। ಸಣ್ಣರಾಮ)

# ಚಾಮರಾಜನಗರ ಜಿಲ್ಲಾ ಪರಿಸರದ ಲಂಬಾಣಿ ನೃತ್ಯ-ಗೀತೆಗಳು

ಲಂಬಾಣಿಗಳ ಗೀತ-ನೃತ್ಯ ವೈವಿಧ್ಯತೆಯನ್ನು ಅರಿಯಲು ವಿವಿಧ ಜಿಲ್ಲೆಗಳಲ್ಲಿ ಹಂಚಿ ಹೋಗಿರುವ ಲಂಬಾಣಿಗಳ ಸಂಪ್ರದಾಯಗಳನ್ನು ಅಧ್ಯಯನ ಮಾಡುವುದು ಅತ್ಯಗತ್ಯ. ಪರಿಸರ ಪ್ರಭಾವದಿಂದಾಗಿಯೂ ವ್ಯಕ್ತಿ ವಿಶೇಷಗಳಿಂದಾಗಿಯೂ ಇತರೆಡೆ ಮರೆತು ಹೋಗಿರುವ ಅಥವಾ ಹೊಸದಾಗಿ ಹುಟ್ಟಿಕೊಂಡಿರುವ ಗೀತ-ನೃತ್ಯಗಳ ತೌಲನಿಕ ಅಭ್ಯಾಸಕ್ಕೂ ಇಲ್ಲಿ ಮಾದರಿಗಳು ಸಿಕ್ಕಂತಾಗುತ್ತದೆ. ಪ್ರಸ್ತುತ ಮಹಾದೇವಿ ಬಾಯಿ ಅವರು "ಚಾಮರಾಜನಗರ ಸುತ್ತಿನ ಲಂಬಾಣಿಗರ ಸಂಪ್ರದಾಯಗಳು" ವಿಷಯವಾಗಿ ಸಿದ್ಧಪಡಿಸಿರುವ ಪಿಹೆಚ್.ಡಿ. ಗ್ರಂಥದಲ್ಲಿ (ಅಪ್ರಕಟಿತ) ನೀಡಿರುವ, ಈ ಸುತ್ತಿನ ಲಂಬಾಣಿಗಳ ಕೆಲವು ಗೀತ-ನೃತ್ಯ ಮಾದರಿಗಳನ್ನು ಪರಿಚಯಿಸುವ ಭಾಗಗಳನ್ನು ಇಲ್ಲಿ ಆಯ್ದು ಕೊಟ್ಟಿದೆ.

ಲಂಬಾಣಿ ಮಹಿಳೆಯರು ಹಬ್ಬ-ಉತ್ಸವ, ಮದುವೆ ಸಂದರ್ಭಗಳಲ್ಲಿ ನರ್ತಿಸುತ್ತಾರೆ. ತತ್ವಪದ, ಕಥನ ಗೀತೆ, ಹಾಸ್ಯ, ಭಕ್ತಿ, ಒಗಟು (ಸವಾಲು) ಹಾಗೂ ಆಧುನಿಕ ಸಾಮಾಜಿ ಸಂಗತಿಗಳನ್ನು ಈ ಗೀತೆಗಳು ಒಳಗೊಂಡಿರುತ್ತವೆ. ಗೀತೆ ಹಾಡುತ್ತಾ, ಕಾಲ್ಗೆಜ್ಜೆನಾದದೊಂದಿಗೆ ಲಯ, ತಾಳಗಳಿಗೆ ತಕ್ಕಂತೆ ಮೈಕೈ ತಿರುಗಿಸುತ್ತಾ ನರ್ತಿಸುತ್ತಾರೆ. ಈ ಹಾಡುಗಳಲ್ಲಿ ಪುನರಾವರ್ತನೆ ಹೆಚ್ಚಾಗಿರುತ್ತದೆ. ಒಂದೊಂದು ಸಾಲನ್ನೂ ಕನಿಷ್ಠ ನಾಲ್ಕೈದು ಬಾರಿ ಪುನರಾವರ್ತಿಸುತ್ತಾರೆ. ಈ ನರ್ತನ ಗೀತೆಗಳನ್ನು ಅವರು 'ನಾಚೇರ್ ಗೀದ್' ಎಂದು ಕರೆಯುತ್ತಾರೆ.

ಧಮ ಧಮ ನಾಚರಿಯೇ ನಾರ್ಯಾ
ಹಾತಾ ಸೋನಾ ತೀ ಜಾರ್ಯಾ
ಫೇಟಿಯಾ ಫೇರರಿಯೇ ನಾರ್ಯಾ
ಹಾತಾ ಸೋನಾ ತಈ ಜಾರ್ಯಾ ।

ಧಮ ಧಮ ನಾಚರಿಯೇ ನಾರ್ಯಾ
ಹಾತಾ ಸೋನಾ ತೀ ಜಾರ್ಯಾ
ಘಗರಿ ಘಾಲದಿಯೇ ನಾರ್ಯಾ
ಹಾತಾ ಸೋನಾ ತೀ ಜಾರ್ಯಾ ।

ಧಮ ಧಮ ನಾಚರಿಯೇ ನಾರ್‍ಯಾ
ಹಾತಾ ಸೋನಾ ತೀ ಜಾರ್‍ಯಾ
ಚುಡಲೋ ಘಾಲರಿಯೇ ನಾರ್‍ಯಾ
ಹಾತಾ ಸೋನಾ ತೀ ಜಾರ್‍ಯಾ ।
..................... .....................
..................... .....................
ನಾಯಕುಮಾ ನಾಚರಿಯೇ ನಾರ್‍ಯಾ
ಹಾತಾ ಸೋನಾ ತೀ ಜಾರ್‍ಯಾ ॥

'ಧಮಧಮ ನರ್ತಿಸು ನಾರಿಯೇ' ಎಂದು ಪ್ರಾರಂಭವಾಗುವ ಈ ಗೀತೆಯು ಲಂಬಾಣಿ ಮಹಿಳೆ ತಮ್ಮ ಸಾಂಪ್ರದಾಯಿಕ ನೃತ್ಯ ಪ್ರದರ್ಶಿಸುವ ಸಂದರ್ಭದಲ್ಲಿ ಧರಿಸುವ ವೇಷ-ಭೂಷಣ ಕುರಿತದ್ದಾಗಿದೆ. ಅವಳು ಘುಗರಿ, ಚೂಡೊ ಧರಿಸಿದ ಸುವಾಸಿನಿಯಾಗಿದ್ದು, ಕಾಸಿನ ಸರ, ಭಾತ್ಯಾ, ವಾಂಕ್ಯಾ, ಟೀಕಿ, ಬಲ್ಯಾ ಮುಂತಾದ ಆಭರಣ ಹಾಕಿಕೊಂಡು ಉತ್ಸವ ಸಭೆಗಳಲ್ಲಿ ನರ್ತಿಸುತ್ತಾಳೆ ಎಂಬಲ್ಲಿ ಗೀತೆ ಮುಕ್ತಾಯವಾಗುತ್ತದೆ (ಪು. ೧೧೭-೧೧೮).

ಈ ಲಂಬಾಣಿಗಳ ನರ್ತನ ಗೀತೆಗಳ ಬಹುಮುಖ್ಯ ಲಕ್ಷಣವೆಂದರೆ ಒಗಟು ಸವಾಲುಗಳು. ಇತರ ಜನಪದರಲ್ಲಿ ಈ ಲಕ್ಷಣದ ಹಾಡುಗಳು ದೊರೆಯುವುದು ವಿರಳ. ವೃತ್ತಾಕಾರದಲ್ಲಿ ಮಂದಗತಿಯಲ್ಲಿ ಕುಣಿಯುತ್ತ ಮಹಿಳೆಯರು, ಕುಳಿತು ತಮ್ಮ ನರ್ತನದ ಆನಂದ ಸವಿಯುತ್ತಿರುವ ತಾಂಡಾದ ಹಿರಿಯರಿಗೆ ಹಾಡಿನ ರೂಪದ ಸವಾಲುಗಳನ್ನೊಡ್ಡುತ್ತಾರೆ.

ಝಾಡ್ ಛ ಪೇಡ್ ಛೇಗಿರೆ ನಾಯಕೊ
ಏರೊ ಅರತ ಮನ ಕೀಜೊರೆ ನಾಯಕೊ ।
ಫಳ್ ಛ ಫೂಲ್ ವೇನಿರೆ ನಾಯಕೊ
ಏರೋ ಅರತ ಮನ ಕೀಜೊರೆ ನಾಯಕೊ ॥

**ಕನ್ನಡ** : ಮರವುಂಟು ಬುಡವಿಲ್ಲ ನಾಯಕರೆ
ಇದರ ಅರ್ಥವನ್ನು ನಮಗೆ ಹೇಳಿರಿ ನಾಯಕರೆ ।
ಫಲವುಂಟು ಹೂವಿಲ್ಲ ನಾಯಕರೆ
ಇದರ ಅರ್ಥವನ್ನು ನಮಗೆ ಹೇಳಿರಿ ನಾಯಕರೆ ॥

ತಿಳಿದವರು, ಕುಳಿತ ನಾಯಕರು ಸವಾಲಿಗೆ ಉತ್ತರಿಸುತ್ತಾರೆ. ಸರಿ ಉತ್ತರ ಸಿಕ್ಕ ತಕ್ಷಣ ಮುಂದಿನ ಚರಣದ ಕಡೆಗೆ ಹಾಡು ಧಾವಿಸುತ್ತದೆ. ಹಾಡಿನ ಲಯಕ್ಕನುಗುಣವಾಗಿ ದೇಹ ನಲಿಯುತ್ತದೆ, ಹೆಜ್ಜೆ ಚಲಿಸುತ್ತವೆ. ಹಾಡಿನಲ್ಲಿ ಸಾಲುಗಳು

ಪುನರಾವರ್ತನೆಯಾ ಗುವುದರಿಂದ ಒಗಟು ಬಿಡಿಸಲು ನಾಯಕರಿಗೆ ಕಾಲಾವಕಾಶ ದೊರೆಯುತ್ತದೆ. (ಪು.೧೧೮).

ಈ ನೃತ್ಯ ಗೀತೆಗಳ ಕೆಲವು ಮುಖ್ಯ ಲಕ್ಷಣಗಳೆಂದರೆ ಅವು ಅತ್ಯಂತ ಪುರಾತನ ಮಾದರಿ ಗೀತೆಗಳಾಗಿದ್ದು, ಅವಕ್ಕೆ ಯಾವುದೇ ವಾದ್ಯಗಳ ಸಹಕಾರ ಇರುವುದಿಲ್ಲ. ಆದರೂ ಮಧುರವಾಗಿರುತ್ತವೆ. ಒಂದೇ ಶೃತಿಯಿದ್ದು, ಸುದೀರ್ಘವಾದ ವಸ್ತುವನ್ನುಳ್ಳ ಈ ಹಾಡುಗಳು ಮಂದಗತಿಯ ನೃತ್ಯಕ್ಕೆ ಸಹಕಾರಿಯಾಗಿವೆ.

ಲಂಬಾಣಿ ಮಹಿಳೆಯರ ಘುಮರ್ ನೃತ್ಯ ವೇಗದ ನೃತ್ಯ ಬಗೆಯಾಗಿದೆ. ಇದರ ಗತಿಗನುಗುಣವಾಗಿ ಈ ನೃತ್ಯದ ಸಂದರ್ಭದಲ್ಲಿ ಸಾಮಾಜಿಕ ಹಾಡುಗಳೇ ಹೆಚ್ಚಾಗಿರುತ್ತವೆ. ಇವು ಸಮಯ ಸ್ಫೂರ್ತಿಯಿಂದ ಕಟ್ಟಿದ ಹಾಡುಗಳಾಗಿವೆ :

'ಚಾಂದ ತಾರಿ ಚಾಂದಣೀಮಾ ಚಾರೊಳಿಸಿ ರಾತ್
ಘಮ ಕೇಮಾ ಘುಗರ ವಾಜ ಸಾರಿರಾತ್
ಭೀಯಾ ತಾರಿ ಗೊರಣಿನ ವೊಟೋ ರಕಾಡ್
ಹಾತೇ ಮಾರಿ ರಾಸಡೀನ ಪೆರತೋ ರಕಾಡ್ ।
.............. ................ ..................
.............. ................ ..................
(ಪು. ೧೧೮)

ಈ ಹಾಡನ್ನು ಹಾಡುತ್ತಾ ನರ್ತಿಸುತ್ತಿದ್ದರೆ ನೋಡುಗರಿಗೆಲ್ಲ ಹೆಜ್ಜೆ ಹಾಕಿ ಕುಣಿಯಬೇಕೆನಿಸುತ್ತದೆ. ಈ ಗೀತೆಯಲ್ಲಿ ಬರುವ ಪುನರಾವರ್ತನೆಗಳು, ಅಂತ್ಯ-ಪ್ರಾಸಗಳು ಕುಣಿತವನ್ನು ಲಯಬದ್ಧವಾಗಿಸುವಲ್ಲಿ ಪ್ರಮುಖ ಪಾತ್ರಹಿಸುತ್ತವೆ (ಪು. ೧೧೯).

(**ಆಕರ** : ಚಾಮರಾಜನಗರ ಸುತ್ತಿನ ಲಂಬಾಣಿಗರ ಸಂಪ್ರದಾಯಗಳು: ಮಹಾದೇವಿ ಬಾಯಿ, ಮೈ.ವಿ.ವಿ., ಪಿಹೆಚ್.ಡಿ. ಪ್ರಬಂಧ (ಅಪ್ರಕಟಿತ, ೨೦೦೫).

# ಇನ್ನಷ್ಟು ಗೀತೆಗಳು

ಮದುವೆಯ ಪ್ರಸಂಗದಲ್ಲಿ, ಹಬ್ಬ-ಹರಿದಿನಗಳ ಉತ್ಸವಗಳಲ್ಲಿ ಲಂಬಾಣಿ ಸ್ತ್ರೀಯರು ನೃತ್ಯಗೈಯುತ್ತಾರೆ. 'ಹೋಳಿ' ಹಬ್ಬದ ಆಗಮನವು ಅವರ ಹೆಜ್ಜೆ, ತೋಳು ಹಾಗೂ ಸೊಂಟಗಳಿಗೆ ಹೆಚ್ಚಿನ ಉತ್ಸಾಹವನ್ನು ಮೂಡಿಸುತ್ತದೆ. ಗೀತೆಯನ್ನು ಹಾಡುತ್ತ, ಆ ಗೀತೆಯ ನಾದ, ಲಯ ಹಾಗೂ ತಾಳಗಳಿಗೆ ತಕ್ಕಂತೆ ತಮ್ಮ ಮೈಮಾಟವನ್ನು ಮಣಿಸುತ್ತ ಹೆಜ್ಜೆ ಹಾಕುತ್ತಾರೆ. ಸ್ತ್ರೀಯರು ಗುಂಪುಕಟ್ಟಿ ಸುತ್ತುವರಿದು ಕೈಗಳನ್ನು ಮೇಲೆ ಕೆಳಗೆ ಆಡಿಸುತ್ತ, ಸೊಂಟವನ್ನು ಬಾಗಿಸುತ್ತ, ಕುತ್ತಿಗೆ ತಿರುವುತ್ತ ಅಪೂರ್ವವಾದ ನೃತ್ಯಲೋಕವನ್ನು ಸೃಷ್ಟಿಸುತ್ತಾರೆ. ರಂಗು ರಂಗಿನ ಬಟ್ಟೆಗಳು, ವಿವಿಧ ವಿನ್ಯಾಸದ ಅಭರಣಗಳು, ಕಾಲಿನ ಕಿರುಗೆಜ್ಜೆಗಳು; ಅವರ ನೃತ್ಯಕ್ಕೆ ವಿಶೇಷ ಕಳೆಯನ್ನು ಒದಗಿಸುತ್ತವೆ. ಅವರ ನೃತ್ಯಕ್ಕೆ ಅವರದೇ ಆದ ವೈಶಿಷ್ಟ್ಯವನ್ನು ತಂದುಕೊಡುತ್ತವೆ.

ದೇವಿ-ದೇವತೆಯರಿಗೆ ಸಂಬಂಧಿಸಿದ ಹಾಗೂ ಜೀವನದ ವಿವಿಧ ಸನ್ನಿವೇಶಗಳಿಗೆ ಸಂಬಂಧಿಸಿದ ಗೀತೆಗಳನ್ನು ಹಾಡುತ್ತ ಗೀತೆಯ ನಾದ, ಲಯಗಳಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ; ಮೈಮನ ತಣಿಸಿಕೊಳ್ಳುತ್ತಾರೆ; ತಣಿಸುತ್ತಾರೆ. ಅಂಥ ಕೆಲವು ಗೀತೆಗಳನ್ನಿಲ್ಲಿ ಅವಲೋಕಿಸಬಹುದು.

ಸೇವಾಭಾಯಾ ಆಯೋಽನ ಲಗಿ ಭುಲಿಯಾಯೋ ॥ ಪಲ್ಲ ॥

ಬನಾಯೇ ಲಗಿರೋ ಫೇರಿ ಗಾಲಿಯಾಯೋ ।
ಮೋತಿವಾಲೋ ಆಯೋನ ಗಾವಣ ಭುಲಿಯಾಯೋ ।
ಬನಾಯೇ ಗಾವಣೇರೋ ಫೇರಿ ಪರಿಯಾಯೋ ।
ಅಯಿವಾಳೋ ಆಯೋನ ಲಗಿ ಭುಲಿಯಾಯೇ ।
ಬನಾಯೇ ಲಗಿರೋ ಫೇರಿ ಗಾಲಿಯಾಯೋ ।
ಸೇವಾಭಾಯಾ ಆಯೋನ ಗಾದಿ ಭುಲಿಯಾಯೋ ।
ಬನಾಯೇ ಗಾಧಿರೋ ಫೇರಿ ಗಾಲಿಯಾಯೋ ।
ಸೇವಾ ಭಾಯಾ ಆಯೋನ ಲಗಿ ಭುಲಿಯಾಯೋ ॥ ॥ ಪಲ್ಲ ॥

..............................................................

(ಆಕರ : ಲಂಬಾಣಿ ಜನಪದ ಸಾಹಿತ್ಯ : ಪು. ೯೧)

ಡಾ। ಪಿ.ಕೆ. ಖಂಡೋಬಾ ಅವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುವ ಲಂಬಾಣಿಗಳ ಕೆಲ ಕುಣಿತದ ಹಾಡುಗಳು ಹೀಗಿವೆ :

ಕಾಮದಹನದ ಬಳಿಕ ಎಲ್ಲರೂ ಗುಂಪಾಗಿ ಕುಣಿಯುವಾಗ ಹಾಡುವ ಒಂದು ಲೇಂಗಿ (ಪ್ರೇಮಗೀತೆ)ಯ ತುಣುಕು ಇದು :

**ಪೇನಾರೋತೋ ನಾಗಾಸಾಮಿ**
**ಸಾಮೀಜ ಅಮಧೂತರೆ**
**ಅಬ ಧರಸೊ ತಾಂಡೇಮಾಯಿ**
**ಪರಕಳಲಾಗಿ ಚೂತ ಬೆ**
**ಪೇನಾರೋತೊ ಡೂಂಗರ ಖೋಳಾ**
**ಲಗಾಡಗೆ ಭಭೂತಬೆ**
**ಅಬಧರಸೊ ತಾಂಡೇ ಮಾಯಿ**
**ಖಾಸಡೂಸಿ ಚೂತಬೆ**

ಅರ್ಥ : ತಾನು ನೀಡಿದ ವಚನದಂತೆ/ ಪುರಾತನ ಗುರು ನಾಗಾಸಾಮಿ ತಾಂಡಾಕ್ಕೆ ಬಂದಿದ್ದಾನೆ. ಯಮಧೂತನಂತಿದ್ದರೂ ಅವನು ಹಬ್ಬಕ್ಕೆ ಬಂದದ್ದು ಎಲ್ಲರಿಗೂ ಹಿಗ್ಗು ತಂದಿದೆ. ಆತನ ಹೆಸರಲ್ಲಿ ಇವರು ಕಾಮದಹನ ಕಾರ್ಯ ಕೈಗೊಂಡಿದ್ದಾರೆ.

ಪ್ರೇಮಗೀತೆಗಳನ್ನು ಹಾಡುತ್ತಾ, ಕುಣಿಯುತ್ತಾ ಹಿರಿಯರೂ, ಕಿರಿಯರೂ ತಮಗೆ ಸಂಬಂಧಿಸಿದ ಸ್ತ್ರೀಯರನ್ನು ಕುರಿತು ಶೃಂಗಾರ, ಅಶ್ಲೀಲದ ಪದಗಳನ್ನು ಹಾಡುತ್ತಾರೆ. ಪ್ರತಿಯಾಗಿ ಅವರು ಇವರಿಗೆ ಕೋಲುಗಳಿಂದ ಬಡಿಯುವುದೂ ಉಂಟು. (ಪು.೭೭-೭೮).

ತೀಜ್ (ಗೌರೀ) ಹಬ್ಬದಲ್ಲೂ ಹಾಡು-ಕುಣಿತಗಳಿರುತ್ತವೆ. ಇದು ಹತ್ತು ದಿನಗಳವರೆಗೂ ನಡೆಯುತ್ತದೆ. ವಿವಾಹ ಯೋಗ್ಯ ಹುಡುಗಿಯರು ಅತ್ಯುತ್ಸಾಹದಿಂದ ಹಿರಿಯ ಸ್ತ್ರೀಯರ ಮಾರ್ಗದರ್ಶನದಲ್ಲಿ ಗೀತ ನೃತ್ಯಗಳನ್ನು ನಡೆಸುತ್ತಾರೆ. ನೃತ್ಯದ ವಿವಿಧ ಭಂಗಿಗಳನ್ನು ಇಲ್ಲಿ ಕಾಣಬಹುದಾಗಿದೆ. ಹುತ್ತದ ಮಣ್ಣು ತರುವಾಗ ಬಾರೀ ಗಿಡದ ಸುತ್ತ ಕುಣಿವಾಗ ಹಾಡುವ ಒಂದು ಗೀತೆ ಇದು :

**ದೋರಡೀರ ದೋರ ಬೋರಲಾಗೆ**
**ಕಾನೂರೊ ಕನಿಯಾ ಬೋರಲಾಗೆ**
**ಧಾದಲಾಸೊ ಕಾನರೆ ಕಾನರೊ ಕನಿಯಾ**
**ಓಲ್ಯಾಸೊ ಪೇಟರೆ ಕಾನೂರೊ ಕನಿಯಾ ... (ಪು. ೮೪)**

(ಆಕರ : ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ : ಡಾ। ಪಿ.ಕೆ. ಖಂಡೋಬಾ; ೧೯೯೧).

## ಆಕರ ಸೂಚಿ


ಉತ್ತರ ಕರ್ನಾಟಕದಲ್ಲಿ ಪ್ರಾಣಿಬಲಿ : ಡಾ। ಸ.ಜ. ನಾಗಲೋಟಿಮಠ; ೨೦೦೧; ಕನ್ನಡ ವಿವಿ. ಹಂಪಿ.

ಜಾನಪದ ತರಂಗಗಳು : ಡಾ। ನಿಂಗಣ್ಣ ಸಣ್ಣಕ್ಕಿ

ದುರಗಮುರಗಿಯರ ಸಂಸ್ಕೃತಿ : ಗೀತಾ ನಾಗಭೂಷಣ; ೧೯೯೩; ಕ.ಸಾ. ಅಕಾಡೆಮಿ, ಬೆಂಗಳೂರು.

ಲಂಬಾಣಿ ಸಂಸ್ಕೃತಿ : ಡಾ। ಸಣ್ಣರಾಮ

ಲಂಬಾಣಿ ಜನಪದ ಸಾಹಿತ್ಯ:

ಚಾಮರಾಜನಗರ ಸುತ್ತಿನ ಲಂಬಾಣಿಗರ ಸಂಪ್ರದಾಯಗಳು : ಮಹಾದೇವಿಬಾಯಿ; ಅಪ್ರಕಟಿತ ಪಿಎಚ್.ಡಿ. ಸಂಪ್ರಬಂಧ.

ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ : ಡಾ। ಪಿ.ಕೆ. ಖಂಡೋಬಾ; ೧೯೯೧.


ಕರ್ಬಲ ಹಾಡುಗಳನ್ನು ಶ್ರೀ ಮಹಲಿಂಗ ಮಂಗಿ, ಗೋಕಾಕ, ಬೆಳಗಾವಿ ಜಿಲ್ಲೆ ಅವರು ಒದಗಿಸಿದ್ದಾರೆ.

# ಕೋಲಾಟದ ಹಾಡುಗಣಿತಗಳು

ಕೋಲಾಟವು ಪ್ರದೇಶ, ಜಾತಿಗಳನ್ನು ಮೀರಿದ ಒಂದು ಜನಪ್ರಿಯ ಹಾಗಾಗಿ ಸಾರ್ವತ್ರಿಕ ಪ್ರದರ್ಶಕ ಕಲೆ. ಇದು ಆಡಲಿಕ್ಕೆ ಸರಳ–ಸುಲಭ– ಎನ್ನಿಸಿದರೂ ಅಷ್ಟು ಸರಳವಲ್ಲದ, ರೇಖಾಗಣಿತಾತ್ಮಕ ಲೆಕ್ಕಾಚಾರವನ್ನು ಅಳವಡಿಸಿಕೊಂಡು ರೂಪಿತವಾದ ಒಂದು ಅಭಿವ್ಯಕ್ತಿ ವಿಶೇಷ.

ಕೋಲಾಟ ಎಲ್ಲರಿಗೂ ಗೊತ್ತು. ಆದರೆ, ಅದರ ಆಂತರಿಕ ರಚನಾ ಸ್ವರೂಪವನ್ನು ವಿವರಿಸುವುದು ಎಲ್ಲರಿಗೂ ಸಾಧ್ಯವಾಗದ ಕೆಲಸ. ಡಾ। ಎಸ್.ಪಿ. ಪದ್ಮಪ್ರಸಾದ್ ಕೋಲಾಟದ ಕೆಲವು ವೈವಿಧ್ಯ ಸೂಕ್ಷ್ಮತೆಗಳನ್ನು ತಮ್ಮದೊಂದು ಕೃತಿಯಲ್ಲಿ ಚೆನ್ನಾಗಿಯೇ ದಾಖಲಿಸಿದ್ದಾರೆ. ಆಸಕ್ತರು ಅದನ್ನು ಅಗತ್ಯ ಪರಿಶೀಲಿಸಬೇಕು. ಇವರಲ್ಲದೆ, ಪ್ರೊ। ಎಸ್.ವಿ. ರಂಗಣ್ಣ, ಡಾ। ಮಳಲಿ ವಸಂತಕುಮಾರ್ ಮೊದಲಾದವರು ಬಹು ಹಿಂದೆಯೇ ಉಪಯುಕ್ತ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವಲ್ಲದೆ ಇತರ ಅನೇಕ ಸಂಕಲನಗಳಲ್ಲಿಯೂ ಕೋಲಾಟ ಪದಗಳು ಪ್ರಕಟಗೊಂಡಿವೆ. ಹೀಗೆ, ಅನೇಕ ಕೃತಿಗಳಿದ್ದರೂ ಕೋಲಾಟದ ತಾಳ–ಲಯ–ಕುಣಿತ ವಿನ್ಯಾಸ, ಹೆಜ್ಜೆಗಳ ಲೆಕ್ಕಾಚಾರ ಇತ್ಯಾದಿಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡೇ ಕೋಲಾಟದ ಹಾಡುಗಣಿತಗಳನ್ನು ಶಾಸ್ತ್ರೀಯವಾಗಿ ದಾಖಲಿಸಬೇಕಾದ ಅಗತ್ಯ ಮತ್ತು ಅವಕಾಶ ಇನ್ನೂ ಇದ್ದೇ ಇದೆ. ಆ ಶ್ರಮಸಾಧ್ಯವಾದ ಕೆಲಸಕ್ಕೆ ಸಂಶೋಧಕರು, ಸಂಗ್ರಹಕರು ಮುಂದಾಗಬೇಕಿದೆ. ಈಗಲಾದರೂ ಆ ದಾಖಲೆ ಆಗದಿದ್ದರೆ, ಮುಂದೆ, ಕೇವಲ ಹಾಳೆ ಮೇಲಿನ ಪದ ಹೇಳಿಕೊಂಡು ಮನಸ್ಸಿಗೆ ತೋಚಿದಂತೆ ಕುಣಿವ ಅನಿವಾರ್ಯ ಉಂಟಾಗುತ್ತದೆ. ಅಲ್ಲಲ್ಲಿ ಹಳ್ಳಿಗಳಲ್ಲಿ ಇರುವ ಅನುಭವೀ ಗ್ರಾಮೀಣ ಗುರುಗಳನ್ನು ನೇಮಕಮಾಡಿಕೊಂಡು ಶಾಲಾ ಮಕ್ಕಳಿಗೂ, ಯುವಕ–ಯುವತಿ ಸಂಘಗಳಲ್ಲಿಯೂ ಕೋಲಾಟ ಕಲಿಸುವ ವ್ಯವಸ್ಥೆ ಆದರೂ, ಆ ಮೂಲಕವೂ ಅಪರೂಪದ ಕೋಲಾಟ ವೈವಿಧ್ಯ ಮುಂದಿನವರಿಗೂ ಉಳಿಯುತ್ತದೆ. ಕೆಲವು ವಿಶೇಷಗಳನ್ನು ಕೇವಲ ವಸ್ತು ಸಂಗ್ರಹಾಲಯದಲ್ಲಿ ಭೌತಿಕ ವಸ್ತುವಾಗಿ ದಾಖಲಿಸುವುದಕ್ಕಿಂತ, ಕಲಿಕೆಯ ಮೂಲಕ ಬದುಕಿನಲ್ಲಿ ಅಳವಡಿಸಿಕೊಂಡರೆ ಅದು ನಿಜವಾದ ಜೀವಂತ ದಾಖಲೆಯಾಗಿರುತ್ತದೆ.

ಕೋಲಾಟವು ಎಲ್ಲೆಡೆ ಸಾಧಾರಣವಾಗಿದ್ದರೂ, ಗೊಲ್ಲರು, ಲಂಬಾಣಿಗರು, ಜೇನು ಕುರುಬರು ಮೊದಲಾದ ಕೆಲವು ಸಮುದಾಯದವರು ಕೋಲಾಟವನ್ನು ತಮ್ಮ ಸಮುದಾಯದ ಒಂದು ಅನನ್ಯ ಅಭಿವ್ಯಕ್ತಿ ಎಂಬಂತೆ ಮಾಡಿಕೊಂಡಿರುವುದು

ಗಮನಾರ್ಹವಾಗಿದೆ. ಹಾಗೆಯೇ, ಕೋಲಾಟವು ಇತರ ಕೆಲವು ಸಾಂಸ್ಕೃತಿಕ ಸಂಗತಿಗಳೊಂದಿಗೆ ಮಿಳಿತವಾಗಿ ಅದು ಹೊಸತೇ ಎನ್ನುವ ರೂಪದಲ್ಲಿ ಪ್ರಕಟವಾಗುತ್ತಿರುವುದೂ ಅಭ್ಯಾಸನೀಯವಾಗಿದೆ. ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕೋಲಾಟ, ಕೊಡವರ ಹುತ್ತರಿ ಕೋಲಾಟ ಮೊದಲಾದವು ಅತ್ಯುತ್ತಮ ಉದಾಹರಣೆಗಳಾಗಿವೆ. ಇಂತಹ ಹೊಸ ಆವಿರ್ಭಾವಗಳನ್ನು ಗಮನದಲ್ಲಿಟ್ಟುಕೊಂಡು ಕೋಲಾಟದ ಬಗೆಗಿನ ಒಂದು ತಳಸ್ಪರ್ಶಿ, ಸಮಗ್ರ ಎನ್ನಬಹುದಾದ ಅಧ್ಯಯನ, ದಾಖಲೀಕರಣ ಖಂಡಿತಾ ಆಗಬೇಕಾಗಿದೆ.

ಕೋಲಾಟಗಳ ಹಾಡು-ಕುಣಿತಗಳ ತಾಂತ್ರಿಕ ಅಂಶಗಳನ್ನು ಒಳಗೊಂಡ ಪ್ರತ್ಯೇಕ ಸಂಪುಟ ತರಬಹುದಾದ ಅಗತ್ಯ ಮತ್ತು ಅವಕಾಶ ಇರುವುದರಿಂದ, ಪ್ರಸ್ತುತ, ಈ ಸಂಪುಟದಲ್ಲಿ ಪ್ರಾತಿನಿಧಿಕವಾಗಿ ಹಾಗೂ ಮಾದರಿಗಾಗಿ ನಾನು ಸಂಗ್ರಹಿಸಿದ ಮತ್ತು ಬಹು ಮಟ್ಟಿಗೆ ಅಪ್ರಕಟಿತವಾದ ಕೆಲವು ಕೋಲಾಟ ಪದಗಳನ್ನು ಮಾತ್ರ ಇಲ್ಲಿ ಸೇರಿಸಿದೆ.

# ಕೋಲಾಟದ ಒಗಟಿನ ಹಾಡು

ಕೋಲು ಕೋಲನ್ನು ಕೋಲೆ । ಸಿರಿಗಂಧ
ಕೋಲನ್ನಿ ಕೋಲನ್ನ ಕೋಲೆ ॥ ಪ ॥

ಮತ್ತೆ ಮುಳ್ಳುಂಟಣ್ಣಾ ಹಳಸಲ್ಲ ಈ ಪದುಮ
ಹಿರಿಯರು ಕೂತಿದ್ದೀರಿ ತಿಳಿದೇಳಿರಣ್ಣಾ ॥ ಪ ॥

ಒಂದೇ ಗೊನಿಗುರಾಯ ಮುನ್ನೂರರವತ್ತು ಕಾಯಿ
ಹನ್ನೆರಡೇ ಹಣ್ಣು ಗೊನಿಯ್ಯೆದು । ರನ್ನದಿ ॥ ಪ ॥

ಹನ್ನೆರಡೇ ಹಣ್ಣು ಗೊನಿಯ್ಯೆದು ಈ ಪದುಮ
ಹಿರಿಯರು ಕೂತಿದ್ದೀರಿ ತಿಳಿದೇಳಿರಣ್ಣಾ ॥ ಪ ॥

ನಡೆಯಾವು ಎಂಟು ಕಾಲು ನಡೆ ತಪ್ಪದವ್ ಎಲ್ಡು ಕಾಲು
ನುಡಿಯವು ನಾಲಗೆ ನಾಲಕ್ ತಲೆಯ್ಯೆದು ರನ್ನದಿ ॥ ಪ ॥

ನುಡಿಯವು ನಾಲಗೆ ಶಾಲಕ್ ತಲೆಯ್ಯೆದು ಕೀತದುಮ
ಜಾಣರು ಕೂತಿದ್ದೀರಿ ತಿಳಿದೇಳಿರಣ್ಣಾ ॥ ಪ ॥

ಇದು ಒಗಟಿನ ಪದ : ಅಟ್ಟಕ್ಕಾಗದು=ಹರಳುಕಾಯಿ
ಒಂದೇ ಗೊನಿಗುರಾಯಂ=ಅಡಕೆಗೊನೆ
ನಡೆಯಾವು ಎಂಟು ಕಾಲು – ಕೋಳಿ ಹುಂಜ–ಕಾಲು–ಬೆರಳು, ಜುಟ್ಟು ಇತ್ಯಾದಿ.

**ಇದು ತಾಳಗಡ್ಡಿ ಹಾಡು**

ತೋವಿನ ಕೆರೆಯ ದೊಡ್ಡಣ್ಣಾ ಎಂಬ ಹಿರಿಯ ಹೇಳಿಕೊಟ್ಟ ಹಾಡು. ಆದರೆ, ಒಗಟಿನ ಉತ್ತರ ಹೇಳಿರಲಿಲ್ಲ. ಆದರೆ, ನಮ್ಮ ಅಜ್ಜಿ ಕೆಂಗಮ್ಮ, ತಂಬುಗನಹಟ್ಟಿ (85 ವರ್ಷ) ಈ ಒಗಟನ್ನು ಒಡಸಿ ಹೇಳಿಕೊಟ್ಟಿದ್ದರು.

ಮೋಹನ್‌ಕುಮಾರ್, ಜಾನಪದ ವಿಶ್ವವಿದ್ಯಾಲಯ, ಶಿಗ್ಗಾವಿ.
ಮೊಬೈಲ್ ಮೂಲಕ ಸಂಗ್ರಹ : ಟಿ. ಗೋವಿಂದರಾಜು.
ದಿ. 4-4-2014.

# ಒಂಟಿ ಕೋಲು ಪದ

ಅಯ್ಯಯ್ಯಪ್ಪ ಅಯ್ಯಯ್ಯೋ,
ಇಲ್ನೋಡಪ್ಪ, ಇಲ್ನೋಡು (೨ ಬಾರಿ)

ಕೋಣ ತಿಗದಗೆ ಸಗಣಿಯ
ಸಗಣಿಯಂತೆ ತಪ್ಪೆ ಮಾಡಕಂಡೆ
ಸಂತೇಗೇಕೆ ಹೋಗಿದ್ದೆ?

ಬೆಲ್ಲ ಗಿಲ್ಲ ಇಲ್ಲ ಎಂದು
ಬೆಲ್ಲ ತರಕ್ಕೆ ಹೋಗಿದ್ದೆ
ಬೆಲ್ಲ ತಂದ ಲವುಡಿ ನೀನು
ಬೆಲ್ಲ ಏನು ಮಾಡಿದ್ದೆ?
ಇಲಿ ಗಿಲಿ ತಿಂತವಂತ
ಬೇಲಿ ಸಾಲಾಗೆ ಇಟ್ಟಿದ್ದೆ ॥ ಅಯ್ಯಯ್ಯಪ್ಪ ..... ॥

ಸೀರೆ ಗೀರೆ ಇಲ್ಲಾಂತ
ಸೀರೆ ತರಾಕೆ ಹೋಗಿದ್ದೆ
ಸೀರೆ ತಂದ ಲವುಡಿ ನೀನು
ಸೀರೆ ಏನು ಮಾಡಿದ್ದೆ .....?
ಹರಿದು ಗಿರುದು ಹೋಗ್ತಾತಂತ
ಬೇಲಿ ಮ್ಯಾಲೆ ಹಾಕಿದ್ದೆ ॥ ಅಯ್ಯಯ್ಯಪ್ಪ ..... ॥

ಅಕ್ಕಿಗಿಕ್ಕಿ ಇಲ್ಲಂತ
ಅಕ್ಕಿ ತರಕ್ಕೆ ಹೋಗಿದ್ದೆ
ಅಕ್ಕಿ ತಂದ ಲವುಡೀ ನೀನು
ಅಕ್ಕಿ ಏನು ಮಾಡಿದ್ದೆ
ಉಂಡು ಗಿಂಡು ಹೋಗ್ತಾತಂತ
ಇರುವೇ ಗೂಡಾಗೆ ಹಾಕಿದ್ದೆ ॥ ಅಯ್ಯಯ್ಯಪ್ಪ ..... ॥

ಹಾಡಿದ್ದು : ಕೃಷ್ಣಪ್ಪ, ಸೋಮಲಾಪುರ, ಮಜುರೆ ಚಿತ್ರದೇವರ ಹಟ್ಟಿ, ತುರುವೇಕೆರೆ ತಾ॥, ತುಮಕೂರು ಜಿಲ್ಲೆ.

ಬರಹಕ್ಕೆ : ಕು॥ ಪ್ರೇಮ, 8ನೇ ತರಗತಿ, ದೇವರಹಟ್ಟಿ, ದಿ. 30-03-2011; ಅರಳಗುಪ್ಪೆ.

ಸಂ. : ಟಿ. ಗೋವಿಂದರಾಜು, (ಅರಳುಗುಪ್ಪೆಯಲ್ಲಿ ನಡೆದ ಒಂದು ಜಾನಪದ ಮೇಳ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ಪ್ರದರ್ಶಿತ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ಪ್ರದರ್ಶಿತವಾದ ಒಂದು ಕೋಲಾಟದಲ್ಲಿ ಹಾಡಿದ ಪದ ಇದು. ಒಂಟಿ ಕೋಲು ಹುಯ್ಯುವಾಗ ಈ ಹಾಡನ್ನು ಬಳಸುವುದಾಗಿ ಕಲಾವಿದರು ತಿಳಿಸಿದ್ದಾರೆ. – ಟಿ.ಗೋ.

## ಸೋಬಾನವೆನ್ನಿ ಸುಖವೆನ್ನಿ .....

### (ಇದು ಬಾಗ್ಗೋಲು ಕೋಲಾಟಕ್ಕೆ ಬಳಸುವ ಪದ)

ಸೋಬಾನವೆನ್ನಿ ಸುಖವೆನ್ನಿ ಸೋಬಾನವೆ ॥ಪ।

ಅತ್ತಿಯ ಮರಕೆ ಕಪ್ಪ ಕುದುರೆಯ ಕಟ್ಟಿ
ನೆತ್ತಿಗೆ ಜುಂಗವಿಡಿಸ್ಯಾರೆ । ಸೋಬಾನವೆ ।
ತೆಂಗಿನ ಮರಕೆ ಕೆಂದ ಕುದುರೆಯ ಕಟ್ಟಿ
ಮುಂಗಾಲ್ಗೆ ಜುಂಗವಿಡಿಸ್ಯಾರೆ । ಸೋಬಾನವೆ ।

ಅಣ್ಣೆಲೆ ನಾಕ್ಯಯ್ಯುಂಡು ತಣ್ಣೀರ ಮಕ್ಕಂಡು
ಚಂದ್ರಾಮನೆಂಬ ಕುದುರೆಯೇ । ಸೋ ..... ।
ಚಂದ್ರಾಮನೆಂಬ ಕುದುರೆ ಮೇಲೇರಿಕಂಡು
ಹೆಣ್ಣಿದ್ದ ಮನಿಗೆ ನಡುದಾರೆ । ಸೋ ..... ।

ಹೆಣ್ಣ ಕೊಡಿರಮ್ಮ ಕನ್ನೆ ಕೊಮಾರಗೆ
ಕೆನ್ನೆ ಕಪ್ಪತ್ತಿ ಬರುವವನಿಗೆ । ನಂಜುಂಡಗೆ
ಕನ್ನೆ ದೇವರಿ ಕೂಡಿರಮ್ಮ । ಸೋ ..... ।

ಕುದುರೆಯನೇರಿ ಕಂಡು ಚದಿರಂಗ ನಾಡಿಕಂಡು
ಚದುರೇರ ಬೀದಿಂದ ಬರುವವನಿಗೆ । ನಂಜುಂಡಗೆ
ಚದುರಂಗ ನೋಡಿ ಕೊಡಿರಮ್ಮ । ಸೋ ..... ।

ಆನೆಯನೇರಿ ಕಂಡು ಆನಂದನಾಡಿ ಕಂಡು
ಆನಂದ್ಗಿರಿಯಿಂದ ಬರುವನಿಗೆ । ನಂಜಯ್ಯಗೆ
ಕನ್ನೆ ದೇವರಿ ಕೊಡಿರಮ್ಮ । ಸೋ ..... ।

ಒಂಟಿಯನೇರಿಕಂಡು ನಾಂಟಾವ ನಾಡಿಕಂಡು
ನೆಂಟರು ಬೀದಿಂದ ಬರುವವನಿಗೆ । ನಂಜುಂಡಗೆ
ಕನ್ನೆ ದೇವಾರಿ ಕೊಡಿರಮ್ಮ । ಸೋ ..... ।

ಬಸವನೇರಿಕಂಡು ಬಸುಮಂಗನೊಯಿಕಂಡು
ಬಸವ ಪೋಳಿಂದ ಬರುವನಿಗೆ । ನಂಜಯ್ಯಗೆ
ಕನ್ನೆ ದೇವಾರಿ ಕೊಡಿರಮ್ಮ । ಸೋ ..... ।

ಕಣಗಾಲಗಿಡುದಡಿಯ ಕನ್ನೆ ಚಪ್ಪರನಾಕಿ
ಮುತ್ತೈದ ರಾಸಿ ಬರುದಾರೆ ॥

ದಾರೆ ಹೊತ್ತಿಗೆ ಯಾರ್ಯಾರು ಬಂದರು
ನಾರಾಯಣನೊಬ್ಬ ಶಿವನೊಬ್ಬ । ಸತ್ಯಲೋಕ್ದ
ಬ್ರಮ್ಮನು ಸಾಗಿ ಬರುತಾನೆ । ಸೋ ..... ।

ಶ್ರೀಗೌರಿ ದಾರಿ ಯಾರಾರು ಎರುದಾರೆ
ನಾರಾಯಣನೊಬ್ಬ ಶಿವನೊಬ್ಬ । ಸತ್ಯಲೋಕ್ದ
ಬ್ರಹ್ಮನು ದಾರಿ ಎರುದಾಽರು । ಸೋ ..... ।

ಹಾಡಿದ್ದು : ರಂಗಪ್ಪ, ರಾಮಣ್ಣ (ಹಾಲು ಮತಸ್ಥರು).
ಸುಳಿದಿಮ್ಮನಹಳ್ಳಿ, ಬಾಣಾವರ ಹೋಬಳಿ.
ಇವರು ಧಾರ್ಮಿಕ ಹಿನ್ನೆಲೆಯಲ್ಲಿ ಭಿಕ್ಷಾಟನೆಗೋ ಏನೋ ಊರುಗಳ
ಮೇಲೆ ಬಂದಿದ್ದಾಗ ಅರಸೀಕೆರೆ ತಾ। ಬೆಳಗುಂಬದಲ್ಲಿ ಈ ಹಾಡುಗಳನ್ನು
ಕೇಳಿ ಬರೆದುಕೊಂಡಿದೆ. ದಿನಾಂಕ : 27–11–1983.
ಸಂ : ಟಿ. ಗೋವಿಂದರಾಜು.

## ಒಂದಂಬೋದೇನೆ ಜಾಣೆ .....

ಒಂದಂಬೋದೇನೆ ಜಾಣೆ ಒಂದಂಬೋದೇನೆ ....
ಎರಡಂಬೋದೇನೆ ಜಾಣೆ ಎರಡಂಬೋದೇನೆ ....
ಮೂರಂಬೋದೇನೆ ಜಾಣೆ ಮೂರಂಬೋದೇನೆ ....
(ಹೀಗೆ ಹನ್ನೊಂದರವರೆಗೆ ಹಾಡುವುದು)

ಹನ್ನೊಂದೆಂಬೊಂದೊಂದ್ ಹೊನ್ನೇಮರವು
ಹತ್ತೆಂಬೊಂದೇನೋ ಜಾಣಂದತ್ತೆಂಬದೇನೆ
ಹತ್ತೆಂಬದೊಂದತ್ತಿಯ ಮರವು
ಒಂಬತ್ತಂಬೊಂದೊಂದ್ ತುಂಬಿದ ಕೊಡವು
ಎಂಟಂಬೊಂದೊಂದ್ ಗಂಟೆ ಶಬ್ದ
ಏಳಂಬೊಂದೊಂದು ಏಳೆಡೆ ಸರ್ಪ
ಆರಂಬೊಂದೊಂದು ಆರಂದಡವಿ
ಐದೊಂಬದೊಂದು ಕುಯ್ದ ಮಲ್ಲಿಗೆ
ನಾಕಂಬದೊಂದು ಹಾಕಿರ ಮಂಚ
ಮೂರಂಬದೊಂದು ಮುತ್ತಿನ ಚಂಡು
ಎರಡಂಬೊದೊಂದು ಕಂಡ್ಯಾ ವಾದ್ಯ
ಒಂದೊಂಬೊಂದೊಂದು ನಂದಿಕೋಲು

ಯಾವುದೇ ತಾಳಗತ್ತಿನ ಕೋಲಿಗೆ ಬಳಸಬಹುದಾದ ಪದ ಇದು :

ಕುಂದೂರ ಬಾರೆಲೇ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೆವಸ್ಟು ಮರಳಿಲ್ಲ/ಕುಂದೂರಯ್ಯ
ಸೋಸಿ ಬಿತ್ಯವ್ನೆ ದವನವ/ಕುಂದೂರಯ್ಯ
ಅಡಗಿನ ಕುಂದೂರು ಬೆಡಗೀನೇರಿ ಮ್ಯಾಲೆ
ಕೊಡವಿ ಜೋತುರವೊಂದುಡುವಾನೆ
ಕೊಡವಿ ಜೋತುರವೊಂದ್ ಉಡುವ ಕುಂದೂರಯ್ನು
ಉಡುದಾರವೆಲ್ಲ ಅಪರಂಜಿ.

ನವಣೆ ಹೊಲಕ್ಕೆ ಹವನಕ್ಕೆ ಮಂಚಿಗೆ
ಕವಣೆ ಕಾಲಿಗೆ ಹುರಿಗೆಜ್ಜೆ/ನಾಯ್ಕುಂಡು
ಉಡಿಗೇರು ಸಾಕ್ಯವ್ರೆ ಗಿಣಿಹಿಂಡ.

ಆಕಾಶ್ದ ಅಗ್ಗಣಿ ಲೋಕದ ಒಳ್ಳೆಣ್ಣೆ
ನಾಕು ನೆಲಿಽಗೆ ಶಿವಗಂಟೆ/ಕುಂದೂರಯ್ನ
ಕಲ್ಯಾಣದ ಗಂಟೆ ಗಲಿರೆಂದು । ಸೈ ।

ಹಾಡಿದ್ದು : ರಂಗಪ್ಪ ಮತ್ತು ರಾಮಣ್ಣ (ಹಾಲುಮತಸ್ಥ)
ಸುಳಿದಿಮ್ಮನ ಹಳ್ಳಿ, ಬಾಣಾವರ (ಅಂಚೆ),
ಅರಸೀಕೆರೆ ತಾ॥

ಇವರು ಕಾರ್ಯನಿಮಿತ್ತ ಅರಸೀಕೆರೆ ತಾ। ನ ಬೆಳಗುಂಬಕ್ಕೆ ಬಂದಿದ್ದಾಗ, ಅಲ್ಲಿ ಉಪನ್ಯಾಸಕನಾಗಿದ್ದ ನಾನು ಸ್ವ ಆಸಕ್ತಿಯಿಂದ ಕೇಳಿ ಬರೆದುಕೊಂಡಿದ್ದೆನು (ದಿನಾಂಕ : 27-11-1983).

## ಮದಾಲು ನೆನೆದೆವು .......

ಮದಾಲು ನೆನೆದೆವು ಸೋಮೇಶಲಿಂಗನ
ಸೊಬಗಿನ ಸರಸತಿ ಬೆನವನ ॥ ಪ ॥

ಈಗ ಕೋಲಿಡಿದು ಈಗ್ಯಾರ ನೆನೆದೇವು
ಈ ಊರು ಗ್ರಾಮದ ಒಡಿಯೋರ । ದೊಡ್ಡೋರ
ಈಗ ಕೋಲಿಡಿದು ನೆನೆದೇವು ॥ ಪ ॥

ಈಗ ಕೋಲಿಡಿದು ಈಗ್ಯಾರ ನೆನೆದೇವು
ಈ ಊರು ಗ್ರಾಮದ ಗರತಿ/ಅಮ್ಮಯ್ಯನ
ಈಗ ಕೋಲಿಡಿದು ನೆನೆದೇವು ॥ ಪ ॥

ಮತ್ತೆ ಕೋಲಿಡಿದು ಮತ್ಯಾರ ನೆನೆದೇವು
ಮತ್ತೆಂದ್ ಗ್ರಾಮದ ಗರತೀಯ । ಅಮ್ಮಯ್ಯನ
ಮತ್ತೆ ಕೋಲಿಡಿದು ನೆನೆದೇವು ॥ ಪ ॥

ತಯ್ಯಸ್ತು ತದಗಿಣಿತ
ತೈಥೋಂ ತದಗಿನಿತ ॥

ಈ ಹಾಡನ್ನು ಕೋಲಾಟದಲ್ಲಿ ತಾಳಗಡ್ಡಿ ಅಥವಾ ಬಿಚ್ಚುಗಡ್ಡಿಗೆ ಬಳಸಲಾಗುತ್ತದೆ.

**ಯಾಕಾಸಿ ಬಂತು .....**

ಯಾಕಾಸಿ ಬಂತು ಯಾವ್ ಸೀರೆ ಉಡಲವ್ವ
ಸೇರು ಬೆಳ್ಳಿನ ಸೆರಗಿsನ । ಸೀರೆನುಟ್ಟು
ಯಾವಣ್ಣ ನೀರ ಕೊಡುಲಮ್ಮ ॥

ಕೀರೆ ತಮ್ಮಗು ಕೊಡಲೆ ಚಿಂತಾಮಣಿಗು ಕೊಡಲೆ
ಲಕ್ಷಾಪತಿಯೆಂಬಿಯಣ್ಣಾ । ಎಂಬ ಹಿರಿಯಣ್ಣೆ ಕೊಟ್ಟsರೆ ....
ವಾಲೆಗೊಜ್ಜುರವ ಬಿಡಿಸ್ಯಾನು ॥

ವಾಲೆಗೊಜ್ಜುರ ತೂಕ ಕಾಲಿಗೆ ಪಿಲ್ಲಿ ತೂಕ
ನಾನು ನಿನ್ ತಂಗಿ ಸಮತೂಕ (ಎರಡು ಬಾರಿ)

ವಾಲೆ ಮಾಡೋನ ಕುಟ್ಟೆ ಓಡಿ ಹೋದಾಳು ಬಾಲೆ
ನಾವಲ್ಲ ಕೂಡಿ ಕರದೇವು ॥

(ಇದೂ ಬಿಚ್ಚುಗಡ್ಡಿಗೆ ಬಳಸುವ ಪದಗಳಲ್ಲಿ ಒಂದು)

ಹಾಡಿದ್ದು : ರಂಗಪ್ಪ ಮತ್ತು ರಾಮಣ್ಣ (ಹಾಲುಮತಸ್ಥರು)
ಸುಳಿದಿಮ್ಮನ ಹಳ್ಳಿ, ಬಾಣಾವರ ಹೋಬಳಿ
ಅರಸೀಕೆರೆ ತಾ॥
ದಿನಾಂಕ : 27-11-1983; ಬೆಳಗುಂಬ.

(ಬೆಳಗುಂಬ, ಅರಸೀಕೆರೆ ತಾ। ಇಲ್ಲಿ ಉಪನ್ಯಾಸಕರನಾಗಿದ್ದಾಗ, ಸಾಂದರ್ಭಿಕವಾಗಿ ಅಲ್ಲಿ ಭೇಟಿಯಾಗಿದ್ದವರಿಂದ ಕೇಳಿ ಬರೆದುಕೊಳ್ಳಲಾಗಿದೆ.) ಸಂ. : ಟಿ.ಗೋ.

## ಮುಟ್ಟಿದರೆ ಮುಲುಕುತ್ತೈತೆ .....

ಮುಟ್ಟಿದರೆ ಮುಲುಕುತ್ತೈತೆ
ನನ್ ಕೈಯೊಳಗೈತೆ
ಕುಂಟಿ ನಿನ್ನ ಸೊಂಟದ ಮೇಲೈತೆ
ನನ್ ಕೈಯೊಳಗೈತೆ ॥ ಪ ॥

ನಾರಿ ನಿನ್ನ ಮೋರೆ ಮೇಲೈತೆ
ನನ್ ಕೈಯೊಳಗೈತೆ ॥ ಮುಟ್ಟಿದರೆ ....॥

ಮುಂಡೆ ನಿನ್ ಮಂಡೆ ಮೇಲೈತೆ
ನನ್ ಕೈಯೊಳಗೈತೆ ॥ ಮುಟ್ಟಿದರೆ ....॥

ಒಂಟಿ ಕಾಲಲ್ಲೋಡುತ್ತೈತೆ
ಓಡಿ ಓಡಿ ಬೀಳುತಲೈತೆ
ಕುಂಟಿ ನಿನ್ನ ಸೊಂಟುದ ಮೇಲೈತೆ
ಐತೆ ನನ್ ಕೈಯೊಳಗೈತೆ ॥ ಮುಟ್ಟಿದರೆ ....॥

ನಾಲ್ಕು ಕಾಲ ಲೋಡುತ್ತೈತೆ
ಓಡಿ ಓಡಿ ಬೀಳುತಲೈತೆ
ನಾರಿ ನಿನ್ನ ಮೂಗಿನ ಮೇಲೈತೆ
ನನ್ನ ಕೈಯೊಳಗೈತೆ ॥ ಮುಟ್ಟಿದರೆ ....॥

(ಇದು ಸಹ ಒಂಟಿಕೋಲಿನ ಹಾಡು).

ಹಾಡಿದ್ದು : ಕೃಷ್ಣಪ್ಪ, ಸೋಮಲಾಪುರ, ತುರುವೇಕೆರೆ ತಾ॥

ನಾರಿಕೆ ನಾರಿ .....

ನಾರಿಕೆ ನಾರಿ ಮದಲೆ ವಯ್ಯಾರಿ
ಊರಿಗೆ ಬರಲೆ ಲೌಡಿ ....
ಹೇಳುತೀನಿ ನಾರಿ

ಮುಡ್ಡಗ್ಳಿ ಸೌದೆ ಮುರ್ದು
ಪೆಂಡಿಕಟ್ಟಿ ಪುಂಡ್ಗಾರ್‍ನ್ಗ್ ಕೊಟ್ಟೆ
ಸಾಕದುಕ್ಕ ನಾರಿ. ನಾ
ಕೈಯಿಗೆ ಕಪ್ಪ ಮಾಡ್ಸಿ ಕೊಡುವೆ
ಮಂಚಣ್ಣ ಊರಿಗೆ ಹೋಗಿ ಹೇಳದಿರು
ಮಂಚಣ್ಣ ಕಪ್ಪಗಿಪ್ಪ ಇಕ್ಕೆಂದು
ಏನಂತಾನ್ ಕೊಂಡಿ ಮಂಚಣ್ಣ
ನಾ ಬೆಳ್ಳಿಗೆ ಉಂಗ್ರ ಮಾಡಿಸಿ ಕೊಡುವೆ
ಮಂಚಪ್ಪ ಊರಿಗೆ ಹೋಗಿ ಹೇಳದಿರು

ವಚನ : ಉಂಗ್ರ ಗಿಂಗ್ರ ಇಕ್ಕೊಂಡು
ಏನಂತಾನ್ ಮಂಚಣ್ಣ*
ನಾರಿಕೆ ನಾರಿ ಮದಲೆ ವಯ್ಯಾರಿ
ಊರಿಗೆ ಬರಲೆ ಲೌಡಿ
ಹೇಳುತೇನೆ ನಾರಿ ॥

(ಇದು ವರಸೆಕೋಲು ಅಥವಾ ಚಿತ್ರಾನ ಕಟ್ಟಿಗೆ ಪದ.) ಆಟಗಾರರು ತಲಾ ಮೂರು ಜನ ಒಳ-ಹೊರಗೆ ಓಡಾಡುತ್ತಾ ಕೋಲು ಉಯ್ಯುತ್ತಾರೆ. ಇಂಥಾ ವರಸೆ ಕೋಲು ಆಡುವಾಗ ನಡುವೆ ಒಂಟಿ ಕೋಲು ಉಯ್ಯುತ್ತಾರೆ.

ಬರೆದು ಕೊಟ್ಟಿದ್ದು /
ಹಾಡಿದ್ದು : ಕೃಷ್ಣಪ್ಪ (ಕೋಲಾಟದ ಗುರು)
ಸೋಮಲಾಪುರ ಮಜರೆ ಚಿತ್ರದೇವರ ಹಟ್ಟಿ
ತುರುವೇಕೆರೆ ತಾ। ತುಮಕೂರು ಜಿಲ್ಲೆ.
ದಿ. 03.03.2011; ಅರಳಗುಪ್ಪೆ,
ಸಂ. : ಟಿ. ಗೋವಿಂದರಾಜು.

---

* ಇಂಥಾ ವಚನ ಹೇಳುವಾಗ ಆಟಗಾರರು ಕೋಲು ಎತ್ತಿ ಹಿಡಿದು ಸ್ತಬ್ಧರಾಗಿ ನಿಲ್ಲುತ್ತಾರೆ.

ಬಾಗ್ಗೋಲು ಎಂದರೆ ಬಗ್ಗಿ ಕೋಲು ಉಯ್ಯುವುದು. ಇದರಲ್ಲಿ ಒಂಟಿ ಬಾಗೋಲು, ಜೋಡಿ ಬಾಗ್ಗೋಲು ಎಂದು ಎರಡು ವಿಧಗಳಿವೆ.

ಮೂರು ಮನೆ ಹುದ್ದೆ = ಇದಕ್ಕೆ ಎಂಟು ಆಳುಬೇಕು. ಕೋಲುಯ್ಯುತ್ತಾ, ಸುತ್ತಾಡುವಾಗ, ಅವರವರ 'ಮನೆ'ಗೆ ಬಂದಾಗ ಒಳಕ್ಕೆ ಜಂಪು ಮಾಡಿ. ಎಡಗಡೆಯವನಿಗೆ ಕೋಲುಕೊಟ್ಟು ಬಳಿಕ ಮುಂದೆ ಹೋಗುವುದು.

# ಕೋಲಾಟದ ನಕಲಿ ಪದ

ಕೋಲಾಟದಲ್ಲಿಯೂ ನಡು ನಡುವೆ ನಕಲಿ ಪದ ಹಾಡುತ್ತಾರೆ. ವರಸೆ ಕೋಲಿನ ನಡುವೆ ಬದಲಾವಣೆಗೆ ಸ್ವಲ್ಪ ತಮಾಷೆಯ ಕಗ್ಗದ ಪದ ಹಾಡುತ್ತಾರೆ. ಇವನ್ನು ನಕಲಿ ಪದ ಎಂದೂ ಕರೆಯುತ್ತಾರೆ. ಇವು ಒಂಟಿ ಕೋಲು ಉಯ್ಯುವಾಗ ಹಾಡುವ ಪದಗಳು.

ಬಪ್ಪರ ಬಾಲೆ ಕಡಿವಿ ನಡಿವಳೆ ಕೋಲನ್ನ ಕೋಲೆ
ಅವ್ವು ಬಡುದ್ರು ಬತ್ತಾಳ್ ಬುಡಗೇರ್ ಹುಡುಗಿ । ಕೋಲನ್ನ ....।

ತಿಂಗ್ಳು ಬೆಳಕಲ್ ಗಂಗ್ಯ ಬೆಳಗ್ತಾಳೆ
ಕೋಲನ್ನ ಕೋಲೆ, ಅವ್ವು
ಲಿಂಗವಂತರ್ ಜಂಗಮ್ರುಡುಗಿ । ಕೋಲನ್ನ ಕೋಲೆ
ಚಪ್ರದಟ್ಟೀಲ್ ಸೊಪ್ಪು ಸೋಸ್ತಾಳೆ
ಕೋಲನ್ನ ಕೋಲೆ; ಅವ್ವು
ದಪ್ಪುದ್ ಕುಂಡ್ಯಾಳ್ ಉಪ್ಪಾರುಡುಗಿ । ಕೋನನ್ನ ಕೋಲೆ

(ನಮ್ಮೂರಲ್ಲಿ ನಮ್ಮಪ್ಪಾರ ಕಾಲದಿಂದಲೂ ಹಾಡ್ತಿದ್ದರು; ನಾನೂ ಕಲ್ತುಗೊಂಡೆ – ಹಾಡುಗಾರ).

| | | |
|---|---|---|
| ಹಾಡಿದ್ದು | : | ಬಾಲಕೃಷ್ಣಯ್ಯ (ಕೃಷ್ಣಪ್ಪ) |
| ವಯಸ್ಸು | : | 50 ವರ್ಷ, ಶಿಕ್ಷಣ, 7ನೇ ತರಗತಿ |
| ವೃತ್ತಿ | : | ವ್ಯವಸಾಯ, ಜಾತಿ : ಗೊಲ್ಲರು. |
| ದಿನಾಂಕ | : | 03–03–2011ರಂದು ತುರುವೇಕೆರೆ ತಾಲೂಕಿನ ಅರಳಗುಪ್ಪೆಯಲ್ಲಿ ಜರುಗಿದ ಜಾನಪದ ಮೇಳದಲ್ಲಿ ಶಾಲಾ ಮಕ್ಕಳಿಂದ ಪ್ರದರ್ಶಿತವಾದ ಕೋಲಾಟದಲ್ಲಿ ಹಾಡಲಾದ ಪದಗಳು ಇವು. |
| ಸಂಗ್ರಹ | : | ಟಿ. ಗೋವಿಂದರಾಜು. |

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮೂಲಕ, ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ನೂರು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ (ಸಮಗ್ರ ವಚನ ಸಾಹಿತ್ಯ ಸಂಪುಟ ಮತ್ತು ದಾಸ ಸಾಹಿತ್ಯ ಸಂಪುಟಗಳ ನಂತರದ ಬೃಹತ್ ಯೋಜನೆ ಇದು). ಪುನರುಕ್ತಿಗೆ ಅವಕಾಶವಿಲ್ಲದಂತೆ ಆಶಯಾತ್ಮಕವಾಗಿ ಮುಖ್ಯವೆನಿಸುವ ಸಾಹಿತ್ಯದ ಪಾಠಗಳನ್ನು ಮೂರು ಹಂತದಲ್ಲಿ ಪ್ರಕಟಿಸುವ ಯೋಜನೆ ಇದು. ಈಗಾಗಲೇ ಸಂಗ್ರಹಿತವಾದ, ಸಂಗ್ರಹಗೊಂಡಿದ್ದರೂ, ಪ್ರಕಟಣೆ ಆಗಿರದ ಹಾಗೂ ಕರ್ನಾಟಕದಾದ್ಯಂತ ವ್ಯಾಪಕವಾಗಿ ಹರಡಿಕೊಂಡಿರುವ ಜನಪದ ಸಾಹಿತ್ಯವನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಪ್ರಕಟಿಸುವ ಆಶಯ
ಈ ಯೋಜನೆಯದಾಗಿದೆ. ಭಾರತದ ಬೇರೆ ಯಾವುದೇ ರಾಜ್ಯದಲ್ಲಿಯೂ ಇಂಥದ್ದೊಂದು ಯೋಜನೆ ಇಲ್ಲ.
ಇದು ಕರ್ನಾಟಕ ಸರ್ಕಾರದ ಹೆಮ್ಮೆಯ ಕೊಡುಗೆ.
ಕನ್ನಡಿಗರು ಈ ಸಂಪುಟಗಳನ್ನು ಪ್ರೀತ್ಯಾದರದಿಂದ ಸ್ವಾಗತಿಸುವರೆಂಬುದು ನಮ್ಮ ನಂಬಿಕೆ.

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ೫೬೦೦೦೨